ಕನಕದಾಸರ ಅಧ್ಯಯನಗಳು : ಪ್ರಮುಖ ಪ್ರವೃತ್ತಿಗಳ ತಾತ್ವಿಕ ವಿಶ್ಲೇಷಣೆ

([illegible]ದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಘಂಟಿ ಹನುಮಪ್ಪ ಸಿದ್ದಪ್ಪ
ನೋಂದಣಿ ಸಂಖ್ಯೆ ಮತ್ತು ದಿನಾಂಕ
BVVBKS-೨೧೭೭, ೩೦.೦೮.೨೦೧೦

ಮಾರ್ಗದರ್ಶಕರು
ಡಾ. ಶಂಭು ಬಳಿಗಾರ

ಮಾನ್ಯತಾ ಸಂಸ್ಥೆ
ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ

ಭಾಷಾನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೧೭

③

ಕನಕದಾಸರ ಅಧ್ಯಯನಗಳು : ಪ್ರಮುಖ ಪ್ರವೃತ್ತಿಗಳ ತಾತ್ವಿಕ ವಿಶ್ಲೇಷಣೆ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಘಂಟಿ ಹನಮಪ್ಪ ಶಿದ್ದಪ್ಪ

ನೋಂದಣಿ ಸಂಖ್ಯೆ ಮತ್ತು ದಿನಾಂಕ
BVVBKS-0167, ೩೦.೦೮.೨೦೧೦

ಮಾರ್ಗದರ್ಶಕರು

ಡಾ. ಶಂಭು ಬಳಿಗಾರ

ಮಾನ್ಯತಾ ಸಂಸ್ಥೆ

ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ

ಭಾಷಾನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೧೭

ದೃಢೀಕರಣ ಪತ್ರ

ಘಂಟಿ ಹನಮಪ್ಪ ಶಿದ್ದಪ್ಪ ಇವರು 'ಕನಕದಾಸರ ಅಧ್ಯಯನಗಳು: ಪ್ರಮುಖ ಪ್ರವೃತ್ತಿಗಳ ತಾತ್ವಿಕ ವಿಶ್ಲೇಷಣೆ' ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಅಧ್ಯಯನ ನಡೆಸಿ ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು

ಡಾ. ಶಂಭು ವೀ. ಬಳಿಗಾರ
ಶ್ರೀ ಬಿ.ವಿ.ವಿ. ಸಂಘದ ಸಂಶೋಧನಾ ಕೇಂದ್ರ
ಬಾಗಲಕೋಟೆ

ಸ್ಥಳ: ಬಾಗಲಕೋಟ.
ದಿನಾಂಕ: ೧೬.೦೧.೨೦೧೭

ಪ್ರಮಾಣ ಪತ್ರ

'ಕನಕದಾಸರ ಅಧ್ಯಯನಗಳು: ಪ್ರಮುಖ ಪ್ರವೃತ್ತಿಗಳ ತಾತ್ವಿಕ ವಿಶ್ಲೇಷಣೆ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಶಂಭು ವೀ. ಬಳಿಗಾರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ಸಂಶೋಧನಾ ವಿದ್ಯಾರ್ಥಿ

(ಘಂಟಿ ಹನುಮಪ್ಪ ಶಿದ್ದಪ್ಪ)

ಸ್ಥಳ: ಬಾಗಲಕೋಟ

ದಿನಾಂಕ: ೧೬.೦೧.೨೦೧೭

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿ

೧.೧ ಪ್ರವೇಶ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ಸ್ವರೂಪ ಮತ್ತು ಮಹತ್ವ

೧.೪ ಅಧ್ಯಯನದ ವಿಧಾನ

೧.೫ ಅಧ್ಯಯನದ ವ್ಯಾಪ್ತಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿ

೧.೧ ಪ್ರವೇಶ

ಭಾರತೀಯ ಸಾಮಾಜಿಕ ಪರಂಪರೆಯಲ್ಲಿ ಭಕ್ತಿ ಆಂದೋಲನವು ಅತ್ಯಂತ ಮಹತ್ವದ್ದಾಗಿದೆ. ಇದು ಅನೇಕ ಉದ್ದೇಶಗಳಿಗಾಗಿ ಜನ್ಮತಾಳಿತು. ಅಂತಹುಗಳಲ್ಲಿ ಪ್ರಮುಖ ಕಾಳಜಿಯೆಂದರೆ ವ್ಯಕ್ತಿ ಹಾಗೂ ಸಮಾಜದ ಉನ್ನತಿಯನ್ನು ಬಯಸುವುದು. ಈ ಆಂದೋಲನದ ಪ್ರತಿಪಾದಕರಾದವರು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಪಂಥಗಳ ಮೂಲಕ ವ್ಯಕ್ತಿಯ ಆತ್ಮೋನ್ನತಿ ಜೊತೆಗೆ ಸಮಾಜೋನ್ನತಿಯನ್ನು ಪ್ರತಿಪಾದನೆ ಮಾಡುವುದು. ಇಂತಹ ಆತ್ಮೋನ್ನತಿ ಮತ್ತು ಸಮಾಜೋನ್ನತಿಯನ್ನು ಅನುಸರಿಸಿದ ಅಗ್ರಗಣ್ಯ ಸಂತರಲ್ಲಿ ಕನಕದಾಸರು ಒಬ್ಬರಾಗಿದ್ದಾರೆ. ಇವರು ಹಾಡು, ಕತೆ, ಪುರಾಣ ಹೀಗೆ ನಾನಾ ಬಗೆಯ ಅಭಿವ್ಯಕ್ತಿಗಳ ಮೂಲಕ ಮಾನವೀಯ ಮೌಲ್ಯಗಳನ್ನು ಪ್ರತಿಪಾದನೆ ಮಾಡಿದ್ದಾರೆ. ಹಾಗಾಗಿಯೇ ಇವರು ಕವಿಗಳಾಗಿ, ಸಂತರಾಗಿ, ದಾರ್ಶನಿಕರಾಗಿ, ಚಾರಿತ್ರಿಕ ಪುರುಷರಾಗಿ, ಸಾಂಸ್ಕೃತಿಕ ನಾಯಕರಾಗಿ ಸಾರ್ವಜನಿಕ ಬದುಕಿನ ನೆನಪಿನ ಗಣಿಯಲ್ಲಿ ಇಂದಿನವರೆಗೊ ಜೀವಂತವಾಗಿದ್ದಾರೆ. ಈ ಜೀವಂತಿಕೆ ಅವರ ವ್ಯಕ್ತಿತ್ವವ ವಿಭಿನ್ನ ಆಯಾಮಗಳಲ್ಲಿ ರೂಪಗೊಳ್ಳುತ್ತಿದೆ. ಹಾಗಾಗಿಯೇ ಕನಕದಾಸರು ಅಧ್ಯಯನಕಾರರಿಗೆ ಬಹುಮುಖಿ ಆಯಾಮಗಳಲ್ಲಿ ಕಂಡಿದ್ದಾರೆ.

ಸಮಾಜನಿರ್ಮಿತ, ಅಸಮಾನತೆ, ಜಾತಿ, ಮತ, ಮೇಲು, ಕೀಳು, ಅಸ್ಪೃಶ್ಯತೆ, ಮುಂತಾದ ಸಾಮಾಜಿಕ ಸಮಸ್ಯೆಗಳ ನಿವಾರಣೆ ಮತ್ತು ನಿರ್ಮೂಲನೆಗಾಗಿ ಹೋರಾಡಿದವರು. ಮಾನವ ಧರ್ಮದ ಶ್ರೇಷ್ಠತೆಗಾಗಿ ಹೋರಾಡಿ ತನ್ಮೂಲಕ ಜೀವಿಸಿದ ಕನಕದಾಸರು ಇಂದಿನ ೨೧ನೇ ಶತಮಾನದಲ್ಲೂ ಸಿನೇಮಾ, ಧ್ವನಿಸುರುಳಿಗಳಂತಹ ಆಧುನಿಕ ಕಾಲದ ಸಮೂಹ ಸಂವಹನ ಮಾಧ್ಯಮಗಳು ಕನಕದಾಸರ ವಿಚಾರಗಳನ್ನು ಇನ್ನಷ್ಟು ಜನಪ್ರಿಯಗೊಳಿಸಿವೆ. ಬಹುಶಃ ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಿಕ ಚರಿತ್ರೆಯಲ್ಲಿ ಮದ್ಯಕಾಲದ ಒಬ್ಬ ಸಂತ, ಕವಿ, ಪ್ರಸ್ತುತ ಸಾರ್ವಜನಿಕ ನಂಬಿಕೆಯ ಭಾಗವಾಗಿ ಮುಂದುವರೆದಿದ್ದಾರೆ ಆದರೂ ಹಲವಾರು ವಾದ–ವಿವಾದ, ವಾಗ್ವಾದಗಳಿಗೆ ಎಡೆಯಾಗಿರುವ ಬೇರೊಬ್ಬ ಕವಿ ಇಲ್ಲವೇನೋ? ಎನಿಸುತ್ತದೆ. ಹರಿದಾಸ ಪರಂಪರೆಯಲ್ಲಿ ಹಲವಾರು ಸಂತ, ಸಮಾಜ ಸುಧಾರಕರ, ಮಧ್ಯೆ, ಇವರು ಅಗ್ರಗಣ್ಯರೆನಿಸಿಕೊಳ್ಳುಲು ಕಾರಣಗಳೇನು? ಎಂಬುದು ಬಹು ಮುಖ್ಯವಾಗುತ್ತದೆ. ಅವರ ಬದುಕು ಮತ್ತು ಬರಹಗಳ ಕುರಿತು ೨೦ನೇಯ ಶತಮಾನದ ಅನಂತರ ನಡೆದ ಅಧ್ಯಯನಗಳಲ್ಲಿ ಸಾಮಾಜಿಕ, ರಾಜಕೀಯ, ಧಾರ್ಮಿಕವಾಗಿರುವ ಕಥೆಗಳು ಕೇವಲ ಕಥನಗಳೇ ಅಥವಾ ನಮ್ಮ ವರ್ತಮಾನದ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ ಸಂರಚನೆಯ ಪ್ರತಿನಿಧಿಕರಣವೆ? ಅಂದಿನ ಯುಗದಲ್ಲಿದ್ದ ಕನಕದಾಸರು ಇಂದಿನ ಆಧುನಿಕ ಯುಗದಲ್ಲಿ ಯಾಕೆ ಮತ್ತು ಹೇಗೆ ಮತ್ತೆ ಮತ್ತೆ ಮರು ನಿರೂಪಣೆಗೆ ಒಳಪಟ್ಟಿದ್ದಾರೆ ಹಾಗೂ

ಒಳಪಡುತ್ತಲ್ಲಿದ್ದಾರೆ. ಇದರ ಹಿಂದಿನ ಒತ್ತಾಸೆಗಳೇನು? ಅವರ ವಿಮರ್ಶೆಗಳು ಚಿಂತನೆಗಳು ಅವರ ತತ್ವದರ್ಶನಗಳು ಅವರ ಆಗಿನ ವಿಚಾರಗಳು ಇಂದಿಗೂ ಕೂಡಾ ಪ್ರಸ್ತುತವೆನಿಸಿವೆ ಚಿಂತನೆ, ಮೌಲ್ಯಗಳನ್ನು ಇವರ ವಿದ್ವಾಂಸರು, ವಿಮರ್ಶಕರು ಮರು ನಿರೂಪನೆಗೊಳಪಡಿಸಿದ್ದಾರೆ. ವಿಮರ್ಶೆ ಯುಗಧರ್ಮದ ಸಂದರ್ಭದೊಳಗೆ ಮರುಹುಟ್ಟು ಪಡೆದುಕೊಂಡು ಹೊಸ ರೂಪಾಂತರ ಹೊಂದುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಕನಕದಾಸರು ಮತ್ತು ಅವರ ಸಾಹಿತ್ಯ ಮರು ನಿರೂಪಣೆಗೊಳಪಟ್ಟುದದನ್ನು ಗ್ರಹಿಸಬಹುದಾಗಿದೆ. ಈ ಅಧ್ಯಯನದ ಮೂಲಕ ಕನಕದಾಸರನ್ನು ಅವರ ಸಾಹಿತ್ಯವನ್ನು ವಿಶ್ಲೇಷಣೆಗೆ ಒಳಪಡಿಸಿದ ಎಲ್ಲಾ ವಿಮರ್ಶಕರ ಅಭಿಪ್ರಾಯಗಳಲ್ಲಿ ಪ್ರಮುಖವಾದ ಪ್ರವೃತ್ತಿಗಳನ್ನು ಗುರುತಿಸಿ ವಿಶ್ಲೇಷಿಸಿ, ತಾತ್ವಿಕತೆಗೆ ಸಂಭಂದಿಸಿದಂತೆ **"ಕನಕದಾಸರ ಅಧ್ಯಯನಗಳುಃ ಪ್ರಮುಖ ಪ್ರವೃತ್ತಿಗಳ ತಾತ್ವಿಕ ವಿಶ್ಲೇಷಣೆ"** ಎಂಬ ಶೀರ್ಷಿಕೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

೧.೧. ಅಧ್ಯಯನದ ಉದ್ದೇಶಗಳು

- ಕನಕದಾಸರ ಸಾಹಿತ್ಯದ ಮೇಲೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಅಂತಹ ಅಧ್ಯಯನಗಳಲ್ಲಿ ಕನಕದಾಸರ ಜೀವನ, ಕುಲ, ಜಾತಿ, ಕಾಲದ, ಕುರಿತಾದವಿಮರ್ಶೆಗಳ ಮೇಲೆ ಪ್ರಮುಖ ಪ್ರವೃತ್ತಿ ಗುರುತಿಸಿ ಅಧ್ಯಯನಗಳಾಗಿರುವುದು ಕಡಿಮೆ ವಿಭಿನ್ನ ದೃಷ್ಟಿ ಕೋನಗಳ ಸೈದ್ಧಾಂತಿಕ ಅಧ್ಯಯನ ಇನ್ನೂ ವಿರಳವಾಗಿದೆ. ಹೀಗಾಗಿ ವಿಮರ್ಶೆಗಳ ಸಮಗ್ರ ಅಧ್ಯಯನ ಮಾಡುವುದು. ಅವಶ್ಯವೆನಿಸುತ್ತದೆ. ಈ ಹಿನ್ನಲೆಯಲ್ಲಿ ವಿಮರ್ಶೆಯ ಪ್ರಕಾರವನ್ನು ಬೇರೆ ಬೇರೆ ದೃಷ್ಟಿಕೋನಗಳ, ಆಶಯಗಳ ಮೂಲಕ ಪ್ರವೇಶಿಸಿ ಅಧ್ಯಯನ ಮಾಡಲಾಗಿದೆ.
- ಕನಕದಾಸರ ಕುರಿತಾದ ಅಧ್ಯಯನಗಳನ್ನು ಗಮನಿಸಿದಾಗ ಹಲವು ವಿದ್ವಾಂಸರು ವಿವಿಧ ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡರುವರು. ಉದಾ: ಜಾತಿ, ಕಾಲ, ಸ್ಥಳ, ಪರಂಪರೆ, ಕೃತಿಯ ಒಳನೋಟಗಳನ್ನು ಅಧ್ಯಯನ ಮಾಡಿದ್ದಾರೆ. ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಉದ್ದೇಶವಿಟ್ಟುಕೊಂಡು ಮಹಾಪ್ರಬಂಧ ಕಟ್ಟಲಾಗಿದೆ.
- ಜನಸಮುದಾಯದಲ್ಲಿ ಭಿನ್ನರೀತಿಯ ಅಧ್ಯಯನಗಳು ಆಗುತ್ತಿವೆ. ಇಂತಹ ಅಧ್ಯಯನಗಳಲ್ಲಿ ಪ್ರಮುಖವಾದ ಪ್ರವೃತ್ತಿಯನ್ನು ಗುರುತಿಸಬಹುದಾಗಿದೆ. ಹೀಗಾಗಿ ಕನಕದಾಸರನ್ನು ಚರಿತ್ರೆಯ ನಾಯಕನನ್ನಾಗಿಸುವ ಪ್ರವೃತ್ತಿ, ಜಾತಿಸಮುದಾಯದ ನಾಯಕನನ್ನಾಗಿಸುವ ಪ್ರವೃತ್ತಿ, ಅವರ ಕಾವ್ಯಗಳ, ಕೀರ್ತನೆಗಳ, ಮುಂಡಿಗೆಗಳ ಕೃತಿಗಳು ಒಳನೋಟಗಳನ್ನು ದಾಖಲಿಸುವ, ಪ್ರಸ್ತುತಪಡಿಸುವ, ವ್ಯಾಖ್ಯಾನಿಸುವ ಪ್ರವೃತ್ತಿ ಪವಾಡಗಳನ್ನು ಹೇಳುವ ಪ್ರವೃತ್ತಿ, ಭಕ್ತಿ, ಧರ್ಮ ಹಾಗೂ ಸಾಂಸ್ಕೃತಿಕ ನೆಲೆಯ ಅನುಸಂಧಾನದ ಅಧ್ಯಯನಗಳ ವಿಭಿನ್ನ ದೃಷ್ಟಿಕೋನಗಳನ್ನು ಗುರುತಿಸುವ ಪ್ರವೃತ್ತಿ, ಕನಕದಾಸರನ್ನು ಇತರೆ ಸಂತರು ಹಾಗೂ

ಸಮಾಜ ಸುಧಾರಕರೊಂದಿಗೆ ತೌಲನಿಕವಾಗಿ ನೋಡುವ ಪ್ರವೃತ್ತಿ ಕಂಡುಬರುತ್ತದೆ. ಇವುಗಳನ್ನು ಪ್ರಮುಖ ಉದ್ದೇಶಗಳನ್ನಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

- ಕನಕದಾಸರನು ಸಂತರೊಂದಿಗೆ, ಸಮಾಜಸುಧಾರಕರೊಂದಿಗೆ ಹೋಲಿಕೆ ಮಾಡಿ ಭಿನ್ನತೆಯನ್ನು, ಸಮಾನವಾದ ಅಂಶಗಳನ್ನು ಹೋಲಿಸಿ ಹೇಳುವ ಪ್ರವೃತ್ತಿ ಇತ್ತೀಚೆಗೆ ಕಂಡುಬರುತ್ತಿದೆ. ಅವುಗಳ ಕುರಿತಾದ ಅಧ್ಯಯನ ಮಾಡಲಾಗಿದೆ. ಇಲ್ಲಿ "ಪ್ರವೃತ್ತಿ ಎನ್ನುವ ಪದವನ್ನು ವಿಶ್ಲೇಷಿಸುವುದಾದರೆ ಉಪಕ್ರಮ, ಆಸಕ್ತಿ, ಅಭಿಲಾಷೆ, ವ್ಯವಹಾರ, ಗುಣ, ವಿರೇಚನ, ಮನಸ್ಸಿನ ಒಲವು ಅಥವಾ ಲಹರಿ ಎಂದರ್ಥ".[7] ಒಂದು ವಿಷಯದ ಕುರಿತು ಮನಸ್ಸಿನ ಒಲವಿನ ಅನುಗುಣ ಅವರ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ಹೇಳುವುದಾಗಿದೆ.
- ಸಾಹಿತ್ಯವು ಸಮಾಜದ ಪ್ರತಿಬಿಂಬ ಅಷ್ಟೆ ಅಲ್ಲ, ಅಂತರಂಗದ ಅಭಿವ್ಯಕ್ತಿಯೂ ಹೌದು. ಆದುದರಿಂದಲೇ ಅದರ ತಾತ್ವಿಕ ನೆಲೆಗಳನ್ನು ಅರಿಯುವುದು ಅಗತ್ಯ. ಸಾಮಾಜಿಕ ಸ್ಥಿತಿಗತಿ, ತವಕ ತಲ್ಲಣಗಳನ್ನು ಹಿಡಿದಿಟ್ಟುಕೊಂಡಾಗ ಮಾತ್ರ ಸಾಹಿತ್ಯ ಮೌಲಿಕವಾಗುತ್ತದೆ. ಕನಕದಾಸರಲ್ಲಿ ಧಾರ್ಮಿಕ, ಸಾಮಾಜಿಕ ಸಾಮರಸ್ಯದ ಒತ್ತಾಸೆ ಪ್ರಜ್ಞಾವಂತ ಹಾಗೂ ಚಿಕಿತ್ಸಕ ಮನೋಭಾವ ಎದ್ದು ಕಾಣುತ್ತದೆ. ಅವರು ಕೊಟ್ಟಂತಹ ಕಾವ್ಯಗಳು ಕೇವಲ ಪ್ರತಿಭೆ ಪಾಂಡಿತ್ಯದ ದ್ಯೋತಕಗಳಾಗಿರದೆ ತಾತ್ವಿಕ ನೆಲೆಗಳನ್ನು ಒಳಗೊಂಡಿವೆ. ಇವರು ಕೀರ್ತನೆ, ಮುಂಡಿಗೆ, ಉಗಾಭೋಗ ಹಾಗೂ ಉದಯರಾಗಗಳು, ಕಾವ್ಯಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯದಲ್ಲಿ, ಅಡಕವಾಗಿರುವ ಸಾಮಾಜಿಕ, ಅಧ್ಯಾತ್ಮಿಕ ವೈಚಾರಿಕತೆ, ದೇಶೀಯತೆ ಮುಂತಾದ ವಿಭಿನ್ನವಾದ ಅಂಶಗಳ ಮೇಲೆ ವಿವಿಧ ಸ್ತರಗಳಲ್ಲಿ ಹಲವಾರು ವಿದ್ವಾಂಸರು, ವಿಮರ್ಶಕರು ಅಧ್ಯಯನ ಕೈಗೂಂಡಿದ್ದಾರೆ. ಇವುಗಳ ಹಿಂದಿರುವ ದೃಷ್ಟಿ, ಧೋರಣೆಗಳ ಅಧ್ಯಯನ ಮಾಡಲಾಗಿದೆ. ಅಧ್ಯಯನಕಾರರಲ್ಲಿ, ವಿಮರ್ಶಕರಲ್ಲಿ ಕನಕರನ್ನು ಅವರ ಸಾಹಿತ್ಯವನ್ನು ಹುಡುಕುವ ವಿಧಾನವಿದು.
- ಸೃಜನಶೀಲಸಾಹಿತ್ಯ ಕೃತಿಗಳಂತೆ ಸಾಹಿತ್ಯ ವಿಮರ್ಶೆಯನ್ನ ಸಂಶೋಧನೆಗೆ ಗಂಭೀರವಾಗಿ ಪರಿಗಣಿಸುತ್ತಿಲ್ಲ ವಿಮರ್ಶೆಯು ಸೃಜನಶೀಲ ಸಾಹಿತ್ಯದಷ್ಟೇ ಮಹತ್ವಪೂರ್ಣವಾದ ಅಭಿವ್ಯಕ್ತಿ ವಿಧಾನವಾಗಿದೆ. ವಿಮರ್ಶೆಗಳನ್ನು ಮುಖ್ಯ ಆಕರವಾಗಿಟ್ಟುಕೊಂಡು ನಡೆದಿರುವ ಅಧ್ಯಯನಗಳು ಕಡಿಮೆ, ಈ ನೆಲೆಗಳಲ್ಲಿ ವಿಮರ್ಶೆಗಳನ್ನು ಪ್ರಧಾನ ಆಕರವಾಗಿ ಬಳಸಿಕೊಂಡು ಸಂಶೋಧನೆಗೆ ಒಳಪಡಿಸಲಾಗಿದೆ. ಯಾಕೆಂದರೆ ಜಗತ್ತು ಇಂದು ಜಾಗತೀಕರಣ, ಉದಾರೀಕರಣ, ಖಾಸಗೀಕರಣದಿಂದ ತಲ್ಲಣಗೊಳಗಾಗಿದೆ. ಮಾನವೀಯತೆ ವ್ಯಾಪಾರಿಕರಣವಾಗುತ್ತಿದೆ. ಈ ದಿನಗಳಲ್ಲಿ ಸಮುದಾಯವನ್ನು ಕಟ್ಟುವ ಪರಿವರ್ತನಾಕಾರರಿಗೆ ಅವರ ಚಿಂತನೆಗಳು ಮಾರ್ಗದರ್ಶಕಗಳಾಗಿವೆ. ಮಾನವ

ಸಂಭಂದಗಳು ಮನುಷ್ಯತ್ವದ ಲಕ್ಷಣಗಳು ಸಾಂಸ್ಕೃತಿಕ ಬೆಸುಗೆಗಳನ್ನು ಹೊಸೆದು ಕಟ್ಟಿಕೊಡುವಲ್ಲಿ ಕನಕದಾಸರ ಸಾಹಿತ್ಯ ಅಮೂಲ್ಯ. ಈ ಬಗೆಯ ಸಾಹಿತ್ಯವನ್ನು ವಿಮರ್ಶಕರು ವಿವಿಧ ಚಿಂತನಾಶೀಲನೆಲೆಗಳ ಮೇಲೆ ಕಟ್ಟಿಕೊಟ್ಟಿದ್ದಾರೆ. ಆ ನೆಲೆಗಳಾವವು, ಅವರು ಕಟ್ಟಿಕೊಡವ ಸೈದ್ಧಾಂತಿಕ ನಿಲುವು, ದೃಷ್ಟಿಕೋನಗಳೇನು? ಎಂಬುವುದರ ಕುರಿತು ತಾತ್ವಿಕ ಚಿಂತನೆಯ ನೆಲೆಯಲ್ಲಿ ಪ್ರಬಂಧ ಕಟ್ಟುವುದು ಇಲ್ಲಿನ ಉದ್ದೇಶವಾಗಿದೆ.

➢ ಸಮಕಾಲೀನ ಸಂದರ್ಭದಲ್ಲಿ ವಿಮರ್ಶೆ ಬಹುದೊಡ್ಡ ರಾಜಕೀಯ ಮತ್ತು ಸಾಂಸ್ಕೃತಿಕ ಆಯಾಮವನ್ನು ಪಡೆದುಕೊಂಡಿದೆ. ಕೆಲವು ವಿಮರ್ಶಗಳು ಕನಕದಾಸರ ಸಾಹಿತ್ಯವನ್ನು ನೆಪವಾಗಿಟ್ಟುಕೊಂಡು, ಸಾಮಾಜಿಕ ಆಶಯಗಳನ್ನು ಚರ್ಚಿಸುತ್ತವೆ. ಮತ್ತೆ ಕೆಲವು ವಿಮರ್ಶೆಗಳು ಸಾಮಾಜಿಕ ಆಶಯಗಳನ್ನು ನೆಪವಾಗಿಟ್ಟುಕೊಂಡು ಹುಡುಕಾಟ ಮಾಡಿವೆ. ಈ ಎರಡು ವೈರುದ್ಯಗಳ ನೆಲೆಯಲ್ಲಿ ಕನಕದಾಸರನ್ನು ವಿಮರ್ಶೆಗೆ ಒಳಪಡಿಸುವ ವೈಧಾನಿಕತೆ ಅಂದರೆ ಸಮಾಜಕ್ಕೆ ಕಾಣಿಕೆಯಾಗಿ ಕೊಡುವ ವಿಧಾನವೆ ಮುಖ್ಯ, ಇದು ಕನಕನ ಅಭಿವ್ಯಕ್ತಿಗಿಂತ ಕನಕನನ್ನು ಗ್ರಹಿಸುವ ವಿಧಾನವೆಂದು ಕರೆಯಬಹುದು. ಕನಕದಾಸರ, ಜೀವನ, ಕುಲ, ಜಾತಿ, ಸಾಹಿತ್ಯವನ್ನು ಪ್ರಧಾನವಾಗಿ ಇಟ್ಟುಕೊಂಡು ಪ್ರಮುಖ ಪ್ರವೃತ್ತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಉದಾ: ಜಾತಿ ವಿಷಯ ಬಂದಾಗ, ಬೇಡ, ಕುರುಬ, ಕಬ್ಬಲಿಗ, ದಾಸ, ಮುಂತಾದವು, ಅವರ ರಾಮಧಾನ್ಯಚರಿತೆ ವಿಷಯ ಬಂದಾಗ ಭತ್ತ, ರಾಗಿ ಪರಿಕಲ್ಪನೆಯನ್ನು ಬಡವ, ಶ್ರೀಮಂತ, ಮೇಲು, ಕೀಳು ಮುಂತಾದ ಈ ಭಿನ್ನ ಮಾದರಿಗಳ, ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡಿರುವರು. ಆ ದೃಷ್ಟಿಕೋನಗಳ ಹಿಂದಿರುವ ತಾತ್ವಿಕ ನಿಲುವನ್ನು ಸ್ಪಷ್ಟಪಡಿಸುವುದು ಇದರ ಉದ್ದೇಶಗಳಲ್ಲಿ ಒಂದಾಗಿದೆ.

➢ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಕನಕದಾಸರ ಸಾಹಿತ್ಯವನ್ನು ಅವಲೋಕನಮಾಡಿ ವೈಚಾರಿಕ ನೆಲೆಗಳಲ್ಲಿ ವಿಮರ್ಶಾಕೃತಿ, ಲೇಖನ, ಸಂಪಾದನೆ, ಕಿರುಪ್ರಬಂಧ ಹಾಗೂ ಮಹಾಪ್ರಬಂಧ ರಚಿಸಿದ್ದಾರೆ. ಅವುಗಳನ್ನು ಸೈದ್ಧಾಂತಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ತಾತ್ವಿಕ ವಿಶ್ಲೇಷಣೆ ಮಾಡಲಾಗಿದೆ ಈ ವಿಮರ್ಶೆಗಳಲ್ಲಿ ಜನರ ನಂಬಿಕೆ, ರೀತಿ, ನೀತಿಗಳು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಂಪ್ರದಾಯಗಳು ಎಲ್ಲವನ್ನು ಆದಷ್ಟು ವಸ್ತುನಿಷ್ಠವಾಗಿ ಗಮನಿಸಿ ಈ ಅಧ್ಯಯನಗಳಲ್ಲಿ ಪ್ರಸ್ತುತ ಅಧ್ಯಯನದ ಗ್ರಹಿಕೆಗೆ ಅನುಗುಣವಾಗಿ ವ್ಯಾಖ್ಯಾನಿಸಲಾಗಿದೆ. ಇದು ಅಲ್ಲದೆ ಕೆಲವು ಸಾಮಾಜಿಕ ಚಿಂತಕರ ಪ್ರೇರಣೆಗಳಿವೆ. ಇದರಲ್ಲಿ ನವ್ಯ, ನವೋದಯ, ಪ್ರಗತಿಶೀಲ ದಲಿತ ಮತ್ತು ಬಂಡಾಯ ವಿಮರ್ಶಕರು ಮುಖ್ಯರಾಗಿದ್ದಾರೆ. ಈ ಬಗೆಯ ಎಲ್ಲ ಚಿಂತಕರ ಚಿಂತನೆಯ ದೃಷ್ಟಿಕೋನಗಳನ್ನು ಗುರುತಿಸಿ ಅಧ್ಯಯನಮಾಡಿ, ಪ್ರಮುಖ ಪ್ರವೃತ್ತಿಗಳನ್ನು ಗುರುತಿಸಿ ತಾತ್ವಿಕತೆಗೆ ಒಳಪಡಿಸಲಾಗಿದೆ.

- ಪ್ರಸ್ತುತ ಅಧ್ಯಯನದಿಂದ ಕನಕದಾಸರ ಕುರಿತ ಜಾತಿ, ಮತ, ಧರ್ಮ ಇದರ ವಾದ-ವಾಗ್ವಾದ, ವಿವಾದ ಯಾವ ಸ್ವರೂಪದಲ್ಲಿ ಮೂಡಿಬಂದಿವೆ ಎಂಬುದನ್ನು ಗಮನಿಸಲು ಸಾಧ್ಯವಾಗುತ್ತದೆ. ಇಂತಹ ನಿರ್ದಿಷ್ಟ ಆಶಯದೊಂದಿಗೆ ಕನಕದಾಸರ ಸಾಹಿತ್ಯ ವಿಮರ್ಶೆಗಳ ಅಧ್ಯಯನವು ಬೇರೆ ಬೇರೆ ಕಾಲ ಘಟ್ಟಕ್ಕೆ ಯಾವ ಸ್ವರೂಪ ಮತ್ತು ವಿನ್ಯಾಸದಲ್ಲಿ ಅನುಸಂಧಾನ ಮಾಡಿವೆ ಎಂಬುದನ್ನು ಕುರಿತು ಹುಡುಕಾಟ ಮಾಡಲಾಗಿದೆ. ಇದಕ್ಕೆ ಚಾರಿತ್ರಿಕ ಪಠ್ಯಗಳ ವಿಶ್ಲೇಷಣೆ, ಸಿದ್ಧಾಂತ ಮತ್ತು ವಾಸ್ತವ ಸಿದ್ಧಾಂತಗಳನ್ನು ಪ್ರಮುಖ ಆಧಾರಗಳನ್ನಾಗಿ ಇಟ್ಟುಕೊಳ್ಳಲಾಗಿದೆ. ಅಲ್ಲದೆ ತೌಲನಿಕ ಅಧ್ಯಯನಗಳಲ್ಲಿ ಸಂತ ಕನಕದಾಸರನ್ನು ಇತರ ಸಂತರು, ಸಮಾಜ ಸುಧಾರಕರೊಂದಿಗೆ ಯಾವ ರೀತಿಯಾಗಿ ಹೋಲಿಸಲಾಗಿದೆ ಎನ್ನುವುದುನ್ನು ಹುಡುಕಾಟ ಮಾಡಲಾಗಿದೆ ಅಂದರೆ ಕನಕದಾಸರ ಅಧ್ಯಯನಗಳ ವಿಭಿನ್ನ ನೆಲೆಗಳನ್ನು ಶೋಧಿಸುವುದು ಇದರ ಮುಖ್ಯ ಉದ್ದೇಶ. ಆ ಮೂಲಕ ಸಾಮಾಜಿಕ, ಸುಸ್ಥಿರವಾದ ಅಭಿವೃದ್ದಿಗಾಗಿ ಅನ್ವಯಿಕ ನೆಲೆಯಲ್ಲಿ ಬಳಸಿಕೊಳ್ಳಬಹುದಾದ ಪರಿಕಲ್ಪನೆಗಳನ್ನು ಕುರಿತು ಚರ್ಚಿಸುವುದು ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ವಿದ್ವಾಂಸರು, ಕುಲದ ಪರಿಕಲ್ಪನೆ, ಸ್ತ್ರೀಸಂವೇದನೆ, ಹರಿಭಕ್ತಿ, ಮೋಹ, ಕಾಯಕ, ದಾನ, ಧರ್ಮ, ಪರೋಪಕಾರಿ, ಭಕ್ತಿ ಮುಂತಾದ ಪರಿಕಲ್ಪನೆಗಳನ್ನು ಇಟ್ಟುಕೊಂಡು ಕನಕದಾಸರು ಹಾಗೂ ಅವರ ಸಾಹಿತ್ಯವನ್ನು ತೌಲನಿಕರಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಯಾವ ಧೋರಣೆ, ದೃಷ್ಟಿಕೋನಗಳ ಹಿನ್ನಲೆಯಲ್ಲಿ ನೋಡಿದ್ದಾರೆ. ಆ ದೃಷ್ಟಿಕೋನಗಳ ಮಹತ್ವವೇನು? ಆ ಮೂಲಕ ಕನಕನನ್ನು ರೂಪಿಸಿ ಸಮಾಜಕ್ಕೆ ಕೊಡಬಯಸಿರುವ ಪರಿಕಲ್ಪನೆ ಯಾವುದು, ಅದು ಪ್ರಸ್ತುತವೆ? ಅಥವಾ ಅರ್ಥಪೂರ್ಣವಾಗಿದೆಯೇ? ಎನ್ನುವುದನ್ನು ತಿಳಿಯುವ ಉದ್ದೇಶ ಇಲ್ಲಿನದು. ಇಂತಹ ಹಲವು ಉದ್ದೇಶಗಳೊಂದಿಗೆ ಕನಕದಾಸರನ್ನು ಅಧ್ಯಯನ ಮಾಡುವುದರ ಮೂಲಕ ಕನಕದಾಸರ ಸಮಗ್ರ ಅಧ್ಯಯನಗಳ ಚಿತ್ರಣವನ್ನು ಕಟ್ಟುವ ಹಂಬಲ ಇದಾಗಿದೆ.

೧.೩ ಅಧ್ಯಯನದ ಸ್ವರೂಪ ಮತ್ತು ಮಹತ್ವ

'ಕನಕದಾಸರ ಅಧ್ಯಯನಗಳುಃ ಪ್ರಮುಖ ಪ್ರವೃತ್ತಿಗಳ ತಾತ್ವಿಕ ವಿಶ್ಲೇಷಣೆ' ಎಂಬ ಶೀರ್ಷಿಕೆಯಲ್ಲಿ ಕನಕದಾಸರ ಜೀವನ, ಸಾಹಿತ್ಯ ಅವರ ಸಮಾಜಮುಖಿ ಚಿಂತನೆಗಳ ಮೇಲೆ ರಚಿಸಲ್ಪಟ್ಟ ಅಧ್ಯಯನಗಳ ಪ್ರಮುಖ ಪ್ರವೃತ್ತಿಗಳನ್ನು (Theoretical) ತಾತ್ವಿಕವಾಗಿ ಅವಲೋಕಿಸುವುದಾಗಿದೆ. ಇಲ್ಲಿ ಬಳಸಿಕೊಂಡ 'ತಾತ್ವಿಕತೆ' ಎನ್ನುವ ಪದವು ತತ್ವಶಾಸ್ತ್ರಕ್ಕೆ ಯಾವುದೇ ಸಂಬಂಧವಿರದೆ ಅಧ್ಯಯನಗಳ ನೆಲೆಗಟ್ಟನ್ನು, ದೃಷ್ಟಿಕೋನಗಳನ್ನು ಗುರುತಿಸಿ ತಾತ್ವಿಕರಿಸಿ ವಿಶ್ಲೇಷಣೆ ಮಾಡುವುದು ಮುಖ್ಯ ಶೋಧನೆಯಾಗಿದೆ. ಅಂದರೆ ಪ್ರಸ್ತುತ ಸಂಶೋಧನೆಯಲ್ಲಿ ತಾತ್ವಿಕತೆ

ಎಂಬುದನ್ನು 'ಸೈದ್ಧಾಂತಿಕತೆ', 'ಧೋರಣೆ', 'ದೃಷ್ಟಿಕೋನ' ಇವುಗಳಿಗೆ ಸಂವಾದಿ ವಿಧಾನದಂತೆ ಬಳಸಲಾಗಿದೆ. ಈ ತಾತ್ವಿಕತೆ ಎಂಬುದನ್ನು ಆಂಗ್ಲಭಾಷೆಯಲ್ಲಿ 'ಥಿಯೋರ್ಟಿಕಲ್' ಎನ್ನುವ ಪದಕ್ಕೆ ಸಂವಾದಿಯಾಗಿ ಬಳಸುತ್ತಿದ್ದೇವೆ. ಈ ಥಿಯೋರ್ಟಿಕಲ್ ಎನ್ನುವುದು 'ಥಿಯರಿ' ಇಂದ ಬಂದಿದೆ. ಥಿಯರಿ ಎಂದರೆ ಕನ್ನಡದಲ್ಲಿ 'ತತ್ವ' ಎಂದಾಗುತ್ತದೆ. ಸಂಶೋಧನೆಯಲ್ಲಿ ತತ್ವ ಎಂದರೆ ತತ್ವಶಾಸ್ತ್ರದ ಜ್ಞಾನದ ಬಳಕೆಯ ಕ್ರಮ ಎಂದಾಗುತ್ತದೆ. ಆದುದರಿಂದ ಈ ಪರಿಕಲ್ಪನೆಯನ್ನು, ತತ್ವವನ್ನು ವಿವರಿಸುವ ಶಾಸ್ತ್ರವಾಗಿ ಇಲ್ಲಿ ಬಳಸಲಾಗಿದೆ. ಪ್ರಸ್ತುತ ಅಧ್ಯಯನವು ಈ ಹಿನ್ನೆಲೆಯಲ್ಲಿ ರೂಪಗೊಂಡಿದೆ.

ತತ್ವಶಾಸ್ತ್ರ ಎಂದರೆ, ಜ್ಞಾನ ಎಂಬುದರ ಹುಟ್ಟು, ಬೆಳವಣಿಗೆ ಅದರ ಪ್ರಭಾವ ಪ್ರೇರಣೆ, ಅದರ ವಿವಿಧ ಧಾರೆಗಳು ಅದರ ಪರಿಣಾಮ ಅದರ ಸ್ವರೂಪ ಮುಂತಾದ ವಿಷಯಗಳನ್ನು ವಿವರಿಸುವ ಶಾಸ್ತ್ರ. ಇಲ್ಲಿ ಸಂಶೋಧನೆಯ ತಾತ್ವಿಕತೆ ಎಂದರೆ ಸಂಶೋಧನೆಯಲ್ಲಿ ಜ್ಞಾನದ ಯಾವ ಶಾಸ್ತ್ರವನ್ನು ಬಳಸಲಾಗಿದೆ ಮತ್ತು ಅದನ್ನು ಹೇಗೆ ಬಳಸಲಾಗಿದೆ ಎಂಬುದರ ಗ್ರಹಿಕೆಯ ತಾತ್ವಿಕತೆಯಾಗಿದೆ. ಅದು ಲೋಕವನ್ನು ಗ್ರಹಿಸುವ, ಪರಿಭಾವಿಸುವ, ಅಂದಾಜಿಸುವ, ವಿವರಿಸುವ ವಿಶ್ಲೇಷಿಸುವ, ವ್ಯಾಖ್ಯಾನಿಸುವ, ಮೌಲ್ಯಮಾಪನ ಮಾಡುವ ಹಾಗೂ ಅದನ್ನು ಬದಲಾಯಿಸುವ ತಿಳುವಳಿಕೆಯೂ ಇಲ್ಲಿ 'ತಾತ್ವಿಕತೆ' ಎಂದಾಗಿ ಬಳಕೆಯಾಗಿದೆ. ತತ್ವಶಾಸ್ತ್ರದ ನೆರವಿನಿಂದ ಕನಕದಾಸರ ಕುರಿತು ಬಂದಿರುವ ಅಧ್ಯಯನಗಳನ್ನು ಭಿನ್ನ ನೆಲೆಗಳಲ್ಲಿ ಗ್ರಹಿಸುವ ಮತ್ತು ಮಂಡಿಸುವ ಒಂದು ನೋಟವಾಗಿದೆ.

ಕನಕದಾಸರ ಜೀವನ ಸಾಹಿತ್ಯವನ್ನು ಗ್ರಹಿಸಿಕೊಳ್ಳುವ ವಿಧಾನಗಳು ವ್ಯಕ್ತಿಯಿಂದ ವ್ಯಕ್ತಿಗೆ, ಸಮುದಾಯದಿಂದ ಸಮುದಾಯಕ್ಕೆ, ಜಾತಿಯಿಂದ ಜಾತಿಗೆ, ವರ್ಗದಿಂದ ವರ್ಗಕ್ಕೆ, ಮಹಿಳೆಯರಿಂದ ಪುರುಷರಿಗೆ, ಪುರುಷರಿಂದ ಮಹಿಳೆಯರಿಗೆ, ವೃತ್ತಿಯಿಂದ ವೃತ್ತಿಗೆ ಬದಲಾಗಬಹುದು. ಈ ಎಲ್ಲಾ ಬದಲಾವಣೆಗಳ ದೃಷ್ಟಿಕೋನಗಳನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಇಲ್ಲಿ ಮತ್ತೆ ಕೆಲವರು ವಿಶ್ಲೇಷಣೆ, ವಿಮರ್ಶೆ ಮಾಡಿದ್ದಾರೆ. ಇನ್ನೂ ಕೆಲವರು ವ್ಯಾಖ್ಯಾನಿಸಿದ್ದಾರೆ ಮತ್ತೆ ಕೆಲವರು ಈ ಪರಿಕಲ್ಪನೆಗಳನ್ನು ಬದಲಾಯಿಸಲು ಪ್ರಯತ್ನಿಸಿದ್ದಾರೆ. ಈ ರೀತಿಯಲ್ಲಿ ದೃಷ್ಟಿಕೋನಗಳ ವಿಶ್ಲೇಷಣೆಯೆ ತಾತ್ವಿಕತೆಯಲ್ಲಿ ವಿವರಿಸುವುದಾಗಿದೆ. ಇಲ್ಲಿ ತಾತ್ವಿಕವಾಗಿ ಸಮೀಕ್ಷೆ ಕೈಗೂಂಡು ದೃಷ್ಟಿಕೋನಗಳನ್ನು ಗುರುತಿಸಿ ಕನಕದಾಸರ ಜೀವನ ಸಾಹಿತ್ಯದ ಮೇಲೆ ನಡೆದಿರುವ ಅಧ್ಯಯನಗಳನ್ನು ಶಾಸ್ತ್ರ. ಶಿಸ್ತುಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡುವ ಅಗತ್ಯತೆ ಕಂಡುಬಂದುದರಿಂದ. ಇಲ್ಲಿ ಸಮಾಜಶಾಸ್ತ್ರೀಯ, ರಾಜಕೀಯ, ಧಾರ್ಮಿಕ ಸಂಬಂಧಗಳನ್ನು ಒಳಗೊಂಡಿರುವ ಕಾರಣ ಬಹುಭಾಷಿಕವಾಗಿರುವ, ಬಹುಜಾತೀಯ, ಬಹುಧಾರ್ಮಿಕ, ಬಹುತಾರತಮ್ಯಕರ ಸಮಾಜದಲ್ಲಿ, ಕನಕದಾಸರ ವಿಚಾರಗಳ ಕುರಿತು ಅನೇಕ ಪ್ರಶ್ನೆಗಳು ನಮ್ಮ ಮುಂದಿವೆ. ಅವುಗಳ ಚಿಂತನೆಯ ಸ್ವರೂಪ ಇದಾಗಿದೆ. ಕನಕ ಭಕ್ತಿ ಸಾಮಾಜಿಕವಾಗಿ ಅವರು ಬೆಳೆದು ಬೆರೆತಿರುವ ಕ್ಷಣಗಳನ್ನು ವಿವೇಚಿಸಲಾಗುವುದು. ಕನಕದಾಸರ ಕುರಿತಾದ ಸಮಗ್ರ ವಿಮರ್ಶೆಗಳಲ್ಲಿನ ಪ್ರಮುಖ ಪ್ರವೃತ್ತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಅದು

ಜೀವನ, ಜಾತಿ, ಕುಲ, ಕೃತಿ ಮುಂತಾದ ಸ್ವರೂಪಗಳ ಹಿನ್ನೆಲೆಯಲ್ಲಿ ರೂಪಗೊಂಡದ್ದಾಗಿರುತ್ತದೆ. ಕನಕದಾಸರ ಅಧ್ಯಯನಗಳಲ್ಲಿ ಕನಕದಾಸರ ಅಂತರಂಗ ಮತ್ತು ಬಹಿರಂಗವನ್ನು ಸಾದರಪಡಿಸುವ ಮಹತ್ವವಾದ ಅಧ್ಯಯನವಾಗಿದೆ.

೧.೩ ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ದ್ವಿತಿಯ ಆಕರಗಳನ್ನು ಆಧರಿಸಿದೆ ಹಾಗೆಂದು ಕೇವಲ ದ್ವೀತಿಯ ಆಕರಗಳಿಗೆ ಸೀಮಿತವಲ್ಲ. ಕೆಲವು ವಿರ್ಮರ್ಶಕರನ್ನು ಆಯ್ಕೆ ಮಾಡಿಕೊಂಡು ಸಂದರ್ಶನಕ್ಕೆ ಒಳಪಡಿಸಿ ಅವರ ಅಭಿಪ್ರಾಯವನ್ನು ಬಳಸಿಕೊಳ್ಳಲಾಗಿದೆ ಮತ್ತು ಕನಕದಾಸರಿಗೆ ಸಂಬಂಧಿಸಿದ ಕೆಲವು ಸ್ಥಳಗಳು, ಐತಿಹ್ಯಗಳನ್ನು ಕುರಿತಾಗಿ ಬಂದ ಅಧ್ಯಯನಗಳನ್ನು ಅಧ್ಯಯನಕ್ಕೆ ಒಳಪಡಿಸಿದೆ ಈ ಸಂಶೋಧನೆಯ ಅಧ್ಯಯನ ವಿಧಾನವು ಬಹಳ ಮಹತ್ವದಿಂದ ಕೂಡಿದೆ. ಇಲ್ಲಿ ವಿಮರ್ಶೆಯನ್ನು ಸೃಜನೇತರವೆಂದು ನೋಡುವುದಿಲ್ಲ. ಬದಲಾಗಿ ಪ್ರಧಾನವಾಗಿ ಭಾವದ ನೆಲೆಯಲ್ಲಿ, ದೃಷ್ಟಿಕೋನದ ನೆಲೆಯಲ್ಲಿ ಗ್ರಹಿಸುವ ವಿಧಾನ ಅನುಸರಿಸಲಾತ್ತದೆ. ಸಾಮಾನ್ಯವಾಗಿ ವಿಮರ್ಶೆಯನ್ನು ಒಂದು ಶಾಸ್ತ್ರವೆಂದು ನೋಡುವ ಪರಿಪಾಠ ಜಾರಿಯಲ್ಲಿದೆ. ವಿಮರ್ಶೆ ಕೂಡಾ ಲೋಕವನ್ನು ಗ್ರಹಿಸುವ ಬಹುಮುಖ್ಯವಾದ ದೃಷ್ಟಿಕೋನವು ಹೌದು. ಆದ ಕಾರಣ ಅದು ಸಾಹಿತ್ಯದ ಇತರ ಪ್ರಕಾರಗಳಷ್ಟೆ ಸ್ವಂತ ಲೋಕದೃಷ್ಟಿಯುಳ್ಳ ಒಂದು ಮಹತ್ವದ ಅಭಿವ್ಯಕ್ತಿಯ ವಿಧಾನವಾಗಿದೆ.

ಸಾಮಾನ್ಯವಾಗಿ ಯಾವುದೇ ಸಾಹಿತ್ಯ ವಿಮರ್ಶೆಯ ಹುಟ್ಟಿಗೆ, ವ್ಯಕ್ತಿಪ್ರತಿಭೆ ಮಾತ್ರ ಕಾರಣವಾಗಿರುವುದಿಲ್ಲ. ನಿರ್ದಿಷ್ಟ ಕಾಲಘಟ್ಟದ ಒತ್ತಾಸೆಗಳು ಸಹ ಕಾರಣವಾಗಿರುತ್ತವೆ. ಆಯಾ ಕಾಲದ ಯುಗಧರ್ಮ ಮತ್ತು ರಾಜಕೀಯ ಸಂಗತಿಗಳು ವಿಮರ್ಶೆಯ ನಿರ್ಮಾಣಕ್ಕೆ ಪ್ರೇರಕ ಹಾಗೂ ಕಾರಣವೂ ಎನ್ನುವುದು ವಾಸ್ತವ. ಈ ಹಿನ್ನೆಲೆಯಲ್ಲಿ ವಿಮರ್ಶೆಗೂ ಮತ್ತು ನಿರ್ದಿಷ್ಟ ಕಾಲಘಟ್ಟಕ್ಕೂ ಅಂತರ್‌ಸಂಬಂಧವಿರುತ್ತದೆ. ಇದರ ಜೊತೆಗೆ ವಿಮರ್ಶೆಯನ್ನು ತಾತ್ವಿಕರಿಸಿದಾಗ, ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ ಮುಂತಾದ ನೆಲೆಗಳಲ್ಲಿ ನೋಡುವ ವಿಧಾನ ಅನುಸರಿಸಲಾಗಿದೆ. ವಿಮರ್ಶೆಗಳು ಕೃತಿಯೊಳಗಿನ ನಿರ್ದಿಷ್ಟ ಸಾಮಾಜಿಕ ಸಮಸ್ಯೆಯನ್ನು ತಾತ್ವಿಕವಾಗಿ ಚರ್ಚಿಸುವಾಗ ಅವುಗಳ ಅಭಿವ್ಯಕ್ತಿ ವಿಧಾನವನ್ನು ಕೂಡಾ ಪ್ರಮುಖ ವಿಧಾನವನ್ನಾಗಿ ಅನುಸರಿಸಲಾಗಿದೆ. ಇಲ್ಲಿ ಭಾಷಿಕ ವಿನ್ಯಾಸವನ್ನು ಅಮೂಲಾಗ್ರವಾಗಿ ವಿಶ್ಲೇಷಿಸುವ ಮತ್ತು ಅವುಗಳ ಹಿಂದಿರುವ ಸಾಂಸ್ಕೃತಿಕ ರಾಜಕಾರಣವನ್ನು ಸಹ ಗುರುತಿಸಲಾಗಿದೆ.

ನಿರ್ದಿಷ್ಟವಾಗಿ ಕನಕದಾಸರ ಜೀವನ, ಸಾಹಿತ್ಯದ ಕುರಿತು ಬಂದಿರುವ ವಿಮರ್ಶಾ ಕೃತಿ ಲೇಖನಗಳು, ಅವರು ಹೇಳಿರುವ ಅಭಿಪ್ರಾಯಗಳು, ಅವುಗಳ ದೃಷ್ಟಿಕೋನಗಳ ಹಿಂದಿನ ತಾತ್ವಿಕ ನಿಲುವುಗಳ, ಭಿನ್ನತೆಗಳನ್ನು ತಿಳಿಯುವ ಮತ್ತು ಅವುಗಳ ಕಾರಣಗಳನ್ನು ಹುಡುಕುವುದಕ್ಕೆ ಸಹಾಯಕವಾಗುತ್ತವೆ. ಕನಕದಾಸರ ಜೀವನ, ಸಾಹಿತ್ಯದ ಮೇಲೆ ಬಂದಿರುವ ಕೃತಿಗಳ ಕುರಿತು

ವಿಮರ್ಶಕರ ನಿಲುವುಗಳನ್ನು ಮುಖಾಮುಖಿ ಮಾಡಿ ವಿಮರ್ಶೆಯ ಇತಿಮಿತಿಗಳನ್ನು ಚರ್ಚಿಸುವ ವಿಧಾನ ಅನುಸರಿಸಲಾಗಿದೆ.

ಪ್ರಸ್ತುತವಾಗಿ ಬಂದಿರುವ ವಿಮರ್ಶಾ ಕೃತಿಗಳ ವಿವಿಧ ಆಯಾಮಗಳಲ್ಲಿ ಚರ್ಚೆಗೆ ಹೊರಳಿಕೊಳ್ಳುತ್ತವೆ. ನಮ್ಮ ಸಮಾಜ, ಜಾತಿರಾಜಕಾರಣ ತಮ್ಮ ನಿಲುವುಗಳನ್ನು ಪರೋಕ್ಷವಾಗಿ ಮಂಡಿಸುವ ಕೆಲಸವನ್ನು ಮಾಡುತ್ತವೆ. ಈ ಬಗೆಯ ರೂಪಾಂತರ ಪ್ರಕ್ರಿಯೆಗಳನ್ನು ಗಮನಿಸಿದೆ. ಅಧ್ಯಯನದ ಮುಖ್ಯ ಆಕರಗಳಾದ ವಿಮರ್ಶೆಗಳನ್ನು ಬಹುಮುಖಿ ಹಾಗೂ ಅಂತರ್ ಶಿಸ್ತೀಯ ನೆಲೆಯಲ್ಲಿ ವಿಮರ್ಶಾಕೃತಿ, ಲೇಖನಗಳನ್ನು ವಿಮರ್ಶಾ ಪಂಥದ ಹಿನ್ನೆಲೆಯಲ್ಲಿ ಚರ್ಚಿಸಿ. ಅದರ ದೃಷ್ಟಿಕೋನ, ತಾತ್ವಿಕತೆಯನ್ನು ವಿಶ್ಲೇಷಿಸಲಾಗಿದೆ.

ಕನಕದಾಸರ ಸಾಹಿತ್ಯ ಮತ್ತು ಬದುಕಿನ ಆಯಾಮಗಳ ಕುರಿತಾದ ಅಧ್ಯಯನ ಮಾಡಿರುವ ಕೆಲವು ವಿದ್ವಾಂಸರನ್ನೂ ಸಂದರ್ಶಿಸಿ ಪ್ರಶ್ನೆಗಳನ್ನು ಕೇಳಿ ಅವರ ಅಭಿಪ್ರಾಯಗಳನ್ನು ಪ್ರಬಂಧದಲ್ಲಿ ಬಳಸಿಕೊಂಡು ವಿಶ್ಲೇಷಿಸುವ ವಿಧಾನವನ್ನು ಅನುಸರಿಸಲಾಗಿದೆ.

೧.೫ ಅಧ್ಯಯನದ ವ್ಯಾಪ್ತಿ

ಪ್ರತಿಯೊಂದು ಅಧ್ಯಯನವು ತನ್ನದೆ ಆದ ವ್ಯಾಪ್ತಿಯನ್ನು ಹೊಂದಿರುತ್ತದೆ. ಆಗ ಮಾತ್ರ ಖಚಿತವಾದ ಫಲಿತವನ್ನು ಕೊಡುವುದಕ್ಕೆ ಸಾಧ್ಯ ಅದರಂತೆ ಪ್ರಸ್ತುತ ಅಧ್ಯಯನವು ವಿಮರ್ಶೆಯ ಕೃತಿಗಳನ್ನು ಮುಖ್ಯ ಆಕರವೆಂದು ಪರಿಗಣಿಸಲಾಗಿದೆ. ಹಾಗಾಗಿ ಮೂಲ ಪಠ್ಯಗಳ ಅಥವಾ ಬಹುಪಠ್ಯಗಳ ಅಧ್ಯಯನವನ್ನು ಬಹುವಿಸ್ತೃತವಾಗಿ ಚರ್ಚಿಸಿಲ್ಲ, ಪಠ್ಯಕೇಂದ್ರಿತ ಪ್ರಮುಖ ವಿಮರ್ಶಾಕೃತಿಗಳನ್ನು ಮಾತ್ರ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕನಕದಾಸರ ಜೀವನ, ಸಾಹಿತ್ಯವು ಒಂದು ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾದ ಆಕರ ಸಾಮಗ್ರಿಗಳನ್ನು ಒದಗಿಸುತ್ತದೆ. ಹೀಗಾಗಿಯೇ ಈ ಮಹಾಪ್ರಬಂಧ ರಚನೆಗೆ ಕನಕದಾಸರ ಜೀವನ ಮತ್ತು ಸಾಹಿತ್ಯದ ಕುರಿತು ಬಂದ ಬಹುತೇಕ ಸಾಹಿತ್ಯ ವಿಮರ್ಶೆ ಕೃತಿಗಳು, ಲೇಖನಗಳು ಕಿರುಪ್ರಬಂಧ, ಮಹಾಪ್ರಬಂಧ ಹಾಗೂ ಪೂರಕವಾಗಿರುವ ಕನಕದಾಸರ ಸಾಹಿತ್ಯದ ಕುರಿತಾಗಿ ಬರೆದ ವಿಮರ್ಶಕರ, ವಿದ್ವಾಂಸರ ಬರಹಗಳ ಮತ್ತು ಚಿಂತಕರ ಅಭಿಪ್ರಾಯಗಳನ್ನು ಬಳಸಿಕೊಳ್ಳಲಾಗಿದೆ. ಸಂದರ್ಶನಗಳಿಂದ ಬಂದ ಮಾಹಿತಿಯನ್ನು ಕೂಡಾ ಅಧ್ಯಯನದ ಆಕರಗಳಾಗಿ ಪರಿಗಣಿಸಲಾಗಿದೆ. ಮಧ್ಯಯುಗೀನ ಕಾಲದ ಹರಿದಾಸ ಪರಂಪರೆಯಿಂದ ಇಂದಿನ ಕಾಲಘಟ್ಟದವರೆಗೂ ಕನಕದಾಸರ ಜೀವನ, ಸಾಹಿತ್ಯದ ಮೇಲೆ ಬಂದಿರುವ ಬಹುಮುಖ್ಯವೆನಿಸಿರುವ ಅಧ್ಯಯನಗಳನ್ನು ಮಾತ್ರ ಆಯ್ದುಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಂದು ಉಳಿದ ಅಧ್ಯಯನಗಳನ್ನು ನಿರ್ಲಕ್ಷಕ್ಕೆ ಒಳಪಡಿಸಲಾಗಿದೆ ಅಥವಾ ಅಧ್ಯಯನದ ನಿರಾಕರಣೆಗೆ ಒಳಪಡಿಸಲಾಗಿದೆ ಎಂದರ್ಥವಲ್ಲ, ಆ ಆಕರಗಳನ್ನು ಸಹ ವಿಶ್ಲೇಷಣೆಗಾಗಿ ಸಂದರ್ಭಕ್ಕೆ ಅನುಸಾರವಾಗಿ ಬಳಸಿಕೊಳ್ಳಲಾಗಿದೆ. ಅಂದರೆ

ಪ್ರಧಾನ ಆಕರಗಳನ್ನಾಗಿ ಬಳಸಿಕೊಳ್ಳದೆ ಪೂರಕ ಆಕರಗಳನ್ನಾಗಿ ಗ್ರಹಿಸಿಕೊಂಡು ಸಾಂದರ್ಭಿಕ ವಿಶ್ಲೇಷಣೆಗೆ ಅನುಗುಣವಾಗಿ ಬಳಸಿಕೊಂಡು ಪಸ್ತುತ ಪ್ರಬಂಧವನ್ನು ರೂಪಿಸಲಾಗಿದೆ.

ಅಡಿಟಿಪ್ಪಣಿ

೧. ಎನ್. ಬಸವರಾಧ್ಯ ಸಂಕ್ಷಿಪ್ತ ಕನ್ನಡ ನಿಘಂಟು. ಕ. ಸಾ. ಪ. ಬೆಂಗಳೂರು ೨೦೦೧ ಪುಟಸಂಖ್ಯೆ. ೮೩೩

ಅಧ್ಯಾಯ ಎರಡು

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

೨.೧ ವಿಮರ್ಶಾ ಕೃತಿಗಳು

೨.೨ ಸಂಪಾದನಾ ಕೃತಿಗಳು

೨.೩ ಸಂಗ್ರಹ ಕೃತಿಗಳು

೨.೪ ಲೇಖನಗಳು

೨.೫ ನಾಟಕಗಳು

೨.೬ ಕಿರುಪ್ರಬಂಧ ಹಾಗೂ ಮಹಾಪ್ರಬಂಧಗಳು

ಅಧ್ಯಾಯ- ೨

ಇದುವರೆಗಿನ ಕನಕದಾಸರ ಅಧ್ಯಯನಗಳ ಸಮೀಕ್ಷೆ

ಕನಕದಾಸರ ಜೀವನ ಹಾಗೂ ಅವರ ಸಾಹಿತ್ಯದ ಮೇಲೆ ಬಂದಿರುವ ಇದುವರೆಗಿನ ವಿಮರ್ಶೆ ಸಾಹಿತ್ಯದ ಹಲವಾರು ಪ್ರಕಾರದ ಕೃತಿಗಳನ್ನು ಪರಾಮರ್ಶಿಸಿ ನೋಡಲಾಗಿ ಭಕ್ತಿ, ವೈಚಾರಿಕತೆ ನೆಲೆ, ಧಾರ್ಮಿಕ ನೆಲೆ, ಸಾಮಾಜಿಕ, ಜಾನಪದೀಯ, ಭಾಷಿಕ, ಜಾತಿ, ವರ್ಗ, ವರ್ಣ ಸಂಘರ್ಷದ ನೆಲೆಗಳು, ಲೋಕದೃಷ್ಟಿ, ಆತ್ಮ ಕಲ್ಯಾಣ, ಢಾಂಬಿಕತೆ, ಸ್ತ್ರೀಸಂವೇದನೆ, ಸಾಂಸ್ಕೃತಿಕ, ತೌಲನಿಕವಾಗಿರುವ ಅಧ್ಯಯನಗಳು ನಡೆದಿವೆ ಪ್ರಸ್ತುತ ಅಧ್ಯಯನಗಳ ಸಮೀಕ್ಷೆಗಾಗಿ ಈ ಕೆಳಗಿನಂತೆ ವಿಂಗಡಿಸಲಾಗಿದೆ.

೨. ೧ ವಿಮರ್ಶಾ ಕೃತಿಗಳು

೨. ೨ ಸಂಪಾದನಾ ಕೃತಿಗಳು

೧. ೨ ಸಂಗ್ರಹ ಕೃತಿಗಳು

೨. ೪ ಲೇಖನಗಳು

೨. ೫ ಕನಕದಾಸರ ಕುರಿತ ನಾಟಕಗಳು

೨. ೬ ಕಿರು ಪ್ರಬಂಧಗಳು

೨. ೭ ಮಹಾಪ್ರಬಂಧಗಳು

೨. ೧ ಕೃತಿಗಳು

'ಕವಿ ಕನಕದಾಸರು' ಶೀರ್ಷಿಕೆಯ ಕೃತಿಯನ್ನು ಕಟ್ಟಿ ಶೇಷಾಚಾರ್ಯರು ರಚಿಸಿದ್ದಾರೆ. ಅದರಲ್ಲಿ ನಾಲ್ಕು ಭಾಗಗಳಾಗಿ ವಿಭಾಗಿಸಿ. ಕನಕದಾಸರ ಕಾಲದ ಸಿಂಹಾವಲೋಕನ, ಕನದಾಸರ ಕಾವ್ಯಗಳು, ಕನಕದಾಸರ ವಿವಿಧ ವೈಶಿಷ್ಟ್ಯಗಳಿಂದ ಕೂಡಿದ ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ೧೯೩೮ರಲ್ಲಿ ಪ್ರಕಟಿಸಿತು. ಕನಕದಾಸರ ಜೀವನ, ಸಾಹಿತ್ಯದ ಭಿನ್ನ ನೆಲೆಗಳಲ್ಲಿರುವ ಕೃತಿ ಕನಕದಾಸರ ಅಧ್ಯಯನಗಳಲ್ಲಿ ಬಹುಮುಖ್ಯವಾಗಿದೆ. ಕೆ. ವೆಂಕಟರಾಮಪ್ಪನವರ 'ಕನಕದಾಸರು' ಎಂಬ ಕೃತಿಯಲ್ಲಿ ಭಕ್ತಿ, ಸಾಧನೆ, ಸಿದ್ಧಿ ಕನಕದಾಸರ ಕೃತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ ೩೬ ಪುಟಗಳ ಸಣ್ಣ ಕೃತಿ ೧೯೭೦ ರಲ್ಲಿ ಪ್ರಕಟಿಸಲಾಗಿದೆ. ಅನಂತ ಕಲ್ಲೋಳರವರು ಬೆಂಗಳೂರಿನ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್‌ನಿಂದ ೧೯೭೪ ರಲ್ಲಿ ಪ್ರಕಟಿಸಿದ್ದಾರೆ. ಎಚ್.ಎಸ್. ವೆಂಕಟೇಶ ಮೂರ್ತಿಯವರು ರಚಿಸಿದ 'ಕನಕದಾಸರು' ಎಂಬ ಕೃತಿಯನ್ನು ಕನಕದಾಸರ ಜೀವನ, ಭಕ್ತಿ ದಾಸತ್ವದ ಕುರಿತು ೪೮ ಪುಟಗಳನ್ನೊಳಗೊಂಡಿದೆ. 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಎಂಬ ಮಾಲಿಕೆಯಲ್ಲಿ ಸಪ್ನಾ ಬುಕ್‌ಹೌಸ್‌ನವರು, 'ಕೀರ್ತನಕಾರರು' ಎಂಬ ತಲೆಬರಹದಲ್ಲಿ ಕೀರ್ತನ ಸಾಹಿತ್ಯದ ಉಗಮ, ವಿಕಾಸ, ಲಕ್ಷಣ, ಪ್ರೇರಣೆ, ಕರ್ನಾಟಕ ಸಂಗೀತ ಮತ್ತು ಕನಕದಾಸರ ಕೀರ್ತನೆಗಳಲ್ಲಿ ಮೌಲ್ಯಗಳನ್ನು ಕುರಿತು ರಚಿಸಿರುವ ೧೦೮ ಪುಟಗಳ ಕೃತಿಯನ್ನು ೧೯೭೫ರಲ್ಲಿ ಪ್ರಕಟಿಸಲಾಗಿದೆ.

'ಕರ್ನಾಟಕ ಮಹಾಸಂತ ಕನಕದಾಸ' ಈ ಕೃತಿಯನ್ನು ಚನ್ನಪ್ಪ ಎರೆಸೀಮೆ ಹಾಗೂ ಎಂ. ಬಸವರಾಜ ಇಬ್ಬರೂ ಸೇರಿ ರಚಿಸಿರುವರು. ಕನಕದಾಸರ ಜನನ, ಬಾಲ್ಯ, ನಾಡಗೌಡಿಕೆ, ದಂಡನಾಯಕನಾದುದು, ಕನಕರು ಸಾಮಾಜಿಕ ಚಿಂತನೆಗಾಗಿ ಸಂಚರಿಸಿದ ಕುರಿತು ವಿಶ್ಲೇಷಿಸಿದ್ದಾರೆ. ಸಮಾಚಾರ ಮತ್ತು ಪ್ರಸಾರ ಮಂತ್ರಿಶಾಖೆ ಭಾರತ ಸರಕಾರದವರು ೧೯೫೮ರಲ್ಲಿ ಪ್ರಕಟಿಸಿದ್ದಾರೆ. ಕೆ. ಬಿ. ತಳಗೇರಿಯವರು 'ದಾಸಶ್ರೇಷ್ಠ ಕನಕದಾಸರ ರಾಮಧಾನ್ಯ ಚರಿತ್ರೆ' ಎಂಬ ಕೃತಿಯಲ್ಲಿ ಕನಕದಾಸರ ಜೀವನ ದರ್ಶನ ಹಾಗೂ ಅವರ ಕೃತಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ವಿದ್ಯಾನಿಧಿ ಪ್ರಕಾಶನ ಗದಗದಿಂದ ೧೯೮೯ ರಲ್ಲಿ ಪ್ರಕಟಗೊಂಡಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ಹಳ್ಳಿಯ ಅಧ್ಯಯನ' ಯೋಜನೆ ಅಡಿಯಲ್ಲಿ 'ಕಾಗಿನೆಲೆ' ಕೃತಿಯನ್ನು ಹೊರೆಯಾಲಾ ದೊರೆಸ್ವಾಮಿಯವರು ರಚಿಸಿದ್ದು ಕಾಗಿನೆಲೆ ಸುತ್ತಲಿನ ಹಳ್ಳಿಗಳಾದ ಕಾಶಂಬಿ, ಕುಮ್ಮರು, ದಾಸನಕೊಪ್ಪಗಳಲ್ಲಿನ ಮಸೀದಿ-ಮಂದಿರಗಳು, ಅಂಗಡಿ ಮುಗ್ಗಟ್ಟು, ದೇವಸ್ಥಾನ, ಪೀಠ, ಜನರ ಜೀವನ ವಿಧಾನ, ಕನಕದಾಸರು ಈ ಪ್ರದೇಶದಲ್ಲಿ ವಾಸಿಸಿದ ಎಲ್ಲ ಅಂಶಗಳನ್ನು ದಾಖಲಿಸಿ ಕಾಗಿನೆಲೆಯ ಗ್ರಾಮವನ್ನು ಪರಿಚಯಿಸುವ ಒಂದು ಮೌಲಿಕ ಕೃತಿ ೧೯೯೩ ರಲ್ಲಿ ಪ್ರಕಟಗೊಂಡಿದೆ. 'ವಿಶ್ವಮಾನ್ಯ ಶ್ರೀ ಕನಕದಾಸರು' ಕೃತಿ ನಿಂಗಣ್ಣ ಸಣ್ಣಕ್ಕಿ ರಚಿಸಿ ಕನಕದಾಸರ ಜನಪದ, ಜನಪರ ಕವಿಯಾಗಿ ಕನಕದಾಸರ ಕೀರ್ತನೆಗಳಲ್ಲಿ ಜಾನಪದ ಅಂಶಗಳ ಕುರಿತು ಕನಕನ ಕಿಂಡಿ, ಕಬೀರದಾಸ ಮತ್ತು ಮಹಾತ್ಮ ಕನಕದಾಸರು ಎಂದು ಸಂಭೋದಿಸಿ ತೌಲನಿಕವಾಗಿಯೂ ಹೊಸ ರೀತಿಯ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ವಿದ್ಯಾನಿಧಿ ಪ್ರಕಾಶನ ಗದಗದಿಂದ ೧೯೯೪ ರಲ್ಲಿ ಪ್ರಕಟಗೊಂಡಿತು. ಕೊರಟಿ ಶ್ರೀನಿವಾಸರವರು 'ಕನಕದಾಸರು' ಎಂಬ ಕೃತಿಯಲ್ಲಿ ಭಾಗ್ಯಲಕ್ಷ್ಮೀ ಪ್ರಕಾಶನ ಬೆಂಗಳೂರು ೧೯೮೪ ರಲ್ಲಿ ಪ್ರಕಟಿಸಿದ್ದಾರೆ. ಒಟ್ಟು ೩೨೮ ಪುಟಗಳಿರುವ ಕೃತಿಯಲ್ಲಿ ಆತ್ಮ, ಭಕ್ತಿ, ಕುಲ, ಮತ, ದೇವರು ಕುರಿತಾಗಿ ಮತ್ತು ಕೃತಿಗಳನ್ನು ಪರಿಚಯಿಸಿದ್ದಾರೆ. ಎನ್. ಎಂ. ಅಂಬಲಿಯವರು 'ದಾಸಶ್ರೇಷ್ಠ ಕನಕದಾಸರ ನಳಚರಿತ್ರೆ' ಯನ್ನು ಪದ್ಯ-ಗದ್ಯ ವಿಶ್ಲೇಷಣೆಯಿಂದ ಕೂಡಿದ ಒಟ್ಟು ಒಂಬತ್ತು ಸಂಧಿಗಳ ಪರಿಚಯಾತ್ಮಕವಾಗಿರುವ ಈ ಕೃತಿ ೧೮೬ ಪುಟಗಳನ್ನು ಒಳಗೊಂಡಿದೆ ಪ್ರಸ್ತುತ ಕೃತಿಯನ್ನು ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟಿಸಲಾಗಿದೆ.

'ಕನಕ ಪುರಂದರ ಕೀರ್ತನ ಮಂಜರಿ' ಕೃತಿಯನ್ನು ಜಿ. ಎಂ. ಹೆಗಡೆಯವರು ರಚಿಸಿ ಕನಕ ಪುರಂದರ ಕೀರ್ತನೆಗಳನ್ನು ಸಂಗ್ರಹಿಸಿ ಕೀರ್ತನೆಗಳಲ್ಲಿ ಭಕ್ತಿ ತತ್ವ ಪ್ರತಿಪಾದನೆ, ಜೀವನ ಸಾಧನೆ ಕುರಿತು ಸಂಕ್ಷೀಪ್ತವಾಗಿ ಹೇಳಿದ್ದಾರೆ. ೧೯೯೪ರಲ್ಲಿ ಧಾರವಾಡದ ಕರ್ನಾಟಕದ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಿದ್ದಾರೆ. ಮೈಸೂರಿನ ಸುಧಾಕರ ಅವರು 'ಕಾಗಿನೆಲೆಯ ಕನಕದಾಸೋತ್ತಮ' ಕೃತಿಯಲ್ಲಿ ಜೀವನ, ಕಾಲ, ಕರ್ನಾಟಕ ಸಂಗೀತಕ್ಕೆ ನೀಡಿದ ಕೊಡುಗೆ, ಕನಕ ಸಾಹಿತ್ಯದಲ್ಲಿ ಜಾನಪದ ಸೊಗಡು, ದಾಸ ಸಾಹಿತ್ಯಕ್ಕೆ ಸಂದ ಹೊಸ ಆಯಾಮ, ಕೀರ್ತನೆ ಮುಂಡಿಗೆಗಳ ಕುರಿತು ಹೇಳಿ ಹರಿದಾಸ ಸಾಹಿತ್ಯದ ಆಧಾರ ಸ್ತಂಭವಾದ ಕನಕದಾಸರನ್ನ 'ಜನಿವಾರದವರಲ್ಲ ಬರೀ

ಉಡದಾರದವರು' ಎಂಬ ಒಂದೇ ಕಾರಣಕ್ಕಾಗಿ ನೆನೆಯಬಾರದವರು ಎಂದು ಪರಿಗಣಿಸಿ ಅವರ ಹೆಸರನ್ನು ಕೈಬಿಟ್ಟು, ಹಣ್ಣನ್ನು ಮಣ್ಣಿಗೆಸೆದು ಸಿಪ್ಪೆಯನ್ನು ಚೀಪುವಂತ ಮತಿವಂತರಲ್ಲದ ಕೆಲ ಮಡಿವಂತರು ಹರಿದಾಸ ಸಾಹಿತ್ಯದ ಪೂರ್ವಸೂರಿ ಸ್ಮರಣೆಯ ಶ್ಲೋಕವನ್ನು ಚಾಲ್ತಿಗೆ ತಂದು ಕನಕರನ್ನು ದಲಿತ, ಹಿಂದುಳಿದ ವರ್ಗದವರೆಂದವರ ವಿರುದ್ದ ಟೀಕೆಯನ್ನು ಮಾಡಿದ ಈ ಕೃತಿ ಒಟ್ಟು ೧೦೮ ಪುಟಗಳಲ್ಲಿ ಮೈದಳೆದು ೧೯೯೭ ರಲ್ಲಿ ಪ್ರತಿಭಾ ಪ್ರಕಾಶನ ಮೈಸೂರಿನಿಂದ ಪ್ರಕಟಿಸಲಾಗಿದೆ.

ಸಿದ್ದಣ್ಣ ಜಕಬಾಳ ಇವರು ದಾಸಶ್ರೇಷ್ಠ ಕನಕದಾಸರ 'ಹರಿಭಕ್ತಿಸಾರ' ಕೃತಿಯನ್ನು ಪದ್ಯ ಮತ್ತು ಗದ್ಯಾನುಸಹಿತವಾಗಿ ಪರಿಚಯಾತ್ಮಕವಾದ ವಿಮರ್ಶಾ ಕೃತಿ ೧೯೯೯ ರಲ್ಲಿ ರಚನೆಯಾದ ಕೃತಿ ಒಟ್ಟು ೮೦ ಪುಟಗಳಿಂದ ಕೂಡಿದೆ. ಹರಿಭಕ್ತಿಸಾರ ಕನ್ನಡ ಭಾಷೆಯ ಶತಕ ಹಾಗೂ ಭಕ್ತಿ ಸಾಹಿತ್ಯದ ಕೃತಿಯಾಗಿದ್ದು, ಭಕ್ತಿ ರಸದ ಅಮೃತ ಕಲಶ ಭಕ್ತನ ಪ್ರಾಂಜಲ ಮನಸ್ಸಿನ ಭಕ್ತಿಯೇ ಈ ಕೃತಿಯ ವಸ್ತುವಾಗಿದೆ. ಕವಿಯ ಕವಿತ್ವ ಶಕ್ತಿಯ, ಕೈಚಳಕಿನ ಸರಳ ಸುಂದರ ಚಿತ್ರಣದ ಅಚ್ಚ ಭಕ್ತಿಯ ಧ್ಯಾನ ಪುರಾಣದ ಕಥಾ ಸಂದರ್ಭಗಳ ಮನನ ನಿಧಿದ್ಯಾಸದ ತಾತ್ವಿಕ ವಿಷಯಗಳ ಚಿಂತನ ನಮ್ಮ ಭವ್ಯ ಸಂಸ್ಕೃತಿಯ ಜೀವನ ಮೌಲ್ಯಗಳನ್ನು ಸಾರುವ ಈ ಕೃತಿಯು ಮಾನವನಲ್ಲಿ ಭಕ್ತಿ ಪರಂಪರೆ ಬಿಂಬಿಸುವ ಮಾರ್ಗವಾಗಿದೆ.

ಮೈಸೂರಿನ ಸುಧಾಕರ ಅವರು ಸಂತ ಕನಕದಾಸರ 'ರಾಮಧಾನ್ಯ ಚರಿತ್ರೆ'ಯನ್ನು 'ಕನಕದಾಸರ ರಾಗಿ-ರಾಮಾಯಣ ದರ್ಶನ' ಎಂಬ ಶೀರ್ಷಿಕೆಯಲ್ಲಿ ರಚನೆಯಾದ ವಿಮರ್ಶೆ ಕೃತಿ ಇದಾಗಿದೆ. ರಾಗಿ ಎನ್ನುವುದು ರಾಘವ ಪದದ ನಿಷ್ಪತ್ತಿ; ಈ ಕೃತಿ ಕವಿಯ ಸ್ವಕಪೋಲಕಲ್ಪಿತ ಕಥೆಯೆಂಬ ವಿಮರ್ಶಾಭಿಪ್ರಾಯಕ್ಕೆ ಸರ್ವಸಮ್ಮತವಾಗಬಹುದಾದ ಉತ್ತರ ನೀಡಿ ಕವಿ ಜನಪದ ಸಾಹಿತ್ಯದಿಂದ ವಸ್ತು ಪಡೆದುಕೊಂಡರೂ ರಾಮಭಕ್ತಿಗಿಂತ ರಾಗಿರಕ್ತಿಯೇ ಈ ಕೃತಿಯ ಮೂಲ ದ್ರವ್ಯ ಎನ್ನುವ ಸುಧಾಕರರವರು ಹೊರಗಿನ ತಿರುಳು ರಾಮಭಕ್ತಿಯಾದರೂ ಒಳಗಿನ ತಿರುಳು ರಾಗಿ ರಕ್ತಿ ಎಂಬುದೇ ಸರಿ. ವರ್ಗ, ವರ್ಣ, ಜಾತಿಭೇದಗಳಿಂದಾಗಿ ಅವನತಿ ಅಂಚಿನತ್ತ ದೇಶ ಬರುತ್ತದೆ ಎಂದು ಕನಕದಾಸರಿಗೆ ಸ್ಪಟಿಕ ಸತ್ಯ, ಅನುಭವಿಸಿದ ಅಸ್ಪೃಶ್ಯತೆ ದಲಿತ ಮೌಢ್ಯತೆಯನ್ನು ಇಲ್ಲಿ ಸುಧಾಕರು ಹೇಳಿದ್ದಾರೆ.

ದಿವ್ಯ ದರ್ಶನ ಮಾಲೆಯಲ್ಲಿ ಸಪ್ನಾ ಬುಕ್ ಹೌಸ್‌ನವರು ೨೦೦೧ರಲ್ಲಿ ಎನ್.ಕೆ. ರಾಮಶೇಷನ್‌ರವರು 'ಕನಕದಾಸರು' ಎಂಬ ಶೀರ್ಷಿಕೆಯಲ್ಲಿ ಜೀವನ, ಬಾಲ್ಯ, ಮೋಹನ ತರಂಗಿಣಿ ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. 'ಕನಕದಾಸರ ವೈಚಾರಿಕತೆ' ಕೃತಿಯನ್ನು ರಂಗರಾಜ ವನದುರ್ಗರವರು ೨೦೦೧ ರಲ್ಲಿ ೪೯ ಪುಟಗಳ ಈ ಸಣ್ಣ ಕೃತಿಯನ್ನು ಕುವೆಂಪು ವಿ. ವಿ. ಶಂಕರಘಟ್ಟದ ಪ್ರಸಾರಾಂಗದವರು ಪ್ರಕಟಿಸಿದ್ದಾರೆ. ಕನಕದಾಸರ ಜೀವನ ಕೃತಿಗಳನ್ನು ಪರಿಚಯಿಸಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಸಂದರ್ಭದಲ್ಲಿ ವಾಗ್ವಾದ, ಪ್ರಸ್ತುತತೆ ಅವರ ವೈಚಾರಿಕ, ಚಿಂತನಾತ್ಮಕ ನಿಲುವುನ್ನು ಈ ಕೃತಿಯಲ್ಲಿ ಕಾಣುತ್ತೇವೆ.

‘ಕನಕದರ್ಶನ’ ಎಂಬ ಹೆಸರಿನಲ್ಲಿ ‘ದೇ. ಜ. ಗೌ’ ಅವರು ರಚಿಸಿ ತನುಮನು ಪ್ರಕಾಶನದಿಂದ ೨೦೦೩ ರಲ್ಲಿ ೧೪೩ ಪುಟಗಳಿಂದ ಕೂಡಿರುವ ಈ ಕೃತಿ ಕನಕದಾಸರ ಜೀವನ ಸಾಹಿತ್ಯ ಕೃತಿಗಳು ಅವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಯ ಹರವು ಹಿಂದುಳಿದ ವರ್ಗದಲ್ಲಿ ಜನ್ಮತಳೆದು ದಲಿತರ ದನಿಯಾಗಿ ಬಂಡಾಯದ ಹರಿಕಾರರಾಗಿ ಸಂಪ್ರದಾಯಸ್ಥರ ಮಧ್ಯದಲ್ಲಿದ್ದಾಗಲೂ ಸಂಪ್ರದಾಯಕ್ಕೆ ವಿರುದ್ಧವಾಗಿ ಬಂಡೆದ್ದ ಧೈರ್ಯ, ಸಾಹಸಗಳನ್ನು ಮೆರೆದುದು ಕನಕದಾಸರ ವೈಶಿಷ್ಟ್ಯ ಮನುಸ್ಮೃತಿಯ ಕರಾಳ ಛಾಯೆ ದಟ್ಟವಾಗಿ ಹರಡಿದ್ದ ೧೬ನೇ ಶತಮಾನ ಸಾಂಸ್ಕೃತಿಕ, ಸಾಹಿತ್ಯಿಕ ಸಾಧನೆಯನ್ನು ವಿವರಿಸಿದ್ದಾರೆ.

ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರದಿಂದ ‘ದಾಸಸಾಹಿತ್ಯ ಮತ್ತು ಸಂಸ್ಕೃತಿ’ ಎಂಬ ಶೀರ್ಷಿಕೆಯಲ್ಲಿ ಸಾ. ಕೃ. ರಾಮಚಂದ್ರರಾವ್ ಅವರು ೩೬೦ ಪುಟಗಳಿಂದ ಕೂಡಿದ ಕೃತಿಯಲ್ಲಿ ಕನಕದಾಸರ ಜೀವನ, ದರ್ಶನ, ಆಧ್ಯಾತ್ಮಿಕ ದೃಷ್ಟಿ, ಹರಿದಾಸರ ಸಂಪ್ರದಾಯ ಸಂಗೀತ, ಸಂಸ್ಕೃತಿ, ದಾಸರ ಸಾಮಾಜಿಕ ನಿಲುವಿನ ಕುರಿತು ಸಮಗ್ರವಾಗಿ ವಿವರಿಸಿ ೨೦೦೩ ರಲ್ಲಿ ಇದನ್ನು ಪ್ರಕಟಿಸಿದ್ದಾರೆ.

ಜನಪ್ರಿಯ ಕನಕ ಸಂಪುಟದಲ್ಲಿ ‘ಕೀರ್ತನೆಗಳು’ ಎಂಬ ಹೆಸರಿನ ಈ ಕೃತಿಯ ಮೈಸೂರಿನ ಅಖಿಲ ಏಜನ್ಸೀಸ್‌ನಿಂದ ೮೨ ಪುಟಗಳಲ್ಲಿ ೨೦೦೪ ರಲ್ಲಿ ಪ್ರಕಟಣೆಗೊಂಡಿದೆ. ಆರು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ‘ರಾಮಾನುಜರೇ ನಮೋ ನಮಃ’ ‘ತಲ್ಲಣಿಸದಿರು ಕಂಡ್ಯೆ ತಾಳು ಮನವೆ’ ‘ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ;’ ‘ದುರ್ಜನರ ಸಂಗ ಎಂದಿಗೊಲ್ಲೆನು ಹರಿಯೇ’ ‘ದಯಮಾಡಲು’ ‘ಬೊಂಬೆಯಾಟವನಾಡಿಸಿದ’ ಈ ರೀತಿಯಾಗಿ ಕೀರ್ತನೆಗಳ ವಿಶ್ಲೇಷಣೆ ಇದೆ.

ಎಚ್.ಜೆ. ಲಕ್ಕಪ್ಪಗೌಡ ಅವರು ಬರೆದ ‘ಕನಕ ಮುಖಗಳು’ ಕೃತಿ ವಿದ್ಯಾನಿಧಿ ಪ್ರಕಾಶ’ನ’ ಗದಗದಿಂದ ೨೦೦೪-೦೫ರಲ್ಲಿ ಪ್ರಕಟಗೊಂಡಿದೆ. ಒಟ್ಟು ೫೪ ಪುಟಗಳಲ್ಲಿ ಕನಕದಾಸರ ಕೀರ್ತನೆಗಳಲ್ಲಿ ಕಾವ್ಯಮೌಲ್ಯ, ಸಾಂಸ್ಕೃತಿಕ ಮಹತ್ವ, ಸಾಮಾಜಿಕ ಮುಖ, ಅವರ ನಳಚರಿತೆಯನ್ನು ಭಾರತೀಯ ಅಂತರಂಗವನ್ನು ರೂಢಿಸಿಕೊಳ್ಳಲು ಜೀವನಕ್ಕೆ ಸತ್ವವನ್ನು ಹಲವಾರು ರೀತಿಯಲ್ಲಿ ಅವರು ಕಂಡುಕೊಂಡಿದ್ದಾರೆ.

ಒಡೆಯರ್ ಡಿ. ಹೆಗ್ಗಡೆ ಅವರು ‘ವಿಶ್ವಮಾನವ ಸಂತ ಕವಿ ಶ್ರೀ ಕನಕದಾಸರು’ ಎಂಬ ಶೀರ್ಷಿಕೆಯಲ್ಲಿ ಮೈಸೂರಿನ ಚೇತನ ಬುಕ್ ಹೌಸ್‌ನಿಂದ ೮೮ ಪುಟಗಳಿಂದ ಕೂಡಿದ ಈ ಕೃತಿ ೨೦೦೫ ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟಗೊಂಡಿದೆ. ಕನಕ, ಪ್ರಭುವಾಗಿ, ಮೊನೆಗಾರ ಧನಿಯಾಗಿ, ಆಧ್ಯಾತ್ಮ ಸಾಧನೆ, ಸಾಮಾಜಿಕಧೋರಣೆ ಈ ಕೃತಿಯಲ್ಲಿ ವಿವರಿಸಲಾಗಿದೆ. ಸಿ.ಪಿ.ಕೆ. ಅವರು ‘ಕನಕ ಕೆಲವು ಮುಖಗಳು’ ಎಂಬ ಶೀರ್ಷಿಕೆಯಲ್ಲಿ ಅಖಿಲಾ ಏಜನ್ಸೀಸ್ ಮೈಸೂರಿನವರು ೪೭ ಪುಟಗಳ ಚಿಕ್ಕ ಕೃತಿಯನ್ನು ೨೦೦೬ ರಲ್ಲಿ ಪ್ರಕಟಿಸಿದರು. ಇದರಲ್ಲಿ ಕನಕನ ಬಾಲ್ಯ, ಬೆಳೆದು ಬಂದ ಬಗೆಗಳಲ್ಲಿ ವ್ಯಕ್ತಿತ್ವ ಒಂದು ಮುಖವಾದರೆ ಇನ್ನೊಂದು ಮುಖ ಅವರ ಕವಿ ಮನೋಧರ್ಮಕ್ಕೆ ಸಂಬಂದಿಸಿದೆ.

'ನಳಚರಿತ್ರೆ'ಯ ಸರಳ ಸೌಂದರ್ಯ 'ಮೋಹನ ತರಂಗಿಣಿ'ಯ ಲಲಿತ ಶೃಂಗಾರ ಗುಣ, 'ಹರಿಭಕ್ತಸಾರ'ದ ಭಕ್ತಿ ನಿರ್ಭರತೆ 'ರಾಮಧಾನ್ಯ ಚರಿತೆ'ಯ ವಸ್ತು ಚಮತ್ಕಾರವನ್ನು ಈ ಕೃತಿಯಲ್ಲಿ ಮೈದಾಳಿದ್ದನ್ನು ಕಾಣುತ್ತೇವೆ.

'ಶ್ರೀ ಕನಕದಾಸರು'' ಶೀರ್ಷಿಕೆಯ ಕೃತಿಯನ್ನು ಬಸವರಾಜ ನಾಯ್ಕರ ರಚಿಸಿದ್ದು, ಇದರಲ್ಲಿ ಭಾರತದಲ್ಲಿ ಭಕ್ತಿ ಚಳುವಳಿ ಹಿನ್ನೆಲೆ, ಕನಕದಾಸರ ಜೀವನಕಾಲ, ಅವರ ಕಾವ್ಯ ಕೀರ್ತನೆಗಳು, ಭಾಷೆ, ಜನಪದೀಯ ಅಂಶಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಪ್ರಥಮ ಆವೃತ್ತಿಯಾಗಿ ೨೦೦೬ರಲ್ಲಿ ನ್ಯಾಶನಲ್ ಬುಕ್ ಟ್ರಸ್ಟಿನಿಂದ ಪ್ರಕಟಣೆಯಾಗಿದೆ. 'ಕನಕದಾಸ ಹಾಗೂ ಏಕನಾಥ ಒಂದು ತೌಲನಿಕ ಅಧ್ಯಯನ' ಈ ಕೃತಿಯನ್ನು ಮೇಧಾ. ಎಂ. ಕುಲಕರ್ಣಿಯವರು ಬರೆದಿದ್ದಾರೆ. ಇಲ್ಲಿ ದಾಸ ಸಾಹಿತ್ಯ ಮತ್ತು ಸಂತ ಸಾಹಿತ್ಯದ ಉಗಮ ಮತ್ತು ವಿಕಾಸ ಕನಕದಾಸ ಮತ್ತು ಏಕನಾಥರ ಜೀವನ ಸಾಧನೆಗಳನ್ನು ತೌಲನಿಕರಿಸಿದ್ದಾರೆ. ಅಲ್ಲದೆ ಭಕ್ತಿ, ಕುಲ, ಲೌಕಿಕ ಚಿಂತನೆ, ಹೆಣ್ಣಿನ ಸ್ಥಾನಮಾನ, ಕೀರ್ತನೆಗಳ ಶೈಲಿಯಲ್ಲಿ ಐದು ಅಧ್ಯಾಯಗಳಲ್ಲಿ ಕಟ್ಟಿ ಕೊಟ್ಟಿದ್ದಾರೆ. ಈ ಕೃತಿಯು ಅಭಿಜಿತ್ ಪ್ರಕಾಶನ ಮುಂಬೈಯಿಂದ ೨೦೦೭ರಲ್ಲಿ ಪ್ರಕಟಿತವಾಗಿದೆ.

ಬಿ.ಬಿ. ಬಿರಾದಾರ ಅವರು ಬರೆದಿರುವ 'ನಳಚರಿತೆ ಒಂದು ಹೊಸನೋಟ' ಎಂಬ ಕೃತಿ. ಕರ್ನಾಟಕ ವಿಶ್ವವಿದ್ಯಾಲಯದ ಕನಕ ಅಧ್ಯಯನ ಪೀಠದ ಪ್ರಕಟಣೆಯಾಗಿ ೫೪ ಪುಟಗಳಲ್ಲಿ ೨೦೦೬ ಪ್ರಸಾರಾಂಗದಿಂದ ಪ್ರಕಟಣೆಯಾಯಿತು. ನಳಚರಿತೆಯೆ ಪಾತ್ರ, ಚಿತ್ರಣ, ಹರಿ ಮಹಿಮೆ, ರಸ, ಭಾಷೆ, ಶೈಲಿ, ವಿಭಿನ್ನ ರೀತಿಯಲ್ಲಿ ಚಿಂತಿಸಿದ್ದನ್ನು ಕಾಣುತ್ತೇವೆ. 'ಸಂತ ಶ್ರೀ ಕನಕದಾಸರ ಜೀವನ ಸಂದೇಶ' ಎಂಬ ಕೃತಿ ಜಗನ್ನಾಥ ಆರ್. ಗೇನಣ್ಣವರ ರಚಿಸಿದ್ದಾರೆ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಿಂದ ೭೭ ಪುಟಗಳಲ್ಲಿ ಇರುವ ಈ ಕೃತಿ ೨೦೦೮ ರಲ್ಲಿ ಪ್ರಕಟಗೊಂಡಿತು. ಅವರ ಜೀವನ ಕೃತಿಗಳು ಮುಂಡಿಗೆ, ಉಗಾಭೋಗ, ಸಮಾಜದ ಚಿಂತನಾ ಮುಖಿಯಾಗಿ ನೀತಿಬೋಧನೆ, ಸಾಹಿತ್ಯದ ವೈಚಾರಿಕತೆ, ಪಾರಂಪರಿಕ ಸ್ಥಳಗಳು, ಕನ್ನಡ ಸಾಹಿತ್ಯಕ್ಕೆ ಕನಕದಾಸರ ಕೊಡುಗೆಯನ್ನು ವಿವರಿಸಿದ್ದಾರೆ. ಬನ್ನಂಜೆ ಗೋವಿಂದಾಚಾರ್ಯರು 'ಕನಕೋಪನಿಷತ್ತು' ಎಂಬ ಶೀರ್ಷಿಕೆಯಲ್ಲಿ ೨೦೦೮ ರಲ್ಲಿ ಉಡುಪಿಯ ಕನಕದಾಸ ಅಧ್ಯಯನ ಸಂಶೋಧನಾ ಪೀಠದಿಂದ ಪ್ರಕಟನೆಯಾಯಿತು. ಕನಕಪಂಥ ಹರಿಭಕ್ತಿ, ಕನಕರು ಕನ್ನಡ ಹಾಗೂ ಸಂಸ್ಕೃತ ಸೂಕ್ತಿಗಳು, ಬದುಕು-ಭವಣೆ-ಸಿದ್ಧಿ ಕೀರ್ತನೆ, ಮುಂಡಿಗೆಗಳ ಕುರಿತು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ದಾಸಸಾಹಿತ್ಯದಲ್ಲಿ ಸಾಮಾಜಿಕ ಕಳಕಳಿಯನ್ನು ಜತೆಗೊಡಿಸಿ ದಾಸ ವಾಙ್ಮಯ ಕುರಿತು ಚಿಂತನ ಮಾಡಿದ್ದಾರೆ.

'ಕನ್ನಡ ನಾಡಿನ ಹರಿದಾಸ ಸಂಪದ' ಕೃತಿಯಲ್ಲಿ ಜಯಸಿಂಹ ಬೆಂಗಳೂರಿನ ವಸಂತ ಪ್ರಕಾಶನದಿಂದ ೧೧೬ ಪುಟಗಳಿಂದ ಕೂಡಿದ ಕೃತಿಯನ್ನು ೨೦೦೮ರಲ್ಲಿ ಹೊರತಂದಿದ್ದು ಕನಕದಾಸರ ಜೀವನ, ಭಕ್ತಿ, ಸಾಮಾಜಿಕ ಒಳಿತು, ಧಾರ್ಮಿಕ ಮಹೋನ್ನತಿ ಕುರಿತು ಕೃತಿಯಲ್ಲಿ ನಿರೂಪಿಸಿದ್ದಾರೆ. ಡಾ. ವೆಂಕಟಗಿರಿ ದಳವಾಯಿಯವರು ಕಾಗಿನೆಲೆ ಮಹಾಸಂಸ್ಥಾನ ಕನಕಗುರು

ಪೀಠ ವೀರಗೋಟದಿಂದ 'ವಿಶ್ವಪಥ-ಹಾಲುಮತ ಸಂಸ್ಕೃತಿ ಮಾಲೆಯಲ್ಲಿ' 'ಕನಕದಾಸರು' ಎಂಬ ಕೃತಿ ೨೦೦೮ ರಲ್ಲಿ ಪ್ರಕಟವಾಯಿತು. ಕನಕದಾಸರ ಕೀರ್ತನೆಗಳು ಮತ್ತು ಅವರ ಕೃತಿಗಳ ಸಂಕ್ಷಿಪ್ತ ವಿವರಣೆವಿರುವುದು.

ವಿದ್ಯಾವಾಚಸ್ಪತಿ ಕವಿತಾಕೃಷ್ಣ ಅವರು 'ಭಕ್ತಿ ತರಂಗಿಣಿಃ ಕನಕದಾಸರ ಬದುಕು ಮತ್ತು ಕೀರ್ತನೆಗಳು' ಶೀರ್ಷಿಕೆಯಲ್ಲಿ ಬೆಂಗಳೂರಿನ ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನವರು ೨೯೧ ಪುಟಗಳಿರುವ ಈ ಕೃತಿಯನ್ನು ೨೦೦೯ ರಲ್ಲಿ ಪ್ರಕಟಿಸಿದ್ದು ಇದರಲ್ಲಿ ಕನಕದಾಸರ ಬಾಲ್ಯ, ಮದುವೆ, ಯುದ್ಧ, ಜೀವನದ ನಶ್ವರತೆ, ಹರಿದಾಸನಾದದ್ದು, ಕನಕನಕಿಂಡಿವಿಚಾರ, ಹಾಗೂ ಅವರ ಕೀರ್ತನೆಗಳು ಮೈದಳೆದಿವೆ. ಕನಕದಾಸ ವಿರಚಿತ 'ಹರಿಭಕ್ತಿಸಾರ' ಕೃತಿಯನ ಎನ್. ರಂಗನಾಥಶರ್ಮಾ ಅವರು ಕನ್ನಡಕ್ಕೆ ಅರ್ಥಾನುವಾದ ಮಾಡಿರುವರು ೨೦೦೮ ರಲ್ಲಿ ೪೪ ಪುಟಗಳಲ್ಲಿ ಇರುವ ಈ ಕೃತಿಯನ್ನು ಕನಕದಾಸ ಅಧ್ಯಯನ ಸಂಶೋಧನ ಪೀಠ ಉಡುಪಿಯಿಂದ ಪ್ರಕಟವಾಗಿದೆ.

ನರಸಿಂಹಮೂರ್ತಿ ಹೂವಿನಹಳ್ಳಿಯವರು 'ಕನಕದಾಸರ ಕೃತಿಗಳಲ್ಲಿ ಸಮಾನತಾ ಸಮಾಜ' ಕೃತಿಯಲ್ಲಿ ಜಾತಿಯತೆ, ಭಕ್ತಿ, ಧಾರ್ಮಿಕತೆ, ರಾಜಕೀಯ, ಸಾಮಾಜಿಕ ಚಳುವಳಿ, ಸಾಮಾನ್ಯ ಜನರೊಂದಿಗೆ ಸಮಾನತೆಯ ಸ್ಥಾನಮಾನದ ವಿಚಾರಗಳಿಗೆ ಹೋರಾಟಕ್ಕಿಳಿದು, ಜನಾಂಗಕ್ಕಾಗುತ್ತಿದ್ದ ನೋವು, ಅಪಮಾನ, ಬೇಸರ, ಕೀಳರಿಮೆಗಳನ್ನು ಅನುಭಾವಿಯಾಗಿ ರೂಪುಗೊಂಡ ಅಂಶಗಳು ಕೃತಿಯಲ್ಲಿ ಅಡಕಗೊಂಡಿವೆ.

'ಕನಕದಾಸರ ನಳಚರಿತೆ' ಎಂಬ ಕೃತಿಯಲ್ಲಿ ಗದ್ಯಾನುವಾದವನ್ನು ಹಾತೂರು ಶಂಕರನಾರಾಯಣ ಭಟ್ಟರು ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೮೨ ಪುಟಗಳ ಈ ಕೃತಿಯನ್ನು ೨೦೦೯ರಲ್ಲಿ ಪ್ರಕಟಿಸಿತು. ಒಂಬತ್ತು ಸಂಧಿಗಳಲ್ಲಿ ನಳಚರಿತೆ ಕಾವ್ಯ ಕೃತಿಯನ್ನು ಕನಕದಾಸರ ಮೂಲ ಆಶಯಗಳಿಗೆ ಧಕ್ಕೆಬಾರದಂತೆ ಅರ್ಥಪೂರ್ಣವಾಗಿ ಗದ್ಯಾನುವಾದ ಮಾಡಲಾಗಿದೆ.

ಎಂ. ದೇವಾರ್ಜುನ ಅವರು 'ಕನಕ ಪವಾಡ' ಎಂಬ ಕೃತಿಯನ್ನು ಹೊಸಕೋಟೆ ನವಜ್ಯೋತಿ ಪ್ರಕಾಶನದಿಂದ ೨೦೦೯ರಲ್ಲಿ ಪ್ರಕಟಗೊಳಿಸಲಾಗಿದೆ. ಕನಕದಾಸರು ಬೆಳೆದ ಕಾಗಿನೆಲೆ ಸೊಬಗು, ಭಕ್ತಿ, ವೈರಾಗ್ಯ ಅವರ ಕೃತಿಗಳು, ಕೀರ್ತನೆಗಳು, ದಾಸತ್ವ, ಕನಕರ ಜೀವನದಲ್ಲಿ ನಡೆದ ಘಟನೆ ಮತ್ತು ಪವಾಡಗಳನ್ನು ಈ ಕೃತಿಯಲ್ಲಿ ಪಡಿಮೂಡಿಸಲಾಗಿದೆ.

'ಕನಕದಾಸರ ಸಾಹಿತ್ಯ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಹರಿಲಾಲ ಪವಾರ ಅವರು ೧೯೨ ಪುಟಗಳ ಕೃತಿಯನ್ನು ಕನಕ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪ್ರಸಾರಾಂಗದಿಂದ ೨೦೧೦ ಪ್ರಕಟಿಸಲಾಗಿದೆ. ಇದರಲ್ಲಿ ಕನಕದಾಸರ ಜೀವನ, ಪರಿಸರ, ಭಕ್ತಿ ಮತ್ತು ಪರಂಪರೆ ಅವರ ಸಾಹಿತ್ಯಕ ಕೃತಿಗಳು, ಕೀರ್ತನೆ, ಮುಂಡಿಗೆಗಳು, ಉಗಾಭೋಗಗಳು, ತೌಲನಿಕವಾಗಿರುವ ಅಧ್ಯಯನವನ್ನು ಮಾಡಲಾಗಿದೆ. ಚಂದ್ರಕಾಂತ ಬಿಜ್ಜರಗಿಯವರು 'ದಾರ್ಶನಿಕ ಕವಿ ಕನಕದಾಸರು' ಎಂಬ ಕೃತಿಯಲ್ಲಿ ಬಿಜಾಪುರದ ಶೈಲಚಂದ್ರ ಪ್ರಕಾಶನದಿಂದ ೪೨೯ ಪುಟಗಳಲ್ಲಿ

ಕೃತಿಯನ್ನು ೨೦೧೦ ರಲ್ಲಿ ಪ್ರಕಟಿಸಲಾಯಿತು ಇದರಲ್ಲಿ ಕನಕರ ಬಾಡ-ಬಂಕಾಪೂರ ಇತಿಹಾಸ, ಜೀವನ ದರ್ಶನ, ಕೃತಿಗಳ ವಿಮರ್ಶೆ, ಜಾತಿ-ಮತ, ಐತಿಹ್ಯ ಮತ್ತು ಪವಾಡಗಳ ಕುರಿತು ದೀರ್ಘವಾಗಿ ಚರ್ಚಿಸಿದ್ದಾರೆ.

ಮಧುಸೂದನಾಚಾರ್ಯ ಜೋಷಿ ಇವರು ಬೆಂಗಳೂರಿನ ಸುಮುಖ ಪ್ರಕಾಶನದಿಂದ ೧೩೪ ಪುಟಗಳಿಂದ ಕೂಡಿದ 'ದಾಸ ಸಾಹಿತ್ಯ ಸೌರಭ' ಎಂಬ ಕೃತಿಯನ್ನು ೨೦೧೦ ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ದಾಸಸಾಹಿತ್ಯವನ್ನು ನಾಲ್ಕು ಹಂತಗಳಾಗಿ ವಿಂಗಡಿಸಲಾಗಿದೆ. ೧) ನರಹರಿ ತೀರ್ಥಯುಗ ೨) ಶ್ರೀಪಾದರಾಜಯುಗ ೩) ವಿಜಯದಾಸ ಯುಗ ೪) ಪ್ರಾಣೇಶದಾಸ ಯುಗ ಈ ರೀತಿಯಲ್ಲಿ ವರ್ಗಿಕರಿಸಿ ದ್ವೈತ ಸಿದ್ಧಾಂತ, ಹರಿಭಕ್ತಸಾರ ಕೀರ್ತನೆಗಳ ಕುರಿತು ವಿಶ್ಲೇಷಿಸಿದ್ದಾರೆ.

ಡಿ. ಕೆ. ಕುಮಾರಯ್ಯ ಅವರು 'ದೈವ ಸಂಭೂತ ಶ್ರೀ ಕನಕದಾಸರು ಜೀವ ಯಾವ ಕುಲ?' ಕೃತಿಯನ್ನು ೨೦೧೦ ರಲ್ಲಿ ಪ್ರಕಟಿಸಿದ್ದಾರೆ. ದಾಸರ ಹಿನ್ನೆಲೆ, ಗ್ರಾಮ, ವಂಶದ ಹಿನ್ನೆಲೆ, ಕುಲ, ವಿವಾಹ ಅನೇಕ ಪವಾಡಗಳ ಕುರಿತು ತಾತ್ವಿಕವಾಗಿರುವ ವಿಚಾರಗಳನ್ನು ಈ ಕೃತಿಯಲ್ಲಿ ಲೇಖಕರು ಪ್ರಸ್ತುತಪಡಿಸಿದ್ದಾರೆ. ಸು. ರುದ್ರಮೂರ್ತಿಶಾಸ್ತ್ರಿಯವರು 'ಕನಕದಾಸ' ಎಂಬ ಶೀರ್ಷಿಕೆಯ ಚಾರಿತ್ರಿಕ ಕಾದಂಬರಿಯನ್ನು ೪೫೩ ಪುಟಗಳಲ್ಲಿ ಬೆಂಗಳೂರಿನ ಸಾಗರ ಪ್ರಕಾಶನದಿಂದ ೨೦೧೦ ರಲ್ಲಿ ಪ್ರಕಟಿಸಿದ್ದಾರೆ. ಹುಟ್ಟಿನಿಂದ ದಾಸರಾಗುವರೆಗಿನ ಜೀವನ ರೂಪುಗೊಂಡ ಬಗೆ ಪ್ರಭಾವ ಬೀರಿದ ವ್ಯಕ್ತಿಗಳು, ಸಂಗತಿಗಳು, ದೊರೆತ ಸಂಸ್ಕಾರಗಳು, ವ್ಯಾಸರಾಯರು, ವಾದಿರಾಜರು, ವೈಕುಂಟದಾಸರು. ಪುರಂದರದಾಸರ ಒಟನಾಟವನ್ನು ಈ ಕಾದಂಬರಿಯಲ್ಲಿ ಒಡಮೂಡಿಸಿರುತ್ತರೆ.

ಶಂಭುಲಿಂಗ ಅವರು 'ಮೃತ್ಯುಂಜಯನಿಗೊಂದು ಪತ್ರ' ಕನಕದಾಸರ ಕುರಿತು ಒಂದು ಚಿಂತನೆಯನ್ನು ವಿದ್ಯಾನಿಧಿ ಪ್ರಕಾಶನ ಗದಗದಿಂದ ೧೬೮ ಪುಟಗಳ ಈ ಗ್ರಂಥ ೨೦೧೦ ರಲ್ಲಿ ಪ್ರಕಟಣೆಯಾಯಿತು. ಕನಕದಾಸರ ಜೀವನಕ್ಕೆ ಸಂಬಂಧಪಟ್ಟ ಐತಿಹಾಸಿಕ ಆಕರಗಳನ್ನು ಮತ್ತು ನಮ್ಮ ನಾಡಿನ ಜನಪದರ ದೊರೆಯುವ ನಂಬಿಕೆ-ಹಾಡುಗಳಲ್ಲಿ ಉಲ್ಲೇಖ ಸಾಮಗ್ರಿಯಾಗಿ ಬಳಸಿಕೊಂಡು ಜಾತಿ, ಜನಾಂಗದ ಕುರಿತು ಆಲೋಚಿಸಿರುವರು.

ಡಾ. ರವಿರಾಜ ಶೆಟ್ಟಿಯವರು 'ಕನಕದಾಸರ ಮೋಹನತರಂಗಿಣಿ: ಸಾಂಸ್ಕೃತಿಕ ಸಂವಾದ' ಎಂಬ ಶೀರ್ಷಿಕೆಯಲ್ಲಿ ೧೭೬ ಪುಟಗಳ ಕೃತಿಯು ೨೦೧೧ ರಲ್ಲಿ ಕನಕ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟಣೆಯಾಯಿತು. ಇದರಲ್ಲಿ ಕನಕದಾಸರ ಮೋಹನ ತರಂಗಿಣಿಯ ಮೇಲೆ ನಡೆದ ಅಧ್ಯಯನಗಳ ಸಮೀಕ್ಷೆ, ಕಥೆ ಮತ್ತು ಪಾತ್ರ ವಿವೇಚನೆ, ಭಾಷೆ, ಶೈಲಿ, ಚಾರಿತ್ರಿಕ ಅಂಶಗಳನ್ನು ಸಾಂಸ್ಕೃತಿಕ ಗುರುತುಗಳನ್ನು ಸಂಶೋಧನಾತ್ಮಕವಾಗಿ ಅಧ್ಯಯನವನ್ನು ಮಾಡಿದ್ದಾರೆ/ ಕನಕ ಅಧ್ಯಯನ ಪೀಠದ ಪ್ರಕಟಣೆಯಾದ 'ರಾಮಧಾನ್ಯ ಚರಿತೆ ಸಂಘರ್ಷದ ನೆಲೆ' ಎಂಬ ಶೀರ್ಷಿಕೆಯ ಕೃತಿಯನ್ನು ಸರೋಜನಿ ಸಿ. ಹಿರೇಮಠ ರಿಂದ ರಚಿತವಾಗಿದ್ದು, ೨೦೧೧ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ

ಪ್ರಕಟಣೆಯಾಯಿತು. ಕನಕದಾಸರ ಕಾಲ, ಪರಿಸರ, ಕುಲದನೆಲೆ, ಸಂಸ್ಕೃತಿ, ಭಕ್ತಿಮಾರ್ಗ, ರಾಮಧಾನ್ಯ ಚರಿತೆ–ಕಾವ್ಯ ರಚನೆಯ ಹಿನ್ನೆಲೆ, ವಸ್ತು, ವಿಚಾರಧಾರೆ, ವ್ಯಕ್ತಿತ್ವ ವಿಚಾರ, ಚಿಂತನ–ಮಂಥನವನ್ನು ಮಾಡಿದ್ದಾರೆ.

ಜಗನ್ನಾಥ ಆರ್. ಗೇನಣ್ಣವರ "ಸಂತ ಶ್ರೀ ಕನಕದಾಸರ ಪಾರಂಪರಿಕ ಸ್ಥಳಗಳು" ಎಂಬ ಕೃತಿಯನ್ನು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಕಟಿಸಿದ್ದಾರೆ ಕನಕದಾಸರ ಹೆಸರಿನಲ್ಲಿರುವ ಹಾಗೂ ಮೂರ್ತಿ, ಗುಡಿ, ಸ್ಥಳ, ಗುಹೆ, ಕಟ್ಟೆ, ಕೆರೆ, ಬಂಡೆ, ಗೋಪುರ, ರಥ ಮುಂತಾದ ಸ್ಥಳಗಳನ್ನು ಗುರುತಿಸಿ ಚಿತ್ರ ಸಮೇತವಾಗಿ ಐತಿಹಾಸಿಕವಾಗಿರುವ ಘಟನೆಗಳನ್ನು ದಾಖಲಿಸಿ ಬರೆದಿರುವರು.

ಆಂಗ್ಲಭಾಷೆಯಲ್ಲಿ ಕನಕ ಅಧ್ಯಯನ ಪೀಠ, ಧಾರವಾಡದಿಂದ ಪ್ರಕಟಣೆಯಾದ Kanaka's Revolution ಕೃತಿಯನ್ನು K. Raghavendra Rao ಅವರು ಬರೆದಿದ್ದಾರೆ. ಒಟ್ಟು ೨೮ ಪುಟಗಳ ಈ ಕೃತಿ ಕರ್ನಾಟಕ ವಿ. ವಿ. ಯ ಪ್ರಸಾರಾಂಗದಿಂದ ೨೦೧೨ ರಲ್ಲಿ ಪ್ರಕಟನೆಗೊಂಡಿದೆ. ಭಾಷಾಂತರ ಕೃತಿಯಲ್ಲಿ D. A. Shankar ಅವರು ಅನುವಾದಿಸಿದ ಕನಕದಾಸರ ರಾಮಧಾನ್ಯ ಚರಿತೆ ಮತ್ತು ಇತರೆ ಕೃತಿಗಳನ್ನು 'Golden Flock' ಎಂಬ ಶೀರ್ಷಿಕೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪ್ರಸಾರಾಂಗದಿಂದ ೧೪೯ ಪುಟದ ಈ ಕೃತಿಯನ್ನು ೨೦೦೭ ರಲ್ಲಿ ಪ್ರಕಟಿಸಿದರು.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಕಟಿಸಿದ 'Kanakadasaru' ಎಂಬ ಶೀರ್ಷಿಕೆಯ ಈ ಕೃತಿ Ka. Ta. Chikkanna ಅವರು ಬರೆದಿದ್ದು ಅದನ್ನು ಆಂಗ್ಲಭಾಷೆಗೆ H.S.M. Prakash ಅವರು ಭಾಷಾಂತರಿಸಿದ್ದಾರೆ ಇದು ಕನಕದಾಸರ ಜೀವನ ಚರಿತ್ರೆಗೆ ಸಂಬಂಧಿಸಿದ ಕೃತಿಯಾಗಿದ್ದು ಒಟ್ಟು ೩೦ ಪುಟಗಳ ಈ ಪುಸ್ತಕ ೨೦೧೦ ರಲ್ಲಿ ಪ್ರಕಟಗೊಂಡಿತು.

'ದಾಸ ಸಾಹಿತ್ಯ ದರ್ಪಣ' ಶೀರ್ಷಿಕೆಯ ಕೃತಿಯನ್ನು ಟಿ.ಎನ್. ನಾಗರತ್ನ ರಚಿಸಿದ್ದು, ಭಕ್ತಿ ಪಂಥದ ಹಿನ್ನೆಲೆ, ಕೀರ್ತನೆ, ಕನಕದಾಸರ ವ್ಯಕ್ತಿತ್ವ ಹರಿದಾಸ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಹೀಗೆ ಮುಂತಾದ ರೀತಿಯಲ್ಲಿ ವಿವರಿಸಿರುವ ಈ ಕೃತಿ ಮೈಸೂರಿನ ಅಭಿರುಚಿ ಪ್ರಕಾಶನದವರು ೨೦೧೨ರಲ್ಲಿ ಪ್ರಕಟಿಸಿದ್ದಾರೆ. ರಾಮಕೃಷ್ಣ ಮರಾಠೆಯವರು ಬರೆದ 'ರಾಮಧಾನ್ಯ' ಎನ್ನುವ ಈ ನಾಟಕವನ್ನು ತೆಲುಗಿಗೆ ಎಸ್. ಲಕ್ಷ್ಮೀದೇವಿಯವರು ಅನುವಾದಿಸಿದ್ದಾರೆ. 'ರಾಮಧಾನ್ಯಂ' ಎಂಬ ಹೆಸರಿನಲ್ಲಿ ಅನುವಾದಗೊಂಡಿರುವ ಕನಕದಾಸರ ರಾಮಧಾನ್ಯ ಚರಿತ್ರೆಯ ಸಂಪೂರ್ಣ ಪಾಠ ಇರುವ ಈ ಕೃತಿ ೨೦೧೨ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಕಟಗೊಂಡಿದೆ.

ನಂದಿನಿ ಗುಂಡೂರಾವ್ ಅವರು ೨೦೧೨ರಲ್ಲಿ 'ಕನಕದಾಸ : ಏಕ ಅನುಶೀಲನಾ' ಎಂಬ ಕೃತಿಯನ್ನು ಹಿಂದಿ ಭಾಷೆಯಲ್ಲಿ ಬರೆದಿದ್ದಾರೆ. ಒಟ್ಟು ಆರು ಅಧ್ಯಾಯಗಳಿಂದ ಕೂಡಿದ ಈ ಕೃತಿ ಕರ್ನಾಟಕ ವಿಶ್ವವಿದ್ಯಾಲಯದ ಕನಕ ಅಧ್ಯಯನ ಪೀಠದಿಂದ ಪ್ರಕಟಗೊಂಡಿದೆ.

ಬಿ.ಕೆ. ರವಿ ಹಾಗೂ ಸರೋಜಿನಿ ಸಿ ಹಿರೇಮಠ ಇಬ್ಬರೂ ಸೇರಿ ಬರೆದ 'ಕನಕದಾಸರ ಸಮಗ್ರ ಕಾವ್ಯಾಧ್ಯಯನ ಭಾಗ–೧ ರಾಮಧಾನ್ಯ ಚರಿತೆ' ಕೃತಿಯನ್ನು ಧಾರವಾಡ ಕನಕ ಅಧ್ಯಯನ

ಪೀಠದಿಂದ ಪ್ರಕಟಿಸಿದ್ದಾರೆ. ಇದರಲ್ಲಿ ನಾಲ್ಕು ಅಧ್ಯಾಯಗಳಿದ್ದು ಕನಕದಾಸರ 'ಜೀವನ ವೃತ್ತಾಂತ' 'ರಾಮಧಾನ್ಯ ಚರಿತೆ ಕಥಾ ಸಂದರ್ಭ' ಮತ್ತು 'ಕಥಾ ನಿರೂಪಣೆ', 'ರಾಮಧಾನ್ಯ ಚರಿತೆಯ ವಿವಿಧ ಆಯಾಮಗಳು' ಕಾವ್ಯದ ವಿಭಿನ್ನ ನೆಲೆಗಳ ಕುರಿತು ವಿವರಿಸಿರುವರು.

'ಕನಕದಾಸರ ಹರಿಭಕ್ತಿಸಾರ' ಕೃತಿಯನ್ನು ಎಮ್.ಎನ್. ವಾಲಿ ಕನಕದಾಸರ ಜೀವನವನ್ನು ದರ್ಶನಮಾಡಿಸಿ ಅವರ 'ಹರಿಭಕ್ತಿಸಾರ' ಕಾವ್ಯವನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ವಿಜಯಪುರದ ಭುವನೇಶ್ವರ ಪ್ರಕಾಶನದಿಂದ ೨೦೧೩ರಲ್ಲಿ ಪ್ರಕಟವಾಗಿದೆ.

ಕನಕದಾಸರು ಕೃತಿಯನ್ನು. ಕಾ.ತ. ಚಿಕ್ಕಣ್ಣ ರಚನೆಮಾಡಿದ್ದಾರೆ ಕನಕದಾಸರ ಬಾಲ್ಯ, ಯೌವನ. ಮುಪ್ಪಿನ ವಯಸ್ಸಿನಲ್ಲಿ ಬದುಕಿದ ರೀತಿಗಳನ್ನು ಸರಳವಾಗಿ ಕಟ್ಟಿಕೊಟ್ಟಿರುವರು. ೨೦೧೩ ಬೀಳಗಿಯ ಕನಕದಾಸ ಪತ್ತಿನ ಸಹಕಾರ ಸಂಘದಿಂದ ಪ್ರಕಟಣೆಗೊಂಡಿದೆ.

ಕನಾಟಕ ವಿಶ್ವವಿದ್ಯಾಲಯದ ಕನಕ ಅಧ್ಯಯನ ಪೀಠದಿಂದ ಕೆ. ರಾಘವೇಂದ್ರರಾವ್ ಅವರು ಆಂಗ್ಲಭಾಷೆಯಲ್ಲಿ ರಚಿಸಿದ 'Kanakadasa and The Tradition of Religious Humanism in Karnataka' ಈ ಕೃತಿಯಲ್ಲಿ ಕನಕದಾಸರ ಜೀವನ ಕೃತಿಗಳು, ಮಾನವತೆಗೆ ಅವುಗಳ ಕೊಡುಗೆ ಕುರಿತು ೨೦೧೩ ರಲ್ಲಿ ಪ್ರಕಟಣೆಗೊಂಡಿದೆ.

'ಕನಕದಾಸರ ಸಮಗ್ರಕಾವ್ಯಾಧ್ಯಯನ: ಭಾಗ-೨'ರಲ್ಲಿ 'ನಳಚರಿತ್ರೆ' ಕೃತಿಯನ್ನು ಬಿ.ಕೆ. ರವಿ, ಎಚ್.ಎಚ್. ನದಾಫ್ ಅವರು ರಚಿಸಿದ ಸಾಹಿತ್ಯ ಪರಂಪರೆ, ಕಾವ್ಯದ ಹಿನ್ನೆಲೆ, ಪಾತ್ರಚಿತ್ರಣ, ಕಾವ್ಯ, ತತ್ವಗಳು, ಭಾಷಾ ಪ್ರಯೋಗ, ಜಾನಪದೀಯ ಅಂಶಗಳ ಕುರಿತು ವಿವರಿಸಿರುವರು. ಕರ್ನಾಟಕ ವಿಶ್ವವಿದ್ಯಾಲಯ, ಪ್ರಸಾರಾಂಗದಿಂದ ೨೦೧೪ರಲ್ಲಿ ಪ್ರಕಟಗೊಂಡಿದೆ.

ಕನಕ ಅಧ್ಯಯನ ಪೀಠದ ಪ್ರಕಟಣೆಯಾಗಿ ನಿರುಪಾಧೀಶರು ರಚಿಸಿದ 'ಕನಕ ವಿಜಯ' ಕೃತಿಯು ಕನಕದಾಸರ ವಿಚಾರ, ಕೃತಿಗಳ ಸಮಗ್ರತೆಯನ್ನು ಹೇಳುವ ಕೃತಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ೨೦೧೪ರಲ್ಲಿ ಪ್ರಕಣೆಯಾಗಿದೆ.

'ಕನಕದಾಸ' ಕೃತಿಯನ್ನು ಜ.ಹೊ. ನಾರಾಯಣಸ್ವಾಮಿಯವರು ರಚಿಸಿದ್ದು, ನಾ. ಸೋಮೇಶ್ವರರು ಸಂಪಾದಿಸಿದ್ದಾರೆ. ಕನಕದಾಸರ ಜೀವನ ಸಾಹಿತ್ಯದ ಸಂಕ್ಷಿಪ್ತದ ಪರಿಚಯ ಇಲ್ಲಿದೆ. ೨೦೧೫ ರಲ್ಲಿ ನವಕರ್ನಾಟಕ ಪ್ರಕಾಶನದಿಂದ ಪ್ರಕಟಣೆಗೊಂಡಿದೆ.

'ಕನಕದಾಸರ ಕೀರ್ತನೆಗಳ ಸಾಂಸ್ಕೃತಿಕ ಅನನ್ಯತೆ' ಕೃತಿಯನ್ನು ಶಿವಾನಂದ ಕೆಳಗಿನಮನೆಯವರು ರಚಿಸಿದ್ದು, ಇಲ್ಲಿ ಕನಕದಾಸರ ಜೀವನ, ವ್ಯಕ್ತಿತ್ವ, ಅವರ ಕೀರ್ತನೆಗಳ ಸಾಂಸ್ಕೃತಿಕ ಅನನ್ಯತೆ, ಸಾಮಾಜಿಕತೆ, ಧರ್ಮ ಮತ್ತು ಭಾವ್ಯಕ್ಯತೆ, ಮಹಿಳೆ ಮುಂತಾದ ಅಂಶವನ್ನು ವಿಶ್ಲೇಷಿಸಿದ್ದಾರೆ. ೨೦೧೫ರಲ್ಲಿ ಅನ್ನಪೂರ್ಣಾ ಪಬ್ಲಿಷಿಂಗ್ ಅಂಡ್ ಡಿಸ್ಟ್ರೀಬೂಷನ್‌ದಿಂದ ಪ್ರಕಟಿಸಿದ್ದಾರೆ.

೨.೨ ಸಂಪಾದನಾ ಕೃತಿಗಳು

೧೯ನೇಯ ಶತಮಾನದ ಮಧ್ಯಭಾಗದಿಂದ ಆರಂಭಗೊಂಡ ಕನಕದಾಸರ ಕೃತಿಗಳ ಸಂಪಾದನೆಯ ಕೆಲಸಗಳು ಪೌರಾತ್ಯತೆಯ ದೃಷ್ಟಿಕೋನ ಹಾಗೂ ನಾಡು-ನುಡಿಯ ಪ್ರತಿನಿಧಿಕರಣದ ನೆಲೆಯಲ್ಲಿ ಉಗಮಗೊಳ್ಳುತ್ತವೆ ಮೊಟ್ಟ ಮೊದಲಿಗೆ ೧೮೫೦ ರ ಹೊತ್ತಿಗೆ ಬಾಸೆಲ್ ಮಿಷನ್‌ನ ಹರ್ಮನ ಮೊಂಗ್ಲಿನ್ ಮೌಖಿಕ ರೂಪದಲ್ಲಿ ಪ್ರಸರಣಗೊಳಿಸುತ್ತಿದ್ದ ಒಟ್ಟು ೧೦೦ ದಾಸರ ಪದಗಳನ್ನು ಸಂಗ್ರಹಿಸಿ ಕಲ್ಲಚ್ಚಿನಲ್ಲಿ ಪ್ರಕಟಗೊಳಿಸುತ್ತಾರೆ. ಹರ್ಮನ್ ಮೊಂಗ್ಲಿನ ಈ ಕೃತಿಯನ್ನು ಪರಿಷ್ಕರಿಸಿ ಇನ್ನಷ್ಟು ದಾಸರ ಪದಗಳನ್ನು ಸೇರಿಸಿ ಒಟ್ಟು ೧೭೮ ದಾಸರ ಪದಗಳನ್ನು ೧೮೫೨ ರಲ್ಲಿ ಮರುಮುದ್ರಿಸುತ್ತಾರೆ. ದಾಸರ ಪದಗಳು ಗ್ರಂಥದಿಂದ ಪುರಂದರದಾಸರ, ಕನಕದಾಸರ ೨೮ ಪದ್ಯಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿದ್ದಾರೆ. ದಾಸರ ಪದದ ಭಾಷಾಂತರದ ಉದ್ದೇಶವನ್ನು ಪ್ರಸ್ತಾಪಿಸುವಾಗ ಇದು ಕ್ರೈಸ್ತ ಧರ್ಮಕ್ಕೆ ಹತ್ತಿರವಾಗಿದೆ' ಅಥವಾ ಅದೇ ರೀತಿಯ ವಿಚಾರವನ್ನು ಹೊಂದಿದೆ. ಇದು ವಿಷ್ಣುವಿನ ಹಿಂಬಾಲಕರ ಕೃತಿ. ಏಕದೇವತಾವಾದವನ್ನು ಎತ್ತಿ ಹಿಡಿಯುತ್ತದೆ. ಕೆಲವು ಬದಲಾವಣೆಗಳೊಂದಿಗೆ ಇದನ್ನು ಜರ್ಮನ ಭಾಷೆಗೆ ಅನುವಾದಿಸುತ್ತಾನೆ. ಯಾಕೆಂದರೆ ಹಿಂದೂ ಜನರ ಧಾರ್ಮಿಕ ವಿಚಾರ ಎಷ್ಟು ಉನ್ನತವಾಗಿದೆಯಂದು ತಿಳಿಯಬೇಕು ಎಂದು ಮೊಂಗ್ಲಿನ್ ಹೇಳುತ್ತಾರೆ ಮೊಂಗ್ಲಿನ್ ೧೮೫೧ ರಲ್ಲಿ ಭಾಮಿನಿ ಷಟ್ಪದಿಯ ಕನಕದಾಸರ ಹರಿ ಭಕ್ತಿಸಾರವನ್ನು ಕಲ್ಲಚ್ಚಿನಲ್ಲಿ ಪ್ರಕಟಿಸುತ್ತಾರೆ. ಸಂಗ್ರಹ ಸಂಪಾದನೆಯ ಈ ಮಿಷನರಿ ಚಟುವಟಿಕೆಯಲ್ಲಿ ಪೌರಾತ್ಯವಾದಿ ಹಾಗೂ ಪ್ರೊಟೆಸ್ಟೆಂಟ್ ದೃಷ್ಟಿಕೋನ ಕಾಣಬಹುದು.

ಮಿಷನರಿ ಸಂಪಾದನೆಗಳ ಬಳಿಕ ಕನಕದಾಸರ ಬದುಕು ಕೃತಿಗಳ ಮರುನಿರೂಪಣೆಯ ಎರಡನೆಯ ಸ್ತರವಾಗಿ ದೇಶಿಯ ವಿದ್ವಾಂಸರ ಸಂಪಾದನೆಯ ಚಟುವಟಿಕೆಗಳನ್ನು ನೋಡಬಹುದು ಕೇವಲ 'ಭಕ್ತಿಸಾರ' ಎಂಬುದಾಗಿ ಮಾತ್ರ ೧೮೫೦ ರಲ್ಲಿ ಮೊಂಗ್ಲಿನ್ ಸಂಪಾದಿಸಿ ಕಲ್ಲಚ್ಚನಲ್ಲಿ ಅಚ್ಚಮಾಡಿರುವ ಈ ಕೃತಿಯನ್ನು ೧೮೭೧ ರಲ್ಲಿ 'ಕನಕದಾಸರ ಹರಿಭಕ್ತಿಸಾರ'ವು ಮಂಗಳೂರಿನ ವೆಂಕಟರಾಮ ಇವರಿಂದ ಸಂಪಾದಿತಗೊಂಡು ಮಂಗಳೂರಿನ ಹಿಂದೂ ಪ್ರೆಸ್ಸಿನಲ್ಲಿ ಮೊಟ್ಟ ಮೊದಲು ಮುದ್ರಿತ ಕೃತಿಯಾಗಿ ಪ್ರಕಟಣೆಗೊಂಡಿದೆ. ಈ ಅಂಶವನ್ನು ಕೇವಲ ದಾಸ ಸಾಹಿತ್ಯದ ಸಂಪಾದನೆಯ ಐತಿಹಾಸಿಕ ನೆಲೆಯಲ್ಲಿ ಮಾತ್ರ ಕಾಣದೆ, ದಕ್ಷಿಣ ಕನ್ನಡದ ಚಾರಿತ್ರಿಕ, ಸಾಂಸ್ಕೃತಿಕ ಧಾರ್ಮಿಕ, ರಾಜಕೀಯ ಸಂಗತಿಗಳ ನೆಲೆಗಳಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ. ಈ ಕೃತಿಯ ಸಂಪಾದಕರ ಮಾತುಗಳನ್ನು ಈ ಸಂಪುಟದ ಮೊತ್ತ ಮೊದಲ ಲೇಖನವಾಗಿ ಸಂಪಾದಿಸಲಾಗಿದೆ ಇವುಗಳ ಬಳಿಕ ೧೮೯೨ ರಲ್ಲಿ ಲಕ್ಷ್ಮೀನರಸಿಂಹ ಮುದ್ರಾಕ್ಷರ ಶಾಲೆ ಮೈಸೂರಿನಿಂದ ಭಾಮಿನಿ ಷಟ್ಪದಿ ನಳಚರಿತ್ರೆ ಪ್ರಕಟಗೊಳ್ಳುತ್ತದೆ. ೧೯೧೮ರಲ್ಲಿ ಪಾವಂಜೆ ಗುರುರಾವ್‌ವರು ಮಧ್ವ ಸಾಹಿತ್ಯ ಮಾಲೆಯಲ್ಲಿ ದಾಸರ ಪದಗಳು ಕನಕದಾಸರ ಕೀರ್ತನೆಗಳ ಕೃತಿಯನ್ನು ಪ್ರಕಟಿಸುತ್ತಾರೆ. ಈ ಸಂಗತಿ ಕನಕದಾಸರ ಕೃತಿಗಳ ಸಂಪಾದನೆಯ ಚಾರಿತ್ರಿಕತೆಯಲ್ಲಿ ಬಹಳ ಕೂತೂಹಲದಾಯಕವಾದುದು, ಕನಕದಾಸರ ಪದಗಳು

ಕೀರ್ತನೆಗಳ ಭಾಷಾಂತರಗೊಳ್ಳುವುದು ಮಾತ್ರವಲ್ಲ ಮಾಧ್ವಸಾಹಿತ್ಯವಾಗಿ, ಬ್ರಾಹ್ಮಣಸಾಹಿತ್ಯವಾಗಿ ಸಂಪಾದಿತಗೊಳ್ಳುವುದನ್ನು ಈ ಸಂದರ್ಭದಲ್ಲಿ ಕಾಣಬಹುದು ೧೯೨೭ ರಲ್ಲಿ ಪ್ರಕಟಗೊಂಡ. ಎಂ. ಡಿ ಶ್ರೀನಿವಾಸ ಅಯ್ಯಂಗಾರ ಅವರ "ಮುಕ್ತಿ ಕನಕದಾಸ" ೧೯೫೫ ರಲ್ಲಿ ಪ. ಅ. ಉಪಾಧ್ಯಾಯರವರ ಸಂಪಾದಕತ್ವದಲ್ಲಿ ಪ್ರಕಟಗೊಂಡ "ಕನಕದಾಸರ ಕೀರ್ತನೆಗಳು" ಇವೆಲ್ಲಾವನ್ನು ಕನಕದಾಸರ ಬದುಕು ಬರಹಗಳ ಸಂಪಾದನೆಯ ಚಾರಿತ್ರಿಕತೆಯ ಎರಡನೆ ಸ್ಥರವಾಗಿ ಕಾಣಬಹುದು.

"ದಾಸ ಸಾಹಿತ್ಯದ ತವನಿಧಿಯಲ್ಲಿ" ಎಂಬ ಶೀರ್ಷಿಕೆಯ ಕೃತಿಯನ್ನು ವಸಂತ ಕುಷ್ಟಗಿ ರಚಿಸಿದ್ದು ಒಟ್ಟು ೫೭೦ ಪುಟಗಳಿರುವ ಈ ಕೃತಿಯು ಶ್ರೀ ಉತ್ತರೇಶ ಪ್ರಕಾಶನ. ಗುಲಬರ್ಗಾ ದಿಂದ ಪ್ರಥಮ ಆವೃತ್ತಿಯಾಗಿ ೨೦೧೨ ರಲ್ಲಿ ಪ್ರಕಟವಾಗಿದೆ ಕೃತಿಯಲ್ಲಿ ದಾಸಸಾಹಿತ್ಯ ಮತ್ತು ಕನಕದಾಸರನ್ನು ಕುರಿತು ಒಟ್ಟು ೬೮ ಲೇಖನಗಳಿದ್ದು, ಕನಕದಾಸರ ಕುರಿತು ಏಳು ಲೇಖನಗಳು ಮಾತ್ರ ಇದ್ದು ಇನ್ನುಳಿದ ೬೧ ಲೇಖನಗಳ ದಾಸ ಸಾಹಿತ್ಯಕ್ಕೆ ಸಂಬಂಧಿಸಿವೆ. ಕನಕರ ಕುರಿತಾದ, ದಾಸಸಾಹಿತ್ಯ ಪರಂಪರೆಯ ಮುಖ್ಯವಾಹಿನಿಯಲ್ಲಿ ಕನಕದಾಸರು, 'ಕನಕದಾಸರ ಗೀತೆಗಳು,' 'ಕನಕದಾಸರ ಕೀರ್ತನೆಗಳು,' 'ಕನಕದಾಸರು– ಶ್ರೀನಿವಾಸ', 'ಕನಕ ಸಾಹಿತ್ಯದಲ್ಲಿ ಭಕ್ತಿ ಸ್ವರೂಪ, ಸಮಾಜೋ ಧಾರ್ಮಿಕತೆ ಮತ್ತು ಕನಕದಾಸ' ಕುರಿತಾದ ಲೇಖನಗಳಿವೆ.

೧೯೬೫ ರಲ್ಲಿ ಪ್ರಕಟವಾದ 'ಮಹಾತ್ಮ ಕನಕದಾಸ ಪ್ರಶಸ್ತಿ' ಎಂಬ ಶೀರ್ಷಿಕೆಯಲ್ಲಿ ಸಿದ್ದಯ್ಯ ಪುರಾಣಿಕರು ಸಂಪಾದಿಸಿದ ಕನಕದಾಸರ ನಾಲ್ಕನೇ ಶತಮಾನೋತ್ಸವ ಸಮಿತಿಯಿಂದ ಪ್ರಕಟನೆಗೊಂಡಿತು. ಇದರಲ್ಲಿ ೧೬ ಲೇಖನಗಳಿವೆ ಅದರಲ್ಲಿ ರಂ. ಮುಗಳಿಯವರ– 'ಕೀರ್ತನೆಗಳಲ್ಲಿ ಕನಕದಾಸರು', ದೇಶಪಾಂಡೆ ಮನೋಹರ 'ಭಕ್ತಿ ಮಾರ್ಗವು ಕನಕದಾಸರು' ಸುಬೋಧ ಎಂ. ರಾಮರಾವ್‌ರ 'ಕನಕದಾಸರ ಪವಾಡಗಳು' ಬೆಟಗೇರಿ ಕೃಷ್ಣಶರ್ಮರ 'ಕನಕದಾಸರು ಚಿತ್ರಿಸಿದ ಜನಜೀವನ' ಬುರ್ಲಿ ಬಿಂದುಮಾದವರ 'ಕನಕದಾಸರ ಮುಂಡಿಗೆಗಳು' ಕೆ. ಕೃಷ್ಣಮೂರ್ತಿಯವರ 'ಕನಕನ ಕಾವ್ಯಗಳಲ್ಲಿ ನವರಸ ಪ್ರತಿಪಾದನೆ' ಎಸ್. ವಿ. ರಂಗಣ್ಣರ 'ಕನಕದಾಸರ ಶೈಲಿ' ಬಿ. ಎಸ್. ಸಣ್ಣಯ್ಯರ 'ಕನಕದಾಸರ ಕೃತಿಗಳಲ್ಲಿ ಕಂಡು ಬರುವ ಚಾರಿತ್ರಿಕ ಅಂಶಗಳು' ಸಿದ್ದಯ್ಯ ಪುರಾಣಿಕರ 'ಕನಕದಾಸರ ಕಾಣ್ಕೆ' ಶಿವಮೂರ್ತಿ ಶಾಸ್ತ್ರೀಯವರ ಕನಕರ ಅನುಭಾವ ದೃಷ್ಟಿ, ಕೆ. ಎಂ. ಕೃಷ್ಣರಾವ್ 'ಕನಕದಾಸರ ಜಾಣ ನುಡಿಗಳು' ವಿದ್ವಾನ್ ಹೆಚ್.ಕೆ. ಅಶ್ವತ್ಥ ನಾರಾಯಣ ಶಾಸ್ತ್ರಿಯರವರ 'ಕರ್ನಾಟಕ ಸಂಗೀತಕ್ಕೆ ಕನಕದಾಸರ ಕಾಣಿಕೆ' ಜಿ.ಎಸ್. ಶಿವರುದ್ರಪ್ಪರವರ 'ಕನಕದಾಸರ ವಿಶಿಷ್ಠತೆ' ತಲ್ಲೂರ ರಾಯನಗೌಡ ಪಾಟೀಲರ 'ಕಾಗಿನೆಲೆಯ ಐತಿಹಾಸಿಕ ಹಿನ್ನೆಲೆ' ಆರ್.ಎಸ್. ಪಂಚಮುಖಿಯವರ 'ಕನಕದಾಸರ ಸಮಕಾಲೀನರು' ಶ್ರಿ ಎಚ್. ಎಲ್. ನಾಗೇಗೌಡರ 'ಕನಕದಾಸರ ರಾಗಿ ರಾಮಾಯಣ' ಎಂಬ ಲೇಖನಗಳಿವೆ. ಇದೇ ಸಮಿತಿಯವರು ಸಂಸ್ಮರಣ ಸಂಚಿಕೆಯನ್ನು ಹೊರತಂದಿದ್ದು ಅದರಲ್ಲಿ ದ.ರಾ. ಬೇಂದ್ರೆಯವರ ಕನಕನ ಮುಂಡಿಗೆ ಹ.ರಾ. ಪುರೋಹಿತರ ಭಕ್ತಗ್ರೇಸ ಶ್ರೀ ಕನಕದಾಸರು ಎಂ.ಜಿ. ಹಂದ್ರಾಳರ 'ಕವಿ ಕನಕದಾಸರ ಭಕ್ತಿಮಾರ್ಗ' ಸಿಂಪಿ ಲಿಂಗಣ್ಣನವರ 'ದತ್ತ ಸ್ವಾತಂತ್ರದ

ದಾಸರು' ಬುರ್ಲಿ ಬಿಂದುಮಾದವರ 'ಪುರಂದರ ಮತ್ತು ಕನಕದಾಸರು' ಎಂಬ ಲೇಖನಗಳು ಪ್ರಮುಖವಾಗಿವೆ.

'ಕನಕದಾಸರ ರಾಮಧಾನ್ಯ ಚರಿತ್ರೆ' ಎಂಬ ಶೀರ್ಷಿಕೆಯಲ್ಲಿ ದೇ. ಜವರೇಗೌಡರು ಸಂಪಾದನೆ ಮಾಡಿದ್ದು ಒಟ್ಟು ೬೨ ಪುಟಗಳಿಂದ ಕೂಡಿರುವ ಈ ಕೃತಿಯು ಮೈಸೂರಿನಿಂದ ಡಿ. ವಿ. ಕೆ. ಮೂರ್ತಿ ಪ್ರಕಾಶನದಿಂದ ೧೯೭೭ ರಲ್ಲಿ ಪ್ರಕಟಣೆಗೊಂಡಿತು. ಇದರಲ್ಲಿ ರಾಮಧಾನ್ಯ ಚರಿತೆಯ ವಿಮರ್ಶೆ, ಶೈಲಿ, ಗ್ರಂಥ ಸಂಪಾದನೆ ಪದ್ಯರೂಪದಲ್ಲಿ ಯಥಾರೀತಿ ಸಂಪಾದಿಸಿರುವುದನ್ನು ಈ ಕೃತಿಯಲ್ಲಿ ಕಾಣುತ್ತೇವೆ.

'ಕನಕ ಕಿರಣ' ಎಂಬ ಶೀರ್ಷಿಕೆಯಲ್ಲಿ ಕಾ. ತ. ಚಿಕ್ಕಣ್ಣ ಸಂಪಾದಿಸಿ ನಾಲ್ಕು ಭಾಗಗಳನ್ನಾಗಿ ವಿಭಾಗಿಸಿದ್ದಾರೆ. ಭಾಗ ೧ರಲ್ಲಿ ಕನಕದಾಸರ ಕಾಲ, ದೇಶ, ಜೀವನ, ರಾಜಕೀಯ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಯುಳ್ಳ ಲೇಖನಗಳಿವೆ. ಎರಡನೆ ಭಾಗದಲ್ಲಿ ಕನಕದಾಸರ ಕೃತಿಗಳಾದ ಮೋಹನ ತರಂಗಿಣಿ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ, ನಳಚರಿತೆ, ಕೀರ್ತನೆಗಳ ಕುರಿತಾದ ಲೇಖನಗಳಿವೆ. ಭಾಗ ೩ರಲ್ಲಿ ಕನಕದಾಸರ ಕೃತಿಗಳ ವಿಶಿಷ್ಟತೆ, ತಾತ್ವಿಕ ದೃಷ್ಟಿಕೋನ, ಅನನ್ಯತೆ ಕುರಿತ ಲೇಖನಗಳಿವೆ. ಇನ್ನು ಕೊನೆಯ ಭಾಗದಲ್ಲಿ ಕರ್ನಾಟಕ ಸಂಗೀತಕ್ಕೆ ಕನಕದಾಸರ ಕೊಡುಗೆಗೆ ಕುರಿತಾದ ಲೇಖನಗಳಿವೆ. ಕಾಳಿದಾಸ ಸಾಂಸ್ಕೃತಿಕ ಸಂಘ ಬೆಂಗಳೂರಿನಿಂದ ೧೯೮೮ರಲ್ಲಿ ಈ ಕೃತಿಯನ್ನು ಪ್ರಕಟಿಸಲಾಗಿದೆ.

'ಕನಕ ಸಾಹಿತ್ಯ ದರ್ಶನ' ಸಂಪುಟ ೧ ಎಂಬ ಶೀರ್ಷಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರಿನಿಂದ ದೆ. ಜವರೇಗೌಡ ಮುಖ್ಯ ಸಂಪಾದಕತ್ವದಲ್ಲಿ ೧೯೯೦ ರಲ್ಲಿ ಪ್ರಕಟನೆಗೊಂಡಿದೆ. ವಿವಿಧ ಲೇಖಕರ ಲೇಖನಗಳನ್ನು ಈ ಸಂಪಾದನಾ ಕೃತಿಯಲ್ಲಿ **ಭಾಗ-೧ 'ಜೀವನದರ್ಶನ'**ದಲ್ಲಿ ಹತ್ತು ಲೇಖನಗಳಿದ್ದು, ಅದರಲ್ಲಿ ಸಾ.ಸಿ. ಮರುಳಯ್ಯರ 'ಕನಕದಾಸರ ಜೀವನ ಸಮಗ್ರ ಚರಿತ್ರೆ' ಹ.ಕ. ರಾಜೇಗೌಡರ ಕನಕದಾಸರ 'ಮೂಲ ಸ್ಥಳ' ಪಂಡಿತ ಚನ್ನಪ್ಪ ಎರೇಸೀಮೆಯರ ಐತಿಹ್ಯಗಳ ನಡುವೆ ಕನಕದಾಸರು. ಅರವಿಂದ ಮಾಲಗತ್ತಿಯವರ 'ಕನಕದಾಸರ ಕೆಲವು ಐತಿಹ್ಯಗಳ ಅರ್ಥವ್ಯಾಪ್ತಿ'. ನಿಂಗಣ್ಣ ಸಣ್ಣಕ್ಕಿ ಅವರ 'ಜನಪದರ ಕಣ್ಣಲ್ಲಿ ಕನಕದಾಸರು'. ಕಮಲಾ ಹಂಪನಾ 'ಕನಕದಾಸರ ಭೌಗೋಳಿಕ ದರ್ಶನ' ಎಚ್. ತಿಪ್ಪೆರುದ್ರಸ್ವಾಮಿಯವರ 'ಭಾರತೀಯ ಭಕ್ತಿಪಂಥ ಮತ್ತು ಕನಕದಾಸರು'. ಟಿ.ಎನ್. ನಾಗರತ್ನ 'ಕನಕದಾಸರು ಮತ್ತು ಹರಿದಾಸರು'. ಎಂ.ವ್ಹಿ. ಸೀತಾರಾಮಯ್ಯ 'ಕನಕದಾಸರ ಆಧ್ಯಾತ್ಮ ಸಾಧನೆ ಮತ್ತು ಆತ್ಮ ಶೋಧನೆ'. ದೇ. ಜವರೇಗೌಡ 'ಮಾನವತಾವಾದಿ ಕನಕದಾಸರು'. ಈ ಎಲ್ಲಾ ಲೇಖನಗಳು ಭಾಗ ಒಂದರಲ್ಲಿ ಅಡಕವಾಗಿವೆ. **ಭಾಗ-೨ 'ಕೃತಿ ದರ್ಶನ'**ದಲ್ಲಿ ೨೩ ಲೇಖನಗಳಿವೆ. ಆರ್.ಸಿ. ಹಿರೇಮಠರ 'ಕನಕದಾಸರ ವರ್ಣನೆಗಳು', ಎ.ಎಸ್. ವೇಣುಗೋಪಾಲರ 'ಕನಕದಾಸರ ಕೃತಿಗಳಲ್ಲಿ ರಸಾನುಭವ', ಟಿ. ಕೇಶವಭಟ್ಟರ 'ಕನಕ ಸಾಹಿತ್ಯದಲ್ಲಿ ಅಲಂಕಾರಗಳು', ಹಂ.ಪ. ನಾಗರಾಜಯ್ಯ 'ಕನಕದಾಸರ ಕೃತಿಗಳಲ್ಲಿ ಭಾಷಾ ಸ್ವರೂಪ'. ಕೆ.

ಸಚ್ಚಿದಾನಂದಯ್ಯ 'ಮೋಹನ ತರಂಗಿಣಿಯ ಆಕರ ವಿವೇಚನೆ'. ಪ್ರಧಾನ ಗುರುದತ್ತರ ಮೋಹನ ತರಂಗಿಣಿ-ಪೌರ್ವಾತ್ಯ ಮತ್ತು ಪಾಶ್ಚಾತ್ಯ ಮಹಾಕಾವ್ಯಗಳ ದೃಷ್ಟಿ'. ಎ.ವಿ. ನಾವಡರ 'ಮೋಹನ ತರಂಗಿಣಿಯ ಶೈಲಿ'. ದೇವೇಂದ್ರಕುಮಾರ ಹಕಾರೆ 'ಮೋಹನ ತರಂಗಿಣಿಯಲ್ಲಿ ಶೃಂಗಾರ ಚಿತ್ರಣದ ವೈಶಿಷ್ಟ್ಯ'. ಗುರುಪಾದ ಮರೆಗುದ್ದಿಯವರ 'ಮೋಹನ ತರಂಗಿಣಿಯ ಕಾವ್ಯ ಮೌಲ್ಯ'. ಚನ್ನಣ್ಣ ವಾಲಿಕಾರರ 'ಕನ್ನಡದಲ್ಲಿಯ ನಳದಮಯಂತಿಯ ಸಾಹಿತ್ಯ'. ಎಸ್. ವಿದ್ಯಾ ಶಂಕರರ 'ನಳ ಚರಿತೆಯ ಜನಪ್ರೀಯತೆ ಒಂದು ವಿವೇಚನೆ'. ಜ್ಯೋತಿ ಹೊಸೂರ 'ನಳ ಚರಿತೆಯಲ್ಲಿನ ಪಾತ್ರ ಚಿತ್ರಣ'. ಕುಮಾರ ಚೆಲ್ಯರ 'ಮೋಹನ ತರಂಗಿಣಿ : ಶಿಲ್ಪ ಮತ್ತು ಬಂಧ'. ಸೀತಾರಾಂ ಜಹಗೀರದಾರ 'ಭಕ್ತಿ ಸಾಹಿತ್ಯದ ಹಿನ್ನಲೆಯಲ್ಲಿ ಹರಿಭಕ್ತಿಸಾರ'. ಎಂ. ಜೈಕುಮಾರ 'ಕನ್ನಡದಲ್ಲಿ ಕೀರ್ತನ ಸಾಹಿತ್ಯ ಮತ್ತು ಕನಕ ಕೀರ್ತನೆಗಳು'. ಶ್ಯಾಮಸುಂದರ ಬಿದರಕುಂದಿ ಕನಕದಾಸರ ಕೀರ್ತನೆಗಳಲ್ಲಿ ಸಾಹಿತ್ಯ ಮೌಲ್ಯ. ಕೆ.ವಿ. ನಾರಾಯಣರ 'ಕನಕದಾಸರ ಕೀರ್ತನೆಗಳ ಶಿಲ್ಪ'. ಕೆ. ಕೇಶವಶರ್ಮ 'ಕಿಂಡಿಯಲ್ಲಿ ನುಡಿದ ಕವಿತೆಗಳು'. ವೈ.ಸಿ. ಭಾನುಮತಿಯವರ 'ಕನಕದಾಸರ ಮುಂಡಿಗೆಗೆಳು'. ಡಿ.ಕೆ. ರಾಜೇಂದ್ರರ 'ಕನ್ನಡ ಸಾಹಿತ್ಯದಲ್ಲಿ ಕನಕದಾಸರ ಸ್ಥಾನ'. ಎಂ.ವಿ. ಶ್ರೀನಿವಾಸಮೂರ್ತಿ ಅವರ 'ಕನಕದಾಸರ ಸಾಹಿತ್ಯದ ಮೇಲೆ ಹಿಂದಿನ ಮತ್ತು ಸಮಕಾಲೀನ ಕವಿಗಳ ಪ್ರಭಾವ'. ಹ.ಕ. ರಾಜೇಗೌಡರ 'ಕನಕದಾಸರ ರಾಮಧಾನ್ಯ ಚರಿತೆ'ಯಂತಹ ೨೩ ಲೇಖನಗಳು ಅಡಕಗೊಂಡಿವೆ. **ಭಾಗ-೩ 'ಮೌಲ್ಯ ದರ್ಶನ'**ದಲ್ಲಿ ೧೬ ಲೇಖನಗಳಿದ್ದು, ಸಾ.ಕೃ. ರಾಮಚಂದ್ರರಾವ್ ಅವರ 'ಕನಕದಾಸರ ಪದಗಳಲ್ಲಿ ಸಂಗೀತ', ಬಿ.ವಿ.ಕೆ. ಶಾಸ್ತ್ರೀಯವರ 'ಸಂಗೀತ ಮತ್ತು ಕನಕದಾಸರು', ಜೀ.ಶಂ. ಪರಮಶಿವಯ್ಯ 'ಕನಕದಾಸರ ಕೃತಿಗಳಲ್ಲಿ ಜಾನಪದ ಅಂಶಗಳು'. ಪದ್ಮಾ ಶೇಖ 'ಕನಕದಾಸರ ಕೃತಿಗಳಲ್ಲಿ ವಿಡಂಬನೆ'. ಹಿ.ಚಿ. ರಾಮಚಂದ್ರೇಗೌಡರ 'ಕನಕದಾಸರಲ್ಲಿ ಬಂಡಾಯದ ದನಿ'. ಕಾ.ತ. ಚಿಕ್ಕಣ್ಣ 'ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಅಭಿವ್ಯಕ್ತಿ'. ಎಸ್.ಎಸ್. ಕೋತಿನ 'ಕನಕದಾಸರ ಕೃತಿಗಳಲ್ಲಿ ಸಾಮಾಜಿಕ ನೆಲೆ'. ಟಿ. ಮಹಾಬಲ ಅಡಿಗ 'ಕನಕನ ಸಾಮಾಜಿಕ ವಿಡಂಬನೆ'. ಸಂಧ್ಯಾ ರೆಡ್ಡಿ ಅವರ 'ಕನಕ ಸಾಹಿತ್ಯದಲ್ಲಿ ಹೆಣ್ಣಿನ ಪರಿಕಲ್ಪನೆ'. ರಾ.ಗೌ. 'ಕನಕದಾಸರ ಸಾಹಿತ್ಯದಲ್ಲಿ ಐತಿಹಾಸಿಕ ಅಂಶಗಳು'. ಮಳಲಿ ವಸಂತಕುಮಾರ 'ಕನಕದಾಸರಲ್ಲಿ ಪೌರಾಣಿಕ ಪ್ರಜ್ಞೆ'. ಸುಧಾಕರ 'ಕನಕದಾಸರ ದೃಷ್ಟಿಯಲ್ಲಿ ಯುದ್ಧ'. ಸಿದ್ದಯ್ಯ ಪುರಾಣಿಕರ 'ಕನಕ ಸಾಹಿತ್ಯದಲ್ಲಿ ಇಹಪರಗಳ ಕಲ್ಪನೆ'. ವಸಂತ ಕುಷ್ಟಗಿಯವರ 'ಕನಕ ಸಾಹಿತ್ಯದಲ್ಲಿ ಭಕ್ತಿ ಸ್ವರೂಪ'. ಸಿ.ಪಿ.ಕೆ. 'ಕನಕದಾಸರ ಕೃತಿಗಳು ಧಾರ್ಮಿಕ ಮುಖ'. ಶ್ರೀಕಂಠ ಕೂಡಗಿ 'ಕನಕದಾಸರ ಸಂದೇಶ ಎಂಬ ಲೇಖನಗಳಿವೆ'. **ಭಾಗ-೪ 'ಸಂಕೀರ್ಣ'**ದಲ್ಲಿ ಏಳು ಲೇಖನಗಳಿದ್ದು, ಜಿ.ಎಸ್. ಶಿವರುದ್ರಪ್ಪ 'ಕನಕದಾಸರ ಕೆಲವು ಚಿಂತನೆಗಳು'. ಎನ್. ಶ್ರೀನಿವಾಸ ಉಡುಪ 'ವ್ಯಾಸರಾಯರು ಪುರಂದರದಾಸರು ಮತ್ತು ಕನಕದಾಸರು'. ಜಿ.ಜಿ. ಮಂಜುನಾಥ 'ಕನಕ ಮತ್ತು ಪುರಂದರದಾಸರ ಕೀರ್ತನೆಗಳು'. ಹಂ.ಪ. ನಾಗರಾಜಯ್ಯ 'ಕನಕದಾಸರ ಕೀರ್ತನೆಗಳ ಕಳವು ಒಂದು ಸಂಪ್ರಬಂಧ'. ಕೊ.ವ್ಯಾ ರಮೇಶರ 'ಕನಕದಾಸರ ಕಾಲದ ರಾಜಕೀಯ, ಸಾಮಾಜಿಕ,

ಧಾರ್ಮಿಕ ಹಿನ್ನಲೆ'. ಬಸವಲಿಂಗ ಸೊಪ್ಪಿಮಠ 'ಕೊಡೆಕಲ್ ಬಸವಣ್ಣನ ಸಂಪ್ರದಾಯ ಮತ್ತು ಕನಕದಾಸ'. ಸಿ.ಕೆ. ಪರಶುರಾಮಯ್ಯರ ಕನಕ ಸೂಕ್ತಿ ಸಂಚಯ ಲೇಖನಗಳಿವೆ.

ಕನಕ ಸಾಹಿತ್ಯ ದರ್ಶನ ಸಂಪುಟ-೨ ಈ ಸಂಪಾದನಾ ಕೃತಿಯನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರಿನಿಂದ ಪ್ರಕಟಿಸಿದ್ದಾರೆ ಸಾ.ಶಿ. ಮರುಳಯ್ಯ ಅವರು ಸಂಪಾದಿಸಿದ್ದಾರೆ. ಒಟ್ಟು ೨೧೬ ಪುಟಗಳಿಂದ ಈ ಕೃತಿ ೧೯೯೧ ರಲ್ಲಿ ಪ್ರಕಟಿಸಲಾಗಿದೆ. ಕನಕದಾಸರು ವಿರಚಿತ ಹರಿಭಕ್ತಿಸಾರ, ರಾಮಧಾನ್ಯ ಚರಿತ್ರೆ ಮತ್ತು ನಳಚರಿತ್ರೆಯನ್ನು ಯತಾರೀತಿ ಸಂಪಾದಿಸಿದ್ದಾರೆ. 'ಕನಕದಾಸರ ಹಾಡುಗಳು ಎಂಬ ಶೀರ್ಷಿಕೆಯಲ್ಲಿ ಶ್ರೀ ಬೆಟಗೇರಿ ಕೃಷ್ಣಶರ್ಮಾ ಮತ್ತು ಶ್ರೀ ಹುಚ್ಚರಾವ್ ಬೆಂಗೇರಿ ಪ್ರಧಾನ ಸಂಪಾದಕರಾಗಿದ್ದಾರೆ. ಕಾವ್ಯ ಪ್ರೇಮಿ ಸಂಪಾದಕರಾಗಿ ಈ ಕೃತಿಯನ್ನು ಸಂಪಾದಿಸಿದ್ದಾರೆ. ಒಟ್ಟು ೨೮೬ ಪುಟಗಳಿಂದ ಈ ಕೃತಿಯನ್ನು ೧೯೫೫ ರಲ್ಲಿ ಸಮಾಜ ಪುಸ್ತಕಾಲಯ ಧಾರವಾಡದಿಂದ ಪ್ರಕಟಿಸಲಾಗಿದೆ. ದಾಸಸಾಹಿತ್ಯವಲೋಕನ, ಕನಕದಾಸರ ಜೀವನ-ಕಾರ್ಯ, ಭಕ್ತಿ, ಕೃಷ್ಣ ಲೀಲಾವಿಲಾಸ ನಶ್ವರಸಂಸಾರ, ಮುಂಡಿಗೆ, ಉದಯರಾಗಳನ್ನು ಕಾಣುತ್ತೇವೆ.

'ಹರಿದಾಸರ ಜನಪ್ರೀಯ ಹಾಡುಗಳು' ಸಂಪಾದಕರು ಟಿ.ಎನ್. ನಾಗರತ್ನ, ಮಂದಾಕಿನಿ ಈ ಕೃತಿಯನ್ನು ಸಂಪಾದಿಸಿದ್ದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಿಸಿದ್ದು ಒಟ್ಟು ೩೪೨ ಪುಟಗಳಿಂದ ಇರುವ ಕೃತಿ ೧೯೯೬ ರಲ್ಲಿ ಪ್ರಕಟಗೊಂಡಿದೆ. ದಾಸರ ಜೀವನ ವಿಚಾರ, ಪೂರ್ವಕತೆ ಅವರ ಎಲ್ಲ ಹಾಡುಗಳನ್ನು ಅಕಾರಾದಿಯಿಂದ ಸಂಪಾದಿಸಲಾಗಿದೆ.

'ಕೀರ್ತನಕಾರರು' ಶೀರ್ಷಿಕೆಯ ಈ ಕೃತಿಯನ್ನು ಕನಕದಾಸರ ಕೀರ್ತನೆ ಸಂಗ್ರಹ ಇದರಲ್ಲಿದೆ ಟಿ. ಎನ್. ನಾಗರತ್ನ ಸಂಪಾದಿಸಿದ್ದಾರೆ ಮುತ್ತಿನಹಾರ ಮಾಲಿಕೆಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ೧೯೯೬ರಲ್ಲಿ ಮೊದಲ ಆವೃತ್ತಿಯಾಗಿ ಪ್ರಕಟಿಸಿದ್ದಾರೆ.

'ಚಂದ್ರಕೊಡೆ' ಎಂಬ ಸಂಪಾದನಾ ಕೃತಿಯನ್ನು ಹಂಪ ನಾಗರಾಜಯ್ಯ ಒಟ್ಟು ೬೭೪ ಪುಟಗಳಿರುವ ಈ ಕೃತಿಯನ್ನು ೧೯೯೭ ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪ್ರಕಟಿಸಲಾಗಿದೆ. ಇದರಲ್ಲಿ ಸಾಹಿತ್ಯಕವಾಗಿ ೬೫ ಲೇಖನಗಳ ಸಂಗ್ರಹವಿದ್ದು ಅದರಲ್ಲಿ 'ಕನಕದಾಸರ ಕೀರ್ತನಗಳ ಕಳವು' ಎಂಬ ಲೇಖನವು ಇರುತ್ತದೆ.

'ಕುರುಬ ಜನಪದ' ಈ ಕೃತಿಯನ್ನು ಚನ್ನಪ್ಪ ಕಟ್ಟಿ ಸಂಪಾದಿಸಿದ್ದಾರೆ. ಒಟ್ಟು ೧೧ ಲೇಖನಗಳಿರುವ ಕೃತಿ ಕುರುಬ ಸಮುದಾಯ ಹಾಗೂ ಕನಕದಾಸರ ಜೀವನ ಮತ್ತು ಕಾವ್ಯಕ್ಕೆ ಸಂಬಂಧಿಸಿದೆ ಎ.ಆರ್. ಹೆಗ್ಗನದೊಡ್ಡಿ 'ದಾಸ ಶ್ರೇಷ್ಠ ಕನಕದಾಸರು' ಸರೋಜ ಇಟ್ಟಣ್ಣನವರ 'ಕನಕದಾಸರ ಕಾವ್ಯ ದರ್ಶನ', ನಾಗೇಶ ರಾಮಪೂರ 'ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ' ಮುಂತಾದ ಲೇಖನಗಳಿವೆ. ಕನಕ ಉತ್ಸವ ಸಮಿತಿ ಸಿಂದಗಿ ಇವರಿಂದ ೧೯೯೭ರಲ್ಲಿ ಪ್ರಕಟಿಸಲಾಗಿದೆ.

'ಕನಕ ಸಾಹಿತ್ಯ ದರ್ಶನ ಸಂಪುಟ-೩' ಈ ಸಂಪಾದನಾ ಕೃತಿಯನ್ನು ಜಿ. ಜಿ. ಮಂಜುನಾಥ ಸಂಪಾದಿಸಿದ್ದು ೭೨೨ ಪುಟಗಳಿರುವ ಈ ಕೃತಿಯು ೧೯೯೯ ರಲ್ಲಿ ಕನ್ನಡ ಮತ್ತು

ಸಂಸ್ಕೃತಿ ಇಲಾಖೆ ಬೆಂಗಳೂರದಿಂದ ಪ್ರಕಟಿಸಲಾಗಿದ್ದು ಕವಿ ವಿಚಾರ, ಕಥೆಸಾರ, ಕಾವ್ಯ ಸಮೀಕ್ಷೆ, ವರ್ಣನೆ, ರಸವಿವೇಚನೆ, ಜನಜೀವನ, ಸಾಮಾಜಿಕ ಮೌಲ್ಯಗಳ ದೃಷ್ಟಿಕೋನಗಳಲ್ಲಿ ಕನಕದಾಸರ 'ಮೋಹನತರಂಗಿಣಿ'ಯನ್ನು ಸಂಪಾದಿಸಲಾಗಿದೆ.

'ಕನಕ ಸಾಹಿತ್ಯ ದರ್ಶನ ಸಂಪುಟ-೪' ಸುಧಾಕರ ಸಂಪಾದಿಸಿದ್ದು ೧೯೯೯ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರುನಿಂದ 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು' ಎಂಬ ಶೀರ್ಷಿಕೆಯಲ್ಲಿ ಸಂಪಾದನಾ ಕೃತಿಯಾಗಿ ಹೊರತಂದಿದ್ದಾರೆ. ದೇವತಾಸ್ತುತಿ, ಆತ್ಮ ಚರಿತ್ರೆ, ಜ್ಞಾನ, ಭಕ್ತಿ, ವೈರಾಗ್ಯ ನೀತಿ ಭೋದನೆ, ವೈಚಾರಿಕತೆ, ಮುಂಡಿಗೆಗಳು, ಉದಯರಾಗಗಳು, ಉಗಾಬೋಗಗಳು, ಕೀರ್ತನೆಗಳನ್ನು ಅಕಾರಾದಿಯಾಗಿ ಸಂಪಾದಿಸಲಾಗಿದೆ.

'ಸಮಗ್ರ ದಾಸ ಸಾಹಿತ್ಯ' ಸಂಪುಟ-೫ ರಲ್ಲಿ ಕನಕದಾಸರ ಕೀರ್ತನೆಗಳು ಭಾಗ-೧ ಎಂಬ ಶೀರ್ಷಿಕೆಯಲ್ಲಿ ಸುಧಾಕರರವರು ಸಂಪಾದಿಸಿದ್ದಾರೆ. ಒಟ್ಟು ೪೦೨ ಪುಟಗಳಿರುವ ಕೃತಿ ೨೦೦೩ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ' ಪ್ರಕಟಿಸಲಾಗಿದೆ. ಕಾರ್ಯನಿರ್ವಾಹಕ ಸಂಪಾದಕರಾಗಿ ಟಿ.ಎನ್. ನಾಗರತ್ನ, ವಸಂತ ಕುಷ್ಟಗಿ ಕಾರ್ಯ ನಿರ್ವಹಿಸಿದ್ದಾರೆ. ಭಕ್ತಿ, ವೈರಾಗ್ಯ, ಜ್ಞಾನ, ಸಮಾಜ ಚಿಂತನೆ, ನೀತಿ ಬೋಧನೆ, ವೈಚಾರಿಕತೆ, ಕೃಷ್ಣಲೀಲೆ, ದಶಾವತಾರ ಲೀಲೆಗಳು, ತಾತ್ವಿಕತೆ ಕುರಿತು ೨೫೩ ಕೀರ್ತನೆಗಳನ್ನು ಸಂಪಾದಿಸಿದ್ದಾರೆ.

'ಕನಕದಾಸ ಸಾಂಸ್ಕೃತಿಕ ಅನುಸಂಧಾನ' ಶೀರ್ಷಿಕೆಯಲ್ಲಿ ಎಂ.ಎಚ್. ಸ್ವಾಮಿಗೌಡ ಸಂಪಾದಿಸಿರುವ ಕೃತಿಯಲ್ಲಿ ವಿವಿಧ ಲೇಖಕರ ೧೭ ಲೇಖನಗಳಿದ್ದು ೨೦೦೪ ರಲ್ಲಿ ಮೈಸೂರಿನ ರೂಪ ಪ್ರಕಾಶನದಿಂದ ಪ್ರಕಟನೆಗೊಂಡಿದೆ. ಕಾಳೇಗೌಡ ನಾಗವಾರ 'ಕಾಡಿನಲ್ಲಿ ಕನಕ'. ಮಹದೇವ ಶಂಕನಪುರ 'ಕನಕದಾಸ ಚಾರಿತ್ರಿಕ ಅವಲೋಕನ'. ಶಿರಗಾನಹಳ್ಳಿಯ ಶಂತನಾಯಕ 'ಪ್ರಸ್ತುತದಲ್ಲಿ ಕನಕದಾಸರು'. ಚಿ.ಮ. ಗಣೇಶ 'ರಾಮಧಾನ್ಯ ರೂಪಕದ ಪ್ರಸ್ತುತತೆ'. ಎಸ್. ಚಂದ್ರಕಿರಣರ 'ಧರ್ಮಾಂಧತೆಯ ವಿದ್ರೋಹದ ಪರಿ'. ಎಸ್. ನರೇಂದ್ರಕುಮಾರ 'ಅರಿಯಬೇಕಾದ ಎಚ್ಚರ'. ಅಪ್ಪಗೇರೆ ಸೋಮಶೇಖರ 'ಮನುಷ್ಯತ್ವದ ತಲ್ಲಣ'. ಅನುಪಮಾ 'ಕನಕ-ಕೃಷ್ಣ'. ಕೃಷ್ಣ ಜನಮನ 'ಕನಕನಿಗೆ ಜಾತಿ ಧರ್ಮಗಳಿಲ್ಲ'. ಡಾ. ಜೆ. ಸೋಮಶೇಖರ 'ಕನಕ ಗೋಪುರದ ವಿವಾದದ ಸುತ್ತ'. ಎಚ್.ಎಂ. ಸ್ವಾಮಿಗೌಡ 'ಕುರುಬರು: ಸಾಂಸ್ಕೃತಿಕ ಅವಲೋಕನ'. ಬಿಸ್ಲೇಹಳ್ಳಿ ಪ್ರಭು 'ಮಾನವತೆಯ ಹಾದಿಯಲ್ಲಿ'. ಶ್ರೀಕಂಠಯ್ಯ 'ಶೂದ್ರರ ಉಗಮ: ಕನಕ ಮತ್ತು ವಾಸ್ತವ್ಯದ ಸ್ಥಿತಿಗತಿಗಳು'. ಹಂಗರವಳ್ಳಿ ಪ್ರಭಾಕರ 'ಕನಕದಾಸರ ಸಮಾಮುಖಿ ಚಿಂತನೆಗಳು' ಲೇಖನಗಳು ಪ್ರಮುಖವಾಗಿವೆ.

'ದಾಸಸಾಹಿತ್ಯ ಸೌರಭ' ಕೃತಿಯನ್ನು ಟಿ.ಎನ್. ನಾಗರತ್ನ ಸಂಪಾದಿಸಿದ್ದಾರೆ ಒಟ್ಟು ೩೬೦ ಪುಟಗಳಿರುವ ಕೃತಿ ೨೦೦೭ ರಲ್ಲಿ ಮೈಸೂರ ವಿಶ್ವವಿದ್ಯಾಲಯದಿಂದ ಪ್ರಕಟಣೆಗೊಂಡಿದೆ. ದಾಸಸಾಹಿತ್ಯದ ಎಲ್ಲ ಕೀರ್ತನೆಗಳನ್ನು ಹಾಗೂ ಕನಕದಾಸರ ಕೀರ್ತನೆ, ಮುಂಡಿಗೆಗಳನ್ನು ಸಂಪಾದಿಸಿದ್ದಾರೆ.

'ಹೊನ್ನಾರುಮಾಲೆ'ಯಲ್ಲಿ 'ಸಾಹಿತ್ಯಶೋಧನ' ಎಂಬ ಶೀರ್ಷಿಕೆಯಲ್ಲಿ ಎಚ್.ಜೆ. ಲಕ್ಕಪ್ಪಗೌಡ ಸಂಪಾದಿಸಿದ್ದು ೨೦೦೭ ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟನೆಗೊಂಡಿದೆ. ೧೩ ಲೇಖನಗಳಿರುವ ಈ ಕೃತಿಯಲ್ಲಿ 'ಕನಕದಾಸರ ಕೀರ್ತನೆಗಳ ಕಾವ್ಯಮೌಲ್ಯ' ಎಂಬ ಲೇಖನವಿದೆ. 'ಹೊನ್ನಾರುಮಾಲೆ'ಯಲ್ಲಿ 'ಸಾಹಿತ್ಯ ಶೀಲನ' ಎಂಬ ಶೀರ್ಷಿಕೆಯಲ್ಲಿ ಡಾ. ಸಿ. ಪಿ. ಕೃಷ್ಣಕುಮಾರ ಸಂಪಾದಿಸಿದ್ದಾರೆ. ಒಟ್ಟು ४೯೫ ಪುಟಗಳ ಈ ಕೃತಿಯು ೨೦೦೭ ರಲ್ಲಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಪ್ರಕಟಣೆಗೊಂಡಿದೆ. ೨೫ ಬಿಡಿಲೇಖನಗಳಿವೆ. 'ಕನಕದಾಸರ ಅನನ್ಯತೆ' ಎಂಬ ಉತ್ತಮವಾದ ಲೇಖನವಿದೆ.

'ಕನಕದಾಸರ ಒಂದು ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಎಸ್.ಎಸ್. ಭಗವತಿ, ಎಚ್.ಎಸ್. ಮೇಲಿನಮನಿ ಸಂಪಾದಿಸಿದ್ದಾರೆ. ಜೀವನ ಸಾಹಿತ್ಯ ಚಿಂತನೆಗೆ ಹೆಚ್ಚು ಮಹತ್ವ ನೀಡಿ ೨೦೦೭ ರಲ್ಲಿ ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟಿಸಿದ್ದಾರೆ. ಇದರಲ್ಲಿ ಆರು ಭಾಗಗಳನ್ನಾಗಿ ವಿಭಾಗಿಸಿ ಭಾಗ ೧ ರಲ್ಲಿ ಜೀವನ. ಮತ ಮತ್ತು ಕಾಲಕ್ಕೆ ಸಂಭದಿಸಿದ ಲೇಖನಗಳಿವೆ ಸಾ. ಶಿ. ಮರುಳಯ್ಯ 'ಕನಕದಾಸರ ಸಮಗ್ರ ಜೀವನ ಚರೀತ್ರೆ,' ಜಿ. ವರದರಾಜರಾವ್ 'ಕನಕದಾಸರ ಕಾಲ, ದೇಶ ಮತ ಮತ್ತು ಜೀವನ'. ದೇವೆಂದ್ರ ಮಾಧವ 'ಕನಕದಾಸರು ಬೇಡ ಜನಾಂಗದವರು' ೨ನೇ ಭಾಗದಲ್ಲಿ, ಕೀರ್ತನೆ, ಮುಂಡಿಗೆ, ಅನುಭಾವ ಕುರಿತಾಗಿರುವ ಲೇಖನಗಳಿವೆ. ಕೆ.ಜಿ. ನಾಗರಾಜಪ್ಪರ 'ಕನಕದಾಸರ ಕೀರ್ತನೆಗಳು'. ಎಚ್.ಜೆ. ಲಕ್ಕಪ್ಪಗೌಡರ 'ಕನಕದಾಸರ ಕೀರ್ತನೆಗಳು: ಕಾವ್ಯಮೌಲ್ಯ'. ಬುರ್ಲಿ ಬಿಂದುಮಾಧವರ 'ಕನಕದಾಸರ ಮುಂಡಿಗೆಗಳು'. ಎಚ್. ತಿಪ್ಪೇರುದ್ರಸ್ವಾಮಿಯವರ 'ಕನಕದಾಸರ ಅನುಭಾವ ಗೀತೆಗಳು'. ಸಾ.ಕೃ. ರಾಮಚಂದ್ರರಾವ್ ಅವರ 'ಕನಕದಾಸರ ಪದಗಳಲ್ಲಿ ಸಂಗೀತ' ಲೇಖನಗಳು ಪ್ರಮುಖವಾಗಿವೆ. ೩ನೇ ಭಾಗದಲ್ಲಿ ಕಾವ್ಯದ ಕುರಿತಾಗಿದೆ. ಭಾಗ ೩ರಲ್ಲಿ ವೀರಣ್ಣ ರಾಜೂರ 'ಮೋಹನ ತರಂಗಿಣಿ, ಎ.ವಿ. ನಾವಡ 'ಮೋಹನ ತರಂಗಿಣಿ ಶೈಲಿ', ಸೀತಾರಾಮ್ ಜಾಗಿರದಾರ್ 'ಭಕ್ತಿಸಾಹಿತ್ಯದ ಹಿನ್ನೆಲೆಯಲ್ಲಿ ಹರಿಭಕ್ತಸಾರ', ಎಸ್ ವಿದ್ಯಾಶಂಕರ್‌ರ 'ನಳಚರಿತ್ರೆಯ ಜನಪ್ರಿಯತೆ', ಒಂದು ವಿವೇಚನೆ ದೇ ಜವರೇಗೌಡರ 'ರಾಮಧ್ಯಾನ ಚರಿತ್ರೆ', ಲೇಖನಗಳಿವೆ. ಎಸ್.ಎಸ್. ಕೋತಿನರ 'ಕನಕದಾಸರ ಕಾವ್ಯಗಳಲ್ಲಿ ವರ್ಗಪ್ರಜ್ಞೆ'. ಬಿ.ಎಸ್. ಸಣ್ಣಯ್ಯರ 'ಕನಕದಾಸರ ಕೃತಿಗಳಲ್ಲಿ ಕಂಡುಬರುವ ಚಾರಿತ್ರಿಕ ಅಂಶಗಳು'. ಜಿ.ಎಸ್. ಶಿವರುದ್ರಪ್ಪ 'ಕನಕದಾಸ: ಕೆಲವು ಚಿಂತನೆಗಳು, ಬೇಟಗೇರಿ ಕೃಷ್ಣಶರ್ಮ 'ಕನಕದಾಸರು ಚಿತ್ರಿಸಿದ ಜನಜೀವನ'. ಸುಧಾಕರ 'ಕನಕದಾಸರ ಮಾನವೀಯ ಮಿಡಿತಗಳು'. ಮಲ್ಲೇಪುರಂ ಜಿ. ವೆಂಕಟೇಶ 'ಕನಕದಾಸರ ತಾತ್ವಿಕ ದೃಷ್ಟಿಕೋನ: ಒಂದು ಟಿಪ್ಪಣಿ'. ಕೆ.ಆರ್. ಸಂಧ್ಯಾರೆಡ್ಡಿಯವರ 'ಕನಕಸಾಹಿತ್ಯದಲ್ಲಿ ಹೆಣ್ಣಿನ ಪರಿಕಲ್ಪನೆ'. ಜಿ.ಎಸ್. ಅಮೂರ 'ಕನಕಯೋಗಿ' ಜಿ.ಎಸ್. ಸಿದ್ದಲಿಂಗಯ್ಯ 'ಕನಕದಾಸರ ಭಾಷಾ ಪ್ರಯೋಗ'. ಡಿ.ಕೆ. ರಾಜೇಂದ್ರ 'ಕನ್ನಡ ಸಾಹಿತ್ಯದಲ್ಲಿ ಕನಕರ ಸ್ಥಾನ'. ಬಿ.ವಿ. ಶಿರೂರರ 'ಕನಕದಾಸರ ಕೃತಿಗಳ ಸಂಪಾದನೆ ಮತ್ತು ಪರಿಷ್ಕರಣೆ' ಲೇಖನಗಳಿವೆ. ೫ನೇ ಭಾಗದಲ್ಲಿ ತೌಲನಿಕ ಅಧ್ಯಯನದ ಲೇಖನಗಳು ಬಿ.ವಿ. ಶಿರೂರ 'ಕನಕದಾಸರು

ಮತ್ತು ಬಸವೇಶ್ವರರು'. ಸರಸ್ವತಿದೇವಿ ಭಗವತಿಯವರ 'ಕನಕದಾಸರು ಹಾಗೂ ತಿರುವಳ್ಳುವರ್' ತೇಜಸ್ವಿ ಕಟ್ಟಿಮನಿ ಅವರ 'ಕನಕದಾಸರು ಮತ್ತು ಕಬೀರದಾಸರು'. ವಸಂತ ಕುಷ್ಟಗಿಯವರ 'ಕನಕದಾಸರು ಮತ್ತು ಸಮಕಾಲೀನ ದಾಸರು' ಲೇಖನಗಳಿವೆ. ಭಾಗ ೬ ರಲ್ಲಿ ಸಂಕೀರ್ಣವಾದ ಲೇಖನಗಳಾದ ಎಂ. ಎಂ. ಕಲಬುರ್ಗಿ ಅವರ 'ಕನಕದಾಸರ ವಿಷಯದಲ್ಲಿ ಸೃಷ್ಟಿಗೊಂಡಿರುವ ಗೊಂದಲಗಳು'. ಬಿ. ರಾಜಶೇಖರಪ್ಪ ಅವರ 'ಕನಕದಾಸರು:ಹೊಸ ಚಾರಿತ್ರಿಕ ಸಂಗತಿಗಳು' ರಾಜಾರಾಮ ತೋಳ್ಪಾಡಿಯವರ 'ಕನಕನಕಿಂಡಿ ಕತೆಯೋ? ಚರಿತ್ರೆಯೋ?' ನಾ. ಗೀತಾಚಾರ್ಯ 'ಕನಕದಾಸರ ತತ್ವ ದ್ವೈತವಲ್ಲ ವಿಶಿಷ್ಟದ್ವೈತ'. ವೀರಭದ್ರ ಚೆನ್ನಮಲ್ಲ ಸ್ವಾಮೀಜಿ, 'ಕೃಷ್ಣ-ಕನಕರನ್ನು ಮೆಟ್ಟಿನಿಂತ ಅಷ್ಟಮಠಾಧೀಶರು' ಲೇಖನಗಳನ್ನು ಸಂಪಾದಿಸಿದ್ದಾರೆ

'ಸಾವಿರಾರು ಕೀರ್ತನೆಗಳು' ಶೀರ್ಷಿಕೆಯ ಈ ಕೃತಿಯನ್ನು ಪ್ರೊ. ಎ.ವಿ. ನಾವಡ ಅವರು ಸಂಪಾದಿಸಿದ್ದು ಸಾವಿರಕ್ಕೂ ಅಧಿಕ ಕೀರ್ತನಾ ಸಂಗ್ರಹವಿದೆ ಕನಕದಾಸರ ೫೨ ಕೀರ್ತನೆಗಳು ಈ ಕೃತಿಯಲ್ಲಿ ಅಡಕವಾಗಿವೆ. ೨೦೦೮ರಲ್ಲಿ ಮೂರನೇ ಆವೃತಿಯಾಗಿ ಅಂಕಿತ ಪುಸ್ತಕ ಪ್ರಕಾಶನದಿಂದ ಪ್ರಕಟಿತವಾಗಿದೆ.

'ಕನಕ ಸಾಹಿತ್ಯ ದರ್ಶನ' ಎಂಬ ಶೀರ್ಷಿಕೆಯಲ್ಲಿ ಕೆ. ರೇವಣಪ್ಪ ಪ್ರಧಾನ ಸಂಪಾದಕರಾದರೆ ಜಗನ್ನಾಥ ಆರ್. ಗೇನಣ್ಣವರ ಸಂಪಾದಕರಾಗಿ ಈ ಕೃತಿಯನ್ನು ಸಂಪಾದನೆ ಮಾಡಿದ್ದಾರೆ. ೭೮ ಪುಟಗಳಲ್ಲಿ ಮೇ ೨೦೦೮ ರಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಹಾವೇರಿಯಿಂದ ಪ್ರಕಟಿಸಲಾಗಿದೆ. ಇದರಲ್ಲಿ ಒಟ್ಟು ೧೦ ಕನಕದಾಸರ ಸಾಹಿತ್ಯಿಕ ಲೇಖನಗಳಿರುತ್ತವೆ. ಅವುಗಳಲ್ಲಿ ಸುಧಾಕರ 'ನತಜನ ಹಿತಕ್ಕಾಗಿ ಹಂಬಲಿಸಿದ ಸಂತ ಕನಕದಾಸರು'. ವಿ. ಚಂದ್ರಶೇಖರ ನಂಗಲಿ 'ರಾಮಧಾನ್ಯ ಚರಿತೆ ಮತ್ತು ಶ್ರಮ ಸಂಸ್ಕೃತಿ'. ಯಲ್ಲಪ್ಪ ಹಿಮ್ಮಡಿ 'ಕನಕನ ಕಿಂಡಿ ಮೂಕ ಸಂಪ್ರದಾಯಗಳ ಪ್ರತೀಕ'. ಕೆ.ಆರ್. ದುರ್ಗಾದಾಸ 'ಕನಕದಾಸರ ಸಾಹಿತ್ಯ ಮತ್ತು ಅದರ ಪ್ರಸ್ತುತತೆ'. ಎಸ್.ಜಿ. ಸಿದ್ದರಾಮಯ್ಯ 'ರಾಮಧಾನ್ಯ ಚರಿತೆಯ ರೂಪಕ ವಿವೇಕ'. ಬಿ.ಕೆ. ರವಿಯವರ 'ಸಾಮಾಜಿಕ ಸಮಾನತೆಯ ಹರಿಕಾರ ದಾಸಶ್ರೇಷ್ಠ ಕನಕದಾಸರು'. ಮೋಹನ ನಾಗಮ್ಮನವರ 'ಭಕ್ತಿ ಚಳುವಳಿ ಮತ್ತು ಕನಕದಾಸರು;'. ವಿಠ್ಠಲರಾವ್ ಗಾಯಕವಾಡ 'ಸಂತಕನಕದಾಸ ಮತ್ತು ಶಿಶುನಾಳ ಶರೀಫ್'. ಸುಧಾ ಕೌಜಗೇರಿ 'ಕನಕದಾಸರ ಮುಂಡಿಗೆಗಳು ಮತ್ತು ಅಲ್ಲಮಪ್ರಭುಗಳ ಬೆಡಗಿನ ವಚನಗಳು'. ಚಂದ್ರಶೇಖರ ತಾಳ್ಯ 'ಜಾತಿ ಮತ ಮೀರಿದ ಜೀವನ ಧರ್ಮ' ಕುರಿತ ಲೇಖನಗಳಿವೆ.

ಕನಕದಾಸರ ಸಾಹಿತ್ಯದರ್ಶನ ಸಂಪುಟ ೨ರ ಮಾಲಿಕೆಯಲ್ಲಿ 'ಆತ್ಮ ಯಾವ ಕುಲ' ಎಂಬ ಶೀರ್ಷಿಕೆಯಲ್ಲಿ ಕೆ. ರೇವಣಪ್ಪ ಪ್ರಧಾನ ಸಂಪಾದಕರಾಗಿ ಜಗನ್ನಾಥ ಆರ್. ಗೇಣನ್ನವರ ಅವರು ಸಂಪಾದಕರಾಗಿದ್ದಾರೆ. ೨೦೦೯ ರಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಗಿನೆಲೆಯಿಂದ ಪ್ರಕಟಿಸಲಾಗಿದೆ. ಕನಕದಾಸರ ಸಾಹಿತ್ಯಿಕ ೧೧ ಲೇಖನಗಳಿವೆ. ಇದರಲ್ಲಿ ಮುಖ್ಯವಾಗಿ ಸ್ತ್ರೀ ಸಂವೇದನೆ, ಜೀವನ ಸಿದ್ಧಿ, ಕುಲ, ಕಾಲದ ವಿಚಾರ ತೌಲನಿಕವಾದಂತಹ ಲೇಖನಗಳು ಇವೆ.

‘ಕನಕ ಗೋಪುರ ವಿವಾದದ ನೆಲೆಗಳು’ ಎಂಬ ಶೀರ್ಷಿಕೆಯಲ್ಲಿ ಎಚ್.ಜೆ. ಲಕ್ಕಪ್ಪಗೌಡ ಪ್ರಧಾನ ಸಂಪಾದಕರಾಗಿದ್ದಾರೆ ೨೦೦೯ ರಲ್ಲಿ ಮೈಸೂರಿನ ಅರ್ಜುನ ಪಬ್ಲಿಷಿಂಗ್ ಹೌಸ್‌ನಿಂದ ಪ್ರಕಟಿಸಲಾಗಿದೆ. ಇದರಲ್ಲಿ ೩ ಭಾಗಗಳಾಗಿ ವಿಂಗಡಿಸಿ ಕನಕಗೋಪುರ, ನ್ಯಾಯಾಲಯ ತೀರ್ಪು, ಪತ್ರಿಕಾ ಸಮರದ ವಿಶ್ಲೇಷಣಾತ್ಮಕ ಲೇಖನಗಳಿರುತ್ತವೆ.

‘ಕನ್ನಡ ತತ್ತ್ವ ಪದಗಳು’ ಎಂಬ ಶೀರ್ಷಿಕೆಯಲ್ಲಿ ಎಂ. ರಂಗಸ್ವಾಮಿಯವರು ಪ್ರಧಾನ ಸಂಪಾದಕರಾಗಿದ್ದಾರೆ. ಕಬ್ಬಿನಾಲೆ ವಸಂತ ಭಾರದ್ವಾಜರವರು ಲೇಖಕರಾಗಿರುವ ಒಟ್ಟು ೯೪ ಕೃತಿ ೨೦೧೦ ರಲ್ಲಿ ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ ಮೈಸೂರಿನಿಂದ ಪ್ರಕಟನೆಯಾಗಿದೆ. ೧೦ ತತ್ತ್ವಪದಕಾರರ ಪದಗಳನ್ನು ಸಂಪಾದಿಸಿದ್ದಾರೆ. ಕನಕದಾಸರ ಕೀರ್ತನೆಗಳು ಇದರಲ್ಲಿವೆ.

‘ಕನಕ ಚಿಂತನ’ ಶೀರ್ಷಿಕೆಯಲ್ಲಿ ಕನಕದಾಸ ಸಂಶೋಧನಾ ಕೇಂದ್ರ ಮಂಗಳೂರು ವಿಶ್ವವಿದ್ಯಾಲಯದಿಂದ ೨೦೧೦ರಲ್ಲಿ ಪ್ರತಾಪಚಂದ್ರ ಶೆಟ್ಟಿ ಹಳ್ನಾಡ. ಬಿ. ಶಿವರಾಮಶೆಟ್ಟಿ ಸಂಪಾದನೆಯಲ್ಲಿ ಪ್ರಕಟನೆಗೊಂಡಿತು. ಕನಕದಾಸರ ಸಂಶೋಧನಾ ಕೇಂದ್ರದಿಂದ ೨೦೦೭ ರಲ್ಲಿ ‘ಕನಕ ತತ್ತ್ವ ಚಿಂತನೆ’ ಪ್ರಚಾರೋಪನ್ಯಾಸ ಪ್ರಬಂಧಗಳ ೭ ಲೇಖನಗಳು ಇವೆ. ಹಾಗೂ ೨೦೦೮ ರಲ್ಲಿ ನಡೆದ ಸೂಫಿ ಮತ್ತು ದಾಸ ಪರಂಪರೆಯ ಹಿನ್ನಲೆಯಲ್ಲಿ ಕನಕದಾಸರ ತತ್ತ್ವ ಚಿಂತನೆಯ ಉಪನ್ಯಾಸದ ೯ ಲೇಖನಗಳು ಕೃತಿಯಲ್ಲಿ ಅಡಕಗೊಂಡಿವೆ.

‘ಕನಕ ಚಿಂತನ’ ಎಂಬ ಶೀರ್ಷಿಕೆಯಲ್ಲಿ ಕನಕದಾಸರ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯದಿಂದ ೨೦೧೦ ರಲ್ಲಿ ಈ ಕೃತಿ ಪ್ರಕಟಗೊಂಡಿದೆ. ೨೦೦೯ ರಲ್ಲಿ ಸಂಶೋಧನಾ ಕೇಂದ್ರದಿಂದ ‘ರಾಮಧಾನ್ಯ ಚರಿತೆ– ಸಮಕಾಲೀನ ಸಂವಾದ’ ಎಂಬ ಹಿನ್ನಲೆಯಲ್ಲಿ ಕನಕದಾಸರ ತತ್ತ್ವ ಚಿಂತನೆಯ ಪ್ರಚಾರೋಪನ್ಯಾಸ ಮಾಲೆಯಲ್ಲಿ ಲೇಖನ ಹಾಗೂ ಮೋಹನ ತರಂಗಿಣಿಯ ಮೇಲೆ ಇರುವ ಎಲ್ಲ ಲೇಖನಗಳನ್ನು ಸಂಪಾದಿಸಿದ್ದಾರೆ. ಹೊಸನೋಟ ಪ್ರಾತಿನಿಧಿಕ ಮಾದರಿ, ಸಮಕಾಲೀನ ಸಂವಾದ, ಭಕ್ತಿ ಕಾರ್ಯದ ಹಲವಾರು ನೆಲೆಗಳು ಇದರಲ್ಲಿವೆ.

‘ಕನಕದಾಸರ ಪ್ರಸಿದ್ಧ ಕೀರ್ತನೆಗಳು’ ಎಂಬ ಶೀರ್ಷಿಕೆಯಲ್ಲಿ ‘ಮಾನಸ’ ಸಂಪಾದಿಸಿದ ಕೃತಿಯು ೨೦೧೦ ರಲ್ಲಿ ಮೈಸೂರಿನ ತನುಮನ ಪ್ರಕಾಶನದಿಂದ ಪ್ರಕಟಗೊಂಡಿದೆ. ರಾಗ, ತಾಳ ಸಹಿತ ಕನಕದಾಸರ ೧೦೧ ಕೀರ್ತನೆಗಳನ್ನು ಸಂಪಾದಿಸಿದ್ದಾರೆ. ‘ಕನ್ನಡ ಕೀರ್ತನೆ, ಸಾಹಿತ್ಯ ಸಂಗೀತ’ ಶೀರ್ಷಿಕೆಯ ಕೃತಿ ಟಿ.ಎನ್. ನಾಗರತ್ನರ ಸಂಪಾದಿಸಿದ್ದಾರೆ. ೨೦೧೦ ರಲ್ಲಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿ. ವಿ. ಮಾನಸಗಂಗೋತ್ರಿ ಮೈಸೂರಿನಿಂದ ಪ್ರಕಟಿಸಲಾಗಿದೆ. ಭಕ್ತಿ ಉಪದೇಶಾತ್ಮಕ ತತ್ತ್ವ ಮುಂಡಿಗೆ, ಉಗಾಭೋಗ, ಕೀರ್ತನೆ ಹಾಡುವ ದಾಟಿ ಕ್ರಮ ಪರಂಪರೆಯನ್ನು ಒಳಗೊಂಡಿದೆ.

'ದಾಸ–ಕನಕ ಪ್ರಭೆ' ಕೃತಿಯಲ್ಲಿ ಹೆರಂಜೆ ಕೃಷ್ಣಭಟ್ಟರು ಸಂಪಾದಿಸಿದ್ದಾರೆ. ದಾಸ ಪ್ರಭೆಯಲ್ಲಿ ಪುರಂದರದಾಸರ ಕುರಿತು. ಕನಕ ಪ್ರಭೆಯಲ್ಲಿ 'ಕನಕದರ್ಶನ,' 'ಕಾಗಿನೆಲೆ ಹೂವು,' 'ಕನಕದಾಸರ ಮನೆಗೆ ಕನ್ನಹಾಕಿದ ಕಳರು' ಲೇಖನಗಳಿವೆ ಕನಕದಾಸರ ಅಧ್ಯಯನ ಸಂಶೋಧನ ಪೀಠ ಉಡುಪಿಯಿಂದ ೨೦೧೧ರಲ್ಲಿ ಪ್ರಕಟಿಸಿದ್ದಾರೆ.

'ಕನಕದಾಸರ,' ಬದುಕು ಬರಹ' ಶೀರ್ಷಿಕೆಯಲ್ಲಿ ಎಸ್.ಎಸ್. ಭಗವತಿ, ಎಚ್. ಎಸ್. ಮೇಲಿನಮನಿಯವರು ಸಂಪಾದಿಸಿದ್ದಾರೆ ಈ ಕೃತಿ ೨೦೧೧ ರಲ್ಲಿ ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟಣೆಗೊಂಡಿದೆ. ಇದರಲ್ಲಿ ಕನಕದಾಸರ ಬದುಕು, ಬರಹ, ಕೃತಿಗಳು, ಕನಕರು ಚಿತ್ರಿಸಿದ ಜನಜೀವ, ಅವರ ಸಾಹಿತ್ಯದಲ್ಲಿ ಅವರ ಸ್ಥಾನಮಾನದ ಕುರಿತು ಚಿತ್ರಣಗಳಿರುವ ಲೇಖನಗಳು ಇರುತ್ತವೆ.

'ಕನಕ ಕಾವ್ಯ ಸಂಪುಟ' ಎಂಬ ಶೀರ್ಷಿಕೆಯಲ್ಲಿ ಎ.ವಿ. ನಾವಡ ಸಂಪಾದಿಸಿದ್ದು ಒಟ್ಟು ೭೩೬ ಪುಟಗಳ ಈ ಕೃತಿ ಕನಕದಾಸರ ಅಧ್ಯಯನ ಸಂಶೋದನ ಪೀಠ ಉಡುಪಿಯಿಂದ ೨೦೧೧ ರಲ್ಲಿ ಪ್ರಕಟಗೊಂಡಿದೆ. ಇದರಲ್ಲಿ ಕನಕರ ಬದುಕಿನ ಸಂಗತಿಗಳು ಮನಸ್ಸಿನ ಮಿಡಿತದ ಬಗ್ಗೆ, ಕಾಲವಿಚಾರ, ಜಾತಿ ಪ್ರಶ್ನೆ, ಮೋಹನ ತರಂಗಿಣಿ, ಕಾವ್ಯ ಕಥಾಸಾರ, ಆಕರ, ವರ್ಣನೆ, ಪಾತ್ರ ಚಿತ್ರಣ ಭಾಷೆ, ಪುರಾಣ ವರ್ತಮಾನಗಳ ಮುಖಾಮುಖಿ, ಅಂಶಗಳನ್ನು ಕಾಣುತ್ತೇವೆ.

'ಆತ್ಮ ಆವ ಕುಲ' ಕನಕದಾಸರ ಕುರಿತು ಕಾವ್ಯ ಸಂಪುಟವನ್ನು ವಿವಿಧ ಕವಿಗಳು ರಚಿಸಿದ ೮೧ ಕವಿತೆಗಳನ್ನು ಇಲ್ಲಿ ಸಂಪಾದಿಸಲಾಗಿದೆ. ಇದರ ಪ್ರಧಾನ ಸಂಪಾದಕರು ಬಿ.ವಿ. ಯಕ್ಕುಂಡಿಮಠ, ಬಾಳಣ್ಣ ಶೀಗೀಹಳ್ಳಿಯವರು ಸಂಪಾದಿಸಿದ್ದಾರೆ. ೨೦೧೨ ರಲ್ಲಿ ಕನಕ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟಿಸಿದ್ದಾರೆ ಇಲ್ಲಿ ಕನಕನ, ಸಾಹಿತ್ಯ, ಕೀರ್ತನೆ, ಅನುಭಾವ ಜೀವನ ಕುರಿತು ಹಲವಾರು ಭಿನ್ನ, ವಿಭಿನ್ನವಾದ ಆಲೋಚನೆಗಳ ಮೇಲೆ ಕವಿತೆಗಳನ್ನು ಸಂಪಾದಿಸಿದ್ದಾರೆ.

ಕನಕ ಪ್ರಸರಣ ಯೋಜನೆ 'ಕನಕ ಚಿಂತನ ಮಾಲಿಕೆ–೨' ರಲ್ಲಿ ಕನಕ ಚಿಂತನ ಪುಟಗಳಲ್ಲಿ ೨೦೧೩ ರಲ್ಲಿ ಕನಕದಾಸ ಸಂಶೋಧನಾ ಕೇಂದ್ರ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿಯಿಂದ ಪ್ರಕಟಣೆಯಾಗಿದೆ. ೨೦೧೧ ರಲ್ಲಿ ನಡೆದ 'ನಳಚರಿತೆ, ಸಮಕಾಲೀನ ಸಂವಾದ' ಹಿನ್ನಲೆಯಲ್ಲಿ ಕನಕದಾಸರ ತತ್ವ ಚಿಂತನೆ ಪ್ರಚಾರೋಪನ್ಯಾಸದ ಪ್ರಬಂಧಗಳ ವಿವಿಧ ಲೇಖಕರಿಂದ ಒಟ್ಟು ೧೪ ಲೇಖನಗಳು ಮತ್ತು ೨೦೧೨ ರಲ್ಲಿ ಹರಿಭಕ್ತಿಸಾರ ಸಮಕಾಲೀನ ಸಂವಾದ ಹಿನ್ನಲೆಯಲ್ಲಿ ಕನಕದಾಸರ ತತ್ವ ಚಿಂತನೆ ಪ್ರಚಾರೋಪನ್ಯಾಸದ ಪ್ರಬಂಧಗಳ ಲೇಖನಗಳನ್ನು ಇಲ್ಲಿ ಸಂಪಾದಿಸಲಾಗಿದೆ. 'ಸಂತ ಕನಕದಾಸರು' ಎಂಬ ಶೀರ್ಷಿಕೆಯ ಈ ಕೃತಿಯನ್ನು ಪ್ರತಾಪಚಂದ್ರ ಶೆಟ್ಟಿ ಹಳ್ನಾಡು ಅವರು ರಚಿಸಿರುವರು ಕನಕದಾಸರ ಜೀವನ ಅವರು ತಿಮ್ಮಪ್ಪ–ಕನಕನಾಯಕನಾಗಿ, ಕನಕದಾಸನಾದ ಬಗೆಯನ್ನೂ ಬಹಳ ಅರ್ಥಗರ್ಭಿತವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ ೨೦೧೩ರಲ್ಲಿ ಸಿರಿಗನ್ನಡ ಪುಸ್ತಕ ಮನೆಯ ಪ್ರಕಾಶನದಿಂದ ಪ್ರಕಟವಾಗಿದೆ.

'ಕನಕನ ಸುತ್ತಮುತ್ತ : ಸಂಕಥನಗಳ ಜಿಜ್ಞಾಸೆ' ಶೀರ್ಷಿಕೆಯಲ್ಲಿ ಕನಕಪ್ರಸರಣ ಯೋಜನೆಯ ಕನಕ ಸಂವಾದ ಮಾಲಿಕೆ-೧, ಬಿ. ಶಿವರಾಮಶೆಟ್ಟಿ ಸಂಪಾದನೆ ಮಾಡಿದ್ದಾರೆ ೨೦೧೩ ರಲ್ಲಿ ಕನಕದಾಸ ಸಂಶೋಧನ ಕೇಂದ್ರ ಮಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟನೆಗೊಂಡಿದೆ. ಇದರಲ್ಲಿ ೫ ಗೋಷ್ಠಿಗಳಲ್ಲಿ ಕನಕಪೂರ್ವ, ಕನಕವರ್ತಮಾನ ಎಂಬ ಹೆಸರಿನಲ್ಲಿ, ಭಾಷಾಂತರ, ಸಂಸ್ಥಿಕರಣ, ಸಂವಾದ ಶಿಲ್ಪಿ ಮತ್ತು ಚಿತ್ರಗಳಲ್ಲಿ ಕನಕ, ಕನಕಗೋಪುರ ಕುರಿತು ಸಂವಾದಗೊಂಡ ಲೇಖನಗಳನ್ನ ಪ್ರಕಟಿಸಿದ್ದಾರೆ.

'ನೀ ಮಾಯಯೊಳಗೂ ನಿನ್ನೊಳು ಮಾಯೆಯೊ' ಕನಕ ಪ್ರಸರಣ ಯೋಜನೆಯ ಕನಕ ಸಂಶೋಧನ ಮಾಲಿಕೆ -೧ ರ ಕನಕದಾಸರ ಅಧ್ಯಯನ ಃ ಸಮಗ್ರ ಸಂಪುಟ ಭಾಗ-೧ ಸಂಪಾದನ ಕೃತಿಯನ್ನು ಡಾ. ಬಿ. ಶಿವರಾಮ ಶೆಟ್ಟಿಯವರು ಸಂಪಾದಿಸಿದ್ದಾರೆ ೨೦೧೩ ರಲ್ಲಿ ಕನಕದಾಸ ಅಧ್ಯಯನ ಪೀಠ ಕನಕದಾಸ ಸಂಶೋಧನ ಕೇಂದ್ರ ಮಂಗಳೂರು, ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗಿದೆ. ಒಟ್ಟು ಇದರಲ್ಲಿ ೧೧೮ ಲೇಖನಗಳಿದ್ದು ಕನಕದಾಸರ ಊರು, ಅವರ ಜೀವನ, ಕಾಲ, ಜಾತಿ, ಮತ, ಪವಾಡ, ಐತಿಹ್ಯ, ಕಿಂಡಿ, ಗೋಪುರ, ಧರ್ಮ, ಅನುಭಾವ, ಭಕ್ತಿಯ ನೆಲೆಗಳಲ್ಲಿ ಅಡಕಗೊಂಡ ಒಂದು ಸಮಗ್ರ ಲೇಖನ ಕೃತಿಯಾಗಿದೆ.

ಎಚ್. ಎಸ್. ಘಂಟಿಯವರ 'ತಲ್ಲಣಿಸದಿರು ಕಂಡ್ಯ ತಾಳು ಮನವೇ' ಎಂಬ ಶೀರ್ಷಿಕೆಯಲ್ಲಿ ೧೨ ಲೇಖನಗಳನ್ನು ಸಂಪಾದಿಸಿದ್ದಾರೆ. ಅದರಲ್ಲಿ ಎಸ್. ಲಕ್ಷ್ಮೀದೇವಿ 'ಕನಕದಾಸ-ಅನ್ನಮಯ್ಯ ಒಂದು ತೌಲನಿಕ ನೋಟ', ವಿಠಲರಾವ್ ಗಾಯಕವಾಡ 'ಭಕ್ತಕನಕದಾಸ ಮತ್ತು ಸಂತ ತುಕಾರಾಮ'. ಎಂ.ಬಿ. ಹೂಗಾರ 'ಕನಕದಾಸರ ಸಾಮಾಜಿಕ ಕಳಕಳಿ: ಒಂದು ಅವಲೋಕನ'. ವಾಯ್.ಎಂ. ಯಾಕೊಳ್ಳಿ 'ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ ಮತ್ತು ಭಜನೆ'. ಎಸ್.ಎಫ್. ಜಕಬಾಳ 'ಕನಕದಾಸರ ಕಾವ್ಯಗಳು'. ಭೀಮನಗೌಡ ಪಾಟೀಲ 'ಸಮಕಾಲೀನ ಸಮನ್ವಯ ದಾಸರು'. ಮಹೇಶ ಚಿಂತಾಮನಿ 'ರಾಮಧಾನ್ಯ ಚರಿತೆಯಲ್ಲಿ ಸಂಘರ್ಷದ ಸ್ವರೂಪ'. ಎಚ್.ಎಸ್. ಘಂಟಿ 'ಕನಕದಾಸರ ವಿಚಾರಗಳ ಪ್ರಸ್ತುತತೆ'. ಶಂಕರ ಹೂಲಿಯವರ 'ಕನಕದಾಸರ ಕೀರ್ತನೆಗಳ ಮೌಲ್ಯಗಳು'. ಹೆಚ್.ಕೆ. ಹುಡೇದ 'ಕನಕದಾಸರ ಪವಾಡಗಳ ವಾಸ್ತವಿಕತೆ'. ಎನ್.ಎಂ. ಹೊಟ್ಟಿ 'ಕನಕದಾಸರ ಸಾಹಿತ್ಯ ಮತ್ತು ವೈಚಾರಿಕತೆ'. ವಿಜಯಶ್ರೀ ಇಟ್ಟಣ್ಣವರ 'ಕನಕದಾಸರ ಮಾನವೀಯ ಚಿಂತನೆಗಳು' ಅಡಕಗೊಂಡಿವೆ. ಕಿಕ್ಕೇರಿ ಪ್ರಕಾಶನ ಬೆಂಗಳೂರು ಇವರಿಂದ ೨೦೧೩ರಲ್ಲಿ ಪ್ರಕಟವಾಗಿದೆ.

'ಹಂತಿಯ ಪದಗಳು ಎಂಬ ಕೃತಿಯನ್ನು ಸಿದ್ದಣ್ಣ ಜಕಬಾಳ ಸಂಪಾದಿಸಿದ್ದಾರೆ. ನಮ್ಮ ಹಿಂದಿನ ಸಂಸ್ಕೃತಿಯ ಕುರಿತು ಜನಪದ ಹಂತಿಪದಗಳಿವೆ. ಅದರಲ್ಲಿಯೂ ಕನಕದಾಸರ ಕುರಿತ ಹಂತಿ ಪದಗಳಿವೆ. ಕನಕದಾಸರ ಲೋಕೋದ್ಧಾರದ ದರ್ಶನ, ಭಕ್ತಿಯ ಪರಾಕಾಷ್ಠೆಯ ಕುರಿತು ಹೇಳಲಾದ ಈ ಕೃತಿ ೨೦೧೦ರಲ್ಲಿ ವಿದ್ಯಾನಿಧಿ ಪ್ರಕಾಶನ ಗದಗದಿಂದ ಪ್ರಕಟಿಸಲಾಗಿದೆ.

'ಬಾಡದ ಹೂ' ಇದು ಕನಕದಾಸರ ಜೀವನ, ಸಾಹಿತ್ಯ, ಭಕ್ತಿ, ಸಮಾನತೆ, ಅಂಶಗಳಿರುವ ಕವಿತೆಗಳ ಕೃತಿಯಾಗಿದೆ. ಇದನ್ನು ಎಚ್. ಎಸ್. ಘಂಟಿಯವರು ಸಂಪಾದಿಸಿದ್ದಾರೆ. ೨೦೧೩ರಲ್ಲಿ ಕ್ರಿಯೇಟಿವ್ ಪ್ರಕಾಶನದವರು ಪ್ರಕಟಿಸಿದ್ದಾರೆ.

'ಪ್ರಭಾನಂದ ಪಂಡಿತ ಕವಿಯ ಕನಕ ವಿಜಯ ಪುರಾಣ ಎಫ್.ಟಿ. ಹಳ್ಳಿಕೇರಿ ಸಂಪಾದಿಸಿದ್ದಾರೆ. ಕನಕದಾಸರ ಕುರಿತಾದ ಈ ಕೃತಿ ೧೮ ಸಂಧಿಗಳಲ್ಲಿದೆ. ಬಳ್ಳಾರಿಯ ವಿಕಾಸ ಪ್ರಕಾಶನದಿಂದ ೨೦೧೩ರಲ್ಲಿ ಪ್ರಕಟಿಸಲಾಗಿದೆ.

'ಅರಿವಿನ ಅಡಿಗೆ' ಶೀರ್ಷಿಕೆಯ ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ-೩ ಪ್ರಧಾನ ಸಂಪಾದಕ ಕಾ. ತ. ಚಿಕ್ಕಣ್ಣ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿತವಾದ ೧೫ಲೇಖನಗಳಿವೆ ಅದರಲ್ಲಿ ಕನಕದಾಸರ ಚಿಂತನೆ, ಸಂಘರ್ಷ, ಸಾಮಾಜಿಕ ಒತ್ತಾಸೆ. ಜ್ಞಾನ, ಪರಂಪರೆ. ವೈಚಾರಿಕನೆಲೆ, ಭಕ್ತಿ, ಕಾಯಕದ ಕುರಿತಾದ ಲೇಖನಗಳಿವೆ ೨೦೧೪ರಲ್ಲಿ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಬೆಂಗಳೂರು ನಿಂದ ಪ್ರಕಟವಾಗಿದೆ.

'ಸಂತ ಕವಿಕನಕದಾಸರು' ಕೃತಿಯು ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯಸರಣಿಯಲ್ಲಿ ಚಿಕ್ಕಮಗಳೂರು ಗಣೇಶ ರಚಿಸಿದ್ದಾರೆ. ಈ ಕೃತಿಯನು ಕಾ. ತ. ಚಿಕ್ಕಣ್ಣ ಸಂಪಾದಿಸಿದ್ದಾರೆ ಕನಕದಾಸರ ಸಂಕ್ಷಿಪ್ತ ಜೀವನ-ಕಾವ್ಯಗಳ ದರ್ಶನವನ್ನೂ ಮಾಡಿಸಿದ್ದಾರೆ೨೦೧೪ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಕೇಂದ್ರ ಬೆಂಗಳೂರು ನಿಂದ ಪ್ರಕಟವಾಗಿದೆ.

'ಕನಕ ಕಾವ್ಯ ವಿಶಿಷ್ಟಾರ್ಥ ಕೋಶ' ಎಂಬ ಶೀರ್ಷಿಕೆಯ ಕನಕದಾಸ ಅಧ್ಯಯನ ಸಾಹಿತ್ಯ ಸರಣಿ-೨ ಈ ಕೃತಿಯ ಪ್ರಧಾನ ಸಂಪಾದಕರು ಕಾ. ತ, ಚಿಕ್ಕಣ್ಣ ಅವರು ಕಾರ್ಯ ನಿರ್ವಹಿಸಿದ್ದು ಕನಕದಾಸರ ಕಾವ್ಯಗಳಲ್ಲಿರುವ ವಿಶಿಷ್ಟ ಅರ್ಥಗಳನ್ನು ಸಂಪಾದಿಸಿದ್ದಾರೆ. 'ನಳಚರಿತೆ'-ಡಾ. ಸುರೇಶ ನಾಗಲಮಡಿಕೆ 'ರಾಮಧಾನ್ಯಚರಿತ'- ಶ್ರೀರಾಮ ಇಟ್ಟನ್ನವರ 'ಹರಿಭಕ್ತಸಾರ' ಎಚ್.ಎನ್. ಮುರಳಿಧರ, 'ಕೀರ್ತನೆಗಳು' ಕಬ್ಬಿನಾಲ್ ವಸಂತ ಭಾರದ್ವಾಜ್, 'ಕನಕದಾಸರ ಕಾವ್ಯ ಕೀರ್ತನೆಗಳ ಪಾರಿಭಾಷಿಕ ಶಬ್ದಗಳು ಹಾಗೂ ಅವುಗಳ ಅರ್ಥ' ಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಸಾಮಾನ್ಯ ಓದುಗನೂ ಸಹ ಈ ಕೃತಿಯ ತಾತ್ವಿಕತೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ೨೦೧೪ರಲ್ಲಿ ಪ್ರಥಮ ಆವೃತ್ತಿಯಾಗಿ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರಿನಿಂದ ಪ್ರಕಟವಾಗಿದೆ.

'ಕನಕದಾಸರ ಕೃತಿಗಳ ಸಂಪಾದನೆಯ ಸಾಂಸ್ಕೃತಿಕ ರಾಜಕಾರಣ' ಸಂಶೋಧನ ಕೃತಿಯ ಪ್ರಧಾನ ಸಂಪಾದಕರಾಗಿ. ಕಾ. ತ. ಚಿಕ್ಕಣ್ಣ ಅವರು ಹಾಗೂ ರಚನೆಕಾರರಾಗಿ ಆರ್, ಚಲಪತಿಯವರು ಕಾರ್ಯನಿರ್ವಹಿಸಿದ್ದಾರೆ. ಕನಕಸಾಹಿತ್ಯ ಸಂಪಾದನೆ ಸಾಂಸ್ಕೃತಿಕ ರಾಜಕಾರಣ ಸಾಂಸ್ಕ್ರತಿಕ ಚರಿತೆ, ಕನಕ ಸಾಹಿತ್ಯದ ಒಳಗು, ಕನಕಸಾಹಿತ್ಯದ ದಿಕ್ಕು-ದೆಸೆಗಳು, ಸಂಪಾದನೆಯ ಸವಾಲುಗಳು, ಹೀಗೆ ಭಿನ್ನನೆಲೆಗಳೂಂದಿಗೆ ಸಂಪಾದನೆಯಾದ ಕನಕ ಸಾಹಿತ್ಯದ ಕುರಿತು ಇವರು, ವಿಶ್ಲೇಷಣೆ ಮಾಡಿದ್ದಾರೆ.

ರಾಜಕಾರಣದ ಹಿಂದಿರುವ ಆಶಯ ದೃಷ್ಟಿಕೋನಗಳ ಹಿನ್ನಲೆಯನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ೨೦೧೪ರಲ್ಲಿ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಬೆಂಗಳೂರು ಸಂಸ್ಥೆಯು ಪ್ರಸ್ತುತ ಕೃತಿಯನ್ನು ಪ್ರಕಟಿಸಿದೆ.

'ಕನಕ-ಮರುದರ್ಶನ' ಶೀರ್ಷಿಕೆಯ ಕೃತಿ ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ-೯ರಲ್ಲಿ ಬಂದಿದೆ. ಇದರ ಪ್ರಧಾನ ಸಂಪಾದಕರಾಗಿ ಕಾ. ತ, ಚಿಕ್ಕಣ್ಣ ಸಂಪಾದಕರಾಗಿ ಬಂಜಗೆರೆ ಜಯಪ್ರಕಾಶ್ ಅವರು ಕಾರ್ಯನಿರ್ವಸಿದ್ದಾರೆ. ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ಲೇಖನ ರೂಪದಲ್ಲಿ ಪ್ರಕಟಿಸಿದ್ದಾರೆ. ಲೇಖನ ವಸ್ತು-ವೈವಿಧ್ಯತೆಯನ್ನು ಮೂರು-ಕವಲುಗಳಲ್ಲಿ ವರ್ಗೀಕರಿಸಿ ಇಪ್ಪತ್ತೆರಡು ಲೇಖನಗಳನ್ನು ಪ್ರಕಟಿಸಿದ್ದಾರೆ. ಅವು ಇಂತಿವೆ. ಕನಕ ಮರುದರ್ಶನದ ಆಯಾಮಗಳು, ಭಕ್ತಿನೆಲೆಗಳು, ಸಾಂಸ್ಕೃತಿಕ ನಾಯಕತ್ವ ಎನ್ನುವ ಚಿಂತನಾ ಪರ ಲೇಖನಗಳಿವೆ. ೨೦೧೫ ರಾಷ್ಟ್ರಿಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಬೆಂಗಳೂರಿನಿಂದ ಪ್ರಕಟಿತವಾಗಿದೆ.

'ಕನಕ ತರಂಗಿಣಿ' ಕೃತಿಯ ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ-೫ ಅಂಗವಾಗಿ ಪ್ರಕಟವಾಗಿದೆ. ಈ ಕೃತಿಯ ಪ್ರಧಾನ ಸಂಪಾದಕರು ಕಾ. ತ. ಚಿಕ್ಕಣ್ಣ, ಸಂಪಾದಕ ಎ. ಸುಂದರಮೂರ್ತಿ. ಇವರು ನೂರು ಕನಕದಾಸರ ಕೀರ್ತನೆಗಳನ್ನು ಹಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ರಾಗ ಸಂಯೋಜನೆ ಮಾಡಿ ಛಂದೋಪ್ರಕಾರಗಳನ್ನು ಗುರುತಿಸಿ ಕೊಟ್ಟಿದ್ದಾರೆ ಹಾಡುಗಾರರಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ೨೦೧೫ರಲ್ಲಿ ಪ್ರಥಮ ಆವೃತ್ತಿಯಾಗಿ ರಾಷ್ಟ್ರಿಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ಇವರಿಂದ ಪ್ರಕಟವಾಗಿದೆ.

೧.೨ ಸಂಗ್ರಹ

ಸಂಶೋಧನಾ ಅಧ್ಯಯನ ಕ್ರಮದಲ್ಲಿ ಸಮೀಕ್ಷೆ ಮಾಡುವಾಗ ಕೃತಿಗಳನ್ನು ಕೀರ್ತನೆ ಮುಂಡಿಗೆಗಳನ್ನು ಉಗಾಭೋಗಗಳನ್ನು ಯತಾರೀತಿ ಪುಸ್ತಕದಲ್ಲಿ ಸಂಗ್ರಹಿಸುವ ಕಾರ್ಯ ನಡೆದುದು ಬಹುಮುಖ್ಯವಾಗಿದೆ. ಈ ಸಂಗ್ರಹಗಳು ಜನಸಮುದಾಯದಲ್ಲಿ ಬಹಳ ಜನಪ್ರಿಯವಾಗಿವೆ.

'ಕನಕದಾಸರ ಪದಗಳು' ಎಂಬ ಕೃತಿಯಲ್ಲಿ ಕನಕದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಭಾಗ್ಯಲಕ್ಷ್ಮೀ ಪ್ರಕಾಶನ ಬೆಂಗಳೂರದಿಂದ ಒಟ್ಟು ೯೨ ಪುಟಗಳಿರುವ ಈ ಸಂಗ್ರಹ ಕೃತಿ ೧೯೯೨ ರಲ್ಲಿ ಪ್ರಕಟವಾಯಿತು. ಇಲ್ಲಿ ಕನಕದಾಸರ ಕೀರ್ತನೆಗಳು ಪ್ರಮುಖವಾಗಿವೆ. ನಂತರ ಇನ್ನೊಂದು ಕೃತಿ ಹರಿದಾಸ ಕೀರ್ತನಮಾಲಾದಲ್ಲಿ 'ಕನಕದಾಸರ ಸುಪ್ರಸಿದ್ದ ಕೀರ್ತನೆಗಳು' ಎಂಬ ಹೆಸರಿನಲ್ಲಿ ಸುಮಿತೀಂದ್ರ ಎನ್ನುವವರು ಸಂಗ್ರಹಿಸಿದ್ದಾರೆ. ಬೆಂಗಳೂರ ಜೆ. ಪಿ. ನಗರದ ಸಹನಾ ಪ್ರಕಾಶನದವರು ೮೦ ಪುಟಗಳಿರುವ ಈ ಕೃತಿಯನ್ನು ೨೦೦೨ ರಲ್ಲಿ ಪ್ರಕಟಿಸಿದ್ದಾರೆ. ಜಯಲಕ್ಷ್ಮಿ ಶ್ಯಾಂಸುಂದರ್

ಅವರು ಪುಸ್ತಕದಲ್ಲಿ ಕೀರ್ತನೆ ಮುಂಡಿಗೆಗಳನ್ನು ಸಂಗ್ರಹಿಸಿದ್ದಾರೆ. ಒಟ್ಟು ೮೦ ಪುಟಗಳಿಂದ ಈ ಕೃತಿ ಬೆಂಗಳೂರಿನ ನವಜ್ಯೋತಿ ಪ್ರಕಾಶನದಿಂದ ಪ್ರಕಟವಾಗಿದೆ. ಶೇಷಾದ್ರಿ ಎನ್ನುವವರು ಭಕ್ತ ಕನಕದಾಸರು ಎಂಬ ಕೃತಿಯನ್ನು ವಿದ್ಯಾನಿಧಿ ಪ್ರಕಾಶನ ಗದಗದಿಂದ ೨೦೦೯ ರಲ್ಲಿ ಪ್ರಕಟಿಸಿದ್ದಾರೆ.

ಎಂ.ಜಿ. ರಾಘವೇಂದ್ರರಾವ್ ಅವರು ಕನಕದಾಸರ ಜೀವನ ಚರಿತ್ರೆ ಮತ್ತು ಪದಗಳು ಹೊಸಕೋಟೆ ನವಜ್ಯೋತಿ ಪ್ರಕಾಶನದಿಂದ ೧೭೪ ಪುಟಗಳಿಂದ ಕೂಡಿದ ಕೃತಿ ೨೦೧೧ ರಲ್ಲಿ ಪ್ರಕಟನೆಯಾಗಿದೆ. ಶ್ರೀಭಕ್ತ ಕನಕದಾಸ ರಚಿತ ಶ್ರೀ ಹರಿಭಕ್ತಿಸಾರವು ಈ ಶೀರ್ಷಿಕೆಯಲ್ಲಿ ಟಿ. ಜಯಲಕ್ಷ್ಮೀ ಅವರು ಸಂಗ್ರಹಿಸಿದ್ದಾರೆ. ೨೦೦೬ ರಲ್ಲಿ ವಿಜಯವಾಹಿನಿ ಪಬ್ಲಿಕೇಶನ್ ರವರು ಈ ಕೃತಿಯನ್ನು ಹೊರ ತಂದಿದ್ದಾರೆ. ಭಕ್ತ ಕನಕದಾಸರ ಪದಗಳು (ಚರಿತ್ರೆ) ಸಹಿತವಾಗಿ ಎಮ್. ಜೆ. ಪ್ರಶಾಂತ ಅವರು ಸಂಗ್ರಹಿಸಿದ್ದಾರೆ. ಈ ಕೃತಿ ಪಿ. ಸಿ. ಶಾಬಾದಿಮಠ ಬುಕ್-ಡಿಪೋ, ಗದಗದಿಂದ ಪ್ರಕಟನೆಯಾಗಿದ್ದು ಕನಕದಾಸರ ಜೀವನ ಸಾಧನೆ, ಮೌಲ್ಯಗಳನ್ನು, ಚರಿತ್ರೆ ಮತ್ತು ಕೀರ್ತನೆಗಳನ್ನುಪ್ರಸ ಪ್ರಸ್ತುತ ಪಡಿಸುತ್ತದೆ

"ದಾಸಶ್ರೇಷ್ಠ ಸಂತ ಕನಕದಾಸರ ಜೀವನ ಚರಿತ್ರೆ ಹಾಗೂ ಪದಗಳು" ಹೆಸರಿನ ಸಂಗ್ರಹ ಕೃತಿಯನ್ನು ಆರ್. ಜಿ. ಸಿಯವರು ಬರೆದು ಸಿದ್ದೇಶ್ವರ ಪ್ರಕಾಶನ ಗದಗದಿಂದ ಪ್ರಕಟಿಸಿದ್ದಾರೆ. ಚಿದಂಬರ ಶ್ರೀಪಾದ ಕುಲಕರ್ಣಿ ಕನಕದಾಸರ ೧೧೮ ಕೀರ್ತನೆಗಳನ್ನು ಸಂಗ್ರಹಿಸಿದ್ದಾರೆ ಒಟ್ಟು ೯೦ ಪುಟಗಳ ಈ ಕೃತಿ ೨೦೧೨ ರಂದು ಪ್ರಕಟಣೆಯಾಯಿತು.

'ಕನಕದಾಸರ ಕೀರ್ತನೆಗಳು' ಎಂಬ ಶೀರ್ಷಿಕೆಯಲ್ಲಿ ಟಿ. ನಾರಾಯಣ ಅಯ್ಯಂಗಾರ ಅವರು ಕನಕದಾಸರ ಕೆಲವು ಕೀರ್ತನೆಗಳನ್ನು ಸಂಗ್ರಹಿಸಿ, ಬಳಪೇಟೆ ಪ್ರಕಾಶನ, ಬೆಂಗಳೂರಿನಿಂದ ೨೦೧೨ ರಲ್ಲಿ ಪ್ರಕಟಿಸಿದ್ದಾರೆ.

ಲೇಖನಗಳು:

ಕನಕದಾಸರು ತಮ್ಮ ಕೃತಿ ಮತ್ತು ಕಥನಗಳ ಮೂಲಕ ಇನ್ನೂ ಜೀವಂತವಾಗಿದ್ದಾರೆ. ಸಂತ ಕನಕದಾಸರ' ಬದುಕು ಬರಹ ಕುರಿತು ಹಲವಾರು ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾದುದ್ದನ್ನು ಸ್ಮರಿಸಬಹುದು ಅವು ಅಧ್ಯಯನಗಳಲ್ಲಿ ತುಂಬ ಮಹತ್ವವಾಗಿದೆ. ಇಂತಹ ಲೇಖಗಳ ಪರಿಚಯ ವಿವರಣೆ ಕೆಳಗಿನಂತಿದೆ.

ಪತ್ರಿಕೆಗಳಲ್ಲಿ ಬಂದಿರುವ ಲೇಖನಗಳು- ರಾಮಧಾನ್ಯದ ನೆಪದಲ್ಲಿ ಜಾತಿಯತೆಯನ್ನು ಟೀಕಿಸಿದ ಚಿಂತಕ ಎಂದು ಮೈಸೂರಿನಿಂದ ಧರಣಿದೇವಿ ಮಾಲಗತ್ತಿ ಲೇಖನ ಬರೆದಿದ್ದು ಇದು ಉದಯವಾಣಿ ಪತ್ರಿಕೆಯಲ್ಲಿ ೨೬-೧೧-೨೦೧೦ ರಲ್ಲಿ ಪ್ರಕಟಗೊಂಡಿದೆ. 'ಭಕ್ತ ಶಿರೋಮನಿ ಕನಕದಾಸರು' ಎಂಬ ಶೀರ್ಷಿಕೆಯಲ್ಲಿ ಎಸ್. ಲಕ್ಷ್ಮಣರಾವ್ ಬರೆದ ಲೇಖನ ಡಿಸೆಂಬರ ೨೦೦೧ ರಲ್ಲಿ ಜನಪದ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ೨೦೦೪ ರಲ್ಲಿ ಜನಪದ ಪತ್ರಿಕೆಯ ಪುಟ ೧೨ ರಲ್ಲಿ

'ದಾಸ ಸಾಹಿತ್ಯದ ಸೀಮಾ ಪುರುಷ' ಎಂ. ಎಂ. ಜೋಗಿನದ ಲೇಖನವನ್ನು ಪ್ರಕಟಿಸಲಾಗಿದೆ. ಇದರಲ್ಲಿ ಕನಕದಾಸರ ವ್ಯಕ್ತಿತ್ವದ ಅನಾವರಣ ಮಾಡಿರುವರು.

'ಕನಕದಾಸರ ಸಾಮಾಜಿಕ ಕಳಕಳಿ' ತರಂಗ ಪತ್ರಿಕೆಯಲ್ಲಿ ೨೮ನೇ ನವೆಂಬರ ೨೦೦೨ ರಲ್ಲಿ ಪ್ರಕಟಗೊಂಡಿದೆ. ಈ ಲೇಖನ ಎಸ್.ಆರ್. ಲೀಲಾ ಅವರದು ಸಮುದಾಯದಲ್ಲಿನ ಅನಾಚಾರ, ಮೂಢನಂಬಿಕೆ, ಅಸ್ಪ್ರಶ್ಯತೆಯನ್ನು ವಿರೋಧಿಸಿ ಸ್ವಸ್ತ ಸಮಾಜ ಕಟ್ಟುವ ಆಲೋಚನೆಗಳನ್ನು ಬರೆದಿರುವರು. "ದಾಸವರೇಣ್ಯ ಭಕ್ತ ಕನಕದಾಸ" ಎಂಬ ಶೀರ್ಷಿಕೆಯಲ್ಲಿ ಎಂ. ಜೈಕುಮಾರ ಅವರು ಬರೆದ ಲೇಖನವು ನವೆಂಬರ್ ೨೦೦೨ ಜನಪದ ಮಾಸಿಕದ ಪುಟ ೬ರಲ್ಲಿ ಪ್ರಕಟಗೊಂಡಿದೆ. "ತತ್ವ ಪದಗಳು ಧಾರ್ಮಿಕತೆಯ ನಡೆದಾರಿಗಳು" ಸ. ರಘುನಾಥ ಅವರು ಬರೆದ ಲೇಖನ ಕನಕದಾಸರ ಕೀರ್ತನೆ ಕುರಿತು ತಿಳಿಸುತ್ತದೆ. ೨೮-೧೧-೨೦೦೭ ರಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ.

'ಕನಕ ಬಿಟ್ಟು ಹರಿ ಹಿಡಿದ ದಾಸ' ಕೃತಿಯಲ್ಲಿ ಬಲ್ಲೇನಹಳ್ಳಿ ಮಂಜುನಾಥ ಅವರು ಬರೆದ ಲೇಖನ ವಿಜಯಕರ್ನಾಟಕದಲ್ಲಿ ೨೦೦೩ ರ ಅಕ್ಟೋಬರ ೩೧ ರಂದು ಪ್ರಕಟಗೊಂಡಿದೆ. 'ಹಾಲುಮತ ಅನರ್ಘ್ಯ ರತ್ನಗಳು' ಚಂದ್ರಕಾಂತ ಬಿಜ್ಜರಗಿ ಯವರ ಕೃತಿಯಲ್ಲಿ ಬೇರೆ ಸಂತರ ೨೨ ಲೇಖನಗಳು ಇವೆ. ಅದರಲ್ಲಿ ಸಂತ ಕನಕದಾಸ ಎಂಬ ಒಂದು ಲೇಖನವಿದ್ದು ೮೧ ಪುಟಗಳಲ್ಲಿರುವ ಕೃತಿಯನ್ನು ಕನಕ ಗುರುಪೀಠ ಕಾಗಿನೆಲೆಯಿಂದ ಪ್ರಕಟಿಸಲಾಗಿದೆ.

'ಕನ್ನಡ ಸಾಹಿತ್ಯದ ವಿಭಿನ್ನ ನೆಲೆಗಳು' ಎಂಬ ಅಶೋಕ ನರೋಡೆ ಸಂಪಾದಿಸಿದ ಈ ಕೃತಿಯಲ್ಲಿ 'ಕೀರ್ತನ ಸಾಹಿತ್ಯ : ಕನಕದಾಸ' ಎಂಬ ಲೇಖನವಿದೆ. ಕೀರ್ತನೆಯ ಭಾಷೆ, ಶೈಲಿ ಕುರಿತು ವಿವರಿಸಿದ್ದಾರೆ. 'ಭಾರತದ ಹರಿದಾಸರು' ಎಂಬ ಶೀರ್ಷಿಕೆಯ ಸಂಪಾದನ ಕೃತಿಯಲ್ಲಿ ಹರಿದಾಸರ ಕುರಿತು ಲೇಖನಗಳಿದ್ದು ಅದರಲ್ಲಿ 'ಕನಕದಾಸರು' ಎಂಬ ಲೇಖನವಿದೆ. ಈ ಕೃತಿಯನ್ನು ಡಾ. ಬಿ. ಜೆ. ರಂಗನಾಥ ಸಂಪಾದಿಸಿದ. ಈ ಕೃತಿ ನವಭಾರತಿ ಪ್ರಕಾಶನದಿಂದ ೨೦೧೦ ರಲ್ಲಿ ಪ್ರಕಟವಾಗಿದೆ.

೨.೫ ಕನಕದಾಸರ ಕುರಿತು ನಾಟಕಗಳು

'ಕನಕಣ್ಣ' ಇದು ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಾಂಗಾರ) ರವರು ಬರೆದ ನಾಟಕ. ೬೦ ಪುಟಗಳಲ್ಲಿ ಮೈದಾಳಿದೆ ಈ ನಾಟಕವು ಮಾಸ್ತಿ ಜೀವನ ಕಾರ್ಯಾಲಯ ಟ್ರಸ್ಟನಿಂದ ೧೯೬೫ ರಲ್ಲಿ ಪ್ರಕಟಣೆಗೊಂಡಿದೆ. ಪುರಂದರ ದಾಸರು ಕನಕದಾಸರು ಹರಿದಾಸ ಇತಿಹಾಸದಲ್ಲಿ ಕನಕದಾಸರ ಜೀವನದುದ್ದಕ್ಕೂ ನಡೆದ ಘಟನೆಗಳ ಮೇಲೆ ಇದು ಬೆಳಕು ಚೆಲ್ಲುತ್ತದೆ.

'ಕನಕದಾಸ' ಎಂಬ ಶೀರ್ಷಿಕೆಯಲ್ಲಿ ಜೋಳದರಾಶಿ ದೊಡ್ಡನಗೌಡರು ರಚಿಸಿದ ಈ ನಾಟಕವು ಬಳ್ಳಾರಿಯ ಟಿ. ರಾಘವ ಮಾರ್ಗದರ್ಶನದಲ್ಲಿ ರಚನೆಗೊಂಡಿದೆ. ಈ ನಾಟಕಕ್ಕೆ ನಾಗೇಶ ಶಾಸ್ತ್ರೀಗಳು ಹಾಡು ಬರೆದು ಕೊಟ್ಟಿರುವರು ಇದು ೧೯೪೦ ರಲ್ಲಿ ಪ್ರಕಟಗೊಂಡಿತು.

ದೊಡ್ಡನಗೌಡರು ರಚಿಸಿದ ಈ ನಾಟಕವು ವಿಭಿನ್ನ ನೆಲೆಗಟ್ಟಿನ ಮೇಲೆ ರಚನೆಯಾಗಿದೆ. ಪೂರ್ವಾರ್ಧದಲ್ಲಿ ಕನಕನಾಯಕ, ಮಾಮೂಲಿ ರಾಜನಾಗಿರದೆ ಮಾನವೀಯ ಗುಣಗಳನ್ನೊಳಗೊಂಡಿರುವ ಅಹಿಂಸಾವಾದಿಯಾಗಿದ್ದಾನೆ. ನಿಧಿ ದೊರೆತಾಗ ಕುರಿಬಲಿಯನ್ನು ವಿರೋಧಿಸುತ್ತಾನೆ. ನಿಧಿಯನ್ನು ಕೋಟೆ ದುರಸ್ಥಿಗೆ ಒಪ್ಪದೆ ಬಡವರ ಹಸಿವಿಗಾಗಿ ವಿನಿಯೋಗಿಸುತ್ತಾನೆ. ಕನಕರ ದೃಷ್ಟಿಯಲ್ಲಿ ಯುದ್ಧವೆಂದರೆ ಕೊಲೆಗಡುಕರು ನಡೆಸುವ ಉದ್ದಟತನವಾಗಿದೆ. ಇಲ್ಲಿ ಭೀಮ–ಭರಮ ಭೀಮಾಚಾರ್ಯ ಗೋವಿಂದಾಚಾರ್ಯ ಜೋಡಿ ಪಾತ್ರಗಳನ್ನು ಇಟ್ಟು ಕನಕನ ಇಡಿ ಜೀವನವನ್ನು ಮೌಲಿಕವಾಗಿ ನೋಡಿದ್ದಾರೆ.

ಸುಧಾಕರ 'ಕನಕ ರೂಪಕ' ಕೃತಿಯು ನಾಟಕ ರೂಪದಲ್ಲಿ ಕಾವ್ಯಶ್ರೀ ಪ್ರಕಾಶನ ಮೈಸೂರಿನಿಂದ ೨೦೧೦ರಲ್ಲಿ ಪ್ರಕಟಣೆಯಾಗಿದೆ. ಹತ್ತು ಅಂಕಗಳಲ್ಲಿ ಈ ನಾಟಕವನ್ನು ರಚಿಸಿದ್ದಾರೆ ಕನಕದಾಸರ ಕೃತಿಗಳು, ಕೀರ್ತನೆ, ಮುಂಡಿಗೆ, ಸುಳಾದಿ, ಉಗಾಭೋಗಗಳು, ಉದಯರಾಗಗಳನ್ನು ಬಳಸಿಕೊಂಡು ರಚಿಸಲಾಗಿದ್ದು ಕೃತಿಯ ಪ್ರಾರಂಭದಲ್ಲಿ ಬರುವ ದರ್ಶನ, ಸ್ಪರ್ಶನ, ಶ್ರಾವಣ, ಮನನ ಎಂಬ ಮಾತುಗಳು ಈ ಕೃತಿಯನ್ನು ದೃಶ್ಯ, ಶ್ರವ್ಯ, ಸ್ಪರ್ಶ್ಯ, ಚಿತ್ತೈಕ್ಯ ಸ್ಥರಗಳಲ್ಲಿ ಆಸ್ವಾದಿಸಬೇಕು ಎಂಬ ಆಶಯವನ್ನು ಒಳಗೊಂಡಿದೆ. ಹೊಸ ರೀತಿಯ ಅನುಸಂಧಾನಕ್ಕೆ ಅಣಿಗೊಳಿಸಿದ್ದಾರೆ ಬಹುತೇಕ ಜಾನಪದ ಸೊಗಡು ನಾಟಕದುದ್ದಕ್ಕೂ ತುಂಬಿಕೊಂಡಿದೆ.

ಸಂಸ್ಕೃತಿಯ ಕೆನೆ–ತೆನೆ ಸಾಮಾಜಿಕ ಪ್ರಜ್ಞೆಯ ಬಿತ್ತನೆ, ವೈಚಾರಿಕ ಪ್ರಜ್ಞೆಯ ಹರ್ತನೆ, ಅಧ್ಯಾತ್ಮಿಕ ಪ್ರಜ್ಞೆಯ ಬಕ್ಕನೆ ಹಾಗೂ ರಾಜಕೀಯ ಪ್ರಜ್ಞೆಯ ರಾಶಿ ಪೂಜೆ– ಕೃಷಿ ಮೂಲದವುಗಳಾಗಿವೆ ಎಂಬುದನ್ನು ತುಂಬಾ ಸಾಮಾಜಿಕ ಕಳಕಳಿಯನ್ನು ಹೊಂದಿದ ಸುಧಾಕರು ಚೆನ್ನಾಗಿ ನಾಟಕವನ್ನು ಕಟ್ಟಿಕೊಟ್ಟಿದ್ದಾರೆ.

ಕಿ.ರಂ. ನಾಗರಾಜ 'ಕಾಲಜ್ಞಾನಿ ಕನಕ' ನಾಟಕ ರಚಿಸಿದ್ದಾರೆ. ಕನಕದಾಸರಲ್ಲಿರುವ ಭಕ್ತಿ, ದಾಸತ್ವದ ಹಿನ್ನೆಲೆ, ಸಾಮಾಜಿಕ ಜೀವನದ ವಾಸ್ತವಿಕತೆ, ಕುರಿತು ಇರುವ ನಾಟಕವನ್ನು ಅಭಿನವ ಪ್ರಕಾಶನ ಬೆಂಗಳೂರು ೨೦೧೩ರಲ್ಲಿ ಪ್ರಕಟಸಿದೆ.

ರಾಮಕೃಷ್ಣ ಮರಾಠೆ ಅವರು 'ರಾಮಧಾನ್ಯ' ಕನಕದಾಸರ 'ರಾಮಧಾನ್ಯ ಚರಿತೆ' ಆಧಾರಿತ ನಾಟಕವಾಗಿದ್ದು ೩೪ ಪುಟಗಳಿಂದ ಕೂಡಿದ ನಾಟಕವು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಿಂದ ೨೦೧೦ ರಲ್ಲಿ ಪ್ರಕಟಗೊಂಡಿದೆ. ಇದರಲ್ಲಿ ಸತ್ಯ, ಶಿವ ಮತ್ತು ಸುಂದರಗಳ ಅರಿವಾಗಬೇಕಾದಲ್ಲಿ ಆಸ್ತಿತ್ವ ಅನುಸಂದಾನ ಮುಖ್ಯ ಕನಕದಾಸರ ಕಾಲ ನಾಲ್ಕು ನೂರು ವರ್ಷಗಳ ಹಿಂದಿನದು. ಭಕ್ತ ಕವಿ ಕನಕದಾಸರು ಅನುಭವಿಸಿದ ಕಾಲ ಎಂಥದೆಂದು ಊಹಿಸಬಹುದಾಗಿದೆ. ದಾಸ ಶ್ರೇಷ್ಠರು ಸ್ವತ: ಇಂತಹ ಸಮಸ್ಯೆಗೆ ಎದುರಾಗಿದ್ದರು. ಭಕ್ತಿ, ಜ್ಞಾನ, ವೈರಾಗ್ಯ ಯಾವುದರಲ್ಲೂ ಕಮ್ಮಿಯಾಗಿರದ ಕನಕದಾಸರು ಇಂತಹ ಸಮಸ್ಯೆಗೆ ಎದುರಾಗಿದ್ದಿರಬೇಕು. ಇದನ್ನು ನಿಮಿತ್ಯವಾಗಿಟ್ಟುಕೊಂಡು ಈ ಕೃತಿಯನ್ನು ರಚಿಸಲಾಗಿದೆ.

'ರಾಮಧಾನ್ಯ ಚರಿತೆ' ಶೀರ್ಷಿಕೆಯಲ್ಲಿ ಕನಕದಾಸರ ರಾಮಧಾನ್ಯ ಚರಿತೆ ಕಾವ್ಯವನ್ನು ನಾಟಕಕ್ಕೆ ಅಂಬಾತನಯ ಮುದ್ರಾಡಿಯವರು ರೂಪಾಂತರಿಸಿದ್ದಾರೆ. ಹಾಗೂ ನಳಚರಿತೆ ಕೃತಿಯನ್ನು ಕಾವ್ಯದಿಂದ ಯಕ್ಷಗಾನಕ್ಕೆ ಕನಕದಾಸರ ಈ ಮೂಲ ಕಾವ್ಯವನ್ನು ಡಿ. ಸದಾಶಿವಭಟ್ಟರು ರೂಪಾಂತರಿಸಿದ್ದಾರೆ. ನಳಚರಿತೆಯನ್ನು ಯಥಾರೀತಿಯಿಂದ ತಂದು ಯಕ್ಷಗಾನಕ್ಕೆ ರೂಪಾಂತರಿಸಿದ್ದಾರೆ. ಈ ಎರಡೂ ಕೃತಿಗಳನ್ನು ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಪೀಠ ಉಡುಪಿಯಿಂದ ೨೦೧೧ರಲ್ಲಿ ಪ್ರಕಟಿಸಲಾಗಿದೆ.

ಕನಕ ಅಧ್ಯಯನ ಪೀಠದ ಶಶಿಧರ ನರೇಂದ್ರ 'ಎಲ್ಲಿರುವನೋ ರಂಗ' ಕನಕದಾಸರ ಕುರಿತು ೬೨ ಪುಟಗಳಿರುವ ನಾಟಕವನ್ನು ಬರೆದಿರುವರು ೨೦೧೨ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಧಾರವಾಡದ ಪ್ರಸಾರಾಂಗದಿಂದ ಪ್ರಕಟಣೆಯಾಗಿದೆ.

ಎಂ. ಫಿಲ್ (ಕಿರು ಪ್ರಬಂಧ)

೧೯೮೯ ಕೆ. ಎಚ್. ಮುಕ್ಕಣ್ಣವರ ಅವರ "ಮೋಹನ ತರಂಗಿಣಿ ಒಂದು ಅಧ್ಯಯನ" ಎಂಬ ಕೃತಿಯಲ್ಲಿ ಕೇವಲ ಕನಕದಾಸರ ಒಂದು ಕೃತಿಯನ್ನು ತಮ್ಮ ಎಂ. ಫಿಲ್ ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಾದರ ಪಡಿಸಿದ ಕಿರು ಪ್ರಬಂಧವಾಗಿದೆ.

ಹಂಪಿ ವಿಶ್ವವಿದ್ಯಾಲಯದಿಂದ ಡಾ. ಬಸವರಾಜ ಕಲ್ಗುಡಿಯವರ ಮಾರ್ಗದರ್ಶನಲ್ಲಿ ವಿರೇಂದ್ರ ಜಿ. ಕೆ. ಯವರು 'ಕನಕದಾಸರ ರಾಮಧಾನ್ಯ ಚರಿತೆ-ಪುರಾಣ ಮತ್ತು ಪ್ರಸ್ತುತತೆ' ಕುರಿತು ಕಿರು ಪ್ರಬಂಧವನ್ನು ಸಲ್ಲಿಸಿದ್ದಾರೆ.

ಹಂಪಿ ವಿಶ್ವವಿದ್ಯಾಲಯದಲ್ಲಿ ಡಾ. ಎಸ್. ಶಾಂಭವಿ ಅವರ ಮಾರ್ಗದರ್ಶನದಲ್ಲಿ ಕರುಣಾರಾವ್ ಅವರು ಸಂಶೋಧಿಸಿದ ಕನಕದಾಸರ 'ಮೋಹನ ತರಂಗಿಣಿ, ಯಲ್ಲಿ ಶೃಂಗಾರ, ಶೌರ್ಯ, ಭಕ್ತಿ ಮತ್ತು ಸಮಕಾಲೀನ ಚಿತ್ರಣವನ್ನು ಕಿರು ಪ್ರಬಂಧ ಸಾದರಪಡಿಸುತ್ತದೆ.

ಮಹಾಪ್ರಬಂಧಗಳು (Ph.d)

ಕನ್ನಡ ಸಾಹಿತ್ಯ ಸಂಶೋಧನೆಯು ಇಂದು ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಹೊಸ ಮಾನದಂಡಗಳು ರೂಪಗೊಳ್ಳುತ್ತಿವೆ. ಸಾಹಿತ್ಯವನ್ನು ಕೇವಲ ಸಾಹಿತ್ಯಕ ಮಾನದಂಡಗಳಿಂದ ಅರ್ಥೈಸಬೇಕೆಂಬ ಮಾತು ಹಳೆಯದಾಗಿದೆ. ಸಾಹಿತ್ಯ ಕೃತಿ ಒಂದು ನಿರ್ದಿಷ್ಟ ಸಾಮಾಜಿಕ ಪರಿಸರದಲ್ಲಿ ಮೈದಾಳುವುದರಿಂದ ಸಾಹಿತ್ಯದ ವಿವಿಧ ಆಯಾಮಗಳಲ್ಲಿ ಅಭ್ಯಾಸ ಮಾಡುವ ಪ್ರವೃತ್ತಿ ಇಂದು ಹೆಚ್ಚಿಗೆ ಕಂಡು ಬರುತ್ತದೆ. ಕೆಲವೊಂದು ಶಿಸ್ತು ಹಾಗೂ ಚಿಂತನಾ ನೆಲೆಗಳ, ವಿವಿಧ ಆಯಾಮಗಳ ಮೂಲಕ ಸಾಹಿತ್ಯವನ್ನು ಅಭ್ಯಾಸ ಮಾಡುವುದರಿಂದ ಸಾಮಾಜಿಕ ಆಗು-ಹೋಗುಗಳಲ್ಲಿ ಸಾಹಿತ್ಯದ ಪಾತ್ರವೇನೆಂಬುದನ್ನು ಗುರುತಿಸಲು ಸಾಧ್ಯವಾಗುತ್ತದೆ.

ಹೊಸ ಹೊಸ ವಿಷಯಗಳ ಮೇಲೆ ಇಂದು ಸಂಶೋಧನೆ ನಡೆಯುತ್ತಿದೆ. ಅದರಲ್ಲಿ ಕನಕದಾಸರ ಮೇಲೆ ಅವರ ಸಾಹಿತ್ಯದ ಕುರಿತು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಂಶೋಧನೆ ಚರ್ಚೆ, ವಿಚಾರಸಂಕಿರಣ, ಅಧ್ಯಯನಗಳು ನಡೆಯುತ್ತಿವೆ.

"ಕನಕದಾಸರು ಮತ್ತು ಅವರ ಲಘು ಕೃತಿಗಳು" ಎಂಬ ವಿಷಯದ ಮಹಾಪ್ರಬಂಧವನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎ.ಎಸ್. ಪುರೋಹಿತ ಅವರು ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ್ದಾರೆ. ಈ ಪ್ರಬಂಧದಲ್ಲಿ ಜೀವನ, ಮತ ವಿಚಾರ, ಕಾಲ ಕೃತಿ ವಿಚಾರ, ಪಾತ್ರ, ವರ್ಣನೆ ಶೈಲಿ ಕನ್ನಡ ಸಾಹಿತ್ಯದಲ್ಲಿ ಕನಕರ ಸ್ಥಾನಮಾನಗಳನ್ನು ಕುರಿತು ವಿವರಿಸಿ, ಡಾಕ್ಟರೇಟ ಪದವಿಯನ್ನು ಪಡೆದಿದ್ದಾರೆ. ಅಲ್ಲದೆ ೧೯೮೦ ರಲ್ಲಿ 'ಕನ್ನಡದಲ್ಲಿ ನಳಚರಿತೆಗಳು' ಎಂಬ ವಿಷಯದಲ್ಲಿ ಪ್ರಬಂಧ ಮಂಡಿಸಿ ಮೈಸೂರ ವಿಶ್ವವಿದ್ಯಾಲಯದಿಂದ ಮಲ್ಲಿಕಾರ್ಜುನ ಭಟ್ ಎಸ್. ಬಿ. ಎನ್ನುವವರು ಡಾಕ್ಟರೇಟ ಪದವಿ ಪಡೆದಿದ್ದಾರೆ.

'ಕನಕದಾಸರ ಕೀರ್ತನೆಗಳು ಮತ್ತು ಲಘು ಕೃತಿಗಳು' ಎಂಬ ಶೀರ್ಷಿಕೆಯಲ್ಲಿ ಆರ್.ಎಚ್. ತಳವಾರ ಅವರು ಡಾ. ಸುಲೋಚನಮ್ಮ ಅವರ ಮಾರ್ಗದರ್ಶನದಲ್ಲಿ ೨೦೦೨ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧವಾಗಿದೆ. ಇದರಲ್ಲಿ ಹಿನ್ನೆಲೆ, ಕೀರ್ತನೆ ಮತ್ತು ಲಘು ಕೃತಿಗಳು ಸ್ವರೂಪ ಸಂಸ್ಕಾರ, ಕನಕದಾಸರ ಕೃತಿಗಳ ಸಾಹಿತ್ಯದ ವಿವೇಚನೆ ಭಾಗವಾಗಿ ಭಾಷೆ, ವಸ್ತು ಶೈಲಿ ರಸ, ಛಂದಸ್ಸು ಅಲಂಕಾರ, ಸಾಮಾಜಿಕ, ನೈತಿಕ ಧಾರ್ಮಿಕ ನೆಲೆಗಟ್ಟಿನಲ್ಲಿ ತಾತ್ವಿಕ ವಿಷಯಗಳನ್ನೊಳಗೊಂಡ ೮ ಅಧ್ಯಾಯಗಳ ವ್ಯಾಪ್ತಿಯನ್ನು ಒಳಗೊಂಡಿದೆ. ಕುವೆಂಪು ವಿಶ್ವವಿದ್ಯಾಲಯದಲ್ಲಿ 'ಕನಕ ಪುರಂದರ ತೌಲನಿಕ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ವೈ. ಎಸ್. ಶಿವಪ್ರಸಾದ್ ಅವರು ೨೦೦೬ ರಲ್ಲಿ ಡಾಕ್ಟರೇಟ ಪದವಿಯನ್ನು ಪಡೆದುಕೊಂಡಿದ್ದಾರೆ. ಇದರಲ್ಲಿ ಹರಿದಾಸ ಸಾಹಿತ್ಯ ಹಿನ್ನೆಲೆ, ಉಗಮ ಮತ್ತು ಕನಕ ಪುರಂದರ ಜೀವನ, ಪರಿಸರ, ತೌಲನಿಕ ಅಧ್ಯಯನ ಸಾಮಾಜಿಕ ತಾತ್ವಿಕ ಆಯಾಮಗಳು ಕನಕದಾಸರ ಕೃತಿಗಳ ವಿವೇಚನೆ ದಾಸಕೂಟ–ವ್ಯಾಸಕೂಟ ಪರಂಪರೆಯ ಕುರಿತು ಹೇಳಿರುವದನ್ನು ಕಾಣುತ್ತೇವೆ.

'ಕನಕದಾಸರ ಕೃತಿಗಳು: ಜಾನಪದೀಯ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಹಜರತ್‌ಸಾಬ ನದಾಫ ಅವರು ಪ್ರಬಂಧ ಮಂಡಿಸಿದ್ದಾರೆ. ಈ ಪ್ರಬಂಧವು ಮೈಸೂರಿನ ಸಿರಾ ಪಬ್ಲಿಷಿಂಗ್ ಹೌಸ್‌ನಿಂದ ಪ್ರಕಟಗೊಂಡಿದ್ದು ೩೦೮ ಪುಟಗಳ ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಅದರಲ್ಲಿ ಕನ್ನಡ ಸಾಹಿತ್ಯ ಮತ್ತು ಜಾನಪದ : ಅಂತರ್ ಸಂಬಂಧ, ಕಾಲ, ಮತ, ಕೃತಿಗಳ, ವಾಚಿಕ ಮತ್ತು ಭೌತಿಕ ಕ್ರಿಯಾ ಜಾನಪದ, ಕನಕದಾಸರ ಕೃತಿಗಳ ಭಾಷಾ ಶೈಲಿ, ಜೀವನದರ್ಶನ ಕುರಿತು ಉತ್ತಮವಾದ ಸಂಶೋಧನಾ ಕೃತಿಯಾಗಿ ಮೂಡಿಬಂದಿದೆ.

೨೦೦೮ ರಲ್ಲಿ 'ಕನಕದಾಸರ ಕೃತಿಗಳ ಒಳನೋಟಗಳು: ಒಂದು ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಜಗನ್ನಾಥ ಗೇಣ್ಣನ್ನವರ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಹಾಪ್ರಬಂಧವನ್ನು

ಸಾದರ ಪಡಿಸಿದ್ದಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಸಂಸ್ಕಾರ ಜಾತಿ, ಮೈಲಿಗೆ ಮದುವೆ ಸಂಪ್ರದಾಯಿಕ ಅಂಶಗಳು ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ ರಾಜ್ಯ, ಕೋಟೆ ಕೊತ್ತಲ, ಅರಸ, ಕೈಗಾರಿಕೆ, ನಾಣ್ಯ, ಧಾರ್ಮಿಕ ವ್ಯವಸ್ಥೆ ಕಲೆ, ವೈಚಾರಿಕತೆ, ವೈಜ್ಞಾನಿಕತೆ ಕುರಿತು ಸುದೀರ್ಘವಾದ ಚರ್ಚೆ ಆಳವಾದ ಅಧ್ಯಯನ ಮಾಡಿರುವರು.

'ಕನಕದಾಸರ ಸಾಮಾಜಿಕ ಚಿಂತನೆಯ ನೆಲೆ ಮತ್ತು ದರ್ಶನ' ಆರ್. ವೈ. ಅಚನೂರ ಅವರು ೨೦೦೯ ರಲ್ಲಿ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಿಂದ ಡಾಕ್ಟರೇಟ ಪದವಿ ಪಡೆದವರಾಗಿದ್ದಾರೆ. ಅದರಲ್ಲಿ ಕನಕದಾಸರ ಸಾಮಾಜಿಕ ಚಿಂತನೆಯಲ್ಲಿ ಅಸ್ಪೃಶ್ಯತೆ, ಜಾತೀಯತೆ ಮೌಢ್ಯ ಆಚರಣೆ ಮತ್ತು ಸಂಪ್ರದಾಯ ಮೌಲ್ಯಪರ ಚಿಂತನೆಯಾದ ಭಕ್ತಿ, ದರ್ಶನ ಮತ್ತು ಅನುಭಾವ, ವೈರಾಗ್ಯ ಸ್ತ್ರೀಪರ ನಿಲುವು ಸಮಕಾಲಿನ ಸಮಸ್ಯೆಗಳಾದ ಧರ್ಮ-ಆಚರಣೆ ಪ್ರಭುತ್ವದ ಕುರಿತು ಮುಖಾಮುಖಿಯಾಗಿ ಚಿಂತನೆ ಮಾಡಿ ಜಾನಪದ ಸಾಹಿತ್ಯ ಮತ್ತು ಭಾಷೆ ಕುರಿತು ಇಲ್ಲಿ ಸಂಶೋಧನೆ ಮಾಡಿರುವುದನ್ನು ಕಾಣುತ್ತೇವೆ.

"ಕನ್ನಡ ದಾಸ ಸಾಹಿತ್ಯ ಮತ್ತು ಸಾಂಸ್ಕೃತಿಕ ಪಲ್ಲಟ" ಎನ್ನುವ ಶೀರ್ಷಿಕೆಯಲ್ಲಿ ಶ್ರೀಧರ ಪಿಸ್ಸೆಯವರು ೨೦೦೮ ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಹಂಪಿ ತಮ್ಮ ಪ್ರಬಂಧವನ್ನು ಸಾದರಪಡಿಸಿದ್ದಾರೆ. ಈ ಸಂಶೋಧನಾ ಕೃತಿಯನ್ನು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಿದ್ದು ಒಟ್ಟು ೨೪೬ ಪುಟಗಳಿಂದ ಕೂಡಿದ್ದು ೨೦೦೮ ರಲ್ಲಿ ಪ್ರಕಟನೆಯಾಗಿದೆ. ಇದರಲ್ಲಿ ಒಟ್ಟು ಮೂರು ಅಧ್ಯಾಯಗಳಿದ್ದು ಸಾಂಸ್ಕೃತಿಕ ಪಲ್ಲಟ, ಕುಲದ ನೆಲೆ, ಮುಂತಾದ ವಿಷಯಗಳ ಕುರಿತು ಸಂಶೋಧನೆ ಮಾಡಿರುತ್ತಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸುರೇಶರವರು 'ಕನಕದಾಸರು : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಡಾ. ಅನಂತ ಪದ್ಮನಾಮ ಅವರ ಮಾರ್ಗದರ್ಶನದಲ್ಲಿ ಪ್ರಬಂಧವನ್ನು ಮಂಡಿಸಿದ್ದಾರೆ. ಅದರಲ್ಲಿ ಕನಕದಾಸರ ಕಾಲ, ಪರಂಪರೆ, ಸಾಮಾಜಿಕ, ಧಾರ್ಮಿಕ ಸಂಸ್ಕೃತಿಗಳ ಸ್ಥಿತಿಗತಿ. ಕನಕದಾಸರ ಕೃತಿ ಹಾಗೂ ಕೀರ್ತನೆಗಳ ಸಾಂಸ್ಕೃತಿಕವಾದ ಭಕ್ತಿ, ಆತ್ಮಶೋಧನೆ, ಪುರಾಣ ಪ್ರಜ್ಞೆ, ಸಾಹಿತ್ಯ ಮತ್ತು ಜನಪದೀಯ ಅಂಶಗಳು, ಕನಕರು ಚಿತ್ರಿಸಿದ ಜನಜೀವನ, ಅವರ ರಚನೆ ಮುಂಡಿಗೆಗಳ ಕುರಿತು ಸಂಶೋಧಿಸಲಾಗಿದೆ.

'ವ್ಯಾಸಕೂಟ ಮತ್ತು ದಾಸಕೂಟಃ ಒಂದು ಅಧ್ಯಯನ' ಎಂಬ ಶೀರ್ಷಿಕೆಯ ಎಚ್. ಅನುಸೂಯಾದೇವಿ ಸೂರ್ಯನಾರಾಯಣ ಅವರು ಮಲ್ಲೇಪುರಂ ಜಿ. ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ. ಅದರಲ್ಲಿ ಭಕ್ತಿ ತತ್ವದ ಹಿನ್ನೆಲೆ ದಾಸ ಮತ್ತು ವ್ಯಾಸ ಕೂಟದ ಹುಟ್ಟು ಬೆಳವಣಿಗೆ ವ್ಯಾಖ್ಯಾನ ತಾತ್ವಿಕ ಪರಿಕಲ್ಪನೆ ಹಾಗೂ ದಾಸಕೂಟ ಮತ್ತು ವ್ಯಾಸಕೂಟವನ್ನು ತೌಲನಿಕವಾಗಿ ನೋಡಿ ಅದರ ಸಾಂಸ್ಕೃತಿಕ ಭಿನ್ನತೆ ಕುರಿತು, ಭೌಗೋಳಿಕ ಹಿನ್ನಲೆಯಲ್ಲಿ ಸಾಂಸ್ಕೃತಿಕವಾದ ಅಧ್ಯಯನವನ್ನು ಮಾಡಿರುವರು.

ಹೀಗೆ ವರ್ಗೀಕರಿಸಿಕೊಂಡು ಸಮೀಕ್ಷೆಗೆ ಒಳಪಡಿಸಿರುವ ಎಲ್ಲಾ ಕೃತಿಗಳನ್ನು ತಾತ್ವಿಕವಾಗಿ ಸಮೀಕ್ಷೆಮಾಡಿದಾಗ ತಿಳಿದು ಬರುವ ಮುಖ್ಯ ಅಂಶವೆನೆಂದರೆ ಇವು ಹಲವಾರು ದೃಷ್ಟಿಕೋನಗಳಲ್ಲಿ ರಚಿತವಾಗಿರುವು.

೧೨ನೇ ಶತಮಾನದ ವಚನಕಾರರ ತರುವಾಯ ೧೬ನೇಶತಮಾನದಲ್ಲಿ ಹರಿದಾಸರ ಪರಂಪರೆ ಉದಾತ್ತವಾದ ವಿಚಾರಗಳಿಂದ ಕೂಡಿದ್ದು, ಸಮಾಜ ಸ್ವಾಸ್ಥ್ಯ, ಜಾತ್ಯಾತೀತ ಮೌಲ್ಯಗಳನ್ನು ಸಮಾಜದಲ್ಲಿ ತರುವುದರ ಮೂಲಕ ಹರಿದಾಸ ಚಳುವಳಿ ಪ್ರಮುಖ ಪಾತ್ರ ವಹಿಸಿತ್ತು. ಕರ್ನಾಟಕದ ಹರಿದಾಸರು, ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಆಶಯಗಳಿಗೆ ಸ್ಪಂದಿಸುತ್ತಲೆ ಅದರ ಪ್ರೋತ್ಸಾಹ ಪ್ರೆರಣೆಗಳನ್ನು ಮೈಗೂಂಡಿಸಿಕೊಂಡವರು ತಮ್ಮ ಧಾರ್ಮಿಕ ಸಾಧನೆಗೆ ಸಂಗೀತ ಸಾಹಿತ್ಯಗಳನ್ನು ಸಮರ್ಥವಾಗಿ ಬೆಳಸಿಕೊಂಡು ಆಧ್ಯಾತ್ಮಿಕ ಮೌಲ್ಯಗಳನ್ನು ರೂಢಿಸಿಕೊಂಡು ದಾಸ ಸಾಹಿತ್ಯವನ್ನು ಬೆಳೆಸಿದವರು ಪುರೋಹಿತ ಪಂಡಿತಶಾಹಿವರ್ಗದವರು ಕನ್ನಡ ಭಾಷೆ ಎಂದರೆ ಮೈಲಿಗೆ ಎಂದು ಮೂಗುಮುರಿಯುತ್ತಿದ್ದ ಕಾಲದಲ್ಲಿ ಸಂಸ್ಕೃತ ಬಿಟ್ಟು ಬೇರೆ ಭಾಷೆ ಉಪಯೋಗಿಸುವುದು ಊಹಿಸಲು ಸಾಧ್ಯವಿರದ ಕಾಲದಲ್ಲಿ ಕನಕದಾಸರು 'ಮೋಹನತರಂಗಿಣಿ' 'ನಳಚರಿತೆ' 'ರಾಮದಾನ್ಯ ಚರಿತೆ' 'ಹರಿಭಕ್ತಸಾರ" 'ನೃಂಸಿಹಸ್ತವ' ಕೀರ್ತನೆ, ಮುಂಡಿಗೆ, ಊಗಾಭೋಗಗಳನ್ನು ಕನ್ನಡದಲ್ಲಿ ರಚಿಸುವುದರ ಮೂಲಕ ಜೀವನಪರ, ಜನಪರ ಮೌಲ್ಯಗಳನ್ನು ಕಟ್ಟಿಕೊಟ್ಟರು

ಈ ಕನಕದಾಸರ ಕೃತಿಗಳ ಮೇಲೆ ವಿಶಿಷ್ಟ ರೀತಿಯಲ್ಲಿ ವಿವಿಧ ದೃಷ್ಟಿಕೋನಗಳಲ್ಲಿ ಅಧ್ಯಯನಗಳಾಗಿವೆ. ಆ ಎಲ್ಲಾ ಅಧ್ಯಯನಗಳನ್ನು ಸಂಗ್ರಹಿಸಿ ವರ್ಗಿಕರಣ ಮಾಡಲಾಯಿತು, ಅದರಲ್ಲಿ ವಿಮರ್ಶೆ ಕೃತಿಗಳು, ಸಂಪಾದನಾಕೃತಿಗಳು, ಸಂಗ್ರಹಗಳು, ಲೇಖನಗಳು, ನಾಟಕಗಳು, ಚಲನಚಿತ್ರಗಳು, ಕಿರು, ಮಹಾಪ್ರಬಂಧಗಳಾಗಿ ವಿಭಾಗಿಸಿ ಅಧ್ಯಯನಗಳ ತಾತ್ವಿಕ ಸಮೀಕ್ಷೆ ಮಾಡಲಾಯಿತು. ಕೆಲವು ದೃಷಿಕೋನಗಳಲ್ಲಿ ಮಾತ್ರ ಅಧ್ಯಯನಗಳಾಗಿವೆ. ಅವರ ಸಾಹಿತ್ಯ ಮತ್ತು ಜೀವನದ ಮೇಲೆ ಬಂದಿರುವ ಸಮಗ್ರ ವಿಮರ್ಶೆಗಳ ಕುರಿತು ಯಾವುದೇ ಅಧ್ಯಯನಗಳಾಗಿರುವುದಿಲ್ಲ ಕಾರಣ ನಾನು ಆ ಎಲ್ಲಾ ವಿಮರ್ಶೆಗಳು ಯಾವ ಯಾವ ದೃಷ್ಟಿಕೋನ, ಆಯಾಮಗಳ ಮೇಲೆ ಮಾಡಲಾಗಿದೆ ಏಕೆ? ಹೇಗೆ? ಎಂದು ಪ್ರಶ್ನೆಗಳನ್ನು ಹಾಕಿಕೊಂಡು ಪ್ರಮುಖವಾಗಿರುವ ಪ್ರವೃತ್ತಿಗಳನ್ನು ಗುರುತಿಸಿ ಸಂಶೋಧನೆಯಲ್ಲಿ ತಾತ್ವಿಕವಾಗಿರುವ ಎಲ್ಲಾ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದೇನೆ. ವಿಸ್ತರಿಸಿದ್ದೇನೆ. ಇಂದಿನ ಅಧ್ಯಯನಗಳು ಬಹುಮುಖಿಯಾಗಿ, ಭಿನ್ನಮಾದರಿಯಾಗಿ, ದಾಖಲೆಗೊಂಡಿರುವದರಿಂದ, ಬರವಣಿಗೆಯಾಗಿರುವುದರಿಂದ ಆ ದೃಷ್ಟಿಕೋನಗಳ ನೆಲೆಗಳ ಆಳವನ್ನು, ಇತಿಮಿತಿಗಳ ಆಧಾರದ ಮೇಲೆ ತಾತ್ವಿಕ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಮೂರು

ಕನಕದಾಸರ ಜೀವನ, ಕಾಲ, ಕುಲಸಂಬಂಧಿ ಅಧ್ಯಯನಗಳ ಪ್ರವೃತ್ತಿಯ ವೈಧಾನಿಕತೆ

೩.೧ ಕನಕದಾಸರ ಜೀವನ ಆಧಾರಿತ ಚರಿತ್ರೆಯನ್ನು ಹೇಳುವ ಪ್ರವೃತ್ತಿಯ ಅಧ್ಯಯನಗಳು

೩.೨ ಕನಕದಾಸರ ಕಾಲದ ಕುರಿತಾದ ವಿಚಾರದ ಅಭಿವ್ಯಕ್ತಿ ಅಧ್ಯಯನಗಳು

೩.೩ ಕನಕದಾಸರ ಜಾತಿ, ಮತ ಕುರಿತು ಗೊಂದಲಗಳನ್ನು ಸೃಷ್ಟಿಸಿದ ಪ್ರವೃತ್ತಿಯ ಅಧ್ಯಯನಗಳು

೩.೪ ಕನಕದಾಸರ ಪವಾಡಗಳು/ ಐತಿಹ್ಯಗಳ ತಾತ್ವಿಕ ವಿಶ್ಲೇಷಣೆ

೩.೫ ಕನಕದಾಸರ ಸ್ಥಳ ಕೇಂದ್ರಿತ ಅಧ್ಯಯನಗಳ ವಿಶ್ಲೇಷಣೆ

ಅಧ್ಯಾಯ : ಮೂರು

ಕನಕದಾಸರ ಜೀವನ, ಕಾಲ, ಕುಲಸಂಬಂಧಿ ಅಧ್ಯಯನಗಳು ಪ್ರವೃತಿಯ ವೈಧಾನಿಕತೆ

೩. ೧ ಕನಕದಾಸರ ಜೀವನ ಆಧಾರಿತ ಚರಿತ್ರೆಯ್ನು ಹೇಳುವ ಪ್ರವೃತ್ತಿಯ ಅಧ್ಯಯನಗಳು

ಹನ್ನೆರಡನೇ ಶತಮಾನ ವಚನ ಚಳುವಳಿಯ ಮೂಲಕ ವಚನಕಾರರು ಸಮಾಜದ ಸ್ವಾಸ್ತ್ಯಕಾಪಾಡಲು ಮಾಡಿದ ಹೋರಾಟ ಅವಿಸ್ಮರಣೀಯ, ಹಾಗೂ ಅದ್ವಿತೀಯವಾಗಿದೆ. ನಂತರ ೧೫-೧೬ನೇ ಶತಮಾನದಲ್ಲಿ ವಚನ ಸಾಹಿತ್ಯದಷ್ಟೆ ದಾಸ ಸಾಹಿತ್ಯವು ಬಹಳ ಮಹತ್ವವನ್ನು ಪಡೆಯಿತು. ದಾಸ ಸಾಹಿತ್ಯದ ದಿಗ್ಗಜ, ಅಶ್ವಿನಿ ದೇವತೆಗಳಲ್ಲಿ ಒಬ್ಬರೆನಿಸಿದ ಕನಕದಾಸರಿಗೆ ದಾಸ ಸಾಹಿತ್ಯದಲ್ಲಿ ಮೇರು ಸ್ಥಾನವಿದೆ. ಕಾರಣ ಹಿಂದುಳಿದ ವರ್ಗದಲ್ಲಿ ಜನಿಸಿ, ಉನ್ನತ ದರ್ಜೆಯ ಡಣ್ಣಾಯಕ ಪದವಿ ಅನುಭವಿಸಿದ ಮೇಲ್ವವರ್ಗದ ವೈಭವದ ಜೀವನ ಅನುಭವದಿಂದ ಕಲಿಯಾಗಿ, ಸಂತನಾಗಿ, ಕವಿಯಾಗಿ 'ಕವಿಗಳಲ್ಲಿದಾಸ, ದಾಸರಲ್ಲಿ ಕವಿ'ಎಂಬ ಅಭಿಧಾನಕ್ಕೆ ಪಾತ್ರರಾಗಿದ್ದಾರೆ. ಕಾವ್ಯಗಳನ್ನು ರಚಿಸಿ ಕೇಶವನನ್ನು ಆರಾಧಿಸುತ್ತಾ, ಧರ್ಮ, ಸಮಾಜ ಮತ್ತು ಸಂಸ್ಕೃತಿ ಹಿತ ಚಿಂತಕರಾಗಿ ಸಮಾಜದ ಸ್ವಾಸ್ತ್ಯಕ್ಕಾಗಿ ದುಡಿದವರ ಪಂಕ್ತಿಯಲ್ಲಿ ಕನಕದಾಸರಿಗೆ ಅಗ್ರಸ್ಥಾನವಿದೆ.

ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಂಕಾಪುರ ೭೮ಗ್ರಾಮಗಳ ಆಡಳಿತ ಹೊಂದಿದ ಹೋಬಳಿಯಾಗಿತ್ತು ನಾಡಗೌಡಿಕೆ ಮತ್ತು ದಣ್ಣಾಯಕನ ಅಧಿಕಾರವು ಬೀರಪ್ಪನೆಂಬಾತನದಾಗಿತ್ತು. ಬಚ್ಚಮ್ಮ ಆತನ ಮಡದಿಯಾಗಿದ್ದಳು ಇವರಿಗೆ ಆಸ್ತಿ ಅಂತಸ್ತುಗಳಿಗೇನು ಕೊರತೆ ಇರಲಿಲ್ಲ ಆದರೆ ಸಂತಾನ ಭಾಗ್ಯವಿಲ್ಲದ ಕೊರಗು ಆಗಾಗ ಕಾಡುತ್ತಿತ್ತು. ಹಲವು ದೇವರಿಗೆ ಹರಕೆ ಹೊತ್ತರೂ ಪ್ರಯೋಜನವಾಗಿರಲಿಲ್ಲ ಆದರೆ ವಿಜಯನಗರದ ಅರಸರು'ವೈಷ್ಣವ'ಮತವನ್ನು ಅನುಸರಿಸುತ್ತಿದ್ದರು ಅವರ ಆಧೀನ ಡಣ್ಣಾಯಕರಾಗಿದ್ದ ಬೀರಪ್ಪ ಬಚ್ಚಮ್ಮರ ಮೇಲೂ ಆ ಮತದ ಪ್ರಭಾವವಾಗಿತ್ತು. ಹರಕೆ ಹೊತ್ತು ತಿರುಪತಿ ತಿಮ್ಮಪ್ಪನ ವರಪ್ರಸಾದ ಎಂಬಂತೆ ನಂತರದ ದಿನಗಳಲ್ಲಿ ಅವರಿಗೆ ಒಂದು ಗಂಡು ಮಗು ಜನಿಸಿತು. ಆ ಮಗುವಿಗೆ ತಿಮ್ಮಪ್ಪನೆಂದು ನಾಮಕರಣ ಮಾಡಿದರು ಆಗ ಬಾಡಗ್ರಾಮ ಹಬ್ಬದ ವಾತಾವರಣದಂತೆ ಕಂಗೊಳಿಸುತ್ತಿತ್ತು. ತಿಮ್ಮಪ್ಪನ ಬೆಳವಣಿಗೆಯಾದಂತೆಲ್ಲಾ ತಂದೆ ತಾಯಿಯ ಆಸೆಗಳು ಅಂಕುರ ಒಡೆದವು ಬೀರಪ್ಪನು ಮಗನ ವಿದ್ಯಾಭ್ಯಾಸಕ್ಕೆ ಸಕಲ ಸೌಕರ್ಯ ಒದಗಿಸಿದರು. ಕತ್ತಿವರಸೆ, ಕುಸ್ತಿ, ಅಶ್ವವಿದ್ಯೆ, ಬೇಟೆಯಾಡುವುದು, ವ್ಯಾಕರಣ, ಛಂದಸ್ಸು ಮುಂತಾದ ವಿದ್ಯೆಗಳಲ್ಲಿ ಪ್ರವೀಣನನ್ನಾಗಿ ಮಾಡಿದನು. ಜೊತೆಗೆ ಓದು, ಬರಹ ಮತ, ಧರ್ಮ, ಸಾಹಿತ್ಯ, ಸಂಗೀತ, ಶಾಸ್ತ್ರ, ಪುರಾಣ ಮುಂತಾದ ವಿಷಯಗಳ ಅಭ್ಯಾಸಕ್ಕೊ ವ್ಯವಸ್ಥಿತವಾಗಿ ಏರ್ಪಾಡುಮಾಡಿದನು. ಸಕಲ ವಿದ್ಯೆಗಳನ್ನು ಕಲಿತು ವಿದ್ಯಾಪಾರಂಗತನೆನಿಸಿದನು. ಎಲ್ಲರೊಂದಿಗೂ ಬೆರೆತು ಹಸನ್ಮುಮುಖರಾದ ತಿಮ್ಮಪ್ಪನ ಮುಖದಲ್ಲಿ ತೇಜಸ್ಸು ಕಾಂತಿ ಇಮ್ಮಡಿಗೊಡಿತ್ತು.

ಯುದ್ದವೆಂದರೆ ಅವನಿಗೆ ಎಲ್ಲಿಲ್ಲದ ಉತ್ಸಾಹ ಇದಕ್ಕೆ ಸಾಕ್ಷಿ

"ಪರಬಲವ ಕಂಡರೆ
ಉರಿದು ಬೆಂಕಿಯಃಮನವೇ
ಸೆರೆಹಾಕಿ ನಿಲ್ಲಿಸಿದೆ ಹರಿಯೇ
ಕನಕದಳದಲಿ ಬಂದು ಕಲೆತೆನೆಂದರೆ ಫೌಜು
ಕನಕು ಮನಕಾಗುವುದು ಹರಿಯೇ"[1]

ಹೀಗೆ ಕಲಿಯಾಗಿ ಸಕಲ ವಿದ್ಯಾ ಪಾರಂಗತನಾಗಿ, ತಿಮ್ಮಪ್ಪನು ಬೆಳೆಯುತ್ತಿದ್ದಾಗ ಆಕಸ್ಮಿಕವಾಗಿ ಸಂಭವಿಸಿದ ಯುದ್ಧದಲ್ಲಿ ತಂದೆ ಬೀರಪ್ಪನು ಮರಣ ಹೊಂದುತ್ತಾನೆ. ಇಂತಹ ಸಂದರ್ಭದಲ್ಲಿಯೂ ವಿಚಲಿತಳಾಗದ ಬಚ್ಚಮ್ಮ, ಆಲೊಚಿಸಿ ದೈರ್ಯವನ್ನು ತಂದುಕೊಂಡು, ಚಿಕ್ಕ ವಯಸ್ಸಿನಲ್ಲಿಯೇ ತಿಮ್ಮಪ್ಪನಿಗೆ ಡಣ್ಣಾಯಕನ ಅಧಿಕಾರವನ್ನು ವಹಿಸಿಕೊಡುತ್ತಾಳೆ. ಆಗ ಹಲವು ಜನವಿರೋಧಿಗಳು ವಿಜಯನಗರ ಸಾಮ್ರಾಜ್ಯದ ದೊರೆಗಳವರೆಗೂ ತಿಮ್ಮಪ್ಪನ ವಿರುದ್ಧ, ಢಣ್ಣಾಯಕನಾಗುವ ವಯಸ್ಸು, ಅರ್ಹತೆ, ಇಲ್ಲವೆಂದು ದೂರು ನೀಡುತ್ತಾರೆ. ಅಂತಹ ಪ್ರಸಂಗದಲ್ಲೂ ಧೃತಿಗೆಡದ ಬಚ್ಚಮ್ಮ ಆಡಳಿತವನ್ನು ಧೈರ್ಯದಿಂದ ಮುಂದುವರೆಸಿಕೊಂಡು ಹೋಗಲು ತಿಮ್ಮಪ್ಪನಿಗೆ ಧೈರ್ಯ ತುಂಬುತ್ತಾಳೆ. ನಂತರ ತಿಮ್ಮಪ್ಪನು ದೇವಸ್ಥಾನದ ಜೀರ್ಣೋದ್ಧಾರ ಮಾಡಿಸುವಾಗ ಏಳು ಕೊಪ್ಪರಿಕೆ ಹೊನ್ನು ಸಿಗುತ್ತದೆ, ತಿಮ್ಮಪ್ಪನು ಅದನ್ನು ತನ್ನ ಸ್ವಾರ್ಥಕ್ಕಾಗಿ ಬಳಸದೆ ದೀನ, ದಲಿತರು, ಹಿಂದುಳಿದ ವರ್ಗದವರಿಗೆ ದಾನ ಮಾಡುತ್ತಾನೆ. ಮಿಕ್ಕಿದ್ದನ್ನು ಜನರ ಹಿತಕ್ಕಾಗಿ, ಗುಡಿ-ಗುಂಡಾರ, ಕೆರೆ-ಕಟ್ಟೆಗಳನ್ನು ಕಟ್ಟಿಸುವುದರ ಮೂಲಕ ಜನರ ಪ್ರೀತಿ ವಿಶ್ವಾಸಕ್ಕೆ ಭಾಜನರಾಗುತ್ತಾರೆ. ಅಂದಿನಿಂದ ಪ್ರಜೆಗಳು ತಿಮ್ಮಪ್ಪನನ್ನು 'ಕನಕನಾಯಕ' ನೆಂದು ಕರೆಯುತ್ತಾರೆ. ಮುಂದೆ ಆಕಸ್ಮಿಕವಾಗಿ ನಡೆದ ಯುದ್ಧದಲ್ಲಿ ಸಂಭವಿಸಿದ ಹಿಂಸೆ, ಸಾವು, ನೋವು ಕಂಡು ಜೀವನದಲ್ಲಿ ಜಿಗುಪ್ಸೆ ಹುಟ್ಟಿದಾಗ ದೇವವಾಣಿಯಾಗುತ್ತದೆ 'ನೀನು ನನ್ನ ದಾಸನಾಗು' ಎಂಬ ಸಂದೇಶ ಕೇಳಿ ಬರುತ್ತದೆ ಎಂದು ಹೇಳಲಾಗಿದೆ ಈ ಸಂದೇಶದಿಂದ ಪರಿವರ್ತನೆಯಾದ ಕನಕನಾಯಕನು, ಕನಕದಾಸನಾಗಿ ಹರಿನಾಮ ಸ್ಮರಣೆಯನ್ನು ಮಾಡುತ್ತಾ, ವಿಜಯ ನಗರದ ಸಾಮ್ರಾಜ್ಯ ಅರಸು ಗುರುಗಳಾದ ವ್ಯಾಸರಾಯರ ಬಳಿಗೆ ಹೋಗಿ ಶಿಷ್ಯತ್ವದ ದೀಕ್ಷೆ ಪಡೆದು, ಅವರ ಎಲ್ಲಾ ಶಿಷ್ಯ ವೃಂದದಲ್ಲಿ ಶ್ರೇಷ್ಠನಾಗಿ ಹೊರಹೊಮ್ಮಿ, ದೇಶವ ಸುತ್ತಿ ಹರಿನಾಮ ಸ್ಮರಣೆಯಿಂದ ಕೇಶವನ ಒಲುಮೆಗೆ ಪಾತ್ರನಾದನು. ದಾಸ ಸಾಹಿತ್ಯದ ಮೂಲಕ ಮನುಕುಲಕ್ಕೆ ನೀಡಿದ ಕೊಡುಗೆ ಸ್ಮರಣೀಯ. ಮದ್ಯಯುಗಿನ ಸಾಹಿತ್ಯ ಚರಿತೆಯಲ್ಲಿ ಒಬ್ಬ ಸಂತರಾಗಿ 'ಮೋಹನತರಂಗಿಣಿ', ನಳಚರಿತೆ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ ಮುಂತಾದ ಕೃತಿಗಳನ್ನು ಕೀರ್ತನೆ, ಮುಂಡಿಗೆಗಳನ್ನು, ನೀಡಿದ ಕನಕದಾಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವಿಸ್ಮರಣೀಯರಾಗಿದ್ದಾರೆ. ಹೀಗಾಗಿ ಇವರ ಜೀವನ ಮಹತ್ವಪೂರ್ಣವಾಗಿದೆ.[2] ಹೀಗೆ ಕನಕದಾಸರ ಜೀವನದ ಸಮಗ್ರ ವಿವರಣೆ ಕೊಟ್ಟವರಲ್ಲಿ ಕಟ್ಟಿ ಶೇಷಾಚಾರ್ಯರು ಜಗನ್ನಾಥ ಗೇಣನ್ನವರ ಕಾ.ತ. ಚಿಕ್ಕಣ್ಣ, ಸಿದ್ದಣ್ಣ ಜಕಬಾಳ, ಮೈಸೂರಿನ ಸುಧಾಕರ, ಚಂದ್ರಕಾಂತ ಬಿಜ್ಜರಗಿ, ಬಸವರಾಜ ನಾಯ್ಕರ,

ಕೊರಟಿ ಶ್ರೀನಿವಾಸ್‌ರಾವ್ ಮುಂತಾದವರು ಅವರ ಜೀವನದ ಎಲ್ಲ ಅಂಶಗಳನ್ನು ಸಾಮಾನ್ಯವಾಗಿ ವಿವರಿಸಿ, ಚರಿತ್ರೆಯನ್ನು ಹೇಳುವ ಯಥಾರೀತಿ ದಾಖಲಿಸುವ ಬರೆಯುವ ಪ್ರವೃತ್ತಿಯ ಅಧ್ಯಯನಗಳು ಕಂಡುಬಂದಿವೆ. ಕನಕದಾಸರ ವಿಷಯ ಬಂದಾಗ ಅಧ್ಯಯನಕಾರರು ಅವರ ಹುಟ್ಟು, ಬೆಳವಣಿಗೆ, ಯುದ್ಧ, ಕನಕನಾಯಕ, ಕನಕದಾಸನಾದುದು, ನಂತರ ಕಾವ್ಯ ರಚನೆ, ಕಾವ್ಯದ ಒಳನೋಟ, ಕೀರ್ತನೆ ಮುಂಡಿಗೆಗಳ ಶೋಧ ಅದರಲ್ಲಿರುವ ತಾತ್ವಿಕ ಆಯಾಮಗಳನ್ನು ಚರ್ಚಿಸಬೇಕಾಗಿತ್ತು. ಆದರೆ ಯಥಾ ರೀತಿ ಹೇಳುವ ಪ್ರವೃತ್ತಿಯನ್ನು ಮಾಡಿರುವರು. ಆದರೆ ನಾವು ಕನಕನನ್ನು ಅವನ ವಿಚಾರಗಳನ್ನು ಶೋಧಿಸಿ ನೋಡಬೇಕಾಗಿದೆ. ಅವನು ಸಮುದಯದಲ್ಲಿ ಸ್ವಸ್ತ ಸಮಾಜವನ್ನು ಕಟ್ಟಲು, ಅಸ್ಪೃಶತೆಯನ್ನು ಹೊಡೆದೋಡಿಸಲು, ಸಮಾನತೆಯನ್ನು ತರಲು ಶ್ರಮವಹಿಸಿದ್ದ ಸಂತ, ಸಮಾಜ ಸುಧಾರಣಾವಾದಿ ಕನಕದಾಸರಾಗಿದ್ದಾರೆ. ಈ ದಿಸೆಯಲ್ಲಿ ಹೆಚ್ಚಿನ ಅಧ್ಯಯನಗಳು ಆಗಬೇಕಾಗಿವೆ.

೩.೨ ಕನಕದಾಸರ ಕಾಲದ ಕುರಿತಾದ ವಿಚಾರದ ಅಭಿವ್ಯಕ್ತಿಗಳ ಅಧ್ಯಯನಗಳು

ಕನಕದಾಸರ ಕಾಲದ ಕುರಿತಾಗಿ ಅಧ್ಯಯನಕಾರರು ಭಿನ್ನ ದೃಷ್ಟಿಕೋನಗಳನ್ನು ಹೇಳಿರುವರು. ಅವು ಬೇರೆ ಬೇರೆ ಆಕರಗಳ ಹಿನ್ನೆಲೆಯಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸಿರುವರು.

ಕನಕದಾಸರ ಕಾಲದ ಕುರಿತಾಗಿ ಗೊಂದಲಗಳನ್ನು ಸೃಷ್ಟಿಸುವ ಪ್ರವೃತ್ತಿ

ಮಹಾಪುರುಷರಾಗಿ, ಸಾಮಾಜಿಕ ಕಳಕಳಯಲ್ಲಿ ತೊಡಗಿಸಿಕೊಂಡ ಸಂತರ ಕಾಲವನ್ನು ನಿರ್ದಿಷ್ಟವಾಗಿ ಹೇಳುವುದು ತುಂಬಾ ಕಷ್ಟ, ಮದ್ಯಕಾಲೀನ ಸಂದರ್ಭದಲ್ಲಿ ಕನ್ನಡಕ್ಕೆ ಹಲವು ಮಹತ್ವದ ಕೃತಿ ರಚಿಸಿ ಒಂದು ಹೊಸ ತಿರುವನ್ನು ತಂದು ಕೊಟ್ಟವರು ಕನಕದಾಸರು ಹೊರತಾಗಿಲ್ಲ. ತಮ್ಮ ಕೃತಿಗಳಲ್ಲಿ ಎಲ್ಲಿಯೂ ತಮ್ಮ ಕಾಲವನ್ನು ಸ್ಪಸ್ಟಪಡಿಸಿಲ್ಲ ಆದ್ದರಿಂದ ಅವರು ಇದೇ ದಿನಾಂಕದಂದು ಹುಟ್ಟಿದವರೆಂದು ನಿಖರವಾಗಿ ಗುರುತಿಸುವುದು ಇಂದಿಗೂ ಸಾದ್ಯವಾಗಿಲ್ಲ. ಕಾರಣ ಅವರ ಹುಟ್ಟು, ಸಾವಿನ ಕುರಿತಾಗಿ ನಿಖರವಾಗಿ ಹೇಳುವ ಆಧಾರಗಳು ಇರಲಿಲ್ಲ. ಆದರೂ, ಕೆಲವು ಅಧ್ಯಯನಕಾರರು ಕನಕದಾಸರ ಸಾಹಿತ್ಯದಲ್ಲಿರುವ ಕೆಲವು ಘಟನೆಳ ಆಧಾರಗಳ ಹಿನ್ನೆಲೆಯನ್ನಿಟ್ಟುಕೊಂಡು ಭಿನ್ನವಾಗಿ, ತಮಗೆ ಅನಿಸಿದಂತೆ ಹೇಳುವ ಮೂಲಕ ಕಾಲಗಳ ಗೊಂದಲವನ್ನು ಸೃಷ್ಟಿಸಿರುವರು. ಮುಖ್ಯವಾಗಿ ಕೃಷ್ಣದೇವರಾಯನ ಆಡಳಿತ ಕಾಲವಾದ ಕ್ರಿ.ಶ. ೧೫೦೯ ರಿಂದ ೧೫೨೯ರವರೆಗಿನ ಕಾಲದಲ್ಲಿ ರಚಿಸಿದ್ದಾರೆ ಎನ್ನಲಾದ 'ಮೋಹನ ತರಂಗಿಣಿ'ಯಲ್ಲಿ ದಾಖಲಾದ ಘಟನೆಗಳ ಹಿನ್ನೆಲೆಯಲ್ಲಿ ಕೆಲವು ಅಧ್ಯಯನಕಾರರು ಗುರುತಿಸುತ್ತಾರೆ. ಹೀಗೆ ಕಾಲವನ್ನು ಹೇಳುವ ಬೇರೆ ಬೇರೆ ಅಧ್ಯಯನಗಳು ಭಿನ್ನ ಧೋರಣೆ, ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡುವ ಪ್ರವೃತ್ತಿ ಇಂದು ಹೆಚ್ಚಿಗೆ ಕಂಡುಬಂದಿದೆ. ವಿವಿಧ ದೃಷ್ಟಿಕೋನಗಳಲ್ಲಿರುವ ಎಲ್ಲಾ ಅಧ್ಯಯನಗಲನ್ನು ಬಳಸಿಕೊಂಡು ಅವರು ಹೇಳಿದ ಕಾಲವನ್ನು ವಿಶ್ಲೇಷಿಸಿ, ತಾತ್ವಿಕವಾಗಿರುವ ನಿಲುವನ್ನು ಸ್ಪಷ್ಟಪಡಿಸಲು

ಪ್ರಯತ್ನಿಸಲಾಗಿದೆ. ವಿದ್ವಾಂಸರು ಕನಕದಾಸರ ಕೃತಿಗಳಲ್ಲಿ ಕಂಡು ಬರುವ ಕೆಲವು ದಾಖಲೆಗಳ ಆಧಾರದ ಮೇಲೆ ಗುರುತಿಸಲು ಪ್ರಯತ್ನಿಸಿದ್ದಾರೆ ಹದಿನಾರನೇ ಶತಮಾನದಿಂದ ಪ್ರಸ್ತುತದವರೆಗೂ ಹಲವು ಕಾಲಘಟ್ಟಗಳು ಕಳೆದು ಹೋಗಿವೆ, ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ದೃಷ್ಟಿ, ಧೋರಣೆಗಳ ಆದಾರದಲ್ಲಿ ಅಧ್ಯಯನಗಳಾಗಿವೆ. ಭಿನ್ನ ಆಯಾಮಗಳಲ್ಲಿ ಅಧ್ಯಯನಕಾರರು ಕಾಲವನ್ನು ತಾತ್ವಿಕವಾಗಿ ಗುರುತಿಸುವರು. ಆ ಎಲ್ಲ ಅಭಿಪ್ರಾಯಗಳನ್ನು ಅವಲೋಕಿಸಿ ವಿಶ್ಲೇಷಿಸಲಾಗಿದೆ.

ನವೋದಯ ಕಾಲ ಘಟ್ಟ (೧೯೦೦ರಿಂದ ೧೯೫೦) ದ ವಿದ್ವಾಂಸರ ಅಭಿಪ್ರಾಯಗಳು

ಆಧುನಿಕ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ನವೋದಯ ತುಂಬಾ ಗಮನಾರ್ಹವಾದುದು. ಸಾಹಿತಿಗಳು, ವಿದ್ವಾಂಸರು, ಪ್ರಾಚೀನ ಮತ್ತು ಮದ್ಯಯುಗೀನ ಸಾಹಿತ್ಯದ ಕುರಿತು ತಲಸ್ಪರ್ಶಿಯಾಗಿ ವಿವಿಧ ಆಯಾಮದಡಿಯಲ್ಲಿ ವಿಮರ್ಶೆಗೆ ತೊಡಗಿ ಸಾಹಿತ್ಯಕೃಷಿ ಮಾಡಿದರು ನವೋದಯ'ಎಂದರೆ ಹೊಸಬೆಳಕು, ಭಾರತದಲ್ಲಿ ಅದು ಬಂಗಾಳದಲ್ಲಿ ಮೊದಲು ನವೋದಯ ಆರಂಭವಾಯಿತು ಎನ್ನಲಾಗಿದೆ.

ನವೋದಯ ಅಥವಾ ಪುನರುಜ್ಜೀವನ(ರೆನಸಾನ್ಸ)ಒಂದು ಬೌದ್ಧಿಕ ಮತ್ತು ಸಾಂಸ್ಕೃತಿಕ ಚಳುವಳಿ ೧೯ನೇಯ ಶತಮಾನದ ಕಡೆಯ ದಶಕಗಳು ಮತ್ತು ೨೦ನೇ ಶತಮಾನದ ಮೊದಲೆರಡು ದಶಕಗಳು ಭಾರತದಲ್ಲಿ ಮಹತ್ವದ ಬದಲಾವಣೆಯ ಕಾಲವಾಗಿದೆ. ಪಾಶ್ಚಾತ್ಯ ಸಂಸ್ಕೃತಿ, ರೀತಿ-ನೀತಿ, ವಿಚಾರಲಹರಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿಯ ಮಹತ್ವವನ್ನು ಕುರಿತ ಕಲ್ಪನೆಗಳ ಪ್ರಭಾವ ಭಾರತಿಯರ ಮೇಲೆ ಪ್ರಭಾವ ಬೀರಿದ್ದು, ಸಹಜವಾಗಿ ಕನ್ನಡಿಗರ ಮೇಲೆಯೂ ಪ್ರಭಾವ ಬೀರಿದ ಕಾಲವದು. ಪಾಶ್ಚಾತ್ಯ ಸಂಸ್ಕೃತಿಗೆ ಒಮ್ಮೆ ಮನಸೋತು, ಒಮ್ಮೆ ಅದಕ್ಕೆ ಬೆನ್ನು ತಿರುಗಿಸಿ ಭಾರತೀಯ ಸಂಸ್ಕೃತಿಗೆ ಭಾರತೀಯರ ಮನಸ್ಸು ಹೊಸ ನಿಲುವು ಒಲವುಗಳನ್ನು ಸ್ವೀಕರಿಸುತ್ತಿದ್ದ ಕಾಲ ಅದು.

ನವೋದಯ ಸಂದರ್ಭದಲ್ಲಿ ಹೊಸಬಗೆಯ ಸಾಹಿತ್ಯಸೃಷ್ಟಿ ಕನ್ನಡದಲ್ಲಿ ನಡೆಯಿತು. ಇದಕ್ಕೆ ಮುಖ್ಯ ಕಾರಣ ಇಂಗ್ಲೀಷ್ ವಿದ್ಯಾಭ್ಯಾಸದಿಂದ ಬಂದದ್ದು, ಇದರಿಂದ ಸಾಹಿತ್ಯ ಮಟ್ಟಗೆ ಮುಖ್ಯವಾಗಿ ಎರಡು ಉಪಯೋಗಗಳಾದವು. ಮೊದಲನೆಯದು ಹೊಸದೊಂದು ಜೀವನ ಮನೋಧರ್ಮ ದರ್ಶನವಾದದು, ಎರಡನೇಯದು ಹೊಸದೊಂದು ಸಾಹಿತ್ಯದ ಜಗತ್ತೆ ಲಭ್ಯವಾದದ್ದು ಹೊಸಗನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ಕತೆ, ಕಾದಂಬರಿ ಪ್ರಬಂಧ, ನಾಟಕ, ಸಂಶೋಧನೆ, ವಿಮರ್ಶೆ ಮುಂತಾದ ಸಾಹಿತ್ಯ ವೈವಿದ್ಯತೆ ನವೋದಯ ಸಾಹಿತ್ಯದ ಕೊಡುಗೆಯಾಗಿದೆ.

"ನವೋದಯ ಕನ್ನಡ ಸಾಹಿತ್ಯಕ್ಕೆ ಬಿ. ಎಂ. ಶ್ರೀಯವರ ಕೊಡುಗೆ ಅಪಾರ. ೧೯೧೧ರಲ್ಲಿಯೇ ಶ್ರೀ ಅವರು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ 'ಕನ್ನಡ ಮಾತು ತಲೆ ಎತ್ತುವ ಬಗೆ' ಎಂಬ ವಿಷಯವನ್ನು ಕುರಿತು ಭಾಷಣ ಮಾಡಿರುವುದು ಗಮನಾರ್ಹವಾಗಿದೆ. ಇದರ ಹಿಂದಿರುವ

ಮನೋಧರ್ಮ ವಿಶಾಲವಾದುದು. ಆದರ್ಶಪ್ರಿಯತೆ, ನೈಜವಾದ ಉತ್ಸಾಹಗಳೊಂದಿಗೆ ವಾಸ್ತವಾಂಶಗಳನ್ನು ಗುರುತಿಸುವಂತಹುದು ಶ್ರೀಯವರ ಮಾತುಗಳಲ್ಲಿ ಹೇಳುವುದಾದರೇ ಈ ಹೊಸ ಸಾಹಿತ್ಯವು, ಹಳೆಯ ಸಾಹಿತ್ಯದ ಸಾರವನ್ನು, ಸಹಾಯವನ್ನೂ ಸ್ವೀಕಾರ ಮಾಡಿದರೂ ಮತ ಪ್ರಸಾರಣೆಗಾಗಲಿ, ಪೂರ್ವ ಕಥಾನುವಾದಕ್ಕಾಗಲಿ ಬರೆಯತಕ್ಕದ್ದಲ್ಲ, ನೂತನ ಜ್ಞಾನ ಪ್ರಸಾರಣೆಗಾಗಿ, ಪೂರ್ವಕಲಾನುಭವಕ್ಕಾಗಿ ಉತ್ತಮ ಜೀವನ ಕಾರ್ಯಾರಂಭ ಪ್ರೇರಣೆಗಾಗಿ ಬರೆಯತಕ್ಕದ್ದು ಪ್ರಪಂಚದಲ್ಲಿ ತಿಳಿದಿರುವ ನುಡಿದಿರುವ, ನಡೆದಿರುವ ಉತ್ತಮ ವಿಷಯಗಳೆಲ್ಲವನ್ನು ಸಿಂಹಾವಲೋಕನದಿಂದ ತಾನು ಸ್ವಾನುಭವಕ್ಕೆ ತಂದುಕೊಂಡು ಹಾಗೆ ತಿಳಿಯಲಾರದೆ ಇತರರಿಗೆ ತಿಳಿಸತಕ್ಕದ್ದು ಇದಕ್ಕೆ ಒಂದು ನಾಡಲ್ಲ ಒಂದು ಬೀಡಲ್ಲ ಇದರ ಮೂಲ ಮಂತ್ರ 'ಉದಾರಚತಾನಾಲತು ವಸುಧೈವ ಕುಟುಂಬಕಂ' ನವೋದಯ ಪ್ರಾರಂಭದಲ್ಲಿಯೇ ಹೊಸ ಸಾಹಿತ್ಯದ ಸಾರಥ್ಯ ವಹಿಸಿದವರಿಗೆ ತಮ್ಮ ಪರಿಸ್ಥಿತಿ ತಮ್ಮ ಗುರಿ ತಮಗೆ ಎದುರಾಗುವ ಸಮಸ್ಯೆಗಳು ತಮ್ಮ ಮಾರ್ಗ ಇವನ್ನೂ ಕುರಿತು ಸ್ಪಷ್ಟ ಕಲ್ಪನೆ ಇದ್ದಿತು."[೩]

ಈ ನೆಲೆಯಲ್ಲಿ ಕಟ್ಟಿಶೇಷಾಚಾರ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ಕನಕದಾಸರ ಕಾಲವನ್ನು ಅವರ ಮೋಹನ ತರಂಗಿಣಿಯಲ್ಲಿ ರತಿ ಪ್ರದ್ಯುಮ್ನರ ಗೃಹ ಪ್ರವೇಶವು ಮಾಘ ಶುದ್ಧ, ಪಂಚಮಿ ಬೃಹಸ್ಪತಿ ವಾರದಲ್ಲಿ ಆಯಿತೆಂದು ಹೇಳಿ, ಮರುವರ್ಷದಲ್ಲಿಯೇ ಅದೇ ತಿಥಿಯಲ್ಲಿ ಅವರಿಗೆ ಅನಿರುದ್ಧನು ಹುಟ್ಟಿದನೆಂದು, ಅದನ್ನೆ

'ಆನಂದ ಸಂವತ್ಸರ ಮಾಘ ಶುದ್ಧನ ನ
ವೀನ ಪಂಚಮಿಯಾದಿವಾರ
ಬಾನು ಉದಯದ ಸ್ವಾತಿಯ ನಕ್ಷತ್ರದೆ
ತಾನುದಿಸಿದ ಗಂಡು ಮಗನು'

ಶಾಲಿವಾಹನ ಶಕೆ ೧೪೭೬ನೇಯ ವರ್ಷ ಅಂದರೆ೧೫೫೩-೫೪ನೇ ಇಸ್ವೀಯು ಹಾಗೂ ಇದೇ ಕೃತಿಯಲ್ಲಿ ತಾತಾಚಾರ್ಯರ ಮತ್ತು ತ್ರಿವಿಕ್ರಮದಾಸರ ನಾಮ ನಿರ್ದೇಶಿಸಿರುವುದರಿಂದ ತಾತಾಚಾರ್ಯರು ಕೃಷ್ಣದೇವರಾಯನ ಆಸ್ಥಾನ ಪಂಡಿತರು, ಕೃಷ್ಣದೇವರಾಯನ ಕಾಲ ೧೫೦೯-೨೯ ತ್ರಿವಿಕ್ರಮದಾಸರು ಸೋದೆಯಲ್ಲಿ ವಿಕ್ರಮ ದೇವಸ್ಥಾನವನ್ನು ೧೫೧೫ರಲ್ಲಿ ಕಟ್ಟಿಸಿದರೆಂದು ಸೋದೆಯ ಶಿಲಾ ಲೇಖನದಲ್ಲಿದೆ. ಮತ್ತು ಈ ಕೃತಿಯಲ್ಲಿ ಪೆಟಲಂಬಿ ಪಥಕದ ಕುರಿತು ಹೇಳಿದ್ದುಂಟು ರಾಯಚೂರು ಕಾಳಗದಲ್ಲಿ ವಿಜಯನಗರದೊಳಗಿನ ಸೈನ್ಯದೊಳಗೆ ಪೆಟಲಂಬಿನ ಪಥಕವು ಮೊದಲು ಪ್ರವೇಶ ಪಡೆಯಿತ್ತೆಂದು ನ್ಯೂನಿಝು ಬರೆಯುತ್ತಾನೆ. ರಾಯಚೂರು ಯುದ್ಧವು ೧೫೨೦ರಲ್ಲಿ ಆಯಿತು, ಹಾಗೂ ವ್ಯಾಸರಾಯರು ವ್ಯಾಸ ಸಮುದ್ರವನ್ನು ಕಟ್ಟಿಸುತ್ತಿರುವಾಗ ಕನಕದಾಸರು ಪ್ರಥಮ ಸಂದರ್ಶನ ಮಾಡಿದರೆಂದು ಪ್ರತೀತಿ ಇದೆ ವ್ಯಾಸರಾಯರಿಗೆ ವ್ಯಾಸಸಮುದ್ರದ ಉಂಬಳಿ ದೊರೆತಿದ್ದು ೧೫೨೫-

೨೬ ಇಸ್ವಿಯಲ್ಲಿ ಈ ಸಮಯದಲ್ಲಿ ಕನಕದಾಸರಿಗೆ ೧೭-೧೮ವರ್ಷಗಳಾಗಿದ್ದಾವೆಂದು ಇಟ್ಟುಕೊಂಡರೆ ಕನಕದಾಸರ ಕಾಲ೧೫೦೮ರಿಂದ ೧೬೦೬ರ ವರೆಗೆಂದು ಹೇಳಬಹುದು."[೪]

ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚೂರಾಯ ಅವರು ಭಿನ್ನ ನೆಲೆಗಳಲ್ಲಿ ಗುರುತಿಸುತ್ತಾರೆ.

"ಮೋಹನ ತರಂಗಿಣಿ ಕಾವ್ಯದಲ್ಲಿ ಕನಕದಾಸರು ಅನಿರುದ್ದನ ಜನ್ಮದಿನವೆಂದು ಹೇಳಿದ ಆನಂದ ಸಂವತ್ಸರ ಮಾಘಶುದ್ಧ ನವೀನ ಪಂಚಮಿ ಆದಿವಾರ ಬಾನುಉದಯದ ಸ್ವಾತಿಯ ನಕ್ಷತ್ರದಂದೆ ಕನಕದಾಸರ ಜನ್ಮದಿನವಾಗಿದೆ. ಅಲ್ಲದೆ ಕ್ರಿ ಶ. ೧೪೮೬-೮೭ನೇ ವರ್ಷ ಇಸ್ವಿಯಲ್ಲಿ ಆನಂದ ನಾಮ ಸಂವತ್ಸರ ಇದ್ದಿತು, ಆಕಾಲದಲ್ಲಿ ವಿಜಯನಗರದಲ್ಲಿ ಸಾಳುವ ಸರಸಿಂಹನ ಆಡಳಿತವಿತ್ತು ಸಂಗಮ ವಂಶದ ಆಳ್ವಿಕೆ ಮುಗಿದು ಸಾಳುವ ವಂಶದ ಆಳ್ವಿಕೆ ಪ್ರಾರಂಭವಾದಾಗ ರಾಜ್ಯದ ಪರಸ್ಥಿತಿ ಚೆನ್ನಾಗಿರಲಿಲ್ಲ ಆ ಕಾಲದಲ್ಲಿ ಕನಕದಾಸರ ತಂದೆ ಬೀರಪ್ಪನಾಯಕನು ಬಾಡ ಪ್ರದೇಶಕ್ಕೆ ದಣ್ಣಾಯಕನಾಗಿದ್ದನು. ಹೀಗಾಗಿ ಕನಕದಾಸರ ಜನನ ೧೪೮೬-೮೭ರಲ್ಲಿ ಜನನವಾಗಿದೆ."[೫]

ರಂಗನಾಥ ರಾಮಚಂದ್ರ ದಿವಾಕರರು

"ಕನಕದಾಸರು ಪುರಂದರದಾಸರ ಸಮಕಾಲೀನರು ಪುರಂದರದಾಸರು ಹುಟ್ಟಿದ್ದು ಶಾಲಿವಾಹನ ಶಕವರುಷ ೧೪೦೨ (ಇಸ್ವಿ೧೪೮೦) ಐಕ್ಯರಾಗಿದ್ದು ಶಾಲಿವಾಹನ ಶಕೆ ವರುಷ೧೪೮೬ (ಇಸ್ವಿ೧೫೬೪) ಇದೇ ಕಾಲಮಾನದಲ್ಲಿಯೇ ಕನಕದಾಸರು ದಾಸಶ್ರೇಷ್ಠರಾಗಿ ೯೮ವರ್ಷಕಾಲ ಬಾಳಿದವರು."[೬]

ಎಚ್.ಎಂ. ಶಂಕರನಾರಾಯಣರಾವ್ ಇವರ ಪ್ರಕಾರ

"ಕನಕದಾಸರು ಕುಮಾರವ್ಯಾಸ, ಕುಮಾರವಾಲ್ಮೀಕಿಗಳನ್ನು ಸ್ತೋತ್ರ ಮಾಡಿರುವುದರಿಂದ ಕನಕದಾಸರು ಈತ್ತೀಚಿನವರೆಂದು ಮಾಹಿತಿ ಇದೆ. ಎರಡನೇಯದಾಗಿ ವ್ಯಾಸರಾಯರ ಶಿಷ್ಯರಾಗಿ ಪುರಂದರದಾಸರ ಸಮಕಾಲೀನರಾಗಿ, ಕೃಷ್ಣದೇವರಾಯನ ಕಾಲದಲ್ಲಿ ಇದ್ದರೆಂದು ತಿಳಿದು ಬಂದುದರಿಂದ ಇವರು ಹದಿನಾರನೇಯ ಶತಮಾನದ ಪೂರ್ವಾರ್ಧದವರೆಂದಿಟ್ಟಕೊಳ್ಳಬಹುದು."[೭]

ಆರ್.ಸಿ. ಹಿರೇಮಠ ಅವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ

"ಪುರಂದರದಾಸ, ಕನಕದಾಸ ಮತ್ತು ವ್ಯಾಸರಾಯರು ಸಮಕಾಲೀನವರೆಂದು ಕನ್ನಡ ಸಾಹಿತ್ಯ ಚರಿತ್ರೆಯಿಂದ ತಿಳಿದು ಬರುತ್ತದೆ ವ್ಯಾಸರಾಯರು ಕೃಷ್ಣದೇವರಾಯನ ಕಾಲದಲ್ಲಿ ಇದ್ದರು, ವ್ಯಾಸರಾಯರಿಂದ ಸ್ಥಾಪಿತವಾದ ವ್ಯಾಸಕೂಟ ಮತ್ತು ದಾಸಕೂಟವನ್ನು ಅವಲೋಕಿಸಿದಾಗ ಕನಕದಾಸರು ಕ್ರಿಶ. ೧೪೪೨-೧೫೩೯ರ ಅವಧಿಯಲ್ಲಿ ಜೀವಿಸಿರಬಹುದೆಂದು ತಿಳಿದು ಬರುತ್ತದೆ

ಕನಕದಾಸರು ವ್ಯಾಸರಾಯರನ್ನು ಕ್ರಿ. ಶ. ೧೫೨೫ರ ಅವಧಿಯಲ್ಲಿ ಕಂಡಂತೆ ತೋರುತ್ತದೆ ಕನಕದಾಸರು ಶ್ರೀ ವೈಷ್ಣವ ಮತದ ಗುರುಗಳಾದ ತಿರುಮಲೆಯ ತಾತಾಚಾರ್ಯರನ್ನು ಉದ್ದೇಶಿಸಿ, ನಾಲ್ವಗೆ ಫಲವೀವ ತಾತಾಚಾರ್ಯರದಿಗೆರಗುವೇನು(ಮೋಹನ ತರಂಗಿಣಿ ಪೀಠಿಕಾಸಂಧಿ ಪುಟ:೪ರಲ್ಲಿ)ಎಂದು ನುಡಿದಿದ್ದಾರೆ. ಈ ತಾತಾಚಾರ್ಯರು ವಿಜಯನಗರದ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದರು ಕೃಷ್ಣದೇವರಾಯನ ಕಾಲ ಕ್ರಿ.ಶ. ೧೫೨೯ರವರೆಗೆ ಇದ್ದುದರಿಂದ ಕನಕದಾಸರ ಕಾಲ ಕೃಷ್ಣದೇವರಾಯನ ಕಾಲವೆಂದೇ ಇಟ್ಟುಕೊಳ್ಳಬೇಕಾಗುತ್ತದೆ,"[೮] ಎಂದಿದ್ದಾರೆ.

ಪ್ರಗತಿಶೀಲ ಕಾಲಘಟ್ಟ- ೧೯೩೬ರಿಂದ ೧೯೪೭

ಕನ್ನಡ ಸಾಹಿತ್ಯ ಚರಿತ್ರೆ ಇತಿಹಾಸದಲ್ಲಿ ಪ್ರಗತಿಶೀಲ ಕಾಲ ಘಟ್ಟ ಪ್ರಮುಖವಾದುದು. ಇಲ್ಲಿ ಸೌಮ್ಯವಾದವನ್ನು ಅನುಸರಿಸುವ ಅಭಿವ್ಯಕ್ತಿ, ಪ್ರಗತಿಶೀಲವಾಗಿದೆ. ಇಲ್ಲಿ ಸಮಾನ ಮನಸ್ಕ ಸಾಹಿತಿಗಳು ಸೇರಿ, ವೈವಿದ್ಯಮಯವಾಗಿ ಬೆಳೆಯಲು ಸಹಾಯಕವಾಯಿತು. ಪ್ರಗತಿಶೀಲರಿಗೆ ಮುಖ್ಯವಾಗಿ ಸಣ್ಣಕತೆ, ಕಾದಂಬರಿಗಳು, ಅಭಿವ್ಯಕ್ತಿ ಮಾಧ್ಯಮವಾದವು, ಬಂಡವಾಳಶಾಹಿ, ದೌರ್ಜನ್ಯಗಳನ್ನು ಚಿತ್ರಿಸಲು ಕಾವ್ಯಕ್ಕಿಂತ ಕಥಾ ಸಾಹಿತ್ಯ ಹೆಚ್ಚು ಅನುಕೂಲವಾಯಿತು. ಕಥೆಗಳ ಮೂಲಕ ಸಮಾಜವನ್ನು ಎಲ್ಲಾಸ್ಥರಗಳಲ್ಲಿ ಅಧ್ಯಯನ ಮಾಡಿ, ಅನೇಕ ಪ್ರಗತಿಪರ ಚಿಂತನೆಗಳನ್ನು ಮಾಡಿರುವರು. ಪ್ರಗತಿಶೀಲ ಕಾಲಘಟ್ಟದಲ್ಲೂ ಕನಕದಾಸರ ಕಾಲದ ಕುರಿತಾದ ಅಭಿಪ್ರಾಯಗಳನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

ಸಾ.ಕೃ. ರಾಮಚಂದ್ರರಾವ್ ಅವರು

"ಕನಕದಾಸರು ತುಂಬು ಆಯುಷ್ಯದಿಂದ ಬಾಳಿದರು. ಅವರು ದೇಹಬಿಡುವಾಗ ಅವರಿಗೆ ತೊಂಬತ್ತೆಂಟು ವರ್ಷಗಳಾಗಿದ್ದವು. ಅವರ ಕಾಲವನ್ನು ೧೫೦೮ ರಿಂದ ೧೬೦೬ಎಂದು ಹೇಳಬಹುದು."[೯]

ನವ್ಯಕಾಲ ಘಟ್ಟ –೧೯೫೦ರಿಂದ

ಆಂಗ್ಲಭಾಷೆಯಲ್ಲಿ ಹುಟ್ಟಿ ಬಂದ, ಆಧುನಿಕತೆಗೆ ಸಂವಾದಿಯಾಗಿ ಕನ್ನಡದಲ್ಲಿ 'ನವ್ಯ'ಕಾಣಿಸಿಕೊಂಡಿತು ವಿ.ಕೃ. ಗೋಕಾಕ ೧೯೫೦ ರಲ್ಲಿ ನವ್ಯ ಪಂಥದ ಧ್ಯೇಯಧೋರಣೆಗಳ ಬಗೆಗೆ 'ನವ್ಯತೆ ಹಾಗೂ ಕಾವ್ಯ ಜೀವನ' ಎಂಬ ಪುಸ್ತಕ ಪ್ರಕಟಿಸಿದರು ಗೋಪಾಲಕೃಷ್ಣ ಅಡಿಗರು ಈ ಪಂಥದ ಪ್ರಮುಖ ಲೇಖಕರಾಗಿ ಕಾಣಿಸಿಕೊಂಡರು ಈ ಸಾಹಿತ್ಯ ಪಾಶ್ಚಾತ್ಯರ ಅಸಂಗತವಾದ, ಅಸ್ತಿತ್ವವಾದಗಳನ್ನು ಸ್ವೀಕರಿಸಿ ಬೆಳೆಯಿತು. ಪರಕೀಯ ಪ್ರಜ್ಞೆ, ಅನಾಥ ಪ್ರಜ್ಞೆ, ಬದುಕಿನ ಒತ್ತಡಗಳಿಗಾಗಿ ಅದನ್ನು ಪರೀಕ್ಷೆಗೆ ಒಳಪಡಿಸಿತು. ಹಲವಾರು ಲೇಖಕರು ಈ ಸಾಹಿತ್ಯಪಂಥದ ಪ್ರೇರಣೆಗೆ

ಒಳಗಾದರು. ಈ ಕಾಲಘಟ್ಟದ ಲೇಖಕರು ಕನಕದಾಸರ ಕಾಲದ ಕುರಿತಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಾ.ಮಾ. ನಾಯಕ

"ಹಾ.ಮಾ.ನಾ. ಸಂಪಾದಿಸಿದ ಕನ್ನಡ ವಿಶ್ವಕೋಶ ಸಂಪುಟ-೦೩ರಲ್ಲಿ ಕನಕದಾಸರು ೧೫೦೯ ರಿಂದ ೧೬೦೭ರಲ್ಲಿ ಬಾಳಿದವರಾಗಿದ್ದಾರೆ ಹರಿದಾಸರಲ್ಲಿ ಶ್ರೇಷ್ಠದಾಸರಾಗಿ ವ್ಯಾಸರಾಯರ ನೇತೃತ್ವದಲ್ಲಿ ಹರಿದಾಸ ಪಂಥದಲ್ಲಿ ಸತತವಾಗಿ ಶ್ರಮಿಸಿದರು."[೧೦] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಚೆನ್ನಪ್ಪ ಎರೇಸೀಮೆ ಎಂ. ಬಸವರಾಜು

"ವೆಂಕಟೇಶ್ವರನು ಬೀರಪ್ಪಗೌಡ ಮತ್ತು ಬಚ್ಚಮ್ಮರ ಸೇವೆಯನ್ನು ಮೆಚ್ಚಿ ಇವರ ಬಯಕೆ ಈಡೇರಿಸಿದನು. ಬಚ್ಚಮ್ಮ ನವಮಾಸ ತುಂಬಿ, ತುಂಬು ಗರ್ಭಿಣಿಯಾಗಿ ಇವಳು ಕ್ರಿ.ಶ. ೧೫೦೮ನೇಯ ಇಸ್ವಿಯಲ್ಲಿ ಬರುವ ಆನಂದ ನಾಮ ಸಂವತ್ಸರ ಕಾರ್ತಿಕ ಬಹುಳ ತದಿಗೆ ಗುರುವಾರ ಬೆಳಗಿನ ಸೂಮೂಹೂರ್ತದಲ್ಲಿ ಗಂಡು ಮಗುವೊಂದಕೆ ಜನ್ಮವಿತ್ತಳು ಅವನೇ ತಿಮ್ಮಪ್ಪ, ಕನಕನಾಯಕ, ಕನಕದಾಸನಾಗಿ ಪ್ರಸಿದ್ದನಾಗಿದ್ದಾನೆ."[೧೧]

ಡಾ. ಟಿ.ಎನ್. ನಾಗರತ್ನ

"ಕನ್ನಡನಾಡಿನ ಧಾರವಾಡ ಜಿಲ್ಲೆಯ'ಬಾಡ'ಗ್ರಾಮದಲ್ಲಿ ಜನಿಸಿದ ಕನಕದಾಸರು ಇಂದಿಗೂ ಕನ್ನಡಿಗರ ಮನೆ-ಮನಗಳಲ್ಲಿ ಪ್ರಾತಃಸ್ಮರಣೀಯರಾಗಿದ್ದಾರೆ. ಬೀರಪ್ಪ-ಬಚ್ಚಮ್ಮರ ದಂಪತಿಗಳ ಮಗನಾಗಿ ಕ್ರಿ. ಶ. ೧೫೦೮ರಲ್ಲಿ ಜನಿಸಿ-೧೬೦೬ರಲ್ಲಿ ಮರಣ ಹೊಂದಿದ್ದಾನೆ."[೧೨]

ದಲಿತ ಬಂಡಾಯ(ನವ್ಯೋತ್ತರ)ಕಾಲಘಟ್ಟ ೧೯೭೦ ರಿಂದ

ದಲಿತ ಸಾಹಿತ್ಯ ಮತ್ತು ಧೋರಣೆ

ಅಕ್ಷರ ಸಂಸ್ಕೃತಿಯಿಂದ ವಂಚಿತವಾದ ಸಮುದಾಯವು, ಸ್ವಾತಂತ್ರ್ಯನಂತರ ಮೀಸಲಾತಿ ಮುಂತಾದ ಅನುಕೂಲಗಳನ್ನು ಅಲ್ಪಸ್ವಲ್ಪ ಸದುಪಯೋಗ ಪಡಿಸಿಕೊಂಡುದದರ ಪರಿಣಾಮವಾಗಿ, ಅಕ್ಷರ ಸಂಸ್ಕೃತಿಯ ಹೊಸ್ತಿಲಲ್ಲಿ ಬಂದು ಒಳಗೆ ಏನಿದೆ ಎಂಬುದನ್ನು ಇಣುಕಿ ನೋಡುವಂಥ ಸಂದರ್ಭ ಒದಗಿಬಂದಿತು. ದಲಿತ ಜನಾಂಗವು ದಾಖಲಿಸಿದ ಸಾಹಿತ್ಯವೇ ದಲಿತ ಸಾಹಿತ್ಯ ಎಂದಾಯಿತು. ಕರ್ನಾಟಕದ ದಲಿತ ಸಾಹಿತ್ಯ ಹುಟ್ಟಿಗೆ, ಮಹಾರಾಷ್ಟ್ರದ;ದಲಿತ ಪ್ಯಾಂಥರ, 'ಆಂದ್ರದ ವಿರಸಂ', ಕರ್ನಾಟಕದ 'ಬೂಸ' ಪ್ರಕರಣ ಕಾರಣವಾಯಿತು. ನಂತರ ಕರ್ನಾಟಕದಲ್ಲಿ ದಲಿತ

ಸಂವೇದನೆಯನ್ನು ಸಾಹಿತ್ಯದ ಎಲ್ಲ ಆಯಾಮಗಳಲ್ಲೂ ಬೆಳವಣಿಗೆಯನ್ನು ಹೊಂದಿತು. ಇದು ಇದ್ದುದ್ದನ್ನು ಇದ್ದ ಹಾಗೆ ಹೇಳುವ ಪ್ರತಿಭಟನಾ ಮಾದರಿಯಲ್ಲಿ ಮುಂಚೂಣಿಗೆ ಬಂದಿತು. ಆದರೆ ಸಾಹಿತ್ಯವನ್ನು ಸಂವಹನ ಮಾಧ್ಯಮವಾಗಿ ಬಳಸಿದರು.

ಬಂಡಾಯ ಸಾಹಿತ್ಯ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಆಧುನಿಕವಾಗಿ ಬೆಳೆದು ಬಂದ ಬಂಡಾಯ ಸಾಹಿತ್ಯವು ಸಾಹಿತ್ಯಕವಾಗಿ ಬದಲಾವನೆಯನ್ನು ತಂದಿದೆ. ಬಂಡಾಯ ಸಾಹಿತ್ಯದ ಧೋರಣೆಯು ಇಡೀ ಸಮಾಜದ ಅವ್ಯವಸ್ಥೆಯನ್ನು ವಿರೋಧಿಸಿ, ನೇರ, ದಿಟ್ಟತನದಿಂದ ಖಂಡಿಸಿತು, ಬಂಡಾಯ ಸಾಹಿತಿಗಳು, ಬಂಡವಾಳಶಾಹಿ ಮತ್ತು ಸಮಾಜದ ಪಟ್ಟಭದ್ರ ಹಿತಾಸಕ್ತಿವ್ಯವಸ್ಥೆಯ ವಿರುದ್ದ ಧ್ವನಿ ಎತ್ತಿ ಇದ್ದುದನ್ನು ಇದ್ದಹಾಗೆ ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಹೇಳಿಕೊಳ್ಳುತ್ತಿದ್ದರು. ಇಲ್ಲಿ ದಲಿತೇತರ ಸಾಹಿತಿಗಳು ಬರೆದ ಸಾಹಿತ್ಯವನ್ನು ಬಂಡಾಯ ಸಾಹಿತ್ಯವೆಂದು ಕರೆಯುತ್ತೇವೆ. ದಲಿತ ಮತ್ತು ಬಂಡಾಯ ಸಾಹಿತ್ಯವನ್ನು ಒಟ್ಟಾರೆಯಾಗಿ ನವ್ಯೂತ್ತರ ಸಾಹಿತ್ಯವೆಂತಲೂ ಕರೆಯಲಾಗುತ್ತದೆ.

ದಲಿತ ಮತ್ತು ಬಂಡಾಯ ಸಾಹಿತ್ಯವು ಆರಂಭದಲ್ಲಿ ಸಿಟ್ಟು, ಅಪಮಾನಗಳನ್ನು ಹೊರಹಾಕುವ ರೋಷಾವೇಶದ ಭಾಷೆಯಲ್ಲಿಯೇ ಅಭಿವ್ಯಕ್ತಗೊಂಡಿತು, ಆದರೆ ಕಳೆದ ಅನೇಕ ವರ್ಷಗಳಿಂದ ಹಿಡಿದು, ಅದು ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಪಕ್ವವಾಗುತ್ತಾ, ಅಸಂಖ್ಯ ಶೂದ್ರ ಸಮುದಾಯದಿಂದ ಹೃದಯ ಕಲಕುವ ರೀತಿಯ, ಬರಹದಲ್ಲಿ ತೊಡಗಿಕೊಂಡಿದೆ. ಅದು ಮುಖ್ಯವಾಗಿ ಜಾತಿ, ಲಿಂಗ, ವರ್ಗ, ವರ್ಣ ಭಾಷಾಭೇದಗಳನ್ನು ಸಹಿಸದೆ ಸಂಘರ್ಷಕ್ಕೆ ಇಳಿದಿದೆ. ಇಂದು ಪುರೋಹಿತಶಾಹಿ, ಬಂಡವಾಳಶಾಹಿ, ವಸಾಹತುಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಲು ಅದು ಹೋರಾಟದ ಹಾದಿಯನ್ನೂ ಹಿಡಿಯಿತು. ಅಲ್ಲದೆ ಸಾಹಿತ್ಯ ರಚನೆಯ ಮೂಲಕ ಮನಸ್ಸಿನಲ್ಲಿ ಹುದುಗಿರುವ ಅಭಿಪ್ರಾಯಗಳನ್ನು ಆ ಕಾಲಘಟ್ಟದ ಲೇಖಕರು ಹೊರಹಾಕುತ್ತಾರೆ. ಭಿನ್ನ ನೆಲೆಯಲ್ಲಿ ತಮ್ಮ ಮನಸಿನ ಭಾವನೆಗಳನ್ನು ವಿವಿಧ ಪ್ರತಿರೋಧದ ನೆಲೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಕನಕದಾಸರ ಕಾಲದ ಕುರಿತು ಅಧ್ಯಯನಗಳ ಮೂಲಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಅವು ಹೀಗಿವೆ;

ಸುಧಾಕರರ ಈ ರೀತಿ ಅಭಿಪ್ರಾಯಪಡುತ್ತಾರೆ

"ಅನಿರುದ್ಧನ ಜನನದ ಕಾಲ ೧೫-೨-೧೪೮೫ ಭಾನುವಾರ ಸ್ವಾತೀಯ ನಕ್ಷತ್ರ ಎಂಬುದು ಖಚಿತವಾದ್ದರಿಂದ ಕನಕದಾಸರು ತಮ್ಮ ಜನ್ಮದಿನ ಫೆಬ್ರವರಿ೫. ೧೪೮೫ಎಂಬುದು ಸರಿಯಾದ ದಿನ ಎಂದು ಗ್ರಹಿಸಿಕೊಳ್ಳಬಹುದು."[೧೩]

ಜ್ಯೋತಿ ಹೊಸೂರರ ಪ್ರಕಾರ

"ಕನಕದಾಸರು ಸುಮಾರು ೬೦ ವರ್ಷ ಬದುಕಿದ್ದರೆಂದು ಪಾರಂಪರಿಕ ನಂಬುಗೆ ಬಹಳ ಜನರಲ್ಲಿದೆ ಮತ್ತು ಪುರಂದರದಾಸರ ಮರಣಾನಂತರವೂ ಹತ್ತೆಂಟು ವರ್ಷಗಳವರೆಗೆ ಬದುಕಿದ್ದರೆಂದು ಜನಜನಿತ ಐತಿಹ್ಯವಿದೆ. ಆದ್ದರಿಂದ ಕನಕದಾಸರ ಮರಣ ಕ್ರಿ ಶ. ಸುಮಾರು೧೫೭೮ಎಂದು ಇಟ್ಟುಕೊಳ್ಳಲಡ್ಡಿಯಿಲ್ಲ ಹೀಗಾಗಿ ಅವನು ಬದುಕಿದ್ದ ಜೀವನಾವಧಿ ಕ್ರಿ ಶ. ಸುಮಾರು ೧೪೮೮-೧೫೭೮ ಎಂದು ನಿರ್ಧಾರವಾಗುತ್ತದೆ."[೧೪]

ಜಿ.ಜಿ. ಮಂಜುನಾಥನ್ ಅವರು ತಮ್ಮ ಕೃತಿಯಲ್ಲಿ

"ಕನಕದಾಸರು ವಿಜಯನಗರ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಬಾಳಿ ಬದುಕಿದವರು. ಇವರ ಕಾಲ ಕ್ರಿ. ಶ೧೫೦೮-೧೬೦೬ಎಂದು ಭಾವಿಸಲಾಗಿದೆ ಹರಿದಾಸ ಪರಂಪರೆಯ ಮಹೋನ್ನತ ಕೊಡುಗೆಯಾದ ಕನಕದಾಸರನ್ನು ಕುರಿತ ಇತಿವೃತ್ತಗಳು ಇತಿಹಾಸದಿಂದ ಐತಿಹ್ಯದ ಕಡೆಗೆ ಜಾರಿವೆ."[೧೫]

ಚಂದ್ರಕಾಂತ ಬಿಜ್ಜರಗಿ ಅವರ ಅಭಿಪ್ರಾಯ ಹೀಗಿದೆ

"ಕನಕದಾಸರ ಜನನ ಆನಂದನಾಮ ಸಂವತ್ಸರ ಶಕೆ೧೪೧೯ಮಾಘ ಮಾಸದ ಷಷ್ಠಿ ಭಾನುವಾರ ವಿಶಾಖಾ ನಕ್ಷತ್ರವಿರುತ್ತದೆ. ಅದನ್ನು ಶ್ರೀ ಗಗೋರಿಯನ್ ಕ್ಯಾಲೆಂಡರಿಗೆ ಬದಲಾಯಿಸಿದರೆ ೧೪ಫೆಬ್ರವರಿ ೧೪೯೫ರವಿವಾರದಂದು ಸರಿಹೊಂದುತ್ತದೆ."[೧೬] ಹೀಗೆ ಕನಕದಾಸರ ಕಾಲದ ಕುರಿತಾಗಿ ಅನೇಕ ವಿಧವಾಗಿ, ಭಿನ್ನ ನೆಲೆಯಲ್ಲಿ ಅಭಿಪ್ರಾಯಗಳನ್ನು ಅಧ್ಯಯನಕಾರರು ವ್ಯಕ್ತಪಡಿಸಿದ್ದಾರೆ. ಆ ಎಲ್ಲಾ ಅಭಿಪ್ರಾಯಗಳನ್ನು ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಕನಕದಾಸರ ಕಾಲದ ವಿಶ್ಲೇಷಣೆ

ಕನಕದಾಸರು ಬದುಕಿ, ಬಾಳಿದ ಕಾಲದ ಬಗ್ಗೆ ಸಹ ವಾದವಿವಾದಗಳಿವೆ. ಊಹಾಪೋಹಗಳಿವೆ. ದೊರೆತಿರುವ ಖಚಿತ ಆಧಾರಗಳು ತುಂಬಾ ವಿರಳವಿದ್ದರೂ ಅನೇಕ ವಿದ್ವಾಂಸರು ಕನಕದಾಸರ ಕಾಲದ ಕುರಿತು ನಿಖರವಾಗಿ ಹೇಳಲು ಕೆಲವೊಂದು ದಾಖಲೆಗಳ ಆಧಾರದಲ್ಲಿ ಪ್ರಯತ್ನಿಸಿದ್ದಾರೆ. ಆದರೆ ನಾವು ಅವರ ಕಾಲದಲ್ಲಿ ಲಭ್ಯವಾದ ಮಾಹಿತಿ ಕನಕದಾಸರ ಸಾಹಿತ್ಯದಲ್ಲಿ ಮೂಡಿಬಂದ ಸಮಕಾಲೀನ ಜನಜೀವನ, ಪೂರ್ವದ ಕವಿಗಳನ್ನು ಅವರು ಸ್ಮರಿಸಿದ್ದರಿಂದ ನಂತರದ ಕವಿಗಳು ಅವರನ್ನು ಸ್ಮರಿಸಿದ್ದ ಕಾಲವನ್ನು ಅರಸುತ್ತ ಸತ್ಯದ ಸಮೀಪಕ್ಕೆ ಹೋಗಬಹುದು.

“ಊರಗಾಲಯವೆ ಪೆಸರ್ವಡೆದವನ ಮತ್ಸ್ಯೋ

ದರ ಜಾತೆಯಾತ್ಮಸಂಭವನ

ವರಪುರಾಣಂಗಳ ಕನ್ನಡಿ ಸಿದ ಕವಿ

ಶ್ವರರ ಕೊಂಡಾಡುವೆ ಮುದದಿ”[೧೭] ಎಂದಿದೆ

ಉರಗಾಲಯದ ಪೆಸರ್ವಡೆದವನ ಎಂದರೆ ವಾಲ್ಮೀಕಿ ಎಂದೂ ಮತ್ಸ್ಯೋದರ ಜಾತೆಯಾತ್ಮ ಸಂಭವನ ಎಂದರೆ ವ್ಯಾಸರೆಂದೂ ಅವರ ವರಪುರಾಣಗಳನ್ನು ಕನ್ನಡಿಸಿದ ಕವಿವರರು ಕುಮಾರ ವಾಲ್ಮೀಕಿ ಮತ್ತು ಕುಮಾರ ವ್ಯಾಸರೆಂದು ಅರ್ಥೈಸಬಹುದು ಆದ್ದರಿಂದ ಕನಕದಾಸರು ಕುಮಾರ ವಾಲ್ಮೀಕಿ ಮತ್ತು ಕುಮಾರ ವ್ಯಾಸರ ತರುವಾಯದವರು ಎಂದು ತಿಳಿಯುವದಕ್ಕೆ ಆಸ್ಪದವಿದೆ. ಅಲ್ಲದೆ ಕನಕದಾಸರು ವಿಜಯನಗರದ ಶ್ರೀ ಕೃಷ್ಣದೇವರಾಯರ ರಾಜಗುರುಗಳೆಂದು ಹೇಳಲಾಗಿದ್ದ ವ್ಯಾಸರಾಯರ ಶಿಷ್ಯರಾಗಿದ್ದವರು, ಪುರಂದರದಾಸರ ಸಮಕಾಲೀನರು, ಈ ಸಂಗತಿಗಳು ಕನಕದಾಸರನ್ನು೧೬ನೇ ಶತಮಾನದವರು ಎಂದು ತಿಳಿಯಲು ಸಹಾಯಕವಾಗುತ್ತವೆ. ಅಲ್ಲದೆ ಕನಕರ ಕೃತಿಯ ಒಳನೋಟಗಳು ಕಾಲದ ನಿಖರ ಮಾಹಿತಿ ಪಡೆಯಲು ಸಹಾಯಕವಾಗಿವೆ.

‘ಮೋಹನ ತರಂಗಿಣಿ’ಯಲ್ಲಿ ಕಾಲದ ಕುರಿತಾದ ಕುರುಹುಗಳು

ಮೋಹನ ತರಂಗಿಣಿಯಲ್ಲಿ ದೊರೆಯುವ ಮತ್ತೊಂದು ಆಧಾರವೆಂದರೆ. ಪೆಟಲಂಬಿನವರ ಪಥಕದ ನಿರೂಪಣೆ ಪೆಟಲಂಬಿನವರು ಎಂದರೆ ತುಫಾಕಿಯವರು ಎಂದರ್ಥ. ಇದರ ವಿಚಾರ ದಕ್ಷಿಣ ದೇಶದವರಿಗೆ ಗೊತ್ತಾದುದು ೧೫೨೦ರಲ್ಲಿ ನಡೆದ ರಾಯಚೂರು ಯುದ್ಧದಲ್ಲಿ. ಇದಲ್ಲದೆ ಬಿ.ಎಲ್. ರೈಸ್ ಅವರು ಸಂಪಾದಿಸಿರುವ ಶಿವಮೊಗ್ಗೆಯ ೫೮ನೇಯ ಶಾಸನ, ವ್ಯಾಸರಾಯರಿಗೆ ಸಂಭಂದಿಸಿದೆ. ಅದು ಕ್ರಿಶ. ೧೫೨೭ರ ಕಾಲಕ್ಕೆ ಸೇರಿದ ಶಾಸನವಾಗಿದೆ. ಇಲ್ಲಿ ಕನಕದಾಸರಾಗುವ ಪೂರ್ವದಲ್ಲಿ ತಿಮ್ಮಪ್ಪನಾಯಕನಾಗಿ ಢಣ್ಣಾಯಕನಾಗಿದ್ದ ಸಂಗತಿ ತಿಳಿಸುವುದು ಆದ್ದರಿಂದ ೧೬ನೇ ಶತಮಾನಕ್ಕೆ ಸೇರಿದವರೆಂಬ ಹೇಳುವ ನಿಖರ ಮಾಹಿತಿಗೆ ಪೂರಕವಾಗಿದೆ.

ಚಿಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚರಾಯರ ಅಭಿಪ್ರಾಯವನ್ನು ಅಲ್ಲದೆ **ಆರ್**.ಸಿ. **ಹಿರೇಮಠ** ಅಭಿಪ್ರಾಯವು ಮೋಹನ ತರಂಗಿಣಿ ಕೃತಿಯ ಸುತ್ತ ಅಡಗಿದೆ ಶ್ರೀ ಕೃಷ್ಣದೇವರಾಯನ ಆಡಳಿತ೧೫೦೯ರಿಂದ೧೫೨೯ರವರೆಗೆ ಆಳಿದ ಅಲ್ಲಿದೆ ದ್ವಾರಕೆಯ ಶ್ರೀಕೃಷ್ಣನೊಂದಿಗೆ ವಿಜಯನಗರದ ಶ್ರೀ ಕೃಷ್ಣದೇವರಾಯನನ್ನು ಸಮೀಕರಿಸಿ. ಮೋಹನ ತರಂಗಿಣಿ ಎಂಬ ಕೃತಿಯನ್ನು ಬರೆದಿದ್ದಾರೆ ಅಲ್ಲದೆ ವಿಜಯನಗರದ ಜನಜೀವನವನ್ನು ತಮ್ಮ ಕಾವ್ಯದಲ್ಲಿ ಚಿತ್ರಿಸಿದ್ದಾರೆ ಆದ್ದರಿಂದ ಕನಕದಾಸರು ಶ್ರೀ ಕೃಷ್ಣದೇವರಾಯನ ಕಾಲದಲ್ಲಿದ್ದರೆಂಬುದು ನಿಸ್ಸಂಶಯ

ಅನಿರುದ್ಧನ ಜನನವನ್ನು ತಿಳಿಸುವ ‘ಮೋಹನ ತರಂಗಿಣಿ’ಯ ಪದ್ಯ,

“ಆನಂದ ಸಂವತ್ಸರ ಮಾಘ ಶುದ್ಧ ನ

ವೀನ ಪಂಚಮಿ ರವಿವಾರ

ಬಾನುವುದಯದ ಸ್ವಾತೀಯ ನಕ್ಷತ್ರದೆ

ತಾನುದಿಸಿದ ಗಂಡು ಮಗನು"[೧೮]

ಕನಕದಾಸರ ಮೋಹನ ತರಂಗಿಣಿಯಲ್ಲಿ ರತಿ ಪ್ರದ್ಯುಮ್ನರ ಗೃಹ ಪ್ರವೇಶವೇ ಮಾಘ ಶುದ್ಧಪಂಚಮಿ ಬೃಹಸ್ಪತಿವಾರದಲ್ಲಿ ಆಯಿತೆಂದು ಹೇಳಿರುವರು. ಮರುವರುಷದಲ್ಲಿಯೇ ಅದೇ ತಿಥಿಯಲ್ಲಿ ಅವರೀರ್ವರಿಗೆ ಅನಿರುದ್ಧನು ಹುಟ್ಟಿದನೆಂದು ಬರೆದಿರುವರು. ಶಾಲಿವಾಹನ ಶಕೆ ೧೪೭೬ನೇಯ ವರ್ಷವೆಂದರೆ, ೧೫೫೩-೫೪ನೇಯ ಇಸ್ವಿಯು ಹಾಗೂ ಇದೇ ಕೃತಿಯಲ್ಲಿ ತಾತಾಚಾರ್ಯರ ಮತ್ತು ತ್ರಿವಿಕ್ರಮದಾಸರು ಸೋದೆಯಲ್ಲಿ ತ್ರಿವಿಕ್ರಮ ದೇವಸ್ಥಾನವನ್ನು ೧೫೧೫ರಲ್ಲಿ ಕಟ್ಟಿಸಿದರೆಂದು, ಸೋದೆಯ ಶಿಲಾ ಲೇಖನದಲ್ಲಿದೆ. ಮತ್ತು ಈ ಕೃತಿಯಲ್ಲಿ ಪೆಟಲಂಬಿನವರು ಪಥಕವನ್ನು ಹೇಳಿದ್ದಾರೆ. ರಾಯಚೂರ ಕಾಳಗದಲ್ಲಿ ವಿಜಯನಗರ ಸೈನ್ಯದೊಳಗೆ ಪೆಟಲಂಬಿನ ಪಥಕವು ಮೊದಲು ಪ್ರವೇಶ ಪಡೆದಿತೆಂದು ನ್ಯೂನಿಝುನು ಬರೆಯುತ್ತಾನೆ. ರಾಯಚೂರ ಯುದ್ಧವು ೧೫೨೦ರಲ್ಲಿ ಆಯಿತೆಂದು ತಿಳಿದು ಬರುತ್ತದೆ. ಹಾಗೂ ವ್ಯಾಸರಾಯರು ವ್ಯಾಸ ಸಮುದ್ರವನ್ನು ಕಟ್ಟಿಸುತ್ತಿರುವಾಗ ಕನಕದಾಸರು ಪ್ರಥಮ ಸಂದರ್ಶನಮಾಡಿದರೆಂದು ಪ್ರತೀತಿಯಿದೆ. ಅಂದರೆ ವ್ಯಾಸರಾಯರಿಗೆ ವ್ಯಾಸ ಸಮುದ್ರದ ಉಂಬಳಿ ದೊರೆತದ್ದು ೧೫೨೫-೨೬ನೇ ಇಸ್ವಿಯಲ್ಲಿ ಈ ಸಮಯದಲ್ಲಿ ಕನಕದಾಸರಿಗೆ ೧೭-೧೮ವರ್ಷಗಳಾಗಿದ್ದವೆಂದು ಹೇಳಲಾಗುತ್ತದೆ. ಇದರಿಂದ ೧೫೦೮ ರಿಂದ ೧೬೦೬ನೇಯ ಇಸ್ವಿಯೆಂದು ಕನಕದಾಸರು ಜನನ ಮತ್ತು ಮರಣ ಹೊಂದಿದವರ್ಷವೆಂದು ಹೇಳಬಹುದಾಗಿದೆ.

೩.೩ ಕನಕದಾಸರ ಜಾತಿ, ಮತ ಕುರಿತು ಗೊಂದಲಗಳನ್ನು ಸೃಷ್ಟಿಸಿದ ಪ್ರವೃತ್ತಿಯ ಅಧ್ಯಯನಗಳು

ಸಾಮಾನ್ಯವಾಗಿ ಇತರರ, ಪರರ ಕುಲವನ್ನು ಕೇಳುವುದು ತಪ್ಪು ಎಂಬ ಭಾವನೆ ಬೆಳೆಯುತ್ತಿದೆ. ಋಷಿಮೂಲ, ನದಿಮೂಲ ಕೇಳಬಾರದಂತೆ ಹೀಗಿರುವಾಗ, ಸಂತರ, ಜ್ಞಾನಿಗಳ ಕುಲದ ಕುರಿತು ಮಾತನಾಡಿರುವದು ಸರಿಯಲ್ಲವೆಂಬ ಅಭಿಪ್ರಾಯಗಳು ಇವೆ. ಅವುಗಳ ಚರ್ಚೆ ನಿರಾಂತಕವಾಗಿ ನಡೆದಿದೆ ಜಾತಿ, ಮತ, ಹಿಂದಿನಿಂದಲೂ ಒಂದು ಒಗಟಾಗಿ ಪರಿಣಮಿಸಿದೆ ಕನಕದಾಸರೂ ಇದಕ್ಕೆ ಹೊರತಾಗಿಲ್ಲ. ಇವರೆಲ್ಲಾ ಜಾತಿ, ಮತ, ಪಂಥಗಳನ್ನು ಮೀರಿ ಬೆಳೆದವರು ಮನುಕುಲದ ಉದ್ಧಾರವನ್ನು ಬಯಸಿದವರು, ದಾಸಸಾಹಿತ್ಯದ ಯುಗ' ಪ್ರವರ್ತಕರೊಬ್ಬರಾಗಿ ಯಾವ ಮತವನ್ನು ಬಿಡದೆ, ಯಾವ ಮತಕ್ಕೂ ಅಂಟಿಕೊಳ್ಳದೆ, ಸಕಲ ತತ್ವಗಳನ್ನು ಮೀರಿ ಬೆಳೆದು ಈ ನಾಡನ್ನು ಬೆಳಗಿದವರು. ಕಲಿಯಾಗಿ, ಕವಿಯಾಗಿ, ಶೌರ್ಯ ಸಾಹಸಗಳಿಂದ ಮೆರೆದ ಮಹಾನುಭಾವ, ಕುಟುಂಬದಲ್ಲಾದ ನಿರಾಶೆಯೊ?ಯುದ್ಧದ ದುರಂತವನ್ನು ಕಣ್ಣಾರೆ ಕಂಡು ಹೃದಯ ವಿದ್ರಾವಕ ಸಾವು-ನೋವುಗಳು, ದೊರೆತನವನ್ನು ತೊರೆದು ಸಂಸಾರವನ್ನು ತ್ಯಜಿಸಿ ಗುರು ಸೇವೆಯಲ್ಲಿ ಪಳಗಿ

ಭೇದರಹಿತ ತತ್ವೋಪಾಸಕರಾಗಿ ಅಧ್ಯಾತ್ಮ ಶಿಖರವನ್ನೇರಿದ ಮಹಾತ್ಮರಾಗಿದ್ದಾರೆ. ಜಾತಿಗೊಂದಲ ಸೃಷ್ಟಿಸುವ ಹಾಗೂ ಜಾತಿ ಸಮುದಾಯದ ನಾಯಕನನ್ನಾಗಿಸುವ ಪ್ರವೃತ್ತಿ ಕನ್ನಡ ನಾಡು, ದೇಶ, ಸರ್ವಧರ್ಮಗಳ ಜನರು, ಜಾತ್ಯಾತೀತತೆ, ಸಮಾನತೆಯಿಂದ ಬದುಕುವ ನೆಲೆಬೀಡಾಗಿದೆ. ಹಿಂದೂ, ಕ್ರೈಸ್ತ, ಮುಸ್ಲಿಂ ಮುಂತಾದ ಧರ್ಮದವರು ಅದರಲ್ಲಿ ಧರ್ಮದ ಒಳಗೆ ಹಲವು ಜಾತಿ, ವರ್ಗಗಳಿದ್ದುದ್ದನ್ನು ಕಾಣುತ್ತೇವೆ. ಪ್ರತಿ ಜಾತಿಗಳಲ್ಲಿಯೂ ಜಾತಿನಾಯಕನನ್ನು ಸೃಷ್ಟಿಸುವ ಪ್ರವೃತ್ತಿ ಇತ್ತೀಚೆಗೆ ಕಂಡುಬರುತ್ತಿದೆ ಎಂದು ಅಧ್ಯಯನಕಾರರು ಹೇಳುತ್ತಾರೆ. ಪ್ರಾಚೀನ ಕಾಲದಲ್ಲಿ ಮಹತ್‌ಸಾಧನೆ ಮಾಡಿ ತೀರಿಹೋದ ನಾಯಕರನ್ನು, ಅಥವಾ ಸಾಂಸ್ಕೃತಿಕ ವ್ಯಕ್ತಿಗಳನನು ತಮ್ಮ ತಮ್ಮ ಜಾತೀಯ ನಾಯಕರನ್ನಾಗಿಸುವುದು ಇತ್ತೀಚೆಗೆ ಕಂಡುಬಂದಿದೆ. ಲಿಂಗಾಯತರಿಗೆ ಬಸವಣ್ಣ, ಪರಿಶಿಷ್ಟ ಪಂಗಡದವರಿಗೆ ವಾಲ್ಮೀಕಿ, ದಲಿತರಿಗೆ ಅಂಬೇಡ್ಕರ್, ನೇಕಾರರಿಗೆ ದೇವರದಾಸಿಮಯ್ಯ, ಕುರುಬರಿಗೆ ಕನಕದಾಸ ಮುಂತಾದ ಸಮುದಾಯದವರು ತಮ್ಮ ಜಾತಿಯಲ್ಲಿ ನಾಯಕನನ್ನಾಗಿಸುವ ಪ್ರವೃತ್ತಿಗಳು ಹೆಚ್ಚಿವೆ.

ಕನಕದಾಸರ ವಿಷಯ ಬಂದಾಗ ಬೇರೆ ಬೇರೆ ಜಾತಿ, ಜನಾಂಗದವರು ಇವರು ತಮ್ಮ ಜಾತಿಯವರೆಂದು ಕೆಲವು ಆಧಾರಗಳನ್ನಿಟ್ಟುಕೊಂಡು ವಾದಿಸುವ ಪ್ರವೃತ್ತಿ ಹೆಚ್ಚಾಗಿದ್ದನ್ನು ಅಧ್ಯಯನಕಾರರು ಹೇಳಿರುವರು. ಇವರನ್ನು ಕಬ್ಬಲಿಗರು, ಬೇಡ, ನಾಯಕ ಜನಾಂಗ, ದಾಸರು, ಹಂಎಕುರುಬ, ಕುರುಬ ಎಂದು ಹೇಳಿರುವುದು ಅಧ್ಯಯನಗಳಿಂದ ಕಂಡುಬರುವುದು. ಅಲ್ಲದೆ ಕನಕದಾಸರನ್ನು ಮುಖ್ಯವಾಗಿಟ್ಟುಕೊಂಡುಜಾತಿಯ ಗೊಂದಲ ಸೃಷ್ಟಿಸಿದ್ದಾರೆ. ಅಷ್ಟೇ ಅಲ್ಲದೆ ಜಾತಿ ಸಮುದಾಯದ ನಾಯಕನನ್ನಾಗಿಸುವ ಪ್ರವೃತ್ತಿ ಹೆಚ್ಚಾಗಿದೆ. ವಿದ್ವಾಂಸರು ವ್ಯಕ್ತಪಡಿಸಿದ ಆ ಎಲ್ಲಾ ಅಭಿಪ್ರಾಯಗಳನ್ನು ಒಂದೆಡೆ ತಂದು ವಿಶ್ಲೇಷಣೆ ಮಾಡಲಾಗಿದೆ.

ಮಹಾತ್ಮ, ಸಂತ, ಕನಕದಾಸರಿಗೆ ಜಾತಿ, ಮತದಗೊಂದಲ ಮೂಡಿಸಿದ್ದಾರೆ ಜಾತಿ ಕುಲದ ಕುರಿತು ಮಾತನಾಡಿದವರಿಗೆ ಸ್ವತಃ ಕನಕದಾಸರೇ ಕೀರ್ತನೆಯ ಮೂಲಕ ತಿಳಿ ಹೇಳಿದ್ದಾರೆ.

ಒಬ್ಬಸಂತ, ಸಮಾಜ ಸುಧಾರಕರ ಕುರಿತು ಅಧ್ಯಯನ ಮಾಡಬೇಕಾದಾಗ ಅಥವಾ ತಿಳಿದುಕೊಳ್ಳಬೇಕಾದಾಗ 'ಜಾತಿ'ಯಿಂದ ದೂರವಾಗಿರಬೇಕಾದುದು ಅವಶ್ಯಕ ಆದರೆ ಇಂದು 'ಜಾತಿ'ಬಹಳ ಪ್ರಭಾವಿಕಾರಿಯಾದ ಅಂಶವಾಗಿದೆ. ಇದು ಭಾರತೀಯ ಸಾಮಾಜಿಕ, ಸಂರಚನೆಯ ಒಂದು ಅವಿಭಾಜ್ಯ ಅಂಗವಾಗಿದೆ. ಇದು ಕರ್ನಾಟಕ ರಾಜ್ಯ ಭಾರತದೇಶದಲ್ಲಿ ಜಾತಿಯನ್ನು ಹೊರತು ಪಡಿಸಿ ಭಾರತೀಯ ಸಮಾಜವನ್ನು ಊಹಿಸಿಕೊಳ್ಳುವುದು ಸಹ ಅಸಾಧ್ಯವಾದುದ್ದಾಗಿದೆ. ಪ್ರಾಥಮಿಕವಾಗಿ ನಮ್ಮ ಸಮಾಜವು ಹಲವಾರು ವರ್ಗ ವರ್ಣ, ಧರ್ಮ, ಜಾತಿ, ಮತ, ಪಂಥಗಳಲ್ಲಿ ಹಂಚಿಹೋಗಿದೆ. ಅಸ್ಪೃಶ್ಯತೆಯು ಜಾತಿ ವ್ಯವಸ್ಥೆಯ ಇನ್ನೊಂದು ಮುಖ ಹಾಗಾಗಿ ಜಾತಿ ಎಂಬುದು ಏಕಮುಖಿಯಾದ ಸಾಮಾಜಿಕ ವಾಸ್ತವತೆ ಅಲ್ಲವಾಗಿದೆ. ಇದೂಂದು ಸಂಕೀರ್ಣವಾದ ಮತ್ತು ಬಹುಮುಖಿಯಾದ ಆಯಾಮಗಳನ್ನು ಪಡೆದಿರುವ ಕಟುವಾಸ್ತವದ ಸತ್ಯವಾಗಿದೆ. ಈ ಜಾತಿಗೆ

ಹಲವಾರು ಆಯಾಮಗಳಿವೆ ರಾಜಕೀಯ, ಧಾರ್ಮಿಕತೆ, ಆರ್ಥಿಕತೆ, ಲಿಂಗದ ನೆಲೆಗಳಲ್ಲಿ ಜಾತಿ ಕಾರ್ಯ ಪ್ರವೃತ್ತವಾಗಿದೆ. ಅದು ವೈಯಕ್ತಿಕ ಮತ್ತು ಕೌಟುಂಬಿಕ ನೆಲೆಯಲ್ಲಿ ಹೆಚ್ಚಾಗಿ ಜಾಗೃತಗೊಂಡಿದ್ದರೂ ಸಾರ್ವಜನಿಕ ಕ್ಷೇತ್ರಗಳಿಗೂ ಬಾಚಿಕೊಂಡಿದೆ ಜಾತಿ ಆಯಾ ಕಾಲಘಟ್ಟ ಮತ್ತು ಸಂದರ್ಭಕ್ಕೆ ಅನುಗುಣವಾಗಿ ರೂಪಾಂತರವನ್ನು ಹೊಂದುವ ಗುಣ ಪಡೆದುಕೊಂಡಿದೆ.

ಇಲ್ಲಿ ಕುಲದ ಪ್ರಶ್ನೇ, ಜಾತಿಯ ಪ್ರಶ್ನೆ ಅಥವಾ ಧರ್ಮದ ಪ್ರಶ್ನೆಗಳು ನಮಗೆ ಎದುರಾದಾಗ ಅವುಗಳನ್ನು ನಿಬಾಯಿಸುವುದು ಹೇಗೆ? ಆ ಪ್ರಶ್ನೆಗಳನ್ನು ನಾವು ಎದುರಿಸುವುದು ಹೇಗೆ? ಎನ್ನುವಂತ ತೊಡಕು ನನಗಿದೆ. ನಾವು ಜಾತಿ ಎನ್ನುವಂತಹದ್ದು ಒಪ್ಪಿನಡೆಯಬೇಕಾದ ಸಂಗತಿ.
ಕನಕದಾಸರು ಜಾತಿ, ಕುಲದ ಪ್ರಶ್ನೆಮಾಡಿದವರಿಗೆ ಕೀರ್ತನೆಯ ಮೂಲಕ

"ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ
ಅತ್ಮ ಯಾವಕುಲ? ಜೀವ ಯಾವ? ಕುಲ
ತತ್ವೇಂದ್ರೀಯ ಕುಲ ಪೇಳಿರಯ್ಯಾ?.
ಆತ್ಮಾಂತರಾತ್ಮ ಆದಿಕೇಶವನು
ಆತನೊಲಿದ ಮೇಲೆ ಯಾತರ ಕುಲವಯ್ಯ"[೧೯]

ಎಂಬುದಾಗಿ ತಿಳಿಹೇಳಿ, ಜಾತಿ ಕುರಿತು ಮಾತನಾಡುವವರ ಬಾಯಿ ಮುಚ್ಚಿಸಿದ್ದಾರೆ **'ಕುಲ ಕುಲ ವನ್ನುತಿಹರು ಕುಲವ್ಯಾವುದು ಸತ್ಯ ಸುಜನರಿಗೆ?'**ಎಂಬುದಾಗಿ ಹೇಳಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಇಂತಹ ಒಬ್ಬ ಸಂತ ಕವಿ ಕನಕದಾಸರನ್ನು ಕುರುಬ, ಹಂಡೆಕುರುಬ, ಬೇಡ(ನಾಯಕ) ಕಬ್ಬಲಿಗ, ಆದಿಬಣಜಿಗ ಎಂದು ಹೇಳಿ, ಮುಂತಾದ ಸಮಾಜದವರು ಕನಕದಾಸರನ್ನು ತಮ್ಮ ತಮ್ಮ ಪಂಗಡಕ್ಕೆ ಸೀಮಿತಗೊಳಿಸುವ ಪ್ರಯತ್ನ ಮಾಡಿದ್ದಾರೆ ಹಾಗೂ ಮಾಡುತ್ತಿದ್ದಾರೆ, ಈ ಸಂಶೋಧನೆಯ ಮೂಲಕ ಸತ್ಯವನ್ನು ಹುಡುಕುವುದರೊಂದಿಗೆ ನಿಖರವಾಗಿ ಹೇಳಲಾಗುವ ಪ್ರಯತ್ನವಿದು. ಈ ದಿಶೆಯಲ್ಲಿ. ನವೋದಯ ಕಾಲಘಟ್ಟ, ೧೯೦೦-೧೯೫೦ ಪ್ರಗತಿಶೀಲ ಕಾಲ ಘಟ್ಟ ೧೯೩೬-೧೯೪೭ ನವ್ಯ ಕಾಲಘಟ್ಟ ೧೯೫೦ರಿಂದ ಈಚೆ ದಲಿತ ಮತ್ತು ಬಂಡಾಯ ಕಾಲಘಟ್ಟ ೧೯೭೦ನಂತರ ಕಾಲಘಟ್ಟವನ್ನು ಅನುಸರಿಸಿ ಆಯಾ ಕಾಲಘಟ್ಟಕ್ಕನುಗುಣವಾಗಿ ವಿಮರ್ಶಕರ ದೃಷ್ಠಿಕೋನ, ಭಿನ್ನನೆಲೆಯ ಅಭಿಪ್ರಾಯಗಳಿವೆ. ಆ ಎಲ್ಲಾ ಭಿನ್ನ ಧೋರಣೆಗಳನ್ನು, ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹಿಸಿ, ತಾತ್ವಿಕ ತಳಹದಿಯ, ದೃಷ್ಟಿಕೋನದಲ್ಲಿ ಹಲವಾರು ಮಾನದಂಡದಲ್ಲಿ ವಿಶ್ಲೇಷಿಸಿ, ನಿಖರತೆಯನ್ನು ಕಂಡು ಹಿಡಿಯುವ ಪ್ರಯತ್ನ ಈ ಸಂಶೋಧನೆಯಾದ್ದಾಗಿದೆ.

ಆರ್. ನರಸಿಂಹಾಚಾರ್ಯ (ಕ್ರಿ ಶ೧೯೧೯) ಅವರು ಕನಕರಜಾತಿಯ ಕುರಿತು ಹೀಗೆ ಹೇಳಿರುವರು

"ಕನಕದಾಸರು ಬೇಡರವನೆಂದು, ಹಂಡೆಯ ಕುರುಬ ಜಾತಿಯವನೆಂದು ಅವರಿವರು ಹೇಳುತ್ತಾರೆ"[೨೦]

ಕಟ್ಟಿ ಶೇಷಾಚಾರ್ಯರ ಅಭಿಪ್ರಾಯ

"ಕನಕದಾಸರು ತನ್ನ ಮೋಹನ ತರಂಗಿಣಿಯ ಪೀಠಿಕಾ ಭಾಗದಲ್ಲಿ ಶ್ರೀ ರಾಮಾನುಜರನ್ನು ಅವರ ಶಿಷ್ಯ ಪರಂಪರೆಯ ತಾತಾಚಾರ್ಯರನ್ನು ಸ್ಮರಿಸಿರುವುದರಿಂದ, ಶ್ರೀ ವೈಷ್ಣವ ಮತದ ಬಗ್ಗೆ ಒಲವುಳ್ಳವರೆಂತಲೂ ಅದೇ ಕೃತಿಯಲ್ಲಿ ತ್ರಿವಿಕ್ರಮ ದಾಸಸ್ಯ ದಾಸರನ್ನು ಅಂದರೆ ವಾದಿರಾಜರನ್ನು ಸ್ಮರಿಸಿರುವುದರಿಂದ ಮತ್ತು ಹರಿಭಕ್ತಿ ಸಾರದ ಆಂತರಿಕ ಪ್ರಮಾಣಗಳಿಂದ ಕನಕದಾಸರು ಮಾಧ್ವಮತ ನಂಬಿಕೆಯವರೆಂದು ಕೀರ್ತನೆಯೊಂದರಲ್ಲಿ

'ಮುಟ್ಟಲಮ್ಮರು ಎನ್ನಬಂಧುಗಳು ಕಂಡರೆ
ಅಟ್ಟಿ ಬಿಡುವುತಲಿಹರೂ ಕೃಷ್ಣ'

ಎಂಬ ಸಾಲಿನ ಆಧಾರದ ಮೇಲೆ ಕನಕದಾಸರು ಯಾವಕುಲದವರೆಂದು ಗೊತ್ತಾಗುವುದಿಲ್ಲಾ ಆದರೆ ಮುಟ್ಟಿಸಿಕೊಳ್ಳದ ಒಂದು ಜಾತಿಯವರಾಗಿದ್ದಾರೆ, 'ನಾವು ಕುರುಬರು ನಮ್ಮ ದೇವರು ಬೀರಯ್ಯಾ'ಎಂಬ ಕೀರ್ತನೆಯ ಆಧಾರದ ಮೇಲೆ ಕನಕದಾಸರನ್ನು ಕುರುಬ ಕುಲದವರೆಂದು ನಿರ್ಧರಿಸಲಾಗದು ಒಟ್ಟಿನಲ್ಲಿ ಕನಕದಾಸರು ಒರ್ವ ಅಸ್ಪೃಶ್ಯ. ಆದರೇ ಯಾವ ಕುಲಜ ಎಂದು ಹೇಳುವುದು ಕ್ಲೀಷ್ಟವಾಗಿದೆ."[೨೧]

ಬೆಟಗೇರಿ ಕೃಷ್ಣಶರ್ಮಾ ಮತ್ತು ಬೆಂಗೇರಿ ಹುಚ್ಚೂರಾವ್‌ರ ಅಭಿಪ್ರಾಯ

"ಶ್ರೀ ಕನಕದಾಸರ ಭಕ್ತಿಗೀತೆಗಳು' ಎಂಬ ತಮ್ಮ ಸಂಪಾದನಾ ಕೃತಿಯ ಮುನ್ನುಡಿಯಲ್ಲಿ ಕನಕರು ಹುಟ್ಟಿದ ಜಾತಿ ಯಾವುದೆಂಬುದು ಒಂದು ಒಡೆಯಲಾಗದ ಒಗಟಾಗಿದೆ. ಅವರನ್ನು ಕುರುಬ ಜಾತಿಯವರೆಂದು ಹೇಳುವ ಸಂಪ್ರಾದಾಯವು ಇದೆ. ನಾಯಕ(ಬೇಡ)ಜಾತಿಯವರೆಂದು ಹೇಳುವ ಪರಂಪರೆಯೂ ಇದೆ."[೨೨]

ಎಚ್.ಎಂ. ಶಂಕರನಾರಾಯಣರಾವ್ ಅವರ ಪ್ರಕಾರ

"ಕನಕದಾಸರು ಧಾರವಾಡ ಜಿಲ್ಲೆ, ಕಾಗಿನೆಲೆ ಸ್ಥಳದವನೆಂದು ತೋರುತ್ತದೆ. ಜಾತಿಯಲ್ಲಿ ಇವನು ಬೇಡನೆಂದು, 'ಬಾಡ' ಇವನ ಹೊಟ್ಟೂರು ಎಂದು ತಿಳಿದು ಬರುತ್ತದೆ."[೨೩]

ಎಚ್.ಎಲ್. ನಾಗೇಗೌಡರ ಅಭಿಪ್ರಾಯ

"ಕನಕರು ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಕುರುಬರ ಕುಟುಂಬವೊಂದರಲ್ಲಿ ಜನ್ಮವೆತ್ತಿ ವಿಜಯನಗರ ಅರಸುಗಳ ಕಾಲದಲ್ಲಿ ಪಾಳೆಗಾರರು, ಸೇನಾ ನಾಯಕರೂ ಆಗಿದ್ದವರು. ಆನಂತರ ಅವರು ವೈರಾಗ್ಯದ ಹಾದಿಯನ್ನು ಹಿಡಿದು, ದಾಸಪಂಥವನ್ನು ಸ್ವೀಕರಿಸಿದ ಮೇಲೆ ಕನಕದಾಸರಾದರು."[೨೪]

ಜಿ.ಎಸ್. ಭಟ್ಟರವರು

'ನಮ್ಮ ದೇವರು ಬೀರಪ್ಪ'ಎಂದು ಹೇಳಿದ್ದಾರೆ.

'ಮಾರಪಿತ ಕಾಗಿನೆಲೆಯೊದಿ ಕೇಶವನ
ವಾರಿಜವ ನೆರೆನಂಬದವನೆ ಕುರುಬ'

ಜನರು ಕುರುಬ ಎಂದು ನಿಂದಿಸಿದಾಗ ಅವರಿಗೆ ಉತ್ತರವಾಗಿಯೂ ಕನಕದಾಸರು ಇದನ್ನು ಬರೆದಿರಬಹುದು. ಅವರ ಇನ್ನೊಂದು ಕೀರ್ತನೆಯಲ್ಲಿ ಡೊಳ್ಳಿನ ಹಾಡಿನ ಮಾದರಿ ಇದೆ. ಬಾಲ್ಯದ ಡೊಳ್ಳಿನ ಪದ ಅವರ ಮೇಲೆ ಗಾಢ ಪ್ರಭಾವ ಬೀರಿರಬಹುದು.

ಕನಕದಾಸರೇ ರಚಿಸಿದ ಉಗಾಭೋಗವೊಂದಿದೆ. ಅದರಲ್ಲಿ;

'ನಾರದರ ಅಂಶವೇ ಪುರಂದರದಾಸರು ನಾಯಮನು ಮುಂದೆ
ಮಾಂಡವ್ಯ ಶಾಪದಿಂದ ಎರಡು ಜನ್ಮ ಶೂದ್ರಯೋನಿಯಲ್ಲಿಪುಟ್ಟದೆ
ಎನೆಗೆ ಈ ಜನ್ಮದಲ್ಲಿ ಮುಕುತಿ ಎಂತೆಂಬೆ."

ಹೀಗೆ ಕನಕದಾಸರೇ ತಮ್ಮಜಾತಿ ಸ್ಪಷ್ಟಪಡಿಸಿದ್ದಾರೆ.[೨೫]

ಎಂ.ಎಂ. ಕಲಬುರ್ಗಿ

"ಕನಕದಾಸರು ಇತ್ತೀಚೆಗೆ ತುಂಬ ಸುದ್ದಿಯಲ್ಲಿರುವ ಕವಿ. ಸಾಹಿತ್ಯ, ರಾಜಕೀಯ, ಧಾರ್ಮಿಕ ಲಾಭಕ್ಕಾಗಿ ಇವನ ಸುತ್ತ ಸೃಷ್ಟಿಸುತ್ತ ಬಂದ ಗೊಂದಲಗಳನ್ನು ಹೀಗೆ ಬಿಡಿಸಿ ಇಡಬಹುದು.

೧. ಬೇಡನಾಗಿರುವ ಕನಕದಾಸರನ್ನು ಕುರುಬನ್ನಾಗಿಸಲಾಗಿದೆ.

೨. ರಾಮಾನುಜ ಸಂಪ್ರದಾಯದ ದಾಸನಾಗಿರುವ ಕನಕದಾಸನನ್ನು ಮದ್ವ ಸಂಪ್ರದಾಯದ ದಾಸನ್ನಾಗಿಸಲಾಗಿದೆ.

೩. ಕನಕದಾಸನ ಜನ್ಮಗ್ರಾಮವಾಗಿರುವ ಬಾಡ ಪರಿಸರದಲ್ಲಿ ಬೇಡರಂತೆ ಕರುಬರು ಇದ್ದಾರೆ. ಬೇಡರಲ್ಲಿ ವಿಷ್ಣುವಿನ ಆರಾಧನೆ, ಕುರುಬರಲ್ಲಿ ಶಿವನ ಆರಾಧನೆ ಈಗಲೂ ಆಚರಣೆಯಲ್ಲಿದೆ. ಹೀಗೆ ಈ ಪರಿಸರದಲ್ಲಿ ಎಲ್ಲ ಕುರುಬರು ಶಿವೋಪಾಸಕರಾಗಿರುವಾಗ, ಕುರುಬನಾಗಿದ್ದ

ಪಕ್ಷದಲ್ಲಿ ಕನಕದಾಸನೊಬ್ಬನೇ ವಿಷ್ಣು ಉಪಾಸಕನಾಗಿರುವುದು ಹೇಗೆ? ಆದುದರಿಂದ ಅಲ್ಲಿಯ ಬೇಡರಂತೆ ವಿಷ್ಣು ಉಪಾಸಕನಾದ ಕನಕದಾಸನೂ ಬೇಡನಾಗಿದ್ದಾನೆ."[೨೬]

ಪಿ.ಬಿ. ದೇಸಾಯಿಯವರ ಅಭಿಪ್ರಾಯ

"ಕನಕದಾಸರು ಲೋಕೋತ್ತಮ ಮಹಾನುಭಾವರು ಸಾಮಾನ್ಯ ಜಾತಿ, ಜನಾಂಗ ಕುಲಗಳ ಪರಿಮಿತಿ ವಲಯಕ್ಕೆ ಸೇರತಕ್ಕವರಲ್ಲ ಆದರೆ ಕೇವಲ ಜಿಜ್ಞಾಸೆಯ ದೃಷ್ಟಿಯಿಂದಈ ವಿಚಾರವಾಗಿ ನಾಲ್ಕು ಮಾತು ಹೇಳಿದರೆ ತಪ್ಪಾಗದು ಕನಕದಾಸರ ಜಾತಿ, ಕುಲವನ್ನು ನಿರ್ದೇಶಿಸುವವರು. ಈ ಮೂರು ಪಂಗಡಗಳನ್ನು ಹೇಳುವರು. ಕುರುಬ, ಕಬ್ಬಲಿಗ, ಈ ಮೂರರಲ್ಲಿ ಹೆಚ್ಚು ದೃಢವಾದ ನಂಬುಗೆ ಅವರು ಕುರುಬರು, ಅಂಡೆ ಕುರುಬರು ಇಲ್ಲವೆ ತಳವಾರನೆಂದಾಗುತ್ತದೆ ಎನ್ನಬಹುದು.[೨೭]

ರಂ. ಶ್ರೀ ಮುಗಳಿಯವರ ಪ್ರಕಾರ

"ಇವರ ೧೯೫೩ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಈ ರೀತಿ ಹೇಳಿದ್ದಾರೆ 'ಪುರಂದರದಾಸರಿಗೆ ಸಮತೊಕದವರು ಸ್ವತಂತ್ರಕಾಂತಿಯುಳ್ಳವರು ಆದ ಕನಕದಾಸರು ಬಾಡ ಎಂಬ ಹಳ್ಳಿಯಲ್ಲಿ ಕುರುಬ ಕುಲದಲ್ಲಿ ಹುಟ್ಟಿ, ಬೆಳೆದು ದಂಡನಾಯಕರಾದರೆಂದು ಯಾವುದೋ ಯುದ್ಧ ಕಾಲದಲ್ಲಿ ಸಂಸಾರದ ಬಗ್ಗೆ ಉಪರತಿ ಹುಟ್ಟು ಭಕ್ತರಾದರೆಂದು ತೋರುತ್ತದೆ."[೨೮]

ಎಚ್.ಜೆ. ಲಕ್ಕಪ್ಪಗೌಡರು ಅವರು ಹೀಗೆ ಹೇಳಿರುವರು

"ಕನಕದಾಸರು ಸಮಾಜದಲ್ಲಿ ಕೆಳವರ್ಗವೆನ್ನಿಸಿಕೊಂಡ ಕುರುಬರ ಜಾತಿಗೆ ಸೇರಿದವರಾಗಿದ್ದಾರೆ. ಇವರು ಬಾಡ-ಬಂಕಾಪುರ ಎಂಭತ್ತು ಹಳ್ಳಿಗೆ ಸೇರಿದ ಪ್ರದೇಶಕ್ಕೆ ದಂಡನಾಯಕರಾಗಿದ್ದರು. ಸುಮ್ಮನೆ ಕೆಲವರು ಜಾತಿಯ ವಿವಾದ ಹುಟ್ಟಿಸಿದ್ದಾರೆ."[೨೯]

ದೇವೆಂದ್ರ ಮಾಧವನವರ ಅಭಿಪ್ರಾಯವನ್ನು ಅವಲೋಕಿಸಿದಾಗ

"ಕರ್ನಾಟಕದ ಹಿಂದಿನ ಎಲ್ಲ ಸಂತ, ಕವಿ, ಶರಣರ ಜಾತಿಗಳ ಬಗ್ಗೆ ಸಾಮಾನ್ಯವಾಗಿ ನಿಚ್ಚಳ ತಿಳುವಳಿಕೆ ಇರುವಾಗ ಕನಕದಾಸರ ಮತ ವಿಚಾರ ಕುರಿತು ಮಾತ್ರ ಒಂದು ನಿಲುಗಡೆ ದೊರೆಯದಿರುವುದು ಆಶ್ಚರ್ಯಕರ. ಇತ್ತೀಚಿನ ಕೆಲ ದಶಕಗಳಲ್ಲಿ ಕನಕದಾಸರು ಬೇಡರೋ, ಕರುಬರೋ ಎಂಬ ವಾದನಡೆದು ಕುರುಬರೆಂಬುದು ಹೆಚ್ಚು ಪ್ರಚಾರ ಪಡೆದಿದೆ. ಅನೇಕರು ಅದನ್ನು ನಂಬಿದ್ದಾರೆ ದಿನಾಂಕ:೧೮-೪—೧೯೬೫ರ'ಪ್ರಜಾಮತ' ಪತ್ರಿಕೆಯಲ್ಲಿ ಪ್ರೊ. ಸತ್ಯನಾರಾಯಣರು ತಾಳಿಗರಿಯ ಉಲ್ಲೇಖ ಹೀಗಿದೆ.

'ಪೊಗಬೇಕುಯಂತಾ ಲೋಚನೆ ಮಾಡಿದಾಗ

ಆತ ಬೇಡನಾದ ಕಾರ್ಣ ಬ್ರಾಹ್ಮಣರು ವಳಗೆಪೋಗಲಿಕ್ಕೆ ಬಿಡದೆ'

ಎಂಬುದನ್ನು ಅವಲೋಕಿಸಿದರೆ ಕನಕದಾಸರು ಬೇಡಜಾತಿಗೆ ಸೇರಿದವರಾಗಿದ್ದಾರೆ."[೩೦]

ಸುಧಾಕರರ ಅಭಿಪ್ರಾಯ

"ಕನಕದಾಸರು ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಆದ್ದರಿಂದಲೇ ಅವರು ಕೀರ್ತನೆಯೊಂದರಲ್ಲಿ 'ನಾವು ಕುರುಬರು ನಮ್ಮದೇವರು ಬೀರಯ್ಯ' ಎಂದು ಹೇಳಿರುವರು ಅದಕ್ಕಾಗಿ ಕುರುಬರ ಕುಲದಲ್ಲಿ ಹುಟ್ಟಿದ್ದಾರೆ ಎಂದು ಹೆಮ್ಮೆಯಿಂದ ಹೇಳುತ್ತೇನೆ."[೩೧]

ಕಾ.ತ. ಚಿಕ್ಕಣ್ಣರ ಅಭಿಪ್ರಾಯ

"ಸ್ವಾಮಿ ನಾನು ಕನಕ, ನಿಮ್ಮ ಶಿಷ್ಯನಾಗಿ ಮಾಡಿಕೊಳ್ಳಿ ಎಂದು ವ್ಯಾಸರಾಯರನ್ನು ಬೇಡುತ್ತಾನೆ. ಅದಕ್ಕೆ ಅವರು ನೀನು ಯಾವ ಕನಕ?ಕುರುಬರ ಕನಕನೆ?ಎಂದು ಕರೆದಾಗ ಹೌದೆಂದರು ಕುರುಬನಿಗೇಕೆ ಕೋಣನ ಮಂತ್ರ ಎಂದರು. ಇದು ಪರಮಾತ್ಮನ ಅನುಗ್ರಹವೆಂದು ತಿಳಿದ ಕೋಣ, ಕೋಣ ಎಂದು ಜಪಿಸಿ ಯಮನಕೋಣದಿಂದ ತೂಬಿನ ಅಡಚನೆ ನಿವಾರಿಸಿದ ಕನಕದಾಸರು ಕುರುಬರ ಜಾತಿಯಲ್ಲಿ ಹುಟ್ಟಿದುದರಿಂದ ವ್ಯಾಸರಾಯರ ಶಿಷ್ಯತ್ವ ಪಡೆಯುವುದು ಅಷ್ಟು ಸುಲಭವಾದ ಕೆಲಸವಾಗಲಿಲ್ಲ."[೩೨]

ಟಿ.ಎನ್. ನಾಗರತ್ನರವರ ಪ್ರಕಾರ.

"ಕನಕದಾಸರು ಕುರುಬರ ಬೀರೇಗೌಡ ಬಚ್ಚಮ್ಮ ದಂಪತಿಗಳಿಗೆ ಮಗನಾಗಿ ಧಾರವಾಡ ಜಿಲ್ಲೆ ಬಂಕಾಪುರದ ಬಳಿಯ ಬಾಡ ಎಂಬಲ್ಲಿ ಜನಿಸಿದರು ಬಾಲ್ಯದಲ್ಲಿ ಹಲವು ವಿದ್ಯೆಕಲಿತರು. ಮಾತಾಪಿತರ ವಿಯೋಗವಾಯಿತು. ಕಾಲಕ್ರಮದಲ್ಲಿ ನಿಧಿಯೊಂದು ದೊರೆತು ಕನಕನಾಯಕನೆಂದು ಪ್ರಸಿದ್ದರಾದರು. ಆದರೆ ದೈವಯೋಗವಶಾತ್ ತಮ್ಮ ಸಂಪತ್ತನ್ನೆಲ್ಲಾ ದಾನಮಾಡಿ ವ್ಯಾಸತೀರ್ಥರ ಶಿಷ್ಯರಾದರು 'ಆದಿಕೇಶವ'ಎಂಬ ಅಂಕಿತ ಸ್ವೀಕರಿಸಿ ಹರಿದಾಸರಾದರು."[೩೩]

ಅರವಿಂದ ಮಾಲಗತ್ತಿ ಅವರ ಅಭಿಪ್ರಾಯ

"ಮೂಲತಃಶೈವ ಸಂಸ್ಕಾರಗಳಿಂದ ಬಂದ ಕನಕದಾಸರಿಗೆ ಮಾದ್ವ ಮತ್ತು ವೈಷ್ಣವ, ಪಂಥದ ದೀಕ್ಷೆಗಳಾಗಲಿ, ನಾಮಾಂಕಿತಗಳಾಗಲಿ ಸಿಗಲಿಲ್ಲ. ಇದಕ್ಕೆ ಬಹುಶಃ ಕನಕದಾಸರು ಶೂದ್ರ(ಕುರುಬರು)ಎಂಬುದೇ ಕಾರಣ ವಾಗಿರಬೇಕು."[೩೪] ಕನಕದಾಸರ ಜಾತಿ ಕುರಿತು ಅಧ್ಯಯನಕಾರರು ವಿವಿಧ ಆಕರಗಳ ನೆಲೆಗಳಲ್ಲಿ ತಮ್ಮದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಧ್ಯಯನಕಾರರ ಅಭಿಪ್ರಾಯಗಳು ಭಿನ್ನವಾಗಿವೆ. ಆ ಬಗೆಯ ನಿಲುವುಗಳನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ.

ಕನಕದಾಸರ ಜಾತಿ, ಕುರಿತು ವಿಶ್ಲೇಷಣೆ

ಕನಕದಾಸರ ಜಾತಿಯನ್ನು ಕುರಿತು ಹಲವಾರು ವಿದ್ವಾಂಸರು ತಮ್ಮದೇ ಆಕರಗಳನ್ನು ಬಳಸಿಕೊಂಡು, ಕುರುಬ, ಅಂಡೆಕುರುಬ, ಬೇಡ, ನಾಯಕ, ಕಬ್ಬಲಿಗ, ಜನಾಂದವರೆಂದು ಭಿನ್ನಾಭಿಪ್ರಾಯ ಧೋರಣೆಗಳನ್ನು ಅನುಸರಿಸಿ, ಗೊಂದಲದ ಗೂಡನ್ನಾಗಿ ಮಾಡಿರುವರು. ಹೀಗೆ ಹಲವಾರು ವಾದವನ್ನು ಸೃಷ್ಟಿಸುವುದು ವಿದ್ವತ್ತಿಗೆ ಹಿತವಾದುದಲ್ಲ. ಕನಕದಾಸರ ಸಾಹಿತ್ಯವನ್ನು ಅವರ ಕುರಿತಾಗಿ ಬರೆದಿರುವ ಅನೇಕ ವಿದ್ವಾಂಸರ ಅಭಿಪ್ರಾಯಗಳನ್ನು ಅವಲೋಕಿಸಿಲ್ಲವೆಂದೇ ತಿಳಿದುಕೊಳ್ಳಬೇಕಾಗಿದೆ.

ಹೀಗಿರುವಾಗ ಆರ್. ನರಸಿಂಹಾಚಾರ್ಯರು, ಪಿ.ಬಿ. ದೇಸಾಯಿಯವರು, ಕಟ್ಟಿಶೇಷಾಚಾರ್ಯರು, ದೇವೇಂದ್ರ ಮಾಧವನವರ, ಬೆಟಗೇರಿ ಕೃಷ್ಣಶರ್ಮ, ಬೇಂಗೇರಿ ಹುಚ್ಚೂರಾಯರು, ಸಾ.ಕೃ. ರಾಮಚಂದ್ರರಾವ್ ಅವರು ಟಿ.ಎನ್. ನಾಗರತ್ನ, ಪ್ರೊ. ಸುಧಾಕರ. ಕಾ.ತ. ಚಿಕ್ಕಣ್ಣ, ಜ್ಯೋತಿ ಹೊಸೂರ, ರಂ. ಶ್ರೀ. ಮುಗಳಿ. ಮುಂತಾದ ವಿದ್ವಾಂಸರು ಕನಕದಾಸರ ಜಾತಿ, ಮತದ ಕುರಿತು ಈ ಎಲ್ಲ ಅಧ್ಯಯನಕಾರರು ಹೇಳಿರುವ ಅಭಿಪ್ರಾಯಗಳನ್ನು ಅವಲೋಕಿಸಿದಾಗ, ಭಿನ್ನವಾಗಿರುವ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯಕ್ಕೆ ಸಂಭಂದಿಸಿದಂತೆ ತಾತ್ವಿಕವಾಗಿರುವ ಅವಲೋಕನದ ಅಗತ್ಯತೆ ಇರುವುದರಿಂದ ಈ ರೀತಿ ವಿಶ್ಲೇಷಣೆಗೆ ಒಳಪಡಿಸಿದೆ.

ಬೆಟಗೇರಿ ಕೃಷ್ಣಶರ್ಮಾ ಮತ್ತು ಬೆಂಗೇರಿ ಹುಚ್ಚರಾವ್ ಅವರು 'ಶ್ರೀ ಕನಕದಾಸರ ಭಕ್ತಿಗೀತೆಗಳು ಕೃತಿಯ ಮುನ್ನುಡಿಯಲ್ಲಿ, ಕನಕದಾಸರು ಹುಟ್ಟಿದ ಜಾತಿ ಯಾವುದೆಂಬುದು ಒಡೆಯಲಾರದ ಒಗಟಾಗಿದೆ ಎಂದು ಹೇಳಿ, ಅವರನ್ನು ಕುರುಬಜಾತಿಯವರೆಂದು ಹೇಳುವ ಸಂಪ್ರದಾಯವೂ ಇದೆ. ಬೇಡ(ನಾಯಕ) ಜಾತಿಯವರೆಂದು ಹೇಳುವ ಪರಂಪರೆಯೊ ಇದೆ ಎಂದಿರುವರು. ಪುರಂದರದಾಸರು ರಚಿಸಿದುದು ಎಂದು ಪ್ರಚಾರದಲ್ಲಿರುವ ದಾಸರನ್ನು ನಿಂದಿಸಬೇಡ ಮನುಜ ಹರಿದಾಸರ ನಿಂದಿಸಬೇಡ' ಎಂಬ ಕೀರ್ತನೆಯಲ್ಲಿ ಕನಕದಾಸರು ಕಬ್ಬಲಿಗ ಜಾತಿಯವರು ಎಂದು ಇದೆ, ಕುರುಬ. ನಾಯಕ, ಕಬ್ಬಲಿಗ ಎಂಬ ಮೂರು ಜಾತಿಗಳು ಕನಕರ ಹುಟ್ಟಿಗೆ ಸಂಭಂದಿಸಿದುದು ಎಂದು ಹೇಳಿರುವುದು, ನಮ್ಮ ಪರಂಪರೆಯ ವಾಸ್ತವ ಜ್ಞಾನದ ಅಭಾವದಿಂದ ಮಾತ್ರ ಈ ರೀತಿ ಹೇಳಲು ಸಾಧ್ಯ. ಅಲ್ಲದೆ ಇವರು ನವೋದಯದ ಕಾಲಘಟ್ಟದಲ್ಲಿ, ಕನಕದಾಸರ ಕುರಿತು ಅಧ್ಯಯನ ಮಾಡಿರುವುದರಿಂದ ಇವರಿಗೆ ಸಂಪೂರ್ಣವಾದ ಆಧಾರಗಳು ದೊರಕದೆ ಇದ್ದುದರಿಂದ ಈ ರೀತಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ಹೇಳಬಹುದು.

ನಾ. ಶ್ರೀ. ರಾಜ ಪುರೋಹಿತರು. 'ಕನಕದಾಸರು ಬೇಡರು ಅಲ್ಲ, ಕುರುಬರು ಅಲ್ಲ' ಲೇಖನ. ದೇವೇಂದ್ರ ಮಾಧವನವರ, 'ಕನಕದಾಸರು ಬೇಡ ಜನಾಂಗದವರು' ಎಂಬ ಲೇಖನದಲ್ಲಿ ಹೇಳಿರುವ ಸಂಗತಿಗಳನ್ನು ಈ ರೀತಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ.

ಅವರು ಬೇಡ ಜಾತಿಯವರು ಎಂಬುದಕ್ಕೆ ಇರುವ ಆಧಾರಗಳನ್ನು ವಿವರಿಸಿದ್ದಾರೆ. ಕಾಗಿನೆಲೆ ಸಮೀಪದಲ್ಲಿರುವ ತೂಮ್ಮೂರು ಎಂಬ ಇಂದಿನ ಚಿಕ್ಕಹಳ್ಳಿ, ಈ ಹಳ್ಳಿಯನ್ನು ಕನಕದಾಸರ ಜನ್ಮಸ್ಥಳವೆಂದು ಹೇಳುವವರು ಇದ್ದಾರೆ. ಆ ಹಳ್ಳಿಯಲ್ಲಿ ದಾಸ ಎಂಬ ಜಾತಿಯ ಜನರು ವಾಸವಾಗಿದ್ದಾರೆ. ಕನಕನಾಯಕ. ಅಂದರೆ ಕನಕದಾಸರ ತಂದೆ ಬೀರಪ್ಪನಾಯಕರು ತಿರುಪತಿಯಿಂದ ಪ್ರತಿಷ್ಠಾಪಿಸಿರುವನೆಂದು ಹೇಳುವ ತಿಮ್ಮಕೇಶವ ದೇವರ ಗುಡಿಯು ಈ ಹಳ್ಳಿಯ ಕಿರುಗುಡ್ಡದ ಮೇಲಿದೆ 'ದಾಸ'ಜಾತಿಯವರೆ ಈ ದೇವರ ಅರ್ಚಕರಾಗಿದ್ದು, ಇವರಿಗೆ ಇನಾಮಂ ಹೊಲಗಳಿದ್ದು ಕನಕದಾರ ವಂಶಜರು ನಾವು ಎಂದು ಹೇಳಿಕೊಳ್ಳುವವರಿದ್ದಾರೆ. ಯಾವುದೇ ದಾಖಲೆ ಇಲ್ಲದೇ ಹೇಳಿದ ಮಾತಿಗೆ ವಿಶ್ಲೇಷಿಸುವ ಅಗತ್ಯವಿಲ್ಲ. ಇವರು ಕುರುಬ, ಬೇಡ, ಕಬ್ಬಲಿಗ ಜಾತಿಗೆ ಸೇರಿದವರು ಎಂದು ಹೇಳಿದ್ದಾರೆ. ಅಂದರೆ ಕನಕದಾಸರು ಕಬ್ಬಲಿಗ ಜಾತಿಯವರು ಎಂಬುದಾಗಿ ಪುರಂದರದಾಸರು ತಮ್ಮಕೀರ್ತನೆಯಲ್ಲಿ ಹೇಳಿದುದು ಇವರಿಗೆ ಒಪ್ಪಿಗೆ ಇಲ್ಲವೆಂದು ಮುಂದೆ ಈ ಕುರಿತು ಪ್ರತಿಪಾದನೆ ಮಾಡದಿರುವುದು ತಿಳಿದು ಬರುತ್ತದೆ.

ರಂ. ಶ್ರೀ. ಮುಗಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಕರಣ; ದಾಸ ವಾಙ್ಮಯ೨ ಕನಕದಾಸ ಪುಟ. ೨೫೬ರಲ್ಲಿ ಹೇಳಿರುವಂತೆ ಪುರಂದರದಾಸರಿಗೆ ಸಮತೂಕದವರು ಸ್ವತಂತ್ರ ಕಾಂತಿಯುಳ್ಳವರಾಗಿ, ಕನಕದಾಸರು ಅದೇ ಕಾಲದಲ್ಲಿ ಜೀವಿಸಿದ್ದರು. ಉಪಲಬ್ದ ಸಾಮಾಗ್ರಿ ಕಣ್ಣಿಟ್ಟು ನೋಡಲಾಗಿ, ಅವರು 'ಬಾಡ' ಎಂಬ ಹಳ್ಳಿಯಲ್ಲಿ ಕುರುಬರ ಕುಲದಲ್ಲಿ ಹುಟ್ಟಿ, ಬೆಳೆದು ದಂಡನಾಯಕನಾದನೆಂದು, ಯಾವುದೋ ಯುದ್ಧಕಾಲದಲ್ಲಿ ಸಂಸಾರ ಜಿಗುಪ್ಸೆ ಹುಟ್ಟಿ ಭಕ್ತನಾದನೆಂದು ತೋರುತ್ತದೆ'ಎಂದು ಹೇಳಿದ್ದನ್ನು ಅವಲೋಕಿಸಿದರೆ ಇವರು ಕುರುಬ ಜನಾಂಗವರೆಂದು ಸ್ಪಷ್ಟವಾಗುತ್ತದೆ ಆದರೂ ಜಾತಿಯ ವಿಷಯವಾಗಿ ಪದೇ ಪದೆ ಸಮಸ್ಯೆಯನ್ನು ಸೃಷ್ಟಿಸಿದುದು ದುರದೃಷ್ಟಕರ.

ಇಷ್ಟೆಲ್ಲಾ ಆಧಾರಗಳಿದ್ದರೂ, ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚೂರಾವ್ ಅವರು ಕನಕದಾಸರು ಕುರುಬರು ಎಂದು ಹೇಳುವುದಕ್ಕೆ ಯಾವ ಅನುಮಾನದ ಆಧಾರಗಳು ನಮಗೆ ಸಿಗುವುದಿಲ್ಲಾ ಆದರೆ ಕನಕದಾಸರ ತಂದೆಯ ಹೆಸರಿನ ಔಚಿತ್ಯ ಮತ್ತು ಅವರ ಕೀರ್ತನೆಗಳಲ್ಲಿ ಹೇಳಿರುವ ವಿಷಯಗಳಲ್ಲಿಯ ಇಂಗಿತಗಳನ್ನು ಗಮನಿಸಿಬೇಕಾದ ಅಗತ್ಯತೆ ಇದೆ.

ಪುರಂದರದಾಸರದೆಂದು ನಂಬಲಾಗಿರುವ ಪ್ರಸ್ತುತ ಕೀರ್ತನೆಯು ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚೂರಾಯರು ಸಂಪಾದಿಸಿರುವ ಶ್ರೀ ಪುರಂದರದಾಸರ ಸಾಹಿತ್ಯಭಾಗ–೩: 'ಮಹಾತ್ಮ ಜ್ಞಾನ' ಗ್ರಂಥದಲ್ಲಿ ಪ್ರಕಟವಾಗಿದೆ. ಆದ್ದರಿಂದ ಸಂಪಾದಕರು, ಕೀರ್ತನೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆಂದಾಯಿತು ಆದರೂ ಕನಕದಾಸರ ಜಾತಿಯನ್ನು ನಿರ್ಧರಿಸಲು ನಿರ್ಣಾಯಕ ಪ್ರಮಾಣವೆಂದು ಅದನ್ನು ಬಳಸಿಕೊಂಡಿಲ್ಲ. ಅವರ ಕರ್ತೃತ್ವದ ಬಗ್ಗೆ ಅವರ ಸತ್ಯತೆಯ ಬಗ್ಗೆ ಅವರಿಗಿರುವ ಸಂಶಯವೇ ಇದಕ್ಕೆ ಕಾರಣವೆಂದು ಊಹಿಸದೆ ಗತ್ಯಂತರವಿಲ್ಲ. ಪ್ರಸ್ತುತ ಕೀರ್ತನೆ

ಪ್ರಚಾರ ಪಡೆದಿಲ್ಲಾ ಎಂದು ಸಂಪಾದಕರು ಅಡಿಟಿಪ್ಪಣಿಯಲ್ಲಿ ಹೇಳಿರುವುದರಿಂದ ಇದು ಪ್ರಕ್ಷಿಪ್ತವಾಗಿರುವ ಸಾಧ್ಯತೆ ಇದೆ. ಇಡಿ ಕೀರ್ತನೆಯನ್ನು ಚಿಕಿತ್ಸಕ ದೃಷ್ಟಿಯಿಂದ ಓದಿದಾಗ ಮಾತ್ರ ಅದರಲ್ಲಿ ವಿಷಯ ನಿರೂಪಣೆಯ ಏಕಸೂತ್ರತೆ, ಇಲ್ಲದಿರುವುದು ವಿಧಿತವಾಗುತ್ತದೆ.

"ದಾಸರ ನಿಂದಿಸಬೇಡಲೋ ಪ್ರಾಣಿ–ಹರಿ
ದಾಸರ ನಿಂದಿಸಬೇಡ ॥ಪ॥
ಮೋಸವಾಯಿತು ಮನದೊಳು ಗಾಢ
ಲೇಸಾಗಿ ಇದು ತಿಳಿಕೋ ಮೂಢ"

ಪಲ್ಲವಿ, ಅನುಪಲ್ಲವಿಗಳಲ್ಲಿಯೇ ವಿಷಯದ ವಿಸಂಗತಿ ಎದ್ದು ಕಾಣುತ್ತದೆ. ಮುಂದಿನ ನುಡಿಗಳಲ್ಲಿಯೂ ವಿಷಯ ಪ್ರತಿಪಾದನೆಯ ವ್ಯವಸ್ಥಿತತೆ ಇಲ್ಲ ೧ನೇ ನುಡಿಯಲ್ಲಿ ರಾಮಾಯಣ ಮಹಾಭಾರತದಲ್ಲಿಯ ಹರಿ ಭಕ್ತರ ಬಗೆಗೆ ಹೇಳಿ೨ನೇ ನುಡಿಯಲ್ಲಿ ಕೇವಲ ಹರಿಯನ್ನು ನುಡಿಯಿರಣ್ಣ ಎಂದು ಬೋಧಿಸಲಾಗಿದೆ.

೩ನೇ ನುಡಿಯಲ್ಲಿ ಮತ್ತೆ ಒಮ್ಮೆಲೇ ವಿಷಯ ಬದಲಿಸಿ

'ಕನಕದಾಸನು ಕಬ್ಬಲಿಗನು ಎಂದು
ಅಣಕಿಸಿ ನುಡಿಬೇಡಿರಣ್ಣ
ಆನರಂತೆ ನರನಲ್ಲ ತುಂಬುರನೀತನು
ಜನಕಜ ರಮಣನ ಪಾದ ಸೇವಕನು'

ಎಂಬುದಾಗಿ ಸಮಕಾಲೀನರಾದ ಕನಕದಾಸರನ್ನು ಜಾತಿಎತ್ತಿ ನಿಂದಿಸಬೇಡಿರೆಂದು ಕೇಳಿಕೊಳ್ಳಲಾಗಿದೆ. ಅನಂತರದ ಎರಡು ನುಡಿಗಳಲ್ಲಿಯೂ ವಿಷಯ ಪ್ರತಿಪಾದನೆಯ ಹಿಡಿತ ಸಡಿಲಿದೆ ಆದ್ದರಿಂದ ಮನ ನಂಬುವಂತೆ ವಿಷಯ ಪ್ರತಿಪಾದಿಸಿ ಕೀರ್ತನೆ ರಚಿಸುವಲ್ಲಿ ಸಮರ್ಥರಾದ ಪುರಂದರದಾಸರಿಂದ ಈ ಕೀರ್ತನೆ ರಚಿಸಲ್ಪಟ್ಟಿರಲಾರದು ಎಂದು ನಿರ್ಣಯಿಸಬೇಕಾಗುತ್ತದೆ.

ಕಾಯಕ ಬದಲಾಗಿ ಕಬ್ಬಲಿಗರು, ಕುರುಬರಿಂದ ಪ್ರತ್ಯೇಕಗೊಂಡಿರುವುದಾಗಿ, ಅವರ ಮತ ಕಬ್ಬಲಿಗ ಮತ್ತು ಇತರ ಜಾತಿಯೆ ಬಗ್ಗೆ ಮುಂಬೈ ಇಲಾಖೆಗೆ ಸೇರಿದ 'ಗೆಜೆಟೀಯರ' ಗ್ರಂಥದಲ್ಲಿ ಕೊಟ್ಟಿರುವ ಮಾಹಿತಿ ಪ್ರಸ್ತುತ ಅಭ್ಯಾಸ ದೃಷ್ಟಿಯಿಂದ ಉಪಯುಕ್ತತೆ ಇದೆ.

'ಹಂಡೆ' ಎಂಬ ಅಡ್ಡ ಹೆಸರು ಕುರುಬರಲ್ಲಿದ್ದಂತೆ ಕಬ್ಬಲಿಗರಲ್ಲಿಯೂ ಇರುತ್ತದೆ. 'ಹಂಡೆ' ಕುರುಬರು ಬಾಗಲಕೋಟ, ವಿಜಯಪುರ ಜಿಲ್ಲೆಗಳಲ್ಲಿ ಇದ್ದಾರೆ. 'ಹಂಡೆ' ಅಥವಾ ಅಂಡೆ ಎಂಬ ಅಡ್ಡ ಹೆಸರು ಅಥವಾ ವಿಶ್ಲೇಷಣೆ ಆ ಯಾಜಾತಿಯಲ್ಲಿ ಅವರು ಶ್ರೇಷ್ಠರು ಎಂಬುದರ ಪ್ರತೀಕವಾಗಿದೆ. ಎಂದು ಡಾ. ಪಿ.ಬಿ. ದೇಸಾಯಿ ಅವರು ಹೇಳಿದ್ದನ್ನು ಈಗ ನೆನಪಿಸಿಕೊಳ್ಳಬಹುದು. ಕುರುಬರಲ್ಲಿ ಹಂಡೆ ಕುರುಬರು ಎಂಬ ಒಂದು ಪಂಗಡವು ಇದೆ ಹೀಗಿರುವುದರಿಂದ ಪುರಂದರದಾಸರೆಂದು ಪ್ರಚಾರದಲ್ಲಿರುವ ಕೀರ್ತನೆಯಲ್ಲಿ ಹಂಡೆ ಕುರುಬರಾಗಿದ್ದ ಕನಕದಾಸರು ಕಬ್ಬಲಿಗನೆಂದು ತಪ್ಪು

ತಿಳುವಳಿಕೆಯಿಂದ ಹೇಳಲಾಗಿದೆ. ಹೇಳಲಾಗಿದೆಂದು ಭಾವಿಸಲಾಗುತ್ತದೆ. ದಾಸರ ಸಮವಯಸ್ಕರು. ಒಡನಾಡಿಗಳು ಆದ ಪುರಂದರದಾಸರೇ ಈ ಕೀರ್ತನೆ ರಚಿಸಿದ್ದರೆ ಇಂತಹ ಅಚಾತುರ್ಯ ಘಟಿಸುತ್ತಿದ್ದಿಲ್ಲ.

ಕನಕದಾಸರ ಜಾತಿಯ ಬಗೆಗಿನ ಜಿಜ್ಞಾಸೆಯಲ್ಲಿ ಅತ್ಯಂತ ಮಹತ್ವದ ಆಧಾರವಾಗಬಲ್ಲ ಉಗಾಭೋಗವೊಂದಿದೆ. ಇದನ್ನು ಕನಕದಾಸರೆ ರಚಿಸಿದ್ದಾರೆ.

"ಯಮನು ಮುನ್ನೆ ಮಾಂಡವ್ಯಶಾಪದಿಂದೆರಡು ಜ
ನಾಮ ಶೂದ್ರ ಯೋನಿಯೊಳಗೆ ಪುಟ್ಟಿದನು. ಮೊದಲ ಜ
ನಾಮ ವಿದುರನಾಗಿ, ಬಳಿಕ ಕುರುಬರ ಕುಲದಲ್ಲಿ ಜನಿಸಿದೆನ ಗೀಜ
ನಾಮದಲಿ ಮುಕ್ತಿ ಎಂತು ಎಂಬೆ."[೩೭]

ಈ ಮೇಲಿನ ಉಗಾಭೋಗವನ್ನು ಕನಕದಾಸರ ೪೦೦ನೇಯ ಉತ್ಸವದ ರಾಜ್ಯ ಸಮೀತಿಯ ಪ್ರಕಟಣೆ, ಕನಕದಾಸರ ಕೀರ್ತನೆಗಳು ಗ್ರಂಥದಲ್ಲಿ (ಪುಟ–೭೮) ಈ ಉಗಾಭೋಗ ಪ್ರಕಟವಾಗಿದೆ ಕುರುಬರ ಕುಲದಲ್ಲೀಗ ಪುಟ್ಟಿದೆ'ಎಂಬುದಾಗಿ ಸ್ವತಃ ಕನಕದಾಸರೇ ಹೇಳಿರುವಾಗ ಅವರ ಹುಟ್ಟು ಜಾತೀಯ ಬಗೆಗಿನ ಹೆಚ್ಚಿನ ಚರ್ಚೆಗೆ ಅವಕಾಶವೇಕೆ?

ಕನಕದಾಸರು ಕುರುಬರ ಜಾತಿಯಲ್ಲಿ ಹುಟ್ಟಿದವರೆಂದು ಈಗ ಸ್ಪಷ್ಟವಾಗಿದೆ. ಆದ್ದರಿಂದ ಅವರ ಮನೆಯಲ್ಲಿ ಅವರ ಕಳ್ಳುಬಳ್ಳಿಯಲ್ಲಿ ಹಾಲುಮತದ ಸಂಸ್ಕಾರವಿರುವುದು ಸ್ವಾಭಾವಿಕ. ಶೈವ ಸಂಪ್ರದಾಯದ ಹಿನ್ನಲೆಯೆ ಹಾಲುಮತದ ದೇವರುಗಳ ರೀತಿ–ರಿವಾಜುಗಳ ಪ್ರಭಾವವು ಕನಕದಾಸರ ಮೇಲಾಗಿರುವುದು ಸಹಜ ಆದ್ದರಿಂದ ಶೈವ ಪ್ರಭಾವವು ಕನಕದಾಸರ ಮೇಲಾಗಿರುವುದು ಸಹಜ ಆದ್ದರಿಂದ ಶೈವ ಮನೆತನ ಇವರ ಮೇಲೆ ಮತದ ಸಂಸ್ಕಾರ ಮೊಟ್ಟಮೊದಲಿಗೆ ಆಗಿತ್ತೆಂಬುದು ಸ್ಪಷ್ಟ.

ಕನಕದಾಸ ತಂದೆಯ ಹೆಸರು ಬೀರಪ್ಪಗೌಡ. ಈ ಹೆಸರಿನ ಪರಂಪರೆ ಮತ್ತು ಔಚಿತ್ಯ ಅರಿಯುವುದು ಅತ್ಯವಶ್ಯಕ ಉತ್ತರ ಕರ್ನಾಟಕದ ಬೆಳಗಾವಿ, ಬಿಜಾಪುರ, ಬಾಗಲಕೋಟ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಮತ್ತು ಕರ್ನಾಟಕದ ಯಾವುದೇ ಭಾಗದಲ್ಲಿಯೂ ಕೂಡಾ ಬೀರಪ್ಪ ಎಂಬ ಹೆಸರನ್ನು ಕುರುಬರನ್ನು ಹೊರತಪಡಿಸಿ ಇನ್ನೂಳಿದ ಜಾತಿಯವರು ತಮ್ಮ ಮಕ್ಕಳಿಗೆ ನಾಮಕರಣ ಮಾಡುವುದಿಲ್ಲ. ಬೀರಪ್ಪ ಮತ್ತು ಕುರುಬ ಇವೆರಡು ಪರ್ಯಾಯ ಪದಗಳೆಂಬಂತೆ ಕರ್ನಾಟಕದಲ್ಲಿ ಬಳಕೆಗೊಳ್ಳತ್ತವೆ ಎಂಬುದರ ಬಗ್ಗೆ ಭಿನ್ನಾಭಿಪ್ರಾಯ ಇರಬೇಕಾಗಿಲ್ಲ. ಇವರ ಪ್ರಕಾರ ಕನಕದಾಸರ ಅಜ್ಜನೂ ವೈಷ್ಣವರಾಗಿದ್ದರೆ ವೈಷ್ಣವ ಮತದ ಬೇಡರಾಗಿದ್ದರೆ ತನ್ನ ಮಗನಿಗೆ ಶೈವ ಸಂಪ್ರದಾಯದ ಬೀರಪ್ಪ ಎಂದು ಹೆಸರನ್ನು ಖಂಡಿತ ಇಡುತ್ತಿರಲ್ಲಿಲ್ಲ. ವ್ಯಾಸ್ತವವಾಗಿರುವ ಜ್ಞಾನ, ಆಧಾರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು ಅಗತ್ಯ.

ಕನಕದಾಸರ ತಂದೆಯೂ ಪುತ್ರ ಪ್ರಾಪ್ತಿಯ ಲೌಕಿಕ ಆಸೆಗಾಗಿ ತಿರುಪತಿಯ ತಿಮ್ಮಪ್ಪನಿಂದ ಆಕರ್ಷಿತನಾದರೂ ಮನೆಯೆಲ್ಲಿಯ ಶೈವ ಸಂಸ್ಕೃತಿಯ ಮೂಲಕ ಹಾಲುಮತ ಸಂಪ್ರದಾಯ ಒಮ್ಮೆಲೆ

ನಿಂತು ಹೋಗಿರಲಿಕ್ಕಿಲ್ಲ. ಅಂತೆಯೆ ಕನಕದಾಸರು ರಾಮನುಜ ಮತದೆಡೆಗೆ ವಾಲಿದಾಗಲಾಗಲಿ. ಮದ್ವ ಮತದಿಂದ ಆಕರ್ಷಿತರಾದಾಗಾಗಲಿ, ಅವರು ಶೈವದ ಬಗ್ಗೆ ತಾತ್ಸರ ತಾಳಲಿಲ್ಲ. ಪ್ರತಿಯಾಗಿಯೂ ಶೈವದಲ್ಲಿಯೂ ಭಕ್ತಿ ಭಾವಕ್ಕೆ ಅವಕಾಶವಿದೆ ಎಂಬುದನ್ನು ಅರಿತು, ಮತ ಸಮನ್ವಯಕ್ಕೆ ಹೆಣಗಿರಬೇಕೆಂಬುದರ ಸುಳಿವು ಅವರ ಕೃತಿಗಳಲ್ಲಿ ಸಿಗುತ್ತದೆ ಈ ಹಿನ್ನಲೆಯಲ್ಲಿ ಕನಕಗಾಸರ ಎರಡು ಕೀರ್ತನೆಗಳ ರಚನೆಯೆ ರಹಸ್ಯ ಮತ್ತು ಒಳತಿರುಳನ್ನು ಅರ್ಥಮಾಡಿಕೊಳ್ಳಬೇಕಿದೆ.

'ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜನರಕುರಿ ಹಿಂಡುಗಳ
ಅಷ್ಟಮದ ಮತ್ಸರಗಳೆಂತೆಂಬ ಟಗರುಗಳು
ದೃಷ್ಟಿ ಜೀವಾತ್ಮನೆಂಬೊ ಆಡು
ಸೃಷ್ಠಿ ಸಿದ್ಧಪ್ರಸಿದ್ದವೆಂತೆಂಬುವ ಹೋತಗಳು
ಕಟ್ಟಿ ಕೋಲಿನಲಿ ಇರುಯುತಿಹ ನಮ್ಮಜ್ಜ'[೨೮]

ಕೀರ್ತನೆಯಲ್ಲಿ ದೇವರನ್ನು ಕುರುಬನಿಗೆ ಹೋಲಿಸಿ ನರರನ್ನು ಕುರಿಗಳಿಗೆ ಹೋಲಿಸಿ ಸೊಗಸಾದ ರೂಪಕವನ್ನು ರಚಿಸಲಾಗಿದೆ. ಈ ರೀತಿ ದೇವರನ್ನು ಕುರುಬನಿಗೂ ನರರನ್ನು ಕುರಿಗಳಿಗೆ ಹೋಲಿಸುವ ಸಂಪ್ರದಾಯ ಸಾಮಾನ್ಯವಾಗಿ ಎಲ್ಲಾ ಭಾಷೆಗಳಲ್ಲೂ ಕಂಡು ಬರುತ್ತದೆ. ಆದರೆ ಕನಕದಾಸರ ಆಶಯ ಅದಷ್ಟೆ ಇಲ್ಲಿವೆಂಬುದನ್ನು ಆ ಕೀರ್ತನೆಯನ್ನು ಕಾಳಜಿ ಪೂರ್ವಕವಾಗಿ ಓದಿದರೆ ತಿಳಿಯುವುದು ಹಾಗಿಲ್ಲದಿದ್ದರೆ ನಮ್ಮ ದೇವರು ಬೀರಪ್ಪ ಎಂಬುದನ್ನು ಸೇರಿಸುವ ಅಗತ್ಯ ಇರಲಿಲ್ಲ ಅಲ್ಲದೆ ಕೊನೆಯಲ್ಲಿಯ ಎರಡು ಸಾಲುಗಳನ್ನು ಪರಿಶೀಸಿದಾಗ,

'ಜಲಜಾಕ್ಷ ಕಾಗಿನೆಲೆಯಾದಿಕೇಶವನ ಮನ
ವ್ವೊಲಿಸಿ ಭಜಿಸ ಮನುಜ ಹುಚ್ಚು ಕುರುಬ'[೨೯]

ಕಾಗಿನೆಲೆ ಆದಿಕೇಶವನನ್ನು ಸ್ಮರಿಸಿದವರು, ಕನಕದಾಸ ತನ್ನನ್ನು ತಾನು ಕುರುಬನೆಂದು ಹೇಳಿಕೊಂಡಿರುವುದು ಜಾತಿ ಎತ್ತಿ ನಿಂದಿಸಿದವರಿಗೆ, ಕೀರ್ತನೆಗಳ ರೂಪದಲ್ಲಿ ಮರ್ಮಭೇದಕ ಉತ್ತರ ಕೊಡುತ್ತಿದ್ದುದು ಸರ್ವವಿಧಿತ.

ನೀನು ಕುರಿ ಕಾಯುವ ಕುರುಬ ಕೀಳು ಮನುಷ್ಯ, ನಿಮ್ಮ ದೇವರು ಬೀರ ಎಂದು ಪ್ರತಿಷ್ಠಿತ ಪಂಡಿತರು ಹೀಯಾಳಿಸಿದಾಗ, ಕುರಿಕಾಯುವುದು ಕೀಳಲ್ಲವೆಂದು ನಮ್ಮದೇವರು ಕ್ಷುದ್ರನಲ್ಲವೆಂದು ಸಾಧಿಸುವುದಕ್ಕಾಗಿಯೇ ಈ ಕೀರ್ತನೆಯನ್ನು ಸೊಗಸಾದ ರೂಪಕ ನಿರ್ಮಿಸಿ ರಚಿಸಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ನವೋದಯ, ನವ್ಯ, ದಲಿತ ಮತ್ತು ಬಂಡಾಯ ಸಾಹಿತ್ಯದ ಕಾಲಘಟ್ಟಕ್ಕೆ ಸೇರಿದ ಬಹುಸಂಖ್ಯಾತ ವಿದ್ವಾಂಸರು ಕನಕದಾಸರ ಜಾತಿಯನ್ನು 'ಕುರುಬ' ಎಂದು ಹೇಳಿರುವುದು ಸ್ತುತ್ಯಾರ್ಹವಾಗಿದೆ. ಇದಕ್ಕೆ ಪೂರಕವೆಂಬಂತೆ ಸುಭೋದ. ಎಂ. ರಾಮರಾಮ ಎಂಬುವರು

'ಕನಕದಾಸರ ಪವಾಡಗಳು' ಎಂಬ ಲೇಖನದಲ್ಲಿ ಶ್ರೀ ಕನಕದಾಸರು ಹಾಲು ಮತಸ್ಥ ಕುರುಬರಾಗಿ ಜನಿಸಿ, ದಣ್ಣಾಯಕ ಅಧಿಕಾರ ನಡೆಸಿ, ಹರಿದಾಸರೆನಿಸಿದರು ಎಂದು ಅಭಿಪ್ರಾಯ ವ್ಯಕ್ತ ಪಡಿಸಿರುವರು. ಜಿ.ಜಿ. ಮಂಜುನಾಥರವರು, ಕನಕದಾಸರು ರಚಿಸಿದರೆಂದು ಭಾವಿಸಲಾಗಿರುವ "ಕುರುಬರ ಕುಲದಲ್ಲಿ ಜನಿಸಿದನೀಗ ಈ ಜನುಮದಲ್ಲಿ ಮುಕ್ತಿ ಎಂತು ಎಂಬೆ ಎನ್ನುವ ಮಾತನ್ನು ಆಧರಿಸಿ ಕುರುಬರೆಂದಿದ್ದಾರೆ. ಕನಕದಾಸರ ಹಲವಾರು ಕೀರ್ತನೆಗಳು ಇದಕ್ಕೆ ಸ್ಪಷ್ಟೀಕರಣ ನೀಡುತ್ತವೆ.

'ದೇವಿ ನಮ್ಮ ದ್ಯಾವರು ಬಂದಾರು ಬನ್ನೀರೆ ॥ಪ॥
ಕಂಗಣ್ಣ ಮೀನನಾಗಿ ನಮ್ಮ ರಂಗ
ಗುಂಗಾಡಿ ಸೋಮನ ಕೊಂದಾನ್ಮ್ಯ।
ಗುಂಗಾಡಿ ಸೋಮನ ಕೊಂದು ವೇದವನು
ಬಂಗಾರದೊಡಲನಿಗಿತ್ತಾನ್ಮ್ಯ॥೧॥

....

ಡೊಳ್ಳಿನ ಮ್ಯಾಲ ಕೈ ಭರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ತಟ್ಯ್ಯಾನ್ಮಾನ
ಒಳ್ಳೊಳ್ಳೆ ಪದಗಳ ಹನಮಪ್ಪ ಹಾಡ್ಯಾನು
ಚೆಲುವ ಕನಕಪ್ಪ ಕುಣಿದಾನ್ಮ್ಯ॥[೪೦]

ಕೀರ್ತನೆಯ ಪಲ್ಲವಿ ೧ನೇ ಮತ್ತು ಕೊನೆಯ ನುಡಿಗಳು ಇಲ್ಲವೇ ಕುರುಬರ ಸಮುದಾಯದ ಡೊಳ್ಳಿನ ಹಾಡುಗಳ ತಾಳ, ಲಯ, ದಾಟಿಗಳನ್ನು ಅನುಸರಿಸಿ ಈ ಕೀರ್ತನೆ ರಚನೆಗೊಂಡಿದೆ ಪರಂಪರೆಯ ಸಂಸ್ಕಾರದಿಂದ ಸಹಜವಾಗಿ ಇದು ಕನಕದಾಸರ ನಾಲಿಗೆಯ ಮೇಲೆ ನಡೆದಾಡಿದೆ. 'ನಾಲಿಗೆ ಕುಲವನರುಹಿತು'ಎಂಬ ಗಾದೆ ಈ ಪ್ರಸಂಗದಲ್ಲಿ ನೆನಪಿಗೆ ಬಾರದಿರದು.

ಕನಕದಾಸರು ಬಾಲ್ಯದಲ್ಲಿರುವಾಗ ಅವರ ಮೇಲೆ ಡೊಳ್ಳಿನ ಹಾಡುಗಳು, ಬೀರದೇವರ ಹಬ್ಬದ ಆಚರಣೆ, ಇತ್ಯಾದಿ ಕುರುಬರ ಸಂಪ್ರದಾಯಗಳ ಪ್ರಭಾವವು ಬಹಳಷ್ಟು ಆಗಿರಬೇಕು. ಕನಕದಾಸರ ಹುಟ್ಟೂರಾದ ಬಾಡ ಗ್ರಾಮದಿಂದ ಸುಮಾರು ೫ ಕಿ.ಮೀ ಅಂತರದಲ್ಲಿರುವ ಬಂಕಾಪುರ ಗ್ರಾಮವು ಪುರಾತನ ಕಾಲದಿಂದಲೂ ಕುರುಬ ಜನಾಂಗದ (ಹಾಲು ಮತಸ್ಥರು) ಬಹಳ ಜನರಿದ್ದು ಅತ್ಯಂತ ದೊಡ್ಡ ಕೇಂದ್ರ ಸ್ಥಳವಾಗಿತ್ತೆಂಬ ಬಗ್ಗೆ ರಸ್ಥಪುರ ಭೀಮಕವಿ ಕೃತಿ 'ಹಾಲ್ಮತ್ತೋಜಕ ಪುರಾಣ' ಮತ್ತು ಚನ್ನಬಸವ ಕವಿ ಕೃತಿ 'ಹಾಲುಮತ' ಎಂಬ ಗ್ರಂಥಗಳಲ್ಲಿ ಹೇಳಲಾಗಿದೆ. ಆದ್ದರಿಂದ ಕನಕದಾಸರ ತಂದೆಯಾದ ಬೀರಪ್ಪನ ಮೇಲೂ ಅವನ ಮಗನ ಮೇಲೂ ಶೈವ ಮತ್ತು ಹಾಲುಮತದ ಆಚರಣೆ, ಸಂಪ್ರದಾಯಗಳು ಪರಿಣಾಮ ಬೀರಿದ್ದವು ಎಂದರೆ ತಪ್ಪಾಗಲಾರದು. ಕನಕದಾಸರ ಅಜ್ಜನ ಕಾಲದಲ್ಲಿಯೂ ಅವರ ಮನೆತನದಲ್ಲಿ ವೈಷ್ಣವದ ಒಲವು ಇರಲಿಲ್ಲ. ಹಾಲು ಮತದ ಸಂಪ್ರದಾಯದ ಪ್ರಭಾವವೇ ಸಂಪೂರ್ಣವಾಗಿತ್ತು 'ಬೀರಪ್ಪ'ನ ಹೆಸರು ಕುರುಬರ ಕುಲದವನೆಂಬ ಪರಂಪರೆಗೆ

ನಂಬುಗೆಗೆ ಪೋಷಕವಾಗುವ ಪ್ರಮಾಣಗಳು ಸಾಕಷ್ಟು ಪ್ರಬಲವಾಗಿರುವುದನ್ನು ಗಮನಿಸದೆ. ಬೆಟಗೇರಿ ಕೃಷ್ಣಶರ್ಮರು ಹಾಗೂ ಬೆಂಗೇರಿ ಹುಚ್ಚುರಾವ್ ಅವರು "ಕನಕದಾಸರು ಕುರುಬರೆಂದು" ಹೇಳುವುದಕ್ಕೆ ಯಾವ ಅನುಮಾನದ ಆಧಾರಗಳು ನಮಗೆ ಸಿಗುವುದಿಲ್ಲಾ ಎಂದು ಬರೆದಿದ್ದು, ಮೇಲೆ ಚರ್ಚಿಸಿದ ವಿಷಯ ಏಕೆ ಅವರ ಗಮನಕ್ಕೆ ಬರಲಿಲ್ಲ ಎಂಬುದು ಪ್ರಶ್ನಿಸಬೇಕಾಗುತ್ತದೆ. ಹಾಗೆ ಉದ್ದೇಶಪೂರ್ವಕವಾದ ಒಂದೇ ದೃಷ್ಟಿಕೋನದಡಿ ಅವರು ಹೇಳಿದ ಮಾತನ್ನು ಅಲ್ಲಗಳೆಯುವುದು ಉಚಿತವಾಗಿದೆ. ಅಲ್ಲದೆ ನಮಗೆ ಇನ್ನು ಅನೇಕ ಆಧಾರಗಳು ದೊರೆತಿವೆ. ಈ ಹಿನ್ನೆಲೆಯಲ್ಲಿ ಅವರು ಹಾಲುಮತಸ್ಥರು ಎಂಬುದು ಸ್ಪಷ್ಟವಾಗಿದೆ.

ಜನಪದರ ಹಾಡುಗಳಲ್ಲಿ ಕನಕದಾಸರು.

ಜನಪದ ಕವಿಗಳು ಕನಕದಾಸರನ್ನು ಕುರಿತು ಹಾಡಿ ಹೊಗಳಿದ್ದಾರೆ. ಹಾಡಿನಲ್ಲಿ ಅವರ ಕುಲವನ್ನು ಬಣ್ಣಿಸಿದ್ದಾರೆ ಡೊಳ್ಳಿನ ಹಾಡುಗಾರರು, ಡೊಳ್ಳಿನ ಪದಗಳ ಮೂಲಕ ಕನಕದಾಸರನ್ನು ಕೊಂಡಾಡಿದ್ದಾರೆ.

'ಬೀರಪ್ಪ ಬಚ್ಚಮ್ಮಗ ದೇವ ಒಲಿದಾನೂ
ಬೀರಪ್ಪ ಬಚ್ಚಮ್ಮಗ ದೇವ ಒಲಿದಾನಯ್ಯ
ಬಕುತರಿಗೆ ತಿಮ್ಮಪ್ಪನು ಫಲವನು ನೀಡ್ಯಾನಯ್ಯ
ನವಮಾಸ ತುಂಬಿ ಬಚ್ಚಮ್ಮ ಹಡದಾಳೋ॥

....

ತಿಮ್ಮಪ್ಪ ಅಂತ ಹೆಸರು ಇಟ್ಟಾರೋ
ಗರಡಿಯ ಮನೆಕಡೆ ನಡೆದಾನೊ
ಕತ್ತಿವರಸೆ, ಡೊಣ್ಣೆವರಸೆ ಕಲತಾನೋ
ಮಗ ಮಾಂಡಲಿಕನಾಗುವ ಕನಸು ಕಂಡಾನೋ'

ವಿವಿಧ ರೀತಿಯಲ್ಲಿ ಕನಕನ ಮಹಿಮೆಯನ್ನೂ ಕೊಂಡಾಡಿದ್ದಾರೆ.

ಗೀ ಗೀ ಪದಗಳಲ್ಲಿಯೂ ಸಹ ಕನಕದಾಸರ ಮಹಿಮೆಯನ್ನುಕೊಂಡಾಡಿದ್ದಾರೆ.

'ಪುಣ್ಯಭೂಮಿ ಭರತಖಂಡದಾಗ
ಕನ್ನಡನಾಡಿದು ಬಹು ಮಿಗಿಲಾ ಗೀಯ ಗೀಯಗಾ
ಹುಟ್ಟತಾರಾಮೇಲಿಂದ ಮೇಲೆ ಮಹಾತ್ಮರಾ
ಆಗಿ ಹೋಗಿದ್ದಾರಾ ದೇವದೂತರಾ
ಬಸವಣ್ಣ ಅಲ್ಲಿಮಪ್ರಭುವರಾಹರಾ
ತಿಳಿಸಿದಾರ ಮಾನವರಿಗೆಲ್ಲಾ ಜೀವಧಾರಾ

....

....

ಪುರಂದರದಾಸ ಕನಕದಾಸ ಮತ್ತು ಮಹಿಮರಾ'

ಕನಕದಾಸ ನಿಂತಿದಾರ ಕಠಿಣನೀಗಿಸಾರಾ

ಕುರುಬನೆಂದರೂ ಕನಕದಾಸ ಮಹಾಬಹದ್ದೂರ

ತಿಳಿಸ್ಯಾನ ಸರವರಿಗೆಲ್ಲಾ ದೇವರಿರುವ ಕಳಾ[೬೧]

ಹೀಗೆ ಹಾಡು ಮುಂದು ವರಿಯುತ್ತದೆ ಇಲ್ಲಿಯೂ ಸಹ ಜನಪದಕವಿ

ಕನಕದಾಸರನ್ನು ಕುರುಬ ಕುಲದವನೆಂದು ಹೇಳಿದ್ದಾನೆ.

ಈ ಎಲ್ಲ ಅಂಶಗಳನ್ನು ಅವಲೋಕಿಸಿದಾಗ ಕನಕದಾಸರು ಕುರುಬ ಜಾತಿಯವರು ಎಂಬುದು ಸ್ಪಷ್ಟವಾಗುತ್ತದೆ ಆದಾಗ್ಯೂ ಕನಕದಾಸರನ್ನು ಕುರಿತು ಬಂದಿರುವ ಭಿನ್ನ ಅಭಿಪ್ರಾಯಗಳಿಗೆ. ಕೆಲವು ಕೀರ್ತನೆಗಳು ಕುರುಬ ಜಾತಿಗೆ ಸೇರಿದವರೆನ್ನಲು ಪೂರಕವಾಗಿವೆ.

'ಕುರುಬರ ಕುಲದಲ್ಲಿ ಜನಿಸಿದೆನಗೀ

ಜನುಮದತಿ ಮುಕ್ತಿ ಎಂತು ಎಂಬೆ'

'ನಾವು ಕುರುಬರು ನಮ್ಮದೇವರು ಬೀರಯ್ಯ(ಕ. ಕೀ–೧೩೮)'

ಎನ್ನುವ ಕೀರ್ತನೆಗಳು ಕುರುಬ ಜಾತಿಗೆ ಸೇರಿದವರು ಎಂದು ತಿಳಿಯಬಹುದು.

ಮೇಲಿನ ಎಲ್ಲಾ ಸಂಗತಿ ಅಭಿಪ್ರಾಯಗಳನ್ನು ಅವಲೋಕಿಸಿದಾಗ 'ಕುರುಬ ಸಮುದಾಯಕ್ಕೆ ಸೇರಿದವರೆಂದು ನಿರ್ಧಾರವಾಗುತ್ತದೆ. ಅದು ಘಟ್ಟಿಯಾಗಿ ನಿಲ್ಲುತ್ತದೆ. ಹಿ.ಚಿ. ರಾಮಚಂದ್ರೇಗೌಡರು ಈ ರೀತಿ ಅಭಿಪ್ರಾಯಪಡುತ್ತಾ, ಕನಕದಾಸರು ಈಗ ಕುರುಬ ಸಮುದಾಯದಲ್ಲಿ ೨೧ನೇ ಶತಮಾನದ ಸಾಂಸ್ಕೃತಿಕ ರಾಜಕೀಯ ಹೊಸ ಮಾದರಿಯಾಗಿ ಅವತರಿಸಬೇಕಿದೆ. ಹೀಗೆ ಆಗುವುದರಿಂದ ಅವರು ಸಂಕೋಚಗೊಳ್ಳುವುದಲ್ಲ. ಕರ್ನಾಟಕ ಸಂಸ್ಕೃತಿಗೆ ಸಂಬಂಧಾತ್ಮಕವಾದ ಹೊಸ ನೆಲೆಯೊಂದನ್ನು ಕೊಡುತ್ತಾರೆ. ಒಂದು ಕಡೆಯಿಂದ ಮಠದ ಮೂಲಕ ಜಾತಿ ಜಡಗಟ್ಟಿ ಹಿಂಸೆಯಾಗುವುದನ್ನು ತಡೆಯಬಹುದಾದರೆ, ಮತ್ತೊಂದು ಕಡೆಯಿಂದ ಸಾಂಸ್ಕೃತಿಕ ನಾಯಕತ್ವದ ಮೂಲಕ ಸಮುದಾಯದ ನವಚೈತನ್ಯ ಪಡೆಯುವಂತೆ ನೋಡಿಕೊಳ್ಳಬಹುದು ಎಂದು 'ಸಮುದಾಯದ ನಾಯಕತ್ವ' ಎಂಬ ಲೇಖನದಲ್ಲಿ ಹೇಳುತ್ತಾರೆ. ಇವರು ಹೇಳಿದ್ದನ್ನು ಒಪ್ಪಲೇಬೇಕಾದಂತಹ ಅಭಿಪ್ರಾಯವಾಗಿದೆ. ನಾವು ಸಂತರ ವಿಷಯಕ್ಕೆ ಬಂದಾಗ ಜಾತಿ, ಮತ, ಧರ್ಮ ಎಂದು ಸಂಕುಚಿತವಾದ ಮನೋಧರ್ಮವನ್ನು ಅನುಸರಿಸುತ್ತೇವೆ. ಮತ, ಜಾತಿಯ ಅರ್ಥ ಸೀಮಿತವಾದರೆ ಧರ್ಮದ ಅರ್ಥ ವಿಶಾಲವಾದುದು ಮೂಲತ ಧರ್ಮವು ಮಾನವನನ್ನು ಪರಿಶುದ್ಧಗೊಳಿಸುವ ಅಂಶ ನಾವಿಂದು ಮತವನ್ನು ಜಾತಿ ಮಟ್ಟಕ್ಕಿಳಿಸಿ ಬಳಸುತ್ತೇವೆ. ಇದು ಸರಿಯಲ್ಲ ಯಾಕೆಂದರೆ ಕನಕದಾಸರು ಜಾತಿಮತವನ್ನು ಮೀರಿ

ಬೆಳೆದವರು, ಅಂತಹ ಸಂತರನ್ನು ಜಾತಿ, ಮತದಿಂದ ನೋಡುವುದು ಅವರ ವ್ಯಕ್ತಿತ್ವಕ್ಕೆ ಚುತಿ ತಂದಂತೆ.

ಜಾತಿ-ಮತ-ಪಂಥ ಮನುಷ್ಯ ಮನುಷ್ಯರ ಮಧ್ಯೆ ಗೋಡೆಗಳು ಇದ್ದಂತೆ ಈ ಗೋಡೆಗಳನ್ನು ಒಡೆದು ನೆಲಸಮ ಮಾಡಿದಾಗ ಪರಸ್ಪರರಲ್ಲಿ ಹೊಂದಾಣಿಕೆ. ಅರಿವು ಸ್ನೇಹ ಮೂಢಿನಿಲ್ಲುವುದು ಧರ್ಮವು ಹಾಗೆಯೇ ಮನುಷ್ಯ-ಮನುಷ್ಯರ ಮಧ್ಯೆ ಗೋಡೆಗಳಂತಾಗಿದೆ. ಅದನ್ನು ಒಡೆದು ನೆಲಸಮ ಮಾಡಿ ಎಲ್ಲರೂ ಸಮಾನತೆ ಸಾಮರಸ್ಯ ಸೌಹಾರ್ದತೆ ಪ್ರೀತಿ, ವಿಶ್ವಾಸ ಮುಂತಾದ ಸದ್ಗುಣಗಳನ್ನು ಹುಟ್ಟುಹಾಕಿ ಬೆಳೆಸುವಂತಹ ಪವಿತ್ರ ಪ್ರಕ್ರಿಯೆಯಾಗಿದೆ. ಇದೊಂದು ಬಗೆಯ ಉನ್ನತ ಮನೋಧರ್ಮವಾಗಿದೆ.

ಮಹಾತ್ಮರನ್ನು ಒಂದು ಜಾತಿಯಿಂದ ಗುರುತಿಸುವ ಪದ್ದತಿ ತೊಲಗಬೇಕು. ಇಲ್ಲದಿದ್ದರೆ ಆ ಮಹಾತ್ಮರ ಧೀಮಂತಿಕೆಗೆ ಕುಂದುಂಟು ಮಾಡಿದಂತಾಗುತ್ತದೆ. ಅವರನ್ನು ಜಾತಿಯ ಬಲೆಯಿಂದ ಬಿಡಿಸಿ, ವಿಶ್ವಮಾನವದತ್ತ ಒಯ್ಯಬೇಕು. ಎಲ್ಲ ವ್ಯಕ್ತಿಗಳು ಅವರನ್ನು ಗೌರವಿಸಿದರೆ ಮಾತ್ರ ಕನಕದಾಸರಂಥ ಮಹಾತ್ಮನಿಗೂ ವಿಶ್ವಮಾನವ, ವಿಶ್ವಮಾನ್ಯಸ್ಥಾನ ಲಭಿಸುವುದು.

೩.೪ ಕನಕದಾಸರ ಪವಾಡಗಳು/ ಐತಿಹ್ಯಗಳ ತಾತ್ವಿಕ ವಿಶ್ಲೇಷಣೆ

ಕನಕದಾಸರು ದಾಸತ್ವ ಸ್ವೀಕರಿಸಿದ ನಂತರ ಜೀವಿತ ಕಾಲದವರೆಗೆ ಹಲವು ಬಗೆಯ ಪವಾಡ ಮಾಡಿದ್ದಾರೆಂದು ಹೇಳಲಾಗಿದೆ. ಪವಾಡದ ಕಥೆಗಳು ಅಷ್ಟೇ ಸ್ವಾರಸ್ಯಕರವಾಗಿವೆ. ಇವರು ಶೈವ, ವೈಷ್ಣವ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಮತದ ಪ್ರಭಾವವಾದರೂ ಯಾವುದೇ ಪಂಥಗಳ ಒಳಸುಳಿಯಲ್ಲಿ ಸಿಲುಕಿಕೊಳ್ಳಲಿಲ್ಲ. ಇವರು ನಮ್ಮದು ತಮ್ಮದು ಎಂದು ಭೇಧ ಭಾವ ತೋರಿದ, ಎಲ್ಲ ಧರ್ಮದ ಅಂಕುಡೊಂಕುಗಳನ್ನು ನಿರ್ಭಡೆಯಿಂದ ಟೀಕಿಸಿದ್ದಾರೆ. ಅಲ್ಲದೆ ಅವರು ಯಾವ ಮತಕ್ಕೂ ಅಂಟಿಕೊಳ್ಳದ ಮಹಾ ಸಂತರಾಗಿರುವರು. ಕಾರಣ ಭಕ್ತಿ ಮಾರ್ಗವೇ ಮುಕ್ತಿಗೆ ರಾಜಮಾರ್ಗವೆಂದು ಮನಗಂಡಿದ್ದರು. ಆದರೂ ಕನಕದಾಸರ ಮೇಲೆ ರಾಮಾನುಜರ ವಿಶಿಷ್ಟಾದ್ವೈತ ಮತ್ತು ಮಧ್ವರ ದ್ವೈತ ಮತಗಳ ಅಲ್ಪಸ್ವಲ್ಪ ಪ್ರಭಾವವಿತ್ತು ಎಂದು ಅಧ್ಯಯನಕಾರರು ಹೇಳಿರುವುದು. ಆದರೂ ದೀಕ್ಷೆ ಕುರಿತಾದ ಯಾವುದೇ ಆಧಾರಗಳಿಲ್ಲ. ಕನಕರ ಸುತ್ತಲೂ ಅನೇಕ ಪವಾಡ ಕಥೆಗಳು ಹುಟ್ಟಿಕೊಂಡಿವೆ. ಇವುಗಳನ್ನು ಬ್ರಾಹ್ಮಣರು ಹುಟ್ಟುಹಾಕಿದರೆಂದು ಬೇರೆ ಹೇಳುವ ಅಗತ್ಯವಿಲ್ಲ ಎಂದಿದ್ದಾರೆ. ಕಾರಣ ಎಷ್ಟೆ ತಿಪ್ಪರಲಾಗ ಹಾಕಿದರೂ ಕನಕರನ್ನು ಅವರ ವ್ಯಕ್ತಿತ್ವ, ವಿದ್ವತ್ ಪ್ರತಿಭೆಯನ್ನು ಸೃಜನಶೀಲತೆಯನ್ನು ಪ್ರಚಾರವಾಗದಂತೆ ತಡೆಯುವುದು ಅವರಿಂದ ಸಾಧ್ಯವಾಗಲಿಲ್ಲ. ಹೀಗಾಗಿ ಅವರ ಕುರಿತಾಗಿ ಬಂದಿರುವ ಮುಖ್ಯವಾಗಿರುವ ಕೆಲವು ಪವಾಡಗಳನ್ನು ಕುರಿತು ಕೆಲವು ವಿದ್ವಾಂಸರ ಅಭಿಪ್ರಾಯ ಹಿನ್ನೆಲೆಯಲ್ಲಿ ಅವುಗಳನ್ನು ತಾತ್ವಿಕವಾಗಿ ವಿಶ್ಲೇಷಿಸಲಾಗಿದೆ.

ನಾ ಹೋದರೆ ಹೋದೇನು

ಹಂಪೆಯ ಮಠದಲ್ಲಿ ವಿದ್ವತ್-ಗೋಷ್ಠಿ ನಡೆದ ಸಮಯದಲ್ಲಿ ವ್ಯಾಸರು ಕನಕದಾಸ ಪುರಂದರದಾಸರನ್ನು ಪಕ್ಕದಲ್ಲಿಯೇ ಕೂಡಿಸಿಕೊಂಡಿದ್ದರು. ಮೋಕ್ಷಕ್ಕೆ ಹೋಗಲು ಯಾರ‍್ಯಾರಿಗೆ ಸಾಧ್ಯ ಎಂಬ ಗೋಷ್ಠಿ ನಡೆದಿತ್ತು. ಒಬ್ಬರು ಯಾವ ಜನ್ಮಗಳಲಿ ಎಷ್ಟೇ ಸಾಧನೆಗಳನ್ನು ಮಾಡಿದರೂ, ಎಷ್ಟೇ ಜ್ಞಾನ ಸಂಪಾದಿಸಿದರೂ, ಬ್ರಾಹ್ಮಣರಿಗಲ್ಲದೆ, ಬೇರೆಯಾರಿಗೂ ಮೋಕ್ಷ ಸಿಕ್ಕದು ಎಂದು ವಾದಿಸಿದರು. ಇದೇ ಪ್ರಶ್ನೆಯನ್ನು ವ್ಯಾಸರಾಯರು ಸಭಿಕರ ಮುಂದಿಟ್ಟು ಪ್ರತಿಯೊಬ್ಬರನ್ನು ಉದ್ದೇಶಿಸಿ ನಿಮ್ಮಲ್ಲಿ ಸ್ವರ್ಗಕ್ಕೆ ಹೋಗುವವರು ಯಾರು? ಎಂದು ಪ್ರಶ್ನಿಸಿದಾಗ ಇಂಥ ಜಟಿಲ ಪ್ರಶ್ನೆಗೆ ಯಾರು ಉತ್ತರ ಕೊಡಲಿಲ್ಲ. ಕೊನೆಗೆ ಕನಕದಾಸರ ಸರದಿ ಬಂತು ಕನಕ ಇಷ್ಟು ಜನರಲ್ಲಿ ಯಾರ‍್ಯಾರು ಸ್ವರ್ಗಕ್ಕೆ ಹೋಗಬಹುದು?' ಎಂದು ಪ್ರಶ್ನಿಸಿದರು 'ಸ್ವಾಮಿಗಳೆ ಈ ಗೋಷ್ಠಿಗೆ ನಾನು ಅಪರಿಚಿತನು. ಪ್ರತಿಯೊಬ್ಬರಿಗೆ ವ್ಯಕ್ತಿಶಃ ಪ್ರಶ್ನೆ ಕೇಳಿದರೆ ಆಗ ನಾನೇನು ಆಡುವೆನು ನೋಡಬೇಕು' ಎಂದರು ವ್ಯಾಸರು ಈ ಪ್ರಶ್ನೆಯನ್ನು ಪ್ರತಿಯೊಬ್ಬ ವ್ಯಕ್ತಿಗಳನ್ನು ಬೊಟ್ಟುಮಾಡಿ ತೋರಿಸುತ್ತ ಕನಕದಾಸರನ್ನು ಪ್ರಶ್ನಿಸತೊಡಗಿದರು. ಒಬ್ಬೊಬ್ಬರನ್ನು ಬೆಟ್ಟು ತೋರಿಸಿ ಇವರು ವೈಕುಂಠಕ್ಕೆ (ಸ್ವರ್ಗ) ಹೋಗಬಹುದೇ? ಎಂದಾಗ ಕನಕದಾಸರು ಇಲ್ಲ, ಇಲ್ಲ, ಇಲ್ಲ ಎನ್ನುತ್ತಿದ್ದರು. ಕೊನೆಗೆ ಸುಸ್ತ ಹೊಡೆದ ವ್ಯಾಸರಾಯರು ನಾನು ವೈಕುಂಠಕ್ಕೆ ಹೋಗಬಹುದೇ?' ಎಂದು 'ನೀವೂ ಹೋಗಲಾರಿರಿ' ಎಂದು ಹೇಳಿದಾಗ ಅಲ್ಲಿದ್ದವರಿಗೆ ಕನಕರನ್ನು ಪ್ರಶ್ನಿಸಿದರು. ಕನಕ ನಮ್ಮ ಗುರುಗಳನ್ನು ಅವಮಾನಿಸಿದನಲ್ಲ ಎಂದು ಕೋಪಗೊಂಡರು. ಕೊನೆಗೆ ವ್ಯಾಸರಾಯರು ಕನಕ ಇನ್ನಾರು ವೈಕುಂಠಕ್ಕೆ ಹೋಗುತ್ತಾರೆ ಅದನ್ನಾದರೂ ಹೇಳು' ಎಂದರು ಆಗ ಕನಕದಾಸರು 'ಮಹಾಸ್ವಾಮಿಗಳೇ ನಾನು ಹೋದರೆ ಹೋಗಬಹುದು' ಎಂದರು. ಹೀಗೆ ಎನ್ನುತ್ತಿದ್ದಂತೆ. ಅಲ್ಲಿದ್ದ ಪಂಡಿತರು ಕನಕದಾಸರ ವಿರುದ್ಧ ಸಿಡಿದೆದ್ದರು. ಇಲ್ಲಿದ್ದ ಒಬ್ಬರಿಗೂ ವೈಕುಂಠಕ್ಕೆ ಹೋಗಲು ಸಾಧ್ಯವಿಲ್ಲ. ಈ ಕುರುಬನೊಬ್ಬನೇ ಹೋಗುತ್ತಾನಂತೆ, ಬ್ರಾಹ್ಮಣರಿಗೆ ಇಂಥಾ ಅವಮಾನವೆ? ಈ ಕುರುಬನನ್ನು ಹತ್ತಿರಕ್ಕೆ ಸೇರಿಸಿಕೊಂಡುದುದೇ ಮಹಾ ತಪ್ಪು' ಎಂದು ಕನಕದಾಸರ ಮೇಲಿನ ಕೋಪವನ್ನು ವ್ಯಾಸರಾಯರ ಕಡೆಗೆ ತಿರುಗಿಸಿದರು. ಕನಕದಾಸರು ಅವರಿಗೆಲ್ಲಾ ಸಮಾಧಾನ ಹೇಳುತ್ತ ನೋಡಿ ಪಂಡಿತರೆ, ನಾನು ನಿಮಗೆ ಅವಮಾನ ಮಾಡುವ ಉದ್ದೇಶದಿಂದ ಹೀಗೆ ಹೇಳಿಲ್ಲ ನಾನು ಎಂಬ ಅಹಂಕಾರ ಎಲ್ಲಿಂದ ದೂರವಾಗುತ್ತದೆಯೋ ಅಂಥವರು ವೈಕುಂಠಕ್ಕೆ ಹೋಗಬಹುದು ಎನ್ನುವುದೇ ನನ್ನ ಮಾತಿನ ತಾತ್ಪರ್ಯ. ನಾನು ಎಂದು ಹೇಳಿದ್ದು ಅಹಂಕಾರದ ಅರ್ಥದಲ್ಲಿ. ನಾನು ಸ್ವತಃ ಹೋಗುತ್ತೇನೆ ಎಂಬರ್ಥವಲ್ಲ' ಎಂದು ಸಮಜಾಯಿಸಿ ನೀಡಿದಾಗ ಅಲ್ಲಿದ್ದವರು ತಬ್ಬಿಬ್ಬಾದರು.[೪೧]

ಈ ಪವಾಡಕ್ಕೆ ಐತಿಹಾಸಿಕವಾಗಿ ದಾಖಲೆ ಇರುವಂತ ಯಾವ ಆಧಾರಗಳಿಲ್ಲ. ಈ ಘಟನೆ ಸತ್ಯವೋ, ಅಸತ್ಯವೋ ಅಥವಾ ಕಲ್ಪಿತವೋ ಎಂಬುದು ಮುಖ್ಯವಲ್ಲ ಇದು ಎಲ್ಲಿ ನಡೆದಿದೆ ಗೊತ್ತಿಲ್ಲ. ಬ್ರಾಹ್ಮಣರ ಸಭೆ ಎಂದು ಎಲ್ಲರೂ ಒಪ್ಪಬಹುದು. ಈ ಪವಾಡದ ಕತೆಯನ್ನು ಬ್ರಾಹ್ಮಣೇತರರಿಗಿಂತ

ಬ್ರಾಹ್ಮಣರಿಗೆ ಮಹತ್ವ ನೀಡಲಾಗಿದೆ. ವ್ಯಾಸರಾಯರ ಪಕ್ಕ ಕುಳಿತ ಕನಕದಾಸರು ಗೌರವಾನ್ವಿತ ಎಂಬುದು ಮುಖ್ಯ ಉಡುಪಿ ಬ್ರಾಹ್ಮಣರ ಸಮೂಹ ಇಲ್ಲಿಯವರೆಗೂ ಈ ಕಥೆ ಅಲ್ಲಗಳೆದಿಲ್ಲ. ಕನಕರ ವಿದ್ವತ್ತು ಮೆಚ್ಚುವಂತದ್ದು. ಮೇಲ್ನೋಟಕ್ಕೆ ಇದು ಉತ್ಪ್ರೇಕ್ಷೆ ವಿಚಾರವಲ್ಲ ಎನಿಸುತ್ತದೆ.

ಯಾರಿಗೂ ಕಾಣದಂತೆ ಬಾಳೆ ಹಣ್ಣು ತಿಂದದ್ದು

ಒಮ್ಮೆ ಯತಿಗಳಾದ ಶ್ರೀ ವ್ಯಾಸರಾಯರಿಗೆ ಕೃಷ್ಣ ಭಕ್ತರಾದ ಕನಕದಾಸರ ಭಕ್ತಿಯ, ಜ್ಞಾನದ ಪರಾಕಾಷ್ಠೆಯನ್ನು ಮಠದ ಶಿಷ್ಯರೆದುರು ಪ್ರಕಟಪಡಿಸಬೇಕೆಂದಿನಿಸಿತು. ಆಗ ಅವರು ತಮ್ಮ ಎಲ್ಲಾ ಶಿಷ್ಯರನ್ನು ಕರೆದು ಒಂದೊಂದು ಬಾಳೆಹಣ್ಣನ್ನು ಕೊಟ್ಟು ಯಾರೂ ಇಲ್ಲದ ಸ್ಥಳಗಳಲ್ಲಿ ತಿಂದು ಬನ್ನಿರೆಂದು ಹೇಳಿದರು ಆ ವಿಪ್ರ ಶಿಷ್ಯರು ನೀರಿನೊಳಗೆ ಮುಳುಗಿ, ಯಾರು ಇಲ್ಲದ ಕೊಠಡಿಯಲ್ಲಿ ಬಾಗಿಲು ಹಾಕಿಕೊಂಡು, ಕೌದಿ, ಕಂಬಳಿಯನ್ನು ಹೊಚ್ಚಿಕೊಂಡು ಯಾರೂ ಇಲ್ಲದ ನಿರ್ಜನ ಪ್ರದೇಶದಲ್ಲಿ ಹಣ್ಣನ್ನು ತಿಂದೆವೆಂದು ಮರುದಿನ ಗುರುಗಳಿಗೆ ತಿಳಿಸಿದರು ಕನಕನನ್ನು ವ್ಯಾಸರಾಯರು ವಿಚಾರಿಸಿದಾಗ ಬಾಳೆಹಣ್ಣನ್ನು ಯಥಾರೀತಿ ಗುರುಗಳಿಗೆ ಅರ್ಪಿಸಿದನು. ಗುರುಗಳು ಕಾರಣ ಕೇಳಿದಾಗ ಎಲ್ಲೆಡೆ ಭಗವಂತನಿರುವಾಗ ಅವನಿಗೆ ಕಾಣದಂತೆ ತಿನ್ನಲಿಲ್ಲವೆಂದನು. ಆಗ ವ್ಯಾಸರಾಯರು ಮೆಚ್ಚುಗೆಯಿಂದ ನಸುನಗುತ್ತ ತಮ್ಮ ಬ್ರಾಹ್ಮಣೋತ್ತಮ ಶಿಷ್ಯರತ್ತ ನೋಡಿದರು. ತಲೆ ಖಾಲಿಯಿದ್ದ ಶಿಷ್ಯರು ಅಲ್ಲಿಂದ ತಲೆ ತಗ್ಗಿಸಿ ಮೌನವಾಗಿ ಕಾಲೆಗೆದ್ದರು.[೪೨]

ಚಂದ್ರಕಾಂತ ಬಿಜ್ಜರಗಿಯವರು ಈ ರೀತಿ ಹೇಳಿರುವರು

ಈ ಪವಾಡ ಕಥೆಗಳಲ್ಲಿ ವ್ಯಾಸ ಮತ್ತು ವಾದಿರಾಜರಿಗೆ ಕನಕದಾಸರು ಅಣುರೇಣುತೃಣಕಾಷ್ಠಗಳಲ್ಲಿ ದೇವರಿದ್ದಾನೆ. ಹರಿಯು ಸರ್ವಾಂತರಯಾಮಿ. ಆದ್ದರಿಂದ ತಾನು ಬಾಳೆಹಣ್ಣು ಸೇವಿಸಲಿಲ್ಲ ಎಂದು ಹೇಳಿಕೆಯನ್ನು ಸಮರ್ಥಿಸಿದ್ದಾನೆ. ಒಂದರ್ಥದಲ್ಲಿ ಕಣಕಣವು ಭಗವಾನ' ತತ್ವವು ಈ ಯತಿಗಳು ಅನುಸರಿಸಿದ ಅದ್ವೈತ ಮತವೇ ಆಗಿದೆ. ಈ ಕಥೆಗಳಲ್ಲಿ ಏನೇ ಇದ್ದರೂ ಕನಕದಾಸರಿಗೂ ವ್ಯಾಸರಿಗೂ ಹಾಗೂ ವಾದಿರಾಜರಿಗೂ ಅತಿ ಅಚ್ಚುಮೆಚ್ಚಿನವರಾಗಿದ್ದರೆಂದು ಜನಸಾಮಾನ್ಯರಿಗೆ ತೋರಿಸಲು ಹೆಣೆದ ಕಥೆ.[೪೩]

ಒಂದು ಕೀರ್ತನೆ ಇದಕ್ಕೆ ಪೂರಕವಾಗಿದೆ

ಕನಕದಾಸನ ಮೇಲೆ ದಯಮಾಡಲು ವ್ಯಾಸ
ಮುನಿ ಮಠಕರೆಲ್ಲರು ದೂರುತಿಹರೊ ॥ಪ॥

ತೀರ್ಥವನು ಕೊಡುವಾಗ ಕನಕನ್ನ ಕರೆಯೆನಲು
ಧೂರ್ತರಾಗಿದ್ದ ವಿದ್ವಾಂಸರೆಲ್ಲಾ

ಸಾರ್ಥಕವಾಯ್ತು ಇವರ ಸನ್ಯಾಸಿತನವೆಲ್ಲ
ಪೂರ್ತ್ಯಾಗಲೆಂದು ಯತಿ ನಗುತಲಿಹನು ॥೧॥

ಮರುದಿನ ಅವರವರ ಪರೀಕ್ಷಿಸಬೇಕೆಂದು
ಕರೆದು ಸನ್ಯಾಸಿಗಳ ಕನಕ ಸಹಿತ
ತ್ವರಿತದಲಿ ಕರದಲ್ಲಿ ಕದಳಿ ಫಲವನೆಕೊಟ್ಟು
ಯಾರಿಲ್ಲದ ಸ್ಥಳದಲ್ಲಿ ಮೆದ್ದು ಬನ್ನಿರಿ ಎನಲು ॥೨॥

ಊರ ಹೊರಗೆ ಹೋಗಿ ಬ್ಯಾರೆಬ್ಯರೆ ಕುಳಿತು
ತ್ವರಿತದಿಂ ಮೆದ್ದು ವಿದ್ವಾಂಸರೆಲ್ಲ
ತೋರಲಿಲ್ಲವು ಎನಗೆ ಏಕಾಂತ ಸ್ಥಳವೆನುತ
ಸಾರಿ ಕದಳಿ ಫಲವ ತಂದು ಮುಂದಿಟ್ಟ ॥೩॥

ಡಿಂಬದೊಳು ಶಬ್ದವಾಗಾದಿ ಶ್ರೋತೃಗಳಲ್ಲಿ
ಇಂಬಾಗಿ ತತ್ವೇಶ್ವರರೆಲ್ಲ ತುಂಬಿಹರು
ತಿಂಬುವುದು ಹ್ಯಾಂಗೆನುತ ವ್ಯಾಸರಾಯರ ಕೇಳಿ
ಕಂಬದಂತಾದವರೆಲ್ಲ ಕುಳಿತವರು ॥೪॥

ಮಾಣಿಕವು ಕೋಡಗನ ಕೈಯಲ್ಲಿ ಇದ್ದಂತೆ
ಕೋಣನಿದಿರಿಗೆ ಕಿನ್ನರಿಯ ಮೀಟಿದಂತೆ
ವೇಣುಧ್ವನಿ ಬಧಿರನ ಬಳಿ ಹೊರಡಿಸಿದಂತೆ ಕಣ್
ಕಾಣದವನಿಗೆ ಕನ್ನಡಿಯ ತೋರಿದಂತೆ ॥೫॥

ನೋಡಿದಿರ ಈ ಕನಕ ನಾಡುವ ಮಾತುಗಳ
ಮೂಢ ಜನರರಿಯಬಲ್ಲರ ಮಹಿಮೆಯ
ನಾಡಾಡಿಯಂತೆಯೇ ಮಾಡಿಬಿಟ್ಟರು ಇವಗ
ನಾಡೆಲ್ಲ ಹುಡುಕಿದರು ಈಡಾರ ಕಾಣೆ ॥೬॥

ಕರದಲ್ಲಿ ಮೂರ್ತಿಯನು ಹಿಡಿದು ಕೇಳುತಿರಲು

ಅರಿಯದ ಜ್ಞಾನದಲ್ಲಿ ಪೇಳುತಿರಲು
ತ್ವರದಿ ಕನಕನು ಬಂದು ವಾಸುದೇವನ ರೂಪ
ಪರಭೊಮ್ಮ ಪುರಂದರ ವಿಠಲನೆಂದ ॥೭॥[೪೪]

ಈ ಕೀರ್ತನೆ ಕನಕದಾಸರದೆಂದು 'ಪುರಂದರ ವಿಠಲ' ಎಂಬ ಅಂಕಿತ ಪ್ರಕ್ಷಿಪ್ತವೆಂದೂ ಪ್ರತೀತಿ.

ಈ ಮೇಲಿನ ಪದ್ಯವು ಪುರಂದರದಾಸರು ರಚನೆ ಇಲ್ಲವೆ ಕನಕದಾಸರ ರಚಿಸಿರುವರು ಎಂಬ ಗೊಂದಲವಿದೆ. ಏನೇ ಆದರೂ ವ್ಯಾಸರಾಯರ ಉಲ್ಲೇಖ ವಿರುವುದರಿಂದ ಈ ಘಟನೆ ಸತ್ಯವಾಗಿದೆ ಎಂದು ತೋರುತ್ತದೆ.

ಚಂದ್ರಕಾಂತ ಬಿಜ್ಜರಗಿಯವರು ಹೇಳಿದಂತೆ ಇದು ಕಟ್ಟು ಕಥೆ ಎಂದಿರುವರು. ಆದರೆ ನನ್ನ ಅಭಿಪ್ರಾಯದ ಪ್ರಕಾರ ಆಗ ಲೆಕ್ಕಹಾಕಿದರೆ ಕನಕನಿಗೆ ೨೮ ವರ್ಷಗಳಿದ್ದು ಅಧಿಕ ವಯಸ್ಸು ಆಗಿರುವುದರಿಂದ ದಾಸತ್ವ ಸ್ವೀಕರಿಸಿದ್ದರಿಂದ ಆಗ ಎಲ್ಲ ಅಧ್ಯಯನ ಮಾಡಿರುವುದರಿಂದ ಅವನಿಗೆ ಪ್ರಭುತ್ವವಿತ್ತು. ಆದುದರಿಂದ ಅವನು ವೈಚಾರಿಕ ನೆಲೆಯಲ್ಲಿ ದೈವತ್ವ ಕಂಡುಕೊಂಡಿದ್ದ ಹೀಗಿರುವುದರಿಂದ ಅವನು ಹೇಳಿದ ಉತ್ತರ ವಿದ್ವತ್ ಪೂರ್ಣವಾಗಿತ್ತು. ವ್ಯಾಸರಾಯರು ಉತ್ತರದಿಂದ ಸಂತೃಪ್ತಿ ಹೊದಿದ್ದೇ ಉಳಿದ ಶಿಷ್ಯರು ತಲೆತಗ್ಗಿಸಿದ್ದು ಸರಿಯಾಗಿಯೇ ಇದೆ. ಇದು ಕಟ್ಟಿದ ಸೃಷ್ಟಿಸಿದ ಕಥೆಯಲ್ಲ ಹಾಗೂ ಪವಾಡವೂ ಅಲ್ಲ. ನೈಜವಾಗಿ ನಡೆದ ಘಟನೆಯಾಗಿದೆ. ಇದರಿಂದ ಕನಕದಾಸರ ವ್ಯಕ್ತಿತ್ವ ಇಮ್ಮಡಿಗೊಂಡಿದೆ ಎಂಬುದು ಸ್ಪಷ್ಟ ಅಭಿಪ್ರಾಯವಾಗಿದೆ.

ಕುರುಬನಿಗೇಕೆ ಬೇಕು ಕೋಣನ ಮಂತ್ರ

ವ್ಯಾಸರಾಯರು ಆಂಧ್ರಪ್ರದೇಶದ ಮದನಪಲ್ಲಿಯಲ್ಲಿ ಕೆರೆ ಕಟ್ಟಿಸುತ್ತಿದ್ದ ಸಮಯದಲ್ಲಿ ಕನಕದಾಸರು ಯೋಗ್ಯ ಗುರುಗಳನ್ನು ಹುಡುಕುತ್ತ ಇಲ್ಲಿಗೆ ಬಂದರಂತೆ. ವ್ಯಾಸರಾಯರು ಕೆರೆಯ ದಡದಲ್ಲಿ ನಿಂತು ತೂಬಿನ (ಕಾಲುವೆ) ಮಾರ್ಗಕ್ಕೆ ಅಡ್ಡಲಾಗಿ ಬಿದ್ದ ದೊಡ್ಡ ಬಂಡೆಯನ್ನು ತೆಗೆಯುವ ಕೆಲಸದಲ್ಲಿ ನಿರತರಾಗಿದ್ದರು. ಅದೇ ಸಮಯದಲ್ಲಿ ಕನಕದಾಸರು ಸ್ವಾಮಿ ನಾನೊಬ್ಬ ತಮ್ಮ ಶಿಷ್ಯನಾಗಲು ಬಂದಿದ್ದೇನೆ' ಎಂದರಂತೆ. ಅದಕ್ಕೆ ವ್ಯಾಸರಾಯರು ನೀನೆಲ್ಲಿಯ ಶಿಷ್ಯ? ಎಲ್ಲಿಂದ ಬಂದೆ ಎಂದು ಪ್ರಶ್ನಿಸಿದರಂತೆ. ಕನಕದಾಸರು ನಮಿಸುತ್ತಾ ನಾನು ಬಾಡ ಗ್ರಾಮದ ಬೀರಪ್ಪ ನಾಯಕನ ಮಗ ಕನಕ. ನಾನು ಜಾತಿಯಲ್ಲಿ ಕುರುಬ, ನಿಮ್ಮ ಪಾದಗಳಾಶ್ರಯಕ್ಕೆ, ಶಿಷ್ಯತ್ವದ ದೀಕ್ಷೆಯನ್ನು ಬಯಸಿ ಬಂದಿದ್ದೇನೆ. ತಮ್ಮ ಮಂತ್ರೋಪದೇಶವಾಗಬೇಕು ಎಂದು ದೀನವಾಗಿ ಪ್ರಾರ್ಥಿಸುತ್ತಾನೆ. ಅದಕ್ಕೆ 'ಕುರುಬನಿಗೇನು ಮಂತ್ರವೋ ಕೋಣನ ಮಂತ್ರ' ಎಂದು ವ್ಯಾಸರಾಯರು ತಿರಸ್ಕಾರದಿಂದ ಮಾತನಾಡಿದರಂತೆ. ಕನಕದಾಸರು ಇಷ್ಟೇ ಸಾಕು ಗುರುಗಳೆ ಉಪದೇಶ ಎಂದು ಹೇಳುತ್ತ ಅಲ್ಲಿಂದ ಸ್ವಲ್ಪ ದೂರದಲ್ಲಿ ಗಿಡದ ಕೆಳಗಡೆ ಕುಳಿತು 'ಕೋಣ... ಕೋಣ... ಎಂದು ಜಪಿಸಿದರಂತೆ. ಸ್ವಲ್ಪ

ಸಮಯದಲ್ಲಿಯೇ ಅವರ ಎದುರು ಯಮನ ವಾಹನ ಕೋಣ ಬಂದು ನಿಂತಿತಂತೆ. ಆ ಕೋಣ ನೋಡಿದ ಕನಕರು, ವ್ಯಾಸರಾಯರ ಬಳಿ ಬಂದು ನೀವು ಹೇಳಿದ ಮಂತ್ರದಿಂದ ಈ ಕೋಣ ಬಂದಿದೆ. ಮುಂದೇನು ಮಾಡಬೇಕೆಂದು ತಾವು ಉಪದೇಶಿಸಬೇಕೆಂದು ವಿನಮ್ರವಾಗಿ ಬೇಡಿಕೊಂಡರಂತೆ. ವ್ಯಾಸರಾಯರು ಬಂಡೆಯನ್ನು ತೋರಿಸಿ ತೂಬಿಗೆ ಅಡ್ಡವಾಗಿ ಅದನ್ನು ಕಿತ್ತೊಗೆಸು ಎಂದು ಹೇಳಿದರಂತೆ. ಕನಕದಾಸರ ಆಜ್ಞೆಯಂತೆ ಆ ಕೋಣವು ದೊಡ್ಡ ಬಂಡೆಯನ್ನು ತನ್ನ ಕೋಡಿನಿಂದ ಗುದ್ದಿ ಗುದ್ದಿ ತೂತು ಹಾಗಿ ಸರಿಸಿತಂತೆ. ಅದು ಈಗಲೂ ನೋಡಬಹುದೆಂದು ಸ್ಥಳೀಯರು ಆ ಸ್ಥಳವನ್ನು ತೋರಿಸುತ್ತಾರೆ.

'ಕನಕದಾಸರು ಕೋಣನಿಂದ ಬಂಡೆಯನ್ನು ಒಡಸಿದ್ದಕ್ಕಾಗಿ ಅವರನ್ನು ಯಮಾಂಶರೆಂದು ಕರೆಯುತ್ತಾರೆ ಎಂಬ ವ್ಯಾಖ್ಯನವಿದೆ'.[೪೫]

ಕನಕದಾಸರು ಕಾಗಿನೆಲೆಯಿಂದ ಗುರುಗಳನ್ನು ಹುಡುಕುತ್ತ ಇಲ್ಲಿಗೆ ಬಂದರು ಎಂಬ ಸಂಗತಿ ಸತ್ಯವೆಂದಾದರೆ ೧೫೨೬-೩೦ರ ಮಧ್ಯ ಆಗಿರಲೇಬೇಕು. ಕೆರೆ ನಿರ್ಮಾಣವಾಗಿ ಕಾಲುವೆ ತೋಡುವ ಸಮಯದಲ್ಲಿ ಈ ಘಟನೆ ನಡೆಯಿತು ಎನ್ನುವುದನ್ನು ಈ ಪವಾಡ ಕತೆ ತಿಳಿಸುತ್ತದೆ. ಇದನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ನನಗೆ ಇದು ಪವಾಡ ಎಂದು ಅನಿಸುವುದಿಲ್ಲ. ಇದೊಂದು ಕಟ್ಟು ಕಥೆಯಾಗಿದೆ. ಕಾರಣ 'ಮದನಪಲ್ಲಿಯ ಪರಿಸರದಲ್ಲಿ ಬೆಟ್ಟಕೊಂಡ ಎಂಬ ಗ್ರಾಮವನ್ನು ಕೃಷ್ಣರಾಯನು ವ್ಯಾಸರಿಗೆ ದತ್ತಿ ನೀಡಿದ್ದು ೧೫೨೬ರಲ್ಲಿ. ಈ ದತ್ತಿಯು ಹಂಪಿಯ ಕಮಲಾಪುರ ಶಾಸನದಲ್ಲಿ ಉಲ್ಲೇಖಗೊಂಡಿದೆ. ಶಾಸನದ ಕಾಲ ೧೪೪೭ನೆಯ ಪಾರ್ಥಿವನಾಮ ಸಂವತ್ಸರ, ಪಾಲ್ಗುಣ ಶುದ್ಧ ದ್ವಾದಶಿ (೨೪.೨.೧೫೨೬) ಕೃಷ್ಣದೇವರಾಯನು ವ್ಯಾಸರಾಯರಿಗೆ ಕರೆ ಕಟ್ಟಲು ಸರ್ವಮಾನ್ಯವಾಗಿ ದಾನ ಕೊಟ್ಟರು.[೪೬]

ಈ ಮೇಲಿನ ಅಭಿಪ್ರಾಯವನ್ನು ಗಮನಿಸಿದಾಗ ಇದೇ ಶಾಸನದಲ್ಲಿ ಪುರಂದರದಾಸರ ಉಲ್ಲೇಖವೂ ಕಂಡುಬರುತ್ತದೆ. ಒಂದು ಕೆರೆಯನ್ನು ಪೂರ್ಣಗೊಳಿಸಲು ನಾಲ್ಕೈದು ವರ್ಷಗಳ ಅಗತ್ಯತೆ ಇದೆ. ಈ ಕೆರೆ ಸಮುದ್ರಕ್ಕೆ ಸಮಾನಾದುದು ಎಂಬ ಹೇಳಿಕೆ ಇರುವುದರಿಂದ ಅತಿ ದೊಡ್ಡ ಕೆರೆಯಾಗಿತ್ತು. ಈ ಕಥೆ ಪವಾಡಮಯವಾಗಿರುವುದರಿಂದ ಈ ಘಟನೆ ಐತಿಹಾಸಿಕವಾಗಿ ನಡೆಯಿತೇ? ಎಂಬ ಅನುಮಾನ ಮೂಡುತ್ತದೆ. ಆಂಧ್ರದ ಮದನಪಲ್ಲಿಯ ಪರಿಸರದಲ್ಲಿ ವ್ಯಾಸರಾಯರು ಕೆರೆ ಕಟ್ಟಿಸಿರುವ ಬಗ್ಗೆ ಶಾಸನಾಧಾರಗಳು ಇರುವುದರಿಂದ ಇದು ಐತಿಹಾಸಿಕ ಸತ್ಯ. ಆ ಸಮಯದಲ್ಲಿ ಕನಕದಾಸರಿಗೆ ೨೫-೨೬ ವಯಸ್ಸು. ವ್ಯಾಸರಾಯರಿಗೆ ಮುಪ್ಪಿನ ೮೦ಕ್ಕೂ ಅಧಿಕ ವಯಸ್ಸು ಇರಬಹುದು. ಇಲ್ಲಿಯ ಕೆರೆಕಟ್ಟುವ ಮೊದಲು ವ್ಯಾಸರಾಯರು ಹಂಪಿಯ ಪರಿಸರದಲ್ಲಿ ಒಂದು ಕೆರೆ ಕಟ್ಟಿದ್ದರು. ಅದಕ್ಕೂ ವ್ಯಾಸ ಸಮುದ್ರವೆಂದು ಕರೆಯಲಾಗುತ್ತದೆ.

ಹೀಗಾಗಿ ಕೆರೆ ಕಟ್ಟಿಸಿದ್ದು ನಿಜವಿದೆ. ಆದರೆ ಕನಕನು ಕುರುಬನಿಗೇಕೆ ಕೋಣನಮಂತ್ರ ಅಲ್ಲದೆ ಸಾಕ್ಷಾತ್ ಯಮನ ಕೋಣ ಬಂದು ಆ ಕಲ್ಲನ್ನು ಕಿತ್ತು ಮಾಯವಾದದ್ದು ಸ್ವಲ್ಪ ಉತ್ಪ್ರೇಕ್ಷೆ

ಎನಿಸುತ್ತದೆ. ಕಾರಣ ಆಗಿನ ಕಾಲದಲ್ಲಿ ಕೋಣ ಬಳಸಿರಬಹುದು. ಅದು ಸತ್ಯ ಆದರೆ ಯಮನ ಕೋಣ ಮಾತ್ರ ಅಲ್ಲ ಎನ್ನುವುದು ನನ್ನ ಅಭಿಮತ. ಏಕೆಂದರೆ ಅದಕ್ಕೊಂದು ಕಾರಣವಿದೆ ಮೈಸೂರು–ಮದನಪಲ್ಲಿಗಳ ಭಾಗದಲ್ಲಿ ಕೃಷಿ ಚಟುವಟಿಕೆಗಳಿಗೆ, ಸಾಗಾಣಿಕೆಗಳಿಗೆ, ಎಮ್ಮೆ, ಕೋಣಗಳನ್ನು ಬಳಸುತ್ತಿದ್ದರು. ಈ ನಾಡು ಮಹಿಷ (ಎಮ್ಮೆ)ಗಳ ನಾಡಾಗಿತ್ತು. ಆದ್ದರಿಂದಲೇ ಮೈಸೂರು ಚಾಮುಂಡಿ ಬೆಟ್ಟದಲ್ಲಿ ಮಹಿಷಾಸುರ ಇರುವುದು ಈ ಮಹಿಷಾಸುರನನ್ನು ಚಾಮುಂಡಿ ವಧೆ ಮಾಡಿರುವುದಾಗಿ ಪೌರಾಣಿಕ ಕಥೆ ಇರುವುದು ಇದರ ಅರ್ಥ. ಈ ಭಾಗದಲ್ಲಿ ಮಹಿಷಪಾಲರು (ಎಮ್ಮೆ ಸಾಕಾಣಿಕೆ) ಪ್ರಭಲರಾಗಿದ್ದರು. ಮಹಿಷಾಸುರನಿಂದಾಗಿ ಮೈಸೂರಿಗೆ ಈ ಹೆಸರು ಬರಲು ಕಾರಣ. ಎಮ್ಮೆಯ ಹಾಲಿನ ಬೇಡಿಕೆಯಿಂದಾಗಿ ಈ ಭಾಗದ ಮಹಿಷ (ಎಮ್ಮೆ) ಗೌಳಿಗರು ಧನಾಢ್ಯರಾಗಿ ಬಲಶಾಲಿಗಳಾಗಿದ್ದರು ಎಂದು ತಿಳಿಯುತ್ತೇವೆ. ಮದನಪಲ್ಲಿ ಪರಿಸರದಲ್ಲಿ ಎಮ್ಮೆ ಕೋಣಗಳನ್ನು ಬಳುಸವ ಪದ್ಧತಿ ಇದ್ದುದರಿಂದ ಎತ್ತುಗಳನ್ನು ಇಲ್ಲಿ ದುರ್ಬಲವಾಗಿ ಬಳಸುತ್ತಿದ್ದರು. ವಾಸ್ತವದಲ್ಲಿ ಕೆರೆ ನಿರ್ಮಿಸಿದ ಪ್ರದೇಶವು ದೊಡ್ಡ ದೊಡ್ಡ ಬಂಡೆಗಳಿಂದ ಕೂಡಿದೆ. ಆಗ ಕೋಣನಗಳ ನೆರವಿನಿಂದ ಬಂಡೆ ಸರಿಸಿರಬಹುದು. ಇದಕ್ಕೆ ಪೌರಾಣಿಕ ಲೇಪನ ಮಾಡಿ ಉತ್ಪ್ರೇಕ್ಷೆ ಮಾಡಿದ್ದಾರೆ ಎಂಬುದು ನನ್ನ ಅಭಿಮತವಾಗಿದೆ. ಚಂದ್ರಕಾಂತ ಬಿಜ್ಜರಗಿಯವರು ಈ ಕೆಳಗಿನ ಪವಾಡಗಳ ಕುರಿತು ವಿವರಿಸುತ್ತಾರೆ.

ಬಾಳೆ ಎಲೆ ತೆಪ್ಪಮಾಡಿ ನದಿ ದಾಟಿದ್ದು

ಕನಕದಾಸರು ಬಾಳೆಯ ಎಲೆಯ ತೆಪ್ಪ ಮಾಡಿ ಕಾವೇರಿ ನದಿ ದಾಟಿದರು ಎಂಬ ಪವಾಡ ಕಥೆಯು ಮಂಡ್ಯ ಜಿಲ್ಲೆಯ ಪ್ರತಿಯೊಬ್ಬರ ಬಾಯಿಯಲ್ಲೂ ನಲಿದಾಡುತ್ತದೆ. ಕನಕದಾಸರು ಕೀರ್ತನೆಗಳನ್ನು ಹಾಡುತ್ತ ತೀರ್ಥಸ್ಥಳಗಳ ದರ್ಶನ ಪಡೆಯುತ್ತಾ ಸಾಗಿದ್ದರಂತೆ. ಅವರು ಶ್ರೀರಂಗಪಟ್ಟಣ ತಾಲೂಕಿನ ಕಾವೇರಿ ತಟದ ಮಹಾದೇವಪುರಕ್ಕೆ ಬರುತ್ತಿದ್ದಂತೆ ನದಿ ತುಂಬಿ ಹರಿಯುತ್ತಿತ್ತು. ಅದೇ ಗ್ರಾಮದ ಧನಿಕರೊಬ್ಬರು ತಮ್ಮ ಸ್ವಂತಕ್ಕೆ ದೋಣಿಯಲ್ಲಿ ಕುಳಿತು ನದಿ ದಾಟುತ್ತಿರುವುದನ್ನು ಕಂಡ ಕನಕದಾಸರು ತಮ್ಮನ್ನು ನದಿ ದಾಟಿಸಲು ಬೇಡಿಕೊಂಡರಂತೆ. ಕನಕದಾಸರ ಮಾಸಿದ ಬಟ್ಟೆ, ಕೈಯಲ್ಲಿ ತಾಳ, ತಂಬೂರಿಗಳನ್ನು ನೋಡಿದ ಆ ಧನಿಕ ಇವನೊಬ್ಬ ಭಿಕ್ಷುಕ ದಾಸನೆಂದು ತಿಳಿದು ತನ್ನ ಅಂಬಿಗರಿಗೆ ಆತನನ್ನು ಸನಿಹಕ್ಕೆ ಬಿಡಬೇಡಿ ಎಂದು ಆಜ್ಞಾಪಿಸಿದನು. ಇದರಿಂದ ಕನಕರಿಗೆ ಬೇಸರವಾಯಿತು. ನದಿಯ ಪಕ್ಕದಲ್ಲಿರುವ ಬಾಳೆ ತೋಟಗಳಿಗೆ ಹೋಗಿ ನದಿ ದಾಟಲು ಬಾಳೆಯ ಎಲೆ (ದಿಂಡು)ಗಳನ್ನು ಕೇಳಿದರಂತೆ. ಅವರಾರು ನೀಡಲಿಲ್ಲವಂತೆ. ಕೊನೆಗೆ ಒಬ್ಬರು ಎಲೆಗಳನ್ನು ಕೊಟ್ಟರಂತೆ. ಬಾಳೆ ಎಲೆಗಳನ್ನು ದೋಣಿಯಂತೆ ಬಳಸಿ ನದಿ ದಾಟಿದರಂತೆ. ಇದನ್ನು ಕಂಡ ಆ ಧನಿಕ ಮತ್ತು ಅಂಬಿಗನು ಆಶ್ಚರ್ಯಗೊಂಡು ತಮ್ಮ ತಪ್ಪಿಗಾಗಿ ಕನಕದಾಸರ ಪಾದಕ್ಕೆರಗಿ ಕ್ಷಮೆ ಕೇಳಿದರಂತೆ. ಅವರನ್ನು ಒಬ್ಬ ಪವಾಡ ಪುರುಷನೆಂದು ತಿಳಿದು

ಅಲ್ಲಿಯ ಅಂಬಿಗರು ಕನಕದಾಸರ ಮಂದಿರ ಕಟ್ಟಿಸಿದರಂತೆ. ಕನಕದಾಸರ ನೆನಪಿಗಾಗಿ ಪ್ರತಿ ವರ್ಷ ಮೇ ತಿಂಗಳಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಬಾಳೆಕೊಡದ ರೈತರ ಭೂಮಿಯಲ್ಲಿ ಇಂದಿಗೂ ಬಾಳೆ ಬೆಳೆಯುವುದಿಲ್ಲವೆಂದು ಸ್ಥಳೀಯರು ಹೇಳುತ್ತಾರೆ. ಇದು ಕನಕದಾಸರ ಶಾಪದ ಫಲವೆಂದು ಇವರೆಲ್ಲ ಭಾವಿಸುತ್ತಾರೆ.

ಕನಕನ ಕಿಂಡಿಯ ಕಥೆ

ಕನಕದಾಸರು ಭೇಟಿ ನೀಡಿದ ಮಹತ್ವದ ಸ್ಥಳಗಳಲ್ಲಿ ಉಡುಪಿಯ ಕನಕನ ಕಿಂಡಿಯು ಅತ್ಯಂತ ಮಹತ್ವ ಪಡೆದಿದೆ. ಇದು ವಿವಾದದ ಕೇಂದ್ರಸ್ಥಳವಾಗಿದೆ. ಒಂದು ಕನಕದಾಸನು ಕೃಷ್ಣನ ದರ್ಶನ ಪಡೆಯಲು ಹೋದಾಗ ಹಿಂದುಳಿದ ವರ್ಗದವರೆಂಬ ಕಾರಣವೊಡ್ಡಿ ಒಳಗೆ ಬಿಡಲು ನಿರಾಕರಿಸಿದರು. ಇದು ವಿವಾದಕ್ಕೆ ಕಾರಣವಾಗುತ್ತದೆ. ಇನ್ನೊಂದು ವಿಜಯನಗರ ಅರಸರ ಕಾಲಕ್ಕೆ ನಿರ್ಮಿಸಿದ ಹಳೆಯ ಕನಕಗೋಪುರ ಕೆಡವಿ ಹೊಸ ಗೋಪುರ ನಿರ್ಮಿಸುವಾಗ ಆದ ಅವಾಂತರಗಳಿಂದ ವಿವಾದಿತ ಸ್ಥಳವಾಗಿದೆ. ಅದರ ವಿಶ್ಲೇಷಣೆ ಹೀಗಿದೆ.

ಕೃಷ್ಣ ದೇಗುಲದ ಉಗಮ

ಪ್ರಾಚೀನ ಇತಿಹಾಸಕಾರರು ಹೇಳುವಂತೆ ಶಿಲಾನ್ಯಾಸಗಳಲ್ಲಿದಂತಹ ಲಿಖಿತ ಅಂಶಗಳ ಆಧಾರದಂತೆ ಮಠಸ್ಥಾಪಕರ ಚರಿತ್ರೆಗಳಂತೆ ಹಾಗೂ ಧರ್ಮ ಚರಿತ್ರೆಗಳಲ್ಲಿನ ಪ್ರಸ್ತಾಪದಂತೆ ಸದರಿ ಶ್ರೀ ಕೃಷ್ಣ ದೇವಸ್ಥಾನವು ಸುಮಾರು ೮-೯ನೇ ಶತಮಾನದಲ್ಲಿ ಸ್ಥಾಪನೆಯಾಗಿರಬಹುದಾದ ಅಂಶಗಳು ವ್ಯಕ್ತವಾಗುತ್ತವೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿಯು ಅಂದಿನ ಶಿವಳ್ಳ ಅಥವಾ ರಜತಪೀಠ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಕಾಲದಲ್ಲಿ ಜೈನಮತದ ಉತ್ತುಂಗ ಸ್ಥಿತಿಯ, ಅಂತ್ಯಕಾಲದಲ್ಲಿ ಅದ್ವೈತ ಸಿದ್ಧಾಂತದ ಪ್ರತಿಪಾದನೆಯ ವೈಷ್ಣವ ಮತಸ್ಥಪಕರಾದ ಶ್ರೀ ಶಂಕರಾಚಾರ್ಯರ ಶಿಷ್ಯಂದಿರೆಂದು ಉಡುಪಿ ಸ್ಥಾನಿಕ ಮಠಾಧಿಪತಿಯಾಗಿದ್ದ ಹಸ್ತಮಲಕಾಚಾರ್ಯರು ಎಂಬುವರು ವೀಣೆ ಹಿಡಿದಿರುವ ಶ್ರೀ ಕೃಷ್ಣ ವಿಗ್ರಹವನ್ನು ಪೂರ್ವ ಮುಖವಾಗಿ ಪ್ರತಿಷ್ಠಾಪಿಸಿ ಸದರಿ ಶ್ರೀ ಕೃಷ್ಣ ದೇವಸ್ಥಾನವನ್ನು ಸ್ಥಾಪನೆ ಮಾಡಿರುವರೆಂದು ತಿಳಿಯಬಹುದಾಗಿದೆ. ಇವರ ನಂತರ ನಾಲ್ಕೈದು ಮಠಾಧಿಪತಿಗಳ ಅವಧಿ ಮುಗಿದ ನಂತರ ಮದ್ವಾಚಾರ್ಯರು ಮಠಾಧಿಪತಿಯಾದರು ಅದ್ವೈತ ಸಿದ್ಧಾಂತವನ್ನು ಪ್ರತಿನಿಧಿಸುತ್ತಿದ್ದ ವೈಷ್ಣವ ಮತದ ಶೃಂಗೇರಿ ಶಂಕರಾಚಾರ್ಯರ ಅನುಯಾಯಿತನವನ್ನು ಕೊನೆಗೊಳಿಸಲು ಸದರಿ ಶ್ರೀ ಕೃಷ್ಣ ದೇವಸ್ಥಾನದಲ್ಲಿ ಪೂರ್ವ ಮುಖವಾಗಿರಿಸಿದ ವೀಣೆ ಹಿಡಿದ ಶ್ರೀಕೃಷ್ಣ ವಿಗ್ರಹವನ್ನು ದರ್ಶನ ಮಾಡದಂತೆ ಪೂರ್ವ ಬಾಗಿಲನ್ನು ಮುಚ್ಚಿಸಿ ನೂತನ ಮಾದ್ವಮತ ಸ್ಥಾಪನೆಯ ಪ್ರತೀಕವಾಗಿ ಮದ್ವಾಚಾರ್ಯರು ಸದರಿ ದೇವಸ್ಥಾನದಲ್ಲಿ ಪಶ್ಚಿಮ ಮುಖವಾಗಿ

ಕಡಗೋಡು ಹಿಡಿದ ಶ್ರೀಕೃಷ್ಣ ವಿಗ್ರಹವನ್ನು ಸ್ಥಾಪನೆಮಾಡಿ ದೇವಸ್ಥಾನದ ಹಿಂಭಾಗದಲ್ಲಿ 'ನವಗ್ರಹ ಕಿಂಡಿ'ಯ ಮೂಲಕ ಭಕ್ತರ ದರ್ಶನಕ್ಕೆ ಅನುಕೂಲವಾಗುವಂತೆ ಮಾಡಿರುವ ಹುನ್ನಾರವಿದೆ.[೪೭]

"ಶ್ರೀ ವಾದಿರಾಜ ಶ್ರೀಪಾದಂಗಳು ಕಟ್ಟಿಸಿದ ಕನಕನ ಕಿಂಡಿಯಾಗಿದೆ. ಇವರು ಕ್ಷೇತ್ರಪ್ರವಾಸದ ನಿಮಿತ್ಯ ಹೊರಗೆ ತೆರಳಿ ನಂತರ ಮರಳಿ ಉಡುಪಿಗೆ ಬಂದಾಗ ಕನಕನಿಗೆ ಕೃಷ್ಣ ದರ್ಶನಕ್ಕೆ ಒಳಗೆ ಬಿಡದೆ ಇದ್ದುದು ಅವನಿಗೆ ಪಶ್ಚಿಮಾಭಿಮುಖವಾಗಿ ಗೋಡೆಕಳಚಿ ದರುಶನ ನೀಡಿದ ವಿವರಗಳನ್ನು ತಿಳಿದು ಉಡುಪಿಯಲ್ಲಿ ಕನಕನನ್ನು ನೀನೆ ಭಾಗ್ಯವಂತನಪ್ಪ ನೀನೆ ಧನ್ಯನು ಎಂದು ಹೇಳಿ ಅಲ್ಲಿ ಕನಕ ಕಿಂಡಿ ನಿರ್ಮಿಸುತ್ತಾರೆ."[೪೮]

"ಈಗಿನ ನವಗ್ರಹ ಕಿಂಡಿಯೆ ಕನಕ ಕಿಂಡಿ
ಹೊರಗಿನ ಕನಕನ ಕಿಂಡಿ ಅಷ್ಟಮಠಾಧೀಶರ ಹುಂಡಿ"[೪೯]

ಈ ಎಲ್ಲಾ ಅಭಿಪ್ರಾಯಗಳನ್ನು ಅವಲೋಕಿಸಿ ಅದರ ಚರ್ಚೆಯನ್ನು ಮಾಡುವುದಾದರೆ ಹಲವಾರು ಪವಾಡಗಳಲ್ಲಿ ಅತ್ಯಂತ ಮಹತ್ವದ ಹಾಗೂ ವಿವಾದಾತ್ಮಕ ಪವಾಡ ನಡೆದಿದ್ದು ಉಡುಪಿಯ ಕೃಷ್ಣ ಮಠದಲ್ಲಿ. ಈ ಕಥೆಯ ಪ್ರಕಾರ ಕನಕದಾಸರು ಉಡುಪಿ ಕೃಷ್ಣನ ದರ್ಶನಕ್ಕೆಂದು ಮಂದಿರ ಪ್ರವೇಶಿಸಲು ಹೊರಟಾಗ ಕೆಳವರ್ಗಕ್ಕೆ ಸೇರಿದ ಅವರನ್ನು ಅಲ್ಲಿಯ ಬ್ರಾಹ್ಮಣರು ತಡೆದರು. ಆಗ ಕನಕದಾಸರು ಪಶ್ಚಿಮದಿಕ್ಕಿನ ಗೋಡೆಯ ಎದುರು ರಾತ್ರಿಯಿಡಿ ಭಕ್ತಿಯಿಂದ ಹಾಡುತ್ತ ನಿಂತರು. ಕನಕರ ಭಕ್ತಿ ಪಾರಮ್ಯದಿಂದ ಶ್ರೀಕೃಷ್ಣ ಮನಸೋತು ಪಶ್ಚಿಮ ಗೋಡೆಯನ್ನು ಒಡೆದು ಅಲ್ಲೊಂದು ಕಿಂಡಿ ಮಾಡಿ ತಾನು ನಿಂತ ಪೂರ್ವದಿಕ್ಕಿನಿಂದ ಪಶ್ಚಿಮಕ್ಕೆ ಹೊರಳಿ ತನ್ನ ಭಕ್ತನಿಗೆ ದರ್ಶನ ನೀಡಿದನೆಂಬ ಪ್ರಸಿದ್ಧ ಪವಾಡ ಕಥೆಯಾಗಿದೆ. ಇಂಥಹ ಕಥೆಗಳನ್ನು, ಮೌಢ್ಯಕಲ್ಪನೆ ಪುರಾಣ ಹಾಗೂ ಸಂಕೇತಗಳನ್ನು ಜನರು ಪ್ರಶ್ನಿಸದೆ ಅಂಧ ಶ್ರದ್ಧೆಯಿಂದ ಗೌರವಿಸುತ್ತ ಬಂದಿದ್ದಾರೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ವೈಚಾರಿಕ ತಿಳುವಳಿಕೆಯಿಂದಾಗಿ ಇಂಥ ಕಥೆಗಳಲ್ಲಿ ಯಾವುದು ಕಥೆ? ಚರಿತ್ರೆ, ಇತಿಹಾಸ ಯಾವುದು, ಸತ್ಯ ಹಾಗೂ ಮಿತ್ಯದ ಪರಿಕಲ್ಪನೆ ಕತೆಯ ಚಾರಿತ್ರಿಕ ಸತ್ಯವನ್ನು ಪ್ರಶ್ನಿಸುತ್ತದೆ. ಅಲ್ಲದೆ ಜಿಜ್ಞಾಸೆಗೆ ಒಳಪಡಿಸುತ್ತದೆ.

ಉಡುಪಿಯಲ್ಲಿ ಮದ್ವಾಚಾರ್ಯರು ಶ್ರೀ ಕೃಷ್ಣ ಮಂದಿರ ಸ್ಥಾಪಿಸಿದ ಕಥೆ ಎಷ್ಟು ಸತ್ಯ ಅದೊಂದು ಕಥೆಯೇ? ಚರಿತ್ರೆಯೇ? ಅದಕ್ಕೆ ದಾಖಲೆಗಳಿವೆಯೇ? ಒಂದುವೇಳೆ ಅದು ಕತೆಯಾದರೆ ಕನಕನ ಕಿಂಡಿಯದು ಕಥೆ ಎನ್ನಬಹುದು. ಇವೆಲ್ಲವನ್ನು ಪರಿಗಣಿಸಬಹುದಾಗಿದೆ.

ಶಂಕರಾಚಾರ್ಯರು ಬ್ರಹ್ಮವೊಂದೇ ಸತ್ಯ, ಉಳಿದೆಲ್ಲವೂ ಮಿಥ್ಯ ಎಂದು ಪ್ರತಿಪಾದಿಸಿ ಅದ್ವೈತ ವಾದವನ್ನು ರೂಪಿಸಿದ್ದರು. ಅನಂತರ ಬಂದ ರಾಮಾನುಜಚಾರ್ಯರು ಈ ಏಕ ಮೇವಾದ್ವಿತೀಯವಾದ ಬ್ರಹ್ಮವು ಶಿಷ್ಟವಾದುದೆಂದು ಹೇಳಿ, ವಿಶಿಷ್ಟಾದ್ವೈತ ತತ್ವವನ್ನು ಪ್ರತಿಪಾದಿಸಿದ್ದರು. ಈ ಎರಡು ತತ್ವಗಳಿಗೆ ಭಿನ್ನವಾದ ದ್ವೈತ ವಾದವನ್ನು ಮದ್ವಾಚಾರ್ಯರು ಪ್ರತಿಪಾದಿಸಿದರು. ದ್ವೈತವೆಂದರೆ ಎರಡು ತತ್ವಗಳನ್ನು ಹೇಳುವ ಸಿದ್ಧಾಂತ. ಒಂದು ಸ್ವತಂತ್ರವಾದ ಪರಿಪೂರ್ಣವಾದ

ಪರಮಾತ್ಮ, ಇನ್ನೊಂದು ಪರತಂತ್ರಗಳಾದ ಜೀವ, ಜಡ, ಜಗತ್ತು ಇವೆರಡು ಬೇರೆ ಬೇರೆ ತತ್ವಗಳು ಎನ್ನುವುದಕ್ಕೆ ದ್ವೈತ ಎಂದು ಅರ್ಥ. ಇಂತಹ ಪಂಥದ ಪ್ರಚಾರಕ್ಕೆ ಮುಂದಾಗಿದ್ದ ಮದ್ವಾಚಾರ್ಯರು ತಾವು ಆ ಸ್ಥಳಕ್ಕೆ ಬರುವ ಮೊದಲೇ ಇದ್ದ ಕೃಷ್ಣ ಮಂದಿರದ ಆಸರೆಯನ್ನು ಪಡೆದರು.

"ಉಡುಪಿಯ ಕೃಷ್ಣನ ಬಯಲು ಮಂದಿರವೇ ಮದ್ವಾಚಾರ್ಯರಿಗೆ ಆಸರೆಯ ಕೇಂದ್ರವಾಯಿತೆ ಹೊರತು ಮದ್ವಾಚಾರ್ಯರು ಕೃಷ್ಣ ಮಂದಿರವನ್ನು ಯಾವ ಕಾಲಕ್ಕೂ ನಿರ್ಮಿಸಲಿಲ್ಲ. ಇದಕ್ಕೆ ಶ್ರೀ ಕೃಷ್ಣ ಮಂದಿರದ ವಾಸ್ತು ದೋಷವೇ ಸಾಕ್ಷಿ. ಬ್ರಾಹ್ಮಣರು ಇಲ್ಲವೆ ವೈಷ್ಣವರು ವಾಸ್ತುದೋಷದಿಂದ ಯಾವ ಮಂದಿರವನ್ನು ನಿರ್ಮಿಸಲಾರರು. ಇದು ಸೂರ್ಯನಷ್ಟೇ ಸತ್ಯ.

ಹೀಗಾಗಿ ಕನಕನ ಕಿಂಡಿಯ ಪವಾಡ ಸೃಷ್ಟಿಸಿದ ಸಾಧ್ಯತೆ ಹೆಚ್ಚಿದೆ. ಯಾಕೆಂದರೆ ಕನಕದಾಸರು ಈ ಕನಕಕಿಂಡಿಯ ಪವಾಡದ ಕುರಿತು ಕಾವ್ಯದಲ್ಲಿ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಹಾಗೂ ತಮಗಾದ ಅವಮಾನದ ಬಗೆಯಾಗಲಿ, ಪವಾಡದ ಸದೃಶ್ಯದಿಂದ ಕೃಷ್ಣದರ್ಶನ ನೀಡಿದ ಕುರಿತು ಅವರು ಯಾವ ಪದ್ಯವನ್ನೂ ರಚಿಸಿಲ್ಲ. ಆದರೆ ಅದಕ್ಕೆ ಪೂರಕವೆಂಬಂತೆ ಅವರು ಒಳಗೆ ಬಿಡದಿದ್ದಾಗ ಹರಿಸ್ಮರಣೆ ಮಾಡಿದ ಕೀರ್ತನೆ ಹೀಗಿದೆ;

ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ ॥ಪ॥
ಕೂಗಿದರೂ ಧ್ವನಿ ಕೇಳಲಿಲ್ಲವೇ ನರಹರಿಯೇ ॥ಅ॥
ಪರಮಪದದೊಳಗೆ ವಿಷಧರನ ತತ್ವದಲಿ ನೀ
ಸಿರಿಸಹಿತ ಕ್ಷೀರವಾರಧಿಯೋಳಿರಲು
ಕರಿರಾಜ ಕಷ್ಟದಲಿ ಆದಿ ಮೂಲ ಎಂದು
ಕರೆಯಲಾಕ್ಷಣ ಬಂದು ಒದಗಿದಯೋ ನರಹರಿಯೇ ॥೧॥[೫೦]

ಪರಿಪರಿಯಾಗಿ ದರ್ಶನ ಕೊಡುವಂತೆ ಬೇಡುವ ಈ ಕೀರ್ತನೆಯನ್ನು ಹಾಡಿ ಭಜಿಸುವಾಗ ಪಶ್ಚಿಮಾಭಿಮುಖವಾಗಿ ಗೋಡೆಬಿದ್ದು ದರ್ಶನ ನೀಡಿದ್ದು ಐತಿಹ್ಯವಾಗಿದೆ. ಆದರೆ ಕನಕದಾಸರು ಆಂತರಿಕ ದರ್ಶನವಾಗಿತ್ತು ಎಂಬುದು ಆಧ್ಯಾತ್ಮದ ಅನುಭಾವಿಗಳಾದ ಕನಕರ ಆಂತರಿಕವಾಗಿ ಕೃಷ್ಣನ ದರ್ಶನ ಪಡೆದು ಧನ್ಯರಾಗಿದ್ದ, ಅನ್ಯತಾಭಾವ ಈ ಕೀರ್ತನೆಯಲ್ಲಿ ಎದ್ದು ಕಾಣುತ್ತದೆ.

ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು
ಪದುಮನಾಭನ ಪಾದದೊಲುವೆ ಎನಗಾಯಿತು
ಹರಿತೀರ್ಥ ಪ್ರಸಾದ ಎನ್ನ ಜಿವ್ಹೆಗೊದಗಿತು
ಹರಿಯ ನಾಮಾಮೃತ ಕಿವಿಗೊದಗಿತು
ಹರಿಯದಾಸರು ಎನ್ನ ಬಂಧು ಬಳಗವಾದರು
ಹರಿಯ ಶ್ರೀ ಮುದ್ರೆ ಆಭರಣವಾಯ್ತು
ಮುಕುತರಾದರು ಎನ್ನ ನೂರೊಂದು ಕುಲದವರು

ಮುಕುತಿಮಾರ್ಗಕೆ ಯೋಗ ನಾನಾದೆನೊ
ಅಕಳಂಕ ಶ್ರೀಹರಿ ಭಕುತಿಗೆನ್ನ ಮನಬೆಳೆದು
ರುಕುಮಿನಿಯರಸ ಕೈವಶನಾದ ನನಗೆ
ಇಂದೆನ್ನ ಜೀವಕ್ಕೂ ಸಕಲ ಸಂಪದವಾಯ್ತು
ಮುಂದೆನ್ನ ಜನ್ಮ ಸಪಲವಾಯಿತು
ತಂದೆ ಶ್ರೀ ಕಾಗಿನೆಲೆಯಾದಿಕೇಶವರಾಯ
ಬಂದೆನ್ನ ಹೃದಯದಲಿ ನೆಲೆಯಾಗಿ ನಿಂತ[೫೧]

ಹೀಗೆ ಕೃಷ್ಣ ದರ್ಶನದಿಂದ ನಾನು ಧನ್ಯನಾದೆ ಎಂಬ ಮಾತು ಈ ಕೀರ್ತನೆಯಲ್ಲಿ ಅಡಗಿರುವುದರಿಂದ ಹಾಗೂ ಅಧ್ಯಯನಕಾರರು ಸ್ಪಷ್ಟಪಡಿಸಿರುವುದರಿಂದ ಕನಕದಾಸರಿಗೆ ಕೃಷ್ಣನ ದರ್ಶನವಾಗಿದೆ ಎಂದು ಹೇಳಬಹುದು.

೩.೫ ಕನಕದಾಸರ ಸ್ಥಳ ಕೇಂದ್ರಿತ ಚರಿತ್ರೆ ಹೇಳುವ ಪ್ರವೃತ್ತಿಯ ಅಧ್ಯಯನಗಳ ವಿಶ್ಲೇಷಣೆ

ಕನಕದಾಸರು ತಿಮ್ಮಪ್ಪನಾಗಿ ಬೀರಪ್ಪ ಮತ್ತು ಬಚ್ಚಮ್ಮರ ಉದರದಲ್ಲಿ ಬಾಡದಲ್ಲಿ ಜನಿಸಿ ಹದಿಹರೆಯದಲ್ಲಿ ತಂದೆಯನ್ನು ಕಳೆದುಕೊಂಡು ದಣ್ಣಾಯಕನಾಗಿ ಅಧಿಕಾರ ವಹಿಸಿಕೊಂಡು ಅನೇಕ ಯುದ್ಧಗಳಲ್ಲಿ ಕಲಿಯಾಗಿ ಹೋರಾಡಿ, ತಿಮ್ಮಪ್ಪನಾಯಕನಾದನು. ಕನಕನಾಯಕನಾದನಂತರ ನಡೆದ ಯುದ್ಧದಲ್ಲಿ ಸಾವು, ನೋವು, ಹಿಂಸೆಯನ್ನು ಕಂಡು ಕನಕನಾಯಕ, ಕನಕದಾಸರಾಗಿ ಬದಲಾಗುತ್ತಾರೆ. ದಾಸರಾಗಿ ಅನೇಕ ಪುಣ್ಯ ಕ್ಷೇತ್ರಗಳ ಯಾತ್ರೆ ಮಾಡಿ, ಸುಧೀರ್ಘ ತೊಂಬತ್ತೆಂಟು ವರ್ಷ ಬಾಳಿ ಬದುಕು ಸವೆಸಿದ ಕನಕದಾಸರು ಸಮಾಜದ ಉದ್ಧಾರಕ್ಕಾಗಿ, ಸ್ವಾಸ್ಥ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಇಂತಹ ಸಂತ, ಸಮಾಜ ಸುಧಾರಕರು, ಮಹಾಮಾನವತಾವಾದಿಗಳಾಗಿ ಬದುಕನ್ನು ಹಸನಾಗಿ ಮಾಡಿಕೊಂಡು ಇತರರ ಬಾಳಿಗೆ, ಸಮುದಾಯಕ್ಕೆ ಬೆಳಕಾದವರು, ಇವರು ಭೇಟಿ ನೀಡಿದ ಸ್ಥಳಗಳಿಗೆ, ಇಂದು ಮಹತ್ವ ಬಂದಿದೆ. ಪ್ರಸ್ತುತ ಕೆಲವೊಂದು ಸ್ಥಳಗಳು ವಿವಾದಕ್ಕೊಳಪಟ್ಟಿವೆ. ಕೆಲವು ಸ್ಥಳಗಳಲಿ ಕನಕದಾಸರು ಒಂದು ಶಕ್ತಿಯಾಗಿ ಕಂಡುಬರುತ್ತಾರೆ. ಇಂತಹ ಅಧ್ಯಯನಕಾರರಿಂದ ಒಡೆಯ ಕೂಡಿ ಹೆಗ್ಗಡೆ ಚಂದ್ರಕಾಂತ ಬಿಜ್ಜರಗಿ ಜಗನ್ನಾಥ ಗೇಣನ್ನವರ ಮುಂತದವರ ಮಹಾನುಭಾವರ ಸ್ಥಳಗಳನ್ನು ಹಲವಾರು ವಿದ್ವಾಂಸರ, ಅಧ್ಯಯನಗಳನ್ನು ಮಾಡಿರುವರು ಅವೆಲ್ಲಾ ಈ ರೀತಿಯಾಗಿ ಕೆಳಗಿನಂತೆ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ.

೧. ಜನನಕ್ಕೆ ಮತ್ತು ಬದುಕಿಗೆ ಸಂಬಂಧಿಸಿದ ಸ್ಥಳಗಳು.
೨. ವಿವಾದಕ್ಕೊಳಪಟ್ಟ ಸ್ಥಳಗಳು
೩. ತೀರ್ಥಯಾತ್ರಾ ಸ್ಥಳಗಳು

೧. ಜನನಕಕೆ ಸಂಬಂಧಿಸಿದ ಸ್ಥಳ

ಬಾಡ

ಶಿಗ್ಗಾವಿ ತಾಲೂಕಿನ ಬಾಡ ಶಿಗ್ಗಾಂವಿಯಿಂದ ೧೪ ಕಿ.ಮೀ. ದೂರದಲ್ಲಿದೆ. ಇದು ಕನಕದಾಸರು ಜನಿಸಿದ ಸ್ಥಳವಾಗಿದೆ. ಆಗಿನ ೭೮ ಹಳ್ಳಿಗಳಿಗೆ ಬಾಡ, ಬಂಕಾಪುರವು ಕೇಂದ್ರಸ್ಥಳವಾಗಿತ್ತು. ಬಂಕಾಪುರವು ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು. ಆದಿಲ್‌ಷಾಹಿಗಳು ಇದಕ್ಕೆ ಇಸ್ಲಾಂಪುರವೆಂದು ಹೆಸರಿಟ್ಟಿದ್ದಾರೆ.

ಒಂದು ಗ್ರಾಮನಾಮದಿಂದ ಅದು ಯಾವರಾಜರ, ನವಾಬರ ಅಥವಾ ಪಾಳೆಗಾರರ ಆಳ್ವಿಕೆಯ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದಿತು ಎಂಬುದನ್ನು ತಿಳಿಯಬಹುದು. ಉದಾಹರಣೆಗೆ ಇನಾಂ ಹುಬ್ಬಳ್ಳಿ, ಹೊಸಳ್ಳಿ, ಇನಾಂ ವೊಂಗಲ ಎಂಬುದು ಮರಾಠರು ಅಥವಾ ಮುಸಲ್ಮಾನ ನವಾಬರು ತಮ್ಮ ಬೆಂಬಲಿಗರಿಗೆ ನೀಡಿದ ಬಹುಮಾನಗಳಿರಬಹದೆಂದು ತಿಳಿಯುತ್ತದೆ. ಇದೇ ರೀತಿ 'ಬಾಡ' ಎಂಬ ಗ್ರಾಮನಾಮ ಮುಸ್ಲಮಾನರ ಅದರಲ್ಲೂ ಬಿಜಾಪುರ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಬಂದ ಹೆಸರು. ಅನೇಕ ಸಂದರ್ಭಗಳಲ್ಲಿ ಈ ಹೆಸರಿನ ಗ್ರಾಮಗಳು ಪೂರ್ವದಲ್ಲಿ ಅಗ್ರಹಾರ, ಬೌದ್ಧವಿಹಾರ ಅಥವಾ ಜೈನಬಸದಿಗೆ ನೀಡಲಾದ ಉಂಬಳಿಗಳು. ಇದಕ್ಕೆ ಧಾರವಾಡ ಮತ್ತು ದಾವಣಗೆರೆ ತಾಲೂಕುಗಳಲ್ಲಿರುವ ಬಾಡನಾಮದ ಗ್ರಾಮಗಳೇ ಸಾಕ್ಷಿ. ಡಕ್ಣಿ ಭಾಷೆಯಲ್ಲಿ 'ಬಾಡ' ಎಂದರೆ ಬಡಿಗೆ. ಒಂದು ನಾಡನ್ನು ಗೆದ್ದು ಸುಲ್ತಾನರು ಅಥವಾ ನವಾಬರು ಅಲ್ಲಿ ಅಗ್ರಹಾರ ಮುಂತಾದ ಧಾರ್ಮಿಕ ಸಂಸ್ಥೆಗಳಿಗೆ ಪೂರ್ವದ ಮಹಾರಾಜರು ನೀಡಿದ್ದ ದತ್ತಿಗಳನ್ನು ಉಂಬಳಿಗಳನ್ನು ಕಿತ್ತುಕೊಂಡು ತಮ್ಮ ಬೆಂಬಲಿಗರಿಗೆ, ಧರ್ಮಿಯರಿಗೆ, ಉಂಬಳಿಯಾಗಿ ನೀಡಿದರು. ಇದಕ್ಕೆ ಪ್ರತಿಯಾಗಿ ಆ ಉಂಬಳಿ ಅಥವಾ ಜೋಡಿದಾರ ಅವರಿಗೆ ನಿಷ್ಠೆಯಿಂದಿರುವುದರ ಜೊತೆಗೆ ಕೆಲವೊಂದು ಸೇವೆಗಳನ್ನು ಮಾಡಬೇಕಿದ್ದಿತು.

ಐತಿಹಾಸಿಕ ಹಿನ್ನೆಲೆ ಹೊಂದಿದ ಬಾಡದ ಕುರುಬರ ಮನೆತನದ ಬೀರೆಗೌಡನೆಂಬಾತನು ಬಂಕಾಪುರ ಕೇಂದ್ರವನ್ನಾಗಿ ಮಾಡಿಕೊಂಡು, ವಿಜಯನಗರದ ಸಾಮಂತ ದಣ್ಣಾಯಕನಾಗಿ ಆಡಳಿತ ಮಾಡುತ್ತಿದ್ದ, ಈತನ ಮಡದಿ ಬಚ್ಚಮ್ಮ, ಬೀರೆಗೌಡರ ಪುತ್ರನ ಕನಕದಾಸರು, ಇವರು ಜನಿಸಿದ್ದು ಬಾಡದಲ್ಲಿ. ಹಳೆಯ ಬಾಡದ ಪರಿಸರದಲ್ಲಿ ತೀರ ದೊಡ್ಡದಾದ ಹಳೆಯ ದೇವಾಲಯ ತಳಪಾಯ ಮಾತ್ರ ಉಳಿದಿದೆ. ಇದರಲ್ಲಿ ಒಂದು ಬಸವನ ವಿಗ್ರಹ, ಗರ್ಭ ಗೃಹವಿದ್ದು, ಸ್ಥಳದಲ್ಲಿ ಒಂದು ಭಗ್ನ ದೇವಿಯ ಮೂರ್ತಿ (ವಿಜಯನಗರ ಕಾಲದ್ದು) ಹಾಗೂ ಕಟ್ಟೆಯ ಕೆಳಗಿನ ಭಾಗದ ಒಂದು ಗೋಡೆಯಲ್ಲಿ ಆಮೆ, ಹನುಮಂತ ಮುಂತಾದ ಉಬ್ಬು ಶಿಲ್ಪಗಳಿವೆ. ಇದರ ಸಮೀಪವೇ ಪ್ರಕಾರದ ನಂತರ ಸ್ವಲ್ಪ ಖಾಲಿ ಜಾಗವಿದ್ದು, ರಾಷ್ಟ್ರಕೂಟರ ಕಾಲದ ಬಾಗಿಲುವಾಡ ಇರುವ ಶಿಥಿಲ ರಚನೆ ಇದೆ. ಮತ್ತು ಇದರಲ್ಲಿ ಒಂದು ಅಪ್ರಕಟಿತ ಶಾಸನವಿದೆ (ದನವರ್ಮನ ಶಿಲೇ ಕಲ್ಲು). ಇಲ್ಲಿರುವ ಒಂದು ಪಾಣಿಪೀಠವು ಸ್ವಲ್ಪು ವೃತ್ತಾಕಾರವಾಗಿದ್ದು, ರಂಗನಾಥನ ಪೀಠದ ಲಕ್ಷಣವನ್ನು ಹೊಂದಿದೆ. ಇಲ್ಲಿನ

ಕೇಶವ ಮೂರ್ತಿಯನ್ನು ಕನಕದಾಸರು ಕಾಗಿನೆಲೆಗೆ ಒಯ್ದರೆಂದು ಪ್ರತೀತಿ. ಹಳೇ ಬಾಡದಲ್ಲಿರುವ ಇತರೆ ಗುಡಿಗಳೆಂದರೆ 'ಹನುಮಂತ' ಬಸವಣ್ಣ, ಈಶ್ವರ ಮುಂತಾದವುಗಳು ಹನುಮಂತ ದೇವರ ಗುಡಿಯ ಹೊರಗಿರುವ ಕಂಬದ ಮೇಲೆ ಶಾಸನವಿದ್ದು (ಕ್ರಿ.ಶ. ೨ನೇ ಶತಮಾನ) ಅಸ್ಪಷ್ಟವಾಗಿದ್ದು, ಬಂಕಾಪುರದ ನಗರೇಶ್ವರ ದೇವರ ದತ್ತಿ ಎಂಬ ಉಲ್ಲೇಖವಿದೆ. ಈ ಗುಡಿಯ ಸಮೀಪವೇ ಒಂದು ಕೋಣನ ತಲೆಯ ಕಲ್ಲಿದೆ.

ಇದೇ ಪರಿಸರದಲ್ಲಿ ಪುರಾತನ ಕಾಲದ ವಿಶಿಷ್ಟ ಕಲ್ಲುಗಳಿಂದ ಕೂಡಿದ ಅರಮನೆಯ ಆಕಾರ ದೊರೆತಿದೆ. ಅದೇ ಸಂತ ಕನಕದಾಸರು ವಾಸಿಸುವ ಅರಮನೆ ಎಂದು ಮೌಖಿಕ ಆಕರಗಳು ದೊರೆಯುತ್ತವೆ. ಅಲ್ಲದೆ ಕಾಗಿನೆಲೆ ಅಭಿವೃದ್ಧಿ ಪ್ರಾದಿಕಾರವು ಮೇ ೨೦೦೮ರಂದು ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಉತನನ ಕಾರ್ಯ ಕೈಗೊಂಡಾಗ, ಸಂತ ಕನಕದಾಸರಿಗೆ ಸಂಬಂಧಿಸಿದ ಅರಮನೆಯ ತಳಹದಿಯ ನೀಲನಕ್ಷೆ ಬೆಳ್ಳಿ, ತಾಮ್ರದ ನಾಣ್ಯಗಳು, ಮಡಿಕೆಯ ಚೂರುಗಳು ಗೋಚರಿಸಿವೆ. ಕರ್ನಾಟಕದಲ್ಲಿ ಉತ್ಖನನಗೊಂಡ ಅನೇಕ ಮಧ್ಯಕಾಲೀನ ಯುಗದ ವಾಸದ ಕಟ್ಟಡಗಳಲ್ಲಿಯೇ ಇದು ಅತ್ಯಂತ ವಿಸ್ತಾರವಾದುದೆಂದು, ವಿದ್ವಾಂಸರ ಅಭಿಪ್ರಾಯವಾಗಿದೆ. ಕನಕದಾಸರ ವಂಶಜರ ಆಡಳಿತವು ಬಂಕಾಪುರ ಕೋಟೆಯಿಂದ ಆರಭವಾಯಿತು ಅಲ್ಲಿ ದೊರೆತ ಸಾಕ್ಷಾಧಾರಗಳಿಂದ ಕನಕದಾಸರು ಆ ಭಾಗದ ದಣ್ಣಾಯಕರ ಮನೆತನದವರಾಗಿದ್ದರೆನ್ನುವುದನ್ನು ಪುರಾವೆಗಳು ಪ್ರಚೂರಪಡಿಸುತ್ತವೆ.

ಕಾಗಿನೆಲೆ

ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಒಂದು ಊರು. ಹಾವೇರಿಯಿಂದ ಹದಿನೈದು ಕಿ.ಮೀ. ಬ್ಯಾಡಗಿಯಿಂದ ಇಪ್ಪತ್ತು ಕಿ.ಮೀ ಅಂತರದಲ್ಲಿದೆ. ಮಲೆನಾಡಿನ ಅಂಚಿನಲ್ಲಿರುವ ಈ ಕಾಗಿನೆಲೆಯು

ಸಿರಿನೆಲೆ ಗುಣದನೆಲೆ ಭಾ।
ಸುರಕೀರ್ತಿನೆಲೆ ವಿವೇಕ ವಿಭವದನೆಲೆ ವಿ॥
ಸ್ತರಿಪ ಜಯವಧುಗೆ ನೆಲೆಯನೆ।
ಕರವೆಸೆಗುಂ ಕಾಗಿನೆಲೆ ಧರಿತ್ರೀತಳದೊಳ್॥[೫೨]

ಎಂದು ಕಾಗಿನೆಲೆಯ ವೈಭವ ಚಾಲುಕ್ಯ ವಿಕ್ರಮಾಂಕನ ಶಾಸನದಿಂದ ತಿಳಿದು ಬರುತ್ತದೆ. ಹನ್ನೊಂದು ಹನ್ನೆರಡನೆ ಶತಮಾನಗಳಲ್ಲಿ ಇದಕ್ಕೆ ಆಧಾರಗಳು ದೊರೆತಿವೆ. ಕನಕದಾಸರು ೧೬ನೇ ಶತಮಾನದಲ್ಲಿ ರಚಿಸಿದ ಮೋಹನ ತರಂಗಿಣಿಯಲ್ಲಿ ಕಾಗಿನೆಲೆಯ ವರ್ಣನೆಗಳನ್ನು ಕಾಣುತ್ತೇವೆ. ಇದು ಧರ್ಮಸಮನ್ವಯಕ್ಕೆ ಹೆಸರಾಗಿತ್ತು.

ಆದಿಕೇಶವ, ಲಕ್ಷ್ಮೀನರಸಿಂಹ ಮಂದಿರಗಳು ಬಹು ಪುರಾತನವಾದವುಗಳು. ಶ್ರೀ ಲಕ್ಷ್ಮೀನರಸಿಂಹಾದಿಕೇಶವ ದೇವಸ್ಥಾನ ಹೆಸರಿನಲ್ಲಿ ಹತ್ತಿರದ ದಾಸನಕೊಪ್ಪ ಗ್ರಾಮವನ್ನು

ಉಂಬಳಿಯಾಗಿ ಕೊಡಲಾಗಿತ್ತು. ಈ ಪ್ರಾಚೀನ ದೇವಾಲಯಗಳನ್ನು ಕೊಂಡಪ್ಪ ವೆಂಕಟಪ್ಪನೆಂಬುವರು ಕಟ್ಟಿಸಿರುವುದಾಗಿ ಐತಿಹ್ಯವಿದೆ. ನಂತರದಲ್ಲಿ ಸಂತ ಕನಕದಾಸರು ಆದಿಕೇಶವ ಮೂರ್ತಿಯನ್ನು ತಮ್ಮ ಜನ್ಮ ಸ್ಥಳವಾದ ಬಾಡ ಗ್ರಾಮದಿಂದ ತಂದು ಸ್ಥಾಪಿಸಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದರೆಂದು ತಿಳಿದು ಬರುತ್ತದೆ.

ಕನಕದಾಸರು ಈ ದೇವಾಲಯದಲ್ಲೇ ಇದ್ದು, ಕಾವ್ಯ, ಕೀರ್ತನೆಗಳನ್ನು ಬರೆದರು. 'ಕುಂತು ಪಿರ ಕಾಗಿನೆಲೆಯಾದಿಕೇಶವನೆ ನಿಶ್ಚಿಂತನಾಗಿ ನಿಮ್ಮ ಗುಡಿಯಲಿಪ್ಪೆನು'[೫೩] ಎಂದು ಕನಕದಾಸರೇ ಕೀರ್ತನೆಯಲ್ಲಿ ಹೇಳಿಕೊಂಡಿರುವರು. ಕನಕದಾಸರು ಉಪಯೋಗಿಸುತ್ತಿದ್ದ ಗೋಪಾಳ, ಶಂಖ ಇಂದಿಗೂ ಆದಿಕೇಶವ ದೇವಾಲಯದಲ್ಲಿವೆ. ಶಾಸನಗಳಲ್ಲಿ ಪೆರ್ಗೆರೆ ಎಂದು ಹೆಸರಾದ ಕೆರೆಯ ಮಡಿಲಲ್ಲಿ ಸಂತ ಶ್ರೀ ಕನಕದಾಸರ ಗದ್ದುಗೆ ಇದೆ. ಯೋಧ ಋಷಿ ಮಹರ್ಷಿ, ಮಹಾತ್ಮ ವಿಶ್ವಮಾನವರಾದ ಕನಕದಾಸರು, ಇಂದಿಗೂ ಚೈತನ್ಯಯುತವಾಗಿರುವ ದಿವ್ಯಶಕ್ತಿಯು ದೇದಿಪ್ಯಮಾನವಾಗಿ ಪ್ರಜ್ವಲಿಸುತ್ತಿರುವರು. ಅವರ ಗದ್ದುಗೆ ಸ್ಥಾವರಗದ್ದುಗೆ ಯಾಗಿರದೆ, ಮಾನವ ಕುಲಕ್ಕೆ ಅಖಂಡವಾದ ಸಂದೇಶ ಬೀರುವ ದಾರಿದೀಪವಾಗಿದೆ. ಕಾಗಿನೆಲೆ ಕನಕದಾಸರ ದೈವೀಶಕ್ತಿ ಪ್ರಭಾವದಿಂದ ಸಾಹಿತ್ಯ ಪ್ರಪಂಚಲ್ಲಿ ಧಾರ್ಮಿಕ ಸೃಷ್ಟಿಯಲ್ಲಿ ಇಡೀ ಮಾನವ ಕುಲಕ್ಕೆ ಚೈತನ್ಯದಾಯಕ ಪುಣ್ಯಕ್ಷೇತ್ರವಾಗಿದೆ.

ಕದರಮಂಡಲಗಿ

ಬ್ಯಾಡಗಿಯಿಂದ ಕದರಮಂಡಲಗಿ ಸುಮಾರು ಆರು ಕಿ.ಮೀ. ಅಂತರದಲ್ಲಿದೆ. ಇದು ಶಾಸನೋಕ್ತ "ಕದರವುಂಡಲಿಗೆ" ಆಗಿದೆ. ಪ್ರಸಿದ್ಧ ಹನುಮಪ್ಪನ ಕ್ಷೇತ್ರಗಳಲ್ಲಿ ಮುಖ್ಯವಾಗಿದೆ. ಹನುಮಪ್ಪನು ಅಂಜನಾದೇವಿಯ ಗರ್ಭದಿಂದ ಜನಿಸಿದ ತಕ್ಷಣವೇ ಅದೀಗ ತಾನೆ ಉದಯಿಸಿದ ಕೆಂಪು ಸೂರ್ಯನನ್ನು ಹಣ್ಣೆಂದು ಬಗೆದು, ಭೂಮಿಯಿಂದ ರವಿ ಮಂಡಲಕ್ಕೆ ಜಿಗಿದು ಅದಕ್ಕೆ ಬಾಯಿ ಇಟ್ಟನಂತೆ. ಇದೆ ಅರ್ಥವನ್ನು ಈ ಗ್ರಾಮಕ್ಕೆ ಜನಪದರು ಹಾಗೂ ವಿದ್ವಾಂಸರು ಹೆಣೆದಿದ್ದಾರೆ. ಕರಿದ ಎಂದರೆ ಕಿರಣ, ಕರಿದ ಮಂಡಲ ಕಿರಣಗಳ ಸಮೂಹವುಳ್ಳ ಸೂರ್ಯಮಂಡಲ. ಅದ್ಭುತ ಮೂರ್ತಿ ನೆಲೆಸಿದ ಊರಾದ್ದರಿಂದ ಕದರಮಂಡಲಗಿಯಾಗಿದೆ.[೫೪]

ಆ ಕಾಲಕ್ಕೆ ಇದು ಚಂದ್ರಗುತ್ತಿಯ ಪ್ರಾಂತ್ಯಾಧೀನವಾಗಿ ಸಂತೆಬೆನ್ನೂರ ಕೆಂಗೆಪ್ಪ ನಾಯಕನೆಂಬ ವಾಲ್ಮೀಕಿ ಜನಾಂಗದ ನಾಯಕನ ಅಂಕಿತವಾಗಿತ್ತು. ಈ ನಾಯಕನು ಮಹೋದಾರಿಯಾಗಿದ್ದನು. ಕದರ ಮಂಡಲಗಿಯ ಕಾಂತೇಶನೆಂದರೆ ಪಂಚಪ್ರಾಣ. ಇದು ಒಂದು ಜಾಗ್ರತ ಸ್ಥಾನವೆಂದು ಜನರು ನಡೆದುಕೊಳ್ಳುತ್ತಿದ್ದರು. ಈ ಪ್ರಾಣ ದೇವರನ್ನು ಜನುಮೇಜಯ ರಾಜನು ತನ್ನ ಮನೋವ್ಯಥೆಯ ನಿವಾರಣೆಗಾಗಿ ತಪಸ್ವಿಗಳ ತಪಸಿದ್ಧಿಹಸ್ತದಿಂದ ಸ್ಥಾಪಿಸಿದನೆಂದು ಅಭಿಪ್ರಾಯವಿದೆ. ಶ್ರೀ ಕೆಂಗಪ್ಪನಾಯಕನು ತನಗಿದ್ದ ಮಹಾರೋಗದಿಂದ ಮುಕ್ತನಾಗಿ ಕೃಜ್ಞತೆಯಿಂದ

ಶ್ರೀ ಕಾಂತೇಶನಿಗೆ ಈ ಊರನ್ನೇ ದಾನವಾಗಿ ಕೊಟ್ಟನು. ಈ ವಿಷಯ ದೇವಸ್ಥಾನ ಮುಂದಿನ ಕಲ್ಲಿನಲ್ಲಿ ಕೆತ್ತಿದ ಶಿಲಾಲಿಪಿ ಹೇಳುತ್ತದೆ.

ಇಂತಹ ಕಾಂತೇಶನ ಮಹಿಮೆಯನ್ನು ಮೊಟ್ಟಮೊದಲು ನಾಡಿಗೆ ಬಿತ್ತರಿಸಿದವರು ಸಂತ ಕನಕದಾಸರು. ಕದರಮಂಡಲಗಿ ಮಾರ್ಗವಾಗಿ ತಿರುಪತಿಗೆ ಹೋದರಂತೆ. ಆದರೆ ಕದರಮಂಡಲಗಿ ಕಾಂತೇಶ (ಹನುಮಪ್ಪ)ನ ದರ್ಶನ ಪಡೆದಿರಲಿಲ್ಲವಂತೆ. ತಿರುಪತಿಯಲ್ಲಿ ಎಷ್ಟೇ ಪ್ರಯತ್ನಿಸಿದರೂ ತಿಮ್ಮಪ್ಪನ ದರ್ಶನವಾಗಲಿಲ್ಲ. ರಾತ್ರಿ ಕನಸಿನಲ್ಲಿ ತಿಮ್ಮಪ್ಪ ಬಂದು ಕನಕಾ ಕದರಮಂಡಲಗಿ ಕಾಂತೇಶನ ದರ್ಶನ ಪಡೆಯದೇ ಮತ್ತು ಆತನ ಅನುಮತಿ ಇಲ್ಲದೆ ಬಂದುದರ ಪ್ರಾಯಶ್ಚಿತವಿದು. ಕಾರಣ ಕದರಮಂಡಲಗಿ ಕಾಂತೇಶನ ದರುಶನ ಮಾಡಿ ಬಂದನಂತರವೇ ದರುಶನ ನೀಡುತ್ತೇನೆ ಎಂದಾಗ ಮರಳಿ ಕದರಮಂಡಲಗಿಗೆ ಬಂದು ಕಾಂತೇಶನ ದರ್ಶನ ಪಡೆದು ಪುನಃ ತಿರುಪತಿಗೆ ಹೋದಾಗ ತಿಮ್ಮಪ್ಪನ ದರ್ಶನವಾಯಿತೆಂಬ ಪ್ರತೀತಿ ಇದೆ.

ಇದರ ಮಧ್ಯೆ ಕನಕದಾಸರಿಗೆ ಯಾವುದೋ ಮಹಾರೋಗ ಆವರಿಸಿತಂತೆ. ಔಷಧದಿಂದ ಅದು ವಾಸಿಯಾಗಲಿಲ್ಲವಂತೆ ತಿಮ್ಮಪ್ಪನ ಆಜ್ಞೆಯಂತೆ ಕದರಮಂಡಲಗಿ ಕಾಂತೇಶನ ಸೇವೆಗೈದು ರೋಗವನ್ನು ಕಳೆದುಕೊಂಡರಂತೆ. ಅಲ್ಲಿನ ಜನರು ಹೇಳುತ್ತಾರೆ. ಕನಕದಾಸರ ಕೀರ್ತನೆ ಇದಕ್ಕೆ ಪೂರಕವಾಗಿದೆ.

ಕದರ ಮಂಡಲಗಿಯ ಕರುಣಿ ಹನುಮರಾಯ।
ಸದುಗುಣವಂತನೆ ಹನುಮಂತನೆ
ಕ್ಷೋಣಿಯೊಳು ಕನಕದಾಸನ ನೆರಳು ಅನಕ।
ಏನು ಬಲಿಸಿದೆಯೋ ಔಷಧಿಯ ಕುಣುಕ
ನೀನಿದ್ದರೆ ಕನಕ ಪ್ರಾಣ ತೆರಳವ ತನಕ।
ಶ್ರೀ ನಿಧೇ ಆದಿಕೇಶವ ಎನ್ನಜನಕ॥[೫೫]

ಎಂದು ಹೇಳಿಕೊಂಡಿದ್ದಾರೆ. ಜನವಾರ್ತೆ ಈ ಕೀರ್ತನೆಗೂ ಸಂಬಂಧವಿದೆ ಎನಿಸುತ್ತದೆ. ರೋಗ ನಿವಾರಣೆಯಾದ ಕೆಲವು ದಿನಗಳ ಕಾಲ ಕಾಂತೇಶನ ಸನ್ನಿಧಿಯಲ್ಲಿ ಇದ್ದು, ಮೋಹನ ತರಂಗಿಣಿ ಕಾವ್ಯ ರಚಿಸಿದರೆಂದು ಹೇಳುತ್ತಾರೆ. ಅದರ ನೆನಪಿಗಾಗಿ ಒಂದು ಹಸ್ತಪ್ರತಿ ಈ ದೇವಾಲಯದಲ್ಲಿ ಇಂದಿಗೂ ಇದೆ.

ಉಡುಪಿ

ದಕ್ಷಿಣ ಕನ್ನಡ ಜಿಲ್ಲೆಯಿಂದ ೧೯೯೭ ಆಗಸ್ಟ್ ೧೪ ರಂದು ಬೇರ್ಪಟ್ಟು ಸ್ವತಂತ್ರ ಜಿಲ್ಲೆಯಾಗಿರುವ ಉಡುಪಿಗೆ ಪ್ರಾಚೀನ ಪರಂಪರೆಯ ಇತಿಹಾಸವಿದೆ. ವಿಶೇಷವಾಗಿ ಕೃಷ್ಣ ದೇಗುಲ ವಿಶ್ವವ್ಯಾಪಿಯಾಗಿ ಪರಿಚಯದ ದೇವಸ್ಥಾನವಾಗಿದೆ. ಈ ಕ್ಷೇತ್ರಕ್ಕೂ ಕನಕದಾಸರಿಗೂ ಒಂದು

ಅವಿನಾಭಾವದ ನಂಟಿದೆ. ಕನಕದಾಸರು ಉಡುಪಿಯ ಕೃಷ್ಣನನ್ನು ಮನದಣಿವರಿಯದಂತೆ ನೋಡಿ ಕೀರ್ತಿಸಿ ಕುಣಿದಿದ್ದಾರೆ. ದಾಸಶ್ರೇಷ್ಠರ ಪಾದ ಸ್ಪರ್ಶದಿಂದ ಕ್ಷೇತ್ರಪಾವನ ವಾದುದಲ್ಲದೆ ಸ್ಥಳದ ಖ್ಯಾತಿಯೂ ಇಮ್ಮಡಿಗೊಂಡಿದೆ. 'ದಾಸಪಂಥದ ಹಿರಿಯರೆಲ್ಲರೂ ಉಡುಪಿಗೆ ಬಂದು ಶ್ರೀ ಕೃಷ್ಣನ ದಾಸನುದಾಸ ಎಂದು ಸಂಭ್ರಮಪಟ್ಟುಕೊಂಡವರೇ. ಆದರೆ ಇವರೆಲ್ಲರಿಗಿಂತ ಉಡುಪಿಯೊಂದಿಗೆ ಅವಿನಾಭಾವ ಸಂಬಂಧವಿದ್ದುದು ಕನಕದಾಸರಿಗೆ ಮಾತ್ರ'

ಹೀಗೆ ಅವಿನಾಭಾವ ಸಂಬಂಧಕ್ಕಿಂತಲೂ ಮಿಗಿಲಾಗಿತ್ತು ಎಂದು ಹೇಳಬಹುದು. ಅಷ್ಟ ಮಠಗಳು ಕನಕರಿಗೆ ಔಚಿತ್ಯಪೂರ್ಣವಾಗಿ ನಡೆದುಕೊಳ್ಳಲಿಲ್ಲ. ಇಲ್ಲಿ ಕೃಷ್ಣ ದರುಶನಕ್ಕೆ ಅವಕಾಶಕಲ್ಪಿಸದೆ ಅವಮಾನಿಸಿದ್ದು, ತನ್ಮೂಲಕ ಕಿಂಡಿಗಾಗಿ ಕಥೆಕಟ್ಟಿ ಇತಿಹಾಸವೆಂಬಂತೆ ಕನಕ ಕೃಷ್ಣರ ಹೆಸರಿನಲ್ಲಿ ವಿಶ್ವವಿಖ್ಯಾತಗೊಳಿಸಿದ್ದು ಗೊತ್ತಿದ್ದ ಸಂಗತಿಯಾಗಿದೆ.

ಉಡುಪಿಯ ಇತಿಹಾಸ ಸುದೀರ್ಘವಾದುದು. ಇದು ಆರ್ಷ ಸಂಸ್ಕೃತಿ– ಭಕ್ತಿಪರಂಪರೆಯ ನೆಲೆವೀಡು ಸುಮಾರು ಏಳುವರೆ ಶತಮಾನಗಳ ಹಿಂದೆ ಅವತರಿಸಿದ ಆಚಾರ್ಯ ಮಧ್ವರ ದ್ವೈತ ಸಿದ್ಧಾಂತದ ಮೂಲ ಕೇಂದ್ರ– ಕೃಷ್ಣದೈವ ಮುಖ್ಯವಾಗಿ ಜಾತಿ ಮತಪಂಥ ಮೀರಿ ಬರುವ ಭಕ್ತಾದಿಗಳನ್ನು ವಿಶ್ವಾದ್ಯಂತ ಸಂಪಾದಿಸಿಕೊಂಡವನಾಗಿದ್ದಾನೆ. ಇದು ಮಧ್ವಾಚಾರ್ಯರ ಜನ್ಮಸ್ಥಳವೂ ಆಗಿದೆ.

ನೋಡುವ ಬನ್ನಿರೋ ಜನರು ಶ್ರೀ ಕೃಷ್ಣನ
ಜೋಡು ದೀವಟಿಕೆ ಸೇವೆಯನು.....
ನೋಡಿಯೋ ನಮ್ಮಯ ಮನದ ಇಷ್ಟಾರ್ಥವ
ಬೇಡಿಕೊಂಡು ಪೊಗಳುವ ಪಾದ ಯುಗವ[೫೬]

ಎಂದು ದಾಸರು ಉಡುಪಿಕೃಷ್ಣನನ್ನು ಹಾಡಿ ಹೊಗಳಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಕನಕದಾಸರ ಜೊತೆ ಪುರಂದರದಾಸರು ಈ ಕ್ಷೇತ್ರಕ್ಕೆ ಭೇಟಿನೀಡಿರುವರು. ಅವರ ಪ್ರಿಯಸ್ಥಳವೂ ಆಗಿತ್ತು ಎನ್ನಬಹುದು. ಇಂತಹ ಸುಕ್ಷೇತ್ರ ಕನಕದಾಸರಿಗೆ ಗುಡಿಯ ಪ್ರವೇಶ ನಿರಾಕರಿಸುವ ಮೂಲಕ ಸಮಾಜದ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಜಾತಿ, ಮತ, ಮೀರಿದ ಮಹಾಸಂತ ಕನಕದಾಸರಾಗಿರುವಾಗ ಮಠಾಧೀಶರು ಮಾಡಿದ್ದು ತಪ್ಪೆಂದು ಭಾವಿಸಲಾಗಿದೆ.

ಅಡಿ ಟಿಪ್ಪಣಿಗಳು

೧. ಜಗನ್ನಾಥ ಗೇಣನ್ನವರ 'ಸಂತ ಶ್ರೀ ಕನಕದಾಸರ ಜೀವನ ಸಂದೇಶ', ಪುಟ-೨

೨. ಚಿಕ್ಕಣ್ಣ ಕಾ.ತ. 'ಕನಕದಾಸರು' ಪುಟ ೪೮.

೩. ಶೇಷಗಿರಿರಾವ್. ಎಲ್.ಎಸ್., 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಪುಟ ೨೯.

೪. ಕಟ್ಟಿಶೇಷಾಚಾರ್ಯ, 'ಕವಿಕನಕದಾಸರು' ಪುಟ-೦೩.

೫. ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚಣ್ಣರಾಯ 'ಶ್ರೀ ಕನಕದಾಸರ ಹಾಡುಗಳು', ಪುಟ-೨.

೬. ದಿವಾಕರ ರಂಗನಾಥ ರಾಮಚಂದ್ರ, 'ಹರಿಭಕ್ತಿಸುಧೆ', ಪುಟ-೧-೯.

೭. ಶಂಕರನಾರಾಯನರಾವ್. ಎಚ್.ಎಮ್. 'ನಳಚರಿತ್ರೆಯ ಸಂಗ್ರಹ, ಪುಟ ೨-೩.

೮. ಹಿರೇಮಠ ಆರ್. ಸಿ. (ಸಂ) ಕನಕದಾಸರ ಮೋಹನ ತರಂಗಿಣಿ೧೯೨೨ ಪುಟ:೩

೯. ರಾಮಚಂದ್ರರಾವ್ ಸಾ,ಕೃ ದಾಸ ಸಾಹಿತ್ಯ ಸೌರಭ, ಪುಟ-೩೧

೧೦. ನಾಯಕ ಹಾ. ಮಾ. (ಸಂ)ಕನ್ನಡ ವಿಶ್ವಕೋಶ ಸಂಪುಟ ೨ ೧೯೭೧ ಪುಟ-೬೬೯

೧೧. ಚನ್ನಪ್ಪ ಎರೇಸಿಮೆ. ಎಂ. ಬಸವರಾಜ ಕರ್ನಾಟಕದ ಮಹಾಸಂತ ಕನಕದಾಸ'೧೯೮೫ ಪುಟ-೫

೧೨. ನಾಗರತ್ನ ಟಿ. ಎನ್ 'ದಾಸಸಾಹಿತ್ಯದರ್ಪಣ' ೨೦೧೨ ಪುಟ:೫೮

೧೩. ಸುಧಾಕರ'ಕಾಗಿನೆಲೆಯ ಕನಕದಾಸೋತ್ತಮ೧೯೯೭ ಪುಟ:೯

೧೪. ಜ್ಯೋತಿ ಹೊಸೂರ: ಕನಕದಾಸರ ಜೀವನ ವಿಚಾರ೧೯೮೩ ಪುಟ:೯೪

೧೫. ಮಂಜುನಾಥನ್ ಜಿ.ಜಿ (ಸಂ)ಮೋಹನ ತರಂಗಿಣಿ'ಕನಕಸಾಹಿತ್ಯದರ್ಶನ ಸಂಪುಟ-೩ ೧೯೯೯ ಪುಟ:೧

೧೬. ಚಂದ್ರಕಾಂತ ಬಿಜ್ಜರಗಿ 'ದಾರ್ಶನಿಕ ಕವಿ ಕನಕದಾಸರು'೨೦೧೦ ಪುಟ:೪೦

೧೭. ಮಂಜುನಾಥ ಜಿ.ಜಿ. (ಸಂ) ಮೋಹನ ತರಂಗಿಣಿ. ಕನಕ ಸಾಹಿತ್ಯ ದರ್ಶನ:೩, ಪುಟ ೪.

೧೮. ಅದೇ, ಪುಟ ೨೨೪.

೧೯. ಸುಧಾಕರ 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು' ಕನಕಸಾಹಿತ್ಯ ದರ್ಶನ ಸಂಪುಟ-೪, ಪುಟ ೩೯೧.

೨೦. ನರಸಿಂಹಾಚಾರ್ಯರು ಆರ್. 'ಕರ್ನಾಟಕ ಕವಿಚರಿತೆ' ದ್ವಿತೀಯ ಸಂಪುಟ ೧೯೧೯ ಪುಟ: ೨೩೩-೩೮

೨೧. ಕಟ್ಟಿ ಶೇಷಾಚಾರ್ಯರ ಕವಿಕನಕದಾಸರು' ೧೯೩೮ ಪುಟ: ೦೩-೦೯

೨೨. ಬೆಟಗೇರಿ ಕೃಷ್ಣಶರ್ಮ ಮತ್ತು ಬೇಂಗೇರಿ ಹುಚ್ಚೂರಾಯರು 'ಶ್ರೀ ಕನಕದಾಸರ ಹಾಡುಗಳು ೧೯೯೫ ಪುಟ:೩೬.

೨೩. ಶಂಕರನಾರಾಯಣರಾವ್. ಎಚ್. ಎಮ್. ನಳಚರಿತ್ರೆಯ ಸಂಗ್ರಹ ೧೯೪೮ ಪುಟ:೧೦

೨೪. ನಾಗೇಗೌಡ ಎಚ್.ಎಲ್. ಮಹಾತ್ಮ ಕನಕದಾಸ ಪ್ರಶಸ್ತಿ ೧೯೯೫ ಪುಟ:೧೬೫

೨೫. ಭಗವತಿ ಎಸ್.ಎಸ್. 'ಕನಕದಾಸರ ಒಂದು ಅಧ್ಯಯನ' (ಸಂ) ಸಂತಕವಿ ಅನುಭಾವಿಕನಕದಾಸರು (ಲೇ), ಪುಟ-೨೫೮.

೨೬. ಕಲ್ಬುರ್ಗಿ ಎಂ.ಎಂ. ಕನಕದಾಸರ ಜಾತಿ ಗೊಂದಲಗಳು. (ಲೇ) ಮಾರ್ಗ ಸಂಪುಟ-೧

೨೭. ದೇಸಾಯಿ ಪಿ.ಬಿ. 'ಕನಕದಾಸರ ಚತುಷಮೊನೋತ್ಸವ ಸಂಸ್ಮರಣ ಸಂಚಿಕೆ೧೯೯೫ ಪುಟ-೭೯

೨೮. ಮುಗಳಿ. ರಂ ಶ್ರೀ:ಕನ್ನಡ ಸಾಹಿತ್ಯ ಚರಿತ್ರೆ ೧೯೫೩ ಪುಟ-೨೫೯

೨೯. ಲಕ್ಕಪ್ಪಗೌಡ ಎಚ್.ಜೆ 'ಕನಕ ಕೆಲವು ಮುಖಗಳು ೨೦೦೪ ಪುಟ:೩೪

೩೦. ದೇವೆಂದ್ರ ಮಾಧವನವರ (ಲೇ) ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ (ಸಂ) ಡಾ. ಬಿ. ಶಿವರಾಮಶೆಟ್ಟಿ ಪುಟ

೩೧. ಸುಧಾಕರ 'ಕಾಗಿನೆಲೆಯ ಕನಕದಾಸೋತ್ತಮ'೧೯೯೭ ಪುಟ:೯

೩೨. ಚಿಕ್ಕಣ್ಣ ಕಾ.ತ. 'ಕನಕದಾಸರು' ೧೯೮೨ ಪುಟ:೧೨

೩೩. ನಾಗರತ್ನ ಟಿ.ಎನ್. ಹರಿದಾಸ ಭಕ್ತಿಸ್ವರೂಪ ೧೯೮೯ ಪುಟ:೧೭-೧೮

೩೪. ಅರವಿಂದ ಮಾಲಗತ್ತಿ 'ಕನಕದಾಸರ ಕೆಲವು ಐತಿಹ್ಯಗಳ ಅರ್ಥವ್ಯಾಪ್ತಿ(ಲೇ)' ಕನಕದರ್ಶನ ೧೯೯೦ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.

೩೫. ಒಡೆಯರ್ ಡಿ. ಹೆಗ್ಗಡೆ, ಹಾಲುಮತದ ಅಧ್ಯಯನಗಳು, ಪು-೪೪೨

೩೬. ಚಂದ್ರಕಾಂತ ಬಿಜ್ಜರಗಿ, ದಾರ್ಶನಿಕ ಕವಿ ಕನಕದಾಸರು, ಪು-೨೦೩

೩೭. ಸುಧಾಕರ ಕನಕದಾಸರ ಕೀರ್ತನೆಗಳು, ಪು-೫೨

೩೮. ಸುಧಾಕರ 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು', ಪುಟ ೯೧.

೩೯. ಅದೇ ಪುಟ.

೪೦. ಸುಧಾಕರ 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳ' ಪುಟ ೪೪೬.

೪೧. ಒಡೆಯರ ಡಿ. ಹೆಗ್ಗಡೆ 'ಹಾಲುಮತದ ಅಧ್ಯಯಗಳು', ಪುಟ ೪೪೨.

೪೨. ಅದೇ, ಪುಟ ೪೪೪.

೪೩. ಚಂದ್ರಕಾಂತ ಬಿಜ್ಜರಗಿ, ದಾರ್ಶನಿಕ ಕವಿ ಕನಕದಾಸರು, ಪು-೨೦೩.

೪೪. ಸುಧಾಕರ 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳ' ಪುಟ ೧೦೯.

೪೫. ಚಂದ್ರಕಾಂತ ಬಿಜ್ಜರಗಿ, ಕನಕ ಸಾಹಿತ್ಯ ದರ್ಶನ, ಪು-೨೧೦.

೪೬. ರಾಮಚಂದ್ರ ಎಸ್.ಕೆ. 'ಪುರಂದರ ಸಾಹಿತ್ಯ ದರ್ಶನ ಭಾಗ-೧', ಪುಟ ೬೧.

೪೭. ಚಂದ್ರಕಾಂತ ಬಿಜ್ಜರಗಿ, ಕನಕ ಸಾಹಿತ್ಯ ದರ್ಶನ, ಪು-೨೨೬.

೪೮. ದೇವಾರ್ಜುನ ಎಂ. ಕನಕಪವಾಡ, ಪು-೭೮

೪೯. ಜಗನ್ನಾಥ ಗೇಣನ್ನವರ, ಸಂತ ಕನಕದಾಸರ ಜೀವನ ಸಂದೇಶ, ಪು-೭೦

೫೦. ಸುಧಾಕರ 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳ' ಪುಟ-೯೭.

೫೧. ಅದೇ, ಪುಟ ೮೬.

೫೨. ಒಡೆಯರ್ ಡಿ. ಹೆಗ್ಗಡೆ, ಹಾಲುಮತದ ಅಧ್ಯಯನಗಳು, ಪು-೪೪೮

೫೩. ಜಗನ್ನಾಥ ಗೇಣನ್ನವರ 'ಸಂತ ಶ್ರೀ ಕನಕದಾಸರ ಜೀವನ ಸಂದೇಶ', ಪುಟ-೫೨.

೫೪. ಅದೇ, ಪುಟ-೫೮.

೫೫. ಅದೇ, ಪುಟ-೬೦.

೫೬. ಜಗನ್ನಾಥ ಗೇಣನ್ನವರ 'ಕನಕದಾಸರ ಪಾರಂಪರಿಕ ಸ್ಥಳಗಳು' ಪುಟ-೦೨.

ಅಧ್ಯಾಯ ನಾಲ್ಕು

ಸಾಹಿತ್ಯಿಕ, ಭಾಷಿಕ ಅನುಸಂಧಾನದ ಅಧ್ಯಯನಗಳ ವೈಶಿಷ್ಟ್ಯತೆಯ ಪ್ರವೃತ್ತಿ

೪.೧ ಸಾಹಿತ್ಯಕ ಕೃತಿಗಳ ಅಂತರಂಗವನ್ನು ಗುರುತಿಸುವ ಪ್ರವೃತ್ತಿ

೪.೧.೧ ಮೋಹನತರಂಗಿಣಿ

೪.೧.೧.೧ ಲಲಿತ ಶೃಂಗಾರಗುಣ

೪.೧.೧.೨ ಚಾರಿತ್ರಿಕತೆ

೪.೧.೨ ನಳಚರಿತೆ

೪.೧.೨.೧ ಸರಳ–ಸೌಂದರ್ಯ ಸ್ಥಿರೀಕರಣ

೪.೧.೨.೨ ಮಾನವ್ಯರ ಮಹೋನ್ನತಿ

೪.೧.೩ ರಾಮಧಾನ್ಯ ಚರಿತ್ರೆ

೪.೧.೩.೧ ವರ್ಗ, ವರ್ಣ ಸಂಘರ್ಷದ ನೆಲೆಗಳು

೪.೧.೩.೨ ಸಮಾನತೆ, ಜ್ಯಾತ್ಯಾತೀತ ಮೌಲ್ಯಗಳು

೪.೧.೪ ಹರಿಭಕ್ತಿಸಾರ

೪.೧.೪.೧ ಹರಿ ಭಕ್ತಿ ನಿರ್ಭರತೆ

೪.೧.೪.೨ ಆಧ್ಯಾತ್ಮ ಹಾಗೂ ಆತ್ಮ ಶೋಧನೆ

೪.೧.೫. ನೃಂಸಿಹಸ್ತವ

೪.೨ ಭಾಷಿಕ ಅಧ್ಯಯನಗಳು

೪.೨.೧. ಛಂದಸ್ಸು

೪.೨.೨ ಅಲಂಕಾರಗಳ ಬಳಕೆ

೪.೩ ದೇಶೀಯತೆ

೪.೩.೧ ಒಗಟುಗಳು

೪.೩.೨ ಗಾದೆಗಳು

೪. ೪. ಕನಕದಾಸರ ಅಧ್ಯಯನಗಳಲ್ಲಿ 'ಪ್ರಜ್ಞೆ'ಯ ವಿವಿಧ ಆಯಾಮಗಳು

೪.೪.೧ ವೈಚಾರಿಕ ಪ್ರಜ್ಞೆ

೪.೪.೨ ಸಾಮಾಜಿಕ ಪ್ರಜ್ಞೆ

೪.೪.೩. ಕಲಾ ಪ್ರಜ್ಞೆ

ಅಧ್ಯಾಯ-ನಾಲ್ಕು

ಸಾಹಿತ್ಯಿಕ, ಭಾಷಿಕ ಅನುಸಂಧಾನದ ಅಧ್ಯಯನಗಳ ವೈಶಿಷ್ಟ್ಯತೆ

ಪ್ರವೇಶ

ಕನ್ನಡ ಸಾಹಿತ್ಯ ಪರಂಪರೆಗೆ ಪ್ರಾಚೀನತೆಯ ಇತಿಹಾಸವಿದೆ. ಅದು ಸತ್ವಪೂರ್ಣವಾದ ದೇಶೀಯ ಸೊಗಡನ್ನು ತುಂಬಿಕೊಂಡಿದೆ. ಅದರಲ್ಲಿ ನಡುಗನ್ನಡ ಸಾಹಿತ್ಯವು ಮೌಲಿಕತೆಯನ್ನು ಹೊಂದಿದೆ. ಮಧ್ಯಯುಗೀನ ಕಾಲದಲ್ಲಿ ಕನಕದಾಸರು ಹಾಗೂ ಅವರ ಕೃತಿಗಳು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತಿವೆ. ೧೯ನೇ ಶತಮಾನದಿಂದ ಪ್ರಸ್ತುತದವರೆಗೂ ಕನಕದಾಸರು ಮತ್ತು ಅವರ ಸಾಹಿತ್ಯ, ಅವರ ವಿಚಾರಗಳು ಮರುನಿರೂಪಣೆಗೆ ಒಳಪಡುತ್ತಿವೆ. ಅವರ ಕೃತಿಗಳು ಜೀವನಪರ ಮೌಲ್ಯಗಳನ್ನು ಹೊಂದಿವೆ. ಮೋಹನ ತರಂಗಿಣಿ, ನಳಚರಿತೆ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ ಕೀರ್ತನೆ, ಮುಂಡಿಗೆ, ಉಗಾಬೋಗಗಳನ್ನು ರಚಿಸಿರುವರು. ಇವು ಮಧ್ಯಯುಗೀನ ಸಾಹಿತ್ಯ ಕೃತಿರತ್ನಗಳಾಗಿವೆ. ಕನಕದಾಸರ ಸಾಹಿತ್ಯವನ್ನು ವಿಮರ್ಶಕರು, ವಿದ್ವಾಂಸರು, ಅಧ್ಯಯನಕಾರರು, ಅಧ್ಯಯನ ಮಾಡಿ, ವಿವಿಧ ದೃಷ್ಟಿಕೋನಗಳಲ್ಲಿ ತಮ್ಮ ಆಲೋಚನೆಗಳನ್ನು, ಲೇಖನ, ವಿಮರ್ಶಾಕೃತಿಗಳ ಮೂಲಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಅವರ ಸಾಹಿತ್ಯವು ಕೃತಿಯಲ್ಲಿ ದೇಶೀಯತೆಯ ನೆಲೆಗಟ್ಟಿನ ಮೇಲೆ ರಚಿತವಾಗಿವೆ. ಭಾಷಿಕವಾದ ಒಳನೋಟವನ್ನು ಕೃತಿಗಳು ಹೊಂದಿವೆ. ಎಲ್ಲಾ ಗ್ರಹಿಕೆಗಳು ಸಾಹಿತ್ಯದ ವೈಸಿಷ್ಟ್ಯತೆಯನ್ನು ಆಲೋಚನೆಗಳನ್ನು ಇಲ್ಲಿ ತಾತ್ವಿಕವಾಗಿ ವಿಶ್ಲೇಷಿಸಲಾಗಿದೆ. ಕೀರ್ತನೆ, ಮುಂಡಿಗೆಗಳ ಒಳನೋಟಗಳನ್ನು ಗುರುತಿಸುವ ಹಾಗೂ ಕಾವ್ಯಶೋಧ ಪ್ರವೃತ್ತಿ.

ಕನಕದಾಸರ ವ್ಯಕ್ತಿತ್ವಕ್ಕೆ ಅವರ ಸಾಹಿತ್ಯ ಹಿಡಿದ ಕನ್ನಡಿಯಾಗಿದೆ. ಕೀರ್ತನೆ ಹಾಗೂ ಮುಂಡಿಗೆಗಳು ಮತ್ತು ಅವರ ಸಾಹಿತ್ಯಕವಾದ ಕಾವ್ಯಕೃತಿಗಳಾದ ಮೋಹನ ತರಂಗಿಣಿ, ನಳಚರಿತೆ, ಹರಿಭಕ್ತಿಸಾರ, ರಾಮಧಾನ್ಯಚರಿತೆ, ಕೃತಿಗಳು ಮಧ್ಯಯುಗೀನ ಕಾಲದಲ್ಲಿ ಮಹತ್ವದ ಕೃತಿಗಳಾಗಿವೆ. ಇವೆಲ್ಲಾ ಕೃತಿಗಳು ಹಾಡುಗಬ್ಬವಾಗಿವೆ. ಅಲ್ಲದೆ ಕೀರ್ತನೆ ಮುಂಡಿಗೆಗಳ ಮೂಲಕ ಸಮಾಜವನ್ನು ಶುದ್ಧಿಕರಿಸುವ, ಅಂಕು-ಡೊಂಕನ್ನು ತಿದ್ದುವ ಅಂತರಂಗವನ್ನು ಅರಿಯುವ ಮಧ್ಯಮವಾಗಿವೆ. ಕೀರ್ತನೆಗಳನ್ನು ಅಧ್ಯಯನಕಾರರು ಗಮನಿಸಿ ಸತ್ಯವಂತದ ಸಂಗವಿರಲು ತೀರ್ಥವ್ಯಾತಕೆ, ಮಾನಹೀನವಾಗಿ ಬಾಳ್ವೆ ಮನುಜನೇತಕೆ, ದಾನಧರ್ಮ ಮಾಡಿರಯ್ಯ ಎಂಬ ಸಾಲುಗಳನ್ನು ತಮ್ಮ ಅಧ್ಯಯನ ಮೂಲಕ ಆ ಸಾಲುಗಳ ಹಿಂದಿರುವ ತಾತ್ವಿಕ ನಿಲುವನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿರುವರು.

ಕೀರ್ತನೆ, ಮುಂಡಿಗೆಗಳು ಅಷ್ಟೆ ಅಲ್ಲದೆ ಕನಕದಾಸರ ಕಾವ್ಯಗಳೊಳಗೂ ಹಲವು ರೀತಿಯ ದೃಷ್ಟಿ ಧೋರಣೆಗಳನ್ನು ದಾಖಲಿಸುವ ಪ್ರವೃತ್ತಿಯ ಕಂಡುಬಂದಿದೆ. ಉದಾಹರಣೆಗೆ ಹೇಳುವುದಾದರೆ ಅವರ ಮೋಹನ ತರಂಗಿಣಿ ಕೃತಿಯಲ್ಲಿ, ಚಾರಿತ್ರಿಕತೆ, ಲಲಿತ ಹಾಗೂ ಶೃಂಗಾರ ಗುಣ

ನಳಚರಿತೆಯಲ್ಲಿ ಸರಳ ಸೌಂದರ್ಯ, ಮಾನವ್ಯದ ಮಹೋನ್ನತಿ ರಾಮಧಾನ್ಯಚರಿತೆಯಲ್ಲಿ ಐತಿಹಾಸಿಕ ಪ್ರಾಚೀನ ಪರಂಪರೆ, ವರ್ಗ, ವರ್ಣ, ಸಂಘರ್ಷದ ನೆಲೆಗಳನ್ನು, ಸಾಮಾನತೆ, ಜಾತ್ಯಾತೀತ ಮೌಲ್ಯಗಳನ್ನು ಕಾಣುತ್ತೇನೆ. ಹರಿಭಕ್ತಿಸಾರದಲ್ಲಿ, ಹರಿಭಕ್ತಿ, ಆಧ್ಯಾತ್ಮ ಮತ್ತು ಆತ್ಮಶೋಧನೆಯಂತಹ ಅನೇಕ ತೆರನಾದ ದೃಷ್ಟಿ, ಧೋರಣೆಗಳನ್ನು ಗುರುತಿಸುವ ಪ್ರವೃತ್ತಿ ಕಂಡುಬಂದಿದೆ. ಆ ಎಲ್ಲಾ ಧೋರಣೆಗಳ ಅಧ್ಯಯನಕಾರರು ಮಾಡಿರುವರು. ಆ ಎಲ್ಲಾ ಅಧ್ಯಯನಗಳ ತಾತ್ವಿಕ ವಿಶ್ಲೇಷಣೆ ಇಲ್ಲಿದೆ.

೪.೧.೧ ಮೋಹನ ತರಂಗಿಣಿ

ಅಧ್ಯಯನಕಾರರು ಕನಕದಾಸರ ಕೃತಿಗಳನ್ನು ಅಧ್ಯಯನ ಮಾಡಿ ಅಲ್ಲಿರುವ ಒಳನೋಟಗಳನ್ನು ದಾಖಲಿಸಿರುವರು. ಕನಕದಾಸರ ಮೋಹನ ತರಂಗಿಣಿ ಸುಲಭ, ಸುಂದರ ಶೈಲಿಯ ಸಾಂಗತ್ಯದಲ್ಲಿ ರಚನೆಗೊಂಡಿದೆ. ಸಾಂಗತ್ಯದ ದೃಷ್ಟಿಯಿಂದ ೧೬ನೇ ಶತಮಾನ ಉತ್ಕರ್ಷದ ಕಾಲವಾಗಿದೆ. ಈ ಶತಮಾನದಲ್ಲಿ ಮಂಗರಸ, ನಂಜುಂಡ, ಕನಕದಾಸ, ರತ್ನಾಕರವರ್ಣಿ ಪ್ರಸಿದ್ಧ ಸಾಂಗತ್ಯ ಕವಿಗಳಾಗಿದ್ದಾರೆ. ನಂತರದ ೧೯ನೇ ಶತಮಾನದವರೆಗೂ ಅದರ ರಚನೆ, ಬೆಳವಣಿಗೆಗಳು ಬೆಳೆದುಬಂದವುಗಳಾಗಿವೆ. ಇದು ಆ ಕಾಲದಲ್ಲಿ ದೇಶಿ ಛಂದಸ್ಸಾಗಿತ್ತು. ಆ ಕಾಲದ ಉನ್ನತ ಕಾವ್ಯಗಳಾದ ಭರತೇಶವೈಭವ, ಕುಮಾರರಾಮನ ಚರಿತೆ, ಅದ್ವಿತಿಯವಾಗಿ ನಿಲ್ಲುತ್ತವೆ. ಕೆಲವೇ ಶ್ರೇಷ್ಠ ಸಾಂಗತ್ಯ ಕೃತಿಗಳಲ್ಲಿ ಕನಕದಾಸರ ಮೋಹನ ತರಂಗಿಣಿಗೆ ಮಹೋನ್ನತ ಸ್ಥಾನವಿದೆ.

ಇದರಲ್ಲಿ ೪೨ ಸಂಧಿಗಳಲ್ಲಿ ೨೭೯೮ ಪದ್ಯಗಳನ್ನೊಳಗೊಂಡ ಶೃಂಗಾರ ರಸಭರಿತ ಕಾವ್ಯವಾಗಿದೆ. ಹರಿಭಕ್ತಿ ಪ್ರಸಾರಕರಾದ ಕನಕದಾಸರು. ಪೌರಾಣಿಕ ಸಂದರ್ಭಗಳನ್ನು ಸಮಕಾಲೀನದಲ್ಲಿಟ್ಟು ನೋಡಿರುವರು. ಕೃಷ್ಣಮಹಿಮೆ ಹಾಗೂ ಕೃಷ್ಣ ಮನೆತನದ ಚರಿತ್ರೆಯೂ ಇಲ್ಲಿದೆ. ವಿಜಯನಗರ ಕೃಷ್ಣದೇವರಾಯನನ್ನು ದ್ವಾರಕೆಯ ಕೃಷ್ಣನೊಂದಿಗೆ ಅಭೇದಿಸಲಾಗಿದೆ. ಜಾತಿ, ಬೇಧ, ಪಂಥಗಳಲ್ಲಿನ ವಿವಿಧ ವರ್ಗ, ಭಾವಗಳನ್ನು ಕಂಡ ಕನಕದಾಸರು ಅಂತಿಮವಾಗಿ ಹರಿಹರರು ಸಮಾನರು. ಸಾಮರಸ್ಯದ ಅವಶ್ಯಕತೆ ಇದೆ ಎಂಬುದನ್ನು ಒತ್ತಿ ಹೇಳಿದ್ದಾರೆ. ಅಂತೆಯೇ ಈ ಕಾವ್ಯದಲ್ಲಿ ವಿಷ್ಣುಭಕ್ತಿ ಮತ್ತು ಶಿವಭಕ್ತಿಗಳ ಸಮಾವೇಶವಿದೆ. 'ಮೋಹನ ತರಂಗಿಣಿ' ಪಾರಂಪರಿಕವಾಗಿ ಬಂದ ಸಾಹಿತ್ಯದ ಜಾಡಿನಲ್ಲಿ ಸಾಗಿ ಇತಿಹಾಸಕ್ಕೂ ಕೊಡುಗೆ ನೀಡಿದೆ. ಜಾನಪದ ಸತ್ವದಿಂದ ತುಂಬಿದೆ. ಈ ಹಿನ್ನೆಲೆಗಳಲ್ಲಿ ಈ ಕಾವ್ಯಕ್ಕೆ ತನ್ನದೆ ಆದ ಸತ್ವವಿದೆ. ದೇಶೀಯ ಸೊಗಡು ತುಂಬಿಕೊಂಡಿದೆ.

ಮೋಹನ ತರಂಗಿಣಿಯಲ್ಲಿ ೪೨ ಸಂಧಿಗಳಿವೆ. ಇವು ಒಂದೊಂದು ಮುಖ್ಯವಾದ ವಿವರಣೆಯನ್ನು ನೀಡಬಲ್ಲವು ಆಗಿವೆ.

೧. ಪೀಠಿಕಾ ಭಾಗ ೨. ಸೌರಾಷ್ಟ್ರ ವರ್ಣನೆ ೩. ದ್ವಾರಕಪುರವರ್ಣನೆ ೪. ಕಂದರ್ಪ ಜನನ ೫. ಕಾಮನಿಗೆ ದೇವತೆಗಳ ಬೋಧೆ ೬. ಮನ್ಮಥನ ದಂಡಯಾತ್ರೆ ೭. ಕಾಮದಹನ ೮. ರತಿಯ ಪ್ರಲಾಪ ೯. ರತಿಯು ಶಂಬರಾಸುರನ ಪಟ್ಟಣಕ್ಕೆ ಹೋದುದು ೧೦. ರತಿ ಶಂಬರಾಸುರರ ಸಂಧಾನ ೧೧. ಮಾರ ಜನನ ೧೨. ಶಂಭರಾಸುರನ ವಧೆ ೧೩. ರತಿಯ ವಿವಾಹ ೧೪. ಜಲಕ್ರೀಡೆ ೧೫. ರತಿಕಾಂತನನ್ನು ಮನೆತುಂಬಿಸಿಕೊಂಡುದುದು ೧೬. ರತಿಯ ಗರ್ಭಾದಾನ ೧೭. ಅನಿರುದ್ದನ ಜನನ ೧೮. ಅನಿರುದ್ದನ ನಗರ ಶೋಧನೆ ೧೯. ಬೇಟೆಯ ವರ್ಣನೆ ೨೦. ಬಾಣಾಸುರನ ಶೋಣಿತಪುರದ ವರ್ಣನೆ ೨೧. ಬಾಣಾಸುರನ ಶಿವಪೂಜೆ ೨೨. ಬಾಣಾಸುರನ ಭೋಗಲೀಲೆ ೨೩. ಉಷಾದೇವಿಯ ಶೃಂಗಾರ ೨೪. ಉಷಾದೇವಿಯ ಶಿವಪೂಜೆ ೨೫. ಉಷೆಗೆ ಶಿವನು ವರವ ಕೊಟ್ಟಿದುದು ೨೬. ಉಷೆ ಚಿತ್ರಲೇಖೆಯರ ಸರಸ ೨೭. ಉಷೆಯ ಸ್ವಪ್ನ ೨೮. ಉಷೆಯ ವಿರಹ ೨೯. ಚಿತ್ರಪಟದ ಸಂಧಿ ೩೦. ಚಿತ್ರಪಟದ ದರ್ಶನ ೩೧. ಅನಿರುದ್ದನನ್ನು ತಂದುದು ೩೨. ಉಷಾನಿರುದ್ದರ ಏಕಾಂತ ೩೩. ಉಷಾನಿರುದ್ಧರ ವಿವಾಹ ವೃತ್ತಾಂತ ೨೪. ಅನಿರುದ್ಧ ಕುಂಭಾಂಡರ ಕಾಳಗ ೩೫. ಬಾಣಾಸುರ ಅನಿರುದ್ಧರ ಕಾಳಗ ೩೬. ಗರುಡನ ಸಂದಿ ೩೭. ಕುಂಭಾಂಡನ ಬುದ್ದಿ ೩೮. ಹರಿಹರರ ಕಾಳಗ ೩೯. ಪರಮೇಶ್ವರ ಶ್ರೀಕೃಷ್ಣರ ಕಾಳಗ ೪೦. ಶ್ರೀಕೃಷ್ಣ ಬಾಣಾಸುರರ ಕಾಳಗ ೪೧. ಶ್ರೀ ಕೃಷ್ಣನು ಉಷಾನಿರುದ್ಧರನ್ನು ಕಂಡುದು ೪೨. ಶ್ರೀಕೃಷ್ಣನು ದ್ವಾರಕೆಗೆ ಬಂದುದು.

ಹೀಗೆ ೪೨ ಸಂಧಿಗಳಲ್ಲಿ ಚಾರಿತ್ರಿಕವಾಗಿ ಎಲ್ಲ ಅಂಶಗಳನ್ನು ಸಾಂಗತ್ಯದಲ್ಲಿ ರಚಿಸಿದ ಕೃತಿ. ಮಧ್ಯಯುಗೀನ ಸಾಹಿತ್ಯದಲ್ಲಿ ರಚಿತವಾದ ಉತ್ತಮ ಸಾಹಿತ್ಯ ಕೃತಿಯಾಗಿದೆ. ಅದರ ಕಂಪು ಅಂದಿನಂತೆಯೆ ಇಂದಿಗೂ ಹರಡಿದೆ.

ಮೋಹನ ತರಂಗಿಣಿ ಕೃತಿಯ ಅಂತರಂಗವನ್ನು ಗುರುತಿಸುವ ಪ್ರವೃತ್ತಿ

೪.೧.೧.೧. ಲಲಿತ ಮತ್ತು ಶೃಂಗಾರಗುಣ

ಅಧ್ಯಯನಕಾರರು ಕನಕರ ಮೋಹನ ತರಂಗಿಣಿಯ ಒಳನೋಟವಾದ ಲಲಿತ ಮತ್ತು ಶೃಂಗಾರ ಗುಣವನ್ನು ಶೋಧಿಸಿರುವರು. ಕನಕದಾಸರು ಹಲವಾರು ಕೃತಿಗಳನ್ನು ರಚಿಸಿ ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿರುವರು. ಅವರು ರಚಿಸಿದ ಕೃತಿಗಳಲ್ಲಿ 'ಮೋಹನ ತರಂಗಿಣಿ' ಉತ್ತಮವಾದ ಕೃತಿಯಾಗಿದೆ. ಇದು ಶೃಂಗಾರ, ರಮ್ಯಲೋಕವನ್ನು ನಮ್ಮೆದುರು ತೆರೆದಿಡುತ್ತದೆ. ಈ ಕೃತಿಯಲ್ಲಿ ದೇವರ ಬಗೆಗಿನ ನಮ್ಮ ಕಲ್ಪನೆಗಳು ಅತಿಮಾನುಷ ಶಕ್ತಿಯೆ ಆಗಿದೆ. ಇನ್ನು ಶೃಂಗಾರ ಕಲ್ಪನೆ ಅದ್ಭುತವಾಗಿದೆ. ಹೆಣ್ಣು-ಗಂಡಿನೆಡೆಗೆ ಆಕರ್ಷಿತಳಾಗುವುದು ಅದರ ವರ್ಣನೆ ಹೇಳತೀರದು. ಈ ಕೃತಿಯ ಕುರಿತು ವಿವಿಧ ವಿದ್ವಾಂಸರ ಅಬಿಪ್ರಾಯಗಳು ಹೀಗಿವೆ;

ಆರ್.ಸಿ. ಹಿರೇಮಠರು ಕನಕದಾಸರ ವರ್ಣನೆಗಳು ಎಂಬ ತಮ್ಮ ಲೇಖನದಲ್ಲಿ ಶೃಂಗಾರ ಕುರಿತು ಹೀಗೆ ಹೇಳಿದ್ದಾರೆ:

"ಶೃಂಗಾರ ಮಹಾರಾಜರಿಗೆ ಮಾತ್ರ ಮೀಸಲಾಗಿಲ್ಲ. ಕನಕದಾಸರ ಕೃತಿಗಳಲ್ಲಿ ಋತುವರ್ಣನೆಗಳು ಬರುತ್ತವೆ. ಅವು ಶೃಂಗಾರ ಪ್ರಧಾನವಾಗಿರುವುದನ್ನು ಓದಿ ಅರಿಯಬೇಕು. ಮಳೆಗಾಲ ಆರಂಭವಾಗುತ್ತದೆ. ಮೇಘ ಗರ್ಜನೆ ಕೇಳಿಬರುತ್ತದೆ. ಶೃಂಗಾರ ಸೋನೆ ಸುರಿಯುವುದನ್ನು ಅವು ಧ್ವನಿಸುತ್ತವೆ.

"ಮೇಘ ಗರ್ಜಿಸಿದವು ದೇವ ದುಂದುಭಿಗಳ ಹೊಡೆದಂತೆ (೪.೩೨)
ಗುಡುಗು ಮಿಂಚು ಕೂಡಿಯೇ ಬರಬೇಕಲ್ಲವೆ, ಅದು ಹೀಗಿದೆ:
ಮೇಘವೆಣ್ಣು। ಸಂಚಲದೃಗುಸನ್ನೆಯ ಮಾಡಿದಂದದಿ
ಮಿಂಚಡರಿತು ನಭಸ್ಥಲದಿ (೪.೩೩)

ಈ ಮಳೆಗಾಲ ಅತ್ಯಂತ ಅರ್ದ್ರವಾಗಿದೆ. ಕವಿಯ ಕಾವ್ಯದ ಕಣ್ಣು ಶೃಂಗಾರ ರಸದಲ್ಲಿ ಮುಳುಗಿ ಹೋಗಿದೆ. ಹೀಗೆ ಸನ್ನಿವೇಶಕ್ಕೆ ತಕ್ಕಂತೆ ಪ್ರತಿಮೆಗಳನ್ನು ಬಳಸುವ ಶೃಂಗಾರ ಸೃಷ್ಟಿಸುವ ಜಾಣ್ಮೆ ಕನಕದಾಸರಿಗಿದೆ"[೧]

ಮಂಗಳೂರಿನ ರಾಜಲಕ್ಷ್ಮೀ ಎನ್.ಕೆ. ಅವರು 'ಮೋಹನ ತರಂಗಿಣಿ: ಶ್ರೇಣೀಕೃತ ವ್ಯವಸ್ಥೆ' ಎಂಬ ಲೇಖನದಲ್ಲಿ ಈ ರೀತಿ ಅಭಿಪ್ರಾಯ ಪಡುತ್ತಾರೆ.

'ಮೋಹನ ತರಂಗಿಣಿ' ವರ್ಣನೆಯ ಕೃತಿ, ನವರಸಗಳಲ್ಲಿ ಶೃಂಗಾರ ಹಾಗೂ ಶೌರ್ಯ ರಸಕ್ಕೆ ಕನಕದಾಸರು ಪಾಶಸ್ತ್ಯ ನೀಡಿರುವರು. ಶೌರ್ಯರಸವು ಪುರುಷ ಪ್ರಧಾನ ಕಾಳಗಗಳಲ್ಲಿ ಕಂಡುಬರುತ್ತದೆ. ಶೃಂಗಾರ ರಸವು ಹೆಣ್ಣು ಗಂಡಸನ್ನು ಬಯಸುವ, ಸನ್ನಿವೇಶಗಳಲ್ಲಿ ಕಂಡುಬರುತ್ತದೆ. ಶೌರ್ಯ ಹಾಗೂ ಶೃಂಗಾರ ಅತಿಶಯ ರೂಪವನ್ನು ಹೊಂದಿ ಫ್ಯಾಂಟಸಿಯ ಲೋಕವನ್ನು ನಮ್ಮ ಮುಂದೆ ತೆರೆದಿಡುತ್ತದೆ"[೨]

ಪೌರಾಣಿಕವಾದ ಕಥಾವಸ್ತುವನ್ನು ಜನಪ್ರಿಯವಾದ ಧಾಟಿಯಲ್ಲಿ ಕಾವ್ಯಮಯವಾದ ಶೈಲಿಯಲ್ಲಿ ನಿರೂಪಿಸಿರುತ್ತಾರೆ. ವಸ್ತುವಿನ ದೃಷ್ಟಿಯಿಂದ ಕನ್ನಡ ಕಾವ್ಯಗಳಲ್ಲಿ ಈ ಕವಿಗೆ ಒಂದು ಸ್ಥಾನ ಸಲ್ಲುತ್ತದೆ.

ಜಿ.ಎಸ್. ಭಟ್- ದೇವೀ ಪಾತ್ರಗಳನ್ನು ಶೃಂಗಾರ ಕಾವ್ಯಗಳಲ್ಲಿ ಜೀವಂತವಾಗಿರಿಸಿದ ಶ್ರೇಯಸ್ಸು ಇವರದು. ಮೋಹನ ತರಂಗಿಣಿಗೆ ಕಥಾ ವಸ್ತುವನ್ನು ಆಯ್ದುಕೊಂಡಿರುವುದು ಮಹಾಭಾರತ, ಭಾಗವತ ಮತ್ತು ಪುರಾಣಗಳಿಂದ ವಿಜಯನಗರದ ಸಮಕಾಲೀನ ಜೀವನವನ್ನು ನಮ್ಮ ಕಣ್ಮುಂದೆ ಪೌರಾಣಿಕ ಪಾತ್ರಗಳ ಹಿನ್ನೆಲೆಯಲ್ಲಿ ಇರಿಸಿರುವುದರಿಂದ ಅವರನ್ನು ಆ ಕಾಲದ ಚರಿತ್ರಕಾರರ ಸಾಲಿಗೆ ಸೇರಿಸಿದೆ. ವಿಜಯನಗರ ಸಾಮ್ರಾಜ್ಯದ ಸುವರ್ಣ ಯುಗದಲ್ಲಿ ಈ ಕೃತಿ ರಚಿಸಲ್ಪಟ್ಟಿತು ಎಂಬುದು ಗಮನಿಸಬೇಕಾದ ಸಂಗತಿ.[೩]

ಶೃಂಗಾರ ಮಾನವನ ದೇಹ ಕೇಂದ್ರಿತ ಸೌಂದರ್ಯದ ಪ್ರತೀಕವಾಗಿದೆ. ಶೃಂಗಾರ ರಸವು ಕಾಮನಿಗೆ, ಮನ್ಮಥನಿಗೆ ಸಂಬಂಧಪಟ್ಟಿದ್ದು. ಮನ್ಮಥನ ಕಲ್ಪನೆ 'ಮೋಹನ ತರಂಗಿಣಿ'ಯಲ್ಲಿ ವಾಸ್ತವ

ರೂಪದಲ್ಲಿ ಕಾಣಬರುತ್ತದೆ. ಮನ್ಮಥನು ರತಿಯ ಪತಿಯಾಗಿ ದೇಹಧಾರಿಯಾಗುತ್ತಾನೆ. ಹಾಗೆಯೇ ಕಾಮದ ರೂಪಕವಾಗಿ ಬರುವಾಗ ಭಾವರೂಪಿಯಾಗುತ್ತಾನೆ. ಮನ್ಮಥನು ಕಾಮರೂಪಿಯಾಗಿ ಶಿವನ ತಪಸ್ಸನ್ನು ಭಂಗಪಡಿಸುವ ಸಂಧರ್ಭದಲ್ಲಿ ಬ್ರಹಸ್ಪತಿಯ ನಡುವೆ ದೇಹದ ಬಗ್ಗೆ ಚರ್ಚೆ ನಡೆಯುತ್ತದೆ. ಬ್ರಹಸ್ಪತಿಯು ಮನ್ಮಥನಿಗೆ ಲೋಕ ಕಲ್ಯಾಣದ ಬಗ್ಗೆ ಬೋಧನೆಯನ್ನು ಮಾಡುತ್ತಾನೆ. ಮನ್ಮಥನು ಶಿವನ ತಪಸ್ಸನ್ನು ಕೆಡಿಸಬೇಕಾದ ಅನಿವಾರ್ಯತೆಯನ್ನು ಹೇಳುತ್ತಾನೆ. ಮನ್ಮಥನು ಇದಕ್ಕೆ ಹಿಂಜರಿಯುತ್ತಾನೆ. ಬ್ರಹಸ್ಪತಿಯ ಮಾತನ್ನು ಕೇಳಿ ಹರನ ಮೇಲೆ ಬಾಣವನ್ನು ಬಿಟ್ಟಲ್ಲಿ, ಅವನು ಕೆಂಗಡಿಗಣ್ಣನ್ನು ತೆರೆದರೆ ತಾನು ನಾಶವಾಗುತ್ತೇನೆ ಎನ್ನುತ್ತಾನೆ. ಅದಕ್ಕುತ್ತರವಾಗಿ ಬ್ರಹಸ್ಪತಿಯು ಮನ್ಮಥನ ಮಾತು ಅರ್ಥಹೀನವೆನ್ನುತ್ತಾನೆ. ಯಾಕೆಂದರೆ ಪರಹಿತಕ್ಕಾಗಿ ಶರೀರವಳಿದರೆ ಸೂರ್ಯ ಚಂದ್ರರಿರುವವರೆಗೆ ಕೀರ್ತಿ, ಶಾಸ್ವತವಾಗಿರುತ್ತದೆ. ಮನ್ಮಥನು ಅದಕ್ಕೆ ಪ್ರತಿಯಾಗಿ ತನುವಿದ್ದರೆ ಸಕಲ ಸುಖಗಳನ್ನನುಭವಿಸಬಹುದು. ಶರೀರವನ್ನೇಕೆ ಬಿಡಬೇಕೆಂದು ಬ್ರಹಸ್ಪತಿಯನ್ನು ಪ್ರಶ್ನಿಸುತ್ತಾನೆ. ಹೀಗೆ ಕಥೆಯು ಮುಂದುವರೆದು ಶೃಂಗಾರ ಹಾಗು ಹೆಣ್ಣಿನ ನಡುವಿನ ಸಂಬಂಧ ವಿಸ್ತೃತವಾಗಿ ರುಕ್ಮಿಣಿಯ ಗರ್ಭದಾನ, ರತಿಯ ಗರ್ಭದಾನಹಾಗೂ ಉಷೆ-ಅನಿರುದ್ಧರ ಏಕಾಂತದ ಸನ್ನಿವೇಷದಲ್ಲಿ ಬರುತ್ತದೆ. ಗಂಡಿಗೆ ಆತುರವಾಗಲಿ, ಸೆಳೆತವಾಗಲಿ ಇಲ್ಲ. ರತಿಯ ಗರ್ಭದಾನದ ಸಂದರ್ಭವನ್ನು ಗಮನಿಸಿ: ಅಲ್ಲಿ ಅಲ್ಲಿ ಸ್ತ್ರೀ ಸಮೂಹವೇ ಇದೆ. ಅಲ್ಲಿದ್ದ ಕಟ್ಟಿಗೆಕಾತಿಯರು ಮನ್ಮಥನಿಗೆ ಸಂಗೀತಗಾರ್ತಿಯನ್ನು ಚಿತ್ಯೆಸು ನರ್ತನದ ಜಾಣೆಯರನ್ನು ನೋಡು ಎನ್ನುತ್ತಾರೆ. ರತಿ ಮನ್ಮಥಗೆ ತಾಂಬೂಲ ನೀಡುತ್ತಾಳೆ. ರತಿ ಮನ್ಮಥರು, ಸುಪ್ರಭಾತ ಕೀರ್ತನೆ ಕೇಳುವವರೆಗೆ ಸ್ವಚ್ಛಂದ ಪ್ರೀತಿಯಲ್ಲಿ ತೊಡಗುತ್ತಾರೆ. ಉಷಾ ಅನಿರುದ್ಧರ ಸಂಬಂಧವನ್ನು ಗಮನಿಸಿ: ಉಷೆಗೆ ಸಂಗಾತಿ ಬೇಕೆನಿಸುತ್ತದೆ. ಪಾರ್ವತಿ ಆಕೆಗೆ "ಚಿಂತಿಸಬೇಡ ನಿನ್ನ ಸಂಗಾತಿಯನ್ನು ನೀನು ಕನಸಿನಲ್ಲಿ ನೋಡುತ್ತಿ" ಎಂದು ಹೇಳುತ್ತಾಳೆ. ಉಷೆ ಅನಿರುದ್ಧಿನನ್ನು ಭೇಟಿಯಾಗುವುದು, ರತಿ ಸುಖವನ್ನು ಪಡೆಯುವುದು ಕನಸಿನಲ್ಲಿ. ನಂತರದಲ್ಲಿ ಆಕೆ ಚಿತ್ರಲೇಖೆಯ ಸಹಾಯದಿಂದ ಆತನನ್ನು ಪಡೆಯುತ್ತಾಳೆ. ಅವನ ಮಿಥುನ ಸುಖವು ಮೂರ್ಛೆಯಲ್ಲಿ ಕೊನೆಗೊಂಡು ಬಾಹುಬಂಧನದಲ್ಲಿ ವಿಶ್ರಾಂತಿ ಪಡೆಯುತ್ತದೆ.

ಇಲ್ಲಿ ಬರುವ ಶೃಂಗಾರ ಚಿತ್ರಣವು ಒಂದು ನಿರ್ದಿಷ್ಟ ಸೂತ್ರವನ್ನು ಹೊಂದಿದೆ. ಸಮತೆಯಲ್ಲಿ ಅಸಮತೆ ಶ್ರೇಣಿಕೃತ ಸಮಾಜದಲ್ಲಿ ಕಾಣುವ ಗುರುತರವಾದ ವಿಭಾಜಕ ಗೆರೆಗಳು, ತನ್ಮೂಲಕ ಅದು ಪ್ರತಿಪಾದಿಸುವ ಶ್ರೇಣೀಕೃತ ಮೌಲ್ಯಗಳನ್ನು ಈ ಸೂತ್ರದಲ್ಲಿ ಕಾಣಬಹುದು. ಕಾರ್ಯದಲ್ಲಿ ದೇವ ಹಾಗೂ ಅಸುರರು ಶ್ರೇಣಿಯಾದರೆ, ಶೃಂಗಾರದಲ್ಲಿ ಹೆಣ್ಣು ಹಾಗೂ ಗಂಡಿನ ಶ್ರೇಣಿಯಲ್ಲಿ ಇದು ವ್ಯಕ್ತವಾಗುತ್ತದೆ. ವಾಸ್ತವದ ನೆಲೆಯಲ್ಲಿ ಪ್ರತಿಪಾದಿತವಾಗಿದ್ದರೆ, ಬಹುಶ ಮೋಹನ ತರಂಗಿಣಿ ಉತ್ತಮ ಕೃತಿಯನಿಸಿಕೊಳ್ಳುತ್ತಿರಲಿಲ್ಲ.

೦

೪.೧.೧.೨ ಚಾರಿತ್ರಿಕತೆ

ಕನಕದಾಸರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಬಾಡ ಎಂಬ ಗ್ರಾಮದಲ್ಲಿ ತಂದೆ ಬೀರಪ್ಪ, ತಾಯಿ ಬಚ್ಚಮ್ಮ ಎಂಬ ಪುಣ್ಯದಂಪತಿಗಳ ಮಗನಾಗಿ ಜನಿಸಿದರು. ಕನಕ, ಬಾಡ, ಬಂಕಾಪುರದ ದಂಡನಾಯಕರಾಗಿ ಆಡಳಿತ ನಿರ್ವಹಿಸಿ ಕೊನೆಗೆ ದಾಸರಾಗಿ, ಸಮಾಜಸುಧಾರಕರಾದರು. ಇವರು ಸಂತಶಿಖಾಮಣಿಯಾಗಿ, ಆದ್ಯಾತ್ಮ ಯೋಗಿಯಾಗಿ, ಹಲವು ಕೃತಿಗಳನ್ನು ಬರೆದಿರುವರು. ಅದರಲ್ಲಿ ಮೋಹನತರಂಗಿಣಿ, ನಳಚರಿತೆ, ರಾಮಧಾನ್ಯಚರಿತೆ ಈ ಕೃತಿಗಳು ಪ್ರಮುಖವಾಗಿವೆ. ವಿಜಯನಗರ ಸಾಮ್ರಾಜ್ಯ, ಪುರಾಣಗಳಿಂದ ವಸ್ತು ಆಯ್ಕೆಮಾಡಿದ ಕೃತಿಗಳಾಗಿರುವುರಿಂದ ಇವುಗಳು ಚಾರಿತ್ರಿಕತೆಯನ್ನು ಹೊಂದಿವೆ. ಮೋಹನ ತರಂಗಿಣಿ ಚರಿತ್ರೆಯ ಕಥಾನಕವುಳ್ಳ ಸುಂದರ ಕಾವ್ಯ ಕೃಷ್ಣದೇವರಾಯನ ಚರಿತೆಯನ್ನು ರಚಿಸುವ ದೃಷ್ಟಿಯಿಂದಲೇ ಮೋಹನತರಂಗಿಣಿಯನ್ನು ಶ್ರೀಕೃಷ್ಣಚರಿತೆ ಎಂದು ಕರೆದಿದ್ದಾರೆ. ಇದರಲ್ಲಿ ಪವಿತ್ರ ಕ್ಷೇತ್ರವೆನಿಸುವ ದ್ವಾರಕಾಪುರದ ಶ್ರೀಕೃಷ್ಣನನ್ನು ಇತಿಹಾಸ ಪ್ರಸಿದ್ಧವಾದ ಸುಖಸಂಪತ್ತುಗಳ ಆಗರವೆನಿಸಿದ ವಿಜಯನಗರ ಕೃಷ್ಣದೇವರಾಯನನ್ನು ಒಂದೇ ತೊಟ್ಟಿಲಲ್ಲಿ ತೂಗಿದಂತೆ ಎನಿಸುತ್ತದೆ. ಬಾಹ್ಯವಾಗಿ ಅದು ದ್ವಾರಕಾಪುರದ ಶ್ರೀಕೃಷ್ಣಚರಿತೆಯಾದರೂ ಆಂತರ್ಯವಾಗಿ ಕೃಷ್ಣದೇವರಾಯನನ್ನು ಹೊಗಳುವ ಕೊಂಡಾಡುವ ಚರಿತ್ರೆಯಾಗಿ ತೋರುತ್ತದೆ.

ಇನ್ನು ನಳಚರಿತ್ರೆಯನ್ನು ಅವಲೋಕಿಸುವುದಾದರೆ, ಪುರಾಣ ಪ್ರಸಿದ್ಧವಾದ ನಳೋಪಾಖ್ಯಾನದ ಕಥೆಯನ್ನು ಆರಿಸಿಕೊಂಡು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಹೇಳಿರುವರು. ಈ ನಳಚರಿತೆ ವರಪುರದ ಚೆನ್ನಿಗರಾಯನ ಅಂಕಿತದಲ್ಲಿ ರಚನೆಯಾಗಿ, ಪುರ, ರಾಜ, ಅರಣ್ಯ ಹೀಗೆ ಸಂಕಷ್ಟದಿಂದ ಪಾರಾಗಿ ರಾಜನಾದ ಎಲ್ಲ ಚಾರಿತ್ರಿಕ ಕಥೆ ಒಳಗೊಂಡಿದೆ. ಹಾಗೆಯೇ ರಾಮಧಾನ್ಯಚರಿತೆ, ರಾಮ, ಲಕ್ಷ್ಮಣರವರು, ಸೀತೆಯನ್ನು ರಾವಣನಿಂದ ಬಿಡಿಸಿ ತರಲು, ಹಸಿವಿನಿಂದ ಗೌತಮನ ಆಶ್ರಮಕ್ಕೆ ಬಂದು ಮೃಷ್ಟಾನ್ನ ಭೋಜನ ಮಾಡಿ, ಧಾನ್ಯದಲ್ಲಿ ಯಾವುದು ಶ್ರೇಷ್ಠವೆಂದು ರಾಮನ ಆಜ್ಞೆಯಂತೆ ಆರು ತಿಂಗಳ ಸೆರೆಯಿಂದ ಧಾನ್ಯಗಳು ಕರೆಸಿ ನೋಡಿದಾಗ ಭತ್ತ ಕಳೆಗುಂದಿರುತ್ತದೆ ರಾಗಿ ಉತ್ಕೃಷ್ಟವಾಗಿರುವಾಗ ಕೊನೆಗೆ ರಾಗಿಯೇ ಎಲ್ಲ ಧಾನ್ಯಗಳಲ್ಲಿ ಶ್ರೇಷ್ಠವಾಗಿದೆ, ಎಂಬ ತೀರ್ಮಾನಕ್ಕೆ ಬರುತ್ತಾರೆ. ಒಟ್ಟಾರೆ ಕನಕದಾಸರ ಕೃತಿಗಳು ಚಾರಿತ್ರಿಕ ಕಥನವನ್ನು ಒಳಗೊಂಡಿರುವುದು ಸಾಕ್ಷಿಯಾಗಿದೆ.

೪.೧.೨ ನಳಚರಿತೆ

೪.೧.೨.೧ ಸರಳ ಸೌಂದರ್ಯ ಸ್ಥಿರೀಕರಣ

ರಂಗರಾಜ ವನದುರ್ಗರವರ ಕೃತಿ ‘ಕನಕದಾಸರ ವೈಚಾರಿಕತೆ’ಯಲ್ಲಿನ ಅಭಿಪ್ರಾಯ ಹೀಗಿದೆ;

"ನಳದಮಯಂತಿಯರ ಪ್ರೀತಿ-ಪ್ರೇಮ ವಿರಳ ವೈರಾಗ್ಯಗಳ ಕಥೆ ಒಂದು ದೃಷ್ಟಿಯಿಂದ ಸ್ತ್ರೀ ಜೀವನದ ಉತ್ತುಂಗತೆಯನ್ನು ಸಾರುವುದೆ ಪ್ರಸ್ತುತ ಕಾವ್ಯದ ಮುಖ್ಯ ಉದ್ದೇಶ"[೪]

ತಾಳ್ತಜೆ ವಸಂತಕುಮಾರರು ಕನಕದಾಸರ ನಳಚರಿತೆ ಲೇಖನದಲ್ಲಿ ಈ ರೀತಿ ಹೇಳಿರುವರು;

"ಕನಕದಾಸರು ಮಧ್ವ ಸಂಪ್ರದಾಯದ ಹರಿದಾಸರಾಗಿ ಪೂರ್ಣವಾಗಿ ಅವಲಂಬಿಸಿ ಅದೇ ದಾರಿಗುಂಟ ಸಾಗಿದ ಮಹಾನ್ ವ್ಯಕ್ತಿ. ಆದರೆ ಅವರ ಮನೋಧರ್ಮದಲ್ಲಿಯೇ ಅದ್ಭುತವೆನಿಸುವ ಒಂದು ಕ್ರಾಂತಿಕಾರಕ ಜೀವನ ಸಂಹಿತೆ ಅಡಕವಾಗಿದೆ. ಅದೆಂದರೆ ಅವರು ನಿರಾಕರಿಸುವ ಉಚ್ಚ-ನೀಚ ಭೇದ ಹಾಗೂ ಪ್ರತಿಪಾದಿಸುವ ಅಹಂಕಾರ ಈ ಎರಡು ಅಂಶಗಳಿಗೆ ನಳಚರಿತೆಯ ಕಥೆಯು ಪೂರಕವಾಗಿದೆ"[೫]

ಎ.ವಿ. ನಾವಡ ಅವರ ತ್ಯಾಗ ಮತ್ತು ಮಾನವೀಯತೆಯ ಸಂಕೇತ ಇದು ಶೃಂಗಾರದ ಕಥೆಯಾದರೂ ಆದರೆ ಕವಿ ಇಲ್ಲಿ ಹೆಚ್ಚು ಒತ್ತು ಕೊಟ್ಟಿರುವುದು ತ್ಯಾಗಕ್ಕೆ. ಪೌರಾಣಿಕ ಪಾತ್ರಗಳಿಗೆ ಮಾವೀಯ ಕಳೆ ತುಂಬಿದ್ದೆ ಇಲ್ಲಿಯ ವೈಶಿಷ್ಟ್ಯ[೬]

ತ್ಯಾಗ ಮತ್ತು ನಿಸ್ವಾರ್ಥ ಪ್ರೇಮ

ತ್ಯಾಗ ಮೂಲವೂ, ನಿಸ್ವಾರ್ಥ ಪರವೂ ಆದ ಪ್ರೇಮಕ್ಕೆ ನಳ-ದಮಯಂತಿಯರು ಸಂಕೇತವಾಗಿರುವರು. ನಳಚರಿತೆ ಪುಟ್ಟ ಕಾವ್ಯವಾಗಿದ್ದರೂ ಇಲ್ಲಿ ಚಿತ್ರಿತವಾಗಿರುವ ನಳದಮಯಂತಿಯರು ನಿಸ್ವಾರ್ಥ ಪ್ರೇಮಕ್ಕೆ ಆದರ್ಶರಾಗಿದ್ದಾರೆ. ಅವರ ಪರಿಶುದ್ಧವಾದ ಪ್ರೇಮ, ತ್ಯಾಗಮೂಲವು ಆದರಣೀಯವಾಗಿದೆ. ಪರಸ್ಪರ ಅಗಲಿಕೆಯಲ್ಲಿ ಕಷ್ಟದ ಕೂಟಲೆಯಲ್ಲಿ ಪ್ರೇಮ ಪುಟವಿಕ್ಕಿದ ಚಿನ್ನದಂತೆ ಶೋಭಾಯಮಾನವಾದುದು ಎಂದ ದರ್ಶನ ಈ ಖಂಡಕಾವ್ಯದ ಮೂಲಕ ಅಭಿವ್ಯಕ್ತಗೊಳ್ಳುತ್ತದೆ.[೭]

೪.೧.೨.೨ ಮಾನವ್ಯದ ಮಹೋನ್ನತಿ

ಕಾವ್ಯಕ್ಕೆ ಕೊಟ್ಟ ಹೆಸರು ನಳಚರಿತ್ರೆ. ಆದರೆ ನಿಜವಾಗಿ ಇದು ದಮಯಂತಿ ಚರಿತ್ರೆ. ಸಾಮಾನ್ಯವಾಗಿ ಭಾರತೀಯ ಪುರಾಣ, ಕಾವ್ಯಗಳಲ್ಲಿ ಪುರುಷ ಪ್ರಧಾನತೆಗೆ ಒತ್ತು. ಆ ಮೌಲ್ಯಗಳ ಪ್ರತಿಪಾದನೆಯ ಕಡೆಗೆ ಅವು ತುಡಿಯುತ್ತವೆ. ಪುರುಷರಿಂದಲೇ ಈ ಮೌಲ್ಯಗಳನ್ನು ಚಾಲನಗೊಳಿಸುವುದು ಅಂತಹ ಪುರುಷಪ್ರಧಾನ ಮೌಲ್ಯಗಳನ್ನು ವೈಭವೀಕರಿಸುವ ಮೂಲಕ ಮಹಿಳೆಯರಿಂದಲೇ ಆ ಮೌಲ್ಯಗಳನ್ನು ಅಪ್ಪಿಕೊಳ್ಳುವಂತೆ ಮಾಡುವುದು ಈ ಕಾವ್ಯದ ವಿಶೇಷತೆಯಾಗಿದೆ.

ನಳಚರಿತೆಯಲ್ಲಿ ಮಾನವ್ಯದ ಮಹೋನ್ನತಿ

ಮನುಷ್ಯರ ಆದರ್ಶ ಅವರು ಮಾಡು ಕೆಲಸದಲ್ಲಿ ಅಡಗಿದೆ. ಹಾಗೆ ನಳಚರಿತೆಯಲ್ಲಿ ಇಂತಹ ಹಲವಾರು ಅಂಶಗಳನ್ನು ಕಾಣುತ್ತೇವೆ.

ಕರ್ನಾಟಕದ ಭಕ್ತಿ ಪರಂಪರೆಯಲ್ಲಿ ೧೨ನೇ ಶತಮಾನದ ಶಿವಶರಣರು ಸಮಾಜಮುಖಿಯಾಗಿ ಮಾಡಿದ ಕಾರ್ಯ ಮಹತ್ವದ್ದು. ನಂತರ ೧೫-೧೬ನೇ ಶತಮಾನದಲ್ಲಿ ದೇವರು-ಧರ್ಮ, ಜಾತ್ಯಾತೀತತೆಯನ್ನು ಪ್ರಜಾಸತ್ತಾತ್ಮಕವಾಗಿ ವ್ಯಾಖ್ಯಾನಿಸಿದ ವ್ಯಕ್ತಿಗತವಾಗಿ ನೇರವಾಗಿ ತಲುಪಿಸಿದ ಕೀರ್ತಿ ಕನಕದಾಸರಿಗೆ ಸಲ್ಲುತ್ತದೆ, ಎಂಬುದು ಹಲವರ ಅಭಿಪ್ರಾಯ. ಹುಟ್ಟಿನಿಂದ ಜಾತಿ, ಕುಲ ಮತದ ದ್ವಂದ್ವಗಳಿಂದಲೇ ಬೆಳೆದು ತಮ್ಮ ಗುಣಸಂಪತ್ತನ್ನು ವೈರತ್ವದಿಂದ ಮೀರಿ ಕುಲಶ್ರೇಷ್ಠರಾಗಿ ಬೆಳೆದು, ಬಾಳಿದ ಕನಕದಾಸರು ಕನ್ನಡ ಸಾಹಿತ್ಯದ ಮೇರು ವ್ಯಕ್ತಿತ್ವದ ಕವಿ, ಸಂತರಾಗಿದ್ದಾರೆ.

ಸಮಾಜದಲ್ಲಿರುವ ಅಸ್ಪೃಶ್ಯತೆ ಮೇಲು-ಕೀಳನ್ನು ಹೋಗಲಾಡಿಸಿ, ಸಮಾನತೆ ತರಲು ರಾಗಿ, ಭತ್ತದ ರೂಪಕದಲ್ಲಿ ವರ್ಗ, ವರ್ಣ ಶ್ರೇಣೀಕರಣ ವ್ಯವಸ್ಥೆಯ ಜೀವ ವಿರೋಧಿ ಪ್ರವೃತ್ತಿಗಳನ್ನು ಖಂಡಿಸುವ ಕನಕದಾಸರು, ಅಧಿಕಾರ ಮತ್ತು ಅಹಂಕಾರ ನಿರಸನದಲಿ ಅಂತರಂಗದ ವಿಕಾಸವನ್ನು ಧ್ವನಿಸುವ ಚಿಂತನಶೀಲತೆಯಿಂದ ಪ್ರಸ್ತುತರಾಗುತ್ತಾರೆ. ಹೀಗೆ ರಾಜ ಪ್ರಭುತ್ವದ ಭಾಗವಾಗಿದ್ದುಕೊಂಡು ಅದರ ಮಿತಿಗಳನ್ನು ಕಾಣಿಸಬಲ್ಲ ಸ್ವತಂತ್ರ ಪ್ರವೃತ್ತಿಯಿಂದ ಕನಕರು ಭಿನ್ನರೆನಿಸಿಕೊಳ್ಳುತ್ತಾರೆ. ಕನಕದಾಸರ ನಳಚರಿತೆ ಶ್ರೇಷ್ಠ ಕಾವ್ಯವಾಗಿದೆ. ದಂಪತಿಗಳ ನೈತಿಕ ಬದ್ಧತೆ, ನಂಬಿಕೆ, ನಿರಪೇಕ್ಷ ವಿಧೇಯ ಮಡದಿಯನ್ನು ಸಮಾಜ ಸಂಪತ್ತು ಎನ್ನುವ ಕನಕದಾಸರು ತಮ್ಮ ನಳಚರಿತ್ರೆಯಲ್ಲಿ ಜೀವನ ಪ್ರೀತಿ-ವಾತ್ಸಲ್ಯ ಶ್ರದ್ಧೆಯುಳ್ಳ ನೈತಿಕ ಸಮಾಜವನ್ನು ಪುರಸ್ಕರಿಸಿದ್ದಾರೆ.

ನಳಚರಿತ್ರೆ ಕನಕದಾಸರು ನಂಬಿದ ಮಾನವತೆ ಶ್ರೇಷ್ಠತೆಯ ಜೀವನ ಮೀಮಾಂಸೆಗೆ ನಿದರ್ಶನವಾದ ಕಾವ್ಯ. ಪ್ರಭುತ್ವ ಕೇಂದ್ರಿತ ಮಾರ್ಗಕಾವ್ಯದ ಪಾರಂಪರಿಕ ಚೌಕಟ್ಟಿನಲ್ಲಿ ದಾಂಪತ್ಯದ ಆದರ್ಶ ಸ್ತ್ರೀತ್ವದ ಔನ್ಯತ್ಯದ ವಿವೇಕವುಳ್ಳ 'ನಳಚರಿತೆ' ವ್ಯಾಸ ಮಹಾಭಾರತದ ವನಪರ್ವದಲ್ಲಿ ೨೮ ಅಧ್ಯಾಯಗಳಲ್ಲಿರುವ 'ನಳೋಪಾಖ್ಯಾನ'ದ ಕನ್ನಡ ರೂಪ. ಮೂಲಕಾವ್ಯಕ್ಕೆ ಕವಿ ಬದ್ಧರಾಗಿದ್ದರೂ ಶಬ್ದಶಃ ಅನುವಾದವಲ್ಲ. ವೈಯಕ್ತಿಕ ಲೋಕಾನುಭವದ, ಜೀವನಾನುಭವ ಮತ್ತು ತಮ್ಮ ಕಾವ್ಯ ಪ್ರತಿಭೆ ಕಲ್ಪನಾಶಕ್ತಿಯಿಂದ ಮೂಲಕಾವ್ಯಕ್ಕೆ ಮೆರಗು ತರುವಂತೆ ಸಂದರ್ಭ, ಸನ್ನಿವೇಶಗಳನ್ನು ಸೃಜಿಸಿ ಅಲಂಕರಿಸಿದ್ದಾರೆ. ಮೂಲ ಮಹಾಭಾರತದ 'ನಳದಮಯಂತಿ' ಕತೆಯು ರೋಮಶಮುನಿ ಧರ್ಮರಾಜನಿಗೆ ಹೇಳಿದ ಮೌಖಿಕ ಕಥನ.

ಸತ್ವ ಮತ್ತು ತಮೋಶಕ್ತಿಗಳ ಮುಖಾಮುಖಿಯ ಕಥೆ ನಳಚರಿತೆ. ನಿಷದ ರಾಜ್ಯದ ದೊರೆ ನಳ ಮತ್ತು ವಿದರ್ಭ ನಗರದ, ಭೀಮನೃಪಾಲನ ಮಗಳು ದಮಯಂತಿಯ ವಿವಾಹಪೂರ್ವ ಅನುರಕ್ತೆ, ಸಾಮರಸ್ಯ, ದಾಂಪತ್ಯ, ವಿಧಿವಿಲಾಸದೊಂದಿಗಿನ ವನವಾಸ, ವಿರಹ ಮತ್ತು ಸಮಾಗಮದ ಕಥೆ.

ನಳಚರಿತೆ ಒಮದು ಪೌರಾಣಿಕ ರಮ್ಯ ಕಾವ್ಯ. ಕಲ್ಪಕತೆ, ರೋಚಕತೆ, ಪೌರಾಣಿಕತೆಗಳಿಂದ ಕೂಡಿದ ಈ ಕಾವ್ಯದಲ್ಲಿ ದೇವತೆಗಳು, ರಾಕ್ಷಸರು, ಮನುಷ್ಯರು ಪರಸ್ಪರ ಬದುಕನ್ನೆ ಪ್ರವೇಶಿಸುತ್ತಾರೆ, ಪ್ರಭಾವಿಸುತ್ತಾರೆ. ನಾರದ, ಇಂದ್ರ, ಕಲಿಪುರುಷ ಮಾನವರೊಂದಿಗೆ ಸೇಡಿನೊಂದಿಗೆ, ಸ್ನೇಹ-ಸಂಘರ್ಷ ಸಂಬಂಧ ಹೆಣೆದುಕೊಳ್ಳುತ್ತಾರೆ. ಮಾನವಸ್ತ್ರೀ ದಮಯಂತಿಯನ್ನು ಇಂದ್ರ ವಿವಾಹವಾಗಲು ಬಯಸುತ್ತಾನೆ. ನಳದಮಯಂತಿಯರ ಅನುರಾಗಕ್ಕೆ ನರದ ಸೇತುವೆಯಾಗುತ್ತಾನೆ. ಕಲಿ ಪುರುಷ ನಳದಮಯಂತಿಯರನ್ನು ಅಗಲಿಸುತ್ತಾನೆ. ವಿವಾಹ ಬೇಡಿಕೆಯಿಟ್ಟು ಇಂದ್ರನನ್ನು ನಿರಾಕರಿಸುವ ದಮಯಂತಿ, ನಾನು ಮೆಚ್ಚಿದ ನರನೃಪಾಲ, ನಳನನ್ನುವರಿಸಿ, ಮಾನವತೆಯ ಘನತೆಯನ್ನು ಗೌರವಿಸುತ್ತಾಳೆ (ಸಂ-೩-೩೦ ರಿಂದ ೩೩)

ಕಲಿಪುರುಷನು ನಳನ ನಾಶಕ್ಕೆ ಪಣತೊಟ್ಟಾಗ, ಇಂದ್ರ ಆತನಿಗೆ ಬುದ್ಧಿ ಹೇಳುತ್ತಾನೆ. ನಳನ ಶೌರ್‍ಯೋನ್ನತಿಯನ್ನು ಮನವರಿಕೆ ಮಡಿಕೊಡಲು ಪ್ರಯತ್ನಿಸುವ ಇಂದ್ರನ ಮಾತುಗಳಲ್ಲಿ ಮಾನವತೆಯ ಔನ್ನತ್ಯವನ್ನು ಪುರಸ್ಕರಿಸುವ ಕನಕದಾಸರ ಮಾನಪ್ರೀತಿ, ಮಹೋನ್ನತಿ ವಿಧಿತವಾಗಿದೆ.

ಬವಣೆಯೆಕೆ ಹಿಮಾಂಶುಯಕುಲ ಸಂ
ಭವನು ಸುಜನಾಧಾರ ನೃಪಕುಲ
ನಿವಹದೊಳು ವಿಖ್ಯಾತ ನಿತ್ಯೋದಾರ ನಿರ್ಮಳನು
ಇವಗೆ ವರವಿತ್ತೆವು ಸದಾ ನೆನೆ
ದವರ ಪಾತಕ ಹರಿವುದಿನ್ನಾ
ಭುವನಪತಿಗೆಣೆಯಾರು ಲೋಕದೊಳೆಂದನಮರೇಂದ್ರ (೪.೧೨)

ಆದರ್ಶ ದಾಂಪತ್ಯ 'ತಿಳಿವಿನಾ' ನಂಬಿಕೆ, ನಿಷ್ಠೆ, ಪ್ರೀತಿ ಸಮರ್ಪಣ ಭಾವದಿಮದ ಫಲಿಸುವ ಆದರ್ಶ ದಾಂಪತ್ಯದ ಹಿರಿಮೆಯ ಪ್ರತಿಪಾದನೆ ನಳಚರಿತೆಯ ಆಶಯ. 'ಹೆಣ್ಣು, ಮಣ್ಣು, ಹೊನ್ನು ನಿನ್ನನ್ನಗಲಿ ಹೋಗುವ ಮುನ್ನ ಮಾಡಿದ ಪುಣ್ಯ ಬೆನ್ನತ್ತಿ ಬರುವುದು. ಮುಂದೆ ನೋಡಚ್ಚರಿಗೆ' ಎನ್ನುವ ಮಾತಿಗೆ ಉದಾಹರಣೆ 'ನಳಚರಿತೆ'. ಕಲಿಪುರುಷನ ಸಂಚಿನಿಂದಾಗಿ ರಾಜ ರಾಣಿಯರಾದ ನಳದಮಯಂತಿ, ಅಧಿಕಾರ ಸಂಪತ್ತು ಸೌಂದರ್ಯ, ಸಂಸಾರ ಎಲ್ಲವನ್ನು ಕಳೆದುಕೊಂಡು ಸಂಕಷ್ಟಗಳಿಗೆ ಬಲಿಯಾಗುತ್ತಾರೆ. ವನವಾಸ ಅನುಭವಿಸುತ್ತಾರೆ. ನಳನು ವನವಾಸದ ಕಷ್ಟಗಳಿಂದ ದಮಯಂತಿಯನ್ನು ವಿಮುಖಳನ್ನಾಗಿಸುವ ಉದ್ದೇಶದಿಮದ ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ. ನಿರ್ಗತಿಕನಾಗಿ ನಡೆದ ನಳನನ್ನು ಸರ್ಪ ಕಚ್ಚುತ್ತದೆ. ವಿಷ ಬಾಧೆಯಿಂದ ವಿಕಾರ ರೂಪಿಯಾಗಿ ಬದಲಾವಣೆಗೊಂಡ ನಳ, ಋತುಪರ್ಣರಾಜನ ಆಶ್ರಯದಲ್ಲಿ ಸೇವಕನಾಗುತ್ತಾನೆ. ದಮಯಂತಿ ಗಂಡನೊಂದಿಗೆ ವನವಾಸದ ಕಷ್ಟಗಳಲ್ಲಿ ಸಹಭಾಗಿಯಾದರೂ, ತನ್ನ ಗಂಡ ರಾತ್ರಿ ತನ್ನನ್ನು ತೊರೆದು ಹೋದಾಗ ಏಕಾಂಗಿಯಾಗಿ ಅನೇಕ ಕಷ್ಟಗಳಿಗೆ ಒಳಗಾಗಿ, ಕೊನೆಗೆ ಚೇದಿ ಪಟ್ಟಣದ ರಾಜನ ಮಗಳು

ಸುನೀತಿಯ ಅರಮನೆಯಲ್ಲಿ ಸೈರಂಧ್ರಿಯಾಗಿದ್ದಳು. ನಂತರ ತಂದೆಯ ಮನೆಯನ್ನು ಸೇರುತ್ತಾಳೆ. ಬಿಟ್ಟುಹೋದ ಗಂಡನನ್ನು ಸ್ವಯಂವರದ ನೆಪಮಾಡಿ, ಅಗಲಿದ ನಳನನ್ನು ಮರಳಿ ಪಡೆಯುತ್ತಾಳೆ.

ನಳಚರಿತೆಯಲ್ಲಿ ದೇವತೆಗಳಿಗಿಂತ ಮಾನವ ಪಾತ್ರಗಳೇ ಹೆಚ್ಚು ಕ್ರಿಯಾಶೀಲವಾಗಿವೆ. ಸಶಕ್ತವಾಗಿವೆ. ನಳದಮಯಂತಿಯರು ಮಾನವರಾದರೂ ದೇವತೆಗಳಿಗಿಂತ ಹೆಚ್ಚು ಸಂಕಲ್ಪ ಒಲವುಳ್ಳವರಾಗಿ ಕಾಣಿಸುತ್ತಾರೆ. ಸತ್ಯ, ನಿಷ್ಠೆ, ಸಹನೆ, ದೈವಭಕ್ತಿಯಿಂದ ಶಕ್ತಿಶಾಲಿಗಳಾಗಿ ಕಾಣುತ್ತಾರೆ. ವಿಧಿಯೊಡ್ಡಿದ ಸವಾಲುಗಳನ್ನು ಎದುರಿಸುವಲ್ಲಿ ದಮಯಂತಿ ತೋರುವ ವಿವೇಕ ವಿವೇಚನೆ ನಳನಿಗಿಂತ, ಹೆಚ್ಚು ಪರಿಣಾಮಕಾರಿಯೆನಿಸುತ್ತದೆ. ದಟ್ಟಡವಿಯಲ್ಲಿ ನಿರ್ಜನ ರಾತ್ರಿಯಲ್ಲಿ ದಮಯಂತಿಯನ್ನು, ಒಂಟಿಯಾಗಿಸಿ ಹೊರಟುಹೋಗುವ, ನಳಪಲಾಯನವಾದಿಯಾಗಿ, ಹೆಂಡತಿಯನ್ನು ರಕ್ಷಿಸಲಾರದ ಅಸಮರ್ಥನೆನಿಸುತ್ತಾನೆ. ದಾಂಪತ್ಯ ಸಹಜೀವನದ ಧರ್ಮಕ್ಕೆ ವಿಮುಖನಾಗಿ ವರ್ತಿಸುವ ದುರ್ಬಲ ವ್ಯಕ್ತಿಯಾಗಿ ಕಂಡರೆ, ದಟ್ಟಡವಿಯಲಿ ಬಂದಿಯಾದ ದಮಯಂತಿ ಬೇಡನಿಂದ, ಕಾಳಸರ್ಪ ಮುಂತಾದ ಅಪಾಯಗಳಿಂದ ಪಾರಾಗಿ, ಕೊನೆಗೆ ತಂದೆಯ ಮನೆ ಸೇರುತ್ತಾಳೆ. ವಿರೂಪಗೊಂಡ ಚಹರೆಕಳೆದುಕೊಂಡ ನಳನನ್ನು ಮರಳಿ ಪಡೆದುಕೊಳ್ಳವಲ್ಲಿ ಆಕೆ ಪ್ರದರ್ಶಿಸುವ ಬುದ್ಧಿವಂತಿಕೆ, ಸಂಯಮ, ಧೈರ್ಯ, ಗುಣಗಳಿಂದ ಅತ್ಯಂತ ಸಶಕ್ತಳೆನಿಸುತ್ತಾಳೆ.

ಅನುಪಮ ರೂಪವತಿಯಾದ ದಮಯಂತಿಯು ಉನ್ನತ ಗುಣಶೀಲವುಳ್ಳ, ಭಕ್ತಿ, ಗಾಂಭೀರ್ಯ, ವಿವೇಕದಲ್ಲಿ ಅಪ್ರತಿಮಳೆನ್ನುವುದು ಕವಿಯ ಹೇಳಿಕೆ. ಹೀಗೆ ಅಂತರಂಗ, ಬಹಿರಂಗದ ತೇಜಸ್ಸಿನಿಂದ ಅನುಪಮಳೆನಿಸುವ ದಮಯಂತಿಯು ಕನಕದಾಸರಿಂದಾಗಿ ಸಾಂಪ್ರದಾಯಕ ಸ್ತ್ರೀತ್ವದ ಆದರ್ಶ ಸತಿತ್ವದ ಮಾದರಿಯಾಗಿ ಚಿತ್ರಿತಳಾಗಿದ್ದಾಳೆ

೪.೧.೩ ಕನಕದಾಸರ ರಾಮಧಾನ್ಯ ಚರಿತೆ

'ರಾಮಧಾನ್ಯ ಚರಿತೆ'ಯು ೧೫೮ ಭಾಮಿನಿ ಷಟ್ಪದಿಗಳಲ್ಲಿ ರಚಿತವಾಗಿದೆ. ಮೊದಲನೆಯ ಪದ್ಯದಲ್ಲಿ ಕವಿ ಚೆನ್ನಿಗರಾಯನನ್ನು ಸ್ತುತಿಸಿರುವರು. ಎರಡನೆಯ ಪದ್ಯದ ಪೂರ್ವಾರ್ಧದಲ್ಲಿಯೇ ಗಿರಿಜೆ' ಲಕ್ಷ್ಮೀವರ, ಕರಿಮುಖ ಮತ್ತು ಗೀರ್ವಾಣಿಯವರನ್ನು ನೆನೆಯುವ ಪ್ರಾರ್ಥನೆ ಇದೆ. ಐದು ಪದ್ಯ (೪-೮)ಗಳಲ್ಲಿ ಶಾಂಡಿಲ್ಯ, ಧರ್ಮರಾಯರ ಯೋಗಕ್ಷೇಮ ವಿಚಾರಿಸಿದ ತರುವಾಯ ಪ್ರಧಾನವಾಗಿ ಕಥೆ ಪ್ರಾರಂಭವಾಗುತ್ತದೆ. ಮುಂದಿನ ಹತ್ತೊಂಬತ್ತು ಪದ್ಯಗಳಲ್ಲಿ ವನವಾಸದಿಂದ ರಾವಣ ಸಂಹಾರದವರೆಗಿನ ಕಥೆಯ ವಿವಿಧ ಆಯಾಮಗಳಿವೆ. ನಂತರ ಗೌತಮ ಮುನಿಯ ಆಶ್ರಯಕ್ಕೆ ಬರುವ ಸಂಗತಿಯಿದೆ. ೯-೨೭ ಪದ್ಯಗಳಲ್ಲಿ ನರೆದಲೆಗ ನೆಲ್ಲುಗಳ ಹಗರಣದ ಕಥೆಯು, ೨೮-೫೬ ಷಟ್ಪದಿಗಳಲ್ಲಿ ಮೂಡಿದೆ. ಮುಂದೆ ಪಟ್ಟಾಭಿಷೇಕದವರೆಗಿನ ಸಮಸ್ತ ಕಥೆಯೂ ಅರವತ್ತಾರು ಪದ್ಯ (೫೭-೧೨೨)ಗಳಲ್ಲಿ ನಡೆದುಹೋಗುತ್ತದೆ. ನೆಲ್ಲು ನರೆದಲೆಗರ ಮುಂದಿನ ಕಥೆ ಇಪ್ಪತ್ತೊಂಬತ್ತು ಪದ್ಯ (೧೨೩-೧೫೧)ಗಳಲ್ಲಿ ಪರಿಸಮಾಪ್ತಿಯಾಗುತ್ತದೆ. ಆನಂತರ ಮೂರು ಪದ್ಯ (೧೫೨-೧೫೪)

ರಾಮ ಅರಸುಮುನಿಗಳನ್ನು ದಾನವ ವಾನರರನ್ನು ಬೀಳ್ಕೊಟ್ಟ ವಿಷಯವು ಮೂರು ಪದ್ಯಗಳಲ್ಲಿ (೧೫೫-೧೫೭) ಶಾಂಡಿಲಮುನಿ ಹಾಗೂ ಧರ್ಮರಾಯರ ಪರಸ್ಪರಾಭಿನಂದನೆಯ ಮಾತು ಬರುತ್ತದೆ. ಕೊನೆಯ ೧೫೮ನೆಯದು ಮಂಗಳಪದವಾಗಿದೆ. ಹೀಗೆ ೧೫೮ ಭಾಮಿನಿಷಟ್ಪದಿಯ ಪದ್ಯದಲ್ಲಿ ರಾಮಧಾನ್ಯ ಚರಿತೆ ಮೂಡಿಬಂದಿದೆ.

ಈ ಕೃತಿಯನ್ನು ಅವಲೋಕಿಸುವುದಾದರೆ, ಅರಣ್ಯವಾಸದ ಕ್ಲೇಷಸಂಕಷ್ಟಗಳ ಪರಿಹಾರಾರ್ಥವಾಗಿ, ಧರ್ಮರಾಯನಿಗೆ ಶಾಂಡಿಲ್ಯಮುನಿ, ಶ್ರೀರಾಮಚಂದ್ರ ಚರಿತೆಯ ಕಥೆಯನ್ನು ವಿವರಿಸುತ್ತಾನೆ. ಶ್ರೀರಾಮಚಂದ್ರ ಪಿತೃವಾಕ್ಯ ಪರಿಪಾಲನಾರ್ಥವಾಗಿ, ಸೀತೆ, ಲಕ್ಷ್ಮಣ ಸಮೇತನಾಗಿ ಅರಣ್ಯಕ್ಕೆ ಹೋಗುತ್ತಾನೆ. ಅಲ್ಲಿ ರಾವಣ ಸೀತೆಯನ್ನು ಅಪಹರಿಸಿಕೊಂಡು ಹೊಗುತ್ತಾನೆ. ಶ್ರೀರಾಮ ವಾಲಿಯನ್ನು ಕೊಂದು ಸುಗ್ರೀವ ಆಂಜನೇಯಾದಿ, ವಾನರರ ಸಖ್ಯವನ್ನು ಸಂಪಾದಿಸಿ, ಸೇತುವೆಯನ್ನು ನಿರ್ಮಿಸಿ, ಲಂಕೆಯನ್ನು ಮುತ್ತಿ, ರಾವಣ ಕುಂಭಕರ್ಣಾದಿ ರಾಕ್ಷಸರನ್ನು ಧ್ವಂಸಮಾಡಿ, ವಿಭೀಷಣನಿಗೆ ಪಟ್ಟಕಟ್ಟಿ, ದಾನವ ವಾನರ ಮುಖ್ಯರನ್ನು ಕೂಡಿಕೊಂಡು, ಅಯೋಧ್ಯಾಭಿಮುಖವಾಗಿ ಪ್ರಯಾಣ ಬೆಳೆಸುತ್ತಾನೆ. ಪ್ರಯಾಣ ಸಂದರ್ಭದಲ್ಲಿ ರಾಮನು, ಸೀತೆಗೆ ರಮಣೀಯ ದೃಶ್ಯಗಳನ್ನು ತೋರಿಸುತ್ತ, ಋಷಿಗಳನ್ನು ಸಂದರ್ಶಿಸಿ, ಅವರ ಆಶೀರ್ವಾದವನ್ನು ಪಡೆಯುತ್ತ ಗೌತಮ ಮುನಿಯ ಆಶ್ರಮ ತಲುಪುತ್ತಾನೆ. ಆಶ್ರಮದಲ್ಲಿ ಬೆಲ್ಲ, ಸಕ್ಕರೆ, ಜೇನುತುಪ್ಪ, ರಸಾಯನಗಳ ಮತ್ತು ವಿವಿಧ ಧಾನ್ಯಗಳಿಂದ ರಚಿಸಿದ ಸುಭಕ್ಷ್ಯಗಳ ಸಮಾರಾಧನೆಯಾಗುತ್ತದೆ. ಇಲ್ಲಿ ಆ ಭಕ್ಷ್ಯಗಳ ರುಚಿ, ತಾರತಮ್ಯದ ಬಗೆಗೆ ಮಾತು-ಕತೆಯಾಗಿ ಬಳಕೆಯಾಗಿರುವುದು. ಈ ಕಥನದ ವೈಶಿಷ್ಟ್ಯತೆ. ಕಥನದ ನಿರೂಪಣೆ ಗಮನ ಸೆಳೆಯುತ್ತದೆ. ಹನುಮಂತನು, ರಾಮನಲ್ಲಿ ಆ ಧಾನ್ಯಗಳನ್ನು ತರಿಸುವಂತೆ ಕೇಳಿಕೊಳ್ಳುತ್ತಾನೆ. ಗೌತಮ ಕೂಡಲೆ ನರೆದಲಗ ಹಾರಕ, ಬರಗು, ಜೋಳ, ಕಂಬು, ಸಾಮೆ, ನವಣೆ, ಗೋದಿ, ನೆಲ್ಲು ಮೊದಲಾದ ನವಧಾನ್ಯಗಳನ್ನು ತರಿಸುತ್ತಾನೆ. ಆ ನೆರೆದವರಲ್ಲೊಬ್ಬ ಈ ಧಾನ್ಯಗಳಲ್ಲಿ ಶ್ರೇಷ್ಠಯಾವುದು, ಎನ್ನುವ ಪ್ರಶ್ನೆಯನ್ನು ಎಸೆಯುತ್ತಾನೆ. ಆಗ ಗೌತಮ, ನರೆದಲೆಗನ ವಿಷಯದಲ್ಲಿ ಮೆಚ್ಚುಗೆ ಸೂಚಿಸುತ್ತಾನೆ. ಈ ಪ್ರಸಂಗವು ಧಾನ್ಯದ ಶ್ರೇಷ್ಠತೆಯನ್ನು ತಿಳಿಸುತ್ತದೆ. ಇದಾದ ನಂತರ ನೆಲ್ಲು, ನರೆದಲೆಗಳಿಗೆ, ತಂತಮ್ಮ ಮಹಿಮಾತಿಶಯಗಳನ್ನು ಕುರಿತಂತೆ ವಾಗ್ವಾದ ನಡೆಯುತ್ತದೆ. ಶೂದ್ರರಿಗೆ ಮಾತ್ರ ಸಲ್ಲುವುದಾಗಿ, ಬ್ರಾಹ್ಮಣರ ಮನೆಯ ಯಾವ ಶುಭಶೋಭನಾದಿ ಸಮಾರಂಭಗಳಿಗೂ ಬೇಡವಾದ ಪದಾರ್ಥವಾಗಿರುವುದಾಗಿದಾಗಿದೆ. ನೆಲ್ಲು ನರೆದಲಗನನ್ನು ಹೀಯಾಳಿಸುತ್ತದೆ. ಆ ಹೀಯಾಳಿಕೆಗೆ ಸರಿತೂಗುವಂತೆ ನರೆದಲಗ ತಾನು ದೀನದಲಿತರಿಗೆ ಅಚ್ಚುಮೆಚ್ಚೆಂದೂ, ಕ್ಷಾಮಕಾಲದಲ್ಲಿ ಬಡವ-ಬಲ್ಲಿದವರಿಗೆಲ್ಲ ತಾನೇ ಗತಿಯೆಂದೂ, ನಾನಾ ವಿಧವಾಗಿ ತನ್ನ ಹೆಚ್ಚುಗಾರಿಕೆಯನ್ನು ಸ್ಪಷ್ಟಪಡಿಸುತ್ತದೆ. ಅವರ ಕಲಹ, ಮೇರೆಮೀರಿ, ಸರ್ವಸಮ್ಮತವಾದ ನಿರ್ಣಯ ಸಾಧ್ಯವಲ್ಲವೆಂದು ತೋರಿದಾಗ, ರಾಮ ಈ ವಾಗ್ವಾದಕ್ಕೆ ಪ್ರವೇಶಿಸುತ್ತಾನೆ. ಅಲ್ಲದೇ ರಾಮ ಅವರಿಬ್ಬರನ್ನು, ಆರು ತಿಂಗಳುಗಳ ಕಾಲ ಸೆರೆಯಲ್ಲಿಟ್ಟು, ಮುಂದೆ ಅಯೋಧ್ಯೆಗೆ ಕರೆಸಿಕೊಂಡು

ತೀರ್ಮಾನ ಹೇಳುವುದಾಗಿ ಮಾತು ಕೊಟ್ಟು ಪರಿವಾರ ಸಮೇತನಾಗಿ ಪ್ರಯಾಣ ಮುಂದುವರೆಸುತ್ತಾನೆ.

ಅಯೋಧ್ಯೆಯಲ್ಲಿ ಶ್ರೀರಾಮನ ಪಟ್ಟಾಭಿಷೇಕ ಮುಗಿದ ನಂತರ ನರದಲೆಗ ನೆಲ್ಲುಗಳ ನೆನಪಾಗಿ ಅವರ ವ್ಯವಹಾರವನ್ನು ಮುಕ್ತಾಯಗೊಳಿಸುವದಕ್ಕಾಗಿಯೇ ಇಂದ್ರಾದಿ ಪ್ರಮುಖ ದೇವತೆಗಳು ಕೂಡಿದ ಸಭೆಯನ್ನು ಶ್ರೀರಾಮ ಏರ್ಪಡಿಸಿ, ಗೌತಮ ಮುನಿಯ ಮುಖಾಂತರ ಅವರಿಬ್ಬರನ್ನು ಕರೆತರಿಸುತ್ತಾನೆ. ಆರೇಳು ತಿಂಗಳು ಸೆರೆಮನೆಯ ವಾಸದಿಂದಾಗಿ ನೆಲ್ಲು ರೂಪಗೆಟ್ಟು ಹೋಗಿರುತ್ತದೆ. ಆದರೆ ನರೆದಲೆಗ ಎಂದಿನಂತೆ ದೃಢಕಾಯದಿಂದಿರುತ್ತದೆ. ಇದನ್ನು ಗಮನಿಸಿದ ಇಂದ್ರ ನರೆದಲೆಗನ ಶಕ್ತಿ-ಸಾಮರ್ಥ್ಯಗಳನ್ನು ಕೊಂಡಾಡುತ್ತಾನೆ. ನೆರೆದಿದ್ದ ದೇವತೆಗಳೆಲ್ಲರೂ ನೆರೆದಲೆಗನಿಗೆ ವರದ ರೂಪದಲ್ಲಿ ತಂತಮ್ಮ ಶಕ್ತಿಯನ್ನು ಧಾರೆ ಎರೆಯುತ್ತಾರೆ. ಈ ದೇವತೆಗಳ ಕೊಡುಗೆಯಿಂದ ಪ್ರೇರಣೆಗೊಂಡ ಶ್ರೀರಾಮ ತನ್ನ ಹೆಸರಿನಿಂದಲೇ ನೀನು ಪ್ರಖ್ಯಾತವಾಗೆಂದು ಹರಸುತ್ತಾನೆ ಎನ್ನುವುದು ಪ್ರತೀತಿ. ಅಂದಿನಿಂದ ನರೆದಲೆಗೆ 'ರಾಘವ' ಎಂಬ ಅಭಿಧಾನದಿಂದ ಪ್ರಸಿದ್ಧವಾಗಿದೆ. ನೆಲವು ಹಿಂಗಿ ತಲೆಗುತ್ತಿದ ನೆಲ್ಲನ್ನು ನರೆದಲೆಗ ಶ್ರೀರಾಮಚಂದ್ರ ಮೊದಲಾದವರು ಸಮಾಧಾನಪಡಿಸುತ್ತಾರೆ. ಶ್ರೀರಾಮಚಂದ್ರನ ಒಡ್ಡೋಲಗದಲ್ಲಿ ನಡೆದ ಈ ವ್ಯವಹಾರದ ಕಥೆ, ದೇವೇಂದ್ರನ ಸಭೆಯಲ್ಲಿ ಮತ್ತೆ ಅಭಿವರ್ಣನೆಗೊಳ್ಳುತ್ತದೆ. ಅದನ್ನು ಕೇಳಿದ ಶಾಂಡಿಲ್ಯ ಋಷಿ ಧರ್ಮರಾಯನಿಗೆ ವಿವರಿಸಿ ಅವನ ಚಿತ್ತಗ್ಲಾನಿಯನ್ನು ಪರಿಹರಿಸುತ್ತಾನೆ.

೪.೧.೩.೧ ವರ್ಗ, ವರ್ಣ, ಸಂಘರ್ಷದ ನೆಲೆಗಳು

ಪ್ರಾಚೀನಕಾಲ ಹಾಗೂ ೧೫ನೇ ಶತಮಾನದವರೆಗೆ, ರಚಿತವಾದ ಸಾಹಿತ್ಯ ಕೃತಿಗಳು, ಹೆಚ್ಚಾಗಿ ತಮಗೆ ಆಶ್ರಯ ನೀಡಿದ ರಾಜರನ್ನು, ತಮ್ಮ ಕಾವ್ಯದ ಕಥಾನಾಯಕರಿಗೆ ಹೋಲಿಸಿ, ಬರೆಯುವ ಸಂಪ್ರದಾಯವಿತ್ತು. ಅದಲ್ಲದೆ ಸಮುದಾಯಿಕವಾಗಿ, ಸಾಮಾಜಿಕ ಪ್ರಜ್ಞೆಯ ಹರವು ಅವರಲ್ಲಿತ್ತು. ೧೨ನೆಯ ಶತಮಾನದಲ್ಲಿ ವಚನ ಚಳುವಳಿಯು ಸಮಾಜದಲ್ಲಿರುವ ಮೂಢನಂಬಿಕೆ, ಅಸ್ಪೃಶ್ಯತೆ, ಅಸಮಾನತೆ ತೊಲಗಿಸುವಲ್ಲಿ ಬಹಳ, ಮಹತ್ವವಾದ ಪಾತ್ರ ವಹಿಸಿತು. ಬಸವಣ್ಣನವರ ನೇತೃತ್ವವು ಸಾಮಾಜಿಕ ಪ್ರಜ್ಞೆಯನ್ನು ಹೆಚ್ಚಿಸಿತು. ನಂತರ ೧೫-೧೬ನೇ ಶತಮಾನದಲ್ಲಿ ವಚನ ಸಾಹಿತ್ಯ ಚಳವಳಿಯಂತೆಯೇ, ದಾಸಚಳವಳಿ ಆರಂಭವಾಯಿತು. ದಾಸರು ಕೂಡಾ ಸಮಾಜಮುಖಿ ಚಿಂತನೆಯಲ್ಲಿ ತೊಡಗಿಕೊಂಡು ಕೀರ್ತನೆ, ಮುಂಡಿಗೆಗಳನ್ನೂ ರಚಿಸುವದರ ಮೂಲಕ ಅಮೋಘವಾದ ಕೊಡುಗೆಯನ್ನು ನೀಡಿರುವರು.

ದಾಸಸಾಹಿತ್ಯದ ಅಶ್ವಿನಿದೇವತೆಗಳಲ್ಲಿ ಒಬ್ಬರೆನಿಸಿರುವ ಕನಕದಾಸರು, ಇಲ್ಲಿ ಪ್ರಮುಖರೆನಿಸುತ್ತಾರೆ. ವಿಜಯನಗರ ಕಾಲದಲ್ಲಿ ಕಲಿಯಾಗಿ, ಅಧಿಕಾರದ ರುಚಿ ಅನುಭವಿಸಿ, ಹಲವಾರು ಯುದ್ಧಗಳನ್ನು ಮಾಡಿ, ಹಿಂಸೆ, ಸಾವು-ನೋವು ಕಂಡು, ಪಶ್ಚಾತ್ತಾಪಪಟ್ಟವರು. ನಂತರ

ದಾಸರಾಗಬೇಕೆನ್ನುವ ದೇವರ ಕೃಪೆಯೇ, ಪೂರ್ವಜನ್ಮದ ಫಲವೋ, ಎಂಬಂತೆ ಸಂಸಾರಿಕ ಬದುಕನ್ನು ತ್ಯಜಿಸಿ ಕನಕದಾಸರಾದವರು ಕನಕದಾಯಕರು. ದಾಸತ್ವ ದೀಕ್ಷೆ, ವ್ಯಾಸರಾಯರಲ್ಲಿ ಆಯಿತು. ಅಲ್ಲಿ ನಂತರದ ಕಾಲಾವಧಿಯಲ್ಲಿ ದಾಸಕೋಟ ಮತ್ತು ವ್ಯಾಸಕೋಟವೆಂಬ ಎರಡು ಪಂಥ, ಪಂಗಡಗಳಾದವು. ಅಲ್ಲಿ ಪ್ರಧಾನವಾಗಿ ಸಾಹಿತ್ಯ ರಚನೆಯ ಕಾರ್ಯ ನಡೆಯಿತು.

ದಾಸಸಾಹಿತ್ಯ ರಾಶಿಯ ಬಹುದೊಡ್ಡ ಶ್ರೇಯಸ್ಸಿನ ಪಾಲುದಾರರು, ದಾಸಕೂಟದ ಪುರಂದರದಾಸ, ಮತ್ತು ಕನಕದಾಸರೇ ಹೊರತು ವ್ಯಾಸಕೂಟದವರದಲ್ಲವೆಂಬುದು ಗಮನಾರ್ಹವಾದುದು. ದೇಶದ ಉದ್ದಗಲಕ್ಕೂ, ಸಂಚರಿಸಿ ಜನಜೀವನದೊಡನೆ ಬೆರೆತು ಸಾಮರಸ್ಯವನ್ನು ಸ್ಥಾಪಿಸಿ, ಅವರ ಸಮಸ್ಯೆಗಳನ್ನು ಅರ್ಥೈಸಿಕೊಳ್ಳುವ, ಬದುಕಿಗೆ ನೇರವಾಗಿ ಸ್ಪಂದಿಸುವ ಸಾಧ್ಯತೆ, ದಾಸಕೂಟದವರಿಗೆ ಇದ್ದಂತೆ ಜನಸಾಮಾನ್ಯರಿಂದ ದೂರದಲ್ಲಿ ಎತ್ತರದಲ್ಲಿ ನಿರ್ಲಿಪ್ತತೆಯಿಂದಿದ್ದ ವ್ಯಾಸಕೂಟದವರಿಗೆ ಇರಲಿಲ್ಲ. ಈ ವ್ಯಾಸಕೂಟಕ್ಕೆ ಜನಸಾಮಾನ್ಯರ ಜೊತೆಗೆ ಸಾಮರಸ್ಯವನ್ನು ಸಾಧಿಸುವದೊತ್ತಟ್ಟಿಗಿರಲಿ, ದಾಸಕೂಟದೊಡನೆಯಬೆರೆತು ಬಾಳುವುದು ಕಷ್ಟವೆನಿಸಿದ್ದು, ಸಾಂಸ್ಕೃತಿಕವಾಗಿ, ಸಾಮಾಜಿವಾಗಿ ಗಮನಾರ್ಹವಾಗಿದೆ.

ವಿಜಯನಗರದ ಕೃಷ್ಣದೇವರಾಯನ ವೈಭವದ ಆಳ್ವಿಕೆಯಲ್ಲಿ ರಾಜಮನ್ನಣೆ ಪಡೆದು, ಧಾರ್ಮಿಕವಾಗಿ, ಸಾಮಾಜಿವಾಗಿ ಅತ್ಯಂತ ದರ್ಪದ, ಪ್ರತಿಷ್ಠೆಯ ಬದುಕನ್ನು ಬದುಕುತ್ತಿದ್ದ ವರಿಷ್ಠ ವರ್ಗಕ್ಕೆ, ಕುಲದ ಮಡಿವಂತಿಕೆಯ ಮಾತೊತ್ತಟ್ಟಿಗರಲಿ, ತಮ್ಮನ್ನು ಅನುಕರಿಸಿ, ಅನುಸರಿಸಿ ಬಂದ ಕನಕದಾಸರಂತಹ ಶೂದ್ರ ವ್ಯಕ್ತಿಯು ಬೌದ್ಧಿಕವಾಗಿ, ವೈಚಾರಿಕವಾಗಿ ಅಲ್ಲದೆ ಅಧ್ಯಾತ್ಮಿಕವಾಗಿಯೂ ತಮ್ಮನ್ನು ಮೀರಿ ಮೆಟ್ಟಿ ನಿಲ್ಲುತ್ತಿರುವುದು ಅವರಿಗೆ ನುಂಗಲಾರದ, ತುತ್ತಾಗಿಪರಿಣಮಿಸಿತು. ಕನಕದಾಸರನ್ನು ಕೆಳವರ್ಗದವರೆಂಬ ಕಾರಣಕ್ಕೆ ಅವರನ್ನು ಹೀಯಾಳಿಸುವ, ಪ್ರತಿಕ್ಷಣವೂ ಅವರಿಗೆ ಪರೀಕ್ಷೆ ಎದುರಿಸುವ, ಪ್ರಸಂಗಗಳು ಬಂದೊದಗಿದ್ದವು. ಇಂತಹ ಪರಿಸ್ಥಿತಿಯಲ್ಲಿ ಕನಕದಾಸರು ವೈಷ್ಣವ ಮತವನ್ನು ಸ್ವೀಕರಿಸಿದರೂ, ವೈಷ್ಣವ ಸಮಾಜವು ಕನದಾಸರನ್ನು ಸ್ವೀಕರಿಸದಾಯಿತು. ಇದರಿಂದಾಗಿ ಮಾನಸಿಕವಾಗಿ ವೈಷ್ಣವನಾದ, ಕನಕದಾಸರು ಸಾಮಾಜಿಕ ನೆಲೆಯಲ್ಲಿ, ಶೂದ್ರನಾಗಿ ಬದುಕುವುದು ತಪ್ಪಲಿಲ್ಲ. ತಾನೊಬ್ಬ ಕುರುಬನಾಗಿದ್ದರೂ, ಸಶಸ್ತ್ರ ಪಾರಂಗತ, ಪಾಳೆಗಾರನಾಗಿ, ಧನಿಯಾಗಿ ಬದುಕಿದ. ಸಿಕ್ಕ ಕನಕ, ಕೊಪ್ಪರಿಗೆಯನ್ನು ಶ್ರೀಹರಿಯ ಸೇವೆಗೆ ಮೀಸಲಾಗಿಸಿ, ಬಡವರಿಗೆ, ದೀನದಲಿತರಿಗೆ ದಾನಮಾಡಿದ. ಕೆಳವರ್ಗದಲ್ಲಿ ಜನಿಸಿ, ಆ ನಿರಾಶ್ರಿತ ಸಮುದಾಯದ ಏಳ್ಗೆಯನ್ನು ಬಯಸಿದ ಕನದಾಸರಿಗೆ, ಒಂದರ ಮೇಲೊಂದರಂತೆ ಬಂದೊದಗಿದ ಆಘಾತಗಳಿಂದ, ನಲುಗಿ, ಪ್ರಾಪಂಚಿಕವಾಗಿ ಅನಾಥನಾದ. ಒಂದೊಮ್ಮೆ ಕನಕದಾಸ, ತನ್ನ ಸರ್ವಸ್ವವನ್ನು ಶ್ರೀಹರಿಗೆ ಅರ್ಪಿಸಿ, ದೀಕ್ಷೆಯ ಹಂಬಲದಿಂದ ವ್ಯಾಸರಾಯರ ಹತ್ತಿರ ಬಂದು ಕೇಳಿದಾಗ 'ಕುರುಬನಿಗೆಂಥ ಕೋಣನಮಂತ್ರ' ಎಂದು ಅನಿಸಿಕೊಳ್ಳಬೇಕಾಗುತದೆ. ಅಂತಹ ಸುಸಂಸ್ಕೃತ ಸಂವೇದನಾಶೀಲನಿಗೆ ಎಂಥ ಭೀಕರ ತೇಜೋವಧೆ ಎಂಬುದನ್ನು ಇಲ್ಲಿ ಗ್ರಹಿಸಬೇಕು.

ಉಡುಪಿಯಲ್ಲಿ ಶ್ರೀಹರಿಯ ದರ್ಶನಕ್ಕೆ ಅರ್ಚಕರು ಅಡ್ಡಿಯನ್ನೊಡ್ಡಿದಾಗ, ಶ್ರೀಹರಿ ಪಶ್ಚಿಮಾಭಿಮುಖವಾಗಿ, ಕಿಟಕಿಯಿಂದ ಕನಕನಿಗೆ ದರ್ಶನಕೊಟ್ಟ ಕಥೆ ಪ್ರತೀತಿ ದಂತಕಥೆಯಾಗಿ ಕಂಡರೂ, ಅದರ ಸಾಂಕೇತಿಕತೆಯ ಧ್ವನಿಯನ್ನು ಅಲ್ಲಗಳೆಯುವಂತಿಲ್ಲ. ಶ್ರೀಹರಿ ಕನಕನ ಕಡೆಗೆ ಮುಖಮಾಡಿದ ಎನ್ನುವುದಕ್ಕಿಂತ, ತನ್ನನ್ನು ಆರಾಧ್ಯ ದೈವವನ್ನಾಗಿ ಮಾಡಿಕೊಂಡ ಸಮಾಜದ ಅಮಾನವೀಯ ಕೃತಿಗೆ ಹೇಸಿದ, ಆ ದೈವವೇ ಆ ವೈಷ್ಣವ ಸಮಾಜದಿಂದ, ಮುಖತಿರುವಿ, ಬೆನ್ನುಮಾಡಿ ನಿಂತಿತು ಎನ್ನುವುದು, ಇಂದಿನ ಸಂದರ್ಭದಲ್ಲಿ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಹೀಗೆ ಕನಕದಾಸನಿಗೆ ಶ್ರೀಹರಿಯೇ ಪ್ರಸನ್ನನಾದರೂ, ವೈಷ್ಣವ ಸಮಾಜ ಪ್ರಸನ್ನವಾಗಲಿಲ್ಲ ಎನ್ನುವುದು ಗ್ರಹಿಸಬೇಕಾದ ವಿಚಾರ.

ಈ ಎಲ್ಲಾ ಹಿಂಸೆಯನ್ನು ಅನುಭವಿಸಿದ ಕನಕದಾಸರು ಅವುಗಳನ್ನು ಸಾಹಿತ್ಯದ ಮೂಲಕ ಖಂಡಿಸಿದುದಲ್ಲದೆ ಕೀರ್ತನೆ, ಮುಂಡಿಗೆ, ಕಾವ್ಯಗಳಾದ 'ಮೋಹನ ತರಂಗಿಣಿ, ರಾಮಧಾನ್ಯಚರಿತೆ, ನಳಚರಿತೆ' ಮೂಲಕ ತಮ್ಮ ಮನಸ್ಸಿನ ಭಾವನೆಗಳನ್ನು ಹೊರಹಾಕಿದ್ದಾರೆ. ಆ ಎಲ್ಲಾ ಸಂಗತಿಗಳು ಅಧ್ಯಯನಗಳಲ್ಲಿ ಅಡಕವಾಗಿವೆ. ಪ್ರತಿಷ್ಠಿತ ವರ್ಗದಿಂದ ಹೇರಲ್ಪಟ್ಟ ಸಾಮಾಜಿಕ ಒತ್ತಡದಿಂದ ಕವಿಯಾಗಿಯೂ ತನ್ನ ಅಭಿವ್ಯಕ್ತಿಯ ಸ್ವಾತಂತ್ರ್ಯಕ್ಕೆ ಹದ್ದುಬಂದಿಯನ್ನು ಹಾಕಿಕೊಳ್ಳುವುದು ಅನಿವಾರ್ಯವಾಯಿತು. ಆದ್ದರಿಂದ ಬುದ್ದಿಜೀವಿಯಾದ ಈ ಪ್ರತಿಭಾವಂತನು ಕೀರ್ತನೆ, ಮುಂಡಿಗೆ, ಕಾವ್ಯಗಳ ರಚನಾ ಮಾರ್ಗದಿಂದ ಬೇರೊಂದು ಮಾರ್ಗವನ್ನು ಕಂಡುಕೊಂಡನು ಕಾವ್ಯಗಳ ಮೂಲಕ ಎಲ್ಲ ವರ್ಗದವರನ್ನು ಸೆರೆಹಿಡಿಯಬಹುದಾದ ಶೃಂಗಾರಾದಿ ರಸಗಳಿಂದ ಕೂಡಿರುವ ದೇಶೀಯ, ಪೌರಾಣಿಕ ಹಿನ್ನೆಲೆಯುಳ್ಳ ಕಥೆಗಳನ್ನು ವಸ್ತುವನ್ನಾಗಿಸಿಕೊಂಡು ಮೇಲ್ವರ್ಗದ ಟೊಳ್ಳು, ಪ್ರತಿಷ್ಠೆ-ಪಿತೂರಿಗಳನ್ನು, ಶೋಷಿತವರ್ಗದ ನಿರಾಶೆ-ಹತಾಶೆಗಳನ್ನು ಹಾಗೂ ಅರೆ ಮಾನವೀಯ ಔದಾರ್ಯವನ್ನು ರೂಪಕಗೊಳಿಸಿ ಅಭಿವ್ಯಕ್ತಗೊಳಿಸುವ, ಕಲಾತ್ಮಕ ಉಪಾಯ ಕಂಡುಕೊಂಡರು. ತನ್ನನ್ನು ಕೆಣಕಿದ ವರ್ಗವನ್ನು ತಿಣುಕುವಂತೆ ಮಾಡಿದ ಪೌರಾಣಿಕ ಆವರಣದಲ್ಲಿ ಭಕ್ತಿ, ಶೃಂಗಾರ, ಕರುಣ ರಸದಂತ ಔಷಧಿಯನ್ನೂ ಕೊಟ್ಟು, ಶೋಷಕ ವರ್ಗದ ಕೊಬ್ಬನ್ನು, ಶಸ್ತ್ರಚಿಕಿತ್ಸೆಗೆ ಒಳಪಡಿಸಿದ. ಇದರಿಂದಾಗಿಯೇ ಕನಕದಾಸ ಒಬ್ಬ ಬಂಡುಕೋರನಾಗಿ ಕಾಣಿಸಿಕೊಳ್ಳದೆ ಒಬ್ಬ ಪ್ರಗತಿಶೀಲ ಕವಿಯಾಗಿ ಕಾಣಿಸಿಕೊಳ್ಳುತ್ತಾನೆ. ಇದೇ ಕಾರಣಕ್ಕಾಗಿ ಅವರ ರಾಮಧಾನ್ಯ ಚರಿತೆ, ನಳಚರಿತೆ ಹಾಗೂ ಮೋಹನತರಂಗಿಣಿಯಂತಹ ಕಾವ್ಯಗಳು, ಮಧ್ಯಯುಗೀನ ಕಾಲದ ವಿಶಿಷ್ಟ ಕಾವ್ಯಗಳಾಗಿವೆ.

ಅದು ಏನೇ ಇದ್ದರೂ ವರ್ಗ, ವರ್ಣ, ಪ್ರಜ್ಞೆಯನ್ನು ಕನಕದಾಸರ ಕಾವ್ಯಗಳಲ್ಲಿ ಹಾಗೂ ಅವರ ಜೀವನದಲ್ಲಿ ಕಾಣಬಹುದು. ಮೇಲ್ವರ್ಗದ ತುಳಿತಕ್ಕೆ ಒಳಗಾದ ಕನಕದಾಸರು ತಮ್ಮ ಕಾವ್ಯಗಳಲ್ಲಿ ಬೇರೆ ಬೇರೆ ಸ್ಥರದಲ್ಲಿ ಕಾಣಿಸಿಕೊಂಡಿದ್ದಾರೆ.

ರಾಮಧಾನ್ಯ ಚರಿತ್ರೆಯನ್ನು ಕುರಿತ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದು.

ಡಾ. ಎಂ. ಚಿದಾನಂದ ಮೂರ್ತಿಯವರು 'ರಾಮಧಾನ್ಯ ಚರಿತೆ'ಯು ವರ್ಗ ಹೋರಾಟವನ್ನು ಚಿತ್ರಿಸುವ ಕೃತಿಯಾಗಿದೆ.[೮]

ಶಾಂತಾ ಇಮ್ರಾಪುರ ಇವರ ಅಭಿಪ್ರಾಯ 'ಪ್ರಧಾನ ಅಧೀನ ವ್ಯವಸ್ಥೆಯ ತಾರತಮ್ಯಗಳನ್ನು, ಜಾತಿ ಕೇಂದ್ರಿತ, ಗುಣವಿಹೀನ ಸಮಾಜವನ್ನು ವಿಡಂಬಿಸುವ ಲೌಕಿಕ ಕಾವ್ಯ, ರಾಮಧಾನ್ಯ ಚರಿತೆ. ಕನಕದಾಸರ ವೈಚಾರಿಕ ಸಂಕೀರ್ಣತೆಗೆ ನಿದರ್ಶನವಾಗಿದೆ.'[೯]

ಬಿ.ಕೆ. ರವಿ; ಅವರು ಹೇಳುವಂತೆ 'ಕನಕದಾಸರದು ಬಂಡಾಯ ಮನೋಧರ್ಮವಾಗಿತ್ತೆಂಬುದಕ್ಕೆ ಅವರ ರಾಮಧಾನ್ಯಚರಿತೆ ಸಾಕ್ಷಿಯಾಗಿ ನಿಲ್ಲುತ್ತದೆ. ವರ್ಗ ಸಂಘರ್ಷವೇ, ಕಾವ್ಯದ ವಸ್ತುವಾಗಿದ್ದು, ನೊಂದವರ ಮೌನ, ಕೋಪಗಳೇ ಧ್ವನಿಯಾಗಿವೆ ಎಂದು ರಾಮಧಾನ್ಯ ಚರಿತೆ ಕೃತಿಯಲ್ಲಿ ಹೇಳಿಕೊಂಡಿರುವರು.[೧೦]

ಸಾ.ಶಿ. ಮರುಳಯ್ಯನವರು ಕನಕ ಸಾಹಿತ್ಯದರ್ಶನ ಸಂ–೨ರ, ಮುನ್ನುಡಿಯ ಪುಟ ೧೦ರಲ್ಲಿ, ದೇ.ಜ.ಗೌ., ಡಾ. ಹಿ.ಶಿ. ರಾಮಚಂದ್ರೇ ಗೌಡರ ಅಭಿಪ್ರಾಯಗಳನ್ನು ಈ ರೀತಿ ದಾಖಲಿಸಿದ್ದಾರೆ.

ದೇ.ಜ.ಗೌ.: ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಣ ವರ್ಗ ಹೋರಾಟವಾಗಿದೆ.

ಹಿ.ಶಿ. ರಾಮಚಂದ್ರೇಗೌಡರು: 'ರಾಮಧಾನ್ಯ ಚರಿತೆ ಬಂಡಾಯದ ದನಿಯಾಗಿದೆ'

ಎಂದು ಉಲ್ಲೇಖಿಸಿದ್ದಾರೆ. ಈ ಎರಡು ಹೇಳಿಕೆಗಳ ಹಿನ್ನಲೆಯನ್ನು ಅವರ ದೃಷ್ಠಿಕೋನವನ್ನು ನೋಡಿದಾಗ ನನಗೆ ಈ ರೀತಿ ಹೊಳೆದಿದೆ. ಸಾ.ಶಿ. ಮರುಳಯ್ಯ ನವರು ಹೇಳುವಂತೆ ಇದು 'ಸಂಸ್ಕೃತ ಮತ್ತು ಕನ್ನಡ ನಡುವಣ ಭಾಷಾ ವಾದವಾಗಿದೆ' ಎಂದಿರುವರು.[೧೧]

ಈ ಮೇಲಿನ ಎಲ್ಲಾ ಹೇಳಿಕೆಗಳನ್ನು ಗಮನಿಸಿದಾಗ, ದೇ.ಜ.ಗೌ. ಅವರ ಹೇಳಿಕೆ 'ಸ್ಪೃಶ್ಯ ಮತ್ತು ಅಸ್ಪೃಶ್ಯ ನಡುವಣ ಹೋರಾಟವಾಗಿದೆ' ಎಂಬ ಅಭಿಪ್ರಾಯವು ಹೆಚ್ಚು ಸೂಕ್ತವೆನಿಸುತ್ತದೆ. ಆದರೆ ಕನಕದಾಸರು ವಾಸ್ತವಿಕ ಜೀವನದಲ್ಲಿ, ಮೇಲ್ವರ್ಗದವರ ವಿರುದ್ಧ ಹೋರಾಡಲಿಲ್ಲ. ನೇರವಾಗಿ ಹೇಳುವ ಮಾತನಾಡುವ ಸ್ವಾತಂತ್ರ್ಯದ ಕೊರತೆ ಇತ್ತು. ಆದ ಕಾರಣ ಅವರು ಸಾಹಿತ್ಯ ಕೃತಿಗಳ ಮೂಲಕ ತಮ್ಮ ಭಾವನೆಗಳನ್ನು ಹೊರಹಾಕಿದ್ದಾರೆ.

ಹಿ.ಶಿ. ರಾಮಚಂದ್ರೇಗೌಡರು ಹೇಳಿದ ಮಾತು ಇದಕ್ಕೆ ಪೂರಕವಾಗಿದೆ. ಅವರು ರಾಮಧಾನ್ಯ ಚರಿತೆ ಬಂಡಾಯದ ದನಿಯಾಗಿದೆ ಎಂದಿರುವರು. ಆದರೆ ಇದೆ ಹಿನ್ನೆಲೆ ಕೃತಿಯಲ್ಲಿ ಹೆಚ್ಚು ಧ್ವನಿಸುತ್ತದೆ. ಆದರೆ ಸಾಶಿ. ಮರುಳಯ್ಯನವರು ಹೇಳಿರುವ ಮಾತನ್ನು ಗಮನಿಸಿ ಸಂಸ್ಕೃತ ಮತ್ತು ಕನ್ನಡ ನಡುವಣ ಭಾಷಾ ವಾದವಾಗಿ ಕಂಡಿದೆ ಎಂದಿರುವರು. ಇದು ಅವರ ದೃಷ್ಠಿಕೋನ ಮಾತ್ರ, ಕಾರಣ ಆ ಮಾತನ್ನು ನಾನು ಒಪ್ಪಿಕೊಳ್ಳಲಾಗುವುದಿಲ್ಲ. ಹಾಗೆ ನೋಡಿದರೆ ಮೇಲ್ವರ್ಗದ ಬ್ರಾಹ್ಮಣರು ರಚಿಸಿದ ಸಾಹಿತ್ಯಕ್ಕಿಂತ ಹೆಚ್ಚು ಗಟ್ಟಿತನ, ಮೌಲಿಕವಾದ ಸಾಹಿತ್ಯ ರಚನೆ, ಕನಕದಾಸರಿಂದ ಆಗಿದೆ. ಸಂಸ್ಕೃತ ಭಾಷೆಗಿಂತ, ದೇಶೀ ನೇರ ನುಡಿಯ ಅಚ್ಚಗನ್ನಡ ದೇಶೀ ಛಂದಸ್ಸಿನಲ್ಲಿ ರಚಿಸಿದ ಕೃತಿಗಳು ಜನಜೀವನದ ಕೈಗನ್ನಡಿಯಾಗಿದ್ದು, ಜನರ ಜೀವನಕ್ಕೆ ಸಂಬಂಧಿಸಿದಂತೆ ರಚಿತವಾಗಿದೆ.

ಹೀಗಿರುವುದರಿಂದ ಸಾ.ಶಿ. ಮರುಳಯ್ಯನವರು ರಾಮಧಾನ್ಯ ಚರಿತೆ ಕುರಿತು ನೀಡಿರುವ ವ್ಯಾಖ್ಯೆಗೆ ಅಷ್ಟು ಮಹತ್ವ ಕೊಡುವ ಅವಶ್ಯಕತೆ ಇಲ್ಲ ಎನ್ನಬಹುದು. ಅಧ್ಯಯನಕಾರರ ಅಧ್ಯಯನದ ಒಳನೋಟಗಳನ್ನು ಇಣುಕಿನೋಡಿದಾಗ ಅಂದಿನ ವ್ಯವಸ್ಥೆಯ ವಿರುದ್ಧ ಕೃತಿಗಳ ಮೂಲಕ ಧ್ವನಿ ಎತ್ತಿದ ಕನಕದಾಸರ ರಾಮಧಾನ್ಯ ಚರಿತೆಯನ್ನು ಬಹುವಿಧವಾಗಿ ನೋಡಿ ಗುರುತಿಸಿದ್ದಾರೆ. ಈ ಎಲ್ಲ ಸಂಗತಿಗಳನ್ನು ವಿಶ್ಲೇಷಿಸಿದಾಗ ಸಮುದಾಯಿಕವಾದ ಜನರ ಬದುಕಿನ ಕುರಿತಾದ ನೈಜ್ಯ ಕಾಳಜಿಯನ್ನು ಕನಕದಾಸರು ವ್ಯಕ್ತಪಡಿಸಿದ್ದಾರೆ. ಸಮಾಜದ ಯಾವುದೇ ಸಂಘರ್ಷವಿಲ್ಲದೆ ಬದುಕಬೇಕೆಂದು ಹೇಳಿದ ಕನಕರ ಆಲೋಚನೆಗಳನ್ನು ಅಧ್ಯಯನಕಾರರು ಗುರುತಿಸಿರುವುದು ಸೂಕ್ತವಾಗಿದೆ. ಒಂದು ಸಂಸ್ಕೃತಿಯನ್ನು ನಿರಾಕರಿಸುವ ನಿಟ್ಟಿನಲ್ಲಿ ಭತ್ತ ಮಾತನಾಡಿದರೆ ಇಂದಿನ ವಿಭಕ್ತ ಕುಟುಂಬ ಮತ್ತು ಅದರ ಆಲೋಚನೆಗಳ ಹಿನ್ನೆಲೆ ಇಟ್ಟುಕೊಂಡು ಕೂಡುಕುಂಬದ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ರಾಗಿ ಮಾತನಾಡುತ್ತದೆ. ನಮಗೆ ಪ್ರಸ್ತುತ ಬೇಕಾಗಿರುವುದು ರಾಗಿಯ ಅಭಿಪ್ರಾಯ ಜ್ಞಾನ ಮತ್ತು ಅಧಿಕಾರ ಇಲ್ಲಿಯೂ ಕೆಲಸ ಮಾಡಿದೆ. ಅಧಿಕಾರದ ನೆಲೆಯನ್ನು ಮೊದಲೇ ಹೊಂದಿದ್ದ ಭತ್ತ ಜ್ಞಾನದಲ್ಲಿ ನಾನೆ ಎಂಬುದಾಗಿ ಘೋಷಿಸಿದರು. ಸಭೆಯಲ್ಲಿ ರಾಗಿ ನಿಜವಾದ ಜ್ಞಾನ ಎಂದು ಸಾಬೀತಾಗುತ್ತದೆ. ಪ್ರಸ್ತುತ ಅದರ ವಾಗ್ವಾದ ಇಂದಿಗೂ ಇದೆ.

೪.೧.೩.೨ ಸಮಾನತೆ, ಜಾತ್ಯಾತೀತ, ಮಾನವೀಯ ಮೌಲ್ಯಗಳ ಪ್ರತಿಪಾದನೆ

ಕನಕದಾಸರು ರಾಮಧಾನ್ಯ ಚರಿತೆಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಇದು ೧೫೮ ಪದ್ಯಗಳ ಚಿಕ್ಕ ಖಂಡಕಾವ್ಯವಾಗಿದೆ. ಜಗತ್ತಿನ ಎಲ್ಲಾ ದೇಶಗಳಲ್ಲಿ ಜಾತಿ, ಧರ್ಮ, ಹಣ, ಅಧಿಕಾರ, ತೋಳ್ಬಲ ಹಾಗೂ ಬುದ್ಧಿವಂತಿಕೆ ಇವುಗಳ ಆಧಾರದಿಂದ ಮೇಲ್ವರ್ಗದ ಜನ ಕೆಳವರ್ಗದ ಜನರನ್ನು ಹೀನಾಯವಾಗಿ ಕಾಣುವುದು, ಅಮಾನವೀಯವಾಗಿ ನಡೆಸಿಕೊಳ್ಳುವುದು, ಗುಲಾಮರಂತೆ ಬಳಸಿಕೊಳ್ಳುವುದು, ನಡೆಯುತ್ತಲೇ ಇದೆ. ಹೀಗೆ ಅವಮಾನಕ್ಕೆ, ಅವಹೇಳನಕ್ಕೆ ಒಳಗಾದವರ ನೋವು ಒಳತುಮುಲ ಹಾಗೂ ಸ್ವಾಭಿಮಾನ ಸ್ವತಂತ್ರತೆಯನ್ನು ಅಳವಡಿಸಿಕೊಂಡು, ಐತಿಹಾಸಿಕ ಮತ್ತು ದೇಶೀಯತೆಯೊಡನೆ ಬೆರೆಸಿ ರೂಪಕವನ್ನಾಗಿ ಕನಕದಾಸರು ರಾಮಧಾನ್ಯ ಚರಿತೆಯನ್ನು ಕಟ್ಟಿಕೊಟ್ಟಿದ್ದಾರೆ.

ಜಾತೀಯ ಕಾರಣದಿಂದ ಕನಕದಾಸರು ಮೇಲ್ವರ್ಗದವರ ಅವಮಾನಕ್ಕೆ ಒಳಗಾಗುತ್ತಿದ್ದರು. ವ್ಯಾಸರಾಯರ ಮನಸ್ಸನ್ನು ಗೆದ್ದು ಸತ್ವ ಪಾಂಡಿತ್ಯದಲ್ಲಿ ಎಲ್ಲರಿಗಿಂತ ಮೇಲ್ಮಟ್ಟದವರೆಂದು ತೋರಿಸಿಕೊಟ್ಟರು. ಅದು ಬಾಳೆಹಣ್ಣಿನ ಪ್ರಸಂಗ, ನಾನು ಹೋದರೆ ಹೋದೆನು ಮುಂತಾದ ಸಂದರ್ಭದಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೂ ಜಾತಿ ವ್ಯವಸ್ಥೆ, ಕನಕದಾಸರನ್ನು ಬಹಳಷ್ಟು ಕಾಡಿದೆ. ಸಾಮಾಜಿಕವಾಗಿ ಅವರ ಆತ್ಮಸ್ಥೈರ್ಯ ಕುಂದುವಂತೆ ಮಾಡಿದ ಈ ವರ್ಣ ವ್ಯವಸ್ಥೆಯನ್ನು ಧಿಕ್ಕರಿಸಿದ್ದಾರೆ. ಸಮಾನತೆ, ಭ್ರಾತೃತ್ವ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಲಹೆ ಇತ್ತಿದ್ದಾರೆ.

ಸಮಾನತೆಯ ಪ್ರತಿಪಾದನೆ

ಪ್ರಾಚೀನ ಕಾಲದ ಪರಂಪರೆಯಿಂದಲೂ ಎಲ್ಲರೂ ಸಮಾನವಾಗಿ ಬದುಕಬೇಕೆಂಬ ಪರಿಕಲ್ಪನೆ ಬೆಳೆದು ಬಂದಿದೆ. ಅದು ಇಂದಿಗೂ ಮುಂದುವರಿದುಕೊಂಡು ಬಂದಿದೆ. ಆದರೆ ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳ ಮನೋಧೋರಣೆಯಿಂದ ಸಮಾನತೆ ಇಲ್ಲದಂತಾಗಿರುವುದು ದುರದೃಷ್ಟಕರ. ೧೯೫೦ ಜನವರಿ ೨೬ರರಂದು ಜಾರಿಗೆ ಬಂದ ನಮ್ಮ ಭಾರತೀಯ ಸಂವಿಧಾನ ಆಶಯಗಳು ಸಮಾನತೆ ಹಕ್ಕನ್ನು ಮಂಡಿಸಿ, ಎಲ್ಲರೂ ಅದರಂತೆ ಸಮಾನವಾಗಿ ಬದುಕಬೇಕೆಂದು ಅಂಬೇಡ್ಕರ್ ಬಯಸಿದ್ದರು. ಆದರೂ ಇಂದು ಅದು ತಾರತಮ್ಯ ನೀತಿ ಅನುಸರಿಸುತ್ತಿದೆ. ಇದಕ್ಕೆ ರಾಮಧಾನ್ಯ ಪೂರಕವೆಂಬಂತೆ ಕಂಡುಬರುವುದು. ಮಧ್ಯಯುಗೀನ ಕಾಲದಲ್ಲಿಯೇ ಕನಕದಾಸರ ರಾಮಧಾನ್ಯ ಚರಿತೆ ಈ ಸಮಾನತೆಯ ಪ್ರತಿಪಾದನೆ ಮಾಡುತ್ತದೆ.

ರಾಮನು ನ್ಯಾಯಸಮ್ಮತವಾದ ನಿರ್ಣಯವನ್ನು ನೀಡುತ್ತಾನೆ. ಮಳೆಯ ಅಧಿದೇವತೆಯಾದ ಇಂದ್ರನು ರಾಗಿಯೇ ಶ್ರೇಷ್ಠ ಧಾನ್ಯವೆಂದು ತೀರ್ಪು ನೀಡುತ್ತಾನೆ. ಆಗ ಸಭೆಯಲ್ಲಿ ನಾರದ ಮೊದಲಾದ ಮುನಿಗಳು, ಬ್ರಾಹ್ಮಣರು ಅನುಮೋದಿಸುತ್ತಾರೆ. ಎಲ್ಲರ ಏಕರೀತಿಯ ಅಭಿಪ್ರಾಯಗಳನ್ನು ಗಮನಿಸಿದ ರಾಮ ಅಧಿಕೃತವಾಗಿ ನರೆದಲೆಗಕ್ಕೆ ಪ್ರೀತಿಯಿಂದ ತನ್ನ ಹೆಸರನ್ನೆ (ರಾಘವ) ನೀಡಿ ಸನ್ಮಾನಿಸುತ್ತಾನೆ. ಅಂದಿನಿಂದ ನರೆದಲಗ ರಾಗಿಯಾಗಿ ಮನ್ನಣೆ ಗಳಿಸುತ್ತದೆ. ಮೇಲು-ಕೀಳು ಭಾವನೆಯ ಅಹಂಕಾರದಿಂದ ಬೀಗುತ್ತಿದ್ದ ಬತ್ತಕ್ಕೆ ಅವಮಾನವಾಗಿ ತಲೆ ತಗ್ಗಿಸಿ ನಿಸ್ಸಾಹಾಯಕವಾಗಿ ನಿಲ್ಲುತ್ತದೆ. ಎಲ್ಲರ ಪ್ರೀತಿಗೆ ಪಾತ್ರವಾದ ರಾಗಿ ಸ್ವತಃ ಮುಂದೆ ಬಂದು ಭತ್ತವನ್ನು ಸಮಾಧಾನ ಪಡಿಸಿತೆಂದು ಚಿತ್ರಿತವಾಗಿರುವುದು ಅರ್ಥವತ್ತಾಗಿದೆ. ಇದು ಸಮಾನತೆಯ ಧೋರಣೆಯಾಗಿದೆ. ಕಾರಣವಿಷ್ಟೆ, ತನ್ನನ್ನು ಕೀಳೆಂದು ಜರಿದು ಹೀಯಾಳಿಸಿದ ಭತ್ತವನ್ನು ದ್ವೇಷಿಸದೆ, ಆತ್ಮೀಯತೆಯಿವಂದ ಸಮಾನ ದೃಷ್ಟಿಯಿಂದ ಸಮಾಧಾನ ಪಡಿಸಿದ ರೀತಿ ವಿಶೇಷವಾಗಿದೆ. ಆಧುನಿಕ ಸಮಾಜ ಬದುಕಿಗೆ ಪರಿಭಾವಿಸುವಂತೆ ಯಾರೂ ಇಲ್ಲಿ ಮೇಲಲ್ಲ, ಯಾರೂ ಇಲ್ಲಿ ಕೀಳಲ್ಲ ಎಲ್ಲರೂ ಸಮಾನರೆಂಬ ಆಶಯಕ್ಕೆ ಪೂರಕವಾಗಿದೆ. ರಾಗಿ ಪರಂಪರಾಗತಾಗಿದ್ದ ಕೇಳರಿಮೆಯ ಮುಕ್ತಿಯಿಂದ ಭತ್ತದೊಂದಿಗೆ ಸಮಾನವಾಗಿ ನಿಂತು ಸಂವಾದ ನಡೆಸುವ ಸಾಮರ್ಥ್ಯ ಹೊಂದಿದೆ. ಸಮಾಜದಲ್ಲಿ ಸಮಾನತೆ ತರಲು ಎಲ್ಲಾ ಜಾತೀಯ ಧರ್ಮಗಳ ಜನರು ಬೇಧ-ಭಾವನ್ನು ತ್ಯಜಿಸಿ ಪ್ರೀತಿ ವಿಶ್ವಾಸದಿಂದ ಬದುಕಬೇಕೆಂಬ ನಿಲುವನ್ನು ಅಧ್ಯಯನಕಾರರು ಬಿಂಬಿಸಿದ್ದಾರೆ.

ಸಾಮಾಜದಲ್ಲಿರುವ ಸವಲತ್ತುಗಳು ಕೇವಲ ಮೇಲ್ಜಾತಿಯವರಿಗೆ ಮಾತ್ರ ಮೀಸಲಿಲ್ಲ. ಇಲ್ಲಿಯ ಸ್ಥಾನಮಾನಗಳು ಅಂಚಿಗೆ ತಳ್ಳಲ್ಪಟ್ಟಿರುವ ಕೆಳವರ್ಗದವರಿಗೂ ಲಭ್ಯವಾಗಿ ಸ್ವಾಭಿಮಾನ, ಆತ್ಮತೃಪ್ತಿಯಿಂದ ಬದುಕುವಂತಾಗಬೇಕು. ಕೆಳಸ್ತರದ ಜನ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿ, ಇತರರಿಗೆ ಸಮಾನರಾಗಿ ಅಧಿಕಾರ ನಡೆಸುವಂತಾಗಬೇಕು ಎಂಬ ಸಮಾನತೆಯ

ಆಶಯ ರಾಮಧಾನ್ಯ ಚರಿತೆಯಲ್ಲಿ ಹಾಸುಹೊಕ್ಕಾಗಿದೆ. ಸಮಾನತೆಯ ಹೋರಾಟಕ್ಕೆ ಈ ಕೃತಿಯ ಆಶಯ ಇಂದಿಗೂ ಮಾದರಿಯಾಗುತ್ತದೆ. ಮೇಲ್ಜಾತಿಯವರ ದಬ್ಬಾಳಿಕೆಯನ್ನು ಕೆಳಜಾತಿಯವರು ಪ್ರತಿಭಟಿಸಿ ಸ್ವಾಭಿಮಾನವನ್ನು ಎತ್ತಿ ಹಿಡಿಯಬೇಕೆಂಬ ಅರ್ಥಪೂರ್ಣ ಆಶಯವನ್ನು ರಾಗಿ ಭತ್ತಕ್ಕೆ ಪ್ರತಿಭಟಿಸುವ ಸನ್ನಿವೇಶದಲ್ಲಿ ವ್ಯಕ್ತವಾಗುವಂತೆ ಕವಿ ಚಿತ್ರಿಸಿದ್ದಾನೆ. ಬುದ್ಧಿವಂತಿಕೆಯ ಸಾಮರ್ಥ್ಯ ಬರಿ ಮೇಲ್ಜಾತಿಯವರಿಗೆ ಸೀಮಿತವಾಗಿಲ್ಲ, ಇತಿಹಾಸದ ದಾಖಲೆಗಳಿಂದ ನೋಡಿದಾಗಲೂ ಕೆಳಸ್ತರದ ಜನರಿಂದಲೇ ಹೆಚ್ಚು ಅಭಿವ್ಯಕ್ತವಾಗಿರುವುದು ಕಂಡುಬರುತ್ತದೆ. ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಜಾತ್ಯಾತೀತ ಮನೋಭಾವ

ನಮ್ಮ ನಾಡು, ದೇಶದ ಪ್ರಾಚೀನ ಸಂಸ್ಕೃತಿಯನ್ನು ಅವಲೋಕಿಸಿದಾಗ ಭಿನ್ನಧರ್ಮ, ಜನಾಂಗ, ಜಾತಿ, ಮತದವರು ಒಂದೆ ಕುಟುಂಬದವರು ಎಂಬ ಪರಿಕಲ್ಪನೆಯೊಂದಿಗೆ ಬಾಳುತ್ತ, ಇಂದಿಗೂ ಆ ಸಂಸ್ಕೃತಿ ರಾಮನೂ ಮುಂದುವರೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ಜಾತ್ಯಾತೀತ ಮನೋಭಾವದಿಂದ ಜನರು ಸಮುದಾಯಿಕವಾಗಿ, ಸಹಬಾಳ್ವೆಯಿಂದ ಬದುಕು ಸಾಗಿಸಿದ್ದಾರೆ. ಆದರೆ ಇತ್ತೀಚೆಗೆ ಜಾತಿ, ಮತೀಯ ಭಾವನೆ, ಧರ್ಮಾಂಧತೆ ಉಂಟಾಗಿ ಸಮಾಜದಲ್ಲಿ ಅಸಮಾನತೆ ಭುಗಿಲೆದ್ದಿದೆ. ಶಾಂತವಾದ ಬದುಕು ಇಲ್ಲವಾಗಿದೆ. ಇಂತಹ ದಿನಮಾನಗಳಲ್ಲಿ ಸರ್ವಸಮ್ಮತವಾಗಿ ಬದುಕಲು ಜಾತ್ಯಾತೀತತೆ ಮನೋಭಾವನೆ ಮುಖ್ಯವಾಗಿದೆ.

ಸಮುದಾಯದಲ್ಲಿ ಮೇಲು-ಕೀಳು ಎಂಬ ತಾರತಮ್ಯತೆ ಭಾವನೆಯನ್ನು ಹೋಗಲಾಡಿಸುವುದು ಮುಖ್ಯ. ಕನಕದಾಸರು ೧೬ನೇ ಶತಮಾನದಲ್ಲಿಯೇ ಜಾತ್ಯಾತೀತ ಧೋರಣೆಯನ್ನು ರಾಮಧಾನ್ಯ ಚರಿತೆಯ ಮೂಲಕ ಸಮಾಜದಲ್ಲಿ ಸಮಾನತೆ ತಂದು ಸ್ವಸ್ಥ ಸಮಾಜ ಕಟ್ಟಲು ಪ್ರಯತ್ನಿಸಿರುವುದು ಶ್ಲಾಘನೀಯ. ಇದು ಅಲ್ಲದೆ ಈ ಕೃತಿಯು ಬಹಳ ಸ್ಪಷ್ಟವಾಗಿ ಅನಾದಿಕಾಲದಿಂದ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿರುವ ಜಾತೀಯ ಪ್ರಶ್ನೆಯನ್ನು ನಿರ್ವಚಿಸುವ ಕಾರ್ಯವನ್ನು ಮಾಡುತ್ತಿದೆ. ಇಲ್ಲಿರುವ ಭತ್ತ-ರಾಗಿಗಳ ನಡುವಿನ ಸಂಘರ್ಷ ಬರಿ ಧಾನ್ಯಗಳ ಸಂಘರ್ಷವಾಗಿರದೆ ಮೇಲ್ಜಾತಿ (ಬ್ರಾಹ್ಮಣ) ಮತ್ತು ಕೆಳಜಾತಿ (ಶೂದ್ರ) ಗಳ ನಡುವಿನ ಸಂಘರ್ಷವಾಗಿ, ಅದರ ರೂಪಕದಂತೆ ಚಿತ್ರಿತವಾಗಿದೆ. ಜಾತೀಯತೆಯನ್ನು ಈ ಸಮಾಜದಲ್ಲಿ ಉಂಟುಮಾಡುತ್ತಿರುವ ಅನಾಹುತವನ್ನು ಪರಿಚಯಿಸುವ ಮೂಲಕವೇ ಜಾತ್ಯಾತೀತ ಮನೋಭಾವವನ್ನು ಈ ಕೃತಿಯಲ್ಲಿ ಪ್ರತಿಪಾದಿಸಲಾಗಿದೆ.

ಕೆಳಜಾತಿಯ ಪ್ರತಿನಿಧಿಯಂತಿರುವ ರಾಗಿಯನ್ನು ಮೇಲ್ಜಾತಿಯ ಪ್ರತಿನಿಧಿಯಂತಿರುವ ಭತ್ತದ ಎದುರು ಗೌತಮಮುನಿ ನಿಷ್ಪಕ್ಷಪಾತವಾಗಿ ಹೊಗಳಿದಾಗ, ಅದು ಭತ್ತಕ್ಕೆ ಸಹನೀಯವಾಗಲಿಲ್ಲ. ಏಕೆಂದರೆ ಅದರ ಮನಸ್ಸಿನಲ್ಲಿ ಜಾತೀಯ ಅಹಂಭಾವವಿದೆ. ನಾನೇ ಮೇಲು, ನಾನೇ ಶ್ರೇಷ್ಠವೆಂಬ

ಪ್ರತಿಷ್ಠೆ ಇದೆ. ತನ್ನಲ್ಲಿ ನಿಜವಾದ ಸತ್ವ ಇಲ್ಲದಿದ್ದರೂ ಇದೆ ಎನ್ನುವ ಭ್ರಮೆಯಲ್ಲಿ ಮುಳುಗಿ ಹೋಗಿದೆ. ಹೀಗಾಗಿ ರಾಗಿಯ ತಪ್ಪಿಲ್ಲದಿದ್ದರೂ ಅದನ್ನು ಎಲ್ಲರೆದುರು ವಿನಾಕಾರಣ ಅಮಾನವೀಯವಾಗಿ ನಿಂದಿಸಿ ಅವಹೇಳನ ಮಾಡುವ ಮೂಲಕ ಹುಟ್ಟಿನ ಸ್ಥಾನ-ಮಾನದ ಆಧಾರದಲ್ಲಿ ಜಾತೀಯ ಸಂಘರ್ಷಕ್ಕೆ ಕಾರಣವಾಗುತ್ತದೆ. ರಾಗಿಯನ್ನು ಕೀಳು ಜಾತಿಯದು ಎಂಬಂತೆ ನಿಂದಿಸಿದ ಭತ್ತದ ವರ್ತನೆ ರಾಗಿಯ ಸ್ವಾಭಿಮಾನವನ್ನು ಕೆರಳಿಸುತ್ತದೆ. ರಾಗಿಯು ಭತ್ತಕ್ಕಿಂತ ತಾನೇನು ಕಡಿಮೆ ಇಲ್ಲದಂತೆ ವಾದಕ್ಕೆ ಮುಂದಾಗುತ್ತದೆ. ಸೇರಿಗೆ ಸವ್ವಾಸೇರಿನಂತೆ ಸವಾಲೆಸೆಯುತ್ತದೆ. ಭತ್ತಕ್ಕಿಂತ ಯಾವುದೇ ರೀತಿಯಲ್ಲೂ ನಾನೇನು ಸತ್ವದಲ್ಲಿ, ಬುದ್ಧಿವಂತಿಕೆಯಲ್ಲೂ ಕೀಳಲ್ಲಾ ಎಂಬುವುದನ್ನು ಸಾಧಿಸಿ ತೋರಿಸುವುದು. ಹೀಗೆ ಜಾತಿಯ ಕಾರಣದಿಂದ ಉಂಟಾದ ಸಂಘರ್ಷಮಯ ಬಿಕ್ಕಟ್ಟನ್ನು, ಪ್ರಭುತ್ವದ ಪ್ರತಿನಿಧಿಯಾದ ರಾಮನು ನ್ಯಾಯಪರನಾಗಿ ನಿಷ್ಪಕ್ಷಪಾತವಾಗಿ ಪರಿಹರಿಸಲು ಆಯ್ದುಕೊಂಡ ಮಾರ್ಗ ಗಮನಾರ್ಹವಾಗಿದೆ. ರಾಗಿಯನ್ನು ರಾಘವಧಾನ್ಯವನ್ನಾಗಿ ಮಾಡಿ ಜಾತ್ಯಾತೀತವಾಗಿ ಅನುಸಿರಿಸಿದ ಧೋರಣೆ ಶ್ಲ್ಯಾಘನೀಯವಾದುದು.

ಸಮಾಜದ ನೆಮ್ಮದಿಯನ್ನು ಹಾಳುಮಾಡಬಹುದಾಗಿದ್ದ ಜಾತೀಯ ಸೂಕ್ಷ್ಮ ಸಮಸ್ಯೆಯನ್ನು ದೂರದರ್ಶಿತ್ವದ ಗುಣದಿಂದ ರಾಮನ ಮೂಲಕ ಸಮಾಜದ ಪ್ರಮುಖರೊಂದಿಗೆ ಪರಿಹರಿಸಿದ ಮಾರ್ಗ ಎಲ್ಲ ಕಾಲಕ್ಕೂ ಮಾದರಿಯಾಗುವಂತಿದೆ. ಈ ಕೃತಿಯ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ನೋಡಿದರೆ ಸಮಾಜದ ಪ್ರಮುಖ ಸ್ಥಾನದಲ್ಲಿರುವವರ್‍ಯಾರು ಜಾತಿಯತೆ ಪರವಾಗಿ ವರ್ತಿಸುವುದಿಲ್ಲ ಬದಲಾಗಿ ಜಾತ್ಯಾತೀತ ತತ್ವಕ್ಕೆ ವಾಸ್ತವತೆಗೆ ಬೆಲೆ ಕೊಡುವಂತೆ ಚಿತ್ರತರಾಗಿದ್ದಾರೆ. ಉದಾಹರಣೆಗೆ ಹೇಳುವುದಾದರೆ ರಾಮ, ಗೌತಮ, ಇಂದ್ರ, ಕಪಿಲ ಮುಂತಾದವರ ವರ್ತನೆಯನ್ನು ಗಮನಿಸಬಹುದು. ಜಾತೀಯತೆ ಅಳಿದು ಜಾತ್ಯಾತೀತ ಮಾನವ ಸಮಾಜದ ಆಶಯವನ್ನು ಕನಕದಾಸರು ಪ್ರತಿಪಾದಿಸಿದ ಧೋರಣೆ ಬಹುಮುಖ್ಯವಾಗಿದೆ.

ಮಾನವೀಯತೆಯ ಪ್ರತಿಪಾದನೆ

ಕನಕದಾಸರ ಸಾಹಿತ್ಯ ಮತ್ತು ಅವರ ಸಾಹಿತ್ಯ ಜೀವನದ ಮೇಲೆ ಬಂದಿರುವ ಅಧ್ಯಯನಗಳನ್ನು ಗಮನಿಸಿದಾಗ ಮುಖ್ಯವಾಗಿ ಮಾನವೀಯತೆ ಸಂಬಂಧಿಸಿದ ಮೌಲ್ಯಗಳ ಪ್ರತಿಪಾದನೆಯನ್ನು ಮಾಡಿದ್ದಾರೆ. ಆಗಿನ ಕಾಲಕ್ಕೆ ಅವರು ಚಿಂತನೆ ಮಾಡಿ ಸಮಾಜದ ಬದಲಾವಣೆಗೆ ಶ್ರಮಿಸಿರುವರು. ಆ ಬಗೆಯ ಧೋರಣೆಗಳನ್ನು ಅವರ ಕೃತಿಗಳ ಆಶಯಗಳು ಖಚಿತಪಡಿಸುತ್ತವೆ. ಯಾವುದೇ ರೀತಿಯ ಭೇಧ-ಭಾವವಿಲ್ಲದೆ, ಜಾತಿ ರಹಿತ, ವರ್ಗರಹಿತ, ಮನುಷ್ಯತ್ವಕೇಂದ್ರಿತ ಸಮಾಜದ ಕನಸನ್ನು ಕಂಡಿದ್ದ ಕನಕದಾಸರು ಅಲ್ಲದೆ ಅವರು ಶ್ರಮಿಕ, ಕೆಳವರ್ಗದವರ ಪರವಾಗಿದ್ದು ಹೋರಾಡಿದ ಮಹಾಮಾನವತಾವಾದಿಮಾಗಿದ್ದವರು.

ಮಾನವೀಯತೆ ಇಲ್ಲದ ಮನುಷ್ಯ ನಿಜವಾದ ಮನುಷ್ಯನಲ್ಲ ಅವನೊಬ್ಬ ಕ್ರೂರ ಪ್ರಾಣಿಗೆ ಸಮಾನ. ಭಗವಂತ ಜಾತಿ ಧರ್ಮಗಳ ಕಾರಣದಿಂದ ಭಕ್ತನಿಗೊಲಿಯದೆ ಅವನಲ್ಲಿರುವ ಮಾನವೀಯ ಗುಣಗಳಿಗೆ ಒಲಿಯುತ್ತಾನೆ. ಕನಕದಾಸರ ರಾಮಧಾನ್ಯಚರಿತೆ, ಕೀರ್ತನೆ, ಮುಂಡಿಗೆಗಳಲ್ಲಿ ಈ ಕಾಳಜಿ ವ್ಯಕ್ತವಾಗಿದೆ. ರಾಮನ ಪಾತ್ರದ ವರ್ತನೆಯಲ್ಲಿ ಬ್ರಾಹ್ಮಣನಾಗಿದ್ದರೂ ಗೌತಮ, ಇಂದ್ರ, ನಾರದ ಮುಂತಾದವರು ನಿಷ್ಪಕ್ಷಪಾತವಾಗಿ, ಮಾನವೀಯವಾಗಿ ರಾಗಿಯ ಸತ್ವವನ್ನು ಗ್ರಹಿಸಿ ಪುರಸ್ಕರಿಸುವಲ್ಲಿ ಎಷ್ಟೆ ನುಡಿಗಳನ್ನಾಡಿದರೂ, ಕೊನೆಯಲ್ಲಿ ಅವೆಲ್ಲವನ್ನು ಮರೆತು, ರಾಗಿ ಭತ್ತವನ್ನು ಬುದ್ಧಿಹೇಳಿ ಸ್ನೇಹತನನ್ನಾಗಿ ಸ್ವೀಕರಿಸುವಲ್ಲಿ, ಮಾನವೀಯತೆಯ ಸ್ಪರ್ಶವನ್ನು ಕಾಣುತ್ತೇವೆ. ಅಧಿಕಾರ ಮತ್ತು ಸ್ವಾರ್ಥ ಸಾಧನೆಗಾಗಿ ಇಂದು ಜಾತಿ, ಧರ್ಮಗಳನ್ನು ಸಂಕುಚಿತವಾಗಿ ಬಳಸಿಕೊಂಡು, ಅನೇಕ ಸಂಘರ್ಷಗಳನ್ನು ಹುಟ್ಟು ಹಾಕುತ್ತಿರುವ ರಾಜಕೀಯ ನಾಯಕರುಗಳು ಇಂತಹ ಅಂಶಗಳನ್ನು ತಿಳಿದುಕೊಳ್ಳಬೇಕಾಗಿದೆ. ಕನಕದಾಸರ ವಿಚಾರವನ್ನು ಅವರ ಕೃತಿಗಳನ್ನು ಓದಿ, ಅರ್ಥೈಸಿಕೊಳ್ಳಬೇಕಾಗಿದೆ. ಮಾನವೀಯತೆಯನ್ನು ಮೈಗೂಡಿಸಿಕೊಂಡು ಎಲ್ಲರೂ ಒಂದು ಎಂಬ ಧನಾತ್ಮಕವಾದ ಧೋರಣೆಯನ್ನು ತಾಳಬೇಕಾಗಿದೆ.

ಮಂಗಳೂರು ವಿಶ್ವವಿದ್ಯಾಲಯದ ಹಂಪನಕಟ್ಟೆ ಕಾಲೇಜು ಉಪನ್ಯಾಸಕರಾದ **ನಾಗಪ್ಪ ಗೌಡ ಆರ್**. ಅವರು ರಾಮಧಾನ್ಯ ಚರಿತೆಯನ್ನು ಹೀಗೆ ಗ್ರಹಿಸಿಕೊಂಡಿದ್ದಾರೆ. ಜಾತ್ಯಾತೀತ: ಮನೋಭಾವ, ಸಾಮಾಜಿಕ ನ್ಯಾಯದ ಪ್ರತಿಪಾದನೆ, ಜಾತಿ ಮತ್ತು ಕೋಮು ಸಾಮರಸ್ಯ ಸಮಾನತೆ, ಮಾನವೀಯತೆಯ ಪ್ರತಿಪಾದನೆಯಾಗಿದೆ.[೧೨]

ಕುಮಾರಚಲ್ಯ ಅವರು ರಾಮಧಾನ್ಯ ಚರಿತೆಯನ್ನು ಕುರಿತು ಹೀಗೆ ವ್ಯಾಖ್ಯಾನಿಸಿದ್ದಾರೆ: ಶ್ರೇಷ್ಠತೆಯ ವ್ಯಸನ, ಮೇಲು ಕೀಳು ಎಂಬ ಅಪಕಲ್ಪನೆಗಳು ನಿರಂತರವಾಗಿ ಮುಂದುವರಿದುಕೊಂಡು ಬಂದಿವೆ. ಇಂಥ ಒಂದು ಅನಿಷ್ಠ ಪದ್ಧತಿಯಿಂದ ಬಿಡುಗಡೆ ಪಡೆಯುವ ಹಂಬಲವನ್ನು 'ರಾಮಧಾನ್ಯ ಚರಿತ್ರೆ'ಯಲ್ಲಿ ವ್ಯಕ್ತಪಡಿಸಲಾಗಿದೆ. ಇದನ್ನು ನಾಟಕೀಯ ಮಾದರಿಯಲ್ಲಿ ಕನಕದಾಸರು ನಿರೂಪಿಸಿದ್ದಾರೆ. ವರ್ಣ, ವರ್ಗದ ಪ್ರಾಬಲ್ಯವನ್ನು ಪ್ರತಿನಿಧಿಸುವ ಭತ್ತ ಹಾಗೂ ಅದನ್ನು ವಿರೋಧಿಸುವ ಶ್ರಮಿಕ ಶಕ್ತಿಯ ಪ್ರತಿಭಟನೆಯನ್ನು ಸೂಚಿಸುವ 'ರಾಗಿ' ಈ ಕಾವ್ಯದ ಕೇಂದ್ರದಲ್ಲಿದೆ.[೧೩]

ಕನಕದಾಸರು ರಾಮಧಾನ್ಯ ಚರಿತೆಯಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಸಂಘರ್ಷವನ್ನು ರಾಗಿ ಮತ್ತು ಭತ್ತ ಧಾನ್ಯಗಳ ಮೂಲಕ ತೋರಿಸಲು ಪ್ರಯತ್ನಿಸಿದ್ದರೂ ಈ ಎರಡು ವರ್ಗಗಳು ಸಹಮತದಿಂದ ಸಮನ್ವಯದ ರೀತಿಯಲ್ಲಿ ಬದುಕಬೇಕೆಂಬುದನ್ನು ಈ ಕಾವ್ಯದಲ್ಲಿ ಪ್ರತಿಪಾದಿಸಿದ್ದಾರೆ.

"ದೇ.ಜ.ಗೌ. ಹೇಳುವಂತೆ" ಇದೊಂದು ಸುಂದರವಾದ ಮತ್ತು ಕಾಂತಿಯುತವಾದ ವಿಡಂಬನ ಕಾವ್ಯ, ಮತಾಂಧರ ಮತ್ತು ಪಟ್ಟಭದ್ರ ಹಿತಾಸಕ್ತರ ಮೂಗು ಕೆತ್ತಿ ಅವರ ಓರೆಕೋರೆಗಳನ್ನು ತಿದ್ದಬೇಕೆಂಬುದೇ ಕವಿಯ ಪ್ರತಿಜ್ಞೆಯಾಗಿದೆ".[೧೪]

ಚಿ.ಮ. ಗಣೇಶರ ಪ್ರಕಾರ ಕನಕದಾಸರ ಪಾರಂಪರಿಕ ಪ್ರಜ್ಞೆ ಹಾಗೂ ಸಮಾಜ ವಿಮರ್ಶನಶಕ್ತಿ ಅತ್ಯಂತ ಕ್ರಿಯಾಶೀಲವಾಗಿ ಮಡುಗಟ್ಟಿರುವ ಧ್ವನಿಕಾವ್ಯ. ಇದು ಕನ್ನಡದ ಮೊದಲ ಬಂಡಾಯ ಕಾವ್ಯ. ವರ್ಣಸಂಘರ್ಷ, ವರ್ಗಹೋರಾಟ ಮತ್ತು ಶೂದ್ರಪರವಾದ ಕೂಗು ಇಷ್ಟು ದಟ್ಟವಾಗಿ ತುಂಬಿಕೊಂಡುದುದು ಬಹುಶಃ ಕನ್ನಡ ಸಾಹಿತ್ಯದಲ್ಲಿ ಇದೇ ಮೊದಲು".[೧೫]

ಜೊತೆಗೆ ಈ ಓರೆಕೋರೆಗಳು ಸಾಮಾನ್ಯ ಜನರಿಗೆ ಗ್ರಹಿಕೆಯಾಗಿ ಅವರು ಎಚ್ಚೆತ್ತುಕೊಳ್ಳಬೇಕೆಂಬುದು ಕನಕದಾಸರ ಆಶಯವಾಗಿದೆ. ಸತ್ಯಾಸತ್ಯಗಳ ನಡುವೆ ರಾಜಿಯ ಸೂತ್ರ ಸಲ್ಲದು. ಅವನ ಗ್ರಾಮೀಣ ಸ್ವಭಾವಕ್ಕೆ ಅವನ ರೂಕ್ಷಪ್ರತಿಭೆಗೆ ಉಪಾಯ ಹುನ್ನಾರುಗಳಾಗಲಿ, ಮಂತ್ರ ತಂತ್ರಗಳಾಗಲಿ, ಮರೆಮೋಸಗಳಾಗಲಿ, ನುಣ್ಣನೆಯಬೆಣ್ಣೆ ಮಾತುಗಳಾಗಲಿ ಒಗ್ಗುವಂತಿಲ್ಲ. ಒರಟುತನ, ತತ್ವನಿಷ್ಠೆ, ಶ್ರದ್ಧೆ, ಉತ್ಸಾಹಗಳು ಅವನ ಪ್ರವೃತ್ತಿ ಜಾಯಮಾನಗಳಿಗೆ ಪೋಷಕವಾಗಿರುವ ದ್ರವ್ಯವಿಶೇಷಗಳಾಗಿವೆ. ಅವನ ವಿಡಂಬನೆಯಲ್ಲಿ ಕಹಿಯಿದೆ; ವಿಷವಿಲ್ಲ. ಮೊನಚಿದೆ; ನೋವಿಲ್ಲ ಕಾವಿದೆ, ತಾಪವಿಲ್ಲ ಈ ಎಲ್ಲ ಅಂಶಗಳನ್ನು ರಾಮಧಾನ್ಯ ಚರಿತೆಯಲ್ಲಿ ಕಾಣುತ್ತೇವೆ.

೪.೧.೪ ಹರಿಭಕ್ತಿಸಾರ

ಇದು ಒಟ್ಟು ೧೦೮ ಭಾಮಿನಿ ಷಟ್ಪದಿಗಳಿಂದ ರಚಿತವಾದ ಕೃತಿಯಾಗಿದೆ. ಪದ್ಯಗಳು ೧-೧೫ರ ವರೆಗೆ ಬಿರುದಾವಳಿಗಳು, ಸ್ತುತಿ, ಸಂಸ್ಕೃತ ಸಮಾಸಗಳು, ಪದ್ಯಗಳು ೨೩-೪೮ ರವರೆಗೆ ಕನ್ನಡ ಪ್ರವೇಶ, ಪ್ರಾರ್ಥನೆ, ಸಾಮೂಹಿಕ ನೆಲೆ. ೪೯-೧೦೧ನೆಯ ಪದ್ಯದವರೆಗೆ ವೈಯಕ್ತಿಕತೆಯ ನೆಲೆ, ನಿರೂಪಣೆಯಲ್ಲಿ ಬದಲಾವಣೆ, ೧೦೨-ರಿಂದ ೧೦೮:ನೆಯ ಪದ್ಯದವರೆಗೆ ಮೂರು ಪದ್ಯಗಳು, ಮಂಗಳ ಪದ್ಯಗಳಾಗಿವೆ.

ಮೊದಲ ಹದಿನೈದು ಪದ್ಯಗಳಲ್ಲಿ ಆರನೆಯ ಸಾಲಿನಲ್ಲಿ ಬರುವ 'ರಕ್ಷಿಸು ನಮ್ಮನನವರತ' ಎಂಬ ನಿಯತವಾದ ಪ್ರಯೋಗದ ಹೊರತಾಗಿ, ಎಲ್ಲಿಯೂ ಅಚ್ಚಗನ್ನಡದ ಪದಗಳಿಲ್ಲ. ಸಂಸ್ಕೃತ ಸಮಾಸಗಳೆ ಉದ್ದಕ್ಕೂ ಕಾಣಿಸಿಕೊಳ್ಳುತ್ತವೆ. ಒಂದು ದೃಷ್ಟಿಯಿಂದ ಅರ್ಥದ ಪರಿಣಾಮ ಗೌಣವಾಗಿ ಶಾಬ್ದಿಕ ಪರಿಣಾಮ ಪ್ರಧಾನವಾಗುವ ಅಭಿವ್ಯಕ್ತಿಯ ಮಾದರಿಯಾಗಿಯೂ ಇದನ್ನು ಗುರುತಿಸಬಹುದು.

ಸಾಹಿತ್ಯದಲ್ಲಿ ಭಕ್ತಿ ಪರವಾದ ಸಾಹಿತ್ಯವು ಬದುಕಿನಲ್ಲಿ ಸತ್ಯ, ಶ್ರದ್ಧೆ, ಭಕ್ತಿಯನ್ನು ಹುಟ್ಟಿಸುತ್ತದೆ. ತನ್ನರಿವನ್ನು ಮನುಷ್ಯನಲ್ಲಿ ಮೂಡಿಸಿ, ಬದುಕನ್ನು ಮೂಡಲಪೇಕ್ಷಿಸುವಂತೆ ಮಾಡುವುದು. ಎಲ್ಲವು ಇಷ್ಟ ದೈವಿ ಕೃಪೆಯ ಪ್ರೇರಣೆಯಿಂದಲೆ ಬದುಕನ್ನು ಅರಳಿಸುವುದಾಗಿದೆ. ಕನ್ನಡ ಸಾಹಿತ್ಯವು ಭಕ್ತಿ

ವಿಷಯ ಮತ್ತು ಪರಂಪರೆಯಲ್ಲಿ ಚೈತನ್ಯಪೂರ್ಣ ಬಂಗಾರದ ಖಣಿಯಾಗಿದೆ. ಏಕೆಂದರೆ ಭಕ್ತಿಗಂಗೆಯು ಕನ್ನಡ ಸಾಹಿತ್ಯದ ಮಧ್ಯಯುಗೀನ ಕಾಲದಲ್ಲಿ ಜೀವನದಿಯಾಗಿ ಹರಿದಿದೆ.

ಇಲ್ಲಿ ಕನಕರ ಹರಿಭಕ್ತಿ ಸಾರವು ಭಕ್ತಿಯ ಹೊನಲನ್ನು ಹರಿಸುವ, ಜನರಲ್ಲಿ ಭಕ್ತಿ, ಭಾವವನ್ನು ತರುವುದರಲ್ಲಿ ತನ್ನ ಮಹತ್ವವನ್ನು ಹೊಂದಿದೆ. ಹರಿಭಕ್ತಿ ಸಾರವು ಹಾಡಲು ಅನುಕೂಲವಾಗುವಂತೆ ಮತ್ತು ಗಮನಕ್ಕೆ ಅಳವಡಿಸುವಂತೆ, ಭಾಮಿನಿ ಷಟ್ಪದಿಯಲ್ಲಿ ಹಚನೆಗೊಂಡಿದ್ದು, ಪ್ರತಿಯೊಂದು ಪದ್ಯದ ಕೊನೆಯಲ್ಲೂ 'ರಕ್ಷಿಸು ನಮ್ಮ ನನವರತ' ಎಂದು ಬರುತ್ತದೆ. ಇದು ಕಾವ್ಯದ ವೈಶಿಷ್ಟ್ಯವೂ ಆಗಿದೆ.

ಶ್ರೀಯರಸ ಗಾಂಗೇಯನುತ ಕೌಂ
ತೆಯ ವಂದಿತ ಚರಣ ಕಮಲದ
ಳಾಯತಾಂಬಕ ರೂಪ ಚಿನ್ಮಯ ದೇವಕೀತನಯ
ರಾಯ ರಘುಕುಲವರ್ಯ ಭೂಸುರ
ಪ್ರೀಯ ವರಪುರನಿಲಯ ಚೆನ್ನಿಗ
ರಾಯ ಚತುರೋಪಾಯ ರಕ್ಷಿಸು ನಮ್ಮನನವರತ ಹರಿಕ್ತಿಸಾರ, ಪದ್ಯ.೧.

ಇಲ್ಲಿ ಲಕ್ಷ್ಮೀಪತಿ ಜನ್ಮದ ರೂಪ ಪಾಂಡವವಂದಿತ ಚರಣ, ತಾವರೆಯ ದಳದಂತೆ ವಿಶಾಲವಾದ ಕಣ್ಣುಳ್ಳವನೆ, ದೇವಕೀಸುತ, ರಘುಕುಲದ ರಾಜಾದಿರಾಜ ಶ್ರೀರಾಮಚಂದ್ರ, ಬ್ರಾಹ್ಮಣಪ್ರಿಯ, ವರಪುರ (ಬೇಲೂರು) ನಿವಾಸ, ಸುಂದರಾಂಗ ಚನ್ನಕೇಶವ, ಜಾಣ್ಮೆಯ ಉಪಾಶೀಲ, ಸದಾ ನಮ್ಮನ್ನು ರಕ್ಷಿಸು ಎಂದು ಪ್ರಾರಂಭವಾಗುವುದು ವಿಶೇಷವಾಗಿದೆ.

ಈ ಹರಿಭಕ್ತಿಸಾರವನ್ನು ಭಕ್ತರಾಲಿಸುವಂತೆ ರಚಿಸುವ ಬರೆದೋದಿದವರಿಷ್ಟಾರ್ಥ ಸಿದ್ಧಿಪುದು 'ಮುಕ್ತಿಗಿದು ನೆಲೆದೋರುವುದು' ಎಂಬ ಆಶಯ ಕವಿಯದು. 'ಭಕ್ತಿಚರಿತೆ' 'ಭಕ್ತಿಸಾರ' ಎಂದು ಬಗೆ ಬಗೆಯಾಗಿ ಕೃತಿಯನ್ನು ಕರೆದಿದ್ದಾರೆ. ಹರಿಸ್ಮರಣೆ ಕಾವ್ಯದುದ್ದಕ್ಕೂ ಹರಡಿದೆ. ಪ್ರತಿ ಪದ್ಯದ ಕೊನೆಯ ಪಾದಗಳಲ್ಲಿ 'ದೇವ ರಕ್ಷಿಸು ನಮ್ಮನನವರತ' ಎಂಬ ವಿನಮ್ರ ಭಾವಾಭಿವ್ಯಕ್ತಿ, ಸಕಲ ಜೀವಿಗಳ ಮೇಲಿರುವ ಅಪಾರ ಕಾಳಜಿಯನ್ನು ಹೇಳುತ್ತದೆ.

'ಹರಿಭಕ್ತಿಸಾರ'ವು ಭಾಮಿನಿ ಷಟ್ಪದಿಯಲ್ಲಿ ರಚಿತವಾದ, ನೀತಿ ಮತ್ತು ತತ್ವಗಳನ್ನು ಪ್ರತಿಪಾದಿಸುವ ಕಾವ್ಯವಾಗಿದೆ. ಮೂರು ಮಂಗಳಚರಣಗಳು ಸೇರಿ ಒಟ್ಟು ಒಂದನೂರಾ ಹನ್ನೊಂದು ಪದ್ಯಗಳಿವೆ. ಶ್ರೀಕಾರದಿಂದ ಕಾವ್ಯ ಪ್ರಾರಂಭವಾಗಿ ಶ್ರೀ ಹರಿಯ ಸಂಪತ್ತು, ಶಕ್ತಿ, ಚಲುವು, ಶಿಷ್ಟರಕ್ಷಕ ದುಷ್ಟಶಿಕ್ಷಕ ಕಾರ್ಯಗಳ ಸ್ಮರಣೆ ಕಂಡುಬರುವುದು ಹಾಗೂ ಇದರಲ್ಲಿ ಶ್ರೀ ಹರಿಯಕರುಣೆಯನ್ನು ಕೊಂಡಾಡಿದ ಪ್ರಸಂಗ ಇದೆ. ಆದರೆ ಈ ಭಕ್ತಿ ಬಗೆಯನ್ನು ಕೆಲವರು ಬೇರೆ ರೀತಿ ಅರ್ಥೈಸುವುದು ಕಂಡುಬರುತ್ತದೆ. ವಿವಿಧ ಅಧ್ಯಯನಕಾರರ ಅಭಿಪ್ರಾಯ ಹೇಳಿಕೆಗಳು ಈ ರೀತಿಯಾಗಿವೆ.

ವಸಂತ ಕುಷ್ಟಗಿ "ಶಾಂತಿ ಸಾಗರನಾದ, ನಾದಸಾಗರನಾದ ಅಮೃತಸಾಗರನಾದ, ಜ್ಞಾನ ಬಲಕಾರುಣ್ಯಸಾಗರನಾದ, ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡರು. ಇದನ್ನು ಪಡೆಯಲು ಅವರ ಸಾಧನೆ, ಭಕ್ತಿಯ ವಿವಿಧ ಪ್ರಕಾರಗಳಲ್ಲಿ ವಿಶೇಷತಃ ಆರ್ತಭಕ್ತಿ, ದಾಸ್ಯಭಕ್ತಿ, ಅರ್ಪಣಾಭಕಿಗಕ್ತಿಗಳ ಮುಖಾಂತರ ಪ್ರಮುಖವಾದವು. ಈ ಮಾತನ್ನು....? ಹರಿಭಕ್ತಿಸಾರ ಹೆಚ್ಚು ಸ್ಪಷ್ಟಗೊಳಿಸುತ್ತದೆ".[೧೬]

ಪದ್ಮಾಲಯ ನಾಗರಾಜ್ "ಕನಕರನ್ನು ಭಕ್ತಿ ಪರಕಲು ಪರೆಯಿಂದ ಮೊದಲು ಮುಕ್ತಗೊಳಿಸಬೇಕು ಹಾಗೆ ಮಾಡುವುದಾದರೆ ಇದುವರೆಗೂ ದಾಸರ ಬಗ್ಗೆ ಕಟ್ಟಿಕೊಂಡಿರುವ ಭಾಷಿಕ ಪರಪಾಟ ಅಥವಾ ಪರಿಭಾಷೆಗಳನ್ನು ಬಿಟ್ಟು ಭಕ್ತಿಯನ್ನು ಪುನರ್ ವ್ಯಾಖ್ಯಾನಿಸಿಕೊಂಡಾಗ ಮಾತ್ರ ಕನಕನ ದೇಸಿಭಕ್ತಿಯ ಸಾರ ಸೌಂದರ್ಯವನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ".[೧೭]

ಶ್ರೀರಾಮ ಅಚನೂರ "ಈ ಕೃತಿಯಲ್ಲಿ ಕನಕದಾಸರ ಅನನ್ಯಭಕ್ತಿ ಮಲ್ಲಿಗೆಯಂತೆ ಸುಂದರವಾಗಿ ಹರಡಿದೆ. ಪಂಡಿತ ಪಾಮರರಿಗೂ ಹಿತವೆನಿಸುವ ಉಕ್ತಿಗಳು ಕಾವ್ಯದುದ್ದಕ್ಕೂ ತುಂಬಿ ರಸವತ್ತೆನಿಸಿವೆ. 'ಗಿಳಿಯ ಮರಿಯನ್ನು ತಂದು ಪಂಜರದೊಳಗೆ ಪೋಷಿಸಿ' 'ದೀನ ನಾನು ಸಮಸ್ತ ಲೋಕಕೆ ದಾನಿ ನೀನು' 'ನೀರಮೇಲಣ ಗುಳ್ಳೆಯಂದದಿ ತೋರಿಯಡಗುವ ದೇಹವೀ' 'ಎಂಜಲೆಂಜಲು ಎಂಬರಾ ನುಡಿ ಎಂಜಲಲ್ಲವೇ' 'ಮುಕ್ತಿಗೆ ಭಕ್ತಿಯೇ ಕಾರಣವು ರಕ್ಷಿಸು' 'ಮೊದಲು ಜನನವನರಿಯೇ ಕೊನೆಗೆ ಮರಣದ ನೀತಯನರಿಯೇ ನಡುವಿನಲಿ ನಾನು ನಿಪುಣನೆಂದರೆ ನಗೆಗೇಡಲ್ಲವೇ?' ಎಂದು ಕವಿ ತನ್ನ ಭಾವನೆಗಳ ನೈಜತೆ, ಸರಳ ಸುಂದರ ಕೃತಕವಲ್ಲದ ಭಾವ ಸಮಥ್ವಾಗಿ ಒಡಮೂಡಿಸಿರುವುದು ಈ ಭಕ್ತಿ ಕಾವ್ಯದಲ್ಲಿ ತುಂಬಿದೆ".[೧೮]

ಕಾಳೇಗೌಡ ನಾಗವಾರ 'ಹರಿಭಕ್ತಿ ಸಾರ ಕೃತಿಯು ವಿಷ್ಣುವಿನ ವಿವಿಧ ಅವತಾರಗಳ ಸಾಧನೆ ಮತ್ತು ಮಹತ್ವವನ್ನು ನಮ್ಮ ಪರಂಪರಾಗತ ಪೌರಾಣಿಕ ಚಿತ್ರಣಗಳ ಹಿನ್ನೆಲೆಯಲ್ಲಿ ಕೊಂಡಾಡುತ್ತಲೇ ಧನ್ಯತೆಯಲ್ಲಿ ಮುಳುಗುವ ಭಾವುಕ ಸ್ಥಿತಿಯ ವಿವರಗಳನ್ನು ದಟ್ಟವಾಗಿ ಒಳಗೊಂಡಿದೆ. ವಿಶ್ವದ ಸಕಲ ಜೀವರಾಶಿಗಳೆಲ್ಲಕ್ಕೂ ಮಂಗಳಕರವಾದುದನ್ನೇ ಹಾರೈಸಿದ್ದಾರೆ".[೧೯]

ಕನಕನಾಯಕನು ಕನಕದಾಸರಾದ ಮೇಲೆ ಇಹಲೋಕದಲ್ಲಿ ಅಲಿಪ್ತವಾಗಿ ಬದುಕುವ ಕಲೆಯನ್ನು ತಮ್ಮ ವಿವೇಕದಲ್ಲಿ ಸ್ಮಷ್ಟವಾಗಿಸಿಕೊಂಡು ನವಜಾಗೃತಿಯನ್ನೇ ಉಂಟುಮಾಡಿದವರು.

"ಸಾಕು ಸಾಕು ಮನುಜ ಸೇವೆಯು ರಂಗಯ್ಯ ಇನ್ನು ॥ಪ॥
ಸಾಕು ಸಾಕು ಮನುಜಸೇವೆ ಮಾಡಿ ದಣಿದು ನೊಂದೆ ನಾನು
ಬೇಕು ನಿನ್ನ ಪಾದಭಜನೆ ಕೊಟ್ಟು ಸಲಹೊ ರಂಗಯ್ಯ ॥ಅನುಪಲ್ಲವಿ॥

ಹೊತ್ತರೆದ್ದು ಪೋಗಿ ಪರರ ಚಿತ್ತ ವೃತ್ತಿಯನ್ನು ತಿಳಿದು
ಹತ್ತದ್ದು ಹಲವು ಕೆಲಸ ಭೃತ್ಯನಂತೆ ಮಡಿ ರಿಕ್ತ

ಹಸ್ತದಿಂದ ಮನೆಯ ಸೇರುವೆ॥ ಆಸೆಗಾಗಿ।

ಮತ್ತೆ ಕಂಡ ಕಡೆಗೆ ತೊಲಗುವೆ। ಬಂದು ಅಪರ

ರಾತ್ರಿಯಲಿ ತಿಂದು ಒರಗುವೆ। ರಂಗಯ್ಯ ರಂಗ

ಎಂದು ವಿವೇಕೋದಯವಾಗದ ಮುನ್ನಿನ ಸ್ಥಿತಿಗಾಗಿ ಪಶ್ಚಾತ್ತಾಪಪಟ್ಟು ಆರ್ತಭಕ್ತಿಯಿಂದ ಅಂತರಂಗದ ಪರಿಶೋಧನೆಯನ್ನು ಮಾಡಿಕೊಂಡರು. ಅನಂತರ ತಾವು ಎಡವಿದಂತೆ ಬೇರೆಯವರು ಎಡವಬಾರದು. ಪರಿಸರ ಸ್ವಚ್ಚವಾಗಿರಲು ಪ್ರಸನ್ನವಾಗಿರಲು ಎಲ್ಲರೂ ವಿವೇಕವಾಗಿರಲು ತಮ್ಮ ಅನುಭವ ಹಂಚಿದರು.

ಕನಕದಾಸರು ಒಬ್ಬ ಸಮಾಜ ಸುಧಾರಕರಷ್ಟೆ ಅಲ್ಲ ಅವರು ದಿಟ್ಟವಾಗಿರುವ ಸಮಾಜವನ್ನು ತಿದ್ದಿ, ಅಸ್ಪೃಶ್ಯತೆ ಹೊಡೆದುಹಾಕುವಲ್ಲಿ ಪ್ರಯತ್ನಪಟ್ಟಂತೆ ಆತ್ಮಶಿಕ್ಷಣಕ್ಕೂ ಒತ್ತುಕೊಟ್ಟರು. ಆತ್ಮ ಶಿಕ್ಷಣದಲ್ಲಿ ವ್ಯಕ್ತಿಯ ಅಂತರಂಗ ಮತ್ತು ಬಹಿರಂಗಗಳು ಸೇರುತ್ತವೆ. ಇಂತಹ ಪರಿವರ್ತನೆಗೆ ಅವರು ಆರಿಸಿಕೊಂಡ ಮಾರ್ಗ ಭಕ್ತಿ. 'ಹರಿಭಕ್ತಿಸಾರ'ದ ಮೂಲಕ ಅವರು ಸಮಾಜದ ಬದಲಾವಣೆ ಬಯಸಿದವರು.

ವೈಷ್ಣವ ಮತ್ತು ಮಧ್ವಮತ ತತ್ವಗಳನ್ನು ಅವರು ಒಪ್ಪಿದರೂ, ಮತತತ್ವಕ್ಕಿಂತ ಭಕ್ತಿಗೆ ಒತ್ತು ಕೊಡುವ ಹರಿಹರರಲ್ಲಿ ಬೇಧವೆಣಿಸದ ಭಾಗವತ ಮನೋಧರ್ಮವನ್ನು ಅವರಲ್ಲಿ ಕಾಣಬಹುದು. ಆರು ಬಲ್ಲರು ಹರಿಹರಾದಿಗಳ ಮಹಿಮೆಯನ್ನು ಎಂದು ಹೇಳುತ್ತಾ ಹರಿಹರರ ಸಮಾನತೆಯನ್ನು ಎತ್ತಿ ಹಿಡಿದಿದ್ದಾರೆ.

೪.೧.೪.೨ ಆಧ್ಯಾತ್ಮ ಮತ್ತು ಆತ್ಮ ಶೋಧನೆ

ಆಧ್ಯಾತ್ಮ ಹಾಗೂ ಆತ್ಮಶೋಧನೆ ಕನಕದಾಸರ ಕೃತಿಗಳನ್ನು ಅಧ್ಯಯನಕಾರರು ಮಾಡಿದ ಅಧ್ಯಯನಗಳಲ್ಲಿ ಬಹು ವಿಧವಾಗಿ ಮೂಡಿಬಂದಿರುವುದನ್ನು ಕಾಣಬಹುದು. ಆತ್ಮಶೋಧ ಎಂದರೆ ಆತ್ಮ ಪರೀಕ್ಷಣ ಆಧ್ಯಾತ್ಮ ಮತ್ತು ಆತ್ಮಶೋಧನೆ ಒಂದೇ ನಾಣ್ಯದ ಎರಡು ಮುಖಗಳಿದ್ದಹಾಗೆ. ಅವು ಅಂತರ್ಮುಖಿಯಾಗಿ ತನ್ನಲ್ಲಿರುವ ಜನ್ಮ ಜನ್ಮಾಂತರಗಳಲ್ಲೂ ಅಂಟಿಕೊಂಡು ಬಂದಿರುವ, ಐಹಿಕ ಕಲ್ಮಷಗಳನ್ನು ತೊಳೆದುಕೊಂಡು ಆತ್ಮವನ್ನು ಪರಿಶುದ್ಧ ಮಾಡಿಕೊಂಡು. ಆಮೂಲಕ ಸಾಧನೆಯನ್ನು ಸುಗಮ ಮಾಡಿಕೊಳ್ಳುವುದು. ಆತ್ಮಶೋಧದ ಗುರಿ ಶ್ರೇಯಸ್ಸನ್ನು ಮೆಟ್ಟಿ, ಶ್ರೇಯಗಳಿಗೆ ಅನುಗುಣವಾಗಿ ಬೇರೆ ಬೇರೆಯಾಗಿರುತ್ತದೆ. ನಮ್ಮ ಭಾರತೀಯ ದರ್ಶನ ಶಾಸ್ತ್ರಗಳನ್ನು ಅಥವಾ ಸಿದ್ಧಾಂತಗಳನ್ನು ಗುರುತಿಸುವಾಗ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಎಂದು ಗುರುತಿಸುತ್ತವೆ. ಕನಕದಾಸರು ವ್ಯಾಸರಾಯರನ್ನು ಗುರುವೆಂದು ಸ್ವೀಕರಿಸಿ, ದ್ವೈತ ಮತ ಸಂಪ್ರದಾಯವನ್ನು ಅಂಗೀಕರಿಸುವ ಮುನ್ನ ಅವರು ವಿಶಿಷ್ಟಾದ್ವೈತ ಸಂಪ್ರದಾಯಕ್ಕೆ ಒಲಿದವರು ಎಂದು ಸರ್ವಸಾಮಾನ್ಯವಾಗಿ ಅಂಗೀಕೃತವಾಗಿದೆ. ಮೋಹನ ತರಂಗಿಣಿಯಲ್ಲೂ, ನೃಂಸಿಹಸ್ತವದಲ್ಲೂ, ಕನಕದಾಸರ ರಾಮಾನುಜಭಕ್ತಿ ಹಾಗೂ ವೈಷ್ಣವ,

ವಿಶಿಷ್ಟಾದ್ವೈತ ತತ್ವಪ್ರವಣತೆ ಸ್ಪಷ್ಟ ಗೋಚರವಾಗಿದೆ. ಒಂದು ಕಾಲದಲ್ಲಿ ರಾಮಾನುಜ ತತ್ವಕ್ಕೆ ನಿಷ್ಠೆ ತೋರಿ ಮುಂದೆ ಇನ್ನೊಂದು ಕಾಲದಲ್ಲಿ ಪುರಂದರರ ಪರಿಚಯವಾಗಿ, ಅದರ ಫಲವಾಗಿ ವ್ಯಾಸರಾಯ ಗುರುಗಳಲ್ಲಿ ಶಿಷ್ಯತ್ವ ಪ್ರಾಪ್ತವಾಗಿ, ಮಾಧ್ವ ಸಂಪ್ರದಾಯದ ಪ್ರಮೇಯಗಳಲ್ಲಿ ನಿಷ್ಠೆ ತೋರಿದ್ದರಿಂದ, ಒಂದು ಮತವನ್ನು ಕೈಬಿಟ್ಟು ಇನ್ನೊಂದು ಮತವನ್ನು ಸ್ವೀಕಾರ ಮಾಡಿದರೆಂದು ಕನಕದಾಸರ ವಿಷಯದಲ್ಲಿ ಹೇಳಲು ಸಾಧ್ಯವಿಲ್ಲ. ಪುರಂದರ ದಾಸರು ಬ್ರಾಹ್ಮಣ ಕುಲಜರಾಗಿದ್ದರಿಂದ ಅವರು ಗುರುವಿನಿಂದ ದಾಸ ದೀಕ್ಷೆಯ ಜೊತೆಗೆ, ವಿಠಲಾಂಕಿತವೂ ಪ್ರಾಪ್ತವಾಯಿತು. ಕನಕದಾಸರು ಕುರುಬರ ಕುಲದವರಾಗಿರುವುದರಿಂದ ಅವರಿಗೆ ದೀಕ್ಷೆಯೂ ಇಲ್ಲಾ, ಅಂಕಿತವೂ ಇಲ್ಲ. ಕನಕದಾಸರು ತಮ್ಮ ರಚನೆಗಳಲ್ಲಿ ಆದಿಕೇಶವ, ನೃಸಿಂಹ ಇತ್ಯಾದಿ ಪರ್ಯಾಯ ನಾಮಗಳನ್ನು ಇಟ್ಟುಕೊಂಡಿದ್ದಾರೆ. ಬಹುಶಃ ಈ ಕಾರಣದಿಂದ ಪುರಂದರದಾಸರಂತೆ ತಮ್ಮ ರಚನೆಗಳಲ್ಲಿ ಮುಖ್ಯವಾಗಿ ಕೀರ್ತನೆಗಳು ಹಾಗೂ ಹರಿಭಕ್ತಿಸಾರದಲ್ಲಿ ಮಧ್ವಸಿದ್ಧಾಂತದ ಪ್ರಮೇಯಗಳನ್ನು ಸಮಗ್ರವಾಗಿ ಅಳವಡಿಸಿಕೊಂಡಿರುವುದು ಕಂಡುಬರುವುದಿಲ್ಲ. ವಿಶಿಷ್ಟಾದ್ವೈತಕ್ಕೂ, ದ್ವೈತಕ್ಕೂ ಸರಿಸಮಾನ ಎನ್ನಬಹುದಾದ ನಿಚ್ಚಳವಾದ ಹರಿಭಕ್ತಿಗೆ ಇವರ ಪೂರ್ವೋಕ್ತ ಕೃತಿಗಳಲ್ಲಿ ಪ್ರಾಧಾನ್ಯವಾಗಿದೆ.

ಕನಕದಾಸರು ಕೃಷ್ಣದೇವರಾಯನ ಕಾಲದ ವೈಷ್ಣವ ಪ್ರಭಾವದಿಂದ ಒಂದು ಕಾಲದಲ್ಲಿ ವೈಷ್ಣವ ಪ್ರಾವಣತೆಯನ್ನು ತೋರಿ, ತದನಂತರ ಪುರಂದರದಾಸರ ಸಹವಾಸ–ಸಾಹಚರ್ಯ ಕಾರಣದಿಂದ ವ್ಯಾಸರಾಯರನ್ನು ಗುರುವೆಂದು ಸ್ವೀಕರಿಸಿ, ತಮ್ಮ ರಚನೆಗಳಲ್ಲಿ ಹರಿಭಕ್ತಿಯನ್ನೇ ಪ್ರಧಾನವಾಗಿ ಎತ್ತಿಹಿಡಿದಿದ್ದಾರೂ, ಶೈವ ವಿರೋಧಿಯಾಗಿರಲಿಲ್ಲ. ಇದಕ್ಕೆ ಕಾರಣ ಶೈವ ಪರಂಪರೆಯ ಬೀರಪ್ಪ ದೇವರನ್ನು ಕುಲದೈವವಾಗಿ ಅಂಗೀಕರಿಸಿದ್ದ ಕುರುಬ ಮನೆತನದಲ್ಲಿ ಜನ್ಮಧಾರಣ ಮಾಡಿದ್ದು, ಕಟ್ಟಾ ವೈಷ್ಣವರು ಮಾಧ್ವ ವೈಷ್ಣವರಾದರೂ, ದೇವತಾ ಕಕ್ಷೆಯಲ್ಲಿ ಶಿವನಿಗೆ ಪ್ರಮುಖ ಸ್ಥಾನವನ್ನು ನೀಡಿದ್ದಾರೆ. ಮಾತ್ರವಲ್ಲ ಹರಿಭಕ್ತಿಯ ವರ್ಧನೆಗೆ ಶಿವಕೃಪೆ ಬೇಕೆಂದು ಶಿವನನ್ನು ಬೇಡಿಕೊಳ್ಳುವ ಹರಿದಾಸರ ಕೀರ್ತನೆಗಳು ಹಲವು ಇವೆ. ಈ ಎಲ್ಲಾ ಕಾರಣಗಳಿಂದ ಮತಸಂಬಂಧ ಚರ್ಚೆಯಿಂದ, ಕನಕದಾಸರು ಸಾಂಪ್ರದಾಯಿಕ ಭಾಗವತ ಧರ್ಮದ ಅನುಯಾಯಿ ಅಲ್ಲದಿದ್ದರೂ ಅದರ ಸಮನ್ವಯ ದೃಷ್ಟಿಯನ್ನು ಮೈಗೂಡಿಸಿಕೊಂಡವರು. ಶ್ರೀ ವೈಷ್ಣವ ಅಥವಾ ಮಾಧ್ಯ ವೈಷ್ಣವ ಕ್ರಮಬದ್ಧ, ದೀಕ್ಷೆ ಪಡೆಯದ ಕನಕದಾಸರು ಕೇವಲ ಭಾಗವತೋತ್ತಮರಾಗಿ ಹರಿಭಕ್ತಿಗೆ ಪ್ರಾಧಾನ್ಯ ಕೊಟ್ಟು, ಸ್ವತಂತ್ರ ವ್ಯಕ್ತಿತ್ವದ ಆಧ್ಯಾತ್ಮಿಕ ಸಾಧಕರಾಗಿದ್ದವರು.

ಕನಕದಾಸರ ಮತಧರ್ಮದ ಅಧ್ಯಯನಗಳ ಒಲವು ನಿಲುವುಗಳನ್ನು ನೋಡಲಾಗಿ ಅವರ ಆತ್ಮಶೋಧದ ಅಧ್ಯಾತ್ಮಿಕ ಪ್ರವೃತ್ತಿಯ ನಿಲುವು ಇದೆ. ಇದಕ್ಕೆ ಕಾರಣ ಅವರ ದೀಕ್ಷಾಪೂರ್ವದ ಭಾಗವತ ಸಂಪ್ರದಾಯ, ನಿಷ್ಠೆಯ ವಿಶಾಲ ಮನೋಧರ್ಮ, ಸಮನ್ವಯದೃಷ್ಟಿಗಳೇ ಕಾರಣವಾಗಿವೆ. ಯೋಗಸಿದ್ಧಿಯನ್ನು ಪಡೆದವನೇ ಯೋಗಿ ತಾನಾರು, ದೇಹವಾರು, ದಿವ್ಯ ಜ್ಞಾನದಲಿ, ತಿಳಿದಾತ

ಪರಮಯೋಗಿ' ಎಂಬ ಪಲ್ಲವಿಯಿಂದ ಮೊದಲಾಗುವ ಕೀರ್ತನೆಗಳಲ್ಲಿ ಪ್ರತಿಪಾದಿತವಾಗಿರುವ ದೇಹಾತ್ಮವಿವೇಕ ಕನಕದಾಸರ ಆದ್ಯಾತ್ಮ ಪ್ರವೃತ್ತಿಯನ್ನೇ ಎತ್ತಿಹಿಡಿದಿವೆ.

ಆಧ್ಯಾತ್ಮ ಸಾಧಕನಿಗೆ ಆತ್ಮಶೋಧ ಅಥವಾ ಆತ್ಮ ಪರೀಕ್ಷೆ ಸಾಧನ ಸೋಪಾನದ ಮೊದಲ ಮೆಟ್ಟಿಲು. ತನ್ನ ಅರಿವಿಲ್ಲದೆ ಬುದ್ಧಿ ಪೂರ್ವಕವಾಗಿಯಲ್ಲದೆ ತಾನು ಎಸಗಿರಬಹುದಾದ ಪಾಪಕಾರ್ಯಗಳು ಜನ್ಮಾಂತರದ ಕರ್ಮಫಲ ಎಂದು ಸಾಧಕ ನಂಬುತ್ತಾನೆ.

'ಹಲವು ಜನ್ಮದ ಪಾಪವೆನಿಪ
ಸೊಕ್ಕಾನೆ ಸೊಂಡಿಲು ಸುತ್ತಿ ಬಂದು
ಸೀವರಿಸುತಿದೆಕೊ: ಮಲೆವ
ದುಷ್ಕೃತವೆಂಬ ಗಜಕೆ ಕೇಸರಿಯೊಂಬ
ಛಲಬಿರುದು ತಾಳ್ದ ದೇವರದೇವ ನಿನ್ನೆ
ಕಡಹಾಯಿಸೊ ತಡಿಯ ಸೇರಿಸೊ'

ಎಂದು ಆರ್ತರಾಗಿ ಆದಿಕೇಶವನನ್ನು ಕನಕರು ಬೇಡಿಕೊಂಡಿದ್ದಾರೆ. ಶಿವಶರಣರಲ್ಲಿ ಕಾಣುವ ಸತಿ-ಪತಿ ಭಾವದ ಪರಮಾತ್ಮ ಸಮಾಗಮದ ಹೆಬ್ಬಯಕೆಯನ್ನು ಆತ್ಮತೆಯನ್ನು ಕನಕದಾಸರಲ್ಲೂ ಕಾಣುತ್ತೇವೆ. "ಇಂದು ನೀ ಕರೆದು ತಾರೆ ಬಾರದೆ ಶ್ರೀ ಗೋವಿಂದ ತಾ ಮುನಿದು ಇರೆ- ವಿರಹದಲಿ ನಾನೊಂದು ಸೈರಿಸಲಾರೆ- ತಂದು ನೀ ತೋರೆ" "ಕರೆತಂದ ಕಾಮಿನಿ ಕಮಲಜಪಿತನ" ಎಂದು ಹಲವಾರು ಕೀರ್ತನೆಗಳಲ್ಲಿ ಕನಕದಾಸರು ಭಕ್ತಿಯ ಉತ್ಕಟತೆಯನ್ನು ಹಂಬಲಿಸುತ್ತಾರೆ. ಇದು ಕನಕದಾಸರ ಅಧ್ಯಾತ್ಮ, ಆತ್ಮ ಶೋಧನೆಯ ತುತ್ತತುದಿ ಎನ್ನಬಹುದು.

೪.೧.೫ ನೃಸಿಂಹಸ್ತವ

ಕನಕದಾಸರು ರಚಿಸಿರುವ ಕಾವ್ಯಕೃತಿಗಳಲ್ಲಿ ಮೊದಲನೆಯ ಕೃತಿ ಎಂದು ಹೇಳಲಾಗುತ್ತಿದೆ. ಆರ್. ನರಸಿಂಹಾಚಾರ್ಯರು ಈ ಪ್ರತಿಗಳನ್ನು ನೋಡಿರುವುದಾಗಿ ಹೇಳಿಕೊಂಡಿದ್ದಾರೆ. ಇದು ೯೭ ಸಾಂಗತ್ಯ ಪದ್ಯಗಳಿಂದ ಕೂಡಿದ ಚಿಕ್ಕ ಕೃತಿ. ನರಸಿಂಹ ಸ್ತುತಿಯೇ ಈ ಕಾವ್ಯ ಕೃತಿಯ ಕಥಾವಸ್ತು. ಆರಂಭದಲ್ಲಿ ರಾಮನುಜರನ್ನು ನೆನೆದು 'ಕಾಗಿನೆಲೆಯರಂಗ'ನ ಮುದ್ರೆಹೊಂದಿದೆ. ಈ ಕೃತಿಯು ವ್ಯಾಸರಾಯರ ಸಂಪರ್ಕಕ್ಕೆ ಬರುವ ಮೊದಲೇ ರಚಿಸಿದಂತೆ ಕಂಡುಬರುತ್ತದೆ ಎಂದು ಚಂದ್ರಕಾಂತ ಬಿಜ್ಜರಗಿಯವರು ಅಭಿಪ್ರಾಯ ಪಡುತ್ತಾರೆ.

೪.೧.೬ ಕನಕದಾಸರ ಕೀರ್ತನೆ ಮುಂಡಿಗೆ ಉಗಾಭೋಗಗಳ ಲೋಕದೃಷ್ಟಿ :

ಕನಕದಾಸರ ಕೀರ್ತನೆಗಳ ವೈಶಿಷ್ಟತೆಗಳು :

ಪುರಾಣ ಶ್ರವಣಕ್ಕಿಂತ ಹೆಚ್ಚು ಜನಪ್ರೀಯವಾಗಿರುವ ಹವ್ಯಾಸ ಹರಿಕಥೆ ಶಿವಕಥೆ, ಜೀನಕಥೆ ಮೊದಲಾದ ಹೆಸರುಗಳಿಂದ ಪ್ರಸಿದ್ದವಾಗಿವೆ. ವಿಷಯ ಕಥಾ ಕಾಲಕ್ಷೇಪವಾದರೆ, ಶೋತೃಗಳನ್ನು

ಭಗವದ್ ಭಕ್ತರೆಂದು, ಕಥೆ ಹೇಳುವವರನ್ನು ದಾಸರು ಭಾಗವತರು ಎಂದು ಹೇಳುವ ವಾಡಿಕೆ ಇದೆ. ಭಗವನ್ನಾಮ ಸಂಕೀರ್ತನೆ ಇಲ್ಲಿ ಪ್ರಮುಖವಾದುದರಿಂದ ಈ ರಚನಾಕ್ರಮವನ್ನು ಕೀರ್ತನವೆಂದು ಕರೆಯುತ್ತಾರೆ. ದೇವರು, ಇಷ್ಟದೈವ ಕುರಿತು ರಚಿಸಿದವರಿಗೆ ಕೀರ್ತನಾಕಾರರೆಂದು ಕರೆಯುತ್ತಾರೆ ಈ ಕೀರ್ತನೆಯ ರಚನಾ ಕಲೆ ಸಾಕಷ್ಟು ಪ್ರಾಚೀನವಾಗಿದೆ. ನವವಿಧ ಭಕ್ತಿಗಳಲ್ಲಿ ಕೀರ್ತನವೂ ಒಂದೆನಿಸಿದ್ದು ಅದರ ಮೂಲಕ ಹರಿಭಕ್ತಿಯನ್ನು ವ್ಯಕ್ತಪಡಿಸುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ದಾಸರು ಹಾಡಿದ ಪದಗಳಿಗೆ ಸಾಮಾನ್ಯವಾಗಿ ಕೀರ್ತನೆಗಳೆಂದು ಕರೆಯುತ್ತಾರೆ ಇನ್ನೊಂದರ್ಥದಲ್ಲಿ ದಾಸರ ಪದಗಳು ಎನ್ನುವುದುಂಟು ಪ್ರತಿಯೊಂದು ಪದಕ್ಕೆ ರಾಗ ಮತ್ತು ತಾಳ ಅವಶ್ಯ ಇವು ಮೂಲ ಕರ್ನಾಟಕ ಸಂಗೀತ ಶೈಲಿಯನ್ನು ಹೋಲುತ್ತವೆ. ಇವು ಪಲ್ಲವಿ ಮತ್ತು ಅನುಪಲ್ಲವಿಗಳಿಂದ ಕೂಡಿದ್ದು, ಭಾವಾರ್ಥ ಇಲ್ಲವೆ ಸಾರಾರ್ಥವನ್ನು ಹೊಂದಿರುತ್ತವೆ.

ಕನಕದಾಸರು ರಚಿಸಿದ ಕೀರ್ತನೆಗಳು ವಿಶಿಷ್ಟ ಕಾವ್ಯಗಳಾಗಿದ್ದು ಸಮಾಜ ಮುಖಿಯಾಗಿ ರಚನೆಯಾಗಿವೆ ಅವುಗಳ ಲಕ್ಷಣಗಳು ಈ ರೀತಿಯಾಗಿವೆ.

- ಇವುಗಳು ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳಿಂದ ಸಂಯೋಜಿತಗೊಂಡಿರುತ್ತವೆ.
- ಸಾಮಾನ್ಯವಾಗಿ ನುಡಿಗಳು ಮೂರು, ಐದು, ಏಳು ಹೀಗೆ ಬೆಸಸಂಖ್ಯೆಯಲ್ಲಿ ಇರುತ್ತವೆ ಕೊನೆಯ ನುಡಿಯ ಮೂರನೆಯ, ಇಲ್ಲವೆ ನಾಲ್ಕನೆಯ ಸಾಲಿನಲ್ಲಿ ಆ ದಾಸರ ಅಂಕಿತನಾಮ ಇರುತ್ತದೆ. ಈ ಅಂಕಿತದ ಆಧಾರದಿಂದ ಯಾವ ದಾಸರದೆಂದು ಖಚಿತವಾಗಿ ಹೇಳಬಹುದು. ಕನಕದಾಸರ ಕೀರ್ತನೆಗಳಲ್ಲಿ. ಕಾಗಿನೆಲೆಯಾದಿಕೇಶವ, ಬಾಡದಾದಿಕೇಶವ, ಕಾಗಿನೆಲೆಯರಂಗನೆಂದು, ಪರ್ಯಾಯ ನಾಮಳನ್ನು ಕಾಣಬಹುದಾಗಿದೆ.
- ಸಾಮಾನ್ಯವಾಗಿ ಭಗವಂತನನ್ನು ಕುರಿತು ಹಾಡಿ ಹೊಗಳುವ ಸ್ತುತಿ ರೂಪದ ಭಕ್ತಿ ಪ್ರಧಾನ ಪದ್ಯಗಳಾಗಿವೆ. ಇವುಗಳಲ್ಲಿ ಏಕಾಂತಿ ಬಗೆ ಗೀತೆಗಳು ಗಮನಸೆಳೆಯುತ್ತವೆ.
- ಇದರಲ್ಲಿ ಕೆಲವು ರಚನೆಗಳು ಗಾಯನ ಮುಖೇನ ಭಗವಂತನನ್ನು ಸಂಕೀರ್ತಿಸುವ ಭಕ್ತಿ ಪ್ರಧಾನ ಹಾಡುಗಬ್ಬವಾಗಿವೆ.
- ಇವುಗಳಲ್ಲಿ ಸಮರ್ಪಣಾ ಮನೋಭಾವದ ರಚನೆಗಳು ಗಮನಾರ್ಹವಾಗಿವೆ.
- ಈ ಕೀರ್ತನೆಗಳನ್ನು 'ದೇವರನಾಮೆಗಳೆಂದು ಹೇಳುವ ರೂಡಿ ಇದೆ.
- ಇಲ್ಲಿ ದೇವರನ್ನು ಮಾತ್ರ ಕೀರ್ತಿಸಿ ಹಾಡಿ ಹೂಗಳಿಂದ ರಚನೆಗಳೆಂದು ಭಾವಿಸಬೇಕು.

ಕನಕದಾಸರ ಕೀರ್ತನೆಗಳು ಸಮಾಜಕ್ಕೆ ನೇರವಾಗಿ ಹೊಂದಿಕೊಳ್ಳುತ್ತವೆ. ತಾವು ಸಂಚರಿಸುವಾಗ ಕಂಡ ಅನೇಕ ಸನ್ನಿವೇಶಗಳನ್ನು ತಮ್ಮ ಕೀರ್ತನೆಯಲ್ಲಿ ಬಿಂಬಿಸಿದ್ದಾರೆ. ಲೌಕಿಕ

ವಿಷಯಗಳನ್ನು ವಸ್ತುವನ್ನಾಗಿ ಪಡೆದುಕೊಂಡು ಪಾರಮಾರ್ಥಿಕ ಅರ್ಥವನ್ನು ಅಭಿವ್ಯಕ್ತಿಸುವ ಕೀರ್ತನೆಗಳು ಸಾಕಷ್ಟಿವೆ. ಉದಾಹರಣೆಗೆ: ಕನಕದಾಸರ ಕಾಲದಲ್ಲಿ ಆಗಿದ್ದಿರಬಹುದಾದ, ಭೂಕಂಪವನ್ನು ಮನಸ್ಸಿನಲ್ಲಿಟ್ಟುಕೊಂಡು 'ಏಕೆ ನಡುಗಿದೆ ತಾಯಿ ಭೂಮಿ ನಡುರಾತ್ರಿಯೊಳ್' ಪೊಡವಿಗೊಡೆಯನರಾಣಿ ಪರಮಕಲ್ಯಾಣಿ ಎಂದು ಭೂಗ್ರಹವನ್ನು ಶ್ರೀಹರಿಯ ರಾಣಿ ಭೂದೇವಿಯೆಂದು ಸಂಭೋದಿಸಿದ್ದಾರೆ. ಇಂತಹ ಕೀರ್ತನೆಗಳಿಗೆ, ಅಧ್ಯಾತ್ಮಿಕ ಪಾರಮಾರ್ಥಿಕ ತಿರುವನ್ನು ಕೂಡುತ್ತಾರೆ.

"ಉತ್ತಮರ ಹೊಟ್ಟೆಯಲ್ಲಿ ಬಗುಳೊ ಶ್ವಾನವು ಹುಟ್ಟಿ
ಹೆತ್ತವರ ನಿರ್ಬಂಧಕೊಳಗು ಮಾಡಿ
ಅತ್ತೆ ಮಾವರ ಕೀರ್ತಿಯ ಕೊಂಡಾಡುವಧಮರ
ಹೊತ್ತು ಇರಲಾರೆನೆನುತ ಮತ್ತೆ ನಡುಗಿದೆಯ"

ಎಂದು ಮುಂತಾಗಿ ಲೋಕಾನುಭವದ ಹಿನ್ನೆಲೆಯಲ್ಲಿ ಕಾರಣಗಳನ್ನು ಕೊಡುತ್ತಾ ಒಂದು ಆತ್ಮೀಯ ವಾತಾವರಣವನ್ನು ಸೃಷ್ಟಿಸಿದ್ದಾರೆ.

ಕನಕದಾಸರ ಕೀರ್ತನೆಗಳನ್ನು ಸಂಗ್ರಹಿಸಿ, ಅವುಗಳನ್ನು ಮುದ್ರಿಸಿ ಜನರ ಕೈಗಿಡುವಲ್ಲಿ ಅನೇಕ ಮಹನಿಯರು ಶ್ರಮವಹಿಸಿದ್ದಾರೆ. ಅವರಲ್ಲಿ ಹರ್ಮನ್ ಮೊಗ್ಲಿಂಗ್, ಸುಬೋಧರಾಮರಾಯರು, ಪಾವಂಜೆ ಗುರುರಾಯರು, ಬೇಟಗೇರಿ ಕೃಷ್ಣಶರ್ಮ, ಹುಚ್ಚೂರಾವ್ ಬೆಂಗೇರಿ, ಕೆ.ಎಂ. ಕೃಷ್ಣರಾಯ, ದೇ.ಜ.ಗೌ., ಸುಧಾಕರ, ಎಚ್.ಜೆ. ಲಕ್ಕಪ್ಪಗೌಡರು ಪ್ರಮುಖರಾಗಿದ್ದಾರೆ.

ಕನಕದಾಸರ ಕೀರ್ತನೆಗಳನ್ನು ಒಟ್ಟುಗೂಡಿಸಿ, ಅವುಗಳ ಒಳಹೂರಣವನ್ನು ನೋಡ ಹೊರಟರೆ, ಸಮಾಜದ ವಿಡಂಬನೆ, ಪರಿಶುದ್ಧ ಬದುಕಿನ ನಡೆ-ನುಡಿಗಳನ್ನು ಎಳೆ-ಎಳೆಯಾಗಿ ಬಿಚ್ಚಿಡುತ್ತ ಹೋಗುತ್ತವೆ. ಕೀರ್ತನೆಗಳ ಕುರಿತಾಗಿ ಹಲವಾರು ಅಭಿಪ್ರಾಯಗಳು ಹೀಗಿವೆ. ಅಧ್ಯಯನಕಾರರ **ಜಗನ್ನಾಥ ಗೇಣನ್ನವರ** ಕೀರ್ತನ ಸಾಹಿತ್ಯ ಕುರಿತು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

"ಕನಕದಾಸರ ಕವಿ ಪ್ರತಿಭೆ ಹಲವು ಕಾವ್ಯಗಳಲ್ಲಿ ಹಂಚಿ ಹೋಗಿದ್ದರೂ ಅದು ತನ್ನೆದ್ದಲ್ಲ ಶಕ್ತಿ ಸಮೃದ್ಧಿ ಮತ್ತು ಸಹಜತೆಗಳೊಡನೆ ಮೈವೆತ್ತಿರುವುದು ಅವರ ಕೀರ್ತನೆಗಳಲ್ಲಿ ಕಾಣಬಹುದಾಗಿದೆ. ಕನಕದಾಸರ ಉಪಮಾನ, ಉಪಮೇಯಗಳು, ದೃಷ್ಟಾಂತಗಳು ರಮ್ಯವಾಗಿವೆ.

ಕೆ.ಜಿ. ನಾಗರಾಜಪ್ಪನವರು "ಕನ್ನಡಸಾಹಿತ್ಯದಲ್ಲಿ ಕೀರ್ತನೆ ಒಂದು ವಿಶಿಷ್ಟ ಪ್ರಕಾರ ಸಂಗೀತ, ಸಾಹಿತ್ಯ, ನೃತ್ಯ, ಕಲೆಯೊಂದಿಗೆ ಭಕ್ತಿಸಾಮರಸ್ಯಗೊಂಡ ಅಪೂರ್ವವಾದ ಮಾದ್ಯಮವೇ ಕೀರ್ತನೆ"[೨೧]

ಎಚ್.ಜೆ. ಲಕ್ಕಪ್ಪಗೌಡರು ದೈವಲೀಲೆಯ ವರ್ಣನೆ, ಆತ್ಮನಿವೇದನೆ ಮತ್ತು ಸಮಾಜ ವಿಮರ್ಶೆಗಳು ಕನಕಕೀರ್ತನೆಗಳ ಮೂರು ಮುಖ್ಯಗುಣಗಳು.[೨೨]

ಶಿವಾನಂದ ಕೆಳಗಿನಮನಿ ಕೀರ್ತನೆಗಳಲ್ಲಿ "ಸಾಮಾಜಿಕ ವೈಷಮ್ಯದ ಸ್ವರೂಪ ಭಕ್ತನ ರ್ಧತೆಯ ಧ್ವನಿಯೂ ಮುಖ್ಯವಾಗಿವೆ

ರಂ.ಶ್ರೀ. ಮುಗಳಿಯವರು "ಭಕ್ತಿ ಕವಿಯ ಭಾವಸಂಪತ್ತಿನ ಮೂಲ ಉಗಮವು ಪರಮಾತ್ಮನ ಅಸ್ತಿತ್ವದ ಅನುಭಾವ ಮತ್ತು ನಿತಾಂತ ಶ್ರದ್ಧೆ, ಅದರಿಂದ ಪ್ರಾಪ್ತವಾಗುವ ನಿರ್ಭೀತಿ ನಿಶ್ಚಂಕೆಗಳಲ್ಲಿ ಇರುತ್ತವೆ. ಈ ಎಲ್ಲಾ ಅಭಿಪ್ರಾಯವನ್ನು ನೋಡಲಾಗಿ ಭಕ್ತಿ, ಅಧ್ಯಾತ್ಮಿಕತೆ ಸಮಾಜವನ್ನು ತಿದ್ದುವ ಆಶಯಗಳ ನೆಲೆಗಟ್ಟಿನ ಮೇಲೆ ರಚಿತವಾಗಿರುವವು ಎಂದು ಹೇಳಬಹುದು, ಇವುಗಳಸಮಾಜದ ಮೇಲೆ ಆಗುವ ಪರಿಣಾಮವನ್ನು ನೋಡಲಾಗಿ ಅಂತರಂಗದ ಪರಿಭಾವನೆ ಗಟ್ಟಿಗೊಳ್ಳುತ್ತವೆ. ಧರ್ಮ, ವಿಚಾರವು ಸಮನ್ವಿತವಾಗಿ ಭಕ್ತಿಯ ಜ್ಞಾನವು ಬೆಳೆದುಬರುತ್ತವೆ. ಸಾಮಾಜಿಕ ಮೌಲ್ಯಗಳಾದ ಸಮಾನತೆ, ಜಾತ್ಯಾತೀತತೆ, ಧರ್ಮಸಮನ್ವಯತೆ ಬೆಳೆದು, ಜೊತೆಗೆ ಅಂತರಂಗದ ಆತ್ಮಶಕ್ತಿ, ಬಹಿರಂಗದ ಪರಮಾತ್ಮ ಶಕ್ತಿಯೊಡನೆ ಬೆರೆಯುವ ಸಮಾಯೋಗದ ಪರಿಕಲ್ಪನೆ ಈ ಕೀರ್ತನೆಗಳ ವೈಶಿಷ್ಟವಾಗಿದೆ.

"ಕನಕದಾಸರ ಕೀರ್ತನೆಗಳಲ್ಲಿ ಕಾವ್ಯ ಗುಣ ಒಂದು ಕೈ ಮಿಗಿಲಾಗಿಯೇ ಇರುವಂತೆ ತೋರುತ್ತದೆ" ಎಂಬ ವಿಮರ್ಶಕರ ಮಾತುಗಳು ಕನಕದಾಸರ ಕೀರ್ತನೆಗಳ ಅಂತರಂಗದ ಸಂಪತ್ತಿಗೆ ಹಿಡಿದ ಕನ್ನಡಿಯಾಗಿದೆ. ಇವರ ಕೀರ್ತನೆಗಳು ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣಗಳಿಂದ ಪ್ರಭಾವಿತಗೊಂಡರೂ, ಅಂತರಾರ್ಥದಲ್ಲಿ ಸಮಕಾಲೀನ ಜನರ ಬದುಕಿನ ಅನುಭವಗಳಿಂದ ವಸ್ತು ಪಡೆದುಕೊಂಡಿದ್ದರೂ ಪ್ರಧಾನವಾಗಿ ಭಕ್ತಿಯನ್ನೇ ಸಾರುತ್ತವೆ. ವಿಶಿಷ್ಟವಾದ ಅವರ ಕೀರ್ತನೆಗಳ ಮೂಲಕ ಅವರ ಬದುಕನ್ನು ಹಾಗೂ ಸಮಕಾಲೀನ ಸಂಸ್ಕೃತಿಯ ಬಿಂಬವನ್ನು ನೋಡಲು ಸಹಾಯಕವಾಗುತ್ತವೆ.

ಕನಕದಾಸರ ಮುಂಡಿಗೆಗಳು.

ಕನಕದಾಸರ ಸಾಹಿತ್ಯದಲ್ಲಿ ಕೀರ್ತನೆಗಿಂತ ಮುಂಡಿಗೆಗಳು ಭಿನ್ನವಾಗಿವೆ. ಕನಕದಾಸರು ಒಗಟಿನಂತಹ ಹಾಡು, ಬೆಡಗಿನ ಪದಗಳನ್ನು ಮುಂಡಿಗೆಗಳೆಂದು ಕರೆಯುತ್ತಾರೆ ಕನಕದಾಸರ ಕೆಲವು ಕೀರ್ತನೆಗಳು ಸಾಮಾನ್ಯರಿಗೂ ಸುಲಭವಾಗಿ ಅರ್ಥವನ್ನು ಬಿಚ್ಚಿಕೊಳ್ಳುತ್ತವೆ. ಆದರೆ ಮುಂಡಿಗೆಗಳು ಗೂಡಾರ್ಥವನ್ನು ಹೊಂದಿವೆ. ಹೀಗಾಗಿ ಕನಕದಾಸರಲ್ಲಿಯ ವಿದ್ವತಿಕೆಯನ್ನು ಅರಿತ ಜನರು "ಕನಕನನ್ನು ಕೆಣಕಬೇಡ, ಕೆಣಕಿ ತಿಣಕಬೇಡ" ಎಂಬ ಗಾದೆಯನ್ನು ನಿರ್ಮಿಸಿದರು. ಕನಕದಾಸರು ರಚಿಸಿದ ಮುಂಡಿಗೆಗಳು ಪಂಡಿತರಿಗೆ ಸಿಂಹ ಸ್ವಪ್ನವೇ ಆಗಿವೆ ಎಂಬುವುದನ್ನು ಈ ಕೆಳಗಿನ ಅಧ್ಯಯನಕಾರರ ಅಧ್ಯಯನದಿಂದ ತಿಳಿದು ಬರುತ್ತದೆ

ಬುರ್ಲಿ ಬಿಂದು ಮಾಧವ "ಆಸ್ತಿಕ್ಯ ಬುದ್ದಿಯನ್ನು ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಆತ್ಮಾನುಭವವನ್ನು ಜನಸಾಮಾನ್ಯರಲ್ಲಿ ಪ್ರಸಾರ ಮಾಡಲು ಹೊರಟ ಕನಕದಾಸನು ಮಹಾವಿದ್ವಾಂಸರನ್ನೂ

ದಿಗಿಲುಗೊಳಿಸುವ ಹಾಡುಗಳನ್ನು ಹಾಡಿರುವುದೇಕೆ?.... ಈ ಜಾತಿಯಹಾಡುಗಳನ್ನು ಸುಲಭವಾಗಿ ಅರ್ಥಮಾಡಲು ಸಾಧ್ಯವಿಲ್ಲದ ಕಾರಣ ಇವುಗಳಿಗೆ ಮುಂಡಿಗೆಗಳೆಂದು ಕರೆದಿರುವರು.[೨೪]

ಎನ್.ಎಸ್. ತಾರಾನಾಥ; ದಾಸ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವಿರುವ ಕನಕದಾಸರು ಒಗಟಿನಂತೆ ಹಾಡು ಬೆಡಗಿನ ಪದಗಳ ರಚನೆ ಜನಸಾಮಾನ್ಯರಲ್ಲಿ ಧರ್ಮ, ಜ್ಞಾನ, ಭಕ್ತಿ ಹಾಗೂ ಅಧ್ಯಾತ್ಮ ಸೇರಿಸಿ ಒಗಟಿನಂತೆ ಹಾಡು ರಚಿಸಿದರು ಅವು ಕನಕನ ಮುಂಡಿಗೆಗಳೆಂದೆ ಪ್ರಸಿದ್ದವಾಗಿವೆ". [೨೫]

ದ.ರಾ. ಬೇಂದ್ರೆ, ಅವರು 'ಮಾತಿನಲ್ಲಿಯ ಪರಿಣಾಮಕರವಾದ ಪದ ಪ್ರಯೋಗಗಳ ಬಳಕೆಗೆ ಒಂದು ರೀತಿಯ ಹೊಸಸಾಹಿತ್ಯ, ದೇಶಿಯತೆಯಿಂದ ಕೂಡಿದ ಒಗಟಿನಂತೆ ಮುಂಡಿಗೆಗಳು ಕಂಡುಬಂದಿವೆ'.[೨೬]

ಶ್ರೀರಾಮ ಅಚನೂರ "ದಾಸ ಪಂಥದಲ್ಲಿ 'ಮುಂಡಿಗೆ' ಎಂಬ ಸಾಹಿತ್ಯ ಪ್ರಕಾರ ಕನಕದಾಸರ ಸ್ವಂತ ಸೃಷ್ಟಿ. ಪೌರಾಣಿಕ ಅಭ್ಯಾಸದ ಆಳ ಅರಿತ ಕನಕದಾಸರು ಸಾಹಿತ್ಯಲೋಕದಲ್ಲಿ ಒಗಟಿನಂತಹ 'ಮುಂಡಿಗೆ' ರಚಿಸಿ ಬುದ್ದಿವಂತರಿಗೆ ಸವಾಲೆಸೆದಿದ್ದಾರೆ. ಇವು ಅಲ್ಲಮ ಶರಣರ ಬೆಡಗಿನ ವಚನಗಳಂತಿದ್ದರೂ ಮುಂಡಿಗೆ ಎಂಬ ಪ್ರಕಾರ ಕನ್ನಡ ಸಾಹಿತ್ಯದಲ್ಲೇ ಹೊಸದು". [೨೭]

ಹೀಗೆ ಭಿನ್ನವಾಗಿ ಅಭಿಪ್ರಾಯ ವ್ಯಕ್ತಪಡಿಸಿದ ಅಧ್ಯಯನಕಾರರು, ಮುಂಡಿಗೆಗಳ ಕುರಿತು ಹೇಳಿರುವ ಮಾತನ್ನು ವಿಶ್ಲೇಷಿಸುವ ಅಗತ್ಯತೆ ಕಂಡುಬಂದಿದೆ, ಈ ಮುಂಣಡಿಗೆ, ಮುಂಡಕದ ತದ್ಭವ ರೂಪವಾಗಿದೆ. ಮುಂಡಿಗೆ ಎಂದರೆ ಮರದ ದಿಮ್ಮಿ ತೊಲೆ ಎಂದು ಅರ್ಥೈಸುತ್ತಾರೆ, ಇದಕ್ಕಿಂತ ಭಿನ್ನವಾದ ಮುಂಡ, ತಲೆ ಅಂದರೆ ಮಿದುಳಿಗೆ ಸಂಬಂಧಿಸಿದ ಬುದ್ಧಿ ಪ್ರಧಾನವಾದ ರಚನೆಗಳನ್ನು 'ಮುಂಡಿಗೆ' ಎಂದು ಕರೆಯುವರು.

ಕನಕದಾಸರ ಬಹುತೇಕ ಮುಂಡಿಗೆಗಳಲ್ಲಿ ಪಲ್ಲವಿ, ಅನುಪಲ್ಲವಿ ನುಡಿ ಎಂದು ಸ್ಥೂಲವಾಗಿ ಮೂರು ಘಟಕಗಳಿವೆ. ಇಲ್ಲಿ ಪಲ್ಲವಿ, ಅನುಪಲ್ಲವಿಯಲ್ಲಿ ಬಿಂಬಿತವಾದ ಪ್ರಶ್ನಾತೀತವಾದ ಭಾವನೆಗಳು ಮುಂದಿನ ನುಡಿಗಳಲ್ಲಿ ವಿಸ್ತೃತವಾಗುತ್ತಾ ಹೋಗುತ್ತವೆ. ಈ ನುಡಿಗಳಲ್ಲಿ ಆದಿಪ್ರಾಸ ನಿಯತವಾಗಿ ಬಂದಿದೆ;. ಬಹುತೇಕ ಚತುಷ್ಪದಿಗಳು, ವಿರಳವಾಗಿ ದ್ವಿಪದಿಗಳನ್ನು ಕಾಣುವುದುಂಟು. ಈ ಮುಂಡಿಗೆಗಳು ಹೆಚ್ಚಾಗಿ ಮೂರರಿಂದ, ಎಂಟು ನುಡಿಗಳವರೆಗೆ ಹರಡಿಕೊಂಡಿವೆ, ಸಾಮಾನ್ಯವಾಗಿ ಕೀರ್ತನೆಗಳ ಮಾದರಿಯನ್ನು ಅನುಸರಿಸಿವೆ.

ವಸ್ತು ವೈವಿದ್ಯತೆಗನುಗುಣವಾಗಿ ವಿದ್ವಾಂಸರು ಮುಂಡಿಗೆಗಳನ್ನು ಮೂರ್ನಾಲ್ಕು ವಿಧಗಳಲ್ಲಿ ವಿಭಾಗಿಸಿದ್ದಾರೆ. ಆದರೆ ಸರಳವಾಗಿ ಅಧ್ಯಯನಕ್ಕೆ ಸೂಕ್ತವೆನಿಸುವ ವಿಂಗಡನೆಯನ್ನು ನೀಡಿರುವ ಸುಧಾಕರವರ ಅಭಿಪ್ರಾಯವು ಸಮರ್ಪಕವೆನಿಸುತ್ತದೆ.

೧. ಪೌರಾಣಿಕ ದಾವೆ ವರಸೆಯ ಮುಂಡಿಗೆಗಳು.

೨. ಅನುಭಾವದ ನಿಗೂಢ ಮುಂಡಿಗೆಗಳು.

ಪೌರಾಣಿಕ ದಾವೆವರಸೆಯ ಮುಂಡಿಗೆಗಳು ಸತಿಪತಿ ಭಾವದ ಭಗವದ್ಧನುಸಂಧಾನದ ರೂಪದಲ್ಲಿರುವವು, ಅನುಭಾವದ ನಿಗೂಢ ಮುಂಡಿಗೆಗಳು ಕಾವ್ಯ ಪ್ರಧಾನವಾಗಿವೆ.

ಈ ಮುಂಡಿಗೆಗಳನ್ನು ಪಂಡಿತರನ್ನು ಬೆರಗುಗೊಳಿಸಲು ರಚಿಸಿರಬೇಕು ಎನಿಸುತ್ತದೆ. ಆ ಬಗೆಗೆ ಗಮನಹರಿಸಿದರೆ ಈ ವಿಚಾರಗಳು ಪ್ರಸ್ತುತವನಿಸುತ್ತವೆ.

೧. ಕೆಲವು ಪಾಂಡಿತ್ಯ ಪ್ರದರ್ಶನಕ್ಕೆ ಮುಂಡಿಗೆಗಳು ರಚನೆಯಾಗಿರಬಹುದು.

೨. ಇನ್ನು ಕೆಲವು ಪಾಂಡಿತ್ಯ ಪರೀಕ್ಷೆಗಾಗಿಯೂ ಇದ್ದಂತೆ ತೋರುತ್ತದೆ.

೩. ಬುದ್ಧಿ ಪೂರ್ವಕವಾಗಿ ಗೂಡಾರ್ಥ ಭಾಷೆಯಲ್ಲಿ ಹೇಳಿದಂತೆ ಅನಿಸುವವು.

೪. ಆತ್ಮಾನುಭವ, ತತ್ವಜ್ಞಾನ ಮುಂಡಿಗೆಗಳಲ್ಲಿ ಅಡಕವಾಗಿದೆ.

೫. ಪಂಡಿತರನ್ನು, ಪೌರಾಣಿಕರನ್ನು ಕೆಣಕಿದ ಕೆಲವು ಹಾಡುಗಳು ಇವೆ.

ಈ ಎಲ್ಲಾ ಬಗೆಯ ಹಾಡುಗಳನ್ನು ಕನಕದಾಸರು ಹಾಡಿದ್ದರೆಂದು ಅಧ್ಯಯನಗಳಿಂದ ತಿಳಿದುಬರುವುದು, ಮೊದಲು ಲೌಕಿಕಾರ್ಥ ನೀಡಿ, ಅಲೌಕಿಕಾರ್ಥವನ್ನು ಹುದುಗಿಸಿ ಟಂಕಿಸಿದ್ದಾರೆ.

'ಮರವ ನುಂಗುವ ಪಕ್ಷಿ ಮನೆಯೊಳಗೆ ಬಂದಿದೆ ಇದರ
ಕುರುಹ ಪೇಳಿ ಕುಳಿತಿರುವ ಜನರು ॥ಪ॥

ಒಂಟಿಕೊಂಬಿನ ಪಕ್ಷಿ ಒಡಲೊಳಗೆ ಕರುಳಿಲ್ಲ
ಗಂಟಲು ಮೂರುಂಟು ಮೂಗು ಇಲ್ಲ
ಕುಂಟು ಮನುಜನ ತೆರದಿ ಕುಳಿತಿಹುದು ಮನೆಯೊಳಗೆ
ಎಂಟು ಹತ್ತರ ಭಕ್ಷ್ಯ ಭಕ್ಷಿಸುವುದು. ॥೧॥

ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಪು–೮೦, ಪದ್ಯ–೩೪೪.

"ಲೌಕಿಕ ಅಥವಾ ಭೌತ ಅರ್ಥದಲ್ಲಿ ಇದು ರಾಗಿ ಕಲ್ಲು (ಬೀಸುವ ಕಲ್ಲು) ಅಲೌಕಿಕ ಅಥವಾ ಅಧ್ಯಾತ್ಮಿಕ ಅರ್ಥದಲ್ಲಿ ಪ್ರಣವರೂಪಿ ಪರಮಾತ್ಮ ಈ ಎರಡನ್ನು ಸಂಲಗ್ನಗೊಳಿಸಿರುವುದರಲ್ಲಿ ಕನಕದಾಸರ ಪ್ರತಿಭಾಪಕ್ಷಿ ನಿಶ್ಮಿಖರವನ್ನು ಏರಿದೆ ಎನ್ನಬಹುದು ಎಂಬ ಸುಧಾಕರ ಅವರ ಅಭಿಪ್ರಾಯ ಹೆಚ್ಚು ಸೂಕ್ತವೆನಿಸುತ್ತದೆ.

ಈ ಮೇಲಿನ ರೀತಿಯಾಗಿ ಮುಂಡಿಗೆಗಳ ಕುರಿತು ವಿದ್ವಾಂಸರು ವಿವಿಧ ಬಗೆಯಲ್ಲಿ ಚರ್ಚಿಸಿದ್ದಾರೆ ಕೆಲವಂತು ಬಿಡಿಸಲಾರದ ಗಂಟಾಗಿವೆ, ಬಹುಮುಖ ವ್ಯಕ್ತಿತ್ವದ ಕನಕದಾಸರು ಪೌರಾಣಿಕ, ಆಧ್ಯಾತ್ಮಿಕ ಹಾಗೂ ಲೌಕಿಕ ಅರ್ಥಗಳನ್ನು ಹೊಂದಿರುವ ಮುಂಡಿಗೆಗಳನ್ನು ರಚಿಸಿ ತಮ್ಮ ವಿದ್ವತ್ತಿಕೆಯನ್ನು ಮೆರೆದಿದ್ದಾರೆ ಎಂದು ಅಧ್ಯಯನಕಾರರ ಸ್ಪಷ್ಟ ಅಭಿಪ್ರಾಯವಾಗಿದೆ.

ಉಗಾಭೋಗಗಳು.

ಕನಕದಾಸರು ಉಗಾಭೋಗಗಳನ್ನು ರಚಿಸಿದ್ದಾರೆ. ಇವು ಅನುಭವದ ಆಳವಿರುವ ರಸಘಟ್ಟಿನುಡಿಗಳು, ಲಘುಗೀತೆ ಗಾಯನ ಪದ್ಯಗಳೇ ಉಗಾಭೋಗಗಳು 'ಉಗಾಭೋಗ' ದಾಸ ಸಾಹಿತ್ಯದಲ್ಲಿ ಕಾವ್ಯ ಧರ್ಮವನ್ನು ಹೊಂದಿದ ಜನಪ್ರೀಯ ಗಾಯನ ಪ್ರಕಾರ ಉದ್ಗ್ರಾಹ ಮತ್ತು 'ಆಭೋಗ' ಎಂಬೆರಡು ಪದಗಳು ಇದಕ್ಕೆ ಮೂಲಸಾಮಗ್ರಿ. ರಾಗ-ತಾಳದ ಬದ್ಧತೆಯಿಲ್ಲದೆ ಹಾಡಬಲ್ಲ ಹಾಡುಗಳಿವು ಸರಳ ಶೈಲಿಯ ಸಂಗೀತ ಪ್ರಧಾನ ರಚನೆಗಳಾಗಿವೆ. ಕರ್ನಾಟಕ ಸಂಗೀತದ ವಿಶಿಷ್ಟಗಾನ ಪದ್ದತಿಗೆ ಹೇಳಿ ಮಾಡಿಸಿದ ಪದ್ಯಗಳಿವು.

ಸುಧಾಕರ ಅವರು ಉಗಾಬೋಗ ಐದು ಅಂಶದಿಂದ ಕೂಡಿದೆ ಅದು ಉದ್ಗ್ರಾಹ ಮೇಲಾಪಕ, ಧ್ರುವ, ಅಂತರಾ ಮತ್ತು ಅಭೋಗ, ಉದ್ಗ್ರಾಹ – ರಾಗಲಾಪ ಆರಂಭ ಮಾಡುವುದು ಮೇಲಾಪಕ – ವಿಷಯಕ್ಕನುಸಾರವಾಗಿ ರಾಗವನ್ನು ಮೇಳೈಸುವುದು, ಧ್ರುವ ಆಲಾಪನೆಯಿಂದ ಹೊರಟು ಒಂದು ಮಟ್ಟಕ್ಕೆ ಬಂದು, ಅಂತರಾಳದಲ್ಲಿ ಅದನ್ನು ಮುಂದೆ ಸಾಗಿಸಿ ಕೊನೆಯ ಮೆಟ್ಟಿಲನ್ನು ಏರಿ ಆಬೋಗದಲ್ಲಿ ಅದರಲ್ಲಿ ಇದ್ದಂತ ಆನಂದವನ್ನು ಸವಿಯಬಹುದು. ಈ ಹೆಚ್ಚಿನ ಆನಂದವೇ ಉಗಾಬೋಗ.

ಕೀರ್ತನೆ ಸೂಳಾದಿಗಳಿಗೆ ತಾಳ ಪ್ರಧಾನವಾದರೆ, ಉಗಾಭೋಗವು ರಾಗಪ್ರಧಾನವಾದುದು ಉಗಾಭೋಗದಲ್ಲಿ ಲಾಲಿತ್ಯ ರಂಜನೆಗೆ ಹೆಚ್ಚು ಗಮನಕೊಡುವುದುಂಟು. ತಾಳ-ಮೇಳಗಳ ಗೊಂದಲಕ್ಕೆಡೆಯಿಲ್ಲ, ನುಡಿಗಳ ಕಟ್ಟಿಲ್ಲ, ಪಾದಗಳ ಬಂಧವಿಲ್ಲ, ಆದಿ, ಮಧ್ಯ, ಅಂತ್ಯ ಪ್ರಾಸಗಳ ಯಾವುದೇ ರೀತಿಯ ಭಯವಿಲ್ಲ, ಯಾವುದಾದರೂ ವಿಷಯ ನೆನಪಿಗೆ ಬಂದು ಆ ವಿಷಯದ ಆಳವನ್ನು ಹಾಡಿನ ರೂಪದಲ್ಲಿ ಹಾಡಿದರೆ ಅದೇ ಉಗಾಬೋಗ ಎಂಬ ಜಗನ್ನಾಥ ಗೇಣನ್ನವರ ಅಭಿಪ್ರಾಯ ಸೂಕ್ತವೆನಿಸುತ್ತದೆ.

ಉದಾ: ಅಳಿವದೇಹವಾ ಸಿಂಗರಿಸುವೆಯೇಕೆ

ಬೆಳೆದು ಹರಿಭಕ್ತಿ ಮನದೊಳು ನಿರತ

ಕಳೆದ ತನುವಿದು ಶಾಶ್ವತವಲ್ಲ ತಿಳಿ

ಒಳಗಿನ ಆತ್ಮ ನಿರಂತರವಾಗಿರಲು

ಘಳಿಗೆಗೊಮ್ಮೆ ಅವರ ಧ್ಯಾನವ ಮಾಡು

ಸುಳಿಯಲಿ ಸಿಕ್ಕಿರಲು ನೀನುಳಿವ ದಾರಿ

ತಿಳಿ; ನೀ ಕರೆ ಸೇರೆ ನಿನ್ನ ನಾ

ನಳಿನಾಕ್ಷ ಶ್ರೀ ಆದಿಕೇಶವರಾಯ ಪೊರೆವ.[೨೮]

ವಚನಗಳ ಶೈಲಿಯಲ್ಲಿರುವ ಉಗಾಭೋಗಗಳನ್ನು ಕಾಣಬಹುದು. ಆದ್ದರಿಂದ ಹರಿದಾಸರು ಉಗಾಭೋಗವೆಂಬ ತಾಳವೃತ್ತವನ್ನು ಸ್ವೀಕರಿಸಿ ವಚನ ಶೈಲಿಯಲ್ಲಿ ರೂಪಾಂತರಿಸಿದಂತೆ ತೋರುತ್ತದೆ ಎಂದು ಹೇಳಿರುವ ಜಗನ್ನಾಥ ಗೇನಣ್ಣವರ ಅಭಿಪ್ರಾಯ ಸಹಜವಾದುದಾಗಿದೆ.

ಹೀಗೆ ಕಿರಿಯದರಲ್ಲೇ ಹಿರಿಯ ಅರ್ಥವನ್ನು ಕೊಡುವ ಉಗಾಬೋಗಗಳನ್ನು ಕನಕದಾಸರು ರಚಿಸಿದ್ದು ಈ ಸಾಹಿತ್ಯ ಪ್ರಕಾರ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿವೆ ಎಂದಿರುವರು.

ಜಗನ್ನಾಥ ಗೇಣನ್ನವರ ಉಗಾಭೋಗದ ಲಕ್ಷಗಳನ್ನು ಹೀಗೆ ಹೇಳಿದ್ದಾರೆ.

೧. ಕೀರ್ತನೆ ತಾಳರಾಗ ಪ್ರಧಾನವಾಗಿದ್ದರೆ ಸುಳಾದಿ ತಾಳ ಪ್ರಧಾನ ಆದರೆ ಉಗಾಭೋಗ ರಾಗಪ್ರಧಾನವಾಗಿದೆ.

೨. ಇಲ್ಲಿ ತಾಳ ಮೇಳಗಳ ಕೂಡುವಿಕೆಗಾಗಿ ಕಾಯಬೇಕಾಗಿಲ್ಲ.

೩. ಪಾದಗಳ ಬಂಧನವಿಲ್ಲ.

೪. ಇಂತಿಷ್ಟೆ ನುಡಿಗಳಿರಬೇಕೆಂಬ ಕಟ್ಟುಪಾಡಿಲ್ಲ.

೫. ಇದು ಸರಳ ರೂಪವಾಗಿದ್ದರೂ ಎತ್ತರದ ವಿಚಾರಗಳಿಗೆ ತಾತ್ವಿಕ ನಿಲುವುಗಳಗೆ ಇಲ್ಲಿ ಅವಕಾಶವಿದೆ.

೬. ಒಂದೊಂದು ಉಗಾಭೋಗವು ಒಂದೊಂದು ಮುಕ್ತದಂತೆ ಕಾಣುತ್ತದೆ.

೭. ಆದಿ-ಮದ್ಯ ಪ್ರಾಸಗಳ ನಿಯಮ ಇಲ್ಲಿ ಇಲ್ಲ.

೮. ಸ್ಫೂರ್ತಿ ಬಂದಾಗ ಮುಕ್ತವಾಗಿ ಈ ರೂಪದಲ್ಲಿ ರಚನೆ ಮಾಡಬಹುದು.

೯. ಮುಕ್ತ, ಸರಳವೆಂದೆನಿಸಿದರೂ ಆಳ, ಅರ್ಥ, ಧ್ವನಿಗಳನ್ನು ಇದು ಬಿಟ್ಟುಕೊಡುವುದಿಲ್ಲ.

೧೦. ಹೀಗೆ ಕಿರಿಯದರಲ್ಲೇ ಹಿರಿಯ ಅರ್ಥವನ್ನು ಕೊಡುವ ಉಗಾಭೋಗಗಳನ್ನು ಕನಕದಾಸರು ರಚಿಸಿದ್ದಾರೆ ಈ ಸಾಹಿತ್ಯ ಪ್ರಾಕಾರ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಎಂದು ಉಗಾಭೋಗದ ಲಕ್ಷಣವನ್ನು ಹೇಳಿದ ಜಗನ್ನಾಥ ಗೇನಣ್ಣವರ ನಿಲುವು ಸರಿಯಾಗಿದೆ.

೪.೨ ಭಾಷಿಕ ಅಧ್ಯಯನಗಳು

ಭಾಷಿಕ ಅಧ್ಯಯನಗಳಲ್ಲಿ ಹಲವು ವಿದ್ವಾಂಸರು ಕನಕದಾಸರ ಕುರಿತು ಸಾಹಿತ್ಯದಲ್ಲಿ ಸ್ವಂತಿಕೆಯನ್ನು ಮೆರೆದ ಹಾಗೆ ಭಾಷೆಯಲ್ಲಿಯೂ ಸಹ ತಮ್ಮ ಸ್ವಂತಿಕೆಯನ್ನು ಮೆರೆದಿದ್ದಾರೆ. ತಮ್ಮ ಪಾಂಡಿತ್ಯದ ಅಭಿಪ್ರಾಯಗಳನ್ನು ಹೊರಹಾಕಲು ಜನಮನದ ರೂಢಿಯಲ್ಲಿದ್ದ ಆಡು ಭಾಷೆಯನ್ನು ಬಳಸಿಕೊಂಡು, ತಮ್ಮ ಎಲ್ಲಾ ಕೃತಿಗಳಲ್ಲಿ ದೇಶೀಯತೆಯನ್ನು ಮೆರೆದು ಭಾಷೆಗೊಂದು ಚೈತನ್ಯ ತಂದುಕೊಟ್ಟಿದ್ದಾರೆ. ಕನ್ನಡ ನಾಡು, ನುಡಿಯನ್ನು ಆಳವಾಗಿ ಬಲ್ಲವರಾಗಿದ್ದ ಕನಕದಾಸರು ಅನುಭವ, ಆಲೋಚನೆ, ತಾತ್ವಿಕ, ಧೇಶೀಯವಾದ ವಿಚಾರಗಳಿಗೆ ಭಾಷೆಯನ್ನು ಮಾಧ್ಯಮವನ್ನಾಗಿ

ಮಾಡಿಕೊಂಡು ಅದಕ್ಕೊಂದು ವಿಶೇಷತೆ ತಂದವರಾಗಿದ್ದರೆಂದು ಅಧ್ಯಯನಕಾರರ ಅಭಿಪ್ರಾಯವಾಗಿದೆ.

೪.೨. ಭಾಷಿಕ ಅಧ್ಯಯನಗಳು

ಕನಕದಾಸದ ಕೃತಿಗಳನ್ನು ಅಧ್ಯಯನ ಮಾಡಿರುವ ಹಲವು ವಿದ್ವಾಂಸರು ಅವರ ಕೃತಿಗಳ ಭಾಷಿಕ ಅಧ್ಯಯನದ ಮೇಲೂ ವಿಶೇಷ ಬೆಳಕು ಚೆಲ್ಲಿದ್ದಾರೆ. ವಿಶೇಷವಾಗಿ ಭಾಷೆಯ ಆಳ ಬಳಸಿಕೊಂಡ ರೀತಿಯನ್ನು ಅದರಲ್ಲಿ ಛಂದಸ್ಸು, ಅಲಂಕಾರ, ದೇಶೀಯತೆ ಇವುಗಳನ್ನು ಸರಿಯಾದ ಕ್ರಮದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಕೃತಿಯನ್ನು ಕಟ್ಟಿಕೊಟ್ಟಿರುವರು. ಕನಕದಾಸರ ಭಾಷೆ ಆಡುನುಡಿಯ ಸ್ವರೂಪ ಮತ್ತು ದಾಟಿಗಳಿಗೆ ಹೆಚ್ಚು ಹತ್ತಿರ ಎಂದು ಮುಂತಾದ ರೀತಿಯಲ್ಲಿ ಅಭಿಪ್ರಾಯ ಪಟ್ಟಿರುವ ಅಧ್ಯಯನಕಾರರ ಅಭಿಪ್ರಾಯಗಳನ್ನು ಈ ಕೆಳಗಿನ ಅಂಶಗಳ ಮೂಲಕ ವಿಶ್ಲೇಷಿಸಲಾಗಿದೆ.

ಕನ್ನಡ ಭಾಷಾ ಸ್ವರೂಪದ ಅಧ್ಯಯನಕ್ಕೆ ಕನಕದಾಸರ ಕಾಲದ ಕನ್ನಡ ರಾಜಾಶ್ರಯವನ್ನು ಧಿಕ್ಕರಿಸಿ ಜನಾಶ್ರಯ ಸಿರಿವಂತಿಕೆಯ ಸಿರಿತನದದಲ್ಲಿ ಕೀರ್ತನೆಗಳು, ಕಾವ್ಯಗಳು, ಮುಂಡಿಗೆಗಳು, ಉಗಾಭೋಗಗಳು ಜನಮನವನ್ನು ಗೆದ್ದಿವೆ. ಆಡುಮಾತಿನ ಸರಳಗನ್ನಡದಲ್ಲಿ ಅಚ್ಚೊತ್ತಿದಂತೆ ಸಾಮಾಜಿಕ ನೆಲೆಯಲ್ಲಿ ಅವರ ಕೃತಿಗಳು ಮೈದಾಳಿವೆ. ಕೃತಿಗಳಲ್ಲಿ ಅಲಂಕಾರ, ದೃಷ್ಟಾಂತಗಳನ್ನು ಬಳಸಿ ಭಾಷಾ ಕೃಷಿಗೆ ಪ್ರೇರಕರಾಗಿದ್ದಾರೆ. ಈ ಹಂತದಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳುವಾಗ **ಹಂಪ ನಾಗರಾಜಯ್ಯ** 'ಕನಕದಾಸರ ಕೃತಿಗಳಲ್ಲಿ ಭಾಷಾ ಸ್ವರೂಪ' ಕುರಿತಾದ ಲೇಖನದ ಮುಖಾಂತರ ಗುರುತಿಸಬಹುದಾಗಿದೆ.

"ಕನಕದಾಸರ ಕೃತಿಗಳಲ್ಲಿ ಕವಿಯ ಕಾಲದ ಕನ್ನಡ ಭಾಷಾ ಸ್ವರೂಪದ ಅಧ್ಯಯನಕ್ಕೆ ವಿಫುಲವಾದ ಸಾಮಗ್ರಿ ಸಿಗುವುದು ಕೀರ್ತನೆಗಳಲ್ಲಿಯೇ. ಕನಕದಾಸರ ಕೀರ್ತನೆಗಳಲ್ಲಿ ಹೆಚ್ಚಿನವು ವೈದೃಶ್ಯಗಳಲ್ಲಿ ಮೈ ಪಡೆಯುವುದನ್ನು ಕಂಡಾಗ ಕನಕದಾಸರಿಗೂ ವೈದೃಶ್ಯಗಳನ್ನು ಅಳವಡಿಸಿ ಮಾತನಾಡುವುದು ತುಂಬ ಪ್ರಿಯವೆಂದು, ಅದು ಅವರ ಮನೋಧರ್ಮಕ್ಕೆ ಹತ್ತಿರ ವೆಂದು ತೋರುತ್ತದೆ. ಅಂದು–ಇಂದು, ಭೂತ–ವರ್ತಮಾನ ವೈಭವ, ಸುಖ–ಕಷ್ಟ ಕಾರ್ಪಣ್ಯ, ಸಿರಿತನ–ಬಡತನ–ಎಂಬಿ ಬಗೆಯ ದ್ವಂದ್ವನೆಲೆಗಳಲ್ಲಿ ಅಭಿವ್ಯಕ್ತಿ ಹಾಗೂ ಸಂವೇದನೆ ಆಕಾರ ಪಡೆಯುತ್ತಾ ಹೋಗುತ್ತದೆ. ಇದನ್ನು ಎರಡು ದೃಷ್ಟಾಂತಗಳಿಂದ ಸ್ಪಷ್ಟ ಪಡಿಸಬಹುದು:

೧. ಎನ್ನ ಕಂದ ಹಳ್ಳಿಯ ಹನುಮಾ
ಚೆನ್ನಾಗಿ ಇಹರೆ ಲಕ್ಷಣ ದೇವರು ॥ಪ॥
ತುಪ್ಪ ಪಂಚಾಮೃತವೆಂದು ಅಡವಿಗಡ್ಡೆಗಳಿಂದು
ಕರ್ಪೂರ ವೀಳ್ಯವೆಂದು ಕರುಕು ಇಂದು
ಸುಪ್ಪತ್ತಿಗೆ ಮಂಚವಂದು ಹುಲ್ಲ ಹಾಸಿಗೆ ಇಂದು
ಶ್ರೀಪತಿ ರಾಘವ ಕ್ಷೇಮದಲ್ಲೆದಾದರೆ ॥೧॥

ನವ ವಸ್ತ್ರಗಳು ಅಂದು ನಾರಸೀರೆಗಳಿಂದು
ಹೂವಿನಗಂಟು ಅಂದು ಜಡೆಗಳಿಂದು
ಜವಾಜಿ ಕತ್ತುರಿಯಂದು ಭಸಿತಧೂಳಿಯಿಂದ
ಶ್ರೀವರ ರಾಘವ ಕ್ಷೇಮದಲ್ಯೆದಾರ ॥೨॥

ಕನಕ ರಥಗಳಂದು ಕಾಲುನಡಿಗೆಯಿಂದ
ಘನ ಸತ್ತಿಗೆಯಂದು ಬಿಸಿಲು ಇಂದು
ಸನಕಾದಿಗಳೋಲೈಪ ಆದಿಕೇಶವ ನಮ್ಮ
ಹನುಮೇಶ ರಾಘವ ಕ್ಷೇಮದಲ್ಯೆದಾರೆ ॥೩॥

೨. ಏನೆಂದು ಕೊಂಡಾಡಿ ತುತಿಸಲೋ ದೇವ
ನಾನೇನು ಬಲ್ಲೆ ನಿನ್ನಯ ಮಹಿಮೆ ಘನವ ॥ಪ॥

ಹರಿಮಕುಂದನು ನೀನು ನರಜನ್ಮಹುಳು ನಾನು
ಪರಮಾತ್ಮನು ನೀನು ಪಾಮರನು ನಾನು

ಬಿರುದುಳ್ಳವನು ನೀನು ಮೊರೆ ಹೊಕ್ಕವನು ನಾನು
ಸಿಕಾಗಿನೆಲೆಯಾದಿಕೇಶವನು ನೀನು ॥ಪ॥

ಈ ಎರಡೂ ಕೀರ್ತನೆಗಳನ್ನು ಭಾಷಾ ಸ್ವರೂಪದ ದೃಷ್ಟಿಯಿಂದ ಮಹತ್ವ ಪಡೆದಿವೆ. ಇಲ್ಲಿನ ಭಾಷಾ ಶೈಲಿಯಲ್ಲಿ ಜಿನುಗುವ ಆತ್ಮೀಯ ಧಾಟಿ ತಟ್ಟನೆ ಮನ ಸೆಳೆಯುತ್ತದೆ. ಸರಸ ಸಂಭಾಷಣೆಯ ಲಯ ಎದ್ದು ಕಾಣುತ್ತದೆ. ಕನಕದಾಸರು ಬಳಸುವ ವಾಕ್ಯಗಳ ಮಾದರಿಗೂ ಇಲ್ಲಿ ಉದಾಹರಣೆಗಳಿವೆ. ತುತಿ (ಸ್ತುತಿ) ಮೂರುತಿ (ಮೂರ್ತಿ), ಸತ್ತಿಗೆ (ಛತ್ರಿಕಾ) ಸಿರಿ (ಶ್ರೀ) ಮುಂತಾದ ತದ್ಭವ ರೂಪಗಳೊಂದಿಗೆ ಅಣುರೇಣು ತೃಣ ಮುಂತಾದ ತತ್ಸಮಗಳೂ ಸಮ ಸಮಕ್ಕೆ ಸೇರಿಕೊಂಡಿವೆ. ಇಸು ಪ್ರತ್ಯಯಾಂತ ರೂಪಗಳೂ ಇವೆ; ತುತಿಸು ಸ್ಮರಿಸು– ಇಗ ಪ್ರತ್ಯಯ ಹತ್ತಿದ 'ಪ್ರಪಂಚಿಗ' ಎಂಬ ರೂಪದ ಬಳಕೆ ಗಮನಾರ್ಹ; ಪ್ರಾಪಂಚಿಕನು, ಲೌಕಿಕನು ಎಂಬರ್ಥದಲ್ಲಿ ಪ್ರಪಂಚಿಗ ಎಂಬ ಅಪರೂಪದ ಪ್ರಯೋಗವಿದು. ಕೇಶಿರಾಜ ಕೊಡುವ ತದ್ದಿತ ಪ್ರತ್ಯಯ ಹತ್ತಿದ ಪ್ರಯೋಗಗಳ ಪಟ್ಟಿಯಲ್ಲಿ ಪ್ರಪಂಚಿಗ

ರೂಪವಿಲ್ಲ; ಕನಕದಾಸರು ಕೇಶಿರಾಜನಾದ ನಾಲ್ಕು ಶತಮಾನ ಅನಂತರ ಬಂದವರಾದರೂ ಈ ಶಬ್ದ ರೂಪ ಹಿಂದಿನವರು ಪ್ರಯೋಗಿಸಿದ್ದಿಲ್ಲವೆಂಬುದಕ್ಕೆ ಶಬ್ದಮಣಿ ದರ್ಪಣಕಾರನನ್ನು ಹೆಸರಿಸಿದಷ್ಟೆ, ಪಕಾರ ಹಕಾರವಾಗಿರುವುದು ಕನ್ನಡ ಭಾಷೆಯ ವೈಶಿಷ್ಟ್ಯಗಳಲ್ಲೊಂದು ಕನಕದಾಸರ ಈ ಎರಡೂ ಕೀರ್ತನೆಗಳಲ್ಲೇ ಹಾಸಿಗೆ, ಹುಲ್ಲು, ಹುಳು, ಹೂ, ಹೆರು (ಹೆತ್ತ) ಹೊಗು– ಎಂಬ ರೂಪಗಳಿವೆ.

"ಗ್ರಾಮೀಣ ಪ್ರಜ್ಞೆಯಂತೆ ಹಳ್ಳಿಯ ಮಣ್ಣಿನ ಮಕ್ಕಳ ಕನ್ನಡ ಭಾಷೆಯೂ ಕನಕದಾಸರ ಹಾಡುಗಳಲ್ಲಿ ಸಾಕಷ್ಟು ಹೆಪ್ಪುಗಟ್ಟಿದೆ. 'ಹಳ್ಳಿಯ ಹನುಮಾ' ಎಂಬುದಂತೂ ಸೊಗಸಾದ ಪ್ರತಿಭೆಯ ಮೂಸೆಯಲ್ಲಿ ಅದ್ದಿ ತೆಗೆದ ಜನಭಾಷೆಯ ಕೆನೆಯ ಕೆನೆ. ಕನ್ನಡ ಸಾಹಿತ್ಯದದಲ್ಲೇ ಒಂದು ಅಪರೂಪದ ಭಾಷಾಭಿವ್ಯಕ್ತಿ ಎನ್ನಕಂದ ಹಳ್ಳಿಯ ಹನುಮಾ ಎಂಬ ಕೀರ್ತನೆಯೊಂದಿಗೇನೆ, ಏನೆಂದಳೇನೆಂದಳೋ ನಿನ್ನೊಳು ಸೀತೆ ಹನುಮಯ್ಯ ಎಂಬ ಕೀರ್ತನೆಯನ್ನು ಒಟ್ಟಿಗೆ ಹಿಡಿದು ನೋಡಬೇಕು; ಇವೆರಡೂ ಹಾಡುಗಳು ಯುಗ್ಮ–ಜೋಡಿ ಕೀರ್ತನೆಗಳು"[೨೫]

೪.೨.೧ ಛಂದಸ್ಸು– ಅಲಂಕಾರಗಳ ಬಳಕೆ

ಅಧ್ಯಯನಕಾರರು ಕನಕದಾಸರ ಸಾಹಿತ್ಯವನ್ನು ಅದರಲ್ಲಿ ಬಳಕೆ ಆಗಿರುವ ಭಾಷೆ, ಭಾಷಿಕದಲ್ಲಿ, ಭಾಷಾ ಸ್ವರೂಪ, ಅಲಂಕಾರ, ಛಂದಸ್ಸು ಎಲ್ಲ ಅಂಶಗಳನ್ನು ಹಿಡಿದಿಟ್ಟಿದ್ದಾರೆ. ಆ ಎಲ್ಲಾ ಅಧ್ಯಯನಗಳಲ್ಲಿ ಟಿ. ಕೇಶವ ಭಟ್ಟರು 'ಕನಕ ಸಾಹಿತ್ಯದಲ್ಲಿ ಅಲಂಕಾರಗಳು' ಎಂಬ ಶೀರ್ಷಿಕೆಯಲ್ಲಿ ಲೇಖನದಲ್ಲಿ ಚರ್ಚಿಸಿರುವರು.

"ಕಾವ್ಯ ಶರೀರಕ್ಕೆ ಶೋಭೆಯನ್ನುಂಟು ಮಾಡತಕ್ಕ ಧರ್ಮವನ್ನು ಅಲಂಕಾರ ಎಂದಿದ್ದಾರೆ. ಕಾವ್ಯದ ಘಟಕಗಳು, ಶಬ್ದ ಮತ್ತು ಅರ್ಥ ಆಗಿರುವುದರಿಂದ ಅಲಂಕಾರಗಳು, ಶಬ್ದಾಲಂಕಾರ, ಅರ್ಥಾಲಂಕಾರ ಎಂದೆರಡು ವಿಧ. ಶಬ್ದಾಲಂಕಾರಗಳು ಕಾವ್ಯ ಶರೀರಕ್ಕೆ ಉಡುಗೆ ತೊಡುಗೆಗಳಂತ ಬಾಹ್ಯ ಶೋಭೆಯನ್ನು ಮಾಡುವವು. ಅರ್ಥಾಲಂಕಾರಗಳು ಧೈರ್ಯ, ಶೌರ್ಯ ಶೀಲ ಸದ್ಗುಣಗಳಂತೆ ಅಂತಃ ಶೋಭೆಯನ್ನು ಬೀರುವವು. ಇವೆರಡೂ ಇದ್ದಷ್ಟು ಕಾವ್ಯವು ಸೊಗಸಾಗುವುದು. ಕನಕ ಸಾಹಿತ್ಯದಲ್ಲಿ ಈ ಬಗೆಯ ಎರಡು ವಿಧದ ಅಲಂಕಾರಗಳು ಮಿತವಾಗಿ ಮೂಡಿ ಬಂದಿವೆ.

ಕನಕಸಾಹಿತ್ಯದಲ್ಲಿ ಉಪಮೆ, ಉತ್ಪ್ರೇಕ್ಷೆ, ದೃಷ್ಟಾಂತ, ಅತಿಶಯೋಕ್ತಿ, ರೂಪಕ, ಸ್ವಭಾವೋಕ್ತಿಗಳು ಅಧಿಕವಾಗಿವೆ. ಇನ್ನುಳಿದವು ವಿರಳವಾಗಿ ಕಾಣಸಿಗುತ್ತವೆ.

ಉಪಮಾಲಂಕಾರ: ಅರ್ಥಾಲಂಕಾರಗಳಲ್ಲಿ ಉಪಮಾ ಪ್ರಪಂಚ ಬಲು ದೊಡ್ಡದು ಇದರಲ್ಲಿ ಉಪಮೇಯ, ಉಪಮಾನ, ಸಮಾನಧರ್ಮ ಮತ್ತು ವಾಚಕಪದ ಎಂಬ ನಾಲ್ಕು ಅಂಶಗಳೂ ವ್ಯಕ್ತವಾಗಿದ್ದರೆ ಅದು ಪೂರ್ಣೋಪಮೆ: ಒಂದೋ, ಎರಡೋ, ಮೂರೋ ಲುಪ್ತವಾಗಿರುವುದುಂಟು. ಆಗ ಅದು 'ಲುಪ್ತೋಪಮೆ'ಯಾಗುವುದು/ ಒಂದು ಪೂರ್ಣೋಪಮೆ ಎಂಟು ಲುಪ್ತೋಪಮೆಗಳು– ಹೀಗೆ ಒಂಬತ್ತು, ಕವಿರಾಜ ಮಾರ್ಗದಲ್ಲಿ ಇನ್ನು ೨೬ ಉಪಮಾ ಪ್ರಭೇಧಗಳನ್ನು ಹೇಳಿದ್ದಾರೆ. ಉಪಮಾಲಂಕಾರದ

ಛಾಯಗಳಾಗಿ, ಉತ್ಪ್ರೇಕ್ಷ, ರೂಪಕ, ದೃಷ್ಟಾಂತ ಮುಂತಾದವು ಹಲವಿವೆ. ಆದುದರಿಂದ ಉಪಮಾಲಂಕಾರಕ್ಕೆ ತುಂಬ ಮಹತ್ವ, ಸಂಸ್ಕೃತದಲ್ಲಿ ಕಾಳಿದಾಸನು ಉಪಮಾ ಚಕ್ರವರ್ತಿಯಾಗಿದ್ದಾನೆ. ಕನಕಸಾಹಿತ್ಯದಿಂದ ಕೆಲವು ಉದಾಹರಣೆಗಳಿವು: ನಳನು ಪುಸ್ಕರನೊಂದಿಗೆ ಜೂಜಾಡಿ ರಾಜ್ಯವನ್ನೆಲ್ಲಾ ಸೋತನು. ಇನ್ನು ತನ್ನ ಪತ್ನಿಯನ್ನು ಪಣವಾಗಿಡಲು ಯೋಚಿಸಿದನು. ಇದನ್ನು ಆಪ್ತ ಪುರೋಹಿತನು ಅಂತಃಪುರದಲ್ಲಿದ್ದ ದಮಯಂತಿಗೆ ತಿಳಿಸಿದನು. ಆಗ ಆಕೆಯ ಸ್ಥಿತಿ ಹೀಗೆ ವರ್ಣಿತವಾಗಿದೆ:

ಕಮಲವನದಲಿ ಮಂಜು ಸುರಿದಾ
ಕ್ರಮದ ಬಗೆಯಲಿ ಸತಿಯಳಿಗೆ ಮುಖ
ಕಮಲ ಬಾಡಿತು ನುಡಿಯ ಕೇಳುತ ಮನದ ಚಿಂತೆಯಲಿ
ಕಮಲನಾಭನ ಕರುಣಕವಚವು
ಸಮೆದರಾರೇಗುವರು ಹರಹರ
ಕುಮತಿ ಪುಷ್ಕರನಿಂತು ಮನಿದನೆ ಎನುತ ಮರುಗಿದಳು ॥

(ನ ೪–೩೪)

ಇಲ್ಲಿ ಸ್ಪಷ್ಟವಾಗಿ ಪೂರ್ಣೋಪಮೆ ಕಾಣುತ್ತಿದೆ. ಇದಲ್ಲದೆ, ಮುಖಕಮಲ, ಕರುಣಕವಚ ಎಂಬಲ್ಲಿ ರೂಪಕಾಲಂಕಾರವೊ ರೂಪ ತಳೆದಿದೆ"

ಉತ್ಪ್ರೇಕ್ಷಾಲಂಕಾರ: (ಉಪಮೇಯವನ್ನು ಉಪಮಾನವಸ್ತುವೋ ಎಂದು ಸಂಭಾವಿಸುವುದು ನಿಷಧ ನಗರದ ಈ ವರ್ಣನ ಪದ್ಯದಲ್ಲಿ ಉತ್ಪ್ರೇಕ್ಷೆಯೊಂದಿಗೆ ಅತೀಶಯೋಕ್ತಿಯು ಬಂದಿದೆ–

ಮುಗಿಲ ತುಡುಕುವ ತೆನೆಗಳಾಳ್ವೇ
ರಿಗಳು ಪಾತಾಳಗಳ ಖಾತಗ
ಳಗಳು ಬಳಸಿದ ಕೋಟೆ ಸುತ್ತಾವರಿಸಿದುನ್ನತದ
ಗಗನವೀಧಿಯ ತಾರಕಯವೋಲ್
ಸೊಗಸುದೋರುವ ಕನ್ನಡಿಯ ಸಾ
ಲುಗಳ ರತ್ನ ಪ್ರಭೆಗಳಿ ರಂಜಿಸಿದುದಾ ನಗರ ॥ (ನ.೧.೨೧)

ಗೋಡೆ ಗೋಡೆ ತುದಿಗಳು ಮುಗಿಲನ್ನು ಮುಟ್ಟಿದ್ದವು. ಪಾತಾಳದ ತನಕ ಕಂದಕದ ಅಗತ್ಯವಿದ್ದಿತು ಎಂದುದು ಅತಿಶಯೋಕ್ತಿ, ಕನ್ನಡಿಯ ಸಾಲುಗಳು ಆಗಸ ಬೀದಿಯ ನಕ್ಷತ್ರಗಳೋ ಎಂಬಂತೆ ಎಂದುದು ಉತ್ಪ್ರೇಕ್ಷಲಂಕಾರವಾಗಿದೆ.

ದೃಷ್ಟಾಂತಾಲಂಕಾರ: ವರ್ಣನೆಯಲ್ಲಿ ಬಿಂಬ ಪ್ರತಿಬಿಂಬತ್ವ ಕಂಡು ಬರುವುದು

'ಅರ್ಕನೊಳಾಟವೆ ತಮಕೆ ತಾರ್ಕ್ಷ್ಯನ ಕೊಡೆ

ಕಾರ್ಕೋಟಕ ಮೋಳವಿಪುದೇ
ತರ್ಕಕೆ ರಾಮನುಜರೊಳು ವಾದಿಸಂ
ಪರ್ಕ ನಿಲ್ಪುದೆ ನಿಲ್ಲಲರಿದು ॥ (ವೊ.೧-೩೩)

ಇಲ್ಲಿಯ ಕೊನೆಯ ವಾಕ್ಯಕ್ಕೆ ಮೊದಲ ಎರಡು ಪ್ರಶ್ನಾರ್ಥಕ ವಾಕ್ಯಗಳು ಪ್ರತಿಬಿಂಬದಂತಿವೆ.

ರೂಪಕಾಲಂಕಾರ: ಉಪಮಾನೋಪಮೇಯಗಳನ್ನು ಒಂದಾಗಿ ರೂಪಿಸುವುದು ಕಾಮ್ಯಕವನದಲ್ಲಿ ದುಃಖಾತ್ಯನಾಗಿದ್ದ ಧರ್ಮರಾಯನಲ್ಲಿಗೆ ಮುನಿವಹದೊಂದಿಗೆ ರೋಮಶಮುನಿ ಬಂದು ತಂತೈಸುವುದು ಸಂದರ್ಭ. ಕಾಡನ್ನೆ ಇಲ್ಲಿ ಧರ್ಮರಾಯನ ರಾಜ್ಯ ವೈಭವವನ್ನಾಗಿ ರೂಪಿಸಿದೆ:

ಪರಮ ಋಷಿಗಳ ನೆರವಿಯೋ ಸಭೆ
ಹರಿಯ ಕಾರುಣ್ಯಂಬುಂಧಿಯೊ ಸಿರಿ
ನರ ವ್ಯಕೋದರ ಮಾದ್ರಿತನಯರು ನಿನಗೆ ಬಾಹುಬಲ
ತರುಣಿಯೇ ಭೋಗೈಕ ಸಂಪ
ತ್ತುರುತರದ ವನರಾಜ್ಯ ನಿನಗಿಂ
ತಿರಲು ಸರಿಯೊರರಸ ಚಿಂತಿಸಲೀಕೆ ನೀನೆಂದ (ನ ೧-೧೬)

ರೂಪಕಾಲಂಕಾರ ವಿರುವ ಕೀರ್ತನೆಗಳಲ್ಲಿ ಇವನ್ನು ಉಲ್ಲೇಖಿಸಬಹುದು
ನಾರಾಯಣನೆಂಬ ನಾಮದ ಬೀಜವನು ನಾಲಗೆಯ
ಕೂರಿಗೆಯ ಮೊಡಿ ಬಿತ್ತಿದಯ್ಯೊ (ಜ. ೭೬)

ಅಡಿಗೆಯನ್ನು ಮಾಡಬೇಕಣ್ಣ ನಾನೀಗ ಜ್ಞಾನ
ದಡಿಗೆಯನ್ನು ಮಾಡಬೇಕಣ್ಣ (ಜ. ೨೨)

ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿಯ ಹಿಂಡುಗಳ (ಜ. ೩೦)[೩೦]

ಎ.ಎಸ್. ವೇಣುಗೋಪಾಲರಾವ್ ಅವರು ಈ ರೀತಿ ಹೇಳುತ್ತಾರೆ; ಕನಕದಾಸರ ಕೃತಿಗಳಲ್ಲಿ ಭಾಷೆ ಹೆಚ್ಚು ಸಮೃದ್ಧಗೊಳಿಸಲು ಛಂದಸ್ಸು ಹದಬರಿತವಾಗಿ ಬಳಕೆಗೊಂಡಿದೆ. ಇದು 'ಕನಕದಾಸರ ಕೃತಿಗಳಲ್ಲಿ ಛಂದಃಸ್ವರೂಪ ಮತ್ತು ಕನಕದಾಸದ ಮನೋಧರ್ಮ' ಲೇಖನ ಸ್ಪಷ್ಟಪಡಿಸಿದೆ.

“ಪದ್ಯಕಾವ್ಯದ ಅನಿವಾರ್ಯ ಅಂಶವಾದ ಛಂದಸ್ಸನ್ನು ಕುರಿತು ವಿದ್ವತ್ ಪ್ರಪಂಚದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಕಾವ್ಯದ ಉದ್ದಕ್ಕೂ ಅದರಿಂದ ಉಂಟಾಗುವ ಆಹ್ಲಾದಕ್ಕೂ ಕಾರಣವಾದ ಈ ಪದ್ಯ ಲಾಸ್ಯವನ್ನು ಕುರಿತ ಚರ್ಚೆಯ ಮಥಿತಾರ್ಥವನ್ನು ಹೀಗೆ ಸಂಗ್ರಹಿಸಬಹುದು:

೧) ಛಂದಸ್ಸು– ಗಧ್ಯವನ್ನು ಪದ್ಯದಿಂದ ಪ್ರತ್ಯೇಕಿಸುವ ವಿಶೇಷ ಅಂಶ

೨) ದೇಹಕ್ಕೆ ಚರ್ಮದಂತೆ ಪದ್ಯದೊಡನೆಯೋ ಅದು ಹುಟ್ಟಿ ಬಂದು ಪದ್ಯಕ್ಕೆ ಆಚ್ಛಾದನೆಯಾಗಿಯೂ ಅದರ ಚೆಲುವಿಗ ಕಾರಣವಾಗಿಯೂ ರಂಚಿಸುತ್ತದೆ.

೩) ಕವಿತೆಯ ಅವತಾರವೆಂದರೆ ಛಂದಸ್ಸಿನ ಅವತಾರೂ ಹೌದು ವಾಲ್ಮೀಕಿ ರಾಮಾಯಣವೇ ಇದಕ್ಕೆ ಉತ್ತಮ ಉದಾರಣೆ. ಮುನಿವರನ ಶೋಕ ಭಾವದ ಉಕ್ಕು ಹರಿದು ಬಂದ ಗತಿಯೇ ಲೌಕಿಕ ಅನುಷ್ಟಪ್ ಛಂದಸ್ಸು ಅಉದ ಪಾದಬದ್ದವಾಗಿ ಅಕ್ಷರ ಸಮವಾಗಿ ಹಾಗೂ ತಂತ್ರೀಲಯ ಸಮನ್ವಿತವಾಗಿ ಇದ್ದು, ಕವಿಗೆ ಬೆರಗನ್ನು ತಂದಿತು

“ಕನಕದಾಸರ ಸ್ಫೂರ್ತಿಯ ಮೂಲವನ್ನು ಸುಲಭವಾಗಿ ಗುರುತಿಸಲು ಸಾಧ್ಯ. ಸಂಗೀತಕ್ಕೂ ಸಾಂಗತ್ಯಕ್ಕೂ ಇರುವ ಸಹಜ ಸಂಬಂಧವನ್ನು ಮರೆಯುವಂತಿಲ್ಲ. ವರ್ಣನಾ ಪ್ರಧಾನವಾದ ತನ್ನ ಕಥೆಗೆ ಈ ವರ್ಣಕ ಛಂದಸ್ಸನ್ನು ಬಳಸಿಕೊಂಡಿರುವುದು ಕವಿಯ ಸೂಕ್ಷ್ಮಜ್ಞತೆಗೆ ಸಾಕ್ಷಿ. ಶೃಂಗಾರ, ಕರುಣೆ, ಮೃಧು ಹಾಸಗಳಂತೆ ಸಾಂಗತ್ಯವು ವೀರ ರೌದ್ರಗಳಲ್ಲಿ ಶೋಭಸುವುದಿಲ್ಲಾ ಎಂಬುದನ್ನು ಮರೆಯವಂತಿಲ್ಲ. ‘ತನಿಬೆಲ್ಲದ ಅಚ್ಚು’ ‘ಜೇನು ತುಪ್ಪವ ತೊರೆ ಎಂದು ಕನಕದಾಸರ ತಮ್ಮ ಈ ಕಾವ್ಯವನ್ನು ಬಣ್ಣಿಸಿ ಕೊಂಡಿದ್ದಾರೆ. ಈ ರೂಪಕಗಳು ಸಾಂಗತ್ಯದ ಸ್ವಭಾವವನ್ನು ಸಹಜವಾಗಿಯೇ, ಧ್ವನಿಸುತ್ತದೆ ಸಾಂಗತ್ಯ ಮುಖ್ಯವಾಗಿ ಮೃದು ಮಧುರವಾದ ಕಾವ್ಯ ಬಂಧ. ೨೩೦೦ ಸಾಂಗತ್ಯ ಪದ್ಯಗಳ ಈ ಸುದೀರ್ಘ ಕಾವ್ಯದ ಬಹುಪಾಲು ಈ ಮಧುರ್ಯ ಲಾಲಿತ್ಯಗಳನ್ನು ಬಿಂಭಿಸಿ ಸಾರ್ಥಕವಾಗುತ್ತದೆ ನೋಡಬಹುದು.

ಎಣ್ಣೆಯ ತಲೆಗೂಡಿದುದಿಲ್ಲ ನೊರೆವಾಲು
ಬೆಣ್ಣೆಯ ಮಲಿಸಿದುದಿಲ್ಲ
ಕಣ್ಣಿವೆ ಹಳಚಿ ನೋಡಿದ ದಿಲ್ಲ ಮಗನ ಲಾ
ವಣ್ಯವನೆಂದಳಲಿದಳು (ಸಂ.೨.೪೮)

ಎಣ್ಣೆ, ಬೆಣ್ಣೆ, ಕಣ್ಣಿವೆ, ಅಳಲು, ಹಳಚಿ ಇಂತಹ ಅಪ್ಪಟ ದೇಶೀಯ ನುಡಿಗಳು ಸನ್ನಿವೇಶದ ತೀವ್ರತೆಯನ್ನು ಮನದಟ್ಟು ಮಾಡಿಕೊಡುತ್ತವೆ.

“ರಾಮಧಾನ್ಯ ಚರಿತೆ ಸಾಮಾಜಿಕ ಮಹತ್ವವುಳ್ಳ ವಿಡಂಬನಕೃತಿ ಉಳ್ಳವರು ಇಲ್ಲದವರ ನಡುವಿನ ಸಂಘರ್ಷದ ವಸ್ತುವನ್ನು ಅಷ್ಟು ಹಿಂದೆಯೇ, ಕನಕದಾಸರು ಚರ್ಚೆಗೆ ಈಡು ಮಾಡಿ ಶೋಷಿತರಿಗೆ, ರಾಘವ ಕೃಪೆಯನ್ನು ಸಂರಕ್ಷಣೆಯನ್ನು ಒದಗಿಸಿಕೊಟ್ಟಿದ್ದಾರೆ. ವ್ಯವಸಾಯಿಕ ಧಾನ್ಯಗಳನ್ನು ಪ್ರಾಣಿಗಳನ್ನು ಮಹಾಕಾವ್ಯದ ಪಾತ್ರಗಳಾಗಿಸಿರುವುದು ಇಲ್ಲಿಯ ಸಿದ್ಧಿ. ಈ ಕಾವ್ಯದಲ್ಲಿಯೂ ತಮಗೆ ಪ್ರಿಯವಾದ

ಭಾಮಿನಿ ಷಟ್ಪದಿಯನ್ನೇ ಕವಿ ಬಳಸಿದ್ದಾರೆ. ಪ್ರಾರ್ಥನಾ ಪದ್ಯಗಳಲ್ಲಿಯಂತೂ ಈ ಸಹಪಾಲಯದ ಮಾರ್ದವತೆ ಗಮನಾರ್ಹ.

ಗಿರಿಜೆ: ಯರಸನ: ಭಜಿಸಿ : ಲಕ್ಷ್ಮೀ

ವರನ: ಪಾದಾಂ: ಬುಜಕೆ: ವಂಧಿಸಿ..... (೨)

ಇತ್ಯಾದಿ ಹಿತವಾದ ಓಟ– ಅಥವಾ ಲಾಸ್ಯ ಎನ್ನುವುದೇ ಸರಿ ಇಲ್ಲಿ ಸಾಗುತ್ತದೆ. ಮುಖ್ಯವಾಗಿ ಸಂಭಾಷಣೆಯ ಸಲೀಲತೆಯನ್ನು ಭಾಮಿನಿಯಲ್ಲಿ ಸಾಧಿಸಲಾಗಿದೆ.[೩೧]

೪.೩ ದೇಶೀಯತೆ

ಕನಕದಾಸರ ಕೃತಿಗಳಲ್ಲಿ ದೇಶೀಯತೆ ತುಂಬಿದೆ. 'ಜನವಾಣಿ ಬೇರು ಕವಿವಾಣಿ ಹೂ' ಎಂಬಂತೆ ಜನಮನದ ಬದುಕಿನೊಡನೆ ಬೆರೆತ ದೇಶೀಯ ಪದಗಳು ಕನಕದಾಸರ ಸಾಹಿತ್ಯದಲ್ಲಿ ಮೈದಳೆದಿವೆ. ಅದರಲ್ಲಿ ಒಗಟು, ಗಾದೆ, ಪ್ರಾದೇಶಿಕ ಭಿನ್ನತೆಯ ಎಲ್ಲ ಚಹರೆಗಳು ಕಂಡು ಬರುತ್ತವೆ. ವಿಶೇಷವಾಗಿ ಕೆಲವು ವಿದ್ವಾಂಸರು, ಅಧ್ಯಯನಕಾರರು ಕನಕದಾಸರ ಕೃತಿಗಳಲ್ಲಿ ದೇಶೀಯತೆಯ ಹುಡುಕಾಟ ಮಾಡಿದ್ದಾರೆ. ಅವೆಲ್ಲದರ ತಾತ್ವಿಕವಾದ ವಿಶ್ಲೇಷಣೆ ಇಲ್ಲಿದೆ.

೪.೩.೧ ಒಗಟುಗಳು

ಒಗಟುಗಳು ಜನಸಾಮಾನ್ಯರ ಮನದಾಳದ ಮಾತುಗಳಾಗಿವೆ. ಇವು ಪರಂಪರಾಗತವಾಗಿ ಬಂದಿದ್ದು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿವೆ. ಋಗ್ವೇದ, ಮಂಡಲಗಳಲ್ಲಿ ಪ್ರತಿಮಾ ಹಾಗೂ ಪ್ರಶ್ನೋತ್ತರ ಒಗಟನ್ನು ಕಾಣುತ್ತೇವೆ. ಪ್ರಾಚೀನ ಕಾಲದ ಜನಪದರನ್ನು ಕುರಿತು ಕವಿರಾಮಾರ್ಗಕಾರ 'ಕುರಿತೋದದೆಯಂ ಕಾವ್ಯ ಪರಿಣಿತ ಮತಿಗಳ್' ಎಂದು ಹೇಳಿರುವರು. ಅಕ್ಷರ ಕಲಿಯದೆ ಪಾರಂಪರಿಕ ಜ್ಞಾನದಿಂದ ನಿತ್ಯ ಜೀವನದಲ್ಲಿ ಒಗಟನ್ನು ಬಳಸುತ್ತಿದ್ದರು ಎಂಬುದು ಅಧ್ಯಯನಗಳಿಂದ ತಿಳಿದು ಬರುತ್ತದೆ.

ಸಂಸ್ಕೃತದಲ್ಲಿ ಒಗಟಿಗೆ ಬ್ರಹ್ಮೋದ್ಯ, ಪ್ರಶ್ನೆ, ಕೂಟ ಪ್ರಹೇಳಿಕಾ ಎಂದು ಕರೆದಿದ್ದಾರೆ. ಆಂಗ್ಲಭಾಷೆಯಲ್ಲಿ Riddle ಎಂದು ಕನ್ನಡದಲ್ಲಿ ಒಗಟು, ಒಡಪು ಎಂಬ ಪದಗಳಿವೆ. ಈ ಒಗಟುಗಳು ಜನಸಾಮಾನ್ಯರ ಪ್ರತಿಭಾ ಸಾಮರ್ಥ್ಯಕ್ಕೂ, ಅದ್ಭುತ ಕಲ್ಪನಾ ಶಕ್ತಿಗೂ ಜ್ವಲಂತ ನಿದರ್ಶನವಾಗಿದೆ. ಅರ್ಥಬದ್ಧತೆ, ಸ್ಪಷ್ಟತೆ, ರೂಪಕ, ಸಾಂಕೇತಿಕತೆ, ಹಾಸ್ಯ, ಪ್ರಾಸ, ಅನುಪ್ರಾಸ, ಲಯಬದ್ಧತೆ, ಸಾರ್ವತ್ರಿಕತೆ ಇತ್ಯಾದಿಗಳು ಒಗಟಿನ ಲಕ್ಷಣಗಳು ಎನ್ನಬಹುದು. ಸಾಮಾನ್ಯವಾಗಿ ಗಾದೆಯಂತೆ ಸರ್ವಕಾಲಿಕ ಪಾತ್ರವಲ್ಲದ ಒಗಟುಗಳು, ಹಳ್ಳಿ ಜನರ ವಿರಾಮ ಕಾಲದಲ್ಲಿ, ಮನರಂಜನೆಗಾಗಿ ಸೃಷ್ಟಿಯಾದವುಗಳು. ಮಕ್ಕಳನ್ನು ಕುರಿತಾಗಿ, ಹಾಸ್ಯಕ್ಕಾಗಿ, ವಿನೋದಕ್ಕಾಗಿ, ಬಳಕೆಯಾಗುತ್ತಿದ್ದವು. ಬುದ್ಧಿಶಕ್ತಿಗೆ ಸಾಣೆ

ಹಿಡಿಯುವುದು ಕನ್ನಡದಲ್ಲಿ ಒಡಪು ಒಡಗಥೆ, ಮುಂಡಿಗೆ ಮತ್ತು ಮುಡಿಗೆ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತದೆ ಎಂದು ಅಧ್ಯಯನಕಾರರ ಅಭಿಪ್ರಾಯವಾಗಿದೆ.

ಹಾ.ಮಾ. ನಾಯಕರು: ಇಬ್ಬರ ಮಧ್ಯೆ ವಾದವೊಂದು ಎದ್ದಾಗ ಅವರಲ್ಲಿ ಒಬ್ಬ ತನ್ನ ತಲೆಯ ಮೇಲಿನ ಉಡುಪನ್ನು (ಮುಂಡಾಸು) ತೆಗೆದು ಎಸೆದರೆ ಅದು ಸವಾಲಿನ ಸೂಚಕವಾಗಿದ್ದು, ಇನ್ನೊಬ್ಬ ಅದನ್ನು ಎತ್ತಿಕೊಂಡರೆ ಆ ಸವಾಲನ್ನು ಅಂಗೀಕರಿಸಿದಂತಾಗುತ್ತದೆ. ಹೀಗೆ ಮುಂಡಿಗೆ ಮತ್ತು ಮುಡಿಗೆಗಳು ಮೊದಲು ಶಿರೋವಸ್ತ್ರವನ್ನು ಸೂಚಿಸುವ ಪದಗಳಾಗಿದ್ದು, ಕ್ರಮೇಣ ಸವಾಲು ಎಂಬ ಅರ್ಥವನ್ನು ಪಡೆದವು ಎಂಬ ಅಭಿಪ್ರಾಯವನ್ನು ಹೊಂದಲಾಗಿದೆ. ಪ್ರಾಚೀನ ಕಾವ್ಯಗಳಲ್ಲಿನ ಇಂತಹ ಪದಗಳನ್ನು ಒಗಟಿನ ಹಿನ್ನೆಲೆಯಲ್ಲಿ ವಿಶ್ಲೇಷಿಸುವಾಗ ಇವು ಒಗಟಿನ ಸಮಾನಾರ್ಥಕ ಸೂಚಕ ಪದಗಳು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸುಧಾಕರ ಅವರು ಕನಕದಾಸರ ಕೀರ್ತನೆ ಹಾಗೂ ಮುಂಡಿಗೆಗಳು ಎಂಬ ಕೃತಿಯಲ್ಲಿ ತಮ್ಮ ಅಭಿಪ್ರಾಯ ಹೇಳುತ್ತಾ ಕನಕದಾಸರು ಸಹ ಒಗಟಿನ ರೂಪದ ಅನೇಕ ಮುಂಡಿಗೆಗಳನ್ನು ರಚಿಸಿದ್ದಾರೆ.

ಮಾಡಿಲ್ಲ ಮಳೆಯಿಲ್ಲ ಮರದ ಮ್ಯಾಲೆ ನೀರ ಕಂಡೆ
ಕಾಡು ಸುಡುವುದು ಕಂಡೆ ಬೂದಿಯ ಕಾಣಲಿಲ್ಲ ॥೧॥
ಬಿತ್ತಲಿಲ್ಲ ಬೆಳೆಯಲಿಲ್ಲ ನೆಟ್ಟು ನೀರ ತೋರಲಿಲ್ಲ
ಹೊತ್ತುಕೊಂಡು ತಿರುಗಿದೆ ರೊಕ್ಕದಾ ಪ್ರಾಣಿಯನು ॥೨॥
ಅಡಿಕೆಯಷ್ಟು ಆಕಳಣ್ಣ ಹಿಡಿಕೆಯಷ್ಟು ಕೆಚ್ಚಲಣ್ಣ
ಒಡನೆ ಕರೆದಾರ ಕರಿತೈತಿ ರಂಜಣಿಗಿ ಹಾಲಣ್ಣ ॥೩॥
ಮೂರು ಮೊಳದ ಬಳ್ಳಿಗೆ ಆರು ಮೊಳದ ಕಾಯಣ್ಣ
ಆರು, ಹತ್ತರ ಮೊಳದ ಕಾಯಿ ಕೊಯ್ಯುವ ಕುಡುಗೋಲಣ್ಣ ॥೪॥
ಊರ ಮುಂದೆ ಹಿರಿಣ್ಯಕನ ಕೊರಳ ಕೊಯುದ ಕಂಡೆ
ಕೊರಳ ಕೊಯುದ ಕಂಡೆ ರಕುತವ ಕಾಣಲಿಲ್ಲ ॥೫॥

ಈ ಮುಂಡಿಗೆಯು ಜನಪದರು ಹೇಳುವ ಹಾಗೆಯೇ ಇದೆ. ಕನಕದಾಸರು ಜನಸಾಮಾನ್ಯರನ್ನು ತಮ್ಮ ತೊಳ್ತೆಕ್ಕೆಗೆತ್ತಿಕೊಳ್ಳುವುದಕ್ಕಾಗಿ ಮೊದಲು ಭೌತಾರ್ಥ ಸ್ಫುರಿಸುವಂತೆ ಮಾಡಿ ತದನಂತರ ಅಧ್ಯಾತ್ಮಸ್ತರದತ್ತ ಎಳೆದು ಪ್ರಜ್ಞಾವಂತರನ್ನಾಗಿ ಮಾಡುವ ಜನಸಮ್ಮುಖ ದೃಷ್ಟಿಗೆ ಇದು ತೋರುಬೆರಳಾಗಿದೆ. ಈ ಮುಂಡಿಗೆಗಳ ಅರ್ಥಗಳನ್ನು ಸುಧಾಕರರು ಹೀಗೆ ಅರ್ಥೈಸಿದ್ದಾರೆ.

ಉಪಮೆ/ರೂಪಕ	**ಭೌತಾರ್ಥ**	**ಅಧ್ಯಾತ್ಮದರ್ಥ**
ಮಾಡಿಲ್ಲ..... ನೀರಕಂಡೆ	ಎಳನೀರು	ಬೆವರು, ಕಣ್ಣೀರು
ಕಾಡು.... ಬೂದಿಯಕಾಣಲಿಲ್ಲ	ಕರ್ಪೂರ	ಜ್ಞಾನಾಗ್ನಿಯಿಂದ ಅರಿಷಡ್ವರ್ಗಗಳ ಕರ್ಮಗಳ ದಹನ

ಬಿತ್ತಲಿಲ್ಲ.... ಪ್ರಾಣಿಯನು	ತಲೆಗೂದಲು	ಆತ್ಮ
ಅಡಿಕೆ.... ಹಾಲಣ್ಣ	ಜೇನುಹುಳು ಜೇರಿಗೂಡಿ ಜೇನುತಪ್ಪ	ಗುರುಭೋದೆ ಸೂಕ್ಷ್ಮವಾಗಿದ್ದರೂ ಅದನ್ನು ಗ್ರಹಿಸುವ ಶಿಷ್ಯನ ಅದರ ಗಾತ್ರ ಹಿಗ್ಗುತ್ತದೆ ಕರೆಯುವವರ ಅಪಮ ಶಕ್ತಿ ಹಾಲನ್ನು ನೀಡುತ್ತದೆ ರಂಜಣಿಗಿಗುಡಾಣ(ಮಣ್ಣಿನದೊಡ್ಡಪಾತ್ರೆ)
ಮೂರು ಮೊಳ.... ಕುಡಗೋಲಣ್ಣ	ಸೋರೇಕಾಯಿ	ಮೂರು ಗುಣಗಳಿಂದ ಕೂಡಿದ ಈ ಜವಳಿ (ರೋಟ) ದೇಹವೆಂಬ ಬಳ್ಳಿಗೆ ಷಡ್ ವೈರಿಗಳೆಂಬ ಆರು ಮೊಳದ ಕಾಯುಂಟು ಅದನ್ನು ಕೊಯ್ಯುವ ಕುಡಗೋಲು ಹದಿನಾರಮೊಳ (ಜ್ಞಾನೇಂದ್ರಿಯ, ಪಂಚಕ ಕರ್ಮೇಂದ್ರಿಯ ಪಂಚಕ ಪ್ರಾಣ ಪಾಶನಕ ಹಾಗೂ ಮನಸ್ಸು)
ಊರಮುಂದೆ.... ರಕುತವ ಕಾಣಲಿಲ್ಲ ಇರುವ	ಹೇನು, ಇರುವೆ ಮುಂತಾದ ಕ್ರಿಮಿಗಳು	ಪ್ರತಿಯೊಬ್ಬನ ಸೂಕ್ಷ್ಮದೇಹದಲ್ಲೂ ಅಭಿಮಾನ ದೇವತೆಯಾದ ಹಿರಣ್ಯಗರ್ಭನಿಗೆ ಅಹಂಕಾರವೆ ಶಿರಸ್ಸಾಗಿದೆ. ಅದನ್ನು ವಿಚಾರ ಖಡ್ಗದಿಂದ ಕತ್ತರಿಸಿದುದನ್ನು ಕಂಡೆನಾದರೂ ರಕ್ತ ಕಾಣಲಿಲ್ಲ ಎಂಬ ಭಾವ.

೪.೩.೨ ಗಾದೆಗಳು

ಕನಕದಾಸರ ಲೋಕಾನುಭವಗಳನ್ನು ಅವರ ಜಾಣನುಡಿಗಳಲ್ಲಿ ಕಾಣುತ್ತೇವೆ. ಹಾಸ್ಯದ ಹೊನಲಿನೊಂದಿಗೆ, ಅವು ನೀತಿ ಬೋಧೆಯನ್ನು ಮಾಡುವವು. ಸಂದರ್ಭೋಚಿತವಾಗಿ ಅವನ್ನು ಬಳಸಿದ ದಾಸರ ಜಾಣ್ಮೆ ಮೆಚ್ಚುವಂತಹದುದು. ಅವುಗಳಲ್ಲಿ ಕೆಲವು ಹೀಗಿವೆ;

'ಕಂತೆಗೆ ತಕ್ಕ ಬೊಂಕ್ತೆ'

'ಮಂಜುಸುರಿಯಲಿ ಕೆರೆತುಂಬುವುದೇ'

'ಮಾಣಿಕ್ಯವೆಂದು ಪಿಡಿದರೆ ಭೂರಿ ಕೆಂಡ ವಿದಾಯಿತು'

'ಮುಂಗೈ ಕಂಕಣಕ್ಕೆ ಕನ್ನಡ ಯಾಕೆ'

'ಸತ್ಯವಂತರ ಸಂಗವಿರಲು ತೀರ್ಥವೇತಕೆ'

'ಮಕ್ಕಳಿಲ್ಲದ ಸಿರಿಯು ಕೊಳೆತ ತೆಂಗಿನ ಕಾಯಿಯ ತುರಿಯು'

'ಬಡತನ ಬಂದಾಗ ನೆಂಟರ ಬಾಗಿಲು ಸೇರಬಾರದು'

'ದೇವರಿಲ್ಲದ ಗುಡಿಯು ಹಾಳು ಬಿದ್ದ ಅಂಗಡಿಯು'

'ಹರಿಯ ಕೀರ್ತನೆಗೈಯದ ಜಿಹ್ವೆ ಕಡಲ ನಾಲಿಗೆ'

ಜಿ.ಎಸ್. ಭಟ್ ಹೇಳುವಂತೆ, "ಕನಕದಾಸರ ಅನುಭವ ಅಸಾಧಾರಣ ಕಲ್ಪನಾ ಶಕ್ತಿಗೆ ಈ ಜಾಣನುಡಿ ಕನ್ನಡಿ ಹಿಡಿದಂತಿದೆ".[೩೨]

ಕನದಾಸರು ತಮ್ಮ ಕೃತಿಗಳು, ಕೀರ್ತನೆಗಳು, ಮುಂಡಿಗೆಗಳ ಮೂಲಕ ಅಪಾರ ಶಬ್ದಸಂಪತ್ತನ್ನು ನೀಡಿದ್ದಾರೆ. ಅಲ್ಲಿರುವ ಕತೆಗಾರಿಕೆಯ ಕಲೆ ಯಥೇಚ್ಚವಾಗಿದ್ದು, ಅವರು ಬಳಸಿದ ಶೈಲಿಗಳು ಸುಲಲಿತವಾಗಿ ಹರಿಯುತ್ತದೆ. ಅವರ ಕೃತಿಗಳಲ್ಲಿ ಗಾದೆಗಳನ್ನು, ಜಾಣನುಡಿಗಳನ್ನು ಆಯಾ ಸಂದರ್ಭಗಳಿಗೆ ಚೆನ್ನಾಗಿ ಹೊಂದಿಕೊಳ್ಳುವಂತೆ ದಾಸರು ಪೋಣಿಸಿರುವುದೂ ಕಂಡುಬರುತ್ತದೆ.

ಹನುಮಂತ ತಾಸಗಾಂವಕರ್ರ ಅಭಿಪ್ರಾಯ ಹೀಗಿದೆ; "ಜಾಣನುಡಿಗಳು ಹಲವುಬಗೆಯಲ್ಲಿ ಅಡಕಗೊಂಡಿವೆ. ಕೀರ್ತನೆ, ಸಾಹಿತ್ಯ ಕಾವ್ಯಗಳಲ್ಲಿವೆ. ಕೀರ್ತನೆಗಳಲ್ಲಿ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಏಕಾಂತಭಕ್ತಿ, ನೀತಿ, ಧರ್ಮ, ಬೋಧನೆ, ಡಂಭಾಚಾರ, ಸಂಕುಚಿತ ಮನೋವೃತ್ತಿ ಖಂಡನೆ, ಹರಿನಾಮಸ್ಮರಣೆ, ದೇವತಾಸ್ತುತಿ, ಪ್ರತಿಮಾವಿಧಾನ, ಪದಲಾಲಿತ್ಯ ಇವುಗಳು ಕನಕದಾಸರ ಹಾಡಿನಲ್ಲಿ ಕಂಡುಬರುತ್ತವೆ".[೩೩]

ಮೇಲೆ ಹೇಳಿದ ಅಂಶಗಳಲ್ಲಿ ಅವುಗಳ ಜೊತೆಗೆ ಹಲವು ಗಾದೆ ತರಹ ಒಂದೇ ಹೇಳಿಕೆಯಲ್ಲಿ ಜಾಣ್ನುಡಿಯನ್ನು ಕಾಣುತ್ತೇವೆ.

- ಹರಿದು ಬಂದವನಿಗೆ ಅಶನವೀಯದು.
- ಪರನಿಂದೆಗಿಂತ ಮತ್ತೊಂದು ಪಾಪವಿಲ್ಲ.
- ಸತ್ಯವ್ರತವುಳ್ಳವಗೆ ಮೃತ್ಯುವಿನ ಭಯವುಂಟೆ
- ಉತ್ತಮರ ಸಂಗಕ್ಕಿಂತ ಅಧಿಕ ಧರ್ಮವುಂಟೆ
- ಎಲ್ಲರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
- ಅರಿವೆಂಬ ದೀಪವ ಹಿಡಿದು
- ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು
- ಪಾಪಿಗಳಿದ್ದಲ್ಲಿ ರೂಪುಳ್ಳವಸ್ತು ತೋರಬಾರದು
- ಬಡತನ ಬಂದಾಗ ನೆಂಟರ ಬಾಗಿಲನ್ನು ಸೇರಬಾರದು

- ಸಿರಿಬಂದ ಕಾಲಕ್ಕೆ ತನಗಾದವರನ್ನು ಮರೆಯಬೇಡ
- ಸರಸವಿಲ್ಲದ ಸತಿಯ ಭೋಗ ತನುರೋಗ
- ತಾಯಿತೀರಿದ ಮೇಲೆ ತವರಾಸೆಯೆ
- ಸತಿಯಿಲ್ಲದವಗೆ ಸಂಪದವೆಂಬುದುಂಟೆ?

ಹೀಗೆ ಇವು ಕೀರ್ತನೆ ಸಾಹಿತ್ಯ ಅಭ್ಯಾಸಿಗನಿಗೆ ಸಿಗುತ್ತವೆ. ಅವು ಜಾಣನುಡಿಗಳಾಗಿ ಇಂದು ಸಮಾಜದಲ್ಲಿರುವ ಮೌಲ್ಯಗಳಾಗಿ ಅಭಿವ್ಯಕ್ತಿ ಪಡೆದಿವೆ.

ವಿಮರ್ಶಕರು, ವಿದ್ವಾಂಸರು, ಕನಕದಾಸರ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿ ಅವರು ಕೃತಿಗಳಲ್ಲಿ ಗಾದೆಗಳನ್ನು ಬಳಸಿದ ಬಗೆ, ಅವುಗಳ ಪ್ರಸ್ತುತತೆ ಕುರಿತು ಹೇಳಿರುವದು. ಸುತ್ಯಾರ್ಹ ಕಾರಣವಿಷ್ಟೆ ಗಾದೆಗಳು ಜಾನಪದದ ಬಹುಮುಖ್ಯ ಪ್ರಕರಗಳಲ್ಲಿ ಒಂದು. ಇದಕ್ಕೆ ನಾಣ್ಣುಡಿ ಎಂತಲೂ ಕರೆಯುತ್ತಾರೆ. ಗಾದೆ ಇದು ಸಂಸ್ಕೃತದ ಪದ. ಈ ಪದದಿಂದಲೇ ಹೆಚ್ಚು ಪ್ರಚಾರದಲ್ಲಿದೆ. ಸಂಸ್ಕೃತದ 'ಗಾಥಾ' ಶಬ್ಧದ ತದ್ಭವವೆ 'ಗಾದೆ'ಯಾಗಿದೆ. ಆಂಗ್ಲ ಭಾಷೆಯಲ್ಲಿ 'Proverb' ಶಬ್ದಕ್ಕೆ ಸಂವಾದಿಯಾಗಿ 'ಗಾದೆ'ಯನ್ನು ಬಳಸುತ್ತಾರೆ. ಗಾದೆ ವೇದಕ್ಕೆ ಸಮಾನ ಎನ್ನುವರು. ಅಲ್ಲದೆ ಇದಕ್ಕೆ ಸೂಕ್ತಿ, ಲೋಕೋಕ್ತಿ ಎಂದು ಬಳಕೆಯಲ್ಲಿವೆ. ಪಾಶ್ಚಾತ್ಯ ವಿದ್ವಾಂಸರಾದ ಜಾನ್ ರಸೆಲ್ ಅವರು 'ಇದು ಹಲವರ ಜ್ಞಾನ ಅನುಭವದ ಅಭಿವ್ಯಕ್ತಿಯಾಗಿದೆ. ಮೌಖಿಕ ಹಾಗೂ ಸಾಹಿತ್ಯಿಕವಾಗಿ ಬಳಕೆಯಾಗುತ್ತಿದೆ' ಎಂದಿರುವರು. ಸಾಮಾನ್ಯವಾಗಿ ಈ ಗಾದೆಯನ್ನು ಹೊಸ ಸುಭಾಷಿತಗಳ ಮಸೆಗಲ್ಲು ವಿವೇಕದ ಒರೆಗಲ್ಲು ಎನ್ನುವರು. ಅದು ಒಂದು ರೀತಿಯಲ್ಲಿ ಜನಸಾಮಾನ್ಯರ ವಿಶ್ವಕೋಶ. ಪರಂಪರಾನುಗತವಾದ ಜ್ಞಾನದಿಂದ ಬರುವ ಸೊಳ್ನುಡಿಗಳೆನ್ನಬಹುದು. ಇವು ಜನತೆಯ ಅಂಗೀಕಾರ ಮುದ್ರೆಯನ್ನು ಪಡೆದು ಪರಿಮಿತವಲಯದಲ್ಲಿ ಮೊದಲು ಚಲಾವಣೆ ಪಡೆಯುತ್ತದೆ. ಅನಂತರ ಅದರ ಸತ್ವಕ್ಕೂ, ಸ್ವಾರಸ್ಯಕ್ಕೂ, ಸತ್ಯತೆಗೂ ಮಾರುಹೋಗುವಂತೆ ಇತರ ಜನರು ಅದನ್ನು ಬಳಸತೊಡಗುತ್ತಾರೆ. ಹೀಗಾಗಿ ಅದು ಸಮುದಾಯಿಕವಾಗಿ ಸಾರ್ವಜನಿಕ ಸೊತ್ತಾಗಿ ಅದನ್ನು ಬಳಸತೊಡಗುತ್ತಾರೆ. ಗಾದೆಗಳು ರೀತಿ, ನೀತಿ, ನಂಬಿಕೆ, ನಡಾವಳಿ, ಆಚಾರ, ವಿಚಾರಗಳೆಲ್ಲವನ್ನು ಅವು ಒಳಗೊಂಡಿವೆ. ಸಾರ್ಥಕ ಗಾದೆಗಳು ಜೀವನ ಸೂತ್ರ ಹಾಗೂ ವಿವೇಕದ ದಾರಿದೀಪಗಳಾಗಿವೆ. ಗಾದೆ ಬೋಧಿಸುವ ಸನ್ಮಾರ್ಗ ಹಿಡಿದು ನಡೆದರೆ ಅವರ ಬಾಳು ಬಂಗಾರದಂತೆ ಮೌಲ್ಯಯುತವಾಗುತ್ತದೆ. ಇಂತಹ ಗಾದೆಗಳನ್ನು ಕನಕದಾಸರು ತಮ್ಮ ಕೃತಿಗಳಲ್ಲಿ ಬಳಕೆ ಮಡಿರುವರೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿರುವರು. ಹಾಗೂ ಅಧ್ಯಯನ ಮಾಡಿರುವರು.

ಹಜರತ್ ಸಾಬ್ ನದಾಫ್ ಅವರು 'ಕನಕದಾಸರ ಕೃತಿಗಳು: ಜಾನಪದೀಯ ಅಧ್ಯಯನ' ಎಂಬ ಶೀರ್ಷಿಕೆಯ ಕೃತಿಯ ೧೬೭ನೆ ಪುಟದಲ್ಲಿ ಈ ರೀತಿ ಹೇಳುತ್ತಾರೆ.

"ಕನಕದಾಸರು ಬುದ್ದಿ ಮಾತುಗಳನ್ನು ಹೇಳುವಂತಹ ಸೂಕ್ತ ಅಥವಾ ಗಾದೆಗಳನ್ನು ಇಟ್ಟುಕೊಂಡು ಕೀರ್ತನೆಗಳನ್ನು ರಚಿಸಿದ್ದಾರೆ".[೩೪]

'ಹಲವು ಮಾಯಗಳಿಂದ ಹಂಬಲಿಸಿ ಕೆಡಬೇಡ'
'ಬಲವಂತರೊಡನೆ ಹಗೆ ಮಾಡಬೇಡ'
'ಕುಲದಲ್ಲಿ ಜನಿಸಿ ಕುಚೋದ್ಯ ಮಾಡಲು ಬೇಡ'
'ನಲಿದು ಹರಿಯ ಪೊಗಳದ ನಾಲಿಗೆಯು ಬೇಡ'
'ಮಂದ ಮತಿಗಳ ಕೂಡ ಮಹಕಥೆಯ ನುಡಿಬೇಡ'
'ಯತಿಯಾದ ಮೇಲೆ ಸತಿ ಸುತರಾಸೆ ಬೇಡ'
'ಹಿತತಪ್ಪಿ ನಡೆವಂತ ಹೆಂಡತಿಯು ಬೇಡ'
'ಕೆಟ್ಟು ಹೋದವರನ್ನು ತಿರುಗಿ ಕರೆತರಬೇಡ'
'ಮುಟ್ಟಾದ ಮೇಲೆ ಮೋಹಿಸಿ ಕೂಡಬೇಡ'
'ಭ್ರಷ್ಟನಾಡಿದನೆಂದು ಸಿಟ್ಟಿನಲಿ ನುಡಿಬೇಡ'
'ಕಷ್ಟ ದೆಸೆಯೊಳು ಧೈರ್ಯಬಿಟ್ಟು ಕೆಡಬೇಡ'
'ವಿಟಜನರ ಕೂಡಿ ವೇಶ್ಯಾವಾರ್ತೆಗಿಳಿಯ ಬೇಡ'
'ಸಟೆ ಹೇಳಿ ಸಂಸಾರ ಕೆಡಿಸಬೇಡ'
'ತುಟಿ ಮೀರ್ದ ಹಲ್ಲಂತೆ ದೂತ ಎಂದಿಗೂಬೇಡ'
'ನಿಟಿಲ ನೇತ್ರನು ನಾನೆನುವ ಜಂಭ ಬೇಡ'

ಸುಧಾಕರ (ಸಂ) ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು ಕನಕ ಸಾಹಿತ್ಯದರ್ಶನ ಸಂಪುಟ-೪ರ ೧೫೫ನೆ ಪುಟದಲ್ಲಿ ಕೀರ್ತನೆಗಳ ಮಹತ್ವದ ಸಾಲುಗಳನ್ನು ಸಂಗ್ರಹಿಸಿ ಗಾದೆಗಳಾಗಿವೆ ಎಂದು ಹೇಳಿರುವರು.

'ಹುಟ್ಟುತೇನು ತಾರಲಿಲ್ಲ ಸಾಯತೇನ ಒಯ್ಯಲಿಲ್ಲ'
'ಜಲವ ಸುಗಂಧವ ಜಲವರಿಯದು'
'ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ
ನಿತ್ಯ ಜ್ಞಾನಿಯೊದ ಮೇಲೆ ಚಿಂತೆಯಾತಕೆ
ತಾನು ಉಣ್ಣದ ಪರರಿಗಿಕ್ಕದ ಧನವಿದ್ಯಾತಕೆ
ಮಾನಹೀನನಾಗಿ ಬಾಳ್ವ ಮನುಜನ್ಯಾತಕೆ
ಜ್ಞಾನವಿಲ್ಲದೆ ನೂರು ಕಾಲ ಬದುಕಲ್ಯತಕೆ
ಮಾವನೀಯ ತೊರೆದ ಮೇಲೆ ಭೋಗವ್ಯಾತಕೆ
ಮಾತು ಕೇಳದ ಮಲೆತು ನಡೆದ ಮಕ್ಕಳ್ಯಾತಕೆ
ಪ್ರೀತಿಯಿಲ್ಲದ ಎಡಯಲಿಕ್ಕಿದ ಅನ್ನವ್ಯಾತಕೆ
ನೀತಿಯರಿತು ನಡೆಯದಿರುವ ಬಂಟನ್ಯಾತಕೆ

ಸೋತ ಹೆಣ್ಣಿಗೆ ಓತು ನಡೆಯದ ಪುರುಷನ್ಯಾತಕೆ
ಸನ್ನೆಯರಿತು ನಡೆಯದಿರುವ ಸತಿಯು ಯಾತಕೆ'

'ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡ ಜಗಳವೇ ಲೇಸು
ಪಾಪಿಗಳಿದ್ದಲ್ಲಿ ರೂಪುಳ್ಳವಸ್ತುವ ತೋರಬಾರದು
ಬಹುಕೋಪಿಗಳಿದ್ದಲ್ಲಿ ಅನುಭವ ಗೋಷ್ಠಿಯ ಮಡಬಾರದು
ಅಡಿಸತ್ತ ಮಡಕೆಗೆ ಜೋಡಿಸಿ ಒಲೆಗುಂಡು ಹೂಡಬಾರದು
ಬಹು ಬಡತನ ಬಂದಾಗ ನೆಂಟರ ಬಾಗಿಲ ಸೇರಬಾರದು'[೩೫]

ಜಿ.ಜಿ. ಮಂಜುನಾಥ ಸಂ. ಮೋಹನ ತರಂಗಿಣಿ ಸಂಪುಟ-೩ರ ಪುಟ ೮೫ರಲ್ಲಿ ಇವರು ಗಾದೆಗಳನ್ನು ಸಂಗ್ರಹಿಸಿದ್ದಾರೆ.

'ತಲೆ ಬಲಿತೆಂದು ಕಲ್ಲಿಗೆ ಹಾಯಬೇಡ
ಒಗತನ ಬಿಟ್ಟು ಹೋದಾಗ ಹಾಲಿಗೆ ಹೆಪ್ಪ
ಮಾಗೆದಿಕ್ಕಿದವರಾರುಂಟು
ಹುಗಲಮ್ಮದಿರುಳು ನಿಟ್ಟಿಸಿದ ಪೆರ್ಬಾವಿಯ
ಪಗಲು ಬಿದ್ದಂತಾದುದೆಮಗೆ'[೩೬]

ಸಾ.ಶಿ. ಮರುಳಯ್ಯನವರು 'ಕನಕಸಾಹಿತ್ಯ ದರ್ಶನ' ಸಂಪುಟ-೨ರಲ್ಲಿ ೯೦ನೆ ಪುಟದಲ್ಲಿ ಗಾದೆಗಳು ಕೀರ್ತನೆಗಳಲ್ಲಿ ಬಳಕೆಯಾಗಿವೆ ಎಂದು

'ಸುರನದಿಗೆ ತಾಯರಿಯೆ ಕಾಡೊಳು ಹರಿವ ಹಳ್ಳದ ನೀರು
ಗರುಡನ ಮರಿಗೆ ಹದ್ದಂತರವೆ
ಹಂಸಗೆ ಬಕನು ಹೋಲುವುದೆ?
ಹೃದಯ ಕರಗುವ ಮಾತನೆಂದುದು
ಮದಕರಿಗೆ ನೊರ ಜಂತರವೆ ಕೈ
ಸದರದವರನು ಕೊಲುವುದೇನರಿದೆಂದುದಾ ಪಕ್ಷಿ' ॥೧೨॥

ಜನಸಾಮಾನ್ಯರಿಗೆ ತಮ್ಮ ಕೀರ್ತನೆಗಳು ಮನಮುಟ್ಟುವಂತೆ ಇರಲಿ ಎನ್ನುವುದಕ್ಕೋಸ್ಕರ ಕನಕದಾಸರ ಈ ರೀತಿಯ ಗಾದೆಗಳನ್ನು ಬಳಸಿದ್ದಾರೆ ಎಂದಿದ್ದಾರೆ.[೩೭]

ಜಾಣನುಡಿಗಳಲ್ಲಿರುವ ತಾತ್ವಿಕತೆ:

ಜಾಣನುಡಿ (ಜಾಣ್ನುಡಿ) ಎಂದರೆ ಬುದ್ಧಿವಂತಿಕೆಯ ಮಾತು. ಬುದ್ಧಿವಂತರು, ಜಾಣರು ಆಡಿದ ಮಾತು. ಎಂದುರ್ಥ. ಬುದ್ಧಿವಂತರು, ಜಾಣರು, ವಿದ್ವಾಂಸರು, ಕವಿಗಳು ಆಡುವ ಮಾತಿಗೂ

ಜನಸಾಮಾನ್ಯರು, ದಡ್ಡರು, ಮೂರ್ಖರು ಆಡುವ ಮಾತಿಗೂ ಅಂತರವುಂಟು. ಆಡುವ ಮಾತು ಗಂಭೀರವಾಗಿದ್ದು, ತಾವು ಹೇಳಬಯಸುವ ಅಭಿಪ್ರಾಯ ನೇರವಾಗಿ ಕೇಳುವವರ ಹೃದಯಕ್ಕೆ ಹೋಗುವಂತೆ ಇರುವುದು ಬುದ್ಧಿವಂತಿಕೆಯ, ಜಾಣ್ಮೆಯ ಲಕ್ಷಣ. ಅಂತಹ ಮಾತು ಕೇಳಿದವರ ಮನವನ್ನು ಸೂರೆಗೊಳ್ಳುವ ನುಡಿಯೇ ಜಾಣನುಡಿ ಎನ್ನುವರು.

ಜಾಣರ ಮಾತು ಕೇಳಿದ ಕೂಡಲೇ ಅರ್ಥಮಾಡಿಕೊಂಡಾಕ್ಷಣ ಅದರ ಪ್ರಯೋಜನ ಮುಗಿದು ಹೋಗುವುದಿಲ್ಲ. ಕೇಳಿದವರ ಮನಸ್ಸಿನ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿ ಆ ಮಾತನ್ನು ಅವರು ಪದೇ ಪದೇ ಸ್ಮರಿಸಿ, ಮೆಲುಕುಹಾಕುವಂತೆ ಮಾಡುತ್ತವೆ. ತಮ್ಮದನ್ನಾಗಿಯೇ ಮಾಡಿಕೊಂಡು, ಅವರೂ ಮುಂದೆ ತಮ್ಮ ಮಾತಿನಲ್ಲಿ ಬಳಸುವಂತಾಗುತ್ತದೆ. ಕಾಲಕ್ರಮದಲ್ಲಿ ಹಲವರ ನಾಲಿಗೆಯ ಮೇಲೆ ನಲಿದಾಡಿದ ಜಾಣನುಡಿ, ನಾಡನುಡಿ, ನಾಣ್ನುಡಿ, ಗಾದೆ ಎನಿಸಿಕೊಳುವುದು.

ಜಾಣನುಡಿಗಳಲ್ಲಿ ಮುಖ್ಯವಾಗಿ ನಾವು ನೋಡುವುದು, ನೋಡಬೇಕಾದುದು ಲೋಕಾನುಭವ. ಜನಾಂಗದ ಜ್ಞಾನಭಂಡಾರವಾಗಿ ಉಳಿಯುತ್ತವೆ. ಇವು ಅನೇಕ ವೇಳೆ ಸಮಾಜದ ಚಿತ್ರಣವನ್ನು ನಮ್ಮೆದುರಿಗೆ ತಂದು ನಿಲ್ಲಿಸುತ್ತವೆ. ನೀತಿಯನ್ನು ಬೋಧಿಸುತ್ತವೆ. ಬೇಕು ಬೇಡಗಳನ್ನು ಸೂಚಿಸುತ್ತದೆ. ಪ್ರತಿಭಾಶಾಲಿಯಾದವನು ಮಾರ್ಮಿಕವಾಗಿ ಜಾಣ್ಮೆಯಿಂದ ಆಡಿದ ಮಾತು ಅನುಭವ ಸಂಪತ್ತಿನಿಂದ ತುಂಬಿರುತ್ತದೆ.

ಒಂದು ಭಾಷೆಯಲ್ಲಿರುವ ಸಾವಿರಾರು ಜಾಣನುಡಿಗಳನ್ನು ಒಟ್ಟಿಗೆ ಸೇರಿಸಿ ಪರಿಶೀಲಿಸಿದರೆ ಆ ಭಾಷೆಯ, ಅದನ್ನಾಡುವ ಜನಾಂಗದ, ದೇಶದ ಸಂಸ್ಕೃತಿಗೆ ದರ್ಪಣವಾಗುತ್ತದೆ. ಕನ್ನಡ ನುಡಿ ಭಂಡಾರದಲ್ಲಿ ಗಾದೆಗಳು, ಜಾಣನುಡಿಗಳ ನಾಣ್ಯಗಳು ಹೇರಳವಾಗಿವೆ. ಅದು ಕನ್ನಡಿಗರ ಸಾಹಿತ್ಯ, ಸಂಸ್ಕೃತಿಗಳ ಪ್ರಗತಿಯ ಲಕ್ಷಣವಾಗಿವೆ.

ಅವರು ಜಾಣನುಡಿ, ಗಾದೆ ಎಂಬುದು ಕಲ್ಲುಸಕ್ಕರೆಯ ತುಂಡಿನಂತೆ, ಪೆಪ್ಪರಮೆಂಟಿನಂತೆ. ಬಾಯಿಯಲ್ಲಿಟ್ಟುಕೊಂಡು ಚಪ್ಪರಿಸಿ, ಅದರ ರುಚಿರಸಗಳನ್ನು ಹೀರುವಂತೆ, ಜಾಣ್ಮೆಯಿಂದಾಡಿದ ಮಾತಿನ ಅರ್ಥವನ್ನು ಆಲೋಚಿಸಿ, ಅನುಭವಿಸಬೇಕು. ತಕ್ಷಣವೇ ಅರ್ಥಮಾಡಿಕೊಂಡು ಮರೆತುಬಿಡುವಂತಹುದಲ್ಲ. ಉದಾತ್ತ ಭಾವನೆ, ನೀತಿಭೋದೆ, ವಿಡಂಬನೆ, ಎಚ್ಚರಿಕೆ ಮೊದಲಾದವುಗಳು ಅಡಗಿ ಕುಳಿತಿರುತ್ತವೆ. ಜನತೆಗೆ ದಾರಿದೀಪವಾಗುತ್ತವೆ.

೪.೪ ಕನಕದಾಸರ ಅಧ್ಯಯನಗಳಲ್ಲಿ ಪ್ರಜ್ಞೆಯ ವಿವಿಧ ಆಯಾಮಗಳು

ಕನಕದಾಸರ ಜೀವನ ಸಾಹಿತ್ಯದ ಕುರಿತಾಗಿರುವ ಎಲ್ಲ ಅಧ್ಯಯನಗಳನ್ನು ಅವಲೋಕಿಸಿದಾಗ ಹಲವು ಭಿನ್ನ ನೆಲೆಗಳು ಕಂಡುಬರುತ್ತವೆ ಎಂದು ಹಲವು ಅಧ್ಯಯನಕಾರರ ವಾದ. ವಿಭಿನ್ನ ನೆಲೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಒಂದು ರೀತಿಯ ಹೊಸ ಪ್ರಜ್ಞೆ ಕಂಡು ಬರುತ್ತದೆ. ಆ ಪ್ರಜ್ಞೆಯು ಯಾವ ರೀತಿಯಲ್ಲಿರುತ್ತದೆ ಅದರ ಭಿನ್ನನೆಲೆಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

೪.೪.೧ ವೈಚಾರಿಕ ಪ್ರಜ್ಞೆ

ಕನಕದಾಸರು ಅವರ ಜೀವನ ವೈಚಾರಿಕತೆ ಕುರಿತು ಅಧ್ಯಯನ ಮಾಡಿದಾಗ ಅವರ ಸಾಹಿತ್ಯ ಕೃತಿಗಳಲ್ಲಿ, ಕೀರ್ತನೆ, ಮುಂಡಿಗೆ ಉಗಾಭೋಗಗಳಲ್ಲಿ ವೈಚಾರಿಕತೆಯನ್ನು ಗುರುತಿಸಿದ್ದಾರೆ. ಜನರ ಬದುಕಿನ ವಿವರಗಳನ್ನು ಎಳೆಎಳೆಯಾಗಿ ಬಿಚ್ಚಿಡುವ ಕನಕದಾಸರ ಪ್ರಯತ್ನ ಮೆಚ್ಚುವಂತದ್ದು ಎಂದು ಸುಧಾಕರರ ಅಭಿಪ್ರಾಯವಾಗಿದೆ. ಏಕೆಂದರೆ ಇಲ್ಲಿಯ ವಿಷಯಗಳು ಕರ್ನಾಟಕದ ಸಾಂಸ್ಕೃತಿಕ ಮಹತ್ವವನ್ನು ತಿಳಿಯುವಲ್ಲಿಯೂ ಸಹಕಾರಿಯಾಗುತ್ತವೆ. ಸ್ತ್ರೀ-ಪುರುಷರ ವ್ಯಕ್ತಿನಿಷ್ಠ ಮೌಲ್ಯಗಳನ್ನು ಎತ್ತಿಹಿಡಿಯುವ ಕನಕದಾಸರ ವೈಚಾರಿಕ ಪ್ರಜ್ಞೆ ಮಹತ್ವವಾಗಿದೆ. ಪ್ರಸ್ತುತ ಮೋಹನ ತರಂಗಿಣಿ ಕಾವ್ಯದಲ್ಲಿ ಗಮನಿಸಬೇಕಾದ ಮಹತ್ವದ ಸಂಗತಿಯೊಂದರೆ ಹರಿಹರರಲ್ಲಿ ಭೇದವೆನಿಸಿದ ಅವರನ್ನು ಒಂದೆ ಆಗಿ ನೋಡುವ ಕನಕದಾಸರ ದೃಷ್ಟಿ ಮೂಲತಃ ಶ್ರೀ ವೈಷ್ಣವ ಒಕ್ಕಲಾಗಿರುವ ಕನಕದಾಸರು ಈ ಕಾವ್ಯದಲ್ಲಿ ಶಿವನನ್ನು ಎಲ್ಲಿಯೂ ಹೀಗೆಳೆಯುವದಿಲ್ಲಾ ಬದಲಿಗೆ ಕಾವ್ಯದ ಕೊನೆಗೆ ಶಿವನಿಂದಲೇ ವಿಷ್ಣು ಮತ್ತು ನಾನು ಬೇರೆ ಅಲ್ಲ ಒಂದೇ ಎಂಬ ಮಾತನ್ನು ಹೇಳಿಸಿದ್ದಾರೆ. ಅಲ್ಲದೆ ರಾಮಧಾನ್ಯ ಚರಿತೆಯಲ್ಲಿ ಮೇಲ್ವರ್ಗವನ್ನು ಟೀಕಿಸಲು ಅವರ ವಿರುದ್ಧ ಕರತಿಗಳ ಮೂಲಕ ಅಲ್ಲಿನ ಪಾತ್ರಗಳ ಮೂಲಕ ಉತ್ತರ ನೀಡಿರುವರು. ಅದರಲ್ಲಿ ಭತ್ತ, ರಾಗಿಗಳ ವಾಗ್ವಾದದ ಕೃತಿಯಾಗಿದೆ. ಇಲ್ಲಿ ಸಮಾನತೆ, ಜಾತ್ಯಾತೀತ ಮಾನವೀಯ ಮೌಲ್ಯಗಳನ್ನು ವೈಚಾರಿಕವಾಗಿ ಅಧ್ಯಯನಕಾರರು ಅಧ್ಯಯನ ಮಾಡಿರುವರು. ಕನಕದಾಸರು ಕೀರ್ತನೆಗಳಲ್ಲಿ ಸಮಾಜ-ಸಂಪ್ರದಾಯ, ಕುಲದ ನೆಲೆ, ದೇವರು, ಧರ್ಮ, ಆಚಾರ-ವಿಚಾರ, ಆತ್ಮಶೋಧನೆ, ನೀತಿ ಭೋದನೆ, ಸಂಸಾರ, ನಿಸ್ಸಾರ ಸಾಮಾಜಿಕ ಅಂಕುಡೊಂಕುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ತಮ್ಮ ವಿಚಾರಗಳನ್ನು ಅದರಲ್ಲಿ ವ್ಯಕ್ತಪಡಿಸಿದ್ದಾರೆ.

ಕೀರ್ತನೆ ಮುಂಡಿಗೆಗಳಂತೂ ಜನಮನದ ದನಿಯಾಗಿವೆ. ಇಲ್ಲಿ ಕನಕದಾಸರ ವಿಚಾರಗಳು ತುಂಬಾ ಪ್ರಬುದ್ಧವಾಗಿ ಮೂಡಿಬಂದಿವೆ. ದಾನದ ಕುರಿತು ಮಾತನಾಡುವಾಗ ಯಾರಿಗೆ, ಯಾವಾಗ ಬಾಡಬೇಕು, ಇದರರ್ಥ ಆತನಿಗಿರಬೇಕು ಕನಕರ ಕಳಕಳಿ ಉಕ್ಕನಾಲೆ, ಎಲ್ಲಮ್ಮ, ಮಾರಿ, ದಉರ್ಗಿ, ಚೌಡಿಗಳಂತಹ ದೊಂಬಿದೈವಗಳಿಗೆ ಕುರಿ, ಕೋಳಿ, ಕೋಣಗಳನ್ನು ಬಲಿಕೊಡುವುದು ತಪ್ಪು. ನಾವು ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಚಿಗುರಲೆ ಬೇವಿನಸೊಪ್ಪು, ವಾರಸೀರೆಗಳನ್ನು ಉಟ್ಟು ದೇವರು ಮೈತುಂಬಿದೆ ಎಂದು ಕುಣಿದಾಡುವುದು ತಪ್ಪು. ಇಂಥ ಕೊಲೆಗಳಿಗೂ ಮುಕ್ತಿಸಿಗದು ಎನ್ನುವ ಅವರ ಕಾಳಜಿ ಅದಮ್ಯವಾಗಿದೆ. ಇವರು ಮೂಢನಂಬಿಕೆ, ಅಸ್ಪೃಶ್ಯತೆಯನ್ನು ಹೋಗಬೇಕೆಂದು ಹೇಳುತ್ತಾರೆ. ಜನಸಾಮಾನ್ಯರು ಹತ್ತಾರು ಕ್ಷುದ್ರ ದೈವಗಳಿಗೆ ಅಮಾಯಕ ಪ್ರಾಣಿಗಳನ್ನು ಬಲಿಕೊಡುವುದನ್ನು ಕಟುವಾಗಿ ಟೀಕಿಸುತ್ತಾರೆ. ದೇವರು ಅವುಗಳನ್ನು ಬೇಡಿದರೆ ಅವು ದೇವರೆ ಅಲ್ಲ ಎಂದಿರುವರು.

ನೇಮ-ಹೋಮ-ಹವನಾದಿಗಳೆಲ್ಲ ಕನಕದಾಸರ ದೃಷ್ಟಿಯಲ್ಲಿ ಅರ್ಥವಿಲ್ಲದ ಆಯಾಮಗಳು. ಏಕೆಂದರೆ ಈಗಾಗಲೇ ಭಕ್ತಿ, ದೇವರು ಮತ್ತು ಧರ್ಮಗಳು ಒಂದು ವರ್ಗದ ಆಸ್ತಿಗಳಾಗಿವೆ. ಹೀಗಾಗಿ ರಾಮನಾಮದ ಮುಂದೆ ಈ ಹೋಮ ಏನೂ ಅಲ್ಲ ನೀರಿನಲ್ಲಿ ಮುಳುಗುವ ನಾರಿಯನ್ನು ತ್ಯಜಿಸುವ ವಾರ ಉಪವಾಸವಿರುವ, ಅರ್ಥವಿಲ್ಲದ ಆಚರಣೆಗಳು ದೇಹದಂಡನೆ ಮಾಡಿಕೊಳ್ಳುವ ಅರ್ಥವಿಲ್ಲದ ಆಚರಣೆಗಳು ನಿರರ್ಥಕವಾಗಿವೆ. ವೈಚಾರಿಕವಾಗಿ ನಾವು ಉದಾತ್ತ ಚಿಂತನೆಗಳನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ. ಕಾರಣ ಕನಕದಾಸರಿಗೆ ಜನಸಾಮಾನ್ಯರ ಬಗ್ಗೆ ಅಪಾರ ಕಾಳಜಿಯಿತ್ತು. ಅವರ ಮುಗ್ದ ಸ್ವಭಾವ, ಭಾವನಾತ್ಮಕ, ಭಕ್ತಿಯನ್ನು ಒಂದುಕಡೆ ಪುರೋಹಿತವರ್ಗ, ಇನ್ನೊಂದು ಕಡೆ ಕ್ಷುದ್ರ ದೈವಗಳು ಅಪಹರಿಸುತ್ತಿರುವುದನ್ನು ಕಂಡು ಕರಗಿ ಮುರುಗಿದರು ಎಂಬುದನ್ನು ಹೇಳುತ್ತಾರೆ.

ಏಕ್ಕನಾತಿಯರು ಕಾಲೆ ಜಕ್ಕುಣಿಯರು ಜಲಜಿಯರು
ಸೊಕ್ಕಿನಿಂದ ಸೊಂಟದ ಮುರುಕ ಮೈಲಾರದೇವರ
ಮಿಕ್ಕಮಾರಿ, ಮಸಣಿ, ಚೌಡಿ, ಭೈರವ ದೇವ
ಮೊದಲಾದ ಠಕ್ಕು ದೇವರ ಗೊಡವೆ ಬೇಡ ನಂಕತಪ್ಪಾದು

ಹೀಗೆ ಗ್ರಾಮೀಣರ ಪ್ರಮುಖ ದೈವಗಳನ್ನು ಕನಕದಾಸರು ತರಾಟೆ ತೆಗೆದುಕೊಂಡು ಜನರು ಉತ್ತಮವಾಗಿ ಬಾಳಬೇಕೆಂದು ಸಲಹೆ ನೀಡಿದ್ದಾರೆ ಎಂದಿದ್ದರು.

ಪ್ರಶ್ನಿಸುವ ಮನೋಭಾವವನ್ನು ವೈಜ್ಞಾನಿಕ ಮನೋಭಾವವೆಂದು ಸರಳವಾಗಿ ವ್ಯಾಖ್ಯಾನಿಸಿದರೂ ಸ್ಥೂಲವಾಗಿ ವಿವೇಚಿಸಿದಾಗ ಅದು ಅನುಭಾವಕ್ಕೆ ಬಂದ ಯಾವುದೇ ಘಟನೆಯನ್ನು ವಾಸ್ತವಿಕ ದೃಷ್ಠಿಯಿಂದ ಪರಾಮರ್ಶಿಸಿ, ವಸ್ತು ನಿಷ್ಠವಾಗಿ ವಿಶ್ಲೇಷಿಸುವುದು ಎಂದಾಗುತ್ತದೆ. "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬ ತತ್ವವನ್ನು ಸಾಧಿಸಹೊರಟವರು. ಕನಕದಾಸರ ಕುರಿತಾಗಿ ಬಂದ ಎಲ್ಲ ಕೃತಿಗಳು ವೈಚಾರಿಕ ನೆಲೆಗಳ ಅಡಿಯಲ್ಲಿ ರಚಿತವಾಗಿದೆ. ಹೀಗೆ ವೈಚಾರಿಕತೆ ಬಹಳ ಮಹತ್ವ ಪಡೆದಿದೆ.

೪.೪.೨ ಸಾಮಾಜಿಕ ಪ್ರಜ್ಞೆ

ಕನಕದಾಸರ ಜೀವನವನ್ನು ಅವರ ಬದುಕಿನ ಬಗೆಗೂ ಹಾಗೂ ಅವರ ಸಾಹಿತ್ಯಿಕ ಕೃತಿಗಳನ್ನು ಅಧ್ಯಯನ ಮಾಡಿದಾಗ ಅವರ ಕುರಿತಾದ ಜೀವನ, ಸಾಹಿತ್ಯದ ಕುರಿತು ಬಂದಿರುವ ಎಲ್ಲ ಅಧ್ಯಯನಗಳನ್ನು ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಿದಾಗ ಸಾಮಾಜಿಕ ಪ್ರಜ್ಞೆಯ ಹರಹು, ನೋಟ ಕಂಡುಬರುವುದು. ಅವರ ಸಾಮಾಜಿಕ ಚಿಂತನಾಪರ ಮೌಲ್ಯವು ವಿಶಿಷ್ಟವಾಗಿದೆ. ಅವರು ದಣ್ಣಾಯಕರಾಗಿ, ಕವಿಯಾಗಿ ಹಾಡಿದ ಕೀರ್ತನೆ, ಆಧ್ಯಾತ್ಮಿಕ ಸಾಧಕ ಸಂತ ಶಿಖಾಮಣಿಯಾಗಿ, ಅವರು ಸಮಾಜದಲ್ಲಿ ಕಂಡುಂಡ ನೋವು-ನಲಿವುಗಳನ್ನು ಅವರ ಕೀರ್ತನೆ, ಮುಂಡಿಗೆ ಉಗಾಭೋಗಗಳ ಮೂಲಕ ಹೇಳಿದ್ದಾರೆ. ಸಾಹಿತ್ಯ, ಕೃತಿಗಳಾದ ಮೋಹನತರಂಗಿಣಿ, ರಾಮಧಾನ್ಯ ಚರಿತೆ, ನಳಚರಿತೆಯಲ್ಲಿನ ಸಾಮಾಜಿಕ ಪ್ರಜ್ಞೆಯನ್ನು ಎಲ್ಲರನ್ನು ಮೆಚ್ಚಬೇಕಾಗಿದೆ.

ಕನಕದಾಸರು ಬುದ್ಧನಂತೆ ಲೋಕೋದ್ಧಾರಕ್ಕಾಗಿ ದಣ್ಣಾಯಕನ ವೈಭವವನ್ನು ತ್ಯಜಿಸಿ, ಕವಿಯಾಗಿ, ಸಮಾಜದ ಅಂತರಂಗವನ್ನು ಅಲ್ಲಿನ ಅಂಕುಡೊಂಕುಗಳನ್ನು ತಿದ್ದಿದವರು. ಸಾಧಕರಾಗಿ ಅಧ್ಯಾತ್ಮಿಕ ಹಿನ್ನೆಲೆಯಲ್ಲಿ ಅವರ ಅಭ್ಯುದಯವನ್ನು ಪರಿಭಾವಿಸಿಕೊಂಡ ಕನಕದಾಸರು ತಮಗೆ ಸರಿಯೆಂದು ತೋರಿದ ಅನುಭವಗಳನ್ನು ನೇರವಾಗಿಯೋ, ವ್ಯಂಗ್ಯವಾಗಿಯೋ ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಸಮಾಜ, ಪರಿಸರ, ರಾಜ್ಯ, ದೇಶದ ಹಿತದೃಷ್ಟಿಯಿಂದ ಅಪ್ರಿಯವಾದ ಸತ್ಯವನ್ನು ನಿರ್ಭಯವಾಗಿ ಪ್ರತಿಪಾದಿಸುವ ಮೂಲಕ ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿ ಎತ್ತಿದ್ದಾರೆ.

ನಮ್ಮ ಸಮಾಜದಲ್ಲಿ ಶಾಪವೆಂಬಂತೆ, ಇಡಿ ವ್ಯವಸ್ಥೆಯನ್ನು ಕದಡುವ ಪಿಡುಗುಗಳಲ್ಲಿ ಜಾತೀಯತೆ, ಅಸ್ಪಶ್ಯತೆ, ಮೂಢನಂಬಿಕೆಗಳು ಸಮಾಜವನ್ನು ಅಲ್ಲಿ ಬದುಕುವ ಜನರನ್ನು ಅಧಃಪಥನಕ್ಕೆ ಒಯ್ಯುತ್ತವೆ. ಎರಡು ಸಾವಿರ ವರ್ಷಗಳಿಂದಲೂ ಸಮಾಜವನ್ನು ವಿಚಿದ್ರಗೊಳಿಸಿ ರಾಷ್ಟ್ರೈಕ್ಯವನ್ನು ಭಗ್ನಗೊಳಿಸಿ, ದೇಶವನ್ನು ದುರ್ಬಲಗೊಳಿಸಿ ಅಪಾಯಕ್ಕೀಡು ಮಾಡಿರುವ ಜಾತೀಯತೆಯನ್ನಾಗಲಿ, ಅಸ್ಪಶ್ಯತೆಯನ್ನಾಗಲಿ ಮಾನ್ಯಮಾಡುವ ಪವಿತ್ರ ಗ್ರಂಥಗಳನ್ನು ಸುಡುವ ತನಕ ಗುಡಿ, ಮಠ ಸಂಸ್ಥೆಗಳನ್ನು ದಹಿಸುವ ತನಕ ಭೇದವನ್ನು ಪೋಷಿಸುವ ಜನರನ್ನು ನಾಶಪಡಿಸುವ ತನಕ ಈ ದೇಶಕ್ಕೆ ಶಾಂತಿ, ಸುವ್ಯವಸ್ಥೆ, ಕ್ಷೇಮ, ಕುಶಲ, ಭದ್ರತೆ ಯಾವುದೂ ಇಲ್ಲವೆಂದು ಸೂಚ್ಯವಾಗಿ ಹೇಳಿರುವುದು ಇಂತಹ ಜಾತೀಯತೆ ಹುಟ್ಟಿಸುವ ಜನರಿದ್ದಾರೆಂದು ಹೀಗೆ ಹೇಳುತ್ತಾರೆ.

ಜಪವ ಮಾಡಿದರೇನು ತಪವ ಮಾಡಿದರೇನು?
ವಿಪರೀತ ಕಪಟಗುಣ ಕಲುಷವಿದ್ದವರು

ಎಂದು ಕೆಟ್ಟಜನರ ಕುರಿತಾಗಿ ಅವ್ಯವಸ್ಥೆಯ, ಡಾಂಭಿಕತೆ ಹೊಂದಿದವರ ವಿರುದ್ಧವಾಗಿ ಮಾತನಾಡುತ್ತಾರೆ. ಈ ರೀತಿಯ ಧ್ವನಿಯನ್ನು ಅಧ್ಯಯನಗಳ ಉದ್ದಕ್ಕೂ ಕಾಣುತ್ತೇವೆ.

ಸಮಾಜದಲ್ಲಿ ದುರ್ಜನರು ತುಂಬಿಕೊಂಡಿದ್ದಾರೆ. ಅಂತಹ ದುರ್ಜನರಿಂದ ದೂರ ಇಡಬೇಕೆಂದು ಹರಿಯನ್ನು ಬೇಡಿಕೊಂಡಿದ್ದಾರೆ.

ದುರ್ಜನರ ಸಂಗ ಎಂದಿಗೊಲ್ಲೆನು ಹರಿಯೆ ಇಂಥ
ಸಜ್ಜನರ ಸಗದೊಳಗಿರಿಸೆನ್ನ ರಂಗ
ನಂಬಿದ ಠಾವಿನಲಿ ಕೇಡನೆಣಿಪನ ಸಂಗ
ಸಂಭಮದಿ ಜಗಳ ಕಾಯುವನ ಸಂಗ
ಹಂಬಲಿಸಿ ಭವದ ಸುಖ ಮೆಟ್ಟಿದಾತನ ಸಂಗ
ರಂಭ ಸ್ತ್ರೀಯರ ನೋಡಿ ಮೋಹಿಪನ ಸಂಗ

ಎಂದು ಸಮಾಜದಲ್ಲಿ ವ್ಯವಸ್ಥೆ ವಿರುದ್ಧ ಜೀವನ ನಡೆಸುವವರ ಸಂಗ ಬೇಡ. ನಿನ್ನ ಸಂಗದಲ್ಲಿ ನಾನು ಇರುವೆ ಹರಿಯೇ ಎಂದು ಹರಿಯೊಡನೆ ತನ್ನ ಮನಸ್ಸಿನ ದುಗುಡವನ್ನು ಅಭಿವ್ಯಕ್ತಿಸುವರು. ಹೀಗೆ ಸಮಾಜ ಸ್ವಾಸ್ಥ್ಯವಾಗಿರಬೇಕೆಂದು ಪ್ರಯತ್ನಿಸಿದವರು.

ಈ ಜಾತೀಯತೆ ಅವರಿಗೆ ಹೇಗೆ ಕಾಡಿತ್ತು ಎಂದರೆ ಹಿಂದುಳಿದ ಕುಲದಲ್ಲಿ ಹುಟ್ಟಿದ ಕಾರಣಕ್ಕೆ ಮೇಲ್ವರ್ಗದ ತುಳಿತ, ಹಿಂಸೆಗೆ ಸಿಲುಕಿ ಸಾಕಷ್ಟು ತೊಂದರೆ, ಯಾತನೆ ಅನುಭವಿಸಿದ್ದಾರೆ. ಅಲ್ಲದೆ ತಮ್ಮ ಸುತ್ತಲಿನ ಉತ್ತಮರೆನಿಸಿಕೊಂಡವರು ಕನಿಷ್ಠರಿಗೆ ಕೊಡುತ್ತಿದ್ದ ಕಿರುಕುಳವನ್ನು ಕಣ್ಣಾರೆ ಕಂಡವರಾಗಿದ್ದರು.

ಹೀಗಾಗಿ ದಾಸಪಂಥ ಸೇರಿದ ನಂತರ ಕುಲದ ಹೆಮ್ಮೆ ಬಗ್ಗೆ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿರಬೇಕು. ಉತ್ತಮ ವರ್ಗದವರ ಹಿಂಸೆ ಮಿತಿಮೀರಿದಾಗ 'ಕುಲಕುಲ ವೆನ್ನುತಿಹರೂ ಕುಲವಾವುದು ಸತ್ಯ ಸುಜನರಿಗೆ' ಎಂಬ ವಿಡಂಬನಾತ್ಮಕ ಕೀರ್ತನೆ ರಚನೆ ಆಗಿರಬೇಕು. ಮುಂದುವರೆದು ಹೇಳುತ್ತಾ 'ಕೆಸರೊಳು ತಾವರೆ ಪುಟ್ಟಲು ಅದ ತಂದು ಬಿಸಜನಾಭನಿಗೆ ಅರ್ಪಿಸಲಿಲ್ಲವೆ?, ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ. ಆತ್ಮ ಆವ ಕುಲ, ಜೀವ ಆವ ಕುಲ ಎಂದು ಉತ್ತಮರೆನಿಸಿಕೊಂಡವರ ವಿರುದ್ಧ ಪ್ರಶ್ನಿಸುತ್ತಾರೆ. ಬೆವರಿನಿಂದಾದ ಮೃಗಗಳ ಮೈಯಲ್ಲಿ ಹೊಮ್ಮುವ ಕಸ್ತೂರಿಯನ್ನು ವಿಪ್ರರು ಪೂಸಿಕೊಳ್ಳುವುದಿಲ್ಲವೇ? ಜಾತಿ ಶ್ರೇಷ್ಠತೆಯನ್ನು ಎತ್ತಿಹಿಡಿಯುವ ಜನ ಶೂದ್ರರ ಬೆವರಿನ ಫಲವನ್ನು ಅನುಭೋಗಿಸುತ್ತ ಅವರನ್ನು ಮೃಗಗಳಿಗೆ ಕಡೆಯಾಗಿ ಕಾಣಬಹುದೆ ಎಂದು ದಾಸರು ಈ ಸಂದರ್ಭದಲ್ಲಿ ಪ್ರಶ್ನಿಸುವಂತಿದೆ.

ವ್ಯಕ್ತಿಯ ಶ್ರೇಯಸ್ಸಿಗಾಗಲಿ, ರಾಜ್ಯ, ದೇಶ, ಸಮಾಜದ ಅಭ್ಯುದಯಕ್ಕಾಗಲಿ ಕರ್ಮವೇ ಮೂಲ. ಕರ್ಮ ವಿಲ್ಲದಾಗ ಇಡೀ ಜಗತ್ತು ವಿನಾಶದ ಹಾದಿ ಹಿಡಿಯುತ್ತದೆ. ಸಮಾಜದ ಶಾಂತಿಗೆ ಮಾತ್ರವಲ್ಲ ಸಕಲ ಸಾಮಾಜಿಕ ರೋಗ-ರುಜಿನಗಳಿಗೆ ಕರ್ಮವೊಂದೇ ದಿವ್ಯ ಬೀಜ. ಇದನ್ನು ಮನಗಂಡೇ ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು ಎಂದು ಕನಕದಾಸರು ಹೇಳುತ್ತಾರೆ. ಬದುಕು ಸಾಗಿಸಲು ಸಮಾಜದಲ್ಲಿ ವೃತ್ತಿಯಿಂದ ಜಾತಿ, ಜಾತಿಯಿಂದ ವೃತ್ತಿ ಹುಟ್ಟಿಕೊಂಡಿವೆ. ಇದರಲ್ಲಿ ಒಂದು ಹೆಚ್ಚು ಇನ್ನೊಂದು ಕಡಿಮೆ ಎನ್ನುವ ಹಾಗಿಲ್ಲ. ಸೃಷ್ಠಿಯ ಅನಂತತೆಯನ್ನು ವೈವಿಧ್ಯತೆಯನ್ನು ಸಂಕೇತಿಸುವ ವೃತ್ತಿಗಳಲ್ಲಿ ಭೇದಭಾವ ಇರಕೂಡದು. ಎಲ್ಲವೂ ಸಮಾನ ಗೌರವಾರ್ಹವಾದವೆನ್ನುವುದನ್ನು ವಿಡಂಬನೆಯಿಂದ ಕೂಡಿದ

'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ'

ಎಂದು ಸ್ಪಷ್ಟಪಡಿಸಿದ್ದಾರೆ. ಅದಕ್ಕಾಗಿ ಆರಂಭದಲ್ಲಿ ಕೋಶಗಳಿಂದ ಪ್ರಾರಂಭವಾಗುತ್ತದಷ್ಟೆ. ಇವೆರಡು ಅವು ಮುಖ್ಯವಾಗಿರುತ್ತದೆ. ಅಂದರೆ 'ಉದರ ನಿಮಿತ್ತಂ ಬಹುಕೃತ ವೇಷಂ' ಎಂದು ಬದುಕಿನಲ್ಲಿ ನಾನಾ ವೇಷಹಾಕಿ ಬದುಕು ಸಾಗಿಸುತ್ತಾ, ಇಂತಹ ವ್ಯವಸ್ಥೆಯಲ್ಲಿ ಮೇಲು-ಕೀಳು ಎಲ್ಲಿಂದ ಬಂತು ಎಂದು ಹಲವಾರು ಕೀರ್ತನೆಗಳನ್ನು ಹೇಳುತ್ತಾ, ಸಮಾನತೆ, ಜಾತ್ಯಾತೀತತೆ, ಮೌಲ್ಯಗಳನ್ನು ಪ್ರಸ್ತುತಪಡಿಸುತ್ತಾ, ಸಮಾಜವನ್ನು ಶುದ್ಧವಾಗಿಡುವ ಎಲ್ಲ ಪ್ರಯತ್ನಮಾಡಿರುವರು.

ಸಮಾಜದಲ್ಲಿ ಸಮಾನತೆ ಬರಲು ಮೌಲ್ಯಯುತವಾದ ಕಟ್ಟುಪಾಡುಗಳಿರಬೇಕೆಂದು ಹೇಳಿರುವರು. ಕಟ್ಟುಪಾಡುಗಳಿಲ್ಲದ ಸಮಾಜದ ಬಿರುಗಾಳಿಗೆ ಸಿಕ್ಕಿದ ದುಳ್ಳುರಿಯಾಗುತ್ತದೆ. ದಡವಿಲ್ಲದ ಮಹಾಪೂರವಾಗುತ್ತದೆ. ಕಲ್ಲೆಸೆದ ಜೇನುಗೂಡಾಗುತ್ತದೆ. ಈ ಕಟ್ಟುಪಾಡುಗಳು ಮಾನವನ ಸ್ವಾಂತಂತ್ರ್ಯವನ್ನು ರಕ್ಷಿಸುವುದರ ಜತೆಗೆ ಅವನ ಸಂಯಮ, ಸಾಧನೆಗೆ ಹಾಗೂ ಕ್ಷೇಮಪಾಲನೆಗೆ ನೆರವಾಗುತ್ತವೆ. ಹಿಂದಿನ ಕಾಲದಲ್ಲಿ ಮಾತ್ರವಲ್ಲ ಈಗಲೂ ನೀತಿ-ನಿಯಮದ ಹೆಸರಿನಲ್ಲಿ ಇಂದಿಗೂ ಚಾಲ್ತಿಯಲ್ಲಿವೆ. ಸಮಾಜ ನ್ಯಾಯವನ್ನು ಬಹಿಷ್ಕರಿಸಿ ಅನ್ಯಾಯಕ್ಕೆ ಪಟ್ಟ ಕಟ್ಟದಂತೆ ಧರ್ಮವನ್ನು ಬದಿಗೊತ್ತಿ ಅಧರ್ಮವನ್ನು ಮೆರಸದಂತೆ ಜಗತ್ತಿನಲ್ಲಿ ಕ್ಷೋಭೆಯುಂಟಾಗದಂತೆ ನೀತಿ-ನಿಯಮಗಳು ಜನರನ್ನು ಹದ್ದಿನಲ್ಲಿಡುತ್ತವೆ. ಅವರ ನಡುವಳಿಕೆಯನ್ನು ತಿದ್ದುತ್ತವೆ. ತಾವೊಬ್ಬರೆ ಉದಾತ್ತ ಸದ್ಗುಣ ವ್ಯಕ್ತಿಯಾಗದೆ ಎಲ್ಲರೂ ಉತ್ತಮ ಚಾರಿತ್ರ್ಯವನ್ನು ರೂಪಿಸಿಕೊಳ್ಳಲು ಸಲಹೆ ನೀಡುತ್ತಾರೆ.

ಕನಕದಾಸರು ಎನ್ನ ನುಡಿ ಪುಸಿಯಲ್ಲ ಈ ಜಗದೊಳು ಎಂದು ಹೇಳುತ್ತಾ ಪಂಥಪಾಡುಗಳನರಿಯದ ಬಂಟನವ ತುಂಬ ಅಂತರವರಿಯದ ವೇಶಿ ಹೇಳಿ ಎಂದು ಹೇಳುತ್ತಾರೆ. ದಂತಿಯಿಲ್ಲದ ಅರಸು ಮುರಿದ ಕಾಲಿನ ಗೊರಸು ಅಂತಸ್ಥವಿಲ್ಲ ಪ್ರಧಾನಿ, ಮಧ್ಯಪಾನಿ ಎಂದು ಹೇಳುತ್ತಾರೆ.

ಸಮಾಜವನ್ನು ತಿದ್ದಿ, ತೀಡಿ ಸಾಕಾಗಿ, ಸುಸ್ತಾಗಿರಬೇಕು. ಇವನೆಲ್ಲವನ್ನು ಅವರು ಅನುಭವಿಸಿರಬೇಕು. ವಿಜಯನಗರದ ಅರಸುಗಳ ಮಾಂಡಲಿಕರಾಗಿದ್ದಾಗ ನಾನಾ ವಿಧದ ಕಷ್ಟಕ್ಲೇಷಗಳನ್ನು ಭವಿಸಿರಬೇಕೆಂದು ತೋರುತ್ತದೆ. ಅಂಥ ಕಹಿ ಅನುಭವಗಳಿಂದ ಮನಸ್ಸು ರೋಸಿಹೋಗಿ ಸ್ವಾಭಿಮಾನಿಗಳಾದ ಅವರು ಮಾಂಡಲಿಕ ಪದವಿಯನ್ನು ತಿರಸ್ಕರಿಸಿ ದಾಸರಾಗಿರಬೇಕು.

ಎಂದು ಮೇಲಿನಂತೆ ಹೇಳಿದ್ದನ್ನು ಗಮನಿಸಿದಾಗ ಕನಕದಾಸರು ತುಂಬಾ ಕಷ್ಟದ ದಿನಗಳನ್ನು ಕಳೆದದ್ದು ಗೊತ್ತಿರಬೇಕು. ಒಂದು ದಿನ ಕೃಷ್ಣದರ್ಶನಕ್ಕೆ ಉಡಪಿಗೆ ಕೃಷ್ಣದೇಗುಲಕ್ಕೆ ಹೋದಾಗ ಹಿಂದುಳಿದ ವರ್ಗದವರೆನ್ನುವ ಕಾರಣಕ್ಕಾಗಿ ಅವರನ್ನು ಬ್ರಾಹ್ಮಣರು ಒಳಗೆ ಬಿಡಲಿಲ್ಲ. ಕಾರಣ ಕೃಷ್ಣದೇಗುಲದ ಪಶ್ಚಿಮಾಭಿಮುಖ ಮಾಡಿ

ಬಾಗಿಲನು ತೆರೆದು ಸೇವೆಯನು ಕೊಡೊ
ಹರಿಯೇ ಕೂಗಿದರು ದನಿಕೇಳಲಿಲ್ಲವೆ ನಿನಗ

ಎಂದು ಅರುಹಿ, ಸ್ತುತಿಸಿ ದೇವರನ್ನು ಒಲಿಸಿಕೊಂಡವ ಕನಕದಾಸ. ಇಂತಹ ಕಂಡುಂಡ ಜಾತಿ ವ್ಯವಸ್ಥೆಯನ್ನು ದಿಕ್ಕರಿಸಿ ಸಮಾಜದಲ್ಲಿ ಸಮಾನತೆಯನ್ನು ತಂದಿರುವ ಇವರು ಸಾಮಾಜಿಕ ಚಿಂತನೆಯ ಹರಿಕಾರರಾಗಿರುವರು ಎಂದು ಅಧ್ಯಯನಕಾರರು ಸ್ಪಷ್ಟಪಡಿಸಿರುವುದು ಔಚಿತ್ಯಪೂರ್ಣವಾಗಿದೆ. ಅಧ್ಯಯನಕಾರರ ಅಧ್ಯಯನಗಳಲ್ಲಿ ಕನಕದಾಸರ ಸಾಮಾಜಿಕ ಪ್ರಜ್ಞೆಯ ಹದವನ್ನು ಅಲ್ಲಲ್ಲಿ ಹೇಳಿರುವುದು ಸ್ತುತ್ಯಾರ್ಹವಾಗಿದೆ.

೪.೪.೩ ಕಲಾ ಪ್ರಜ್ಞೆ

ಕಲಾ ಪ್ರಜ್ಞೆ ಕನಕದಾಸರಲ್ಲಿ ಬಹುವಿಧವಾಗಿ ಮೂಡಿಬಂದಿದೆ. ಕರ್ನಾಟಕ ಸಂಗೀತಕ್ಕೆ ಜೀವಕಳೆ ಕೊಟ್ಟ ಕನಕರು ಮಧ್ಯಯುಗೀನ ಕಾಲದಲ್ಲಿ ಕೀರ್ತನೆ, ಮುಂಡಿಗೆ, ಉದಯರಾಗಗಳನ್ನು ನೀಡಿ ಸಂಗೀತಕ್ಕೆ ತಮ್ಮ ಕೊಡುಗೆ ನೀಡಿದ್ದು ವಿಶೇಷವಾಗಿದೆ ಎಂದು ಅಧ್ಯಯನಕಾರರಾದ ಸಾ.ಕೃ. ರಾಮಚಂದ್ರರಾವ್, ಬಿ.ವಿ.ಕೆ. ಶಾಸ್ತ್ರಿಯವರು ಅಭಿಪ್ರಾಯಪಡುತ್ತಾರೆ.

ಕರ್ನಾಟಕ ಸಂಗೀತ ಮತ್ತು ಕನಕದಾಸರು

ಮಧ್ಯಯುಗೀನ ಕಾಲದಲ್ಲಿ ವೈದಿಕ ಮತದ ಪ್ರತಿಷ್ಠೆಯ ಕರಿನೆರಳಿನಲ್ಲಿ ಕನಕದಾಸರು ಹಾಗೂ ಪುರಂದರದಾಸರು ಅಶ್ವಿನಿ ದೇವತೆಗಳೆಂದು ಹೆಸರುವಾಸಿಯಾದರು. ಪುರಂದರರಿಗಿಂತ ಭಿನ್ನವಾಗಿ ಕನಕದಾಸರು ಕೀರ್ತನೆ, ಮುಂಡಿಗೆಯ ಜೊತೆ ಶ್ರೇಷ್ಟವಾದ ಕೃತಿರಚನೆ ಮಾಡಿರುವುದು ಅವರ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಇವರು ಇದರ ಜೊತೆಗೆನೆ ಕರ್ನಾಟಕ ಸಂಗೀತಕ್ಕೆ ತುಂಬಾ ಮಹತ್ವವಾದ ಕೊಡುಗೆ ನೀಡಿರುವರು. ಭಕ್ತಿಸಾಹಿತ್ಯ ಮತ್ತದರ ಸಂಗೀತಾತ್ಮಕ ಅಭಿವ್ಯಕ್ತಿಗೆ ಕನಕದಾಸರು ಸಮಾನ ಮಹತ್ವವನ್ನು ಕೊಟ್ಟಿದುದರಿಂದ ಕೇಳುಗರ ಹೃದಯವನ್ನು ಸೆರೆಹಿಡಿಯುವುದರಲ್ಲಿ ಯಶಸ್ವಿಯಾದರು. ಕಾವ್ಯ ಮತ್ತು ಆಧ್ಯಾತ್ಮದ ಆಯಾಮಗಳಿಗೆ, ಸಂಗೀತ ಸೇರಿದಾಗ ಅವುಗಳ ಸಂಗಮ ಕೇಳುಗರ ಹೃದಯಕ್ಕೆ ಮುಟ್ಟುತ್ತವೆ. ಇಲ್ಲಿ ಬಹುಮುಖ್ಯವಾಗಿ ಕನಕದಾಸರ ಕೀರ್ತನೆಗಳು ಸಂಗೀತದ ಅಂಶ, ಆಯಾಮವು ಜನಪದರ ಆಡುಭಾಷೆಯ ಧ್ವನಿತ್ವ ಹೊಂದಿರುವುದರಿಂದ ಇವು ಪ್ರಸಿದ್ಧವಾಗಿವೆ.

ಕನಕದಾಸರು ಕರ್ನಾಟಕದ ಸಂಗೀತದಲ್ಲಿ ಪಳಗಿದುದರಿಂದ ತಮ್ಮ ಕೀರ್ತನೆಗಳಲ್ಲಿ ರಾಗ, ತಾಳ, ಮಾಧುರ್ಯವನ್ನು ಅನುಸರಿಸಿ ರಚಿಸಿರುವರು. ಆದ್ದರಿಂದ ಕನಕದಾಸರ ಕೀರ್ತನೆಗಳನ್ನು ನಿರ್ದಿಷ್ಟ ರಾಗ ಮತ್ತು ತಾಳಗಳಿಗೆ ಅಳವಡಿಸಿ ಸುಶ್ರಾವ್ಯವಾಗಿ ಹಾಡಬಹುದು. ಪುರಂದರ ಕೀರ್ತನೆಗಳಿಗೆ ಹೋಲಿಸುತ್ತಾರೆ 'ದಾಸರೆಂದರೆ ಪುರಂದರ ದಾಸರಯ್ಯ' ಎನ್ನುವಂತೆ 'ದಾಸರೆಂದರೆ ಶ್ರೇಷ್ಠ ಕನಕದಾಸರಯ್ಯ' ಎನ್ನಬೇಕು. ಕನಕದಾಸರ ಕೀರ್ತನೆಗಳನ್ನು ಭೂಪಾಲಿ, ದೇಶಾಕ್ಷಿ, ನಾರಾಯಣಿ, ಗುಜ್ಜರಿ, ಮಾಳವಿ, ಶ್ರೀದೇವಿ, ಗಾಂಧಾರಿ, ಮಲಹಾರಿ, ಸಾಳಗ, ಸೌರಾಷ್ಟ್ರ, ಗುಂಡಕ್ರಿಯೆ, ಹಿಂದೋಳ, ವಸಂತ, ದೇವಗಾಂಧಾರಿ, ಆರಭಿ, ಸಮಂತ ಮತ್ತು ರಾಮಕ್ರಿಯಾ ಮುಂತಾದ ರಾಗಗಳಿಗೆ ಅಳವಡಿಸಲಾಗಿದೆ. ಕನಕದಾಸರಿಗೆ ಕರ್ನಾಟಕ ಸಂಗೀತದಲ್ಲಿ ಆಳವಾದ ಜ್ಞಾನ, ಅನುಭವ ಇರುವುದರಿಂದ ಅವರು ರಾಗಗಳನ್ನು ಶುದ್ಧ, ಸಂಕೀರ್ಣ ಮತ್ತು ಮಿಶ್ರ ಎಂಬ ಮೂರು ವಿಭಾಗಗಳಲ್ಲಿ ವರ್ಗೀಕರಿಸಿದ್ದಾರೆ. ಶುದ್ಧರಾಗಗಳು ತಮ್ಮ ಪಾರಂಪರಿಕ ಶುದ್ಧತೆಯನ್ನು ಕಾಪಾಡಿಕೊಂಡಿರುತ್ತವೆ. ಆದರೆ ಮಿಶ್ರ (ಸಾಳಗ) ರಾಗಗಳು, ಇತರ ರಾಗಗಳ ಛಾಯೆಯನ್ನು

ಹೊಂದಿರುತ್ತವೆ. ಸಂಕೀರ್ಣ ರಾಗಗಳು ಎರಡಕ್ಕಿಂತ ಹೆಚ್ಚಿನ ರಾಗಗಳ ಅಂಶಗಳನ್ನು ಮೇಳ ಎನಿಸಿಕೊಂಡಿರುತ್ತವೆ. ಕನಕದಾಸರು ಮಂಡಿಸಿದ ಈ ರಾಗಗಳ ವರ್ಗೀಕರಣವು ವಿಜಯನಗರ ಸಾಮ್ರಾಟರ ಆಳ್ವಿಕೆಯಲ್ಲಿ ಪ್ರಚಲಿತವಿದ್ದ ರಾಗಗಳ ವರ್ಗೀಕರಣಕ್ಕೆ ಸರಿಹೊಂದಿಕೊಳ್ಳುತ್ತವೆ.

ಮೋಹನ ತರಂಗಿಣಿಯಲ್ಲಿ ಕನಕದಾಸರು ಹೆಸರಿಸಿದ ಅನೇಕ ರಾಗಗಳು ಕರ್ನಾಟಕ ಸಂಗೀತದ ಬಗೆಗೆ ಅವರಿಗಿದ್ದ ಆಳವಾದ ಜ್ಞಾನಕ್ಕೆ ಸಾಕ್ಷಿಯಾಗಿವೆ. ಅದೇ ಕಾವ್ಯದಲ್ಲಿ ಹಸ್ತಿವಾವುಜ, ವೀಣೆ, ಮದ್ದಳೆ, ಕಿನ್ನರಿ, ಜಂತ, ಉಡುಕು, ದುಸ್ತರ, ಸ್ವರಮಂಡಲ, ತಾಳ-ದಂಡಿಗೆ, ತಾಳಮದ್ದಳೆ, ಶೃತಿ, ಮುಖವೀಣೆ, ರುದ್ರವೀಣೆ, ಧನುರ್ವೀಣೆ, ತುಂಬುರುವೀಣೆ ಮತ್ತು ಕೂರ್ಮವೀಣೆ ಮುಂತಾದ ವಿವಿಧ ಬಗೆಯ ಸಂಗೀತವಾದ್ಯಗಳ ಬಗೆಗೆ ಉಲ್ಲೇಖಗಳಿವೆ. ಇವೆಲ್ಲ ಉಲ್ಲೇಖಗಳು ಕನಕದಾಸರಿಗಿದ್ದ ಸಂಗೀತಶಾಸ್ತ್ರದ ಬಗೆಗಿನ ವಿಸ್ತರತ ಜ್ಞಾನವನ್ನು ತೋರಿಸುತ್ತವೆ. ಹಾಗೆಯೇ ಈ ಕಾವ್ಯದಲ್ಲಿ ಆಯತ, ಉಡುಪು, ಸುಸ್ವರ, ಷಡ್ಜ, ಪಂಚಮ, ಸ್ಥಾಯಿ ಸಂಚಾರ, ಥಾಯೆ ಮತ್ತು ನೇಮ ಮುಂತಾದ ಸಂಗೀತದ ಪಾರಿಭಾಷಿಕ ಶಬ್ದಗಳ ಉಲ್ಲೇಖಗಳು ಕಂಡುಬರುತ್ತವೆ.

ಕನಕದಾಸರಿಗೆ ವಿವಿಧ ತಾಳಗಳ ಬಗೆಗೆಯೂ ಆಳವಾದ ಜ್ಞಾನ ಮತ್ತು ಅವರ ಅನೇಕ ಕೀರ್ತನೆಗಳು ಆಟ, ಆದಿ, ಝಂಪೆ, ತ್ರಿಪುಟ, ಏಕತಾಳ, ತ್ರಿವಿದೆ, ರೂಪಕ, ಛಾಪು, ಮಟ್ಟ ಮುಂತಾದ ತಾಳಗಳಿಗೆ ಅಳವಡಿಸಿದವುಗಳಾಗಿವೆ. ಇದು ಅವರಿಗೆ ಭಾಷೆ ಮತ್ತು ಲಯದ ಮೇಲಿದ್ದ ಅಸಾಮಾನ್ಯ ಪ್ರಭುತ್ವವನ್ನು ತೋರಿಸುತ್ತದೆ.

ಹೀಗೆ ಜ್ಞಾನಿಯಾಗಿ, ಸಂತರಾಗಿ, ಕನಕದಾಸರ ವಿಚಾರಗಳು ಸಮಾಜಮುಖಿ ಚಿಂತನೆಗಳನ್ನು ಧ್ವನಿಸುತ್ತವೆ. ಅವು ಬಹು ಆಯಾಮಗಳ ಮೇಲೆ ತಮ್ಮ ಬೆಳಕನ್ನು ಚೆಲ್ಲುತ್ತವೆ. ಇಲ್ಲಿ ಕನಕದಾಸರು ಬಹುವಿಧವಾಗಿ ಅವರ ಸಂಗೀತ ಜ್ಞಾನದ ಹರವು ಹೊಂದಿದೆ. ಇವರಿಗೆ ಕೇವಲ ಸಾಮಾಜಿಕ, ಧಾರ್ಮಿಕ ಮುಂತಾದ ಸಂವೇದನೆಗಿಂತ ಹೆಚ್ಚಾಗಿ ಸಂಗೀತದಲ್ಲೂ ಅವರಿಗೆ ಅಗಾದವಾದ ಪರಿಣಾಮವನ್ನು ಬೀರಬಲ್ಲ ಕುರುಹುಗಳಾಗಿ ಕೀರ್ತನೆ, ಮುಂಡಿಗೆ, ಕಾವ್ಯಗಳು ಕಾಣುತ್ತವೆ. ಕಾರಣ ಸಂಗೀತಕ್ಕೆ ಅವರು ಕೊಟ್ಟ ಕೊಡುಗೆ ಅಪಾರವಾಗಿದೆ.

'ಕನಕದಾಸರ ಪದಗಳನ್ನು ಹಾಡುವಾಗ ತಿಳಿದು ಪಾಡಲೇಬೇಕು. ಅವರ ಪದಗಳಲ್ಲಿ ಮಾತಿನ ಸೊಗಸು, ಲಯದ ಬಿಗಿ, ರಾಗದ ಸ್ವಾರಸ್ಯ ಅಭಿನಯದ ಸೌಕರ್ಯ ಎಲ್ಲವೂ ಇದೆ. ಇವುಗಳಲ್ಲಿ ಯಾವುದೊಂದನ್ನು ಕೈಬಿಟ್ಟರೂ ಒಟ್ಟಾರೆ ಅಂದ ಕೆಡುತ್ತದೆ. ಅವರು ತಮ್ಮ ಮೋಹನತರಂಗಿಣಿ ಸಾಂಗತ್ಯವನ್ನು ಕುರಿತು ಹೇಳಿಕೊಂಡಿರುವ ಹೆಗ್ಗಳಿಕೆ ಅವರ ಪದಗಳಿಗೂ ಧಾರಾಳವಾಗಿ ಅನ್ವಯಿಸುತ್ತದೆ.[೩೮]

ಕರ್ನಾಟಕ ಸಂಗೀತಕ್ಕೆ ಕೊಡುಗೆ ನೀಡಿದ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಇಪ್ಪತ್ತು-ಇಪ್ಪತ್ತೈದು ರಾಗಗಳನ್ನು ಬಳಸಿದ್ದಾರೆ. ಇವೆಲ್ಲಾ ಅಚ್ಚ ಕರ್ನಾಟಕ ಸಂಪ್ರದಾಯಕ್ಕೆ ಸೇರಿದಂತವು. ಆದರೆ ಕೆಲವು ರಾಗಗಳು ಅಂದರೆ ಕಾಂಭೋಜ, ಮುಖಾರಿ, ಮೋಹನ, ಶಂಕರಾಭರಣ, ನಾಟ್ಯ,

ಕಲ್ಯಾಣಿ ಮುಂತಾದವು ಅವರಿಗೆ ಬಹುಪ್ರಿಯವೆನಿಸುತ್ತವೆ. ಈ ರಾಗಗಳಲ್ಲಿ ಹೆಚ್ಚು ಸಂಖ್ಯೆಯ ಕೀರ್ತನೆಗಳ ರಚನೆ ಆಗಿವೆ. ಹೀಗೆ ರಚನೆ ಮಾಡಿದ್ದು, ತಮ್ಮ ಹಿರಿಮೆ, ಪಾಂಡಿತ್ಯ ಪ್ರದರ್ಶನಕ್ಕಲ್ಲ. ಎಲ್ಲರೂ ಗ್ರಹಿಸಿ ಹಾಡುವುದಕ್ಕೋಸ್ಕರ ಅವುಗಳ ರಾಗ ಸಂಯೋಜನೆ ಮತ್ತು ತಾಳದ ನಡೆ ಸರಳವಾಗಿದೆ. ಯಾರುಬೇಕಾದರೂ ಸುಖವಾಗಿ ಹಾಡಬಹುದು.[೩೯]

ಒಬ್ಬ ಸಂತ ಹರಿದಾಸರು ಸಮಾಜ ಸುಧಾರಕರು ಸಾಧಕ ಶಿಖಾಮಣಿಗಳು. ಅವರ ಬದುಕಿನುದ್ದಕ್ಕೂ ಸಮಾಜದ ಒಳಿತು, ಸ್ವಾಸ್ಥ್ಯಕ್ಕಾಗಿ ಹೋರಾಡಿ ಅವರ ಸಾಧನೆಯನ್ನು ಇಂದಿನ ಆಧುನಿಕ ದಿನದಲ್ಲಿ ಅವರ ವೈಯಕ್ತಿಕ ಫಲಶ್ರುತಿಯೆಂಬಂತೆ ತೀರಾ ಖಾಸಗಿಯಾಗಿ ನೋಡುವ ೧೯ನೇ ಶತಮಾನದ ರೋಮ್ಯಾಂಟಿಕ್ ಮಾದರಿ ಸಮಸ್ಯಾತ್ಮಕವಾದುದು. ಅಲ್ಲದೆ ನಮ್ಮ ಅಕಾಡೆಮಿಕ್ ವಲಯದೊಳಗೆ ಬೆಳೆದು ಬಂದಿರುವ ವಸಹಾತುಶಾಹಿ ಜ್ಞಾನಮಿಮಾಂಸೆಯ ಇನ್ನೊಂದು ಅತಿದೇಶವೆಂದರೆ ವ್ಯಕ್ತಿಯನ್ನು ವ್ಯವಸ್ಥೆಯ ಕೂಸೆಂಬಂತೆ ಚಿತ್ರಿಸುವುದು. ಈ ಎರಡು ದೃಷ್ಟಿಕೋನಗಳಲ್ಲಿ ಕನಕನನ್ನು ನೋಡಿದ್ದರಿಂದ, ನೋಡುವುದರಿಂದ ಅವರ ತತ್ವಗಳಿಗೆ ಹೆಚ್ಚಿನ ಅಪಾಯಗಳಿವೆ. ವಿಮರ್ಶಕರು ಕೃತಿಗಳು, ಲೇಖನಗಳ ಮೂಲಕ ಜೀವನ, ಜಾತಿ, ಕುಲ, ಕಾಲ, ಕೃತಿಗಳ ವಿವೇಚನೆಯನ್ನು ತಮಗೆ ತಿಳಿದ ದೃಷ್ಟಿಕೋನದಲ್ಲಿ ವಿವರಿಸಿ ವಿಶ್ಲೇಷಿಸುವರು. ಆದರೆ ಒಬ್ಬ ವ್ಯಕ್ತಿಯ ಒಂದು ಕಾಲ, ದೇಶದ ಒಟ್ಟು ಆಗುಹೋಗುಗಳು ಆತನ ವ್ಯಕ್ತಿತ್ವವನ್ನು ನಿರ್ಧರಿಸುತ್ತಿರುತ್ತದೆ. ಆದರೆ ಅದೊಂದು ಪರಿಪೂರ್ಣವಾದ ಕ್ರಿಯೆ ಅಲ್ಲ. ವ್ಯಕ್ತಿಗೆ ಅವನದೇ ಆದ ಸ್ವಾತಂತ್ರ್ಯ, ಇಚ್ಛಾಶಕ್ತಿ ಹಾಗೂ ಕರ್ತೃತ್ವದ ಗುಣಗಳು ಇರುವುದರಿಂದಲೇ ಪರಿಸ್ಥಿತಿಯೊಂದಿಗೆ ಗುದ್ದಾಡುತ್ತಾ ಇತಿಹಾಸವನ್ನು ಸೃಷ್ಟಿಸಿರುತ್ತಾನೆ. ಕನಕದಾಸರ ವ್ಯಕ್ತಿತ್ವ ಹಾಗೂ ಸಾಧನೆಗಳನ್ನು ಈ ಚೌಕಟ್ಟಿನೊಳಗೆ ನೋಡುವುದು ಸೂಕ್ತವೆನಿಸುತ್ತದೆ.

ಅಡಿಟಿಪ್ಪಣಿ

೧. ಹಿರೇಮಠ ಆರ್.ಸಿ. ಕನಕದಾಸರ ವರ್ಣನೆಗಳು (ಲೇ) ಕನಕ ಸಾಹಿತ್ಯ ದರ್ಶನ ಸ: ದೇ.ಜ.ಗೌ. ೧೯೯೦, ಪುಟ: ೧೯೦

೨. ರಾಜಲಕ್ಷ್ಮೀ. ಎನ್.ಕೆ. ಮೋಹನ ತರಂಗಿಣಿ: ಶ್ರೇಣೀಕೃತ ವ್ಯವಸ್ಥೆಯಲ್ಲಿ ಶೃಂಗಾರ ಹಾಗೂ ಶೌರ್ಯ (ಲೇ), ಕನಕ ಚಿಂತನೆ (ಸಂ) ಬಿ. ಶಿವರಾಂಶೆಟ್ಟಿ, ೨೦೧೦-೧೧, ಪುಟ: ೧೦೬.

೩. ಭಟ್ ಜಿ.ಎಸ್, ಸಂತಕವಿ ಅನುಭಾವಿ ಕನಕದಾಸರು (ಲೇ), ಕನಕದಾಸರ ಚತುಶ್ರೀ ಶತಮಾನೋತ್ಸವ ಸಂಚಿಕೆ, ಸಂ. ಸಿದ್ದಯ್ಯ ಪುರಾಣಿಕ, ೧೯೬೫, ಪು: ೧೪೫.

೪. ರಂಗರಾಜ ವನದುರ್ಗ, ಕನಕದಾಸರ ವೈಚಾರಿಕತೆ, ೨೦೧೧, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಪು: ೧೪.

೫. ತಾಳ್ತಜೆ ವಸಂತ ಕುಮಾರ, ಕನಕದಾಸರ ನಳಚರಿತ್ರೆ (ಲೇ), ಕನಕ ಚಿಂತನ ೨೦೧೧-೧೨, ಸಂ: ಬಿ. ಶಿವರಾಮ ಶೆಟ್ಟಿ, ಪು: ೧೪೯.

೬. ನಾವಡ ಎ.ವ್ಹಿ., 'ನಳಚರಿತೆ: ಪುರುಷಪರ ಮೌಲ್ಯಗಳ ಸ್ಥಿರಿಕರಣ' (ಲೇ), ಕನಕಚಿಂತನ ೨೦೧೧-೧೨, ಸಂ: ಬಿ. ಶಿವರಾಂ ಶೆಟ್ಟಿ, ಪು: ೨೩

೭. ಅದೇ ಪುಟ-೨೩

೮. ಚಿದಾನಂದ ಮೂರ್ತಿ ಎಂ., ರಾಮಧಾನ್ಯ ಚರಿತೆಯ ಸಾಮಾಜಿಕ ಧ್ವನಿ (ಲೇ), ಕನಕ ಕಿರಣ, ಸಂ: ಕಾ.ತ. ಚಿಕ್ಕಣ್ಣ, ೧೯೮೨, ಪು: ೧೦೩

೯. ಶಾಂತಾ ಇಮ್ರಾಪುರ, ಕನಕದಾಸರ ನಳಚರಿತ್ರೆಯಲ್ಲಿ ಮಾನವ್ಯದ ಮಹೋನ್ನತಿ (ಲೇ), ಕನಕ ಚಿಂತನ, ೨೦೧೧-೧೨, ಸಂ: ಬಿ. ಶಿವರಾಂ ಶೆಟ್ಟಿ, ಪು: ೧೨೬.

೧೦. ರವಿ ಬಿ.ಕೆ, ರಾಮಧಾನ್ಯ ಚರಿತೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೩, ಪು: ೩೫.

೧೧. ಮರುಳಯ್ಯ ಸಾ.ಶಿ, ಕನಕ ಸಾಹಿತ್ಯ ದರ್ಶನ ಸಂಪುಟ-೨ರಲ್ಲಿ ಮುನ್ನುಡಿ ಪುಟ ಘ

೧೨. ನಾಗಪ್ಪ ಗೌಡ. ಆರ್. ಕನಕದಾಸರ ರಾಮಧಾನ್ಯ ಚರಿತೆ: ಸಮಕಾಲೀನ ಸಂವಾದ (ಲೇ) ಕನಕ ಚಿಂತನ ಸಂ: ಡಾ. ಬಿ. ಶಿವರಾಂ ಶೆಟಿ, ೨೦೧೦, ಪು: ೨೭.

೧೩. ಕುಮಾರ ಚಲ್ಯ, ರಾಮಧಾನ್ಯ ಚರಿತ್ರೆ: ಸಮಕಾಲೀನ ಸಂವಾದ (ಲೇ), 'ಕನಕ ಚಿಂತನ', ಸಂ: ಬಿ. ಶಿವರಾಂ ಶೆಟ್ಟಿ, ೨೦೧೦, ಪು: ೪೯.

೧೪. ದೇ.ಜ.ಗೌ, 'ಕನಕದರ್ಶನ', ತನುಮನ ಪ್ರಕಾಶನ, ಮೈಸೂರು, ೨೦೦೩, ಪು: ೧೨೦.

೧೫. ಗಣೇಶ ಜಿ.ಮ., ರಾಮಧಾನ್ಯ ರೂಪಕದ ಪ್ರಸ್ತುತತೆ (ಲೇ), ಕನಕದಾಸ ಸಾಂಸ್ಕೃತಿಕ ಅನುಸಂಧಾನ, ಸಂ: ಎಚ್.ಎಮ್. ಸ್ವಾಮಿನಾಥ, ಪು: ೬೧.

೧೬. ವಸಂತ ಕುಷ್ಟಗಿ,(ಲೇ) ಕನಕ ಸಾಹಿತ್ಯದಲ್ಲಿ ಭಕ್ತಿ ಸ್ವರೂಪ, ಕನಕ ಸಾಹಿತ್ಯ ದರ್ಶನ

೧೭. ಪದ್ಮಾಲಯ ನಾಗರಾಜ ಸಂತ ಪರಂಪರೆ ಮತ್ತು ಭಕ್ತಿಯ ಸ್ವರೂಪ (ಲೇ) ಅರವಿನ ಅಡಿಗೆ ಪುಟ-೧೩೫

೧೮. ಶ್ರೀರಾಮ ಅಚನೂರ, ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ ಪುಟ-೫೦

೧೯. ಕಾಳೆಗೌಡ ನಾಗವಾರ, ಬದುಕಿನ ಅನನ್ಯತೆಯ ಹಂಬಲ (ಲೇ) ಕನಕ ಚಿಂತನ ಪುಟ-೧೯೪

೨೦. ಜಗನ್ನಾಥ ಗೇಣನ್ನವರ, ಸಂತ ಕನಕದಾಸರ ಜೀವನ ಸಂದೇಶ ಪುಟ-೨೪.

೨೧. ನಾಗರಾಜಪ್ಪ ಕೆ.ಜಿ. ಕನಕದಾಸರ ಕೀರ್ತನೆಗಳು(ಲೆ) ಕನಕದಾಸರ ಒಂದು ಅಧ್ಯಯನ (ಸಂ) ಪುಟ-೫೭

೨೨. ಲಕ್ಕಪ್ಪಗೌಡ ಎಚ್.ಜೆ. ಕನಕದಾಸರ ಕೀರ್ತನೆಗಳು: ಕಾವ್ಯಮೌಲ್ಯ (ಲೇ) ಕನಕದಾಸರ ಅಧ್ಯಯನಗಳು (ಸಂ) ಪುಟ-೭೬

೨೩. ಶಿವಾನಂದ ಕೆಳಗಿನಮನಿ, ಕನಕದಾಸರ ಕೀರ್ತನೆಗಳ ಸಾಂಸ್ಕೃತಿಕ ಅನನ್ಯತೆ, ಪುಟ-೨೪

೨೪. ಬುರ್ಲಿ ಬಿಂದುಮಾಧವ, ಕನಕಮುಂಡಿಗೆ(ಲೆ) ಕನಕದಾಸರ ಒಂದು ಅಧ್ಯಯನ, ಪುಟ-೧೯.

೨೫. ತಾರಾನಾಥ ಎಸ್.ಎಸ್, ಕನಕಕಿರಣ, ಪುಟ-೨೦೧

೨೬. ಬೇಂದ್ರೆ, ದ.ರಾ., ಕನಕಮುಂಡಿಗೆ, ಕನಕದಾಸ ಚತುಷ್ಟ ಶತಮಾನೋತ್ಸವ ಸಂಸ್ಮರಣ ಸಂಪುಟ, ಪುಟ-೧೭

೨೭. ಶ್ರೀರಾಮ ಅಚನೂರ, ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ, ಪುಟ-೧೮.

೨೮. ಸುಧಾಕರ ಕನಕದಾಸರ ಕೀರ್ತನೆ ಮತ್ತು ಮುಂಡಿಗೆಗಳು, ಪುಟ-೬೬೨.

೨೯. ಹಂಪನಾ 'ಕನಕದಾಸರ ಕೃತಿಗಳಲ್ಲಿ ಭಾಷಾ ಸ್ವರೂಪ' (ಲೇ), ಕನಕದರ್ಶನ ಸಂ೧, ಪುಟ-೨೭೧.

೩೦. ಕೇಶವಭಟ್ಟ, ಟಿ. 'ಕನಕ ಸಾಹಿತ್ಯದಲ್ಲಿ ಅಲಂಕಾರಗಳು' (ಲೇ), ಕನಕ ಸಾಹಿತ್ಯ ದರ್ಶನ, ಪುಟ-೨೨೧.

೩೧. ವೇಣುಗೋಪಾಲರಾವ್. ಎ.ಎಸ್., 'ಕನಕದಾಸರ ಕೃತಿಗಳಲ್ಲಿ ಛಂದಸ್ವರೂಪ ಮತ್ತು ಕನಕದಾಸರ ಮನೋಧರ್ಮ', ಕನಕ ಸಾಹಿತ್ಯ ದರ್ಶನ ಸಂ೧, ಪುಟ-೨೪೧.

೩೨. ಜಿ.ಎಸ್. ಭಟ್, ಸಂತಕವಿ ಅನುಭಾವಿ ಕನಕದಾಸರು (ಲೇ), ಕನಕದಾಸರ ಪ್ರಶಸ್ತಿ ಗ್ರಂಥ, ಸಂ. ಸಿದ್ದಯ್ಯಪುರಾಣಿಕ, ೧೯೬೫, ಪು: ೧೫೬.

೩೩. ಹನಮಂತ ತಾಂಸಗಾವಕರ, ಕನಕನ್ನ ಕೆಣಕಬ್ಯಾಡ್ರಿ (ಲೇ), ದಾಸಸಾಹಿತ್ಯ ದರ್ಶನ, ಪು: ೫೨೮.

೩೪. ಹಜರತ್ ಸಾಬ್ ನದಾಫ್, ಕನಕದಾಸರ ಕೃತಿಗಳು: ಜಾನಪದೀಯ ಅಧ್ಯಯನ, ಪು: ೧೬೭.

೩೫. ಸುಧಾಕರ, ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಕನಕ ಸಾಹಿತ್ಯ ದರ್ಶನ, ಸಂಪುಟ-೪, ಪು: ೧೫೯.

೩೬. ಮಂಜುನಾಥ ಜಿ.ಜಿ, ಸಂ: ಮೋಹನ ತರಂಗಿಣಿ, ಕನಕ ಸಾಹಿತ್ಯ ದರ್ಶನ, ಸಂಪುಟ-೩, ಪು: ೮೫.

೩೭. ಮರುಳಯ್ಯ ಸಾ.ಶಿ, ಕನಕಸಾಹಿತ್ಯದರ್ಶನ, ಸಂಪುಟ-೨, ಪು: ೯೦.

೩೮. ರಾಮಚಂದ್ರರಾವ್, 'ಕನಕದಾಸರ ಪದಗಳಲ್ಲಿ ಸಂಗೀತ (ಲೇ), ಕನಕ ಸಾಹಿತ್ಯ ದರ್ಶನ ಸಂ.೧, ಪುಟ-೫೬೪.

೩೯. ಶಾಸ್ತ್ರಿ ಬಿ.ವಿ.ಕೆ. ಸಂಗೀತ ಮತ್ತು ಕನಕದಾಸರು (ಲೇ), ಕನಕ ಸಾಹಿತ್ಯ ದರ್ಶನ ಸಂ೧, ಪುಟ-೬೦೪.

ಅಧ್ಯಾಯ ಐದು

ಭಕ್ತಿ, ಧರ್ಮ ಹಾಗೂ ಸಾಂಸ್ಕೃತಿಕನೆಲೆಯ ಅನುಸಂಧಾನದ ಅಧ್ಯಯನಗಳ ವಿಭಿನ್ನ ದೃಷ್ಟಿಕೋನಗಳನ್ನು ಗುರುತಿಸುವ ಪ್ರವೃತ್ತಿಗಳು

೫.೧ ಭಕ್ತಿಯ ನೆಲೆಗಳು

೫.೨ ಧಾರ್ಮಿಕ ನೆಲೆಗಳು

೫.೩ ಸಾಂಸ್ಕೃತಿಕ ನೆಲೆಗಳು

ಅಧ್ಯಾಯ-ಐದು

ಭಕ್ತಿ, ಧರ್ಮ ಹಾಗೂ ಸಾಂಸ್ಕೃತಿಕ ನೆಲೆಯ ಅನುಸಂಧಾನದ ಅಧ್ಯಯನಗಳ ವಿಭಿನ್ನ ದೃಷ್ಟಿಕೋನಗಳನ್ನು ಗುರುತಿಸುವ ಪ್ರವೃತ್ತಿಗಳು

ನಮ್ಮನ್ನು ನಾವು ತಿಳಿದುಕೊಂಡು ನಡೆಯುವುದು "ಅಧ್ಯಾತ್ಮ" ಈ ಜಗತ್ತನ್ನು ಅರ್ಥಮಾಡಿಕೊಂಡು ನಡೆಯುವುದು ವಿಜ್ಞಾನ. ನಮ್ಮ ನೆರೆ ಹೊರೆಯವರನ್ನು ಅರ್ಥ ಮಾಡಿಕೊಂಡು ಹೊಂದಿಕೊಂಡು ಬಾಳುವುದೇ ಧರ್ಮ ಎಂದು ಋಷಿಮುನಿಗಳ ಅಭಿಪ್ರಾಯವಾಗಿದೆ. ನಮ್ಮ ಪ್ರಾಚೀನ ಧರ್ಮ ಸೂತ್ರಗಳು, ಧರ್ಮಗಳು ಧರ್ಮಪದಕ್ಕೆ "ಧಾರಣಾತ್ ಧರ್ಮ-ಮಿತ್ಯಾಹು"ಎಂದು ಹೇಳುತ್ತವೆ. ಧರ್ಮವು ರಕ್ಷಿಸಿದವರನ್ನು ಕಾಪಾಡುತ್ತದೆ. ಬಿದ್ದಿರುವುವವರನ್ನು, ಬೀಳುವವರನ್ನು ಉದ್ಧರಿಸುವುದೇ ಆಗಿದೆ. ಜನರನ್ನು ಒಂದು ಮಾಡಿ, ಅವರಲ್ಲಿ ಪರಸ್ಪರ ಸಹಕಾರ, ಒಳತಿಗೆ ಪ್ರೇರಣೆ ನೀಡಬಲ್ಲ ಶಕ್ತಿ ಧರ್ಮಕ್ಕಿದೆ. ನಮ್ಮ ಬದುಕಿಗೆ ಆಧಾರವಾಗಿ, ಒಳಿತಿನತ್ತ ಕೊಂಡೊಯ್ಯುವುದೇ ಧರ್ಮವಾಗಿದೆ. ಹೀಗೆ ನಮ್ಮ ಪ್ರಾಚೀನರು ಧರ್ಮಕ್ಕೆ ಆಧಾರವಾಗಿ ಹಾಗೂ ಉದಾತ್ತವಾದ ಅರ್ಥವನ್ನು ಹೇಳಿದ್ದಾರೆ. ಇಂತಹ ಧರ್ಮವು ಭಿನ್ನ ಮತ್ತು ವಿಭಿನ್ನ ಬಗೆಯಲ್ಲಿ ನಾವು ವಿಂಗಡಿಸುತ್ತಾ ಮತ್ತು ಆಚರಿಸುತ್ತಾ ಬಂದಿದ್ದೇವೆ.

ಭಕ್ತಿ, ಧರ್ಮ ಹಾಗೂ ಸಾಂಸ್ಕೃತಿಕ ನೆಲೆಯ ಅನುಸಂದಾನದ ಅಧ್ಯಯನಗಳ ವಿಭಿನ್ನ ದೃಷ್ಟಿಕೋನಗಳನ್ನು ಗುರುತಿಸುವ ಪ್ರವೃತ್ತಿ. ಭಕ್ತಿ, ಧರ್ಮ ಹಾಗೂ ಸಾಂಸ್ಕೃತಿಕ ನೆಲೆಯು ಒಂದೇ ನಾಣಯದ ಎರಡು ಮುಖಗಳಿದ್ದಂತೆ. ಇಲ್ಲಿ ಕನಕದಾಸರು ಕೃಷ್ಣನನ್ನು ಆರಾಧ್ಯ ದೈವವಾಗಿ ಸ್ವೀಕರಿಸಿ ಸ್ಮರಿಸುವ ಭಕ್ತಿ, ಮನುಷ್ಯಧರ್ಮವನ್ನು ಅನುಸರಿಸಿದ ರೀತಿ ಬಹು ಮುಖ್ಯವಾಗಿದೆ. ಕನಕದಾಸರು ಭಕ್ತಿ ಹಾಗೂ ಸಮಾಜಿಕವಾಗಿ, ಧಾರ್ಮಿಕವಾಗಿ ನೀಡಿದ ಕೊಡುಗೆ ಅನನ್ಯವಾಗಿದೆ ಎಂದು ಅಧ್ಯಯನಕಾರರ ಅಭಿಪ್ರಾಯವಾಗಿದೆ. ಕನಕದಾಸರು ಸಾಂಸ್ಕೃತಿಕ ಹಿರಿಮೆ-ಗರಿಮೆಯುಳ್ಳ ಚಿಂತಕರು ಇವರು. ಭಜನೆ, ಹಾಡುಗಳು, ಕಥನಗಳು, ಲಾವಣಿ, ಹಂತಿಪದಗಳು, ಡೊಳ್ಳಿನ ಹಾಡುಗಳ ಮೂಲಕ ಸಾಂಸ್ಕೃತಿಕ ನಾಯಕನನ್ನಾಗಿ ಗುರುತಿಸಿದ, ಗುರುತಿಸುವ ಪ್ರವೃತ್ತಿಯ ವಿಭಿನ್ನ ದೃಷ್ಟಿಕೋನಗಳನ್ನು ಕಾಣುತ್ತೇವೆ.

ಆ ಬಗೆಯ ಎಲ್ಲ ಅಧ್ಯಯನಗಳು ಕನಕದಾಸರ ವಿಭಿನ್ನ ದೃಷ್ಟಿಕೋನ, ನಿಲುವುಗಳು ಅವುಗಳ ತಾತ್ವಿಕ ನಬಿಲುವುಗಳ ವಿಶ್ಲೇಷಣೆ ಈ ರೀತಿಯಾಗಿದೆ. ಭಕ್ತ ಎಂದರೆ ದೇವರಲ್ಲಿ ಅತಿಶಯವಾದ ಪ್ರೇಮ. ಇದು ಭಕ್ತನಿಗೂ, ಭಗವಂತನಿಗೂ ಇರುವ ಸಂಬಂಧ ಈ ಶಬ್ದದ ಉತ್ಪತ್ತಿ "ಭಜಸೇವಾಯಂ" ಧಾತುವಿನಿಂದ ಬಂದಿದೆ. ಈ ಜಗತ್ತು ನಶ್ವರವಾದುದು. ಬದುಕು ಕ್ಷಣಿಕ ಎನ್ನುವುದು. ತನ್ನ ಅನುಭವದಿಂದ ಕಂಡುಕೊಂಡು ಮೋಹದ ಬದುಕು ಇರಬಾರದು ಎಂದು ತಿಳಿದುಕೊಂಡು ಆದರಿಂದ ಕಷ್ಟವೇ ಹೆಚ್ಚು. ಸ್ಥಿರವಾಗಿರುವ ಭಗವಂತನನ್ನು ಪೂಜಿಸಿ ಅಂತರಂಗ ಮತ್ತು ಬಹಿರಂಗ ಶುದ್ಧಿಯಿಂದ ಪರಿಶುದ್ಧ ಮಾನವನಾಗಿ ಬಾಳಿ ದೇವರ ಕೃಪೆಗೆ ಪಾತ್ರನಾಗಿ ಇಹ

ಜೀವನದಲ್ಲಿ ಸಾರ್ಥಕತೆ, ಪರದಲ್ಲಿ ಮೋಕ್ಷವನ್ನು ಪಡೆಯಬೇಕೆನ್ನುವ ಧ್ಯೇಯವೇ ಭಕ್ತಿಯಾಗುತ್ತದೆ. ಇಂತಹ ನಿಷ್ಕಲ್ಮಶವಾದ ಭಕ್ತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅದನ್ನು ಇತರರಿಗೆ ಪ್ರಸಾರ ಮಾಡಲು ಒಂದು ಚಳುವಳಿಯೇ ಹುಟ್ಟಿಕೊಂಡಿತು. ಅಂತಹ ಚಳುವಳಿಗಳು ಭಕ್ತಿಚಳುವಳಿಗಳಾದವು. ಭಕ್ತಿಚಳುವಳಿಗಳೇ ಕಾಲ ಕಾಲಕ್ಕೆ ಸಮುದಾಯದಲ್ಲಿ ಧಾರ್ಮಿಕ ಅಂಧಶ್ರದ್ಧೆ, ಮೂಢನಂಬಿಕೆ, ಕಂದಾಚಾರ ಪದ್ಧತಿಗಳನ್ನು ತೊಡೆದು ಹಾಕಿ, ಸಮಾಜ ಪರಿವರ್ತನೆಗೆ ನಾಂದಿ ಹಾಡುವುದು ಭಕ್ತಿ ಚಳುವಳಿಯ ಉದ್ದೇಶವಾಗಿದೆ. ಸ್ವಸ್ಥ ಸಮಾಜಕ್ಕಾಗಿ ಹೋರಾಡುವ, ವೈಯಕ್ತಿಕ ಮತ್ತು ಸಾಮೂಹಿಕ ಹೋರಾಟಗಳನ್ನು, ಚಳುವಳಿಗಳು ಎಂದು ಕರೆಯುತ್ತೇವೆ.

ಭಕ್ತಿಯು ಮಾನವನ ಸಹಜ ಭಾವನೆ ಅವನಲ್ಲಿ ಅದ್ಭುತ ರಮ್ಯವಾದ ಚಲುವು, ಭೀತಿ, ಐಶ್ವರ್ಯ, ಆದರಗಳನ್ನು ಹುಟ್ಟಿಸಿತು. ಮಾನವ ಹುಟ್ಟಿನಿಂದ ಸೃಷ್ಟಿಕರ್ತನ ಕಲ್ಪನೆಯು ಹೊಳೆದಂದಿನಿಂದ ಅವನಲ್ಲಿ, ಆತನ ಬಗೆಗೂ ಈ ಉಭಯ ವಿವಿಧ ಭಾವನೆಗಳು ತಳೆದದ್ದನ್ನು ಕಾಣುತ್ತೇವೆ. ಈ ಪ್ರೀತಿ, ಭೀತಿಗಳೇ ಐಶ್ವರ್ಯ, ಆದರಗಳೇ, ಭಕ್ತಿಯ ಮೂಲ ನೆಲೆಗಳಾದವು. ಪರಿಣಿತ ಸಮ್ಮಿಲಿತ ಸ್ವರೂಪವೇ ಭಕ್ತಿ ಎಂದು ಹೇಳಬಹುದು. ಉಪನಿಷತ್ತಿನ ಶ್ಲೋಕದಲ್ಲಿ ಭಕ್ತಿ ಈ ಕೆಳಗಿನಂತೆ ಬಂದಿರುವುದು.

'ಯಸ್ಯ ದೇವೇ ಪರಾಭಕ್ತಿ: ಯಥಾ ದೇವೇ ತಥಾ ಗುರೌ

ತಸ್ಯೈತೇ ಕಥಿತಾಹ್ಯರ್ಥ:ಪ್ರಕಾಶಂತೇ ಮಹಾತ್ಮನ್'(೪–೨೩)

ಯಾವನು ಗುರುವಿನಲ್ಲಿಯೂ ದೇವರಲ್ಲಿಯೂ ಭಕ್ತಿಯುಳ್ಳವನಿರುವನೋ ಅವನಿಗೆ ಪಾರಮಾರ್ಥಿಕ ರಹಸ್ಯವನ್ನು ಅರುಹಿದರೆ ಅದು ಮಹಾತ್ಮನಲ್ಲಿ ಹೊಳೆಯುವದು.

ಭಕ್ತಿ ಗಂಗೆಯ ಮುಂದೆ ಮಧ್ಯಯುಗದಲ್ಲಿ ತುಂಬಾ ವಿಶಾಲತೆಯನ್ನು ಪಡೆದು ಭಾರತದಲ್ಲಿ ಎಲ್ಲ ಪ್ರಾಂತ್ಯಗಳಲ್ಲಿ ಅಲ್ಲಲ್ಲಿ ಅನುಭವಿ ಸಂತರ ಮುಖಾಂತರ, ಸಲೀಲವಾಗಿ ಹರಿದು ಜನಜೀವನಕ್ಕೆ ಪಾವನವಾಗಿದ್ದಾಳೆ. ಅಂದಿನ ಸಂತರು, ಶರಣರು, ದಾಸರು ಜನಸಾಮಾನ್ಯರೊಡನೆ ಬೆರೆತು ತಮ್ಮ ಅನುಭಾವದ ಪ್ರಭಾವದಿಂದ ಸ್ತ್ರೀಯರಲ್ಲಿ, ಶೂದ್ರ, ಹಿಂದುಳಿದವರು, ದಲಿತರಲ್ಲಿಯೂ ಕೂಡ ಭಗವಂತನನ್ನು ಕಾಣುವ ಹಂಬಲ ಮೊಳೆಸಿದರು. ಅವರ ಮಾತಿನಲ್ಲಿ ಅವರಿಗೆ ತಿಳಿಹೇಳಿ, ಬೋಧನೆ ಮಾಡಿ ಸಮಾಜದಲ್ಲಿ ಇರುವವರನ್ನು ಉದ್ಧರಿಸಿದರು. ಬೌದ್ಧ, ಜೈನ ಧರ್ಮಗಳು ಕ್ರಿಪೂ. ೬ನೇ ಶತಮಾನದಲ್ಲಿ ಉದಯಿಸಿದವು. ಭಕ್ತಿ ಚಳುವಳಿಗಳ ಇತಿಹಾಸ ಅಷ್ಟೇ ಹಿಂದಕ್ಕೆ ಹೋಗುತ್ತದೆ. ಬೌದ್ಧಮತ್ತು ಜೈನ ಧರ್ಮಗಳು ಬ್ರಾಹ್ಮಣೀಯ ಯಜಮಾನ್ಯವನ್ನು ತಿರಸ್ಕರಿಸಿದವು. ಯಜ್ಞ ಯಾಗಾದಿಗಳನ್ನು ವಿರೋಧಿಸಿದವು. ಕ್ರಾಂತಿಕಾರಕವಾದ ನಿಲುವುಗಳನ್ನು ತಾಳಿ, ಪಟ್ಟಭದ್ರ ಸಂಸ್ಕೃತಿಯ ವಿರುದ್ಧವಾಗಿ ತಳೆದ ನಿಲುವಾಗಿತ್ತು. ಈ ಎರಡು ಧರ್ಮಗಳು ವ್ಯವಹಾರಕ್ಕೆ ಸಂಸ್ಕೃತವನ್ನು ಬಳಸಲಿಲ್ಲ. ಬೌದ್ಧ , ಜೈನ ಧರ್ಮಗಳು ಕ್ರಿ ಪೂ. ೬ನೇ ಶತಮಾನದಲ್ಲಿ ಉದಯಿಸಿದವು. ಭಕ್ತಿ ಚಳುವಳಿಗಳ ಇತಿಹಾಸ ಅಷ್ಟೇ ಹಿಂದಕ್ಕೆ ಹೋಗುತ್ತದೆ. ಬೌದ್ಧ ಧರ್ಮದ್ದೂ "ಪಾಲಿ" ಭಾಷೆಯಾಗಿತ್ತು, ಪಾಲಿ

ಅರ್ಧಮಾಗದಿ ಜನಸಾಮಾನ್ಯರ ಆಡು ನುಡಿಗಳಾಗಿದ್ದವು. ಮುಖ್ಯವಾಗಿ ಗಮನಿಸಬೇಕಾದ ಅಂಶವೆನೆಂದರೆ ದೇವರಲ್ಲಿ ಅಚಲ ನಿಷ್ಠೆ ಸದಾಚರಣೆ ಇದ್ದರೆ ಸಾಕು, ಮುಕ್ತಿ ದೊರಕುತ್ತದೆ ಎನ್ನುವುದನ್ನು ಭಕ್ತಿ ಮಾರ್ಗವು ಹೆಚ್ಚು ಪ್ರಚಾರಗೊಳಿಸಿತ್ತು. ಭಕ್ತಿ ಮಾರ್ಗವು ಜಾತಿ, ವರ್ಗ, ವರ್ಣ ಲಿಂಗಬೇಧಗಳನ್ನು ಪರಿಗಣಿಸದೇ ವ್ಯಕ್ತಿ ಮತ್ತು ಸಮಾಜದ ಘನತೆಯನ್ನು ಎತ್ತಿಹಿಡಿಯಿತು. ಭಾರತದಲ್ಲಿ ಅದರಲ್ಲಿಯೂ ತಮಿಳುನಾಡಿನಲ್ಲಿ ಏಳನೇ ಶತಮಾನದಲ್ಲಿ ಹುಟ್ಟಿಕೊಂಡು ಆಳ್ವರ ಮತ್ತು ನಾಯನಾರ್‌ರ ಚಳುವಳಿಗಳೇ ಸಾಕ್ಷಿ ಅನಂತರ ಕರ್ನಾಟಕದಲ್ಲಿ ಶರಣರ, ಹರಿದಾಸರ ಚಳುವಳಿಗಳು ಮಹಾರಾಷ್ಟ್ರದಲ್ಲಿ ಭಾಗವತ ಚಳುವಳಿ, ಪೂರ್ವ ಭಾರತದಲ್ಲಿ ಚೈತನ್ಯ ಪಂಥಿಯರ ಚಳುವಳಿ ಉತ್ತರ ಭಾರತದಲ್ಲಿ ತುಳಸಿ, ಕಬೀರರ ಚಳುವಳಿ, ಅಸ್ಸಾಮಿನಲ್ಲಿ ಶಂಕರ ದೇವನ ಚಳುವಳಿ, ಹೀಗೆ ಭಾರತಾದ್ಯಂತ ಭಕ್ತಿ ಚಳುವಳಿ ನಡೆದಿರುವುದನ್ನು ಕಾಣುತ್ತೇವೆ. ಹಿಂದಿನ ಕಾಲದಿಂದಲೂ ಭಕ್ತಿ ಚಳುವಳಿಗಳು ಇದ್ದಕ್ಕಿದ್ದಂತೆ ತಲೆ ಎತ್ತುವುದಿಲ್ಲ . ಸಮಾಜದಲ್ಲಿ ನಡೆಯುವ ಅನ್ಯಾಯ, ಅಸಮಾನತೆ, ಮೇಲು-ಕೀಳು ಎಂಬ ಧೋರಣೆ ಇದ್ದಾಗ ಅದರ ವಿರುದ್ಧ ಹೋರಾಡಲು ಇಂತಹ ಚಳುವಳಿಗಳು ಹುಟ್ಟಿಕೊಂಡಿವೆ.

ಒಂದು ಕಾಲದಲ್ಲಿ ವೈಷ್ಣವ ಆಳ್ವರ ಬೀಡಾಗಿದ್ದ, ತಮಿಳು ದೇಶದ ಪರಂಪರೆಯಲ್ಲಿ ರಾಮಾನುಜರು, ೧೨ನೇ ಶತಮಾನದಲ್ಲಿ ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು. ಆದರೂ ಅವರಿಗೆ ಅಲ್ಲಿ ಪ್ರೋತ್ಸಾಹ ಸಿಗಲಿಲ್ಲ. ಇವರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ವಿಷ್ಣುವರ್ಧನನ ಆಶ್ರಯದಲ್ಲಿ ನೆಲೆಸಿದರು. ಇವರುಗಳ ವರ್ಚಸ್ಸು, ದಕ್ಷಿಣ ಭಾರತವನ್ನೆಲ್ಲಾ ವ್ಯಾಪಿಸಿತು. ಕ್ರಮೇಣ ವೈಷ್ಣವ ಆಚಾರ್ಯರು, ವಿಜಯನಗರದ ಅರಸು ಮನೆತನಗಳಿಗೆ ರಾಜ ಗುರುಗಳಾಗಿ ವೈಷ್ಣವ ಭಕ್ತಿಯನ್ನು, ಪ್ರಸಾರ ಮಾಡಿದರು. ವೈಷ್ಣವ ಮತದ ಆಧಾರಸ್ಥಂಬಗಳಂತಿದ್ದ ಆಳ್ವಾರರು ವೈಷ್ಣವ ಭಕ್ತಿಯನ್ನು ಪ್ರಚಾರ ಮಾಡಿದರು. ದಕ್ಷಿಣ ಭಾರತದ ಧರ್ಮ ಕ್ಷೇತ್ರದಲ್ಲಿ ಶೈವ, ವೈಷ್ಣವರಿಬ್ಬರೇ ಸ್ಪರ್ಧಿಗಳಾದರು. ೧೨-೧೬ನೇ ಶತಮಾನದಲ್ಲಿ ಭಕ್ತಿಯ ಆಂದೋಲನಗಳಿಗೆ ಸಾಮಾಜಿಕ ಸ್ವರೂಪ ನೀಡಿತು. ಸಂಸ್ಕೃತ ದೇವ ಭಾಷೆಯಾಗಿ ವಿದ್ವಜ್ಜನರಿಗೆ ಅಷ್ಟೇ ಸೀಮಿತವಾಗಿತ್ತು. ಢಾಂಭಿಕತೆ, ಅಂಧ ವಿಶ್ವಾಸ, ಪುರೋಹಿತರ ಶೋಷಣೆಯಿಂದ ತುಂಬಿದ್ದ ವೈದಿಕ ಪಂಥಗಳಿಗೆ ಅವುಗಳಿಂದ ರೋಸಿ ಹೋಗಿದ್ದ ಜನ ಸಮೂಹದಿಂದ ಪ್ರತಿಭಟನೆ ಬಂದಿತು. ವೈದಿಕ ಕರ್ಮ ಕಾಂಡವು ಜನ ಸಾಮಾನ್ಯರಿಗೆ ನುಂಗಲಾರದ ತುತ್ತಾದಾಗ ಭಕ್ತಿ ಚಳುವಳಿಗಳು ಜನ ಭಾಷೆಯ ಮದ್ಯಮದಿಂದ ಜನ ಜಾಗೃತಿ ಹಾಗೂ ಭಕ್ತಿ ಪ್ರಸಾರಕ್ಕೆ ನಾಂದಿಯಾದವು.

ದಕ್ಷಿಣ ಭಾರತದಲ್ಲಿ ಭಕ್ತಿ ಸಾಹಿತ್ಯದ ಪ್ರಾಚೀನತೆ ಮತ್ತು ರಚನೆಯಲ್ಲಿ ತಮಿಳುನಾಡು ಪ್ರಥಮ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೆಯ ಸ್ಥಾನದಲ್ಲಿದೆ. ತಮಿಳಿನಲ್ಲಿ ನಾಯನ್ಮಾರರು ಮತ್ತು ಆಳ್ವಾರರು ಪ್ರಸಿದ್ದ ಭಕ್ತಿ ಕವಿಗಳಾಗಿದ್ದಾರೆ. ಕನ್ನಡದಲ್ಲಿ ಶಿವ ಶರಣರು ಮತ್ತು ಹರಿದಾಸರು ಪ್ರಸಿದ್ದ ಭಕ್ತಿ ಕವಿಗಳಾಗಿದ್ದಾರೆ. ಭಕ್ತಿ ಭಂಡಾರಿ ಎಂದೇ ಪ್ರಖ್ಯಾತರಾದ ಬಸವೇಶ್ವರರು ಅಸಂಖ್ಯಾತ ಶರಣರನ್ನು

ತಮ್ಮೆಡೆಗೆ ಆಕರ್ಷಿಸಿಕೊಂಡು ಅವರಿಗೆ ಪ್ರೇರಣೆ ನೀಡಿದರು. ಶಿವನ ಬಗೆಗೆ ಆಳವಾದ ಭಕ್ತಿಯನ್ನು ಹೊಂದಿದ ಬಸವೇಶ್ವರರು ಕನ್ನಡದಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ, ವಚನಗಳನ್ನು ರಚಿಸಿ ವೀರಶೈವವೆಂಬ ಪ್ರತಿಭಟನಾತ್ಮಕ ಧರ್ಮವನ್ನು ಪ್ರಚುರ ಪಡಿಸಿದರು. ಅವರ ಆಳವಾದ ಪ್ರಭಾವಕ್ಕೆ ಒಳಗಾಗಿ ಅಸಂಖ್ಯಾತ ಶಿವ ಶರಣರು, ಕನ್ನಡದಲ್ಲಿ ವಚನಗಳನ್ನು ರಚಿಸಿದರು. ಈ ವಚನಗಳಲ್ಲಿ ಅವರು ತಮ್ಮ ಅನುಭಾವದ ಅನುಭವವನ್ನು, ಶಿವಭಕ್ತಿಯನ್ನೂ, ಶಿವಪಾರಮಯ್ಯವನ್ನೂ ಬೋಧಿಸಿದರು. ಅಲ್ಲಮಪ್ರಭು, ಸಿದ್ಧರಾಮ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ ಮತ್ತು ಅಕ್ಕಮಹಾದೇವಿ ಮುಂತಾದ ಶರಣ, ಶರಣೆಯರು ಹನ್ನೆರಡನೆಯ ಶತಮಾನದ ಕರ್ನಾಟಕದಲ್ಲಿ ಸಮಾಜೋ-ಧಾರ್ಮಿಕ ಚಳುವಳಿಯನ್ನು ಪ್ರಾರಂಭಿಸಿದರು. ಚಾಲುಕ್ಯ ರಾಜ್ಯದ ಬಿಜ್ಜಳದೊರೆ ಆಳ್ವಕೆಯಲ್ಲಿ ಬಸವೇಶ್ವರರು ಕಲ್ಯಾಣದಲ್ಲಿ ಅನುಭವ ಮಂಟಪವೆಂಬ ಧಾರ್ಮಿಕ ಸಂಸ್ಥೆಯನ್ನು ಪ್ರಾರಂಭಿಸಿದರು. ಶರಣರು ತಮ್ಮ ಅನುಭಾವದ ಅಭಿವ್ಯಕ್ತಿಗಳಾದ, ವಚನಗಳನ್ನು, ಅನುಭವ ಮಂಟಪದಲ್ಲಿ ಇತರ ಅನುಭಾವಿಗಳೊಡನೆ ಚರ್ಚಿಸಿ, ಸೂತ್ರೀಕರಿಸುತ್ತಿದ್ದರು.

ಹನ್ನೆರಡನೇಯ ಶತಮಾನದ ಕರ್ನಾಟಕದಲ್ಲಿ ನಡೆದ ಶರಣ ಚಳವಳಿಯು ನಂತರದ ನಡೆದ ಹರಿದಾಸ ಚಳವಳಿಯ ಮೇಲೆ ಆಳವಾದ ಪ್ರಾಭಾವವನ್ನು ಬೀರಿತು. ಶರಣರು ಮತ್ತು ಹರಿದಾಸರು ಆರಾಧಿಸುವ ದೇವರುಗಳು ಭಿನ್ನವಾಗಿದ್ದರು ಕೂಡ, ಅವೆರಡೂ ಸಮೂಹಗಳಿಗೆ ಭಕ್ತಿಯ ಅಂಶ ಸಾಮಾನ್ಯವಾಗಿತ್ತು. ಶಿವಶರಣರು ಶಿವನ ಆರಾಧಕ(ಶೈವ)ರಾಗಿದ್ದಾರೆ, ದಾಸರು ಗರಿಯ ಆರಾಧಕ(ವೈಷ್ಣವ)ರಾಗಿದ್ದರು, ಹರಿದಾಸರು ಕೃತಿ, ಸ್ಮೃತಿ, ಪುರಾಣ ಮತ್ತು ಇತಿಹಾಸಗಳಲ್ಲಿ ನಂಬುಗೆಯುಳ್ಳವರಾಗಿದ್ದರು ಹರಿದಾಸರು ವೈಷ್ಣವರಾಗಿದ್ದರೂ ಕೂಡಾ ಶಂಕರಾಚಾರ್ಯರ ಅದ್ವೈತವನ್ನು ಸ್ವೀಕರಿಸಿಲಿಲ್ಲ. ಏಕೆಂದರೆ ಈಅದ್ವೈತವು ಪ್ರಖರ ವೈಚಾರಿಕತೆ ಮತ್ತು ಕ್ಲೀಷ್ಟವಾದ ತತ್ವಜ್ಞಾನದಿಂದ ತುಂಬಿದೆ. ಅದರ ಬದಲಾಗಿ ಹರಿದಾಸರು ಜನಸಾಮಾನ್ಯರ ಬುದ್ದಿಗೆ ಭಾರವಾಗದೆ ಅವರ ಹೃದಯವನ್ನು ಸೆರೆಹಿಡಿಯುವಂಥ ಧರ್ಮಕ್ಕೆ ಪ್ರಾಮುಖ್ಯತೆ ನೀಡಿದರು.

ಹರಿದಾಸರನ್ನು ವ್ಯಾಸಕೂಟ ಮತ್ತು ದಾಸಕೂಟವೆಂಬ ಎರಡು ಗುಂಪುಗಳಲ್ಲಿ ವಿಭಜಿಸಲಾಗಿದೆ. ವ್ಯಾಸಕೂಟದ ಹರಿದಾಸರು ವೇದ, ಉಪನಿಷತ್ತು ಮತ್ತು ವಿಷ್ಣುವಿನ ಅನೇಕ ಅವತಾರಗಳನ್ನು ಕುರಿತು ಪೌರಾಣಿಕ ಜ್ಞಾನವನ್ನು ಗಳಿಸುವುದು ಅವಶ್ಯವಾಗಿತ್ತು. ಅವರು ತಮ್ಮ ತತ್ವಗಳನ್ನು ದೇವ ಭಾಷೆಯಾದ ಸಂಸ್ಕೃತದಲ್ಲಿ ಮತ್ತು ಶ್ಲೋಕ ಮತ್ತು ಕೀರ್ತನೆಗಳ ಮೂಲಕ ಬೋಧಿಸಿದರು. ಆದರೆ ದಾಸಕೂಟದ ಹರಿದಾಸರು ವೈದಿಕ ವಿದ್ಯೆಯ ಎಲ್ಲ ಅಂಶಗಳನ್ನು ಮೇಳವಿಸಿ ಪ್ರಾಕೃತ ಮತ್ತು ಕನ್ನಡದಂಥ ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯುವಂಥ ಪ್ರಾದೇಶಿಕ ಭಾಷೆಯಲ್ಲಿ ಬೋಧಿಸಿದರು.

ಇವೆರಡೂ ಕೂಟಗಳ ನಡುವೆ ತಾತ್ವಿಕ ಬೇಧವೇನು ಇಲ್ಲ. ಎರಡು ಗುಂಪಿನವರು ಮಧ್ವಾಚಾರ್ಯರ ದ್ವೈತ ಸಿದ್ಧಾಂತವನ್ನೇ ಪ್ರತಿಪಾದಿಸಿರು. ಆದರೆ ಅವೆರಡೂಗುಂಪಿನ ನಡುವೆ

ಒಡೆದು ಕಾಣುವ ಭಿನ್ನತೆಯೆಂದರೆ ವ್ಯಾಸಕೂಟವು ಜ್ಞಾನಪ್ರತಿಪಾದಕವಾಗಿದ್ದರೆ, ದಾಸಕೂಟವೂ ಭಕ್ತಿ ಪ್ರತಿಪಾದಕವಾಗಿದೆ. ಆದರೂ ಕೂಡಾ ಎರಡು ಕೂಟದವರು ದ್ವೈತ ಸಿದ್ಧಾಂತವನ್ನು ಮತ್ತು ವಿಷ್ಣು ಭಕ್ತಿಯನ್ನು ಕೀರ್ತನೆಗಳ ಮೂಲಕವೇ ಭೋಧಿಸಿರು. ಶ್ರೀಪಾದರಾಯರು, ವಾದಿರಾಜರು ಮತ್ತು ಶ್ರೀ ರಾಘವೇಂದ್ರರು ವ್ಯಾಸಕೂಟಕ್ಕೆ ಸೇರಿದ್ದರೆ ಪುರಂದರದಾಸರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರು ದಾಸಕೂಟಕ್ಕೆ ಸೇರಿದ್ದರು.

ಸಾಂಸ್ಕೃತಿಕ ಮಧ್ವ ಸಿದ್ಧಾಂತವನ್ನು ಪ್ರತಿಪಾದಿಸಿರುವ ಹರಿದಾಸರಿಗೆ ಕೀರ್ತನೆಯು ಭಕ್ತಿಯು ಒಂಭತ್ತು ರೂಪಗಳಲ್ಲಿ ಒಂದಾಗಿತ್ತು. ಅವರ ದೃಷ್ಟಿಯಲ್ಲಿ ಸಂಗೀತ ಮತ್ತು ಕಾವ್ಯಗಳು ಅವಳಿ-ಜವಳಿಯಾಗಿದ್ದು ಅವುಗಳನ್ನು ಬೇರ್ಪಡಿಸುವಂತಿರಲಿಲ್ಲ. ಅವರು ಸಂಗೀತ ಮತ್ತು ಕಾವ್ಯದ ಮೂಲಕ ಪರಮಾತ್ಮನನ್ನು ಸಾಕ್ಷಿಕರಿಸಿಕೊಳ್ಳಲು ಪ್ರಯತ್ನಿಸಿದರು. ಏಕೆಂದರೆ, ಅವರ ದೃಷ್ಟಿಯಲ್ಲಿ, ಪರಮಾತ್ಮನು ಸಾಮಗಾನ ಪ್ರಿಯನಾಗಿದ್ದಾನೆ. ಹೀಗಾಗಿ ಪ್ರತಿಯೊಬ್ಬ ಹರಿದಾಸನೂ ಏಕಕಾಲಕ್ಕೆ ಭಕ್ತನೂ, ಕವಿಯೂ, ಸಂಗೀತಗಾರನೂ ಆಗಿದ್ದ ಎಂಬುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ.

೫.೧ ಭಕ್ತಿಯ ನೆಲೆಗಳು

ಶ್ರೀ ಮದ್‌ಭಾಗವತದ ಸಪ್ತಮ ಸ್ಕಂದದಲ್ಲಿ ಭಕ್ತಿಯ ವೈವಿಧ್ಯತೆಯನ್ನು ಕುರಿತಂತೆ ಇರುವ ಶ್ಲೋಕವಿದು :

'ಶ್ರವಣ ಕೀರ್ತನಂ ವಿಷ್ಣೋಃಸ್ಮರಣಂ ಪಾದಸೇವನಂ।

ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ॥'

ಶ್ರವಣಭಕ್ತಿ, ಕೀರ್ತನಭಕ್ತಿ, ಸ್ಮರಣಭಕ್ತಿ, ಪಾದಸೇವನಭಕ್ತಿ, ಅರ್ಚನಭಕ್ತಿ, ವಂದನಭಕ್ತಿ, ದಾಸ್ಯಭಕ್ತಿ, ಸಖ್ಯಭಕ್ತಿ ಮತ್ತು ಆತ್ಮನಿವೇದನ ಭಕ್ತಿ ಎಂಬುದಾಗಿ ಒಂಭತ್ತು ವಿಧವಾದ ಭಕ್ತಿಗಳನ್ನು ಅದರಲ್ಲಿ ಹೆಸರಿಸಿವೆ.

೧. **ಶ್ರವಣಭಕ್ತಿ**–ಭಗವಂತನಿಗೆ ಸಂಭಂದಿಸಿದ ಯಾವುದೇ ಯೋಗ್ಯ ವಿಷಯವನ್ನಾಗಲಿ ಅದನ್ನು ಮನಸ್ಸಿಟ್ಟು ಕೇಳುವುದೇ ಶ್ರವಣ ಭಕ್ತಿ

೨. **ಕೀರ್ತನ ಭಕ್ತಿ:** ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಿಭೂತವಾಗಿರುವ ಭಗವಂತನ ಸ್ತುತಿಯೇ ಕೀರ್ತನ ಭಕ್ತಿ.

೩. **ಸ್ಮರಣೆ ಭಕ್ತಿ:** ಸ್ಮರಣ ಭಕ್ತಿಯಲ್ಲಿ ನಾಮಸ್ಮರಣೆಗೆ ಉನ್ನತಸ್ಥಾನ 'ಶ್ರವಣ ಕೀರ್ತನಗಳಿಂದ ಸಂಗ್ರಹಿಸಿದ ಭಗವನ್ನಾಮ ರೂಪ ಗುಣಾದಿಗಳನ್ನು ಸ್ಮರಿಸುವುದು ಸ್ಮರಣಭಕ್ತಿ'.

೪. **ಪಾದಸೇವನ ಭಕ್ತಿ:** ಒಮ್ಮನದಿಂದ ಭಗವಂತನ ಪಾದಸೇವಿಸುವುದೇ ಪಾದಸೇವನೆ ಭಕ್ತಿ.

೫. **ಅರ್ಚನ ಭಕ್ತಿ:** ಪರಿಶುದ್ಧ ಹೃದಯದಿಂದ ಭಗವಂತನನ್ನು ಶಾಸ್ತ್ರೋಕ್ತವಾಗಿ ಅರ್ಚಿಸುವುದೇ ಅರ್ಚನಭಕ್ತಿ.

೬. **ವಂದನ ಭಕ್ತಿ:** ಮಂತ್ರ ಸ್ತೋತ್ರ, ಸಂಕೀರ್ತನೆಗಳ ಮೂಲಕ ಭಗವಂತನ ಹಿರಿಮೆಯನ್ನು ಪರಿಚಯಿಸುವುದೇ ವಂದನ ಭಕ್ತಿ.

೭. **ದಾಸ್ಯ ಭಕ್ತಿ:** ಭಗವಂತನೇ ನನ್ನ ಸ್ವಾಮಿ ನಾನು ಅವನ ದಾಸ ಎಂದು ತಿಳಿದು ಪೂರ್ಣ ಪ್ರೇಮದಿಂದ ಅವನಿಂದ ಪ್ರತಿ ಫಲ ರೂಪದಲ್ಲಿ ಏನನ್ನು ಅಪೇಕ್ಷಿಸದ ಅವನ ಸೇವೆ ಕೈಂಕಾರ್ಯಗಳನ್ನು ಮಾಡುವುದೆ ದಾಸ್ಯ ಭಕ್ತಿಯಾಗಿದೆ.

೮. **ಸಖ್ಯ ಭಕ್ತಿ:** ಭಗವಂತನನ್ನು ಭಕ್ತ ತನ್ನ ಸಖನೆಂದು ಭಾವಿಸಿ ಆರಾಧಿಸುವ ವಿಧಾನದಿಂದ ಕೂಡಿರುವ ಭಕ್ತಿಯೇ ಸಖ್ಯಭಕ್ತಿ.

೯. **ಆತ್ಮ ನಿವೇದನಭಕ್ತಿ:** ಸರ್ವಾರ್ಪಣ ಮಸ್ತು ಎಂದು ಭಗವಂತನಲ್ಲಿ ಸಮರಸವಾಗುವು ಇದು ಆತ್ಮನಿವೇದನೆ ಇಲ್ಲಿ ಎಲ್ಲೂ ಇರುವ ದೇವರನ್ನು ಭಾವನಾತ್ಮಕ ಸಂಮಿಳಿತವೇ ಆತ್ಮ ನಿವೇದನೆ ಎನಿಸುವುದು.

ಈ ಎಲ್ಲ ವಿವಿಧ ಭಕ್ತಿಯ ಆಯಾಮಗಳನ್ನು ಕನಕದಾಸರ ಹರಿಭಕ್ತಸಾರದಲ್ಲಿ ಕಾಣುತ್ತೇವೆ ಎಂದು ಶಿವಪ್ರಸಾದ್ ವೈ.ಎಸ್. ಅವರ ಅಭಿಪ್ರಾಯವಾಗಿಎ. ಈ ಅಭಿಪ್ರಾಯ ಹೆಚ್ಚು ಸೂಕ್ತವಾಗಿದೆ. **ಟಿ.ವಿ. ವೆಂಕಟಾಚಲ ಶಾಸ್ತ್ರಿಯವರ ಅಭಿಪ್ರಾಯದಂತೆ** "ಅಚ್ಚ ಭಕ್ತಿಯ ಧ್ಯಾನ ಪೌರಾಣಿಕ ಕಥಾ ಸಂದರ್ಭಗಳ ಮನನ, ತಾತ್ವಿಕ ವಿಷಯಗಳ ಚಿಂತನ ಇವುಗಳಿಂದ ಮುಪ್ಪುರಿಗೊಂಡ 'ಹರಿಭಕ್ತಿಸಾರ' ನಮ್ಮ ಸಂಸ್ಕೃತಿಯ, ನಮ್ಮ ಜೀವನ ಮೌಲ್ಯಗಳ ಸಾರಾಂಶವನ್ನೇ ಹೇಳಲು ಹೊರಟಿದೆ. ಆ ಪ್ರಯತ್ನದಲ್ಲಿ ಭಕ್ತಿಗೆ ಪ್ರಧಾನ ಪಟ್ಟವನ್ನು ಕೊಟ್ಟಿದೆ. ಅದು ನಮ್ಮನ್ನು ನಾವು ತಿಳಿಯುವ, ಭಗವಂತನನ್ನು ಪಡೆಯುವ ಸಾಧನವೆಂದು ಸಮರ್ಥವಾಗಿ ನಿರೂಪಿಸಿದೆ. ಇಲ್ಲಿಯ ಭಕ್ತಿ ವಿಶಿಷ್ಟಾದ್ವೈತ ಸಂಪ್ರದಾಯದ ಆಚರಣಾ ವಿಧಾನಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದು. ಅಂದರೆ ಪ್ರವೃತ್ತಿ ಮಾರ್ಗದ ಅತ್ಯಂತಿಕ ಶರಣ್ಯಭಾವದ ಸಹಜ ಭಕ್ತಿ ಅದು.

ಕನಕದಾಸರಿಗೆ ವಿಷ್ಣುವಿನ ಮೇಲಿನ ಭಕ್ತಿ ಅನನ್ಯವಾದುದು; ಅರ್ದವಾದದ್ದು. ತನ್ನ ಆರಾಧ್ಯ ದೈವವಾದ ವಿಷ್ಣು ತನ್ನನ್ನು ಅನುವರತವೂ ರಕ್ಷಿಸಲಿ ಎಂದು ಆರ್ತಭಾವದಲಿ ಆತ ಪ್ರಾರ್ಥಿಸುತ್ತಾ ಹೋಗಿದ್ದಾನೆ. ಪ್ರತಿ ಪದ್ಯದಲ್ಲಿಯೂ ಇಲ್ಲಿ ಕವಿ ಒಂದು ನಿಮಿತ್ತ್ಯ ಅಷ್ಟೆ. ನಿಜವಾಗಿಇದು ಭಕ್ತರೆಲ್ಲರ ಹೃದಯದ ಮೊರೆಯೇ ಆಗಿದೆ. ಈ ಪದ್ಯ ಗಮನಿಸಬಹುದು;

ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು
ಏನುಬಲ್ಲೆನು ನಾನು ನೆಲೆ ಸು
ಜ್ಞಾನ ಮೂರುತಿ ನೀನು ನಿನ್ನ ಸ
ಮಾನರುಂಟೇ ದೈವ ರಕ್ಷಿಸು ನಮ್ಮನನವರತ

ಮರೆದೆನ ಭ್ಯುದಯದಲಿ ನಿಮ್ಮನು
ಮರೆಯನಾಪತ್ತಿನಲಿ ಹರಿಯೆಂ
ದೊರೆಯುವೆನು ಮನವೇ ಕಭಾವದೊಳಿಲ್ಲ ನಿಮ್ಮಡಿಯ
ಮರೆದು ಬಾಹಿರನಾದವನು ನೀ
ಮರೆವರೇ ಹಸು ತನ್ನ ಕಂದನ
ಮರೆವುದೇ ಮಮತೆಯಲಿ ರಕ್ಷಿಸು ನಮ್ಮನನವರತ

ಈ ಅನನ್ಯ ಶರಣ್ಯಭಾವವೇ ಎಲ್ಲ ಕಡೆಯೂ ವ್ಯಾಪಕವಾಗಿದೆ.[೧]

ಶ್ರೀಧರ ಪಿಸ್ಸೆ ಅವರು ಕನಕ ಚಿಂತನಾ ಸ್ವರೂಪದ ಮಂಡನಾ ವಿಧಾನವನ್ನು ಆತನ 'ಹರಿಭಕ್ತಿಸಾರ' ಕೃತಿಯ ರಚನಾ ವಿಧಾನದ ಮೂಲಕ ಅರಿಯಬಹುದಾಗಿದೆ. ಹರಿಭಕ್ತಿಸಾರ ನಾಲ್ಕು ಹಂತಗಳಲ್ಲಿ ರಚನೆಯಾಗಿರುವಂತೆ ಕಾಣುತ್ತದೆ. ೧. ಸರ್ವಸಮರ್ಪಣಾ ಭಾವ, ೨. ದಯವ ವಿಮರ್ಶೆ ಮತ್ತು ಭಕ್ತ ಆಧಾರಿತ ದೈವಚಿಂತನೆ ೩. ವಾಸ್ತವ ಬದುಕಿನ ಕಠೋರ ಮುಖಗಳು ೪. ಚೈತನ್ಯವಾದಿಯ ಚಿಂತನೆಗಳು ಎಂದು ಸ್ಥೂಲವಾಗಿ ಗುರುತಿಸಬಹುದು.[೨]

ಹೀಗೆ ಹಲವು ಬಗೆಯಲ್ಲಿ ಭಕ್ತಿಯ ನೆಲೆಗಳನ್ನು ಅಧ್ಯಯನಕಾರರು ಗುರುತಿಸಿರುವುದನ್ನು ಕಾಣುತ್ತೇವೆ. ಈ ಎಲ್ಲ ಅಧ್ಯಯನಕಾರರ ಅಭಿಪ್ರಾಯಗಳಿಗಿಂತ ಕನಕನ ಭಕ್ತಿ ಪಾಮ್ಯವು ಕಷ್ಣನನ್ನು ಒಲಿಸಿಕೊಂಡು ಆತಮ ಸಂವೇದನೆ ಹೊಂದುವುದು ಆಗಿತ್ತು ಎನ್ನಬಹುದು. ಆತ್ಮತೃಪ್ತಿಗಳಾಗಿ ಜಗದ ಜನರ ಕಲ್ಯಾಣ ಅದರಲ್ಲಿ ಅಡಗಿತ್ತು ಎನ್ನಬಹುದು.

೫.೨ ಧಾರ್ಮಿಕ ನೆಲೆಗಳು

ಧರ್ಮ ಎನ್ನುವುದು ನಿರಂತರ ಚಲನೆಯಲ್ಲಿದೆ ನಾವು ಸ್ವಾಭಾವಿಕವಾಗಿ ಹಿಂದು, ಕ್ರೈಸ್ತ, ಮುಸ್ಲಿಂ, ಜೈನ, ಬೌದ್ಧ, ಮುಂತಾದವುಗಳನ್ನು ಉದಾಹರಿಸುತ್ತೇವೆ. ಇಲ್ಲಿ ಅವರವರ ಆಚರಣೆ ಸಂಪ್ರಾದಾಯ ಬದುಕುವ ರೀತಿ ನೀತಿಗಳು ಬೇರೆ ಬೇರೆ ಭಿನ್ನ ಬಗೆಯ ಆಯಾಮಗಳಿವೆ. ನಾವು ಆಂಗ್ಲಭಾಷೆಯಲ್ಲಿ ರಿಲಿಜನ್ ಎನ್ನುವುದನ್ನು ಲ್ಯಾಟಿನ್ ಭಾಷೆಯ ರೀಲಿಸಿನಿಯಂ, ರೀಲಿಜರ್ ಮತ್ತು ರೀಲಿಜರರ್ ಎಂಬ ಮೂರು ಪದಗಳನ್ನು ಬಳಸುತ್ತಾರೆ ಮೊದಲ ಪದಕ್ಕೆ ಕ್ರಿ. ಶ. ೫ನೇಶತಮಾನದಲ್ಲಿ ಪವಿತ್ರವಾದುದಕ್ಕೆ ಗೌರವ ಸೂಚಿಸುವುದು ದೇವರಿಗೆ ಭಯ ಪಡುವುದು, ಆಚರಣೆ, ಪೂಜಾಚರಣೆ, ನಂಬಿಕೆ ಮತ್ತು ಸನ್ಯಾಸಾಶ್ರಮ ಎಂಬ ಅರ್ಥಗಳನ್ನು ಹೊಂದಿತ್ತು ಹಾಗಾದರೇ ಧರ್ಮ ಎಂಬುದಕ್ಕೆ ಇದೆ ಅರ್ಥಗಳು ಇದ್ದವೆ? ಎಂದರೆ ಅಂತಹ ಅರ್ಥಗಳು ಈ ಪದಕ್ಕೆ ಇರಲಿಲ್ಲ. ಈ ಪದ ಸಂಸ್ಕೃತ ಮೂಲವಾಗಿದ್ದು ಅದು 'ಋತ್' ಎನ್ನುವ ಧಾತುವಿನಿಂದ ಬಂದದ್ದು ಅದು ಭೂವಿಯ ಋತುಮಾನಗಳನ್ನು ಮತ್ತು ಆ ಋತುಮಾನಗಳಿಗೆ ಪೂರಕವಾಗಿ ಮಾನವರು ವಿಭಿನ್ನ ಬದುಕಿನ

ಕ್ರಮಗಳನ್ನು ಎತ್ತಿಹಿಡಿಯುವ 'ವಿಶ್ವ ನಿಯಮ' ಒಂದನ್ನು ಸೂಚಿಸುತ್ತದೆ. ಇದಲ್ಲದೆ ಪ್ರತಿಯೊಂದು ಜೀವಿಯೂ ಸಹ ತನ್ನದೆ ಆದ ಸ್ವಭಾವವನ್ನು, ಲಕ್ಷಣವನ್ನು ಹೊಂದಿದ್ದು ಅದು ವಿಶ್ವಾಸನಿಯವನ್ನು ಅನುಸರಿಸಿ ತನ್ನ ವ್ಯಕ್ತಿತ್ವದ ಸಾಕ್ಷಾತ್ಕಾರವನ್ನು ಅಂದರೆ ಮುಕ್ತಿಯನ್ನು ಸಾಧಿಸಿಕೊಳ್ಳಬೇಕಾಗಿದೆ. ಇದು ಮಾನವನ ಮಹೋನ್ನತಿಗೆ ದಾರಿಯಾಗಿದೆ.

ಧರ್ಮ ಎಂದರೆ ಅಲೌಕಿಕ ಶಕ್ತಿಯ ಶರಣು ಮತ್ತು ಅದನ್ನು ಕಾಣುವ ಪ್ರಯತ್ನದ ಹೆಜ್ಜೆಗಳಾಗಿವೆ, ಎಂಬ ಮಾತು ಇದನ್ನೆ ಹೇಳುತ್ತದೆ. ವಸ್ತುಪೂಜೆ, ಸರ್ವಾತ್ಮದರ್ಶನ, ಪಿತೃಪೂಜೆ ಮುಂತಾದ ನೆಲೆಗಳಿಂದ ಮಾನವ ಭಯ, ದತ್ತು ಪ್ರೇಮಗಳನ್ನು ಕಂಡು ಕೊಂಡಿರುವುದೇ ಧರ್ಮ.

ಕನಕದಾಸರು ಯಾವುದೇ ಧರ್ಮ, ಕಟ್ಟುಪಾಡುಗಳನ್ನು ಒಳಗೊಂಡಿಲ್ಲ. ಅವರು ಯಾವ ಧರ್ಮಕ್ಕೂ ಅಂಟಿಕೊಳ್ಳದೆ ಯಾವ ಧರ್ಮವನ್ನು ತಿರಸ್ಕರಿಸದ, ಜಾತ್ಯಾತೀತ ನಿಲುವಿನ ನವಿಲುಗರಿಯಾದವರು. ಅವರು ತಮ್ಮ ಇಡಿ ಜೀವನವನ್ನು ಎಲ್ಲ ಮತ, ಧರ್ಮದಲ್ಲಿ ಸಮಾನತೆ ತರಲು ಪ್ರಯತ್ನಪಟ್ಟವರು. ಇವರನ್ನು ಒಂದು ಧರ್ಮದ ನೀತಿ ನಿಯಮಗಳ ನೆಲೆಗಳಿಗೆ ಸೀಮಿತಿಗೊಳಿಸುವ ಹುನ್ನಾರ ಮೊದಲಿನಿಂದಲೂ ನಡೆಯುತ್ತ ಬಂದಿದೆ. ಆದರೂ ಕೊನೆಗೆ ಸಮಾನತೆ, ಜಾತ್ಯಾತೀತ, ಮನೋಭಾವದ ಸಂತರಾಗಿದ್ದರೆಂದು ಬಹಳಷ್ಟು ವಿದ್ವಾಂಸರು ಒಪ್ಪಿಕೊಂಡಿರುವರು.

೫.೩ ಸಾಂಸ್ಕೃತಿಕ ನೆಲೆಯ ಅನುಸಂಧಾನದ ಅಧ್ಯಯನಗಳು

ಸಾಂಸ್ಕೃತಿಕ ಪ್ರಜ್ಞೆಯಿಲ್ಲದ ಯಾವುದೇ ಸಮುದಾಯವೇ ಆಗಲಿ ವ್ಯಕ್ತಿಯೇ ಆಗಲಿ ಜೀವಂತವಾಗಿರಲು ಸಾಧ್ಯವಿಲ್ಲ, ಜನಮಾನಸದಲ್ಲಿ ಜೀವಂತ ಸಂಕೇತಗಳಾಗಿ ಅಲ್ಲಿನ ಸಾಮಾಜಿಕ ಸಂಗತಿಗಳು, ಸಾಂಸ್ಕೃತಿಕ ರೂಪಕಗಳು ಮಿಡಿಯುತ್ತಿರುತ್ತವೆ. ಸಾಂಸ್ಕೃತಿಕ ಪ್ರತಿಮೆಗಳಿಂದ ಮಾತ್ರ ಇಡೀ ಜನಸಮುದಾಯವನ್ನು ಭಾವನಾತ್ಮಕ ಸಂಬಂಧದ ನೆಲೆಯಲ್ಲಿ ಬೆಸೆಯಬಹುದು. ಆ ನಿಟ್ಟಿನಲ್ಲಿ ತಮ್ಮಕೀರ್ತನೆ, ಮುಂಡಿಗೆ ಹಾಗೂ ಸಾಹಿತ್ಯ ಕೃತಿಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಅಭಿವ್ಯಕ್ತಿಸಿದ, ದಾಸ ಸಾಹಿತ್ಯದ ಶ್ರೇಷ್ಠ ಸಂತರಾಗಿ, ಕವಿಯಾಗಿ ಕನಕದಾಸರು ಪ್ರಮುಖರಾಗುತ್ತಾರೆ.

ಸಾಂಸ್ಕೃತಿಕ ರಾಜಕಾರಣದ ಐಕನ್‌ಗಳಾಗಿ ಸೃಷ್ಟಿಸುವ ಪ್ರವೃತ್ತಿ

ಪ್ರಸ್ತುತ ದಿನಗಳಲ್ಲಿ ಜಾತಿ ರಾಜಕಾರಣವು ಪರಮುಖವಾಗಿ ಕಂಡುಬರುತ್ತದೆ. ಜಾತಿಯಲ್ಲಿ ಪ್ರಸಿದ್ಧನಾಗಿರುವ ಹಳೆಯ ತಲೆಮಾರಿನ ಸಾಧಕ ಶಿಖಾಮಣಿಯನ್ನು ಐಕಾನ್‌ಗಳಾಗಿ ಗುರುತಿಸುವ, ಸೃಷ್ಟಿಸುವ ಪ್ರವೃತ್ತಿಯು ಇತ್ತೀಚಿನ ಅಧ್ಯಯನಗಳಲ್ಲಿ ಕಂಡುಬರುತ್ತಿದೆ. ಹಿಗಾಗಿ ಕನಕದಾಸರನ್ನು ಕುರುಬ, ಕುರುಬರಾಗಿರುವ ಕಾರಣಕ್ಕಾಗಿ ಆ ಸಮುದಾಯದವರು ಅವರನ್ನು ಜಾತೀಯ ನೆಲೆಯಲ್ಲಿ ನೋಡಿರುವರು. ಕುಲಶ್ರೇಷ್ಠ, ಜಾತಿಶ್ರೇಷ್ಟ ವ್ಯಕ್ತಿಯೆಂದು ಪರಿಗಣಿಸಿ, ರಾಜಕೀಯವಾಗಿ ನೆಲೆ

ಕಂಡುಕೊಳ್ಳಲು, ಸಾಂಸ್ಕೃತಿಕವದ ನೆಲೆಯನ್ನು ಗುರುತಿಸಲು ಇಂತಹ ಪರಯತ್ನಗಳು ನಡೆದಿವೆ. ಕುರುಬ ಸಮುದಾಯದ ಶ್ರೇಷ್ಟ ಸಂತ ಎಂದು ಪರಿಗಣಿಸಿ ಸರ್ಕಾರಗಳ ಮೂಲಕ ಅವರ ಜಯಂತಿ ಆಚರಣೆ ಮಾಡುವ ನೆಪದಲ್ಲಿ ಅವರ ತತ್ವಗಳನ್ನು ಜನರಿಗೆ ತಲುಪಿಸುವ ಆಲೋಚನ ಪ್ರವೃತ್ತಿ ಇತ್ತೀಚೆಗೆ ಕಂಡುಬಂದಿದೆ. ಅಲ್ಲದೆ ಜನಪದರು ಕನಕದಾಸರನ್ನು, ಅವರ ಕೀರ್ತನೆಗಳನ್ನು ಸ್ತುತಿಸುತ್ತ ಆರಾಧಿಸುವ ಜನಪದರು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕನಕದಾಸರನ್ನು ಸ್ಮರಿಸುವುದು ಇತ್ತೀಚಿಗೆ ಕಂಡುಬಂದಿದೆ.

ವ್ಯಾಸರಾಯರ ಶಿಷ್ಯರು, ಪುರಂದರದಾಸರ ಸಮಕಾಲೀನರು ಒಡನಾಡಿಗಳು ಆದ ಕನಕದಾಸರು ತಮ್ಮ ಬಂಡಾಯ ಮನೋಧರ್ಮದಿಂದಾಗಿ ದಾಸ ಪರಂಪರೆಯಲ್ಲಿ ವಿಶಿಷ್ಟಛಾಪನ್ನು ನಿರ್ಮಿಸಿದವರು. ಬುದ್ಧ, ಬಸವಣ್ಣರ ಹಾಗೆ ಕನಕದಾಸರನ್ನು ಕನ್ನಡನಾಡು ಕಂಡ ಮಹತ್ವದ ಸಾಹಿತ್ಯ, ಸಾಂಸ್ಕೃತಿಕ ಪ್ರತಿಮೆಯಾಗಿದ್ದಾರೆ ಇವರ ಸೃಜನಶೀಲ ಅಭಿವ್ಯಕ್ತಿಯ ಹಿನ್ನಲೆಯಲ್ಲಿ, ಜಾತಿ, ಅಧರ್ಮ, ಮೌಢ್ಯ, ಅಂಧಕಾರ ವ್ಯವಸ್ಥೆಯ, ಜನವಿರೋಧಿ ಮೌಲ್ಯಗಳ ವಿರುದ್ಧದ ಪ್ರತಿಭಟನೆ, ಬಡವ, ದೀನ-ದಲಿತರ ಬಗೆಗಿನ ಅಂತಃಕರಣತೆ, ಮಾನವೀಯ ನೆಲೆಗಳ ದಾರ್ಶನಿಕ, ತಾತ್ವಿಕ ನಿಲುವುಗಳನ್ನು ಕಾಣಬಹುದು.

ಬದುಕಿನ ಸಂಘರ್ಷಗಳು ವ್ಯಕ್ತಿಯನ್ನು ಸೂಕ್ಷ್ಮಮನಸ್ಥಿತಿಯವನನ್ನಾಗಿ ರೂಪಿಸುತ್ತವೆ. ಈ ಅರ್ಥದಲ್ಲಿ ಕನಕದಾಸರ ಬದುಕು ಉತ್ತಮ ನಿದರ್ಶನವಾಗಿದೆ. ಸಾಮಾಜಿಕ ವ್ಯವಸ್ಥೆಯೊಟ್ಟಿಗೆ ತಮ್ಮನ್ನು ಮುಖಾಮುಖಿಯಾಗಿಸಿಕೊಂಡು ಕನಕದಾಸರು ಆ ಸಂದರ್ಭದಲ್ಲಿನ ಕಟುವಾಸ್ತವ ಅನುಭವಗಳನ್ನು ತಮ್ಮ ಕೀರ್ತನೆಗಳಲ್ಲಿ ಹಿಡಿದಿಟ್ಟಿದ್ದಾರೆ. ಆದ ಕಾರಣ ಬಹುತೇಕ ಇವರ ಚಿಂತನೆಗಳು ಕೂಡಾ ಸಾಮಾಜಿಕ ಸ್ತರದಲ್ಲಿ ಅಭಿವ್ಯಕ್ತಗೊಂಡಿವೆ. ಕನಕದಾಸರು ದೇಶೀಯ ಸೊಗಡನ್ನು ಸಮರ್ಥವಾಗಿ ಬಳಸಿಕೊಂಡಿರುವ ಇವರ ಒಂದೊಂದು ಹಾಡುಗಳು ಮೌಖಿಕ ಪರಂಪರೆಯಲ್ಲಿ ಉಳಿದು, ಬೆಳೆದುಕೊಂಡು ಬಂದಿರುವುದಲ್ಲದೇ ಕನಕದಾಸರು ಒಬ್ಬ ಶ್ರೇಷ್ಠ 'ಜನಪದಕವಿ'ಯನ್ನಾಗಿಸಿವೆ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಯ ಹಾಗೂ ಪೌರಾಣಿಕ ಸಂಗತಿಗಳು ಇವರ ಸೃಜನಶೀಲ ಪ್ರತಿಭೆಯಲ್ಲಿ ಪರಿಪಕ್ವಗೊಂಡಿರುವುದನ್ನು ಕಾಣಬಹುದು.

ತಳಸಮುದಾಯದಿಂದ ಬಂದ ಯಾವೊಬ್ಬ ಸೃಜನಶೀಲ ವ್ಯಕ್ತಿಯ ಮನೋಧರ್ಮದಲ್ಲಿ ಸುತ್ತಲ ಸಮಾಜ, ಬದುಕು ಹಾಗೂ ಸಾಂಸ್ಕೃತಿಕ ರೂಪಕಗಳನ್ನು ಗ್ರಹಿಸುವ ಭಿನ್ನ ಧೋರಣೆಯನ್ನು ಕಾಣುತ್ತೇವೆ. ಆತ ಯಾವುದೇ ಸಮಾಜಮುಖಿ ಸಂಗತಿಗಳನ್ನು ಕೇವಲ ಭಾವನಾತ್ಮಕ ನೆಲೆಯಲ್ಲಿ ಮಾತ್ರನೋಡದೆ ವಾಸ್ತವದ ಬದುಕಿನೊಟ್ಟಿಗೆ ತಾಳೆ ಹಾಕುತ್ತಾ ವಿಮರ್ಶಾತ್ಮಕ ದೃಷ್ಟಿಕೋನದಲ್ಲಿ ನೋಡತೊಡಗುತ್ತಾರೆ. ಇದು ಚರಿತ್ರೆಯ ಪುನರ್ ವಿಮರ್ಶೆಗೊಳಪಡಿಸುವ, ಪ್ರಶ್ನಿಸುವ, ಪರ್ಯಾಯವಾಗಿ ಆಲೋಚಿಸುವ, ಸಾಂಸ್ಕೃತಿಕ ಪರಿಸರವನ್ನು ಕಟ್ಟುವುದಾಗಿದೆ. ಸಂಸ್ಕೃತಿಯನ್ನು ಅತ್ಯಂತ ಸ್ಥೂಲವಾಗಿ ಸರಳಿಕರಿಸಿ ಹೇಳುವುದಾದರೆ ಜೀವನಕ್ರಮ ಬದುಕಿನ ವಿಧಾನ, ಕಾರ್ಯವೆ

ಆಗಿದೆ. ಬದುಕನ್ನು ಜೀವನ ವಿಧಾನ ಕ್ರಮವನ್ನು ಬೇರೆ ಬೇರೆ ಆಯಾಮಗಳಿಂದ ಗುರುತಿಸುತ್ತೇವೆ, ಅಂತಹ ಆಯಾಮಗಳಲ್ಲಿ ಮೌಖಿಕ ಅಭಿವ್ಯಕ್ತಿ ಬಹಳ ಮುಖ್ಯವಾಗಿದೆ. ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಮೌಖಿಕವಾದ ಬಹುಮುಖ್ಯಧಾರೆಗಳಲ್ಲೊಂದು.

ಜನಪದೀಯ ಸಂಕಥನಗಳಲ್ಲಿ ಕನಕದಾಸರು

ಜಾತಿರಾಜಕಾರಣ, ಮತರಾಜಕಾರಣ, ಧರ್ಮರಾಜಕಾರಣಗಳು ತಮ್ಮ ಜಾತೀಯ ಅನನ್ಯತೆ ಹಾಗೂ ರಾಜಕೀಯ, ಆರ್ಥಿಕ ಪಾಲುದಾರಿಕೆಗಾಗಿ ಕನಕನನ್ನು ನಿರ್ವಚಿಸಿಕೊಳ್ಳುತ್ತಿರುವ ಇಂದಿನ ರೀತಿಗಿಂತ ಹೊರತಾಗಿ ಕಲಾಸಮುದಾಯಗಳು ಕನಕನನ್ನು ತಮ್ಮೊಳಗೆ ಮಾಡಿಕೊಂಡಿವೆ. ವರ್ತಮಾನದ ತಲ್ಲಣ ತುರ್ತುಗಳಿಗೆ ಪರ್ಯಾಯವಾಗಿ ಕನಕನನ್ನೂ ನೋಡುವ ದೃಷ್ಟಿಗಿಂತ ಕಲಾಸಮುದಾಯಗಳು ಭಿನ್ನವಾಗಿ ಕನಕನನ್ನು ಪರಿಭಾವಿಸಿಕೊಂಡಿವೆ. ಕರ್ನಾಟಕ ಜನ ಮಾನಸದಲ್ಲಿ ಕೀರ್ತನೆ ಹಾಗೂ ಮುಂಡಿಗೆಗಳ ಮೂಲಕ ಪ್ರಸಿದ್ಧರಾಗಿದ್ದಾರೆ. ಅಷ್ಟೆ ಸಂಕೀರ್ಣನೂ ಆಗಿ ಕನಕ ಕಾಣಿಸಿದ್ದಾನೆ. ಬಹುಮುಖ್ಯವಾಗಿ ಕನಕನ ಅಭೇದ ಕಲ್ಪನೆ ಮತ್ತು ಅನುಭಾವದ ರೀತಿಗಳು ಸೀಮಿತ ಕಲೆಗಳಲ್ಲಿ ಕನಕನನ್ನೂ ಪರಿಮೂಡುವಂತೆ ಮಾಡಿವೆಯಾದರೂ ಜನಪದದ ಎಲ್ಲಾ ಕಲಾ ಪ್ರಕಾರಗಳಲ್ಲಿ ಕನಕ ತೋರದಿರುವುದು ಸೋಜಿಗ, ಬಹುಶಃ ಲೋಕಸಾಹಿತ್ಯದಲ್ಲಿ ಕನಕ ಹೆಚ್ಚು ಕಾಣದಿರುವ ಸಮಸ್ಯೆ ಎಂದರೆ ಕನಕನ ಶೈವ ವಿರೋದಿ ಹಾಗೂ ವೈಷ್ಣವ ನಿಲುವು ಮತ್ತು ಜನಪದ ದೈವ-ಧರ್ಮ ವಿಡಂಬನೆ, ಭಜನೆ, ಡೊಳ್ಳುಮೇಳ, ಉಳಿದ ಕಲಾ ಪ್ರಕಾರಗಳಲ್ಲಿಯೂ ಆತನ ಹಾಡುಗಳಲ್ಲಿ ಕಾಣಬಹುದು. ಕಾರಣ ಹೆಚ್ಚಿನ ಜನಪದ ಕಲಾ ಪ್ರಕಾರಗಳು ಶ್ರಮಿಕ ವರ್ಗದಿಂದ ಕೂಡಿವೆ. ವೈಷ್ಣವ ಸಂಸ್ಕೃತಿಯ ಶ್ರಮವಿರೋಧಿ ಹಾಗೂ ಬ್ರಾಹ್ಮಣೀಕರಣದ ಗುಣಲಕ್ಷಣಗಳು ಇದಕ್ಕೆ ಕಾರಣವಿರಬಹುದು. ಯಾಕೆಂದರೆ ಜನಪದ ಕಲೆಗಳು ಇಂತಹ ನಿಲುವಿಗೆ ಹೊರತಾದಂತವು.

ಒಟ್ಟು ಕನ್ನಡದ ಸಂಸ್ಕೃತಿಯಲ್ಲಿ ಕನಕ ಜಾತಿ ಮತದಂತಹ ಧಾರ್ಮಿಕ ನೆಲೆಗಳಲ್ಲೂ ಅಕ್ಷರ ಪ್ರಧಾನ ಪಠ್ಯ ಹಾಗೂ ವಿಮರ್ಶಾ ವಲಯಗಳಲ್ಲೂ ಮೌಖಿಕ ಪ್ರಧಾನ ಕಥೀತ ನೆಲೆಗಳಲ್ಲೂ ರೂಪಗೊಂಡಿರುವುದು ಗಮನಾರ್ಹ. ಇದರಲ್ಲಿ ಹೆಚ್ಚಿನ ಸಂದರ್ಭಗಳು ಕನಕನ ಕುರಿತು ಏಕಾಕೃತಿಯ ಕೃತಕ ಹಾಗೂ ರಮ್ಯ ಕಲ್ಪನೆಗಳನ್ನೂ ಹೆಣೆಯುತ್ತಾ ಬಂದಿವೆ. ಇಂಥ ಏಕೀಕೃತ ಸುಂದರ ರೂಪಗಳ ಅಂತರಂಗದೊಳಗೆ ಅನೇಕ ರೀತಿಯ ಹಿಂಸೆ ಹಾಗೂ ಅಪಮಾನದ ಇಲ್ಲವೇ ವೈಭವೀಕರಣದ ಸಂಗತಿಗಳು ಮನೆಮಾಡಿಕೊಂಡಿರುತ್ತವೆ, ಒಂದು ಭಾಷೆ ಮತ್ತು ಸಂಸ್ಕೃತಿಯ ಒಡಲೊಳಗೆ ಸಂಭವಿಸುವ, ತಾಕಲಾಟ-ಹೊಂದಾಣಿಕೆಯಂಥ ಕೊಡುಕೊಳ್ಳುವಿಕೆಯನ್ನು ಪರಸ್ಪರ ಎದುರು-ಬದುರಾಗಿಸಿ ನೋಡದೆ ಅವುಕೊಟ್ಟ ಪಡೆದುಕೊಂಡಿರುವ. ಪಡೆದದ್ದು ಕಳೆದುಕೊಂಡಿರುವ ಸಂಗತಿಗಳನ್ನು ಬಹು ಆಕಾರದಲ್ಲಿ ನೋಡುವುದು ಅರ್ಥಪೂರ್ಣವೇನಿಸುತ್ತದೆ. ದೇಶೀ ಮಾರ್ಗ, ಶೋಷಿತ-ಶೋಷಕ, ಪ್ರಧಾನ-ಅಧೀನ ಪ್ರತಿಸಂಸ್ಕೃತಿ ಇಂಥ ದ್ವಂದ್ವತ್ಮಕ ನೆಲೆಗಳು ಮಿಮಾಂಸಕರು

ಸೃಷ್ಟಿಸಿದ ಪರಿಭಾಷೆಗಳು ಪ್ರತಿಯೊಂದನ್ನು ಪರ-ವಿರೋಧದ ನೆಲೆಯಲ್ಲಿ ನೋಡುವ ಇವು ಸಂಸ್ಕೃತಿ ಅಧ್ಯಯನದಲ್ಲಿ ಅಂಥ ಸೂಕ್ತ ಪರಿಕರಗಳಾಗಲಾರವು. ಮಾರ್ಗ -ದೇಶಿ ಎನ್ನುವ ಸಂಗತಿಗಳು ಪರಸ್ಪರ ಪೂರಕವಾದಂಥವೇ ಹೊರತು ವಿರೋಧಿ ನೆಲೆಯಲ್ಲಿ ಅವೆರಡೂ ತಿಲದೊಳಗಿನ ತೈಲದಂತೆ ಉಪ್ಪಿನಲ್ಲಿಯ ರುಚಿಯ ಸ್ವರೂಪದವು ಸಾಹಿತ್ಯ ಸಂಸ್ಕೃತಿಯೊಂದು ರೂಪಗೊಳ್ಳುವ ಬಗೆಯೇ ಹೀಗೆ.

ಕನಕರನ್ನು ಕೆಳವರ್ಗದ ಬಂಡಾಯಗಾರನನ್ನಾಗಿ ನೋಡುವುದು ದಾಸಕೂಟದಲ್ಲಿದ್ದು ಅನುಭವಿಸಿದ ಸಂಗತಿಗಳನ್ನು ಮುಂದೆ ಮಾಡಿ ಸಮಕಾಲೀನವಲ್ಲದ ಲಿಖಿತ ದಾಖಲೆಗಳ ಮೂಲಕ ಕನಕನ ಕುರಿತು ಕೆಲವು ನಿರ್ಣಯಗಳಿಗೆ ಬಂದಿರುವುದು ಒಂದೆಡೆಯಾದರೆ, ಬರಹದ ಆಚೆಯಿರುವ ಬದುಕಿನ ಫಲಿತಗಳು ಕನಕನನ್ನು ಹಾಡುಗಳ ಮೂಲಕ ತಾತ್ವಿಕವಾಗಿ ಗ್ರಹಿಸುವುದು. ಅದೇ ಸಮಯಕ್ಕೆ ಸಮೂಹ ಸ್ಮೃತಿಗಳನ್ನು ಪುನರ್ ಅಭಿವ್ಯಕ್ತಿಗೊಳಿಸಿಕೊಳ್ಳಲು ಪ್ರೇರಣೆ ನೀಡುತ್ತವೆಂಬುದು ವಿಶೇಷ. ರೂಪಿತ ಲಿಖಿತ ಚರಿತ್ರೆಯ ದೊಡ್ಡಸಮಸ್ಯೆ ಎಂದರೆ-ಭೂತ_ವರ್ತಮಾನಗಳ ಪ್ರತ್ಯೇಕೀಕರಣ ಹಾಗೂ ಪ್ರತಿಯೊಂದನ್ನು ಎದುರುಬದುರಾಗಿಸಿ ನೋಡುವುದು, ಇಂಥ ಸಂಗತಿಗಳನ್ನೂ ಕನಕನನ್ನು ಕುರಿತು ಬರೆಯುತ್ತಿರುವವರು ಬಂಡಾಯಕ್ಕೆ ಅನ್ವಯಿಸಿಕೊಂಡರೆ, ಬದುಕುತ್ತಿರುವವರು ಆತನನ್ನು ಮಹಾತ್ಮನೆಂದು, ಭಕ್ತಿಯಿಂದ ಪೂಜಿಸುತ್ತಾರೆ. ಹೀಗಾಗಿ ಒಂದು ಭಾಷೆ ಹಾಗೂ ಸಂಸ್ಕೃತಿಯೊಳಗೆ ಸಂಭವಿಸಿರುವ ಸಂಘರ್ಷ ಮತ್ತು ಸಮನ್ವಯಗಳನ್ನು ಬರಿ ಪರ-ವಿರೋಧಿ ನೆಲೆಯಲ್ಲಿ ನೋಡದೆ ಅದರ ಬಹುಧಾರೆಗಳ ಸ್ಥಿತಿಯಲ್ಲಿ ನೋಡಬೇಕಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ವಿರೇಶ ಬಡಿಗೇರ ಅಭಿಪ್ರಾಯವಾಗಿದೆ. ಅವರು ಮುಂದುವರೆದು ಕಲಾಪರಂಪರೆಗಳ ಕುರಿತು ಈ ರೀತಿ ಹೇಳುತ್ತಾರೆ.

ಕಲಾಪರಂಪರೆಗಳು: ಕನಕ

"ಕಲಾ ಪರಂಪರೆಗಳು ಕನಕನನ್ನೂ ಗ್ರಹಿಸಿದ ರೀತಿ ಕುತೂಹಲಕರವಾದಂತ ಕನಕನ ದಿವ್ಯ ಚರಿತ್ರೆ ಹಾಗೂ ಇತಿಹಾಸಕ್ಕಿಂತ ಇವರಿಗೆ ಆತನೊಬ್ಬ ಹಾಡುಗಾರ, ಏಕದಾರಿ ಹಾಡುಗಾರ(ಮುಂಡಿಗೆ ಪದಕಾರ)ನಾಗಿ ತುಂಬಾ ಹಿತವಾಗುತ್ತಾನೆ, ಕನಕನೆಂದರೆ ಪುರಂದರದಾಸರೊಂದಿಗಿದ್ದಾನೆ. ಪುರಂದರದಾಸರು ವ್ಯಕ್ತಿಯಾಗಿ ಪರಿಚಯ ಇರುವುದಕ್ಕಿಂತ ಹಾಡುಗಾರರಾಗಿ ಹೆಚ್ಚು ಪರಿಚಿತರು. ಇವರು ಮಾಡಿದ ಪ್ರಭಾವ ಕನಕರು ಮಾಡಿಲ್ಲ, ಜಾತಿ ಹಾಗೂ ಸಾಹಿತ್ಯ ಸಂಕಥನಗಳು ನಿರ್ಮಿಸಿದ ನೆಲೆಗಿಂತ ಭಿನ್ನವಾದ ಅನುಸಂಧಾನ ಇಲ್ಲಿ ಕಾಣುತ್ತದೆ. ಲಿಖಿತ ಚರಿತ್ರೆ ಹಾಗೂ ಮನಸುಗಳಿಗೆದುರಾಗಿ ಕಲಾವಿದರು ಅನೇಕ ಯಾಗಗಳ ಅನೇಕ ಸಂಗತಿಗಳನ್ನು, ತನ್ನ ಸಧೃಡ ವಾಸ್ತವವೆಂದು ಅವುಗಳೊಂದಿಗೆ ಬೆಸೆದುಕೊಳ್ಳುತ್ತಾನೆ. ಚರಿತ್ರೆಯಲ್ಲಿ ಕಾಲವು ಘಟನೆಗಳ ಮೊತ್ತವಾದರೆ, ಕಲೆಯಲ್ಲಿ ಅದು ಪ್ರತಿಯೊಂದು ಸಂಗತಿಗಳಲ್ಲಿ ಪರಿಪೂರ್ಣತೆಯ ಸುಡಿತವಾಗಿ ತೋರುತ್ತದೆ. ಕನಕ ಕೀರ್ತನೆಗಳನ್ನು ಯಾಕಾಗಿ ರಚಿಸಿದ? ಎನ್ನುವ ಸಂಗತಿಗಿಂತ ತನ್ನ ಹೊತ್ತಿಗೆ ತನ್ನ ಅನುಭವಕ್ಕೆ

ನಿಲುಕುವ ಕ್ರಮದಲ್ಲಿ ಕನಕನನ್ನು ಅನುಸಂದಾನಗೊಳಿಸಿಕೊಳ್ಳುವ ಕ್ರಮ ಕಲಾವಿದರಿಗೆ ಮುಖ್ಯವಾಗುತ್ತದೆ. ಇಂಥಲ್ಲಿ ಕನಕಭಾಷಿಕ ದಾಖಲೆಗಳಿಗಿಂತ ಭಿನ್ನವಾದ ನಾದ-ಲಯ ಹಾಡು-ಭಾವ-ಭಕ್ತಿ, ಹಾಗೂ ಆಂಗಿಕಾಭಿನಯದ ಸಂಕೀರ್ಣ ರೂಪವಾಗಿ ಪ್ರಧಾನವಾಗುತ್ತಾನೆ. ಹಾಡುಗಾರಿಕೆಯ ತೀವ್ರ ಸ್ಥಿತಿಯಲ್ಲಿ ಕೀರ್ತನೆ ಪಡೆದುಕೊಳ್ಳುವ ಗೀತರೂಪ ಹಾಗೂ ಕುಣಿತಗಳಿಂದಾಗಿ ಒಂದು ಸಾಮಾಜಿಕ ಅಭಿವ್ಯಕ್ತಿಯಾಗಿ ಅದು ಮೈ ಪಡೆಯುತ್ತದೆ. ವಿಶೇಷವಾಗಿ ಕನಕರಂಥವರು ಭಜನೆಗಳಲ್ಲಿ ನಿರೂಪಣೆಗೊಳ್ಳುವ ಕ್ರಮವೆ ವ್ಯಕ್ತಿತ್ವ ಹಾಗೂ ಕರ್ತೃತ್ವ ನಿರಸನ ಸ್ವರೂಪದ್ದು. "ನನ್ನ ಪಾಡು ನನಗಿರಲಿ ಅದರ ಹಾಡನ್ನಷ್ಟೆ ನೀಡುವನೊ ರಸಿಕ ನಿನಗೆ" ಎಂದು ಬೇಂದ್ರೆ ಹೇಳುವಂತೆ ಕವಿಯ ಅಥವಾ ಕನಕರಂಥವರ ತೀವ್ರ ಪರಿಚಯವರಿಯದೆ ಅಂಥವರ ಹಾಡುಗಳನ್ನು ಅನನ್ಯವಾಗಿ ಹಾಡುವ ರೀತಿ ಭಜನೆಗಳಲ್ಲಿ ಕಾಣುತ್ತೇವೆ. ಸಂಗೀತವು ಅನುಭಾವದ ಸಾಧನೆಯಲ್ಲಿ ಬಹಳ ಮುಖ್ಯವಾಗಿತ್ತು ವ್ಯಕ್ತಿ ಮೂಲ, ತತ್ವಕ್ಕಿಂತ ಸಮಷ್ಠಿ ಮೂಲ ತತ್ವಗಳ ಮೂಲಕ ರೂಪಗೊಳ್ಳುವ ವ್ಯಕ್ತಿತ್ವ ಭಿನ್ನವಾಗಿರುವಂಥದ್ದು ಭಜನೆಯ ಮೂಲ ಗುಣವೇ ವ್ಯಕ್ತಿನಿರಸನದಿಂದ ಸಮಷ್ಠಿ ದರ್ಶನದತ್ತ ಸಾಗುವುದು ಭಜನಾ ತಂಡಗಳು ಸೇರುವ ಜಾಗ, ಗುಡಿ, ಗುಂಡಾರ ಮತ್ತು ಮಠಗಳು ಸಮಾನ ಮನಸ್ಕರು ಒಂದೆಡೆ ಸೇರಿ, ಬದುಕಿನ ನೇಯ್ಗೆಗಳನ್ನು ಮತ್ತು ಸಂರಚನೆಗಳನ್ನೂ ಕುರಿತು ಹಾಡಿನ ಮೂಲಕ ಜಿಜ್ಞಾಸೆಗೊಳಿಸುವ ಅವರಧಾರೆ ಸನಾತನವಾಗಿರದೆ, ಶರಣಾಗತಿಯದ್ದು. ಶರಣಾರ್ತಿ, ಅಮಿತಾನಂದ ಇವೆಲ್ಲ ಭಜನೆಗಳಲ್ಲಿ ಕಾಣುವ ಭಾವ ತೀವ್ರತೆಗಳು ಬದುಕಿನ ಸಮೃದ್ಧತೆಗಳು ಉನ್ನತ ಕಾಗಿನೆಲೆಯಾದಿಕೇಶವನ ಧ್ಯಾನವನ್ನು ಮನಮುಟ್ಟಿ ಹಾಡುವುದು ಮುಕ್ತಿಗಾಗಿ ಆನಂದಕ್ಕಾಗಿ "ಬದುಕಿನ ಸಮೃದ್ಧತೆಯ ಭಾಗವಾಗಿ ಹಾಡು, ಹೊರತು ವ್ಯವಹಾರದ ಭಾಗವಾಗಿ ಅಲ್ಲ ಪ್ರತಿಫಲಾಪೇಕ್ಷಗಿಂತ ಮನಸಂತೋಷ, ನೆರೆಯುವಿಕೆ, ಅಹಂಕಾರ, ನಿರಶನ ಆತ್ಮಾವಲೋಕನ ಇಲ್ಲಿ ಪ್ರಧಾನ. ಜಾನಪದದ ಕಲಾ ಸಂಪ್ರದಾಯದಲ್ಲಿ ಕಲೆ ಎನ್ನುವುದು ಕಲಾವಿದರಿಗೆ ಭೋಗದ ವಸ್ತುವಲ್ಲಾ ಅದು ಒಂದು ಅಗತ್ಯದ ಸಂದರ್ಭದ, ಸೌಂದರ್ಯ ಹಾಗೂ ಪವಿತ್ರತೆ ಎರಡು ಪರಸ್ಪರಾವಲಂಬಿ, ಜಾನಪದದಲ್ಲಿ ಸುಂದರವಾದದ್ದು ಭಗವಂತನಿಗೆ ಅರ್ಪಿತ ತತ್ವವನ್ನೇ ಸಂಗೀತವನ್ನಾಗಿ ಹಾಡಿದ ಜಗತ್ತಿನ ಏಕೈಕ ದೇಶ ನಮ್ಮದು ಎಂದು ಲೋಹಿಯಾ ಹೇಳುತ್ತಾರೆ. ತತ್ವ ಹಾಗೂ ಕಾವ್ಯದ ಮಧ್ಯೆ ಪಾಶ್ಚಾತ್ಯರಂತೆ ಜಗಳವಿಲ್ಲ ಹಾಡುವಿಕೆಯನ್ನು ಬ್ರಹ್ಮಾನಂದವಾಗಿ ಸಾರಭೂತವಾದ ಸಮಸ್ತ ಸೌಂದರ್ಯವಾಗಿ ಭಾವಿಸಿದವರು. ಜಾನಪದ ಕಲಾವಿದರು ಸಂಗೀತದ ಸಾಹಚರ್ಯ, ಭಜನೆಗಳಂಥ ಜಾನಪದ ಕಲೆಗಳನ್ನು ಹೆಚ್ಚು ವಿವೃತಗೊಳಿಸಿವೆ.

ಭಜನೆಗಳ ಪಠ್ಯ

ಸ್ಥಿರ ಸಾಹಿತ್ಯಿಕ ಹಾಗೂ ಸಾಮಾಜಿಕ ಪಠ್ಯವೊಂದನ್ನು ಆಸ್ಪೋಟಿಸುವ ಹಾಗೂ ಅದನ್ನು ಕ್ರಿಯಾಶೀಲಗೊಳಿಸುವ ಬಗೆಯನ್ನು ಭಜನೆಗಳಲ್ಲಿ ಕಾಣುತ್ತೇವೆ. ಭಜನೆಗಳು ಪೂರ್ವಧ್ಯಾನಿತ ಭಾಷಾಪಠ್ಯಗಳಲ್ಲಿ ಅವು 'ಧ್ಯಾನಪೂರ್ಣ' ಮತ್ತು 'ಪ್ರಯೋಗ ಪೂರ್ಣ' ಭಾಷಾ ಪಠ್ಯಗಳು ಹಾಡುಗಾರಿಕೆಯ ಜೊತೆಯಲ್ಲೆ ಪಠ್ಯ ಮೈಪಡೆದುಕೊಳ್ಳುವಂಥದ್ದು ಇದು ಎಲ್ಲಾ ಕಲಾಪ್ರಕಾರಗಳ ಸಹಜಗುಣ. ಕಲಾವಿದರಿಗೆ ಭಜನೆಯು ಪ್ರಜ್ಞಾಪೂರ್ವಕ ಹಾಗೂ ವ್ಯವಹಾರಿಕ ಕಲೆಯಲ್ಲಿ ಇವರಾರಿಗೂ ಹಾಡುತ್ತಿರುವ ರಚನೆಗಳು ಸಾಹಿತ್ಯದ ಫಲಿತಗಳೆಂಬ ಭ್ರಮೆ ಯಿರುವುದಿಲ್ಲ.

ಉದಾ: ಲಿಖಿತ ಪಠ್ಯ

ದಾಸನಾಗಬೇಕು। ಸದಾಶಿವನ ದಾಸನಾಗಬೇಕು ॥ಪ॥
ದಾಸನಾಗಬೇಕು ಕ್ಲೇಶಪಂಚಕವಳಿದು
ಆಸೆಯಲ್ಲಿ ಮನಸೂಸದೆ ಸರ್ವದಾ ॥ಅ॥

ಮನ ಕಲ್ಮಷ ಕಳೆದು –ಮಹಾದೇ
ವನ ಮಹಾ ಮಹಿಮೆಯ ತಿಳಿದು
ಇನಿತು ಈ ಜಗವೆಲ್ಲ ಈಶ್ವರಮಯವೆಂದು
ಘನವಾದ ಮೋಹದ ಗಡಿಯನು ದಾಟುವ
ತನವು ಅಸ್ಥಿರ ವೆನುತ ತಿಳಿದು
ಶಂಕರನ ಹೃದಯವ ಕಾಣುತ
ಘನವಾದ ಇಂದ್ರಜಾಲವ ಮಾಯೇಯೆನುತ
ಬಿನುಗು ಸಂಸಾರದ ಮಮತೆಯ ಬಿಡುತ[೩]

ಭಜನೆ ಪಠ್ಯ

ದಾಸನಾಗಬೇಕು ।ಸದಾಶಿವನ ದಾಸನಾಗಬೇಕು
ಅಂತರಾ:ದಾಸನಾಗಬೇಕು ಕ್ಲೇಶಪಂಚಕ ಕಳಿದು
ಆಸೆಯಿಂದಲಿ ಮನಸೂಸ್ಯಾಡಿ ಸರ್ವತಾ
(ಹಿನ್ನಲೆಗಾಯಕರು)ದಾಸನಾಗಬೇಕು ಸದಾ ಶಿವನ॥
ಮನದ ಕಲ್ಮಷ ಕಳೆವ ಮಹೀಶನ
ಘನಮಹಿಮೆಗಳ ತಿಳಿದು
ಘನವಾದ ಮೋಹದ ಇಂದ್ರಿಯಗಳನು
ಬಿನುಗು ಸಂಸಾರ ಮಮತೆಯನು ಬಿಡುತ
ತನುವು ಅಸ್ಥಿರವೆಂದು ತಿಳಿದು

ಶಂಕರನ ಹೃದಯ ಕಾಣುತ
ಇನಿತು ಈ ಜಗವೆಲ್ಲ ಈಶ್ವರಮಯವೆಂದು
ಘನವಾದ ಮೋಹದ ಗಡಿಯನುದಾಡುತ[೪]

ಹಾಡಿದವರು: ಸೋಮಪ್ಪ. ಬ. ಹಮಗಿ. ಕೈನಕಟ್ಟಿ. ಬದಾಮಿ(ತಾ)

ಮೇಲೆ ಉದ್ಧರಿಸಿದ ಲಿಖಿತ ಹಾಗೂ ಹಾಡಿಕೆ ಪಠ್ಯಗಳಲ್ಲಿ ದಪ್ಪ ಅಕ್ಷರ, ಕಾಣಿಸಿದ ಸಂಗತಿಗಳು ಆಯಾ ಸಂದರ್ಭದಲ್ಲಿ ಆಗಿರುವ ಪಠ್ಯದೊಳಗಿನ ಬದಲಾವಣೆ ಹಾಗೂ ಸೇರ್ಪಡೆಯನ್ನೂ ತೋರಿಸುತ್ತವೆ ಭಜನೆ ಪಠ್ಯ ಬಹಳ ಚರಸ್ವರೂಪದ್ದು ಕಲಾವಿದರು ಪರಿಕರಗಳು, ಸಂದರ್ಭಗಳು ರಾಗ-ತಾಳಗಳು ಬದಲಾದಂತೆ ಪಠ್ಯದಲ್ಲೂ ಬದಲಾವಣೆ ಯಾಗುತ್ತದೆ ಎನ್ನೂವುದು ಗಮನಾರ್ಹ ಸಂಗತಿ.

ಕನಕದಾಸರನ್ನು ಲಿಖಿತ ಸಾಹಿತ್ಯದಲ್ಲಿ ಸಾಂಸ್ಕೃತಿಕವಾಗಿ ನೋಡಿದ ಪರಿಗಿಂತ ಮೌಖಿಕ ಸಾಹಿತ್ಯದ ಪರಂಪರೆಯಲ್ಲಿ ಕನಕದಾಸರನ್ನು ಭಿನ್ನ, ವಿಭಿನ್ನ ನೆಲೆಗಟ್ಟಿನ, ದೃಷ್ಟಿಕೋನಗಳ ಮೇಲೆ ಸಾಂಸ್ಕೃತಿಕ ಅನುಸಂಧಾನವಾದದ್ದನ್ನು ಕಾಣಬಹುದು. ಜನಸಾಮಾನ್ಯರು ಗೊತ್ತಿದ್ದೂ ಗೊತ್ತಿರದೇ ಕನಕದಾಸರನ್ನು ಸಾಂಸ್ಕೃತಿಕವಾಗಿ ಸ್ಮರಿಸಿ ಕೊಳ್ಳುತ್ತಾರೆ.

"ಆಲಯವು ಬಯಲೊಳಗೂ
ಬಯಲು ಆಲಯದೊಲಳಗೊ
ಎನ್ನುತ್ತಾ ತಲೆಕೆಡಿಸಿಕೊಂಡು
ನಾನುನಿನ್ನೊಳಗೊ ನೀನು
ಎನ್ನೋಳಗೊ ಸ್ವಾಮಿ
ಬಾಲೆಹಣ್ಣು ತಿಂದು ಬಾ ಎಂದಾಗ
ಎಲ್ಲೇಲ್ಲೂ ಭಗವಂತನನ್ನ ಕಂಡ
ಮಹಾನುಭಾವ ಹಣ್ಣನ್ನು
ಗುರು ವ್ಯಾಸರ ಮುಂದಿಟ್ಟು ಕೈಮುಗಿದ
ಕನಕ ಜ್ಞಾನಿ"[೫]

ಎಂಬುದು ಕಾ.ತ. ಚಿಕ್ಕಣ್ಣನವರ ಅಭಿಪ್ರಾಯವಾಗಿದೆ.

ಇಂತಹ ಕನಕದಾಸರನ್ನು ಹಲವಾರು, ರೀತಿಯ. ಜನಪದರು ಕಣ್ಣಲ್ಲಿ ನೋಡಿರುವರು, ಭಜನೆ, ಹಂತಿಯ ಪದ, ಡೊಳ್ಳಿನ ಪದ, ಸಂಪ್ರದಾಯದ ಹಾಡುಗಳಲ್ಲಿ ಗಜಲ್‌ಗಳಲ್ಲಿಯೂ ಮೌಖಿಕವಾಗಿ ಕನಕದಾಸರನ್ನ ಸ್ಮರಿಸುತ್ತಾರೆ, ಜಾತ್ರೆ ಉತ್ಸವಗಳಲ್ಲಿ ಕನಕರ ಕುರಿತು ಹಾಡುಗಳನ್ನು ಹಾಡುತ್ತಾರೆ.

ಎಸ್. ಎಫ್. ಜಕಬಾಳರು ಗ್ರಾಮೀಣ ಸಂವೇದನೆಯ ಜನಪದ ವಿದ್ವಾಂಸರಾಗಿದ್ದಾರೆ. ಅವರು ಕನಕದಾಸರ ಕುರಿತು ಹಂತಿಯ ಪದವನ್ನು ಬರೆದು ಹಾಡಿರುವರು ಅವರುಹಾಡಿದ ಹಂತಿಯ ಪದ ಹೀಗಿದೆ;

"ಹಂತಿ ಹೊಡೆಯುತ ನಾವ್ಯಾರ ನೆನಬೇಕು
ಕನಕದಾಸರನ ಆದಿಕೇಶವನ । ನೆನೆದರ
ಕನಕದ ರಾಶಿ ಹಸನ್ಯಾಗೋ"

ಹಂತಿ ಸಾಂಪ್ರಾದಾಯಿಕವಾಗಿ ಬಂದಿರುವುದು ಹಿಂದಿನ ಕಾಲದಲ್ಲಿ 'ರಾಶಿ' ಮಾಡಲು 'ಕಣ'ವನ್ನು ಮಾಡಿ ಕಣದ ನಡುವೆ ಮೇಟಿ ನೆಟ್ಟು ಎತ್ತಗಳಿಂದ ಕಣದಲ್ಲಿರುವ ತೆನೆಯನ್ನು ತುಳಿಸುತ್ತಾ ಹಂತಿಯ ಪದಗಳನ್ನು ಹಾಡುವ ಸಂಪ್ರದಾಯವಿತ್ತು. ಆ ರೀತಿ ಹಂತಿಯನ್ನು ಹೊಡೆಯುವಾಗ ಯಾರ್ಯಾರ್ನ ನೆನೆಯಬೇಕು ಎಂದು ಹೇಳುವಾಗ ಕನಕದಾಸರನ, ಆದಿಕೇಶವನ ನೆನೆದರ ರಾಶಿ ಹಸನಾಗುವುದು ಜೀವನವು ಹಸನಾಗುವುದು ಎಂದು ಹೇಳಿ

'ಮೇಟಿಯ ಸರಿಸ್ಯಾನ ಕ್ವಾಟಿಯ ಬಿಟ್ಟಾನ
ಕಾಗಿನೆಲೆಹಾದಿ ಹಿಡಿದಾನ।ಕನಕಪ್ಪ
ಲೋಕದ ಮಾನ ಬೇಳಿಗ್ಯಾನ
ಪಾದುಕ ಮೆಟ್ಯಾನ ಕಂಬಳಿ ಹೊತ್ತಾನ
ಮಾಲೆಗೆ ಮಾತು ಬೆಳಿಸ್ಯಾನೋ।ಕನಕಯ್ಯ
ಸುರ್ಯಾನ ಬೆಳಕ ತೋರ್‍ಯಾನೊ.
ಕನಕದಾಸರನ್ನು ಹಂತಿಯ ಪದಹಾಡುತ್ತಾ ಜಗತ್ತಿಗೆ
ಬೆಳಕನ್ನೂ ನೀಡಿದ್ದಾನೆ ಎಂದು ಹೇಳಿರುವರು'[೬]

ಹೀಗೆ ಕನಕದಾಸರನ್ನು ಸಾಂಸ್ಕೃತಿಕ ನಾಯಕನಾಗಿ, ಜನಮನದಲ್ಲಿ ಸದಾ ಸ್ಮರಣೆಗೆ ಒಳಗಾಗುತ್ತಿದ್ದಾನೆ. ಕನಕದಾಸರು ಅವರ ವ್ಯಕ್ತಿತ್ವ ಹೇಳಿರುವ, ನುಡಿದಿರುವ ಮಾತು ಜನರ ಜಿವ್ಹೆಯ ಮೇಲೆ ನಲಿದಾಡುತ್ತಾ, ಜನರ ಜೀವನವನ್ನು ಸಮೃದ್ಧಗೊಳಿಸುತ್ತವೆ. ಆ ರೀತಿಯಲ್ಲಿ ಎಸ್.ಎಫ್. ಜಕಬಾಳರು ಹಂತಿ ಪದದಲ್ಲಿ ಕನಕರನ್ನು ನೆನೆದು ಜಾನಪದ ಸೊಗಡನ್ನು ಹೆಚ್ಚಿಸಿರುವರು.

ರಾಮದುರ್ಗ ತಾಲೂಕು ಅವರಾದಿಯ ಡೊಳ್ಳಿನಹಾಡಿನ ಕಲಾವಿದ ಸಿದ್ದು ಮೊಟೆ ಅವರು ಡೊಳ್ಳುಕಲೆಯಲ್ಲಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಕಲಾವಿದರಾಗಿದ್ದಾರೆ. ಇವರು ಅನೇಕ ತರನಾದ ವಿಭಿನ್ನ ಡೊಳ್ಳಿನ ಹಾಡುಗಳನ್ನು ರಚಿಸಿರುವರು. ಇವರು ಕನಕದಾಸರ ಕುರಿತು ಡೊಳ್ಳಿನ ಹಾಡನ್ನು ಸ್ವತಃ ರಚನೆ ಮಾಡಿ ಹಾಡುತ್ತಾ, ಕುಣಿಯುತ್ತಾ ಡೊಳ್ಳಿನ ಮೂಲಕ ಸಾಂಸ್ಕೃತಿಕವಾದ ಪರಿಸರವನ್ನು ಕಟ್ಟಿಕೊಟ್ಟಿದ್ದಾರೆ.

"ಶಾಂತದಿಂದ ನೀವು ಕುಂತ ಕೇಳಿರಿ
ಸಂತರ ಸವಿ ಕಥನ।ಇಂತ ನಾಡಿನ್ಯಾಗ
ಸಂತಕನಕದಾಸ ಬಾಳಿದ ಭಗವಾನ
ಅದು ಹದಿನಾರನೇ ಶತಮಾನ॥ಪ॥
ಹಾವೇರಿ ಜಿಲ್ಲಾ ಶಿಗ್ಗಾಂವ ತಾಲೂಕದಾಗ
ಬಾಡ ಮಣ್ಯ ಸ್ಥಾನಬೀರಪ್ಪ ಬಚ್ಚಮ್ಮ
ಸತಿಪತಿ ಜಾತೀಲಿ ಕುರುಬರ ಮನೆತನ
ಬಾಡ ಬಂಕಾಪುರ ನಾಡನಾಯಕನಾಗಿ
ಆಳತಿದ್ದ ಸಂಸ್ಥಾನ ಬೀರಪ್ಪಗೌಡ।
ಮದುವೆಯಾಗಿ ಹದಿನೈದು ವರ್ಷದಮ್ಯಾಗ
ಆದಿತು ಸಂತಾನ।ತಿರುಪತಿ ತಿಮ್ಮಪ್ಪನ ವರ ಕರುಣ.

ಕನಕದಾಸರ ಜೀವನ ತತ್ವಗಳನ್ನು ಡೊಳ್ಳಿನ ಹಾಡಿನಲ್ಲಿ ಹಾಡುತ್ತಾ. ಸಮಾನತೆ, ಕನಕನ ವಿಚಾರ ಅಳವಡಿಸಿಕೊಳ್ಳುವ ಕುರಿತು ಹೇಳುತ್ತಾನೆ. ಕೊನೆಗೆ,

'ಕನಕದಾಸನ ಕೆಣಕಬೇಡ ಕೆಣಕಿ
ತಿಣುಕಬೇಡ ನೀನ।ಅಂತ ಸಂತರನ
ಅಂತರಂಗದಿನೆನಿ ಜೀವನ ಪಾವನ
ಬೆಳಗಾವಿ ಜಲ್ಲಾ ರಾಮದುರ್ಗ ತಾಲೂಕದಾಗ
ಅವರಾದಿ ಶಿವಸ್ಥಾನ।ಫಲಹಾರೇಶ್ವರ ಸಂಸ್ಥಾನ
ಮುದ್ದು ಬಾಲಕ ಕವಿ ಸಿದ್ದು ಮೊಟೆ ಹಿಂಗ
ರಚಿಸುತ ಪದಗಳನ।ಜಗದಾಗ ಬೆಳೆಸುತ ಜಾನಪದವ
ಕಲಿಯಾಗಿ ಇರದು ಕವಿಯಾಗಿ ಬರದಾನ
ಕುರುಬನಾಗಿ ಕುರಿಯ ಕಾಯ್ದಾನ[೭]

ಹೀಗೆ ಕನಕರ ತತ್ವ ವಿಚಾರಗಳನ್ನು ಮೌಖಿಕ ಪರಂಪರೆಯಾಗಿ ಡೊಳ್ಳಿನ ಹಾಡುಗಳ ಮೂಲಕ ಕನಕರ ಶಕ್ತಿಯನ್ನು ಅವರ ಸಮಗ್ರವಾದ ಮಾಹಿತಿಯನ್ನು ಸ್ಮರಿಸುತ್ತಾರೆ. ಇದರಿಂದ ಇಲ್ಲಿ ಕನಕದಾಸರು ಸ್ಮರಣೀಯರೆನಿಸಿಕೊಳ್ಳುತ್ತಾರೆ.

ಬೆಣ್ಣೂರಿನ ಸಾಬಣ್ಣ ಮೇಟಿ ಇವರು ಹಾಡಿರುವ ಕನಕದಾಸರ ಕುರಿತಾದ ಡೊಳ್ಳಿನ ಹಾಡನ್ನು ವೀರೇಶ ಬಡಿಗೇರ ಅವರು ಸಂಗ್ರಹಿಸಿದ್ದಾರೆ.

ದೇವಿ ನಮ್ಮ ದೇವರು ಬಂದಾರು ಬನ್ನಿರೆ
ಸ್ವಾಮಿ ನಮ್ಮ ದೇವರು ಬಂದಾರ ಬನ್ನಿರೆ ॥ಪ॥

ಕೆಂಗಣ್ಣ ಮೀನನಾಗಿ ನಮ್ಮ ರಂಗ
ಗುಂಡಾಡಿ ಸೋಮನ ಕೊಂದಾನ
ಗುಂಡಾಡಿ ಸೋಮನ ಕೊಂದು ವೇದವನು
ಬಂಗರ ದೊಡಲನಿತ್ತಾನ

ಡೊಳ್ಳಿನ ಮೆಲೆ ಕೈ ಬರಮಪ್ಪ ಹಾಕ್ಯಾನ
ತಾಳ ಶಿವನಪ್ಪ ತಟ್ಯ್ಯಾನ
ಒಳ್ಳೊಳ್ಳೆ ಪದಗಳ ಭರಮಪ್ಪ ಹಾಡ್ಯಾನ
ಚೆಲುವ ಕನಕಪ್ಪ ಕುಣಿದಾನೂ
ದನವ ಕಾಯಲು ದಂಡನಾಯಕನಾಗಿ
ಊರ ಕಾಯುವ ವಾಲೀಕಾರನಾಗಿ[೮]

ಭಜನೆ ಹಾಡುಗಳಲ್ಲಿ ಕನಕದಾಸರು

ಭಕ್ತಿ ಎನ್ನುವ ಪದ ಅತ್ಯಂತ ಪ್ರಾಚೀನವಾದುದ್ದು 'ಭಕ್ತಿ ಭಾರತೀಯರ ಜೀವನದಿಯಲ್ಲಿ ಅನಂತಕಾಲದಿಂದ ಹರಿಯುತ್ತಿರುವ ಗಂಗೆ, ಯಮುನೆಯರ ರಸಸಲೀಲ ಮಧುಕಾಳಿನ ಸಾಹಿತ್ಯದಲ್ಲಿಯಂತೂ ಭಕ್ತಿ ಸಾಹಿತ್ಯದ್ದೆ ದೊಡ್ಡಪಾತ್ರ 'ಭಕ್ತಿ' ಎನ್ನುವ ಭಾವ ಭಗವಂತನ ನಾಮಸ್ಮರಣೆಯನ್ನು ಮಾಡುವಲ್ಲಿ 'ಭಜನೆ'ಯಾಗುತ್ತದೆ

ಭಜನೆ ಎಂದರೆ ಭಕ್ತಿಯಿಂದ ಕೂಡಿದ ಸ್ಮರಣೆ ಎಂದರ್ಥ ಭಜಿಸು, ಭಜನ ಎಂಬ ಪದದ ಹಿಂದೆ ಭಕ್ತಿಯಿಂದ ಸ್ತುತಿಸುವುದು ಎಂದರ್ಥ ಮುಖ್ಯವಾಗುತ್ತದೆ. ಭಕ್ತಿ ವ್ಯಕ್ತಿಯಲ್ಲಿರುವ ಭಾಗವಾದರೆ ಅದರ ಸ್ತೋತ್ರರೂಪವೇ ಭಜನೆಯೆನಿಸುತ್ತದೆ.

ಹೀಗೆ ಭಕ್ತಿಯಿಂದ ದೇವರನ್ನು, ಗುರುಗಳನ್ನು ಸ್ಮರಣೆ ಮಾಡುವುದಕ್ಕಾಗಿ. ಭಜನೆಯನ್ನು ಮಾಡುತ್ತಾರೆ. ವಿಶೇಷವಾಗಿ ಗಾಮೀಣಪ್ರದೇಶ, ಪರಿಸರದಲ್ಲಿ, ಭಜನೆಗಳು ತುಂಬಾ ಮಹತ್ವ ಪಡೆದುಕೊಂಡಿವೆ. ಇಂತಹ ಭಜನಾ ಹಾಡುಗಳಲ್ಲಿ ಕನಕದಾಸರನ್ನು ಕುರಿತು ಹಾಡುವ ಸಂಪ್ರದಾಯ ಬೆಳೆದುಕೊಂಡು ಬಂದಿದೆ. ಇದು ಕನಕದಾಸರ ವ್ಯಕ್ತಿತ್ವಕ್ಕೆ ಹಿಡಿದಗನ್ನಡಿಯಾಗಿದೆ. ಬಾಗಲಕೋಟ ತಾಲೂಕಿನ ಬೆನಕಟ್ಟಿ ಗ್ರಾಮದ ಯಮನಪ್ಪ ಮಾದರ ಭಜನಾಪದಗಳನ್ನು ಕಟ್ಟಿ ಹಾಡುವುದರಲ್ಲಿ ಪ್ರಸಿದ್ದರು. ಅವರು ಕನಕದಾಸರ ಕುರಿತಾಗಿ ಬರೆದು, ಹಾಡಿದ ಭಜನಹಾಡು ಹೀಗಿದೆ.

"ಇದ್ದರೆ ಇರಬೇಕು ಇಂತಾ ಹರಿದಾಸರು
ಹರಿಯಕೃಪೆಗೆ ಪಾತ್ರರಾದ ಸಂತ ಮಹಿಮಜ್ಞಾನಿಯು
ಭಗವಂತನಿಗಾಗಿ ಅನುದಿನ ಸೇವೆಗೈದು

ಬಳಲುವ ಜವರಿಗೆ ಬಿಡಿಸಿದಿ ಭಯವನು'
ಕನಕದಾಸರು ಹರಿಯನ್ನು ಒಲಿಸಿಕೊಂಡು ಇಹಪರರಿಗಾಗಿ ಬದುಕಿದವರು
ಭಂಗವಂತನನ್ನು ಸ್ಮರಿಸಿ ಅವನ ಸಹಾಯದಿಂದ
ಜನರನ್ನು ಸರಿದಾರಿಗೆ ತಂದು ಕಾಪಾಡಿದವರು. .
"ಪಾರಮಾರ್ಥದ ಕಡೆಗೆ ಮನತಿರುಗಿಸುತ ವರ
ಮೋಕ್ಷವನು ಪಡೆದವನು ಕನಕನು
ತಿರುಪತಿಯ ತಿಮ್ಮಪ್ಪನ ವರಪುತ್ರನಾದೆ
ಪರಮ ಪಾವನನೆಂದು ಕೇಶವನ ಪ್ರೀಯನಾದೆ"[೯]

ಹೀಗೆ ಭಜನೆಯಲ್ಲಿ ಕನಕದಾಸರನ್ನು, ಅವರ ತತ್ವಗಳನ್ನು, ಬದುಕನ್ನು ಸ್ಮರಿಸುತ್ತಾರೆ. ಆದ್ದರಿಂದಲೆ ಕನಕದಾಸರು ಸಾಂಸ್ಕೃತಿಕನಾಯಕರಾಗಿ ಇಂದಿಗೂ ಜನಮನದಲ್ಲಿ ಉಳಿದುಕೊಂಡಿದ್ದಾರೆ. ಮತ್ತೊಬ್ಬ ಭಜನೆ ಹಾಡುಗಾರ ಹುನಗುಂದ ತಾಲೂಕಿನ ಬೆನಕನವಾರಿ ಹನುಮಪ್ಪ ಐಹೊಳ್ಳಿ ಇವರು ಕನಕದಾಸರ ಕುರಿತು ರಚಿಸಿ ಹಾಡಿದ ಭಜನೆ ಹೀಗಿದೆ

"ಕನಕನೆಂದು ಕರಿಯೇ ಹೆ, ಮನುಜಾ
ಕರೆದರೆ ಮನುಕುಲಕೆ ಆನಂದ,
ಕೀರ್ತನೆ ಹಾಡುತ್ತ ಭಕ್ತರನು ಉದ್ದರಿಸಿದ
ಅನುಭಾವದಲ್ಲಿ ಅಂತರಂಗ ಶೋಧನೆ ಮಾಡುತ
ಸರ್ವಕಾರ್ಯಕ್ಕೆ ಕಾರಣರಾದ ಆದಿಕೇಶವನ
ನೆನೆದು ಜನರಿಗೆ ಪ್ರೀಯನಾದ ಕನಕ"[೧೦]

ಹೀಗೆ ಕನಕರನ್ನು ಸರ್ವಕಾಲಿಕ ಸತ್ಯವನ್ನಾಗಿ ನೋಡಿ ಅಂತರಂಗದಲ್ಲಿ ನೆನೆಯುತ್ತಾರೆ. ಅನುದಿನವು ಗೊತ್ತಿದ್ದೂ ಗೊತ್ತಿರಲಾರದೆ ಕನಕದಾಸರನ್ನು ಸ್ಮರಿಸುತ್ತಾರೆ.

ಗಜಲ್ ಸಾಹಿತ್ಯದಲ್ಲಿ ಕನಕ

ಗಜಲ್-ಉರ್ದು ಭಾಷೆಯ ಕಾವ್ಯ ಪ್ರಕಾರ ಗಜಲ್ ಎಂದರೇ ಸಂಭಾಷಿಸುವುದು. ಪ್ರೇಮ, ಮೋಹ, ಅನುರಾಗ ವ್ಯಕ್ತಪಡಿಸುವುದು ಪಾರಿಭಾಷಿಕವಾಗಿ ಇದರ ಅರ್ಥ ಹೃದಯದ ವೃತ್ತಾಂತ ಮತ್ತು ಪ್ರೇಮ ಮೋಹಗಳ ವಿದ್ಯಮಾನಗಳ ಹೇಳಿಕೆ. ಈ ರೀತಿಯಾಗಿರುವ ಗಜಲ್‌ಗಳ ಮೂಲಕ ಕನಕದಾಸರ ಸ್ಮರಣೆಯನ್ನು ಕನಕಗಿರಿಯ ಗಜಲ್‌ಕವಿ ಅಲ್ಲಾಗಿರಿರಾಜ್ ಮಾಡಿರುವರು.

"ನಿನ್ನೊಳಗೆ ನೀನೆ ದೀಪ ಉರಿಸಿಕೊಂಡು ಹೋದಿಯೆನು ಕನಕ
ಕಾಲುದಾರಿ ತುಂಬ ಬಂಡಾಯದ ದನಿಯ ದಾಸಕೂಟದ ನೀನು ಕನಕ
ಬದುಕಿ ಬಯಲಲ್ಲಿ ಸತ್ಯ ಹುಡುಕಿ ದೀನರಲಿ ಲೀನನಾದವನು ಕನಕ

ಹುಟ್ಟದ ಹೋನಿಗಳಿಲ್ಲ ಕುಲಗೋತ್ರ ಮನುಜರಿಗೆಲ್ಲಿಂದ ಎಂದವನು ಕನಕ
ವೇದಶಾಸ್ತ್ರ ಪುರಾಣಪೊಳ್ಳ ಜ್ಞಾನದ ಪರಾಣ ಎಂದವನು ನೀನುಕನಕ
ಒಡಲ ತಂಬೂರಿ ನುಡಿಸಲೊಂಡು ಚಿಟಿಗೆಗೆ ಮಾತು ಕಲಿಸಿದವನು ಕನಕ
ಹೆಗಲ ಕಂಬಳಿ ಮೇಲೆ ಕಾಗಿನೆಲೆಯಾದಿಕೇಶವನ ಹೊತ್ತು ಕೊಂಡವನು ಕನಕ
ಪರರು ಪ್ರಾಣ ಕೇಳಿದರೆ ಎತ್ತಿಕೊಡುವನು ಜಾಣ ಕೃಷ್ಣನಡಿಯ ಬಿಡದವನು ಕನಕ[೧೧]

ಗಜಲ್‌ಕವಿ ಅಲ್ಲಾಗಿರಿರಾಜನು ಕನಕರನ್ನು ಅಂತರಂಗದಿಂದ ಸ್ಮರಿಸಿದ್ದಾರೆ ಸತ್ಯ ನಂಬಿಕೆಯಿಂದ ಇರಲು ಸುಳ್ಳು ಡಂಬಾಚಾರವನ್ನು ಬಿಡಲು, ಕನಕರು ಹೇಳಿದ ಮಾತನ್ನು ಜೀವನಕ್ಕೆ ಹೊಲಿಸಿಕೊಳ್ಳುತ್ತಾರೆ. ಇಲ್ಲಿ ಕನಕದಾಸರು ಸಂಪ್ರದಾಯದ ಒಳಗಡೆ ಇದ್ದುಕೊಂಡು ಬದುಕಿಗಾಗಿ ನೀಡಿದ ಸಂದೇಶ ಮಹತ್ವವನ್ನು ಸಾರಿದ್ದಾರೆ. ಹೀಗೆ ಭಜನೆ, ಡೊಳ್ಳಿನ ಹಾಡು, ಗಜಲ್‌ಗಳ ಮೂಲಕ ಕನಕನನ್ನು ಸ್ಮರಿಸುವ ಅವನ ಉದಾತ್ತ ವಿಚಾರಗಳನ್ನು ಹಾಡಿ, ಕುಣಿದು ನಲಿಯುವ ಸಾಂಸ್ಕೃತಿಕ ಚಹರೆ ನಮ್ಮೆದುರಿಗೆ ಇದ್ದುದು ಕನಕರ ಕುರಿತಾದ ಕಲಾವಿದರ, ಅಧ್ಯಯನಕಾರರ ಸಾಂಸ್ಕೃತಿಕ ನೋಟವಾಗಿದೆ.

ರಂ. ಶ್ರೀ ಮುಗಳಿಯವರು ಹೇಳುವಂತೆ– ಕನ್ನಡಿಗರಿಗೆ ಹಾಗೂ ಕನ್ನಡ ಸಾಹಿತ್ಯಕ್ಕೆ 'ಸಾಂಸ್ಕೃತಿಕ ಬೆಳಕು' ಎನ್ನುವ ಮಾತು ಬೆಳಕಿನಷ್ಟೆ ಸತ್ಯ ಯಾವ ದಾಸರಿಗಿಂತಲೂ ಕಡಿಮೆ ಇಲ್ಲದ ವ್ಯಕ್ತಿತ್ವ ಕನಕದಾಸರದು. ಭಕ್ತಿ, ಜ್ಞಾನ, ವೈರಾಗ್ಯ ಹೀಗೆ ಪ್ರತಿಯೊಂದರಲ್ಲಿಯೂ ಅವರ ಸಾಂಸ್ಕೃತಿಕ ಮಹೋನ್ನತಿ ಅಡಗಿದೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಕನಕದಾಸರು ತಮ್ಮ ಬದುಕಿನೂದ್ದಕ್ಕೂ ಸಾಧಿಸಿದ, ಅನುಭವಿಸಿದ, ಸಮಾಜದ ಉದ್ದಾರಕ್ಕಾಗಿ ಮಾಡಿದ ಎಲ್ಲಕಾರ್ಯಗಳು ಪ್ರಸ್ತುತ ಇಂದಿನವರೆಗೂ ಉಳಿದಕೊಂಡು ಬಂದಿದೆ ಒಬ್ಬ ಸಂತರನ್ನು ಸಾಂಸ್ಕೃತಿಕವಾಗಿ ಪದೇ ಜನರ ಮನದಲ್ಲಿ ಉಳಿಯುತ್ತಾರೆ ಎಂದರೆ ಅವರು ಕೊಟ್ಟ ಕೂಡುಗೆ ಇದಕ್ಕೆ ಕಾರಣವಾಗಿದೆ. ಭಜನೆ, ಹಾಡು, ಕಥನ, ಡೊಳ್ಳಿನ ಹಾಡುಗಳ ಮೂಲಕ ಕನಕದಾಸರನ್ನು ನೆನೆಯುವ, ಸ್ಮರಣೆಮಾಡುವ ಪ್ರವೃತಿ ಇಂದಿಗೆ ಹೆಚ್ಚಾಗಿ ಕಂಡುಬರುತ್ತಿದೆ ಹಾಗೂ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಇಂದು ಕನಕನನ್ನು ಕಲಾಪರಂಪರೆಯ ಮೂಲಕ ಸಾಂಸ್ಕೃತಿಕ ನಾಯಕನನ್ನಾಗಿ ನೋಡುವುದು ಆ ಪರಂಪರೆಯನ್ನು ಬೆಳೆಸಿಕೊಂಡು ಬಂದಿರುವುದು ತಾತ್ವಕ ನೇಲೆಗಟ್ಟನ್ನು ಹೊಂದಿದೆ

ಅಡಿಟಿಪ್ಪಣಿಗಳು

೧. ವೆಂಕಟಚಲಶಾಸ್ತ್ರಿ ಟಿ.ವಿ., 'ಕನಕ ಕಿರಣ' ಪುಟ-೧೪೮.

೨. ಶ್ರೀಧರ ಪಿಸ್ಸೆ, 'ನೀರಸಂಗವ ಬಿಟ್ಟು ಅಣಿ ಮುತ್ತಾದ ಕ್ರಿಯೆ, ಬಯಲು ಆಲಯದೊಳಗೊ', ಪುಟ-೧೭೬.

೩. ಸುಧಾಕರ ಸಮಗ್ರ ದಾಸಸಾಹಿತ್ಯ ಸಂ-೫, ಕನದಾಸರ ಕೀರ್ತನೆಗಳು, ಭಾಗ ಪುಟ-೧೦೮.

೪. ವೀರೇಶ ಬಡಿಗೇರ, ಗೀತೆ, ಲಾವಣಿ, ಭಜನೆ ಮುಂತಾದ ಜಾನಪದ ಸಂಕಥನಗಳಲ್ಲಿ ಕನಕ (ಲೇ), ಕನಕದಾಸ ಸಂಶೋಧನಾ ಕೇಂದ್ರ, ಮಂಗಳೂರು ವಿ.ವಿ., ಪುಟ-೧೨೦.

೫. ಚಿಕ್ಕಣ್ಣ. ಕಾ.ತ. ಅವರ ಅಭಿಪ್ರಾಯ, ಸಮನ್ವಯಾಧಿಕಾರಿ, ರಾಷ್ಟ್ರೀಯ ಸಂತ ಕನಕದಾಸ ಸಂಶೋಧನಾ ಕೇಂದ್ರ, ಬೆಂಗಳೂರು

೬. ಜಕಬಾಳ ಎಸ್.ಎಫ್., ಹಂತಿ ಪದಗಳು, ವಿದ್ಯಾನಿಧಿ ಪ್ರಕಾಶನ, ಗದಗ, ಪು.ಸಂ-೧೬.

೭. ಸಿದ್ದು ಮೋಟೆ, ಕನಕದಾಸರ ಹಾಡು, ಅವರಾದಿ ತಾ॥ ರಾಮದುರ್ಗ ಇವರ ಡೊಳ್ಳಿನ ಹಾಡನ್ನು ಬಳಸಿಕೊಳ್ಳಲಾಗಿದೆ.

೮. ವೀರೇಶ ಬಡಿಗೇರ ಅವರು ಬೆಣ್ಣೂರಿನ ಸಾಬಣ್ಣ ಮೇಟಿ ಇವರು ಹಾಡಿರುವ ಡೊಳ್ಳಿನ ಹಾಡು.

೯. ಯಮನಪ್ಪ ಮಾದರ, ಬೆನಕಟ್ಟಿ ತಾ, ಜಿ. ಬಾಗಲಕೋಟೆ ಇವರ ಭಜನಾ ಪದವನ್ನು ಬಳಸಿಕೊಳ್ಳಲಾಗಿದೆ.

೧೦. ಹನಮಪ್ಪ ಐಹೊಳ್ಳಿ, ಬೆನಕನವಾರಿ ತಾ. ಹುನಗುಂದ, ಇವರ ಭಜನಾ ಪದವನ್ನು ಬಳಸಿಕೊಳ್ಳಲಾಗಿದೆ.

೧೧. ಅಲ್ಲಾಗಿರಿರಾಜ್, ಕನಕಗಿರಿ, ಇವರ ಗಜಲ್‌ನ್ನು ಬಳಸಿಕೊಳ್ಳಲಾಗಿದೆ.

ಅಧ್ಯಾಯ ಆರು

ಕನಕದಾಸರು ಹಾಗೂ ಇತರ ಸಂತರ ಅಭಿವ್ಯಕ್ತಿಗಳ ತೌಲನಿಕ ಪ್ರವೃತ್ತಿಯ ಪರಿಕಲ್ಪನೆಗಳ ಅಧ್ಯಯನಗಳು

೬.೧ ಡಾಂಬಿಕತೆ

೬.೨ ಕುಲ

೬.೩ ಹರಿಭಕ್ತಿ

೬.೪ ದಾನ, ಧರ್ಮ, ಪರೋಪಕಾರ

೬.೫ ಸ್ತ್ರೀ ಸಂವೇದನೆ

೬.೬ ಕಾಯಕ

೬.೭ ಹೆಣ್ಣು, ಹೊನ್ನು, ಮಣ್ಣಿನ ಮೋಹ

೬.೮ ಸೂಫಿ ಮತ್ತು ಕನಕ ತತ್ವ

ಅಧ್ಯಾಯ - ೬

ಕನಕದಾಸರು ಹಾಗೂ ಇತರ ಸಂತರ ಅಭಿವ್ಯಕ್ತಿಗಳ ತೌಲನಿಕತೆಯ ಪ್ರವೃತ್ತಿಯ ಪರಿಕಲ್ಪನೆಗಳು

ಕನಕದಾಸರನ್ನು ಬೇರೆ-ಬೇರೆ ಸಂತ ಹಾಗೂ ಸಮಾಜ ಸುಧಾರಕರೊಡನೆ ಹೋಲಿಕೆ ಮಾಡಿ, ತೌಲನಿಕವಾಗಿ ಅಧ್ಯಯನಕಾರರು ಅಧ್ಯಯನ ಮಾಡಿರುವರು. ಈ ತೌಲನಿಕ ಸಾಹಿತ್ಯದ ಪರಿಕಲ್ಪನೆಗೆ ಒಂದು ಆಯಾಮವಿದೆ. ಭಾಷೆ, ಕುಲ, ಸಂಸ್ಕೃತಿ, ಧರ್ಮ ಇವುಗಳಿಂದಾಗಿ ಒಡೆದು ಹೋಗಿರುವ ಮಾನವ ಜಾತಿಯ ಏಕತೆಯನ್ನು ಪ್ರತಿಪಾದಿಸುವುದು ಇಲ್ಲಿನ ಮುಖ್ಯವಾದ ಆಶಯ ಈ ಪ್ರತಿಪಾದನೆ ಕಾಲ, ಭೌಗೋಳಿಕ ಪ್ರದೇಶ, ಯಾವುದೇ ಭಾಷೆಯಲ್ಲಿ ಅಭಿವ್ಯಕ್ತಗೊಂಡಿರಲಿ, ಮಾನವನ ಮೂಲಭೂತ ಅನುಭವಗಳು, ಸಮಸ್ಯೆಗಳು, ತೊಡಕುಗಳು, ಆಸೆ, ಆಕಾಂಕ್ಷೆಗಳು ಒಂದೇ ಆಗಿಲ್ಲದಿದ್ದರೂ, ಭಿನ್ನವಾಗಿ ವೈರುದ್ಯದಿಂದ ಕೂಡಿರುತ್ತವೆ. ಇಂತಹ ಸಾಹಿತ್ಯದ ಉದ್ದೇಶ ಒಳವು, ಹೊರವು, ದೃಷ್ಟಿಕೋನಗಳನ್ನು ನಾವು ತೌಲನಿಕ ಅಧ್ಯಯನಗಳಿಂದ ಗುರುತಿಸಬಹುದಾಗಿದೆ. ಬಿಡಿಬಿಡಿಯಾಗಿ ಕಾಣುವ ವಿವಿಧ ಯುಗಗಳ ಮನೋಧರ್ಮದ ಸಾಹಿತ್ಯಿಕ ಹಾಗೂ ಸಂಸ್ಕೃತಿಗಳ ಆಳದಲ್ಲಿ ಸ್ಪಷ್ಟವಾಗಿ ಕಂಡುಬರುವ ಏಕತೆ, ವೈವಿಧ್ಯತೆಯನ್ನು ಗುರುತಿಸುವುದು ಈ ತೌಲನಿಕ ಸಾಹಿತ್ಯದ ಮುಖ್ಯ ಗುರಿಯಾಗಿದೆ ಎಂದು ಅಧ್ಯಯನಕಾರರು ಸ್ಪಷ್ಟಪಡಿಸಿದ್ದಾರೆ.

ಕನಕದಾಸರನ್ನು ಇತರೆ ಸಂತರು ಹಗೂ ಸಮಾಜ ಸುಧಾರಕರೊಂದಿಗೆ ತೌಲನಿಕವಾಗಿ ನೋಡುವ ಪ್ರವೃತ್ತಿ.

ಕರ್ನಾಟಕದಲ್ಲಿ ಹರಿದಾಸ ಪರಂಪರೆ ಮತ್ತು ಸಮಾಜ ಸುಧಾರಕರ ಪರಂಪರೆ ಪ್ರಾಚೀನ ಕಾಲದಿಂದ ಇಂದಿಗೂ ಬೆಳೆದುಕೊಂಡು ಬಂದಿದೆ. ಮಧ್ಯಕಾಲೀನ ಹರಿದಾಸ ಪರಂಪರೆಯಲ್ಲಿ ಕನಕದಾಸರು ಬಹುಮುಖ್ಯ ನೆಲೆಗಳಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿತ್ವದ ಹರಿದಾಸರಾಗಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಅವರು ರಚಿಸಿದ ಸಾಹಿತ್ಯ ಕೃತಿಗಳಾದ ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯಚರಿತೆ, ಹರಿಭಕ್ತಿಸಾರ, ಕೀರ್ತನೆ, ಮುಂಡಿಗೆ ಅವರ ಜೀವನದ ವಿವಿಧ ಮಜಲುಗಳನ್ನು ತೌಲನಿಕರಿಸುವ ಪ್ರವೃತ್ತಿ ಇಂದು ಕಂಡುಬರುತ್ತಿದೆ. ಅದರಲ್ಲಿ ಬಹುಮುಖ್ಯವಾಗಿ ತಿರುವಳ್ಳುವರ್, ಅನ್ನಮೊಚಾರ್ಯ, ಸರ್ವಜ್ಞ, ಶಿಶುನಾಳಶರೀಫ, ಬಸವಣ್ಣ, ತುಕಾರಮಾರು ಮುಂತಾದ ಸಂತ, ಸಮಾಜ ಸುಧಾರಕರೊಂದಿಗೆ ಅಧ್ಯಯನಕಾರರು ತೌಲನಿಕರಿಸುತ್ತಾ ಭಿನ್ನ ಧೋರಣೆಯ ನೆಲೆಗಳನ್ನು ದಾಖಲಿಸುತ್ತಾ ಹೋಗುತ್ತಾರೆ. ಅಲ್ಲಿ ಅವರ ವ್ಯಕ್ತಿತ್ವ, ಕೃತಿಯಲ್ಲಿರುವ ಸಾಮ್ಯ, ಭಿನ್ನ ಅಂಶಗಳು, ಭಿನ್ನ ಪ್ರದೇಶಗಳನ್ನು ಕಾಲ, ತತ್ವ, ಪರಿಸರದ ಎಲ್ಲ ನಿಲುವುಗಳನ್ನು ಹೇಳುತ್ತಾರೆ. ಆ ಎಲ್ಲಾ ಅಧ್ಯಯನಕಾರರ ನಿಲುವುಗಳನ್ನು ಇಲ್ಲಿ ತಾತ್ವಿಕರಿಸಲಾಗಿದೆ.

ಒಂದು ಸಾಹಿತ್ಯವನ್ನು ರೂಪಿಸಿದ ವಿಶಿಷ್ಟ ಸಂದರ್ಭದ ಅಧ್ಯಯನ ಎಂದರೆ ತೌಲನಿಕ ಸಾಹಿತ್ಯ ಕೇವಲ ಪರಸ್ಪರ ಭಿನ್ನ ಗುಣಗಳನ್ನು ಗುರುತಿಸಿ ಪಟ್ಟಿ ಮಾಡುವುದು ಅಷ್ಟೇ ಅಲ್ಲ. ಅಲ್ಲಿ ರೂಪಗೊಂಡ ವಿಶಿಷ್ಟ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂದರ್ಭದ ಅಧ್ಯಯನವು ಆಗುತ್ತದೆ. ಇಲ್ಲಿ ತೌಲನಿಕವೆಂದರೆ, ಪರಸ್ಪರ ಸಮಾನ ಅಭಿವ್ಯಕ್ತಿಗಳ, ಆಳದಲ್ಲಿರುವ ಬಿನ್ನತೆಗಳನ್ನು ಹಾಗೂ ಈ ಭಿನ್ನ

ವಸ್ತುಗಳ ಆಶಯಗಳಲ್ಲಿರುವ ಸಮಾನತೆಯನ್ನು ಗುರುತಿಸುವುದಾಗಿದೆ. ಇಂತಹ ಸಮಾನ ಭಿನ್ನ ಅಂಶಗಳನ್ನು ವೈಚಾರಿಕ ನೆಲೆಯಲ್ಲಿ ಅರ್ಥೈಸಿ ತಾತ್ವಿಕರಿಸಬಹುದು. ಕಾರಣ ಇದು ಮಾನವಿಕ ಶಾಖೆಗಳಲ್ಲಿ ಬಹುಮುಖ್ಯವಾದುದ್ದಾಗಿದೆ. ಸಾಹಿತ್ಯವು ಕೇವಲ ಏಕಮುಖಿಯಾದುದಲ್ಲ. ಬದಲಾಗಿ ಅದು ಬಹುಮುಖಿ ನೆಲೆಯನ್ನು ಹೊಂದಿರುತ್ತದೆ. ಬಹುಮುಖಿ ಆಯಾಮವನ್ನು ಹಲವು ಕ್ರಮಗಳಲ್ಲಿ ವ್ಯಾಖ್ಯಾನಿಸಿಕೊಳ್ಳಬಹುದಾಗಿದೆ.

ಅಂದರೆ ಭಾಷೆ, ವಸ್ತು, ಪಾತ್ರ, ಸನ್ನಿವೇಶ, ಘಟನೆ, ಅಲಂಕಾರ, ಶೈಲಿ, ನಿರೂಪಣೆ ಮುಂತಾದ ವಿನ್ಯಾಸಗಳಲ್ಲಿ, ತುಲನೆಮಾಡಿರುವುದನ್ನು ಗಮನಿಸಿದಾಗ ಅನೇಕ ಸಂಗತಿಗಳು, ಹೊಸ ವಿನ್ಯಾಸದ ತಾತ್ವಿಕತೆಯನ್ನು ತಂದು ಕೊಡುತ್ತವೆ.

ಕನ್ನಡ ಭಾಷೆ ಎರಡುಸಾವಿರ ವರ್ಷಗಳ ಇತಿಹಾಸ ಹೊಂದಿದೆ. ಇಂದು ೨೧ನೇ ಶತಮಾನದಲ್ಲಿ ಕನ್ನಡ ಸಾಹಿತ್ಯವು ಆಧುನಿಕ ಸ್ಪರ್ಶತೆಯನ್ನು ಪಡೆದುಕೊಂಡು ಬದಲಾವಣೆಯತ್ತ ಮುಖಮಾಡಿದೆ. ಹೊಸ ದೃಷ್ಟಿಕೋನಗಳ ಮೇಲೆ ಅಧ್ಯಯನಗಳಾಗಿವೆ. ಇಲ್ಲಿ ಮುಖ್ಯವಾಗಿ ಆಲೋಚಿಸುವ, ಪ್ರಸ್ತುತ ಪಡಿಸುವ, ವಿಶ್ಲೇಷಣೆಗೆ ಒಳಪಡಿಸುವ ವಿಷಯ ತೌಲನಿಕವಾಗಿರುವದರಿಂದ ಅದು ಪ್ರಾಮುಖ್ಯತೆ ಪಡೆದಿದೆ. ವಿಶೇಷವಾಗಿ ಸಾಹಿತ್ಯ ಸಂಬಂಧ, ಭಾಷಾ ಭಾಂಧವ್ಯ, ಸಾಂಸ್ಕೃತಿಕ, ಸಾಹಿತ್ಯಿಕ ವ್ಯಕ್ತಿಗಳ ಸಾಧನೆ, ಸಾಮ್ಯ, ವೈಶಮ್ಯಗಳು ಭಿನ್ನ ಆಯಾಮಗಳ ಅಧ್ಯಯನದಿಂದ ಇದಕ್ಕೊಂದು ವಿಶಿಷ್ಟವಾದ ಮಹತ್ವ ಬಂದಿದೆ. ಕರ್ನಾಟಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಕ್ಕೆ ಅನುಪಮ ಸ್ಥಾನವಿದೆ. ೧೨ನೇ ಶತಮಾನದಲ್ಲಿ ಬಸವಾದಿ ಪ್ರಥಮರು, ಸಾಮಾಜದಲ್ಲಿರುವ ಮೌಢ್ಯ, ಕಂದಾಚಾರ, ಅಸ್ಪೃಶ್ಯತೆ ಅಳಿಸಲು, ಜನರಲ್ಲಿ ಜಾಗೃತೆ ಮೂಡಿಸಲು ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೇನೆಂದರೆ, ವಚನಕಾರರು ಸಾಮೂಹಿಕವಾಗಿ ಸಮಾಜ ಸೇವೆಯಲ್ಲಿ ತೊಡಗಿಕೊಂಡರೆ, ದಾಸ ಸಾಹಿತ್ಯದಲ್ಲಿ ವೈಯಕ್ತಿಕವಾಗಿ ಸಮಾಜಮುಖಿ ಚಿಂತನೆಯಲ್ಲಿ ತೊಡಗಿಸಿಕೊಂಡರು. ಉದಾಹರಣೆಗೆ ಹರಿದಾಸರು ವಿಷ್ಣು ಭಕ್ತಿಯ ಮೂಲ ಅಮೃತಧಾರೆಯನ್ನು ಹರಿಸಿದರು. ತಮ್ಮ ಕೀರ್ತನೆಗಳ ಮೂಲಕ ಕನ್ನಡ ಸಾಹಿತ್ಯ ಮತ್ತು ಸಂಗೀತಕ್ಕೆ ನಾದ ಮಾಧುರ್ಯವನ್ನು ಒದಗಿಸಿದರು. ಇಂತಹ ಸಮಾಜ ಸೇವೆಯಲ್ಲಿ ಕೀರ್ತನೆಗಳು ಉತ್ತಮವಾದ ನಿದರ್ಶನಗಳಾಗಿವೆ. ಸಾಹಿತ್ಯ ಕೃತಿಗಳನ್ನು ರಚಿಸಿ, ಕನ್ನಡ ಮಧ್ಯಯುಗೀನ ಸಾಹಿತ್ಯಕ್ಕೆ ಕೊಡುಗೆ ನೀಡಿದ ಅಶ್ವಿನಿ ದೇವತೆಗಳಲ್ಲಿ ಒಬ್ಬರಾದ ಕನಕದಾಸರು ಇಲ್ಲಿ ಪ್ರಮುಖರಾಗಿದ್ದಾರೆ. ಯಾವ ಜಾತಿ, ಮತ, ತತ್ವವನ್ನು ಬಿಡದೆ ಎಲ್ಲ ಮತಗಳನ್ನು, ಅಲ್ಲಿರುವ ಮೌಲ್ಯಗಳನ್ನು ಸಮಾನವಾಗಿ ಸ್ವೀಕರಿಸಿ, ಸಕಲ ತತ್ವಗಳನ್ನು ಮೀರಿ ಬೆಳೆದ ಯುಗಪುರುಷ ಧರ್ಮ, ಕರ್ಮದ ಸಂಯೋಗ ಎಂಬಂತೆ ದಣ್ಣಾಯಕನ ಪಟ್ಟವನ್ನೇರಿ, ವೈರಿಗಳೂಡನೆ ಹೋರಾಡಿ, ಶೌರ್ಯ ಸಾಹಸಗಳಿಂದ ಮೆರೆದ ವೀರಾಗ್ರಣಿ ಇವರು. ಸ್ವಸ್ತ ಸಮುದಾಯಕ್ಕಾಗಿ ತಮ್ಮ ಜೀವನವನ್ನೆ, ಮೀಸಲಾಗಿರಿಸಿಕೊಂಡವರು. ಹಾಗಾಗಿಯೆ ಇವರಿಗೆ ಕೆಳವರ್ಗದವರ ಪರಹೋರಾಡಿದ ಸಂತ ಎನ್ನುವ

ಕೀರ್ತಿ ಪ್ರಾಪ್ತವಾಯಿತು. ತಂದೆ-ತಾಯಿಯವರ ಆಕಸ್ಮಿಕ ಸಾವು, ಹೆಂಡತಿ ಮಕ್ಕಳ ಸಾವು, ಕನಕರನ್ನು ಆತ್ಮಸ್ಥೈರ್ಯ ಕುಂದುವಂತೆ ಮಾಡಿದವು. ಹೀಗೆ ಅವರ ಜೀವನದಲ್ಲಿ ಘಟಿಸಿದ ನೋವುಗಳು ಹೃದಯ ವಿದ್ರಾವಕ ಘಟನೆಗಳ ಮಧ್ಯೆ ಗುರುಗಳ ಕರೆಯೋ, ಸಮಾಜ ಉದ್ದರಿಸಬೇಕೆಂಬ ದೈವಾಂಶ ಕಾರಣವೂ? ವಿಶ್ವಶಕ್ತಿಯ ಪ್ರೇರಣೆಯೋ, ಸಂಸಾರ ತ್ಯಜಿಸಿ ಹರಿದಾಸ ಸಂಪರ್ಕ ಸಿದ್ಧಿಯಿಂದ ಧನ್ಯರಾಗಿ, ಸಮಾನತಾ ತತ್ವದ ಹರಿಕಾರರಾಗಿ, ಅಧ್ಯಾತ್ಮ ಸಿದ್ಧಿಯ ಶಿಖರವನ್ನೇರಿದ ಮಹಾಯೋಗಿ ವೈರಾಗ್ಯ ಶಿಖಾಮನಿಯಾದ ಕನಕದಾಸರು ಕರ್ನಾಟಕ ದಾಸಪಂಥದಲ್ಲಿ ಅಗ್ರಗಣ್ಯರೆನಿಸಿಕೊಂಡಿದ್ದಾರೆ.

ಕನಕದಾಸರನ್ನು ಭಾರತದ ಬೇರೆ-ಬೇರೆ ಭಾಗದಲ್ಲಿ ಜನಿಸಿದ ಸಂತರೊಡನೆ, ಸಮಾಜ ಸುಧಾರಕರೊಂದಿಗೆ ತೌಲನಿಕರಿಸಿದ ಕನಕದಾಸರನ್ನು ಅಧ್ಯಯನಗಳಾಗಿವೆ. ಅದರಲ್ಲಿ ತಮಿಳುನಾಡಿನ ಪ್ರಸಿದ್ಧ ನೀತಿಕವಿ ತಿರುವಳ್ಳುವರ್, ಸಂತಪರಂಪರೆಯಲ್ಲಿ ಅಗ್ರಗಣ್ಯರಾದ ಕಬೀರರು, ಮಹಾರಾಷ್ಟ್ರದ ವಾರಕರಿ ಪಂಥದ ಏಕನಾಥರು, ಆಂದ್ರಪ್ರದೇಶದ ಅನ್ನಮಯ್ಯರು, ಸುಧಾರಣವಾದಿ ವಿಶ್ವಗುರು ಬಸವಣ್ಣನವರು, ಕನ್ನಡದ ಕಬೀರ ಶಿಶುನಾಳ ಶರೀಫರು, ಅನುಭಾವಿ ಸಾಹಿತಿ ಸರ್ವಜ್ಞ, ಹಾಗೂ ಕಡಕೋಳ ಮಡಿವಾಳಪ್ಪ ಕನಕದಾಸರ ಸಮಕಾಲೀನರಾದ ಪುರಂದರದಾಸರು ಇವರೆಲ್ಲರೊಂದಿಗೆ ಕನಕದಾಸರನ್ನು ಸಾಹಿತ್ಯ, ಧಾರ್ಮಿಕತೆ, ಸಾಮಾಜಿಕತೆ, ವೈಚಾರಿಕತೆ ಪರಿಕಲ್ಪನೆಗಳೊಂದಿಗೆ ಹೋಲಿಸಿ, ಸೈದ್ಧಾಂತಿಕವಾಗಿ ಅಧ್ಯಯನಕ್ಕೆ ಒಳಪಡಿಸಿದ ಅನೇಕ ಕೃತಿಗಳು, ಲೇಖನಗಳು ಪ್ರಕಟವಾಗಿವೆ. ಇವುಗಳನ್ನು ವಿಶ್ಲೇಷಣೆ ಮಾಡಿದಾಗ ಕನಕದಾಸರು ಎಲ್ಲಾ ಸಂತ ಮತ್ತು ಸಮಾಜ ಸುಧಾರಕರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಇದಕ್ಕೆ ಅನೇಕ ಕಾರಣಗಳಿವೆ ಅವುಗಳಲ್ಲಿ ಕೆಲವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿ ವಿಶ್ಲೇಷಣೆಗೆ ಒಳಪಡಿಸಬಹುದು.

ಕನಕದಾಸ ತಳ ಸಮುದಾಯದಿಂದ ಬಂದವನು. ಹಾಗಾಗಿ ತಳಸಮುದಾಯದವದವರು ಹೆಚ್ಚಾಗಿ ಅಪ್ಪಿಕೊಂಡರು. ಸರಳತೆ ಮತ್ತು ಇವರ ಅಭಿವ್ಯಕ್ತಿಯಲ್ಲಿ ಅಡಕವಾಗಿದ್ದ ಸಮಷ್ಠಿತನ ಸೌಹಾರ್ದತೆಯ ಮನೋಭಾವ ಇಂತಹ ಗುಣಗಳನ್ನು ಅವರು ಕರಗತ ಮಾಡಿಕೊಂಡಿದ್ದು ಸಮಾಜವನ್ನು ಬದಲಾಯಿಸಬೇಕು. ಅಂದರೆ ಸಮಾಜವನ್ನು ಸುಸ್ಥಿರವಾದ ಅಭಿವೃದ್ದಿಯ ನೆಲೆಯಲ್ಲಿ ಜೀವಂತಗೊಳಿಸಬೇಕು ಎನ್ನುವ ಆಶಯ ಇಂತಹ ಅನೇಕ ವಾಗ್ವಾದಗಳು ಕನಕರನ್ನು ಪ್ರತ್ಯೇಕವಾಗಿ ನಿಲ್ಲಿಸುತ್ತದೆ.

೬.೧ ಡಾಂಬಿಕತನ

"ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೇ ಪೊಟ್ಟೆಗುಡುಮರೆಲ್ಲಾ ಪರಮ ಭಾಗವತರೇ?"[೧] ಎಂಬ ಕನಕದಾಸರು ಡಾಂಬಿಕ ಪಂಡಿತರ ವಿಡಂಬನೆ ಅತ್ಯಂತ ವ್ಯಂಗವಾದುದು. ಇದನ್ನು ಕಬೀರದಾಸರು ಈ ನೆಲೆಯಲ್ಲಿ ಹೇಳಿದ್ದಾರೆ.

'ಪೋಥಿ ಪಢ ಪಢ ಜಗಮುವಾ ಪಂಡಿತ್ ಹುವಾನ್‌ಕೋಯಿ

ಢಾಯಿ ಅಚ್ಚರ್ ಪ್ರೇಮಕಾ ಪಡ್ಯೆ । ಸೋಪಂಡಿತ್ ಹೋಯಿ'[2]

ಎಂಬ ನುಡಿಯಲ್ಲಿ ಕನಕರ ಭಾವವಿದೆ. ಈ ಇಬ್ಬರಲ್ಲೂ ಸಾಮಾಜಿಕ ಕಳಕಳಿ ಢಾಂಬಿಕ ಬದುಕಿನ ವಿಡಂಬನೆ ಲೋಕದ ಡೊಂಕುಗಳನ್ನೂ ತಿದ್ದುವ ಒಲವು ಸ್ವಸ್ತ ಸಮಾಜವನ್ನು ನಿರ್ಮಿಸುವ ಹಂಬಲವಿದೆ.

ಸರಸ್ವತಿ ದೇವಿಯವರು 'ಕನಕದಾಸರು' ಮತ್ತು 'ತಿರುವಳ್ಳುವರ್' ಎಂಬ ಲೇಖನದಲ್ಲಿ ಡಾಂಬಿಕತೆ, ಕಂದಾಚಾರ, ಮೂಢನಂಬಿಕೆಗಳ ಕುರಿತು ತೌಲನಿಕವಾಗಿ ನೋಡಿದ್ದಾರೆ. ಕನಕ ಮತ್ತು ತಿರುವಳ್ಳುವರ್ ಅವರ ಕಾಲಮಾನ ಬೇರೆ ಬೇರೆಯಾದರೂ ಅವರ ಆಚಾರ, ವಿಚಾರ, ಆಶಯಗಳಲ್ಲಿ ಏಕರೂಪತೆ ಇದೆ. ಇಬ್ಬರು ರಾಜ ಸತ್ತೆಯನ್ನು ಕಂಡವರು, ಡಾಂಬಿಕತೆ ಕಂದಾಚಾರಗಳಂತಹ ಸಾಮಾಜಿಕ ಅನಿಷ್ಠಗಳನ್ನು ಹೊಡೆದೂಡಿಸಲು ನಿರಂತರವಾಗಿ ಶ್ರಮಿಸಿದವರು. ಆ ಕಾರಣಕ್ಕಾಗಿಯೇ ಇವರಲ್ಲಿ ಲೋಕಗ್ರಹಿಕೆ ಮತ್ತು ಲೋಕಜ್ಞಾನ ಒಂದೆಯಾಗಿ ಕಾಣಿಸುತ್ತದೆ.

ಉದಾಹರಣೆ: ಕನಕದಾಸರು ದುರ್ಜನರನ್ನು ಕುರಿತು

"ಅಜ್ಞಾನಿಗಳ ಕೂಡ ಅಧಿಕ ಸ್ನೇಹಿಕ್ಕಿಂತ

ಸುಜ್ಞಾನಿಗಳ ಕೂಡ ಜಗಳವೇ ಲೇಸು"[3] ಎಂದು ಹೇಳಿದ್ದಾರೆ.

ತಿರುವಳ್ಳುವರ್ ಅವರು

'ಸತ್ಸಂಗಕ್ಕಿಂತ ಮಿಗಿಲಾದ ನೆರವು – ಬೇರಿಲ್ಲಾ

ದುಸ್ಸಂಗಕ್ಕಿಂತ ಮಿಗಿಲಾದ ದುಃಖ–ಬೇರಿಲ್ಲಾ'[4] ಎನ್ನುತ್ತಾರೆ ಮೋಸ, ಕಪಟತೆಯನ್ನು ಖಂಡಿಸುವ ವಿಧಾನ ಒಂದೆಯಾಗಿ ಕಾಣಿಸುತ್ತದೆ. ಆದರೆ ಬಳಸಿರುವ ರೂಪಕಗಳು ಬೇರೆ ಬೇರೆ. ಇದು ಪ್ರಾದೇಶಿಕ ಜ್ಞಾನದಿಂದ ಅನಾವರಣಗೊಂಡ ರೂಪಕವಾಗಿದೆ. 'ಜಪವಮಾಡಿದರೇನು ತಪವಮಾಡಿದರೇನು ವಿಪರೀತ ಕಪಟಗುಣ ಕಲುಷವಿದ್ದವರು. ಅದಕ್ಕೆ ಆದಿ ಕೇಶವನನ್ನು ನೆನೆದು ಮುಕ್ತಿ ಹೊಂದಬೇಕೆನ್ನುತ್ತಾರೆ.

ಹೀಗೆ ಕನಕದಾಸ ಮತ್ತು ತಿರುವಳ್ಳುವರ್ ಸಾಮಾಜಿಕ ಕಂದಾಚಾರ, ಡಾಂಬಿಕತೆಯನ್ನು ಕಿತ್ತೊಗೆಯುವುದಕ್ಕಾಗಿ ನಿರಂತರ ಶ್ರಮಿಸಿದರು. ಇಬ್ಬರ ಮಾರ್ಗ ಬೇರೆ ಬೇರೆಯಾದರೂ ಗುರಿ ಮಾತ್ರ ಒಂದೆಯಾಗಿದೆ. ಇದು ಅವರ ಕೃತಿಗಳಿಂದ ಸ್ಪಷ್ಟವಾಗುತ್ತದೆ. ಧರ್ಮ, ಅರ್ಥ, ಕಾಮಗಳ ಬಗೆಗೆ ತಿರುವಳ್ಳುವರ್ ನೀಡಿರುವ ಅರಿವು ವಿಶ್ವಮಾನವಾದರೆ ಕನಕದಾಸ ವಾಙ್ಮಯದ ಮುಖೇನ ಭೋದಿಸಿರುವ ಅರಿವು ಅಷ್ಟೇ ಶ್ರೇಷ್ಟವಾದುದು. ಆದರೆ ಕನಕದಾಸರು ಒಂದಿಷ್ಟು ನಿಷ್ಟುರವಾಗಿ ಹೇಳಿದ್ದಾರೆ ಆ ನಿಷ್ಟುರತೆಯೇ ಉಳಿದ ಸಂತರಿಗಿಂತ ಭಿನ್ನವಾಗಿಸಿದೆ.

ತೇಜಸ್ವಿ ಕಟ್ಟಿಮನಿ ಅವರು 'ಕನಕನದಾಸರು ಮತ್ತು ಕಬೀರದಾಸರು' ಎಂಬ ಲೇಖನದಲ್ಲಿ ಡಾಂಬಿಕತೆಯ ವಿಚಾರವನ್ನು, ಮೂಢನಂಬಿಕೆಯನ್ನು ತೌಲನಿಕರಿಸಿದ್ದಾರೆ. ಇವರಿಬ್ಬರ ಕಾಲಾವಧಿ ಒಂದೇ ಆಗಿದೆ. ಭೌಗೋಳಿಕ ಅಂತರವನ್ನು ದೂರ ಇರಿಸಿತ್ತು. ಆದರೆ ಅವರಿಬ್ಬರ ಯೋಚನಾ ಪದ್ದತಿಯಲ್ಲಿ

ಸಮಾನತೆಯನ್ನು ಕಾಣುತ್ತೇವೆ. ಈ ದೇಶದಲ್ಲಿ ಮೊದಲಿನಿಂದಲೂ ಜೀವಂತವಾಗಿರುವ 'ಸ್ವತಂತ್ರ ಯೋಜನಾ ಸಿದ್ಧಾಂತ' ದ ಮುಂದುವರೆದಿರುವ ಕೊಂಡಿಗಳಾಗಿ ಇವರಿಬ್ಬರು ನಮಗೆ ಗೋಚರಿಸುತ್ತಾರೆ.

ಕಬೀರರು ತಮ್ಮ ದೋಹೆಗಳಲ್ಲಿ ಕೃಷ್ಣರಾಮರನ್ನು ನೆನೆದಿದ್ದರೆ. ಕಬೀರದಾಸರ ರಾಮ 'ನಿರ್ಗುಣ' ನಾಗಿದ್ದ. ಹಿಂದುಗಳ ಕಲ್ಲುದೇವರನ್ನು ಮುಸಲ್ಮಾನರ 'ಬಾಂಗ'ವನ್ನು ಪಂಡಿತರ ಜುಟ್ಟನ್ನು ಮೌಲ್ವಿಗಳ ಗಡ್ಡವನ್ನು ಕಬೀರದಾಸರು ಸಮಾನವಾಗಿ ಟೀಕಿಸಿದ್ದಾರೆ. 'ಜಾತಿ, ಮತ, ಪಂಥವನ್ನು ದಿಕ್ಕರಿಸುತ್ತಾರೆ. ಪರನಾರಿ ಸಂಗವನ್ನು, ಮೂಢನಂಬಿಕೆಯನ್ನು ಖಂಡಿಸಿದ್ದಾರೆ ಎಂಬುದು ಅಧ್ಯಯನಕಾರರ ಸ್ಪಷ್ಟ ನುಡಿ.

'ಪಚ್ಚೆನಾಮವ ಬಳಿದು ಪಾತ್ರ ಕೈಯಲಿ ಪಿಡಿದು
ಗುಟ್ಟಿನಲಿ ಜಪಿಸುವ ಗುರುತರಿಯದ
ಎಟ್ಟಕೂಗನು ಕೂಗಿ ಹೊಟ್ಟೆಯನು ಹೊರೆವಂತ
ಹೊಟ್ಟೆಗುಡುಮಗಳಲ್ಲಿ ಪರಮ ವೈಷ್ಣವರೇ?
ಎಂದು ಕನಕದಾಸರು ವೇಷದಾರಿ ಆಷಾಢಭೂತಿಗಳನ್ನು ಖಂಡಿಸುತ್ತಾರೆ.
ನಾಮವಿಲ್ಲದ ಹೋಮವೇತಕಯ್ಯ।
ರಾಮನಾಮವಿಲ್ಲದ ಮತ್ತೇ ನಮಗೆ ಬೇರೊಂದೆ'[೫]

ಹೀಗೆ ಆಡುನುಡಿಯಲ್ಲಿ ಕಂಡದ್ದನ್ನು ಕಂಡಹಾಗೆ ಹೇಳುವ ಧೈರ್ಯ ಕನಕದಾಸರದ್ದು. ಇವರನ್ನು ಹೊರತುಪಡಿಸಿದರೆ, ಯಾವ ದಾಸರಿಗೂ ಇರಲಿಲ್ಲ. ಇಬ್ಬರಿಗೂ ಭಗವತ್ ಪ್ರೇಮವೇ ಸರ್ವಸ್ವ ವೇದದಲ್ಲಿ ಶಾಸ್ತ್ರ ಪುರಾಣದಲ್ಲಿ ಜಪಮಾಲೆಯಲ್ಲಿ ತಸಬೀ ಅಲ್ಲ, ಮಂದಿರ, ಮಸೀದಿ ಅಲ್ಲ, ನಬೀಯಲ್ಲ, ಪೀರನಲ್ಲ, ಪೈಗಂಬರನಲ್ಲಿ ಈ ಪ್ರೇಮವು ಸಮಸ್ತ ಬಾಹ್ಯಾಚಾರಗಳ ಮಟ್ಟವನ್ನು ಮೀರಿ ಸಮಸ್ತ ಸಂಸ್ಕಾರಗಳ ಪರಿಧಿಯನ್ನು ದಾಟಿ ಜೀವನದ ನಿಜವಾದ ಅಭೇದ್ಯ ಸತ್ಯದಲ್ಲಿ ಅಡಗಿದೆ.

ಡಾಂಬಿಕತನದ ವಿಶ್ಲೇಷಣೆ

ಪ್ರಾಚೀನ ಕಾಲದಿಂದಲೂ ಇಂದಿಗೂ ಸಾಮಾನ್ಯಜನರಿಂದ ಮೇಲ್ವರ್ಗದವರಲ್ಲೂ ಈ ಡಾಂಬಿಕತೆ ಬೆಳೆದು ಬಂದಿದೆ. ವಿಶೇಷವಾಗಿ ರಾಜಕೀಯ ಎಲ್ಲ ಧರ್ಮದಲ್ಲೂ ಇದು ಭಿನ್ನ ಬಗೆಯಲ್ಲಿ ಬೆಳೆದುಕೊಂಡು ಬಂದಿದೆ. ಸಾಹಿತ್ಯವು ಜನಜೀವನದ ಪ್ರತಿಬಿಂಬ. ಅದರ ಎಲ್ಲ ಚಟುವಟಿಕೆಗಳ ಮೊತ್ತ ಎನ್ನಬಹುದು. ಹೀಗಾಗಿ ಜನಸಮುದಾಯದ ಒಳಗೆ ಇದ್ದ ಕನಕದಾಸರು ಅಂದಿನ ಜಿಡ್ಡುಗಟ್ಟಿದ ಸಮಾಜದ ಚಿತ್ರಣಗಳನ್ನು ಸೆರೆ ಹಿಡಿದು ಅಲ್ಲಿರುವ ಬದುಕಿನ ಆಚರಣೆಗಳ ದಿನಂಪ್ರತಿ ಸಮಸ್ತ ವ್ಯಾಪಾರಗಳನ್ನು ತಮ್ಮ ಕೀರ್ತನೆ, ಕಾವ್ಯಗಳಿಗೆ ಆಕರವನ್ನಾಗಿ ಮಾಡಿಕೊಂಡು, ಪದ ಹೆಣೆಯುವ ಚತುರತೆ ತೋರಿದ್ದಾರೆ. ತಾವು ಕಂಡ ನೋವು ಅನುಭವಗಳನ್ನು ಧಾರೆಗಳಾಗಿ ಹರಿದು ಕೃತಿ, ಕೀರ್ತನೆ ರಚಿಸಿರುವುದನ್ನು ಕಾಣುತ್ತೇವೆ. ವಸ್ತುವೈವಿಧ್ಯಕ್ಕೆ ಹೊಸ ಒಳನೋಟಗಳಿಗೆ ತಮ್ಮ ಸಾಮರ್ಥ್ಯದಿಂದ ರಚಿಸಿದ ಸಾಹಿತ್ಯವು ಸಮುದಾಯದ ಕನ್ನಡಿಯಂತಿದೆ.

ಇಲ್ಲಿ ಸಮಾಜದಲ್ಲಿರುವ ಅಂಕುಡೊಂಕು, ಡಾಂಬಿಕತೆ ಒಂದೆಡೆಯಾದರೆ ಕನಕದಾಸರಲ್ಲಿರುವ ಪ್ರತಿಭೆ, ಪಾಂಡಿತ್ಯಪೂರ್ಣ ವಿದ್ವತ್ತು ಒಂದೆಡೆಯಾಗಿದೆ. ಸಾಹಿತ್ಯ ಕೃಷಿಗೆ ಪೂರಕವಾಗಿರುವ, ಆಷಾಢಭೂತಿತನ, ಬೂಟಾಟಿಕೆ, ಡಾಂಬಿಕತೆ, ಕಪಟಭಕ್ತಿ ಎಂಬ ವಿಷಯಗಳ ಬಗೆಗೆ ಕನಕದಾಸರಿಗೆ ತೀವ್ರ ಅಸಮಾಧಾನವಿದೆ. ಡಾಂಬಿಕವಾದ ಇಂತಹ ಜನರನ್ನು, ಸಮಾಜವನ್ನು ತಿದ್ದುವ ಪ್ರಕ್ರಿಯೇ ಅಖಂಡವಾಗಿ ನಡೆದು ಬಂದಿದೆ.

ಹರಿಲಾಲ್ ಪವಾರ ಅವರು ಕನಕದಾಸ ಮತ್ತು ಕಬೀರರು ಎಂಬ ಲೇಖನದಲ್ಲಿ ಈ ಡಾಂಬಿಕತನವನ್ನು ತೌಲಿನಿಕರಿಸಿದ್ದಾರೆ ಅದರಲ್ಲಿ 'ತೀರ್ಥವನು ಪಡಿದವರೆಲ್ಲಾ ತಿರುನಾಮಧಾರಿಗಳೇ? ಎಂದು ಪ್ರಶ್ನಿಸಿ ಪೊಟ್ಟೆಗುಡುಮರೆಲ್ಲಾ ಪರಮ ಭಾಗವತರೇ?[೬] ಇಲ್ಲಿ ಪಂಡಿತನ ವಿಡಂಬನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಕಬೀರದಾಸರು 'ಪೋಥಿ ಪಢ ಪಥ ಜಗಮುವಾ ಪಂಡಿತ ಹುವಾನ್ ಕೋಯಿ'[೭] ಎಂದು ಹೇಳಿ ಸಾಮಾಜಿಕ ಕಳಕಳಿಯನ್ನು ಹೊಂದಬೇಕೆಂದು. ಇಲ್ಲಿ ಆಚರಣೆಗಳು ಡಾಂಬಿಕವಾಗಿದ್ದು ಅದನ್ನು ಕಿತ್ತೊಗೆಯಲು, ಅನುಸರಿಸಿದ ಮಾರ್ಗ ಅನನ್ಯವಾಗಿದೆ.

ಸರಸ್ವತಿದೇವಿ ಭಗವತಿಯವರು 'ಕನಕದಾಸ ಮತ್ತು ತಿರುವಳ್ಳವರ್ ಎನ್ನುವ ಲೇಖನದಲ್ಲಿ ಇವರಿಬ್ಬರ ಕಾಲ ಬೇರೆಯಾದರೂ ಅಭಿವ್ಯಕ್ತಿ ವಿಚಾರಗಳ ಆಶಯಗಳಲ್ಲಿ ಏಕರೂಪತೆ ಇದೆ ಎಂದು ಹೇಳಿದ್ದಾರೆ. ಕನಕದಾಸರು ಅನಿಷ್ಟಗಳನ್ನು ಓಡಿಸಲು ದುರ್ಜನರನ್ನು ಕುರಿತು 'ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡ ಜಗಳವೇ ಲೇಸು' ಎಂದು ಹೇಳಿದರೆ, ತಿರುವಳ್ಳುವರ್ 'ಸತ್ಸಂಗಕ್ಕಿಂತ ಮಿಗಿಲಾದ ನೆರವು ಬೇರಿಲ್ಲಾ, ಎಂದಿದ್ದಾರೆ ಆ ಮೂಲಕ ಮೋಸ, ಕಪಟತೆಯನ್ನು ಖಂಡಿಸಿದ್ದಾರೆ. ಕನಕರು ಜಪವಮಾಡಿದರೇನು ತಪವಮಾಡಿದರೇನು ವಿಪರಿತ ಕಪಟಗುಣ ಕಲುಷವಿದ್ದವರು. ಹೀಗೆ ಅವರ ಮಾತುಗಳನ್ನು ಉಲ್ಲೇಖಿಸುತ್ತಾ ಸಾಮಾಜಿಕ ವಿರೋಧಿ ಅಥವಾ ಅನೈತಿಕತಯನ್ನು ವಿರೋಧಿಸಿದರು ಎನ್ನುವುದನ್ನು ವಿವಿಧ ಆಯಾಮಗಳಲ್ಲಿ ವಿಶ್ಲೇಷಿಸಿದ್ದಾರೆ. ಇದರೊಂದಿಗೆ ಕನಕ, ತಿರುವಳ್ಳುವರು ಸಮಾಜದಲ್ಲಿರುವ ಡಂಬಾಚಾರ ಕಿತ್ತೊಗೆಯಲು ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದರು ಎನ್ನುವುದು ಸತ್ಯವಾಗಿದೆ.

ತೇಜಸ್ವಿ ಕಟ್ಟಿಮನಿಯವರು 'ಕನಕನದಾಸರು ಮತ್ತು ಕಬೀರರ, ಕುರಿತು ಬರೆದ ಲೇಖನದಲ್ಲಿ ಡಾಂಬಿಕತೆ, ಮೂಢನಂಬಿಕೆ ಒಂದೇ ನಾಣ್ಯದ ಎರಡು ಮುಖ ಎಂಬಂತೆ ವಿವರಿಸಿದ್ದಾರೆ. ಕಬೀರರು ತಮ್ಮ ದೋಹೆಗಳಲ್ಲಿ ಹಿಂದುಗಳ, ಕಲ್ಲುದೇವರನ್ನು ಮುಸಲ್ಮಾನರರ ಬಾಂಗನ್ನು, ಪಂಡಿತರ ಜುಟ್ಟನ್ನು ಮತ್ತು ಮೌಲ್ವಿಗಳ ಗಡ್ಡವನ್ನು, ಕಬೀರರು ತೀವ್ರವಾಗಿ ಟೀಕಿಸಿದ್ದಾರೆ. ಅದರಂತೆ, 'ನಾಮವಿಲ್ಲದ ಹೋಮವೇತಕಯ್ಯ ರಾಮನಾಮವಿಲ್ಲದ ಮಾತೆ ನಮಗೆ ಬೇರೊಂದ್' ಹೀಗೆ ಆಡುನುಡಿಯಲ್ಲಿ ಕನಕರು ಹೇಳಿದ್ದಾರೆ. ಇದು ಸರಿಯಾದ ಗ್ರಹಿಕೆ ಆಗಿದೆ. ಇದು ಅಲ್ಲದೆ ಕನಕದಾಸರು ತಮ್ಮ ಜೀವನವನ್ನೇ ಸಮುದಾಯಕ್ಕೆ ಅರ್ಪಿಸಿದವರು. ಈ ಮೂಢನಂಬಿಕೆ ಡಾಂಬಿಕತೆ ಹೊಡೆದೋಡಿಸಿದಾಗ ಮಾತ್ರ ಸಮಾಜ

ಸ್ವಚ್ಛವಾಗುತ್ತದೆ. ಇಲ್ಲದಿದ್ದರೆ ಅಲ್ಲಿ ಅಸಮಾನತೆ, ಅಸ್ಪೃಶ್ಯತೆ ನಿರಂತರವಾಗಿರುತ್ತದೆ ಎನ್ನುವ ವಾಗ್ವಾದ ಇವರದು. ಈ ಗ್ರಹಿಕೆ ಸ್ತುತ್ಯಾರ್ಹವಾಗಿದೆ.

ಹೇಗಾದರೂ ಸರಿಯೇ ಹಣಗಳಿಸಿ ಮೇಲುಗೈ ಸಾಧಿಸಬೇಕೆಂಬ ಮಹದಾಸೆಯಿಂದ ಹೋರಾಡುವ ಜನರನ್ನು ಕಂಡೆ ದಾಸರು 'ತಾಳುವಿಕೆಗಿಂತ ತಪ ಇನ್ನಿಲ್ಲ' ಎಂದಿದ್ದಾರೆ ೧೨ನೇ ಶತಮಾನದ ವಚನಕಾರರು ೧೫ನೇ ಶತಮಾನದ ಈ ಹರಿದಾಸ ಪರಂಪರೆ ಮತ್ತು ಕನಕದಾಸರು ಡಾಂಬಿಕರನ್ನು ಖಂಡಿಸಿ ಬಯಲಿಗೆಳೆದಿದ್ದಾರೆ. ನಡೆನುಡಿಗಳಲ್ಲಿ ಮಹತ್ತರ ಅಂತರವಿರುವ ಇವರನ್ನು ಕಂಡೆ ನುಡಿಯೊಳಗಾಗಿ ನಡೆಯದಿದ್ದರೆ ಎನ್ನುತ್ತಾರೆ.

ಬಸವಣ್ಣನವರು ಇದಕ್ಕೆ ಹೊರತಾಗಿಲ್ಲ ಮುಖವಾಡಧರಿಸಿ ಹುಸಿ ಭಕ್ತಿ ಮೆರೆಯುವ ಲಂಪಟರನ್ನು ಬಸವಣ್ಣನವರು ಖಂಡಿಸಿದ್ದಾರೆ.

'ಎಣಿಸುತಿರ್ಪುದು ಬಾಯಿ ಪೊಣರುತಿರ್ಪುದು
ಬೆರಳು ಕ್ಷಣಕೊಮ್ಮೆ ಒಂದನೆಣಿಸುವನ ಜಪಕೊಂದ
ಕುಣಿಕೆ ಯುಂದೆಂದ ಸರ್ವಜ್ಞ'[೮]

ಎಲ್ಲ ಸಂತರು ಸಮಾಜ ಸುಧಾರಕರು, ಡಾಬಿಂಕತೆಯನ್ನು ಖಂಡಿಸಿದ್ದಾರೆ ಕುಟಿಲತೆ, ಕಪಟತನ, ಕೋಪ, ಘಾತಕತನ ಇತ್ಯಾದಿ ರೂಢಮೂಲವಾಗಿರುವ ಆಂತರಿಕ ಸ್ವಭಾವವಿಲ್ಲದ ಮಾತು ಅದಕ್ಕೆ ವ್ಯಕ್ತಿ ಸಮುದಾಯಕ್ಕೆ ಸಚಾರಿತ್ರ್ಯ, ಸಂಸ್ಕಾರ, ದೈವನಿಷ್ಠೆಗಳು ಪಾರಂಪಾರಿಕ ನೆಲೆಗಲ್ಲಿ ಬಂದಿರಬೇಕು. ಇಲ್ಲದಿದ್ದರೆ ಪ್ರಾಮಾಣಿಕವಾಗಿ ಅವುಗಳನ್ನು ಅನುಸರಿಸಬೇಕು. ನಿರಂತರ ಅಭ್ಯಾಸ ಮತ್ತು ಮನೋಬಲಗಳಿಂದಾಗಿ ಅಂಥಸಿದ್ದಿಯನ್ನು ಸಾಧಿಸುವುದು ಕಠಿಣವೇ ಸರಿ ಆದರೂ ಅದು ಮುಕ್ತಿಗೆ ಸೋಪಾನವಾಗಿದೆ. ಎನ್ನುವುದು ಈ ಸಂತರ ಆಲೋಚನೆ.

ಹೀಗೆ ಕೀರ್ತನೆಗಳ ಮೂಲಕ ಡಾಂಬಿಕವಾಗಿರುವ ಭಕ್ತಿಯ, ಕಂದಾಚಾರಗಳನ್ನು ಕಿತ್ತೊಗೆಯಲು ಪ್ರಯತ್ನಿಸಿದ್ದಾರೆ. ಸ್ವಾಸ್ಥ್ಯ ಬದುಕು ಕಟ್ಟಿಕೊಳ್ಳಲು ಪ್ರಾಮಾಣಿಕವಾಗಿ ಇದ್ದಾಗ ಮಾತ್ರ ಸಮುದಾಯ, ಸರಿಯಾದ ನೆಲೆಯಲ್ಲಿ ಬಾಳಲು ಸಾಧ್ಯ. ಈ ಡಾಂಬಿಕತೆಯಿಂದ ಸಮುದಾಯವು ಭಿನ್ನ ನೆಲೆಗಳಲ್ಲಿ, ಪಲ್ಲಟಕ್ಕೆ ಒಳಗಾಗುವುದನ್ನು ಕಾಣುತ್ತೇವೆ. ಕಾರಣ ದಾಸರು, ಸಮಾಜಸುಧಾರಕರು ಈ ದೃಷ್ಟಿಕೋನದಲ್ಲಿ ೧೨ ಹಾಗೂ ೧೫ನೇ ಶತಮಾನದಲ್ಲಿ ಅವಿರತವಾಗಿ ಮಾಡಿದ ಶ್ರಮ ಸಾರ್ಥಕವಾಗಿದೆ.

೬.೨ ಅಧ್ಯಯನಕಾರರಲ್ಲಿ ಕುಲದ ವಿಭಿನ್ನ ಪರಿಕಲ್ಪನೆಯ ಪ್ರವೃತ್ತಿಗಳು

ಕುಲ ಎನ್ನುವ ಪರಿಕಲ್ಪನೆಯ ಮೇಲೆ ಆಧುನಿಕವಾದ ಆಲೋಚನೆಗಳು ಭಿನ್ನವಾದ ದೃಷ್ಟಿಕೋನದಲ್ಲಿ ಚರ್ಚೆಗೆ ಒಳಪಡುತ್ತಿವೆ. ಹಲವಾರು ವಿದ್ವಾಂಸರು, ಹಲವು ದೃಷ್ಟಿಕೋನದಲ್ಲಿ ಅಧ್ಯಯನಕಾರರು ಕನಕದಾಸರನ್ನು ಅವರ ಸಾಹಿತ್ಯದ ಆಕರಗಳನ್ನು ಬಳಸಿ ಬೇರೆ ಬೇರೆ ಸಂತರು

ಸಮಾಜಸುಧಾರಕರೊಂದಿಗೆ ತೌಲನಿಕ ಅಧ್ಯಯನಗಳನ್ನು ಮಾಡಿದ್ದಾರೆ. ಈ ಕುಲದ ಪರಿಕಲ್ಪನೆಯ ಅಧ್ಯಯನಗಳನ್ನು ಅಧ್ಯಯನ ಮತ್ತು ಆಲೋಚನೆಗೆ ಒಳಪಡಿಸಿದಾಗ ಹಲವು ಅಂಶಗಳನ್ನು ಕಾಣುತ್ತೇವೆ.

ಹರಿಲಾಲ್ ಪವಾರ್ ಅವರು 'ಕನಕದಾಸರು ಮತ್ತು ಕಬೀರದಾಸರು' ಎಂಬ ಲೇಖನದಲ್ಲಿ ಕುಲದ ಕುರಿತು ಹೀಗೆ ಹೇಳುತ್ತಾರೆ; ಹಿಂದೂ ಮತ್ತು ಮುಸ್ಲಿಂ ಧರ್ಮದ ಸೇತುವೆಯಾಗಿ ಕಬೀರರ 'ದೋಹೆ'ಗಳಲ್ಲಿ ಈ ಎರಡು ಧರ್ಮಗಳಿಂದ ಮತ್ತು ನಾಥಪಂಥದ ಸಹಯೋಗದಿಂದ ಹೊಸದೊಂದು, ರೀತಿಯ ಅಧ್ಯಾತ್ಮಿಕ ಮಾರ್ಗ ಮತ್ತು ಭೌತಿಕ ಬದುಕಿನ ಚಿಂತನೆಗಳು ಒಡಮೂಡಿವೆ. ಆದರೆ ಈ ಪರಿಕಲ್ಪನೆಯನ್ನು ಮಂಡಿಸುವ ವಿಚಾರದಲ್ಲಿ ಕನಕ ಮತ್ತು ಕಬೀರರಲ್ಲಿ ಸಮಾನವಾದ ಅಂಶಗಳು ಇವೆ ಅನ್ನುವುದು ಇವರ ವಾಗ್ವಾದ ಅದರ ಬಳಕೆಯನ್ನು ಈ ಕೆಳಗಿನಂತೆ ಗುರುತಿಸಿದ್ದಾರೆ.

ಕನಕರು **'ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ?'** ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ ಎಂದು ಕೇಳುವುದನ್ನು ಕಬೀರರು **'ಸಾಧುವಿನ ಜಾತಿಕೇಳಬೇಡಿ ಅವರ ಜ್ಞಾನವನ್ನುಕೇಳಿರಿ ಖಡ್ಗದ ಬೆಲೆಕಟ್ಟಿ ಅದರ ಒರೆಯನ್ನಲ್ಲ'** ಎಂದಿದ್ದಾರೆ. ಇಲ್ಲಿ ಕುಲದ ಪ್ರಶ್ನೆಯನ್ನು ಕೇಳಿರುವುದು ವಿಭಿನ್ನ, ಅಂದರೆ ಕನಕದಾಸರು ಜನರನ್ನು ಕುಲದ ಪ್ರಶ್ನೆ ಕೇಳಿದರೆ ಕಬೀರರು ಸಾಧುಗಳನ್ನು ಕುರಿತು ಕೇಳಿದ್ದಾರೆ. ಒಂದು ಜನಕೇಂದ್ರೀತ ಕುಲದ ವಾಗ್ವಾದ ಇನ್ನೊಂದು "ಸಾಧು ಕೇಂದ್ರೀತ ಕುಲದ ವಾಗ್ವಾದ" ಆದರೆ ಇದರ ಭಾವನೆಯಲ್ಲಿ ಒಂದೇ ಅಂಶವನ್ನು ಕಾಣುತ್ತೇವೆ. ಕನಕರಿಗಿಂತ ಕಬೀರರ ಭಾಷೆ ಸರಳವಾದುದು ಎಂದು ಹೇಳಿರುವರು. ಇವರು ಕನಕ ಕಬೀರರ ಕುಲದ ಕುರಿತಾದ ಅಭಿಪ್ರಾಯಗಳನ್ನು ಸಂಗ್ರಹಿಸಿ ಸಾಮ್ಯತೆಯನ್ನು ಮಾತ್ರ ಹೇಳಿದ್ದಾರೆ. ಕುಲದ ನೆಲೆ ಅದರ ಆಚೆಗಿನ ತಾತ್ವಿಕತೆಯ ನೆಲೆಗಳ ಕುರಿತು ಅಭಿಪ್ರಾಯ ಹೇಳಿರುವುದಿಲ್ಲ.

ಬಿ.ವ್ಹಿ. ಶಿರೂರ ಅವರ 'ಕನಕದಾಸರು ಮತ್ತು ಬಸವೇಶ್ವರರು' ಎಂಬ ಲೇಖನದಲ್ಲಿ ಕುಲವನ್ನು ಕುರಿತು ಚರ್ಚಿಸುತ್ತಾ, ಇವರಿಬ್ಬರಿಗೂ ಕುಲ ಅತಿಯಾಗಿ ಕಾಡಿದೆ. ಇದು ಸಮಾಜಕ್ಕೆ ಅನಿಷ್ಟವೆಂಬಂತೆ ಅಂಟಿಕೊಂಡಿರುವುದನ್ನು ಬೇರು ಸಮೇತ ಕಿತ್ತು ಹಾಕಲು ಪ್ರಯತ್ನಿಸಿದರು. ಅದರಲ್ಲಿ ಕನಕದಾಸರು ಉಚ್ಚಕುಲದವರ ಕಾಕ ದೃಷ್ಟಿಗೆ ಸಿಲುಕಿ ನೊಂದು-ಬೆಂದು 'ಕುಲಕುಲವೆಂದು ಹೊಡೆದಾಡಿದಿರಿ ನಿಮ್ಮ ಕುಲದ ನೆಲೆಯನೇನಾದರೂ ನೀವು ಬಲ್ಲಿರಾ..... 'ಆತ್ಮ ಯಾವ ಕುಲ, ಜೀವ ಯಾವ ಕುಲ, ತತ್ವೇಂದ್ರಿಯ ಕುಲ ಪೇಳಿರಯ್ಯಾ। ಅಂತರಾತ್ಮ ನೆಲೆಯಾದಿಕೇಶವನೊಲಿದ ಮೇಲೆ ಇನ್ಯಾತರ ಕುಲವಯ್ಯಾ' ಎನ್ನುವುದರ ಮುಖಾಂತರ ಬಹು ಮಾರ್ಮಿಕವಾಗಿ ಖಂಡಿಸಿದ್ದಾರೆ.

ಆದರೆ ಬಸವಣ್ಣ ಮೇಲ್ಜಾತಿಯಲ್ಲಿ ಹುಟ್ಟಿದರು ಕೆಳಜಾತಿಯವರನ್ನು ಮೇಲೆತ್ತಲು ಪ್ರಯತ್ನಿಸಿದ. ಅದಕ್ಕಾಗಿಯೆ 'ಹೊಲೆಯ ಹೊಲಬಿಗನಾದೊಡೆ ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯ. ಹೊಬುಗೆಡೆದೆ ಲಿಂಗ ಶರಣೆನ್ನಿರಯ್ಯ ಹೊಲಬುಗೆಡದೆ ಶಿವಶರಣೆನ್ನಿರಯ್ಯ ನಮ್ಮ ಕೂಡಲ ಸಂಗನ ಮಹಾಮನೆಯ ಮಾದರ ಚೆನ್ನಯ್ಯನ ಹೊಲಬಿಗನಯ್ಯ' ಜಾತಿ.... ವಿಜಾತಿಯಾದಡೇನು ಅಜಾತಂಗೆ ಶರಣೆನ್ನದವನು. ಆತನೆ ಹೊಲೆಯಕ್ಕೂ ಮುಂದೆ ಬಸವಣ್ಣ ತನ್ನನ್ನು ತಾನೇ ಮಾದರಚೆನ್ನಯ್ಯನ ಮಗ

ನಾನಯ್ಯ ಎಂದಿದ್ದಾನೆ. ಅದನ್ನೆ ಕನಕದಾಸರು 'ದಾಸದಾಸರ ಮನೆಯ ದಾಸಿಯರ ಮಗನಾನು' ಎಂದು ಹೇಳಿದ್ದು ಜಾತಿಬಗೆಯ ಕಾಳಜಿಯನ್ನು ತೋರಿಸುತ್ತದೆ. ಬಸವಣ್ಣ ಮತ್ತು ಕನಕದಾಸರ ವಿಚಾರಧಾರೆಗಳು ಸಾಕಷ್ಟು ಸಾಮ್ಯ ಕಂಡುಬಂದರೂ ಬಸವಣ್ಣ ಕಾರ್ಯರೂಪಕ್ಕೆ ಇಳಿಸಿದಂತ ಕನಕ ಇಳಿದದ್ದು ಕಂಡು ಬರುವುದಿಲ್ಲ."[೧೦] ಕೇವಲ ಜಾತಿ ಆಧಾರವಾಗಿ ಹೋಲಿಕೆಯನ್ನು ಮಾಡಿರುವರು. ಇಲ್ಲಿ ಕನಕರಿಗಿಂತ ಬಸವಶ್ರೇಷ್ಠ ಅವನು ಸಮುದಾಯಿಕವಾಗಿ ತೊಡಗಿಕೊಂಡ ಬಗೆ ಹೇಳಿ ಕನಕದಾಸರ ಸಮಗ್ರವಾದ ವಿವೇಚನೆ ಕೈಬಿಟ್ಟಿರುವರು.

ಸಾಮಾಜಿಕ ಅಸಮಾನತೆ, ಕುಲ, ಜಾತಿ, ಕುರಿತು ವಿಶ್ಲೇಷಣೆ

ಅನಾದಿಕಾಲದಿಂದಲೂ ಜಾತಿಯತೆ, ಜನರನ್ನು ತೀವ್ರವಾಗಿ ಕಾಡುತ್ತಲೇ ಬಂದಿದೆ. ಶಂಕರ, ರಾಮಾನುಜರು, ಬಸವಣ್ಣ, ಮದ್ವಾಚಾರ್ಯರು, ಗಾಂಧೀಜಿ, ಬಿ. ಅರ್. ಅಂಬೇಡ್ಕರರು ಈ ಎಲ್ಲರೂ ಜಾತಿಯ ಪಿಡುಗನ್ನು ಹೊಡೆದೋಡಿಸುವ ಪ್ರಯತ್ನವನ್ನು ತಮ್ಮ ತಮ್ಮ ಮಿತಿಯಲ್ಲಿ ಮಾಡಿದರೂ ಅದು ಮತ್ತೆ ಮತ್ತೆ ತಲೆಎತ್ತುತ್ತಲೇ ಇದೆ. ವ್ಯಾಸರಾಯರು ತಮ್ಮ ಶಿಷ್ಯವರ್ಗಕ್ಕೆ ಕನಕದಾಸರನ್ನೂ ಸೇರಿಸಿಕೊಂಡಾಗ, ಕುಲೀನರೆನ್ನಿಸಿಕೊಂಡವರು ಪ್ರತಿಭಟಿಸಿದರು. ವ್ಯಾಸರಾಯರು, ಕನಕದಾಸರು ವ್ಯಕ್ತಿತ್ವದ ಶ್ರೇಷ್ಠತೆಯನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟು ತಮ್ಮ ಕುಲೀನ ಶಿಷ್ಯರಬಾಯಿ ಮುಚ್ಚಿಸಬೇಕಾಯಿತು. 'ಕುಲ' ಎನ್ನುವ ಪರಿಕಲ್ಪನೆಯನ್ನು ಶೋಧಿಸಿ ಅದರ ನಿಜವಾದ ಅರ್ಥವನ್ನು ಜನರಿಗೆ ತಿಳಿಸುವ ಕೆಲಸವನ್ನು ಮಾಡಬೇಕಾದ ಅನಿವಾರ್ಯ ಸ್ಥಿತಿ ಶಿವಶರಣರ ಕಾಲದಲ್ಲಿ ಇದ್ದಂತೆ ಹರಿದಾಸರ ಕಾಲದಲ್ಲಿಯೂ ಇತ್ತು. ಅನ್ನುವುದನ್ನು ಹಲವಾರು ಜನ ವಿದ್ವಾಂಸರು, ಅಧ್ಯಯನಕಾರರು ಸೈದ್ಧಾಂತಿಕವಾಗಿ ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ ಈ ತರಹದ ವಿಶ್ಲೇಷಣೆಗಾಗಿ ಬಳಸಿಕೊಳ್ಳುವ ಅಭಿವ್ಯಕ್ತಿ ಸಾಲುಗಳು ಇಂತಿವೆ. ಉದಾಹರಣೆ

ಪುರಂದರದಾಸರು ಕುಲದ ವಿಡಂಬನೆಯನ್ನು ಈ ರೀತಿಯಾಗಿ ಅನಾವರಣ ಮಾಡಿದ್ದಾರೆ.

'ಹೊಲಯ ಬಂದನೆಂದು ಒಳಗೆ ದೇವರಮಾಡಿ
ಗಣ ಗಣ ಗಂಟೆ ಬಾರಿಸುವರಯ್ಯಾ
ತನಿವಿನ ಕೋಪವು ಹೊಲೆಯಲ್ಲವೇ?
ಪರಧನ ಪರಸತಿ ಹೊಲೆಯಲ್ಲವೇ?
ಇದಕೇನೋ ಮುದ್ದು ಪುರಂದರ ವಿಠ್ಠಲ'

ಎಂದು ಮಡಿವಂತರೆನಿಸಿಕೊಂಡವರ ಮನಸ್ಸನ್ನು ಚುಚ್ಚಿ, ಜಾತಿ ತತ್ವವನ್ನು ಕುರಿತು ಮರುಚಿಂತನೆ ನಡೆಸುವಂತೆ ಮಾಡಿದ್ದಾರೆ. ಹುಟ್ಟಿನಿಂದ ಮೇಲ್ವರ್ಗಕ್ಕೆ ಸೇರಿದ ವ್ಯಾಸರಾಯರಾಗಲಿ, ಪುರಂದರದಾಸರಾಗಲಿ, ಜಾತಿ ಪದ್ದತಿಯಿಂದಾಗುವ ನೋವಿನ ಅನುಭವವನ್ನು ನೇರವಾಗಿ

ಒಡ್ಡಿಕೊಂಡವರು ಕನಕದಾಸರು ಪ್ರಮುಖರಾಗುತ್ತಾರೆ. ಏಕೆಂದರೆ ಅವರ ಅಭಿವ್ಯಕ್ತಿ ಪರಿಕಲ್ಪನೆಗಳು ವಿಭಿನ್ನವಾಗಿವೆ ಇದಕ್ಕೆ ಅವರು ಅನುಭವಿಸಿದ ನೋವೆ ಮುಖ್ಯ ಕಾರಣ ಅದು ಇಂತಿದೆ.

'ಕುಲ ಕುಲ ಕುಲವೆನ್ನುತಿಹರೊ
ಕುಲವ್ಯಾವುದು ಸತ್ಯ, ಸುಖವುಳ್ಳ ಜನರಿಗೆ[೧೧]

ಶ್ರೇಷ್ಠತೆ ಬರುವುದು ಹುಟ್ಟಿದ ಕುಲದಿಂದಲ್ಲ ಅಂತಃ ಸತ್ವದಿಂದ ಆಚಾರದಿಂದ ಎಂಬುದನ್ನು ಸಮರ್ಥಿಸುತ್ತಾರೆ. ಶ್ರೇಷ್ಠ ಮತ್ತು ಕನಿಷ್ಠ ಎನ್ನುವ ತಾರತಮ್ಯತೆಯನ್ನು ಹೊಡೆದು ಹಾಕುವುದಕ್ಕೆ ಪ್ರಯತ್ನಿಸಿದರು ಅದರಲ್ಲೂ ಸಮಾನತೆಯ ನೆಲೆಯಲ್ಲಿ ಶ್ರೇಷ್ಠತೆಯನ್ನು ಸಾರುವುದಕ್ಕೆ ಹಂಬಲಿಸಿದವರು. ಇವರು ಈ ಪ್ರತಿಪಾದನೆ ಇವರನ್ನು ಉಳಿದ ದಾಸರಿಗಿಂತ ಭಿನ್ನವಾಗಿ ನಿಲ್ಲಿಸಿದೆ. ಉದಾಹರಣೆಗೆ ಈ ಕೆಳಗಿನ ಪದ್ಯ ಗಮನಿಸಬೇಕು.

'ಆತ್ಮ ಆವ ಕುಲ ಜೀವ ಆವ ಕುಲ
ತತ್ವೇಂದ್ರಿಯ ಕುಲ ಪೇಳಿರಯ್ಯಾ
ಆತ್ಮಂತರಾತ್ಮ ಆದಿ ಕೇಶವನೊಲಿದ ಮೇಲೆ
ಇನ್ಯಾತರ ಕುಲವಯ್ಯಾ [೧೨]

ಎನ್ನುವುದನ್ನು ಅದ್ಯಯನಕಾರರು ಮುಖ್ಯ ಆಕರವಾಗಿ ಬಳಸಿಕೊಂಡಿದ್ದಾರೆ. ಏಕೆಂದರೆ ಇಲ್ಲಿನ ವಾಗ್ವಾದ 'ಅಂತರಾತ್ಮ'ವನ್ನು ಪರೀಕ್ಷೆಗೆ ಒಡ್ಡಿಸುತ್ತದೆ. ಮನುಷ್ಯನ ಬದುಕಿನ ಅಂತರಾತ್ಮದ ಬದುಕೇ ಮುಖ್ಯ ಹೊರತು 'ಬಾಹ್ಯಾತ್ಮ' ಅಲ್ಲ ಹಾಗಾಗಿಯೇ ಅಧ್ಯಯನಕಾರರಿಗೆ ಈ ಪರಿಕಲ್ಪನೆ ಮುಖ್ಯವಾಗುತ್ತದೆ.

ಜಿ.ಜಿ. ಮಂಜುನಾಥ ಅವರು 'ಕನಕ ಮತ್ತು ಪುರಂದರ ಕೀರ್ತನೆಗಳು' ಎನ್ನುವ ಲೇಖನದಲ್ಲಿ ಮಡಿ ಮತ್ತು ಕುಲಗಳು ವ್ಯಕ್ತಿಗತವಾಗಿರುತ್ತವೆಯೊ ಹೊರತು ಬೇರಲ್ಲ ಎನ್ನುವ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಈ ಸಾಲುಗಳನ್ನು ಉಲ್ಲೇಖವಾಗಿ ಬಳಸಿಕೊಂಡಿರುವುದು ಸೈದ್ಧಾಂತಿಕ ಗ್ರಹಿಕೆಯಲ್ಲಿ ಕಾಣಿಸುತ್ತದೆ ಇವರದು.

'ಮಡಿ ಮಡಿಯೆಂದು ಮುಮ್ಮಾರು ಹಾರುವ
ಮಡಿಯಲ್ಲಿ ಬಂದಿತೊ ಬಿಕನಾಶಿ ॥ ಪ ॥
ಮಡಿಯು ನಿನೇ – ಮೈಲಿಗೆಯೂ ನೀನೆ
ಸುಡಲಿ ನಿನ್ನ ಮಡಿ ಬಿಕನಾಶಿ ॥ ಅ. ಪ ॥[೧೩]

ಎನ್ನವ ಕೀರ್ತನೆಯಲ್ಲಿ ಬಟ್ಟೆಯನ್ನು ನೀರಲ್ಲಿಟ್ಟು ಒಣಗಿಸಿ ಮಡಿಯಲ್ಲಿ ಹೊಟ್ಟೆಯೊಳಗಿನ ಕಾಮ, ಕ್ರೋಧಗಳನ್ನು ಬಿಟ್ಟರೆ ಅದು ಮಡಿಯೆಂದು ತಿಳಿಸಿದ್ದಾರೆ. ಗುರುಹಿರಿಯರನ್ನು ನೆನೆದು ಚರಣಕ್ಕೆರಗಿ ಭಯ, ಭಕ್ತಿಯಿಂದ ಪುರಂದರ ವಿಠ್ಠಲನನ್ನು ನೆನೆದು ನಂಬುವುದೆ ಉತ್ತಮ ಮಡಿಯೆಂದಿದ್ದಾರೆ.

ಕನಕದಾಸರಿಗೆ ಮಡಿ ಅಥವಾ ಹೊಲೆಯೆನ್ನುವ ಮಾತುಗಳಿಗಿಂತ ಕುಲ ಎನ್ನುವ ಮಾತು ಮುಖ್ಯವಾಗಿದೆ. ಏಕೆಂದರೆ ಶೂದ್ರ ವರ್ಗದಲ್ಲಿ ಜನಿಸಿದ ಕನಕದಾಸರು ಮತೀಯರಿಂದ ತುಂಬ ನೋವನ್ನು ಅನುಭವಿಸಿದಂತೆ ಕಾಣುತ್ತೇವೆ. ಹೀಗಾಗಿಯೇ

'ಕುಲ ಕುಲವನ್ನು ತಿಹರು ॥ ಪ ॥

ಕುಲವ್ಯಾವುದು ಸತ್ಯ ಸುಖವುಳ್ಳಜನರಿಗೆ ॥[೧೪]

ಕೆಸರಿನಲ್ಲಿ ಹುಟ್ಟಿದ ತಾವರೆಯನ್ನು ತಂದು ಬಿಸಜನಾಭನಿಗೆ ಅರ್ಪಿಸಲಿಲ್ಲವೇ, ಹಸುವಿನ ಮಾಂಸದಲ್ಲಿ ಉತ್ಪತ್ತಿಯಾದ ಹಾಲನ್ನು ಬ್ರಾಹ್ಮಣರು ಊಟ ಮಾಡಲಿಲ್ಲವೇ? ಹಾಗಾದರೆ ನಾರಾಯಣ, ಈಶ್ವರ ಯಾವ ಕುಲದವರು ಎಂದು ಪ್ರಶ್ನಿಸುತ್ತಾನೆ.

ಆತ್ಮ ಯಾವಕುಲ ಜೀವ ಯಾವಕುಲ

ತತ್ವೇಂದ್ರಿಯ ಕುಲ ಪೇಳಿರಯ್ಯಾ

ಆತ್ಮಾಂತರಾತ್ಮ ನೆಲೆಯಾದಿಕೇಶವನ

ಆತನೊಲಿದ ಮೇಲೆ ಯಾತರ ಕುಲವಯ್ಯಾ[೧೫]

ಕಾಗಿನೆಲೆ ಆದಿಕೇಶವರಾಯನ ಚರಣ ಕಮಲದ ಕೀರ್ತಿಸುವನೆ 'ಕುಲಜ' ಎನ್ನುವ ನಿಲುವು ತಾಳಿದ್ದಾರೆ.

ಈ ಕುಲದ ಕುರಿತಾದ ಅಧ್ಯಯನಗಳ ಪ್ರವೃತ್ತಿಗಳನ್ನು ನೋಡಲಾಗಿ, ಅದರ ತಾತ್ವಿಕತೆಯು ಎಲ್ಲ ಆಯಾಮಗಳ ಚರ್ಚೆಗೆ ಹೊರಳಿಕೊಳ್ಳುತ್ತಿದೆ. ಭಾರತೀಯ ಸಂಸ್ಕೃತಿ ಪುರಾತನವಾಗಿದೆ. ಸಂವಿಧಾನದ ಆಶಯಗಳಿಗನುಗುಣವಾಗಿ ಸಂವಿಧಾನದ ಪೂರ್ವಪೀಠಿಕೆಯಲ್ಲಿ ಸಾರ್ವಭೌಮ, ಪ್ರಜಾಸತಾತ್ಮಕ, ಜಾತ್ಯಾತೀತ ರಾಷ್ಟ್ರ ಎನ್ನುತ್ತೇವೆ. ಇಲ್ಲಿ 'ಜಾತ್ಯಾತೀತ' ಎಂಬ ಪರಿಕಲ್ಪನೆಯ ಒಳಗಡೆ ಹಲವಾರು ಧರ್ಮದವರು, ಜಾತಿಯವರು ಇದ್ದಾರೆ. ತಾರತಮ್ಯತೆಯೂ ಇದೆ. ಆದರೂ ಅವರೆಲ್ಲರ ಒಟ್ಟು ಮೊತ್ತವನ್ನು 'ಜಾತ್ಯಾತೀತ' ಎಂದು ಕರೆಯುತ್ತೇವೆ. ಇಷ್ಟೆಲ್ಲಾ ಇದ್ದರೂ ಜಾತಿಯ ಆಧಾರದ ಮೇಲೆ ವ್ಯಕ್ತಿಯನ್ನು, ಸಮುದಾಯವನ್ನು ಅಳೆಯುವ ಅನಿಷ್ಟ ಪದ್ಧತಿ ಶತಶತಮಾನಗಳಿಂದಲೂ ಜೀವಂತವಾಗಿರುವುದು ವಿಷಾದದ ಸಂಗತಿ. ಗುಣಕ್ಕೆ ಮತ್ಸರ ಇರಬಾರದೆಂಬ ವಿಚಾರ ಕೇವಲ ಔಪಚಾರಿಕ ನೆಲೆಯಲ್ಲಿ ಉಳಿದಿರುವುದು ದುರಂತವೆನ್ನಬಹುದು.

ಇಂತಹ ದುರಂತದಿಂದ ಮುಕ್ತಿಯಾಗುವುದಕ್ಕೆ ಹಲಾವಾರು ಸಂತರು ಹಂಬಲಿಸಿದ್ದಾರೆ. ಹಾಗೆ ಈ ಪರಿಕಲ್ಪನೆ ಜನ್ಮ ತಾಳಿರುವುದರ ಬಗ್ಗೆ ಹಲವಾರು ವಾದಗಳು ಕಂಡುಬರುತ್ತವೆ. ಜಾತಿಪದದ ಮೂಲದಲ್ಲಿ ಜನ್ಮ ಎಂಬುದರ ಅರ್ಥವಿದೆ. ಒಬ್ಬ ವ್ಯಕ್ತಿಯ ಜಾತಿಯನ್ನು ನಿರ್ಣಯಿಸುವುದು ಆತನ ಹುಟ್ಟಿನಿಂದ. ಭಾರತಕ್ಕೆ ಆರ್ಯರ ಆಗಮನದ ನಂತರ ವರ್ಣಗಳು ಹುಟ್ಟಿಕೊಂಡಿವೆ ಎಂಬುದು ತಜ್ಞರ ಅಭಿಮತ. ಸಾಮಾಜಿಕ ಅಂತಸ್ತನ್ನು ನಿರ್ಣಯಿಸುವುದು ಕೂಡಾ ಈ ವರ್ಗಗಳ ಮೇಲೆ ನಿಂತಿದೆ.

ಇದು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಪ್ರಾಚೀನ ಮಧ್ಯಕಾಲೀನ ಸಂದರ್ಭಗಳಲ್ಲಿ 'ಕುಲ' ಪದವು 'ಜಾತಿ'ಯ ಎನ್ನುವ ವಿಶಾಲ ಅರ್ಥದಲ್ಲಿ ಬಳಕೆಯಾಗುತ್ತಿದೆ. ಆಧುನಿಕ ಹಾಗೂ ಪ್ರಸ್ತುತದಲ್ಲಿ 'ಕುಲ'ವು ಒಳಪಂಗಡದ ಭಾಗವಾಗಿ ಕಾಣುತ್ತದೆ. 'ಕುಲ' ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಂಪ, ಬಸವ, ಕುವೆಂಪುರವರೆಗೂ ವಿಸ್ತರಿಸಿ, ಚಿಂತನೆಗೆ ಒಳಗಾಗಿದೆ. ಆದರೆ ಕನಕದಾಸರು ಕುಲಸಂಬಂಧಿ ವಿಚಾರವಾಗಿ ಅದರ ಮೂಲವನ್ನು ಪ್ರಶ್ನಿಸುತ್ತಾರೆ. ವಾಸ್ತವತೆಯ ಕಠೋರ ಸತ್ಯವನ್ನು ಪರಿಣಾಮಕಾರಿಯಾಗಿ ಅನಾವರಣಗೊಳಿಸುವ ಮೂಲಕ ಮಾನಸಿಕ ಕ್ಲೇಶವನ್ನು ಒರಗೆ ಹಚ್ಚುವ ಪ್ರಯತ್ನ ಮಾಡಿದ್ದಾರೆ.

ಆದರೆ ಕುಲದ ಕುರಿತು ಅನ್ವೇಷಣೆ ಮಾಡಿದಾಗ 'ಕುಲ' ಒಂದು ಇದರ ಇನ್ನೊಂದು ಪರ್ಯಾಯ ಪದವೇ 'ಜಾತೀಯತೆ' ಎಂದು ನಂಬಲಾಗಿದೆ.

ಏಕೆಂದರೆ ಇದು ಸಮಾಜದಲ್ಲಿ 'ಅಸ್ಪೃಶ್ಯ, ಸ್ಪೃಶ್ಯ' ಭಾವವನ್ನು ಬೆಸೆಯುತ್ತಿತ್ತು. ನೀಚ ಕುಲಜ ಎಂಬ ಭೇದಭಾವವಿತ್ತು. ಸವರ್ಣಿಯರಾದವರು ಅಂತಹ ಜನರನ್ನು ಕೀಳಾಗಿ ನೋಡುತ್ತಿದ್ದರು. ಅಲ್ಲದೆ ಹೇಯವಾಗಿ ನಡೆಸಿಕೊಳ್ಳುತ್ತಿದ್ದರು. ಚೆನ್ನಾಗಿ ಓದಿ ವಿದ್ವಾಂಸರೆನಿಸಿಕೊಂಡವರು ನಮ್ಮ ಕುಲವು ಶ್ರೇಷ್ಠವೆಂದು ಹೇಳಿಕೊಂಡು, ಆತ್ಮವಂಚನೆ ಮಾಡಿಕೊಳ್ಳುತ್ತಿದ್ದರು. ಮಡಿ, ಮೈಲಿಗೆ, ಎಂಜಲು, ಮುಸರಿ, ಸ್ಪೃಶ್ಯ, ಅಸ್ಪೃಶ್ಯ ಇಂಥ ಭಾವನೆಗಳು ಅವರ ವಿಚಾರ ಶಕ್ತಿಯನ್ನು ಕುಂದಿಸಿತ್ತು. ಇಂದಿನ ಇಪ್ಪತ್ತೊಂದನೆಯ ಶತಮಾನದಂತ ವೈಜ್ಞಾನಿಕ ಯುಗದಲ್ಲೂ ಸಹ ಜಾತಿಯ ಬಗೆಗಿನ ತಾರತಮ್ಯಗಳನ್ನು ಹೇರಳವಾಗಿ ಕಾಣಬಹುದು. ವಿಚಾರವಾದಿಗಳು ಸಾಧು-ಸಂತರು, ಜ್ಞಾನಿಗಳು ಜಾತಿಯನ್ನು ಬದಿಗಿಟ್ಟು ಯೋಗ್ಯತೆಗೆ ಗೌರವ ತೋರಿದರೆಂದು ಬಹುವಿಧದಲ್ಲಿ ಭೋದಿಸುವುದು ನೀರಿನಲ್ಲಿ ಹೋಮ ಮಾಡಿದಂತೆ ಇಬ್ಬರೂ ಸಮಾಜದಲ್ಲಿ ಸಮಾನತೆ ತರಲು ಪ್ರಯತ್ನ ಪಟ್ಟಿದ್ದಾರೆ ಎನ್ನುವ ನಿಲುವು ಸರಿಯಾಗಿದೆ.

ಅದರೆ ಕಬೀರರಕ್ಕಿಂತ ಕನಕರು ಹಿಂದುಳಿದ ವರ್ಗದಲ್ಲಿ ಜನಿಸಿ ಅದರ ನೋವನ್ನು ಸ್ವತಃ ಬಲ್ಲವರಾಗಿದ್ದರು, ವರ್ಗ ಹಾಗೂ ವರ್ಣ ವ್ಯವಸ್ಥೆಯ ವಿರುದ್ಧ ಅವರು ಕಿಡಿಕಾರಿದ್ದಾರೆ. ಜಾತಿಗಿಂತ ನೀತಿ ಮುಖ್ಯ ಎಂದು ಪ್ರತಿಪಾದಿಸಿದ್ದಾರೆ. ಅಸಹನೆ, ತಿರಸ್ಕಾರ ಮತ್ತು ಅನ್ಯಾಯಗಳಿಗೆ ಬಲಿಯಾಗುವುದು ನೋವಿನ ಸಂಗತಿ ಎನ್ನುವುದನ್ನು ಸಮಾಜಕ್ಕೆ ತೋರಿಸಿದ್ದಾರೆ. ಇಂತಹ ಕೆಲವು ವಿಚಾರಗಳನ್ನು ಕಬೀರರಿಗೆ ಹೋಲಿಕೆ ಮಾಡಿ ಜಾತಿ ನಿರ್ಮೂಲನೆ ಕೈಗೊಂಡ ಸಂತರ ಕುರಿತು ದೀರ್ಘವಾಗಿ ಹೇಳಿರುವುದಕ್ಕೆ ಅವಕಾಶ ಇತ್ತು. ಆದರೆ ಆ ಬಗೆಯ ವಿಭಿನ್ನ ಆಯಾಮಗಳ ಒಳನೋಟಗಳ ಚರ್ಚೆ ಆಗಿರುವುದಿಲ್ಲ.

ಈ ವಿಷಯವನ್ನೆ ಬಿ.ವ್ಹಿ. ಶಿರೂರ ಅವರು 'ಕನಕದಾಸರು ಮತ್ತು ಬಸವೇಶ್ವರರು' ಎಂಬ ಲೇಖನದಲ್ಲಿ ಕುಲ ಇಬ್ಬರಿಗೂ ಕಾಡಿದ ದೊಡ್ಡಸಮಸ್ಯೆ ಎಂದಿದ್ದಾರೆ. ಕನಕದಾಸರು ಉಚ್ಚ ಕುಲದ ಕಾಕದೃಷ್ಟಿಗೆ ಸಿಲಿಕಿ ನೊಂದು ಬೆಂದಿದ್ದಾರೆ. ಬಸವಣ್ಣ ಉಚ್ಚ ಕುಲದಲ್ಲಿ ಹುಟ್ಟಿ ಕೆಳಜಾತಿಯನ್ನು ಮೇಲೆತ್ತಲು ಪ್ರಯತ್ನಿಸಿದ್ದಾರೆ. ಇಲ್ಲಿ ಇಬ್ಬರೂ ಸಂತರು ಶ್ರೇಷ್ಠರಾಗಿರಲು ಇಬ್ಬರ ದಾರಿ ಒಂದೇ ಆಗಿದೆ.

ಸಮಾಜದ ಸ್ವಾಸ್ತ್ಯವನ್ನು ಕಾಪಾಡುವದಾಗಿದೆ. ಅದಕ್ಕಾಗಿ ಕನಕ 'ಕುಲ ಕುಲವೆಂದು ಹೊಡೆದಾಡಬೇಡ' ಎಂದು ಹೇಳಿದ್ದು ಬಸವಣ್ಣ 'ಹೊಲೆಯ ಹೊಲಬಿಗನಾದೊಡೆ ಅವನ ಹೊಲೆಯಲ್ಲಿಪ್ಪುದು ಲೇಸು ಕಂಡಯ್ಯ' ಎಂದಿದ್ದಾರೆ. ಹೊಲಸು ತಿನ್ನುವವನೆ ಹೊಲೆಯ ಎಂದಿರುವುದು ಮೇಲ್ವರ್ಗ ಎನ್ನುವವರು ಇಂದಿನ ಆಧುನಿಕ ಕಾಲದ ಆಕಳ ಮುಖದಂತೆ ಇದ್ದು ಕೆಟ್ಟಕೆಲಸ, ಹೊಲಸು ತಿನ್ನುವ, ವ್ಯಾಘ್ರಗಳಂತಿರುವವರ ಬಣ್ಣವನ್ನು ಬಯಲು ಮಾಡಿರುವರು.

ಬಿ.ವ್ಹಿ. ಶಿರೂರ ಅವರು ಹೇಳಿದ ವಿಷಯ ಅಂತಃಕರಣವನ್ನು ಅವರ ಮನದ ಧೋರಣೆಯನ್ನು ಇನ್ನೂ ವಿವರಿಸಬೇಕಿತ್ತು. ಯಾಕೆಂದರೆ ಬಸವಣ್ಣ ತನ್ನನ್ನು ತಾನು ಮಾದರ ಚೆನ್ನಯ್ಯನಮಗ ಎಂದು ಹೇಳಿಕೊಂಡಿದ್ದಾರೆ. ಕನಕರು, 'ದಾಸದಾಸರ ಮನೆಯ ದಾಸಿಯರ ಮಗ ನಾನು' ಎಂದು ಹೇಳಿದ್ದು ಸಮಾನತೆ, ಜಾತ್ಯಾತೀತ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡ ಕಾಳಜಿ ಗೊತ್ತಾಗುತ್ತದೆ. ಅಲ್ಲದೆ ಇವರು ಸಮುದಾಯದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ತಮ್ಮ ಜೀವನದುದ್ದಕ್ಕೂ ಸಮಾಜಸೇವೆಗೆ ಬದುಕನ್ನು ಅರ್ಪಿಸಿದವರು. ಆದರೆ ಜಾತಿ ಹೋಗಲಾಡಿಸಲು ಪ್ರಯತ್ನಿಸಿದ ಇವರಿಗೆ ಜಾತಿ ಕಳಂಕ ಇರುವುದು ದುರದೃಷ್ಟಕರವಾಗಿದೆ. ಎಂಬುದು ನನ್ನ ಅಭಿಪ್ರಾಯ.

ಶ್ರೀನಿವಾಸ ಉಡುಪ ಅವರು 'ವ್ಯಾಸರಾಯರು ಕನಕ ಮತ್ತು ಪುರಂದರದಾಸರು' ಲೇಖನದಲ್ಲಿ ಸಾಮಾಜಿಕ ಅಸಮಾನತೆ ಕುಲ, ಜಾತಿ ಕುರಿತು ತೌಲನಿಕವಾಗಿ ನೋಡಿರುವದು ಪುರಂದರರು. ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ ಗಣ ಗಣ ಗಂಟೆ ಬಾರಿಸುವರಯ್ಯಾ ಎಂದು ಹೇಳಿಕೆ ನೀಡಿದ್ದಾರೆ. ಕನಕರ ಆತ್ಮ ಆವ ಕುಲ, ಜೀವ ಆವ ಕುಲ ಹೇಳಿಕೆಯ ಉಲ್ಲೇಖಿಸಿ ಬರೆದಿರುವ ಇವರು ಕನಕ, ಪುರಂದರ ಸಾಮಾಜಿಕ ಭಕ್ತಿ ಕೀರ್ತನೆಗಳ ಮೂಲಕ ಅವರು ಸಮಾಜಕ್ಕೆ ಕೊಟ್ಟ ಕೊಡುಗೆಯನ್ನು ತಾತ್ವಿಕತೆಯನ್ನು ವಿವರಿಸಬಹುದಿತ್ತು. ಇಲ್ಲಿ ವ್ಯಾಸರಾಯರನ್ನು ಜೊತೆಗಿಟ್ಟು ನೋಡಿದ್ದರಿಂದ ವಿಜಯನಗರ ಅರಸರ ಅರಮನೆ ಗುರುವಾಗಿದ್ದು ವ್ಯಾಸರಾಯರು. ಅವರ ಶಿಷ್ಯಂದಿರಾಗಿ ಪುರಂದರ, ಕನಕರು ಇಲ್ಲಿ ಅಗ್ರಗಣ್ಯರಾಗುತ್ತಾರೆ. ಕುಲದ ಕರಿನೆರಳು ಕನಕರಿಗೆ ತಟ್ಟಿದಷ್ಟು ಪುರಂದರದಾಸರಿಗೆ ಅಷ್ಟು ಬಿಸಿ ತಟ್ಟಿಲ್ಲ. ಅವರು ಸಮುದಾಯಿಕವಾದ ಪ್ರತಿಭಟನೆಯನ್ನು ಸಂದಿಗ್ಧ ಸಮಸ್ಯೆಗಳನ್ನು ವಿವರಿಸಿರುವುದಿಲ್ಲಾ. ಹೀಗಾಗಿ ಇಲ್ಲಿ ಕನಕರು ಭಿನ್ನವಾದ ನೆಲೆಯಲ್ಲಿ ಸಾಮಾಜಿಕ ಧಾರ್ಮಿಕ ಕಟ್ಟುಪಾಡುಗಳನ್ನು ಅನುಸರಿಸಿದ್ದಾರೆ ಎನ್ನಬಹುದು ಎಂದು ಅಧ್ಯಯನಕಾರರ ಅಭಿಪ್ರಾಯವಾಗಿದೆ.

ಜಿ.ಜಿ. ಮಂಜುನಾಥ ಅವರು ಕನಕ ಮತ್ತು ಪುರಂದರರ ಕೀರ್ತನೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿರುವರು. ಸಮಾಜದಲ್ಲಿ ಕುಲಗಳು ವ್ಯಕ್ತಿಗತವಾಗಿರುತ್ತವೆಯೊ ಹೊರತು, ಬೇರಲ್ಲ, ಎನ್ನುವ ನಿಲುವು ಇವರದು ಅದಕ್ಕಾಗಿಯೇ ಪುರಂದರ ಕೀರ್ತನೆಯನ್ನು ಉಲ್ಲೇಖಿಸಿದ್ದಾರೆ. ಬಟ್ಟೆಯನ್ನು ನೀರಲಿಟ್ಟು ಒಣಗಿಸಿ, ಧರಿಸಿದರೆ ಅದು ಮಡಿಯೆಂದಿದ್ದಾರೆ. ಆದರೆ ಕುಲ ಎನ್ನುವುದು ಜಾತಿ ಹೆಸರಿನಲ್ಲಿ ಬಳಕೆ ಆಗಿ ಒಬ್ಬ ವ್ಯಕ್ತಿಯಲ್ಲಿರದೆ, ಅದು ಸಮುದಾಯದಲ್ಲಿರುವ ಧರ್ಮ, ಅದರೊಳಗಿನ ಪಂಗಡಗಳಲ್ಲಿ ಕುಲದ ಪರಿಕಲ್ಪನೆ ಬೇರೂರಿದೆ ಎನ್ನುವುದು ಇವರ ಗ್ರಹಿಕೆಯಾಗಿದೆ. ಇದನ್ನು ಒಪ್ಪುವುದು ಕಷ್ಟ.

ಏಕೆಂದರೆ 'ಕುಲ' ಎನ್ನುವುದು ಬಳಕೆಯಲ್ಲಿ ಮಾತ್ರ ವ್ಯಕ್ತಿಗತವಾಗಿದೆ ಆದರೆ ಅದು ಕಾರ್ಯದಲ್ಲಿ ಸಾಮಾಜಿಕವಾಗಿದೆ. ಒಂದು ಕೇಂದ್ರೀತವಾದ ವ್ಯವಸ್ಥೆಯಲ್ಲಿ ಮಾತ್ರ ಈ ಕಾರ್ಯವನ್ನು ನಿರ್ವಹಿಸಿದ್ದರೆ ವ್ಯಕ್ತಿಗತ ತಾರತಮ್ಯತೆ ಇರುತ್ತಿತ್ತೆ ಹೊರತು ಸಾಮಾಜಿಕ ತಾರತಮ್ಯತೆ ಇರುತ್ತಿರಲಿಲ್ಲ ಕನಕದಾಸರು ಇದನ್ನು ಸಾಮಾಜಿಕ ಸಮಸ್ಯೆಯೆಂದು ವಾಗ್ವಾದವನ್ನು ಮಂಡಿಸಿದ್ದಾರೆ, ಹೊರತು ವ್ಯಕ್ತಿಗತವಲ್ಲ ಈ ಅಭಿವ್ಯಕ್ತಿಯ ಆಯಾಮವನ್ನು ಅಧ್ಯಯನಕಾರರು ಗ್ರಹಿಸಬೇಕಾದ ಅನಿವಾರ್ಯತೆ ಹೇಳುತ್ತದೆ.

ಬಿ.ವ್ಹಿ. ಶಿರೂರ ಅವರು ಕನಕದಾಸರು ಮತ್ತು ಈಶ್ವರನ ಕುಲ ಯಾವುದು ಎಂದು ಪ್ರಶ್ನಿಸಿದ್ದಾರೆ. ಆತ್ಮ ಹಾಗೂ ಜೀವಕ್ಕೆ ಕುಲಗಳಾವವು ಎಂದು ಜನರನ್ನು ಪ್ರಶ್ನಿಸಿ ಸಮಾನತೆ ತರಲು ಹೆಣಗಾಡಿದ್ದಾರೆ. ಉತ್ತಮ ಕುಲಜ ಯಾರು ಎಂದರೆ ಕಾಗಿನೆಲೆ ಯಾದಿಕೇಶವರಾಯ ಚರಣ ಕಮಲದ ಕೀರ್ತಿಸುವವನೆ ಕುಲಜ ಎನ್ನುವ ನಿಲುವು ಅವರದ್ದಾಗಿದೆ. ಅದರೆ ದೈವತ್ವ ದೊಡ್ಡದು. ಎಲ್ಲರು ಅಜ್ಞಾನ ಅಂದಕಾರವನ್ನು ಬಿಟ್ಟು, ಸುಜ್ಞಾನದಕಡೆಗೆ ವಾಲಬೇಕು. ಬಾಳಿನಲ್ಲಿ ಬೆಳಕು ಬರಬೇಕಾದರೆ ದೈವತ್ವದ ಪರಿಕಲ್ಪನೆ ಬೇಕು. ಅದು ಆದಿಕೇಶವ ಎಂದಿರುವ ಕನಕರು ಸಮಾನತೆಗಾಗಿ ಹೋರಾಡಿದವರಲ್ಲಿ ಇವರು ಅಗ್ರಗಣ್ಯರೆನಿಸುತ್ತಾರೆ.

ಒಟ್ಟಾರೆ ನಾವು ತಾತ್ವಿಕರಿಸಿ, ನೋಡಿದಾಗ ಶತಶತಮಾನಗಳಿಂದ ಚಾತುರ್ವರ್ಣ ಪದ್ಧತಿಯ ಸಂಸ್ಕೃತಿಯಲ್ಲಿ ಬೆಳೆದುಬಂದ ಜನತೆ, ಅದೇ ಸಂಸ್ಕೃತಿಯಿಂದ ಬಂದ ಪುರಂದರದಾಸರು ಕೆಳವರ್ಗದಲ್ಲಿ ಹುಟ್ಟಿ, ಸಮಾನತೆಗಾಗಿ ಮೇಲ್ವರ್ಗಗಳಿಂದ ಧೋರಣೆ ಖಂಡಿಸಿದ ಕನಕದಾಸ ಕುಲ ಜಾತಿಯತೆ ಈ ದೇಶದ ದೊಡ್ಡ ಕಳಂಕವಾಗಿ ಕಾಡುತ್ತಿದ್ದಾಗ ಬುದ್ದ, ಬಸವ. ಕನಕದಾಸ, ಪುರಂದರದಾಸ, ಅಂಬೇಡ್ಕರ್ ಜಾತಿ ಹೊಡೆದೋಡಿಸಲು ಪ್ರಯತ್ನಿಸಿದ್ದು ನಿಜಕ್ಕೂ ಮಹತ್ವದ ಸಂಗತಿಯಾಗಿದೆ. ಕೇವಲ ಹುಟ್ಟೊಂದನ್ನೆ ಆಧಾರವಾಗಿಟ್ಟು, ಜನಸಮುದಾಯದಲ್ಲಿ ಗೋಡೆಗಳನ್ನು ಕಟ್ಟಿ ಬಿರುಕುಗಳನ್ನು ಹುಟ್ಟಿಸಿ, ಜನತೆ ಯಾವಾಗಲೂ ಹಿಂಸೆಯಿಂದ ನರಳುವಂತೆ ಮಾಡುವ ಬೀಕರವಾದ ಅಚಾರವೆಂದರೆ ಈ ಜಾತಿ. ಹಾಗಾಗಿಯೇ ಸಮಾನತೆಗಾಗಿ ಹೋರಾಡಿ ಜಾತ್ಯಾತೀತತೆಯನ್ನು ಮೌಲ್ಯವಾಗಿಸಿದ್ದಾರೆ ಎಂದು ವಿಮರ್ಶಕರ, ಅಧ್ಯಯನಕಾರರ ವಾದವು ಸತ್ಯವಾಗಿದೆ.

ಇಂತಹ ಕುಲ, ಜಾತಿ ಕುರಿತು ಹೋರಾಡಿದ ಸಂತ, ಶರಣನನ್ನು 'ಜಾತಿ' ಗೊಂದಲಕ್ಕೆ ಸಿಲುಕಿಸಿದ ನಮ್ಮ ಸಮುದಾಯ, ಸಮಾಜಕ್ಕೆ ಏನೆನ್ನಬೇಕು ಜಾತಿ, ಮತ, ಪಂಥವನ್ನು ಮೀರಿಬೆಳೆದ ಮಹಾನುಭಾವರನ್ನು ಗೊಂದಲಕ್ಕೀಡು ಮಾಡಿರುವುದು ದುರಂತದ ಸಂಗತಿಯಾಗಿದೆ ಇದು ಕನಕದಾಸರಿಗೂ ಅನ್ವಯವಾಗಿದೆ.

ಜಾತಿಯನ್ನು ಬೆಳೆಸಲು ಹಲವಾರು ಕಾರಣಗಳು ಇವೆ ಅವು ಈ ಕೆಳಗಿನಂತಿವೆ.

ಸಂತರು, ಸಮಾಜಸುಧಾರಕರು ಬಾಳಿ, ಬದುಕಿದ ಈ ನಾಡಲ್ಲಿ ಜಾತಿ ಸಮಸ್ಯೆಯೇ ಬೇರೂರಿದೆ. ಜಾತಿಯನ್ನು ಹೊಡೆದೋಡಿಸಲು ಪ್ರಯತ್ನಪಟ್ಟ ಸಂತರನ್ನೆ ಜಾತಿ ವ್ಯವಸ್ಥೆಯಲ್ಲಿ ಸಿಲುಕಿಸಿದ್ದು ದುರಂತವೇ

ಸರಿ. ಹೀಗೆ ಜಾತಿಯನ್ನು ಬೆಳೆಸಲು ಐಕಾನ್‌ಗಳನ್ನು ಸೃಷ್ಟಿಸಿಕೊಂಡು ಮುಮದುವರೆಯುತ್ತಿರುವುದು ಒಂದು ದುರಂತವಾಗಿದೆ.

೧. ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಲಾಭಕ್ಕಾಗಿ ಜಾತಿಯನ್ನು ಒಂದು ಸಾಧನವಾಗಿ ಬಳಸುವ ಪ್ರವೃತ್ತಿ ಗುಪ್ತಗಾಮಿನಿಯಂತೆ ಹರಿಯಲು ಇಂದು ಕಾರಣವಾಗಿದೆ.

೨. ಸರ್ಕಾರವು ಜಾತಿಗಣತಿ ಮಾಡುವ ಮೂಲಕ ಅಂಕಿಸಂಖ್ಯೆ ಪ್ರಕಟಣೆಯಿಂದ ಜಾತಿ ಭಾವನೆ ಬೆಳೆಯಲು ಕಾರಣವಾಗಿದೆ.

೩. ಜಾತಿ ಭಾವನೆ ಹತ್ತಿಕ್ಕಲು, ವಿಫಲವಾದ ಸಂಘ, ಸಂಸ್ಥೆಗಳು ಮತ್ತು ಸರ್ಕಾರಗಳು, ಸರ್ಕಾರದ ಯೋಜನೆಗಳು.

೪. ಜಾತಿ ಆಧಾರಿತ ಸಂಘಟನೆ ಬೆಳೆದಿರುವದು. ಉದಾ:– ರಾಜ್ಯ ಕುರುಬರ ಸಂಘ, ರಾಜ್ಯ ಈಡಿಗರ ಸಂಘ, ರಾಜ್ಯ ಲಿಂಗಾಯತರ ಸಂಘ, ದಲಿತರ ಸಂಘ, ಒಕ್ಕಲಿಗರ ಸಂಘ ಇನ್ನು ಮುಂತಾದವುಗಳಿವೆ.

೫. ಜಾತಿ ಆಧಾರಿತ ಸಮ್ಮೇಳನಗಳು, ಪ್ರಸರಣ ಪತ್ರಿಕೆಗಳು ಮುಂತಾದವುಗಳು.

ಈ ಮೇಲಿನ ಎಲ್ಲ ಆಧಾರಗಳು ಕರ್ನಾಟಕ ಮತ್ತು ದೇಶದಲ್ಲಿ ಜಾತಿ ಬೆಳೆಯಲು ಪ್ರೇರಕವಾಗಿವೆ. ಇಂದು ಜಾತಿ–ಮತೀಯ ಭಾವನೆ ಕುಗ್ಗದೆ ವರ್ಷದಿಂದ ವರ್ಷಕ್ಕೆ ಪೆಡಂಭೂತವಾಗಿ ಬೆಳೆಯುತ್ತಿದೆ. ಕೆಲ ಸಂದರ್ಭದಲ್ಲಿ ಒಬ್ಬವ್ಯಕ್ತಿ ಎಷ್ಟು ದಕ್ಷ ಮತ್ತು ಪ್ರಾಮಾಣಿಕವಾಗಿದ್ದಾನೆ ಎನ್ನುವುದಕ್ಕಿಂತ ಮುಖ್ಯವಾಗಿ ಅವನು ಯಾವ ಜಾತಿಯವನು ಎನ್ನುವ ಸಂಗತಿಯು ಮುಖ್ಯವಾಗಿದೆ. ಈಗ ಜಾತಿ ರಾಜಕಾರಣವಾಗಿದೆಯೊ ವಿನಃ ಪ್ರಜಾಪ್ರಭುತ್ವ ರಾಜಕಾರಣವಾಗಿ ಎಲ್ಲೂ ಉಳಿದಿರುವುದಿಲ್ಲ ಎಂದೇ ಹೇಳಬೇಕು. ಇಂದು ನಾವು ನಮ್ಮ ದೇಶ ಅಭಿವೃದ್ಧಿಯಾಗಬೇಕಾದರೆ ಇಲ್ಲಿ ಜಾತಿ, ಮತ ಬಿಟ್ಟು ಎಲ್ಲರೂ ಒಟ್ಟಿಗೆ ಸಹಬಾಳ್ವೆ ಮಾಡುವುದು ಮುಖ್ಯವಾಗಿದೆ.

ಜಾತ್ಯಾತೀತತೆಯಿಂದ ಜಾತಿನೆಲೆಗೆ ತಿರುಗಿದ ಸಂತರು, ಸಮಾಜ ಸುಧಾರಕರ ಜಯಂತಿಗಳು

ಪ್ರಾಚೀನ ಪರಂಪರೆಯು ಜಾತಿ, ಮತ ಮೀರಿ ಬಹು ಆಯಾಮಗಳಲ್ಲಿ, ಮೌಲ್ಯಯುತವಾಗಿ ಬೆಳೆದು ಬಂದಿದೆ. ಈ ಮೌಲ್ಯಗಳನ್ನು ವ್ಯಕ್ತಿ, ಪರಿಸರ, ವಸ್ತುವಿನಲ್ಲಿ ಕಾಣಬಹುದಾಗಿತ್ತು. ಆಧುನಿಕರಣ, ಖಾಸಗೀಕರಣ, ಜಾಗತಿಕರಣದ ಕರಿನೆರಳು ಸಮುದಾಯದ ಮೇಲೆ ಪ್ರಭಾವ ಬೀರಿ, ಬದಲಾವಣೆಯ ಹೆಸರಿನಲ್ಲಿ ನಾವು ಉದಾತ್ತವಾದ ಚಿಂತನೆಯ ಮೌಲ್ಯಗಳನ್ನು ಗಾಳಿಗೆ ತೂರುತ್ತಿದ್ದೇವೆ. ಜಾತಿಯನ್ನು ಮೀರಿ ಬೆಳೆದ ಮಹಾನುಭಾವರನ್ನು ಜಾತಿಗೆ ಸೀಮಿತಗೊಳಿಸುವ ಕಾರ್ಯ ಸದ್ದಿಲ್ಲದೆ ನಡೆದಿದೆ. ಹಾಗೆಯೇ ಸಂತರ ಸಮಾಜ ಸುಧಾರಕರ ಜಯಂತಿಗಳು ಇತ್ತೀಚಿಗೆ ಜಾತಿಗೆ ಸೀಮಿತವಾಗುತ್ತಿರುವುದು ವಿಷಾದಕರ ಸಂಗತಿಯಾಗಿದೆ. ಕನಕದಾಸರ ಜಯಂತಿಗೆ ಕುರುಬರು, ಪುರಂದರರ ಜಯಂತಿಗೆ ಬ್ರಾಹ್ಮಣರು, ಬಸವೇಶ್ವರರ ಜಯಂತಿಗೆ ಲಿಂಗಾಯತರು, ಅಂಬೇಡ್ಕರ ಜಯಂತಿಗೆ ದಲಿತರು, ದಾಸಿಮಯ್ಯ

ಜಯಂತಿಗೆ ನೇಕಾರರು ವಾಲ್ಮೀಕಿ ಜಯಂತಿಗೆ ಬೇಡರು, ಸಿದ್ದರಾಮೇಶ್ವರ ಜಯಂತಿಗೆ ಭೋವಿಯವರು ಹೀಗೆ ಇವರ ಪಟ್ಟಿ ಮುಂದುವರಿಯುತ್ತದೆ. ಸಂತ, ಸಮಾಜ ಸುಧಾರಕರು ಸಮಾಜದಲ್ಲಿನ ಮೇಲುಕೀಳನ್ನು ಕಿತ್ತೊಗೆದು, ಸಮಾನತೆ ಸಾಧಿಸಿ, ಸಮುದಾಯವು ಒಬ್ಬರಿಗೊಬ್ಬರು ಸಹೋದರರಂತೆ ಬದುಕಿ ಬಾಳಬೇಕೆಂಬ ನಿಲುವು ಹೊಂದಿ, ಕರ್ತವ್ಯ ನಿರ್ವಹಿಸಿ, ಸಮಾಜಿಕ ವ್ಯವಸ್ಥೆಯ ಬದಲಾವಣೆಗೆ ಕಾರಣರಾಗಿದ್ದಾರೆ. ಇಂತಹ ಸಂತರನ್ನು, ಸಮಾಜ ಸುಧಾರಕರನ್ನು ಒಂದು ಜಾತಿಗೆ ಸೀಮಿತಗೊಳಿಸುವುದು ಎಷ್ಟು ಸರಿ? ನಾವು ಕನಕದಾಸರನ್ನು, ಅವರ ತತ್ವಗಳನ್ನು ಅವಲೋಕಿಸಿದಾಗ ಅವು ಮನುಕುಲದ ಬಾಳಿಗೆ ಬೆಳಕಾಗಿವೆ. 'ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ' ಎಂಬ ಕೀರ್ತನ ಸಾಲುಗಳು ಬಹುತ್ವವನ್ನು ಹೊಂದಿದೆ. ಇದು ಒಂದು ಜಾತಿ, ಜನಾಂಗಕ್ಕೆ ಹೇಳಿದ್ದಲ್ಲ. ಕನಕಜಯಂತಿಯನ್ನು ಕುರುಬರು ಮಾತ್ರ ಸೇರಿ ಭಾವಚಿತ್ರ ಹೊತ್ತು ಅದ್ದೂರಿ ಮೆರವಣಿಗೆ ಮಾಡಿ ಆಚರಿಸಿದರೆ, ಅವರ ತತ್ವ ಚಿಂತನೆಗಳು ಇತರರಿಗೆ ಮುಟ್ಟುತ್ತವೆಯೇ? ಎಲ್ಲರೂ ಒಪ್ಪಿಕೊಳ್ಳುತ್ತಾರೆಯೇ? ಎಂದು ಆಲೋಚಿಸಬೇಕಾಗಿದೆ. ನಾವು ಎಲ್ಲ ಸಮುದಾಯದವರು ಸೇರಿ ಎಲ್ಲಿ ಸಂತರ, ಸಮಾಜಸುಧಾರಕರ ಜಯಂತಿ ಆಚರಣೆಯನ್ನು ಮಾಡಿದಾಗ ಮಾತ್ರ ಅವರ ತತ್ವಗಳನ್ನು ಆಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಜನರ ಹೃದಯ ಪರಿವರ್ತನೆಯಾಗಲು ರಾಜಕಾರಣಿಗಳು, ಮಠಾಧಿಪತಿಗಳು, ಸಮಾಜ ಸುಧಾರಕರು, ಆರ್ಥಿಕ ತಜ್ಞರು ಎಲ್ಲರೂ ಕಳಕಳಿಯಿಂದ ಸತತವಾಗಿ ಪ್ರಯತ್ನಿಸಿದರೆ ಮಾತ್ರ ಜಾತೀಯತೆ ನಮ್ಮ ಸಮಾಜದಿಂದ ತೊಲಗಬಹುದು. ಈ ರೀತಿಯಲ್ಲಿ ಅಧ್ಯಯನಕಾರರು ಆಲೋಚಿಸಬೇಕಾಗಿದೆ.

೬.೩ ಹರಿಭಕ್ತಿ

ಹರಿಭಕ್ತಿ ಹರಿಯನ್ನು ನೆನೆದು ಸ್ತುತಿಸುವುದು. ಭಕ್ತಿಯನೆಲೆಯಲ್ಲಿ ಅಧ್ಯಯನ ಮಾಡಿದಾಗ, ಹರಿಭಕ್ತಿಯ ನೆಲೆಯಲ್ಲಿ ತೌಲನಿಕರಿಸುವುದು. 'ದೇವರೊಂದೆ ನಾಮ ಹಲವು' ಎಂಬಂತೆ ಹರಿನಾಮಸ್ಮರಣೆಯಲ್ಲಿ ವಿಮರ್ಶಕರ ಅಧ್ಯಯನಗಳು ಭಿನ್ನವಾಗಿವೆ. ಹರಿಲಾಲ್ ಪವಾರರು ಕನಕದಾಸರು ಮತ್ತು ತಿರುವಳ್ಳುವರ್ ಲೇಖನದಲ್ಲಿ, ಕನಕದಾಸರು ಅಧ್ಯಾತ್ಮಿಕ ನೆಲೆಯಲ್ಲಿ ನಿಂತು ಮಾತನಾಡುವಾಗ ತನ್ನನ್ನು ತಾನೇ ಮರೆತು ಭಗವಂತನನ್ನು ಸ್ಮರಿಸುತ್ತಾರೆ. 'ಆರಿಗಾರಿಲ್ಲಾ ಅಪತ್ಕಾಲದೊಲಗೆ ವಾರಿಜಾಕ್ಷನ ನಾಮ ನೆನೆ ಕಂಡ್ಯ ಮನವೆ' ಎಂದು ಭಗವಂತನನ್ನು ಭಿನ್ನವಿಸುತ್ತಾರೆ. ಹಾಗೆ ತಿರುವಳ್ಳುವರ ತಮ್ಮ ದೈವಸ್ತುತಿ ಪದದಲ್ಲಿ ಭಗವಂತನ ಕುರಿತು 'ಮನದ ಕತ್ತಲೆಯೊಂದೊದಗುವ ಒಳಿತು ಕೆಡಕುಗಳೆಂಬೆರಡು ಕರ್ಮಗಳು ಭಗವಂತನ ಮಹಿಮೆಯನ್ನು ಹೊಗಳಿದರೆ ಸಾಲದು ಉಪಮಾತೀತನಾದವನ ಶ್ರೀ ಪಾದಗಳ ನಂಬಿದವರಿಗಲ್ಲದೆ, ಉಳಿದವರಿಗೆ ಮನದ ಚಿಂತೆ ದೂರಾಗದು ಎಂದು ಹೇಳಿ ಭಗವಂತನನ್ನು ಸ್ಮರಿಸಿದರೆ ಒಳ್ಳೆಯದು ಆಗುತ್ತದೆ ಎಂದು ಹೇಳಿರುವರು. ಹೀಗೆ ಕನಕದಾಸರು ಮತ್ತು ತಿರುವಳ್ಳುವರು ಕಾಲಬೇರೆ ಬೇರೆಯಾದರೂ ವಿಚಾರ ಒಂದೆಯಾಗಿದೆ. ಎಂದು ಹೇಳಿ ಹರಿಯನ್ನು ನೆನೆಯುತ್ತಾರೆ. ಆದರೆ

ಹರಿನಾಮಸ್ಮರಣೆಯ ಹಿನ್ನೆಲೆಯನ್ನು ವಿವಿಧ ಧೋರಣೆ ಅಲ್ಲಿರುವ ಭಕ್ತಿ, ಆಧ್ಯಾತ್ಮಿಕ ಚಿಂತನೆ ಆಯಾಮಗಳ ಕುರಿತು ಚರ್ಚಿಸಬೇಕಾಗಿದೆ.

ಶ್ರೀನಿವಾಸ ಉಡುಪ 'ವ್ಯಾಸರಾಯರು, ಕನಕ ಮತ್ತು ಪುರಂದರದಾಸರು' ಲೇಖನದಲ್ಲಿ 'ಹರಿಭಕ್ತಿ'ಯ ಕುರಿತು ಹರಿದಾಸ ಸಾಹಿತ್ಯದ ಎಲ್ಲ ಹಂತಗಳಲ್ಲಿಯೂ ಕಾಣುವ ಸಮಾನ ಸಂಗತಿ ಆತ್ಮ ನಿವೇದನೆ, ಸ್ತೋತ್ರ, ಉಪದೇಶ, ತತ್ವ ಚಿಂತನೆ ಮುಂತಾದ ವಿಷಯ ವ್ಯಾಪ್ತಿಯಲ್ಲಿ ಭಕ್ತಿ ನಿರ್ಬರ ರಚನೆಗಳು 'ಹರಿ' ಎಂಬ ಪರಾಶಕ್ತಿಯಲ್ಲಿ ಆಚಲ ಶ್ರದ್ದೆಯನ್ನಿರಿಸಿ ಸಂಪೂರ್ಣ ಸಮರ್ಪಣಾಭಾವ ಶರಣ್ಯತೆ ಈ ಮೂವರಲ್ಲಿ ಸಮಾನವಾಗಿದೆ ಎಂದು ಹೇಳಿ ವ್ಯಾಸರಾಯರು ಭಗವಂತನನ್ನು ಕುರಿತು

'ಆಳು ನಾ ನಿನ್ನಾಳು ನಾನು
ನೀನು ತಂದೆ ನಿನ್ನ ಕಂದ
ಶರಣ್ಯ ನಾ ನಿನ್ನ ಶರಣಾಗತನು...?[೧೬]

ಎಂದು ಅಹಂಕಾರ ಮಮಕಾರಗಳನ್ನು ಭಕ್ತಿಯಜ್ಞದಲ್ಲಿ ಆಹುತಿನೀಡಿ 'ಕೃಷ್ಣಾರ್ಪಣ' ಎಂದಿದ್ದರೆ ಇಲ್ಲಿ ಮನಗಾಣಬೇಕಾದ ಸಂಗತಿಯೆಂದರೆ 'ದೈವಪ್ರಧಾನ'ವಾದ ನೆಲೆಯಲ್ಲಿ ಸಮಾನತೆ ತರುವುದಕ್ಕೆ ಪ್ರಯತ್ನಿಸಿದ್ದಾರೆ. ಆದರೆ ಅವರವರ ದೈವ ಬೇರೆ ಇಲ್ಲಿ 'ಏಕ ಸಂಸ್ಕೃತಿ' ಪ್ರತಿಪಾದನೆ ಇರುವುದು ಸಾಂಸ್ಕೃತಿಕ ಅಸ್ಮಿತೆಗಳಲ್ಲಿ ಅಲ್ಲ. ಸಾಂಸ್ಕೃತಿಕ ತಾರತಮ್ಯತೆಯನ್ನು ವಿಸ್ತೃತಗೊಳಿಸುವ ನೆಲೆಯಲ್ಲಿ ಆ ಕಾರಣಕ್ಕೆ ಅದು ಅಸ್ತಿತ್ವಕ್ಕೆ ಬಂತು, ಸಾಮಾಜಿಕ ಮನ್ನಣೆಯನ್ನು ಗಳಿಸಿತು ಜಾಗತಿಕರಣದ ಏಕಸಂಸ್ಕೃತಿ, ಇದಕ್ಕೆ ವಿರುದ್ದವಾದ 'ಸಾಂಸ್ಕೃತಿಕ ನೆಲೆಯಲ್ಲಿ ಏಕತೆ' ತರುವುದಕ್ಕೆ ಹಂಬಲಿಸುತ್ತಾರೆ.[೬] ಆ ಕಾರ್ಯಕ್ಕೆ ಆ ವ್ಯವಸ್ಥೆಯ ವಿರುದ್ಧ ಪ್ರತಿರೋಧಗಳಿವೆ. ಈ ಆಯಾಮಗಳಲ್ಲಿ 'ಕನಕ'ರನ್ನು ಕನಕದಾಸರ 'ಆದಿಕೇಶವ' ಪ್ರತಿಪಾದನೆ ಅಥವಾ ಆರಾಧನೆ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಈ ನೆಲೆಯಲ್ಲಿ ಅಧ್ಯಯನಗಳಾಗಿರುವುದು ಕಡಿಮೆ.

ಪುರಂದರರು

ನಿನ್ನ ಪಾದಾಂಬುರುವ ಭಜಿಸುವುದೆ ಸೌಭಾಗ್ಯ
ನಿನ್ನ ನಿರ್ಮೂಲ್ಯಗಳ ಭೋಗದ್ರವ್ಯ
ನಿನ್ನ ಕಥೆ ಕೇಳುವುದೇ ಮಂಗಳಸು ವಾದ್ಯಗಳು
ನಿನ್ನಂದ ಅರಸೀನೆಗೆ ಪುರಂದರ ವಿಠ್ಠಲ.[೧೭]

ಎಂದು ಭಗವಂತನ ಸರ್ವಜ್ಞತ್ವ, ಸರ್ವಶಕ್ತಿತ್ವ, ಕಾರುಣ್ಯ ಮೊದಲಾದ ಕಲ್ಯಾಣಗಳನ್ನು ತಮ್ಮಲಿರುವ ಅಲ್ಪಶಕ್ತಿತ್ವ, ಅಸ್ವಾತಂತ್ರ್ಯ, ದೈನ್ಯ ಇವುಗಳೊಂದಿಗೆ ವೈದೃಶ್ಯ ರೂಪದಲ್ಲಿ ಪರಿಭಾವಿಸಿಕೊಂಡಿದ್ದಾರೆ. ಇದಕ್ಕೆ ಸಂವಾದಿಯಾಗಿ ಕನಕದಾಸರು ಎಂದು ಹರಿಯನ್ನು ಕೊಂಡಾಡಿ ವ್ಯಾಸರಾಯರು ಪೋಷಿಸಿ ಬೆಳೆಸಿದ ಭಕ್ತಿ ವೃಕ್ಷಕ್ಕೆ ಕನಕ ಪುರಂದರು ಮುಖ್ಯ ಶಾಖೆಗಳು ನಿಜಭಕ್ತಿ

ಸಾಹಿತ್ಯದ ವಿಷಯದಲ್ಲಿ ಅವರಿಬ್ಬರ ಹೆಸರು ಸಮಾನವಾಗಿ ಗೌರವಕ್ಕೆ ಪಾತ್ರವಾಗಿವೆ ಎಂದು ಹೇಳಿದ್ದಾರೆ. ಭಕ್ತಿ ಅದರ ಪಾರಮ್ಯತ ಕನಕ ಪುರಂದರರ ಭಕ್ತಿಯ ಸೇವೆ ಆಯಾಮಗಳು ಭಕ್ತಿಯಿಂದ ಭಗವಂತನನ್ನು ಒಲಿಸಿಕೊಂಡ ಪರಿಗಳ ಕುರಿತು ಇನ್ನು ಆಲೋಚಿಸಬೇಕಿದೆ.

ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ ಅವರು ಗುರುತಿಸಿದಂತೆ ಪುರಂದರರ ಕೀರ್ತನೆಗಿಂತ ಕನಕರ ಕೀರ್ತನೆಗಳಲ್ಲಿ ಕಾವ್ಯಗುಣವು ಒಂದು ಕೈ ಮಿಗಿಲಾಗಿರುತ್ತದೆ. ಎಂದಿದ್ದಾರೆ ಕನಕದಾಸರಲ್ಲಿ ಕಂಡುಬರುವ 'ಐಶ್ವರ್ಯ' ಜಿಜ್ಞಾಸೆ, ಕಲ್ಪಕತೆಗಳು ಬೇರೆಯವರಲ್ಲಿ ವಿರಳವೆಂದೇ ಹೇಳಬಹುದು. ಬಿ. ವ್ಹಿ. ಶಿರೂರ ಅವರು ಕನಕದಾಸರು ಮತ್ತು ಬಸವೇಶ್ವರರು ಎನ್ನುವ ಲೇಖನದಲ್ಲಿ ಕನಕ ಮತ್ತು ಬಸವೇಶ್ವರರು ಭಗವಂತನ ನಾಮಸ್ಮರಣೆ ಹೇಗೆ ಮಾಡಿದ್ದರು ಎಂಬುದನ್ನು ಕುರಿತು ಚರ್ಚಿಸಿದ್ದಾರೆ. ಇಬ್ಬರೂ ಭಿನ್ನನೆಲೆಯೊಳಗೆ ಬೆಳೆದವರಾದರೂ, ಬಸವಣ್ಣ ಉಚ್ಚಕುಲದಲ್ಲಿ ಹುಟ್ಟಿ ಅದರ ಆಚಾರ ವಿಚಾರಗಳಿಂದ ಹೊರಬಂದರೆ, ಕನಕ ಉಚ್ಚ ಕುಲದವರೊಂದಿಗೆ ಬಾಳಬೇಕಾದ ಪ್ರಸಂಗ ಹೊಂದಿ, ಅವರಿಂದ ಅವಮಾನವನ್ನು ಎದುರಿಸಿದವರು ಎನ್ನುವುದನ್ನು ಸೈದ್ಧಾಂತಿಕ ವಿಶ್ಲೇಷಣೆ ಮಾಡುತ್ತಾ ಇವರಿಬ್ಬರಲ್ಲಿರುವ ಹರಿನಾಮಸ್ಮರಣೆಯ ಆಯಾಮವನ್ನು ಹೀಗೆ ತೌಲನಿಕರಿಸಿದ್ದಾರೆ.

ಬಸವಣ್ಣನವರು

'ಶ್ರುತಿ ತತಿಯ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲವ ನಾನೆಂಬೆನಯ್ಯ

ಘನಕೆ ಘನಮಹಿಮನ ಮನಕ್ಕಗೋಚರನ

ಅಣೋರಣಿಯಾಗ ಮಹತೋಮಹಿಯಾನ್

ಮಹಾದಾನಿ ಕೂಡಲ ಸಂಗಮದೇವ' ಎಂದು ಹರಿಸ್ಮರಿಸಿದರೆ

ಕನಕದಾಸರು

'ಅಣುಮಹಾತ್ತಾದ ದೇವ

ಅಣುವಿಗೆ ಅಣುವು ಮಹಂತಿಗೆ ಮಹಿಮನು

ಅಖಿಳ ಗುಣಭರಿತ ಪರಮ ಪಾವನ ಚರಿತ ಎನ್ನಿನಿರ

ನೆನಹನೊಲಿದಿತ್ತು ಸಲಹಯ್ಯಾ . . . . . ॥ ಹರಿಭಕ್ತಿಸಾರ॥[೧೮]

ಎಂದು ಹೇಳುತ್ತಾರೆ. ಸಂಕಟಬಂದಾಗ ವೆಂಕಟರಮಣನ ಎಂಬ ಮಾನವನ ಪ್ರವೃತ್ತಿಯನ್ನು ಇಬ್ಬರೂ ಖಂಡಿಸಿದ್ದಾರೆ. ಭಕ್ತರ ಇರುವಿಕೆಯನ್ನೂ ಸಹ ವಿರೋಧಿಸಿದ ನೆಲೆ ಇಲ್ಲಿದೆ. ಅರುಹಿನ ತುತ್ತತುದಿ ಎನಿಸಿರುವ, ವೇದ ಉಪನಿಷತ್ತು ಮೊದಲಾದವುಗಳ ಪುಸ್ತಕದ ಮೇಲೆ ನಿಂತವರು ಬಸವಣ್ಣ ಹಾಗೂ ಕನಕರು. ಇವರು ದಏಶ, ಕಾಲ, ದಿಕ್ಕುಗಳನ್ನು ಮೀರಿದವರು. ಮನಸ್ಸಿಗೂ ಅಗೋಚರನು. ಅಣುವಿನಲ್ಲಿ ಅಣುವಾದವನು, ಸೃಷ್ಟಿಕರ್ತರನ್ನ ಒಲಿಸಿಕೊಂಡವರು. ಒಬ್ಬರು ಒಂದೊಂದು ರೀತಿಯಲ್ಲಿ ದೈವವನ್ನು ಧ್ಯಾನಿಸಿ ಒಲಿಸಿಕೊಂಡು, ಹರಿಭಕ್ತಿಮೂಲಕ ಸಮಾಜವನ್ನು ಕಟ್ಟಿದವರು. ಇವರ ಹರಿಭಕ್ತಿ ಅನನ್ಯವಾಗಿದೆ ಎಂದು ಹೆಳಿದ ಅಧ್ಯಯನಕಾರರ ಅಭಿಪ್ರಾಯವು ಸತ್ಯವಾಗಿದೆ. ಕನಕ ಪುರಂದರರು

ಹಾಗೂ ಸಮಕಾಲೀನರು ಎಂಬ ಲೇಖನದಲ್ಲಿ ಹರಿಲಾಲ್ ಪವಾರ ಅವರು ಹರಿಭಕ್ತಿ ಕುರಿತು ತೌಲನಿಕತೆಯ ಅಂಶವನ್ನು ಚರ್ಚಿಸಿದ್ದಾರೆ.

ವ್ಯಾಸರಾಯರ ಶಿಷ್ಯರಾಗಿ ಕನಕ, ಪುರಂದರರು ನೀಡಿದ ಕೊಡುಗೆ ಅನನ್ಯವಾದುದು. ಪುರಂದರದಾಸರು ಚಿನಿವಾಲರಾಗಿ ಸಂಪತ್ತಿನ ಆಗರದಲ್ಲಿ ಮೆರೆದವರು ಎನ್ನುವ ಪ್ರತೀತಿ ಇದೆ. ಮೂಗುನತ್ತಿನ ಘಟನೆ ಕಾರಣವಾಗಿ ಜೀವನದಲ್ಲಿ ವಿರಕ್ತಿ ತಾಳಿದವರು. ವ್ಯಾಸರಾಯರಲ್ಲಿ ದಾಸದೀಕ್ಷೆ ಪಡೆದು ಅವರ ಶಿಷ್ಯರಾಗುತ್ತಾರೆ. ಕನಕದಾಸರು ಕಲಿಯಾಗಿ, ನಾಡಗೌಡಿಕೆ ಅನುಭವಿಸಿ ಯುದ್ಧದಿಂದಾಗುವ ಸಾವು ನೋವನ್ನು ಕಂಡು, ಜಿಗುಪ್ಸೆ ಹೊಂದಿ, ವ್ಯಾಸರಾಯರ ಶಿಷ್ಯರಾಗುತ್ತಾರೆ. ದಾಸ ದೀಕ್ಷೆ ತೆಗೆದುಕೊಳ್ಳುವ ಸಂದರ್ಭ ಒದಗಿದ ಸಂಗತಿ ಇವರಿಬ್ಬರಲ್ಲಿ ವಿಭಿನ್ನವಾಗಿದೆ. ಅಂದರೆ ಕನಕರದು ವಾಸ್ತವನೆಲೆ, ಪುರಂದರರದು ರೂಪಕನೆಲೆ, ಈ ನೆಲೆಗಳು ಇವರ ಅಭಿವ್ಯಕ್ತಿಯನ್ನು ಸೃಷ್ಟಿಸಿದೆ. ಇಂತಹ ಅನುಭವಗಳು ಮೌಲಿಕ ಕೀರ್ತನೆ, ಸಾಹಿತ್ಯ ಹುಟ್ಟಲು ಕಾರಣವಾಯಿತು. 'ಮಾನವ ಜನ್ಮ ದೊಡ್ಡದು, ಇದನ್ನು ಹಾಳುಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ' 'ಸಾರ ಸಜ್ಜನರ ಸಂಗಲೇಸು' 'ಬೇವು ಬೆಲ್ಲದೊಳಿಡಲೇನು ಫಲ' ಎನ್ನುವ ಮಾತುಗಳು ಹೊರಬರುವುದಕ್ಕೆ ಕಾರಣವಾಗಿದೆ ಅಂತ ಅನಿಸುತ್ತದೆ ಆರಾಧನೆಯ ವಿಧಾನದಲ್ಲೂ ಇದನ್ನು ಕಾಣಬಹುದು ಉದಾಹರಣೆ,

'ಕಲಿಯುಗದೊಳಗೆ ಹರಿನಾಮವ ನೆನೆದರೆ
ಹರಿಯ ನೆನೆಯದ ನರಜನ್ಮವೇಕೆ
ಭಯ ನಿವಾರಣವು ಶ್ರೀ ಹರಿಯ ನಾಮ'[೧೯]

ಮುಂತಾದ ಭಕ್ತಿ ಪ್ರಧಾನವಾದ ಕೀರ್ತನೆಗಳು ಜನಮನಕ್ಕೆ ನೀಡಿದ್ದಾರೆ.

'ಹರಿಕೊಟ್ಟ ಕಾಲಕ್ಕೆ ಉಣಲಿಲ್ಲೊ ಪ್ರಾಣೆ
ಬುತ್ತಿಯ ಕಟ್ಟೋಮನುಜಾ'[೨೦]

ಮೊದಲಾದ ಜೀವನಿಷ್ಠ ಕೀರ್ತನೆಗಳು ಪುರಂದರರಿಂದ ರಚಿತಗೊಂಡವು. ಸಂಗೀತದೊಡಗೂಡಿ ಜನರ ನಾಲಿಗೆಯ ಮೇಲೆ ನಲಿದಾಡುತ್ತಿವೆ. ಇಲ್ಲಿನ ಅಂತರಂಗದ ನಿವೇದನೆಯಲ್ಲಿ ಉತ್ತಮ ಸಮಾಜ ನಿರ್ಮಿಸುವ ಹಂಬಲದ ಸಾಮಾಜಿಕ ವಿಮರ್ಶೆಯನ್ನು ನೋಡಬಹುದು.

ಇಲ್ಲಿ ಕನಕದಾಸರು ಸಹ ಪುರಂದರದಾಸರ ಸಮಕಾಲೀನರಾಗಿ ಮಾಡಿದ ಸಾಧನೆ ದಾಸರಕ್ಕಿಂತಲೂ ಭಾಷೆ, ಶೈಲಿ, ವಿಷಯ, ವಸ್ತು ವೈವಿಧ್ಯದಿಂದ ಹಿರಿದಾದುದು. ವೈಷ್ಣವ ಮತಾವಲಂಬಿಯಾಗಿ, ಹರಿಭಕ್ತಿ ತುಂಬಿಕೊಂಡು ಮದ್ವಮತದ ಸಂಪ್ರದಾಯವನ್ನು ಮುಂದುವರೆಸುವ ಹರಿಕಾರರಾಗಿ, ಲೋಕಭೋದ, ಸಮಾಜಮುಖಿ ನಿಲುವಿನ ಕೀರ್ತನೆ, ಕಾವ್ಯ, ಉಗಾಭೋಗ, ಮುಂಡಿಗೆಗಳನ್ನು ವಿಫೂಲವಾಗಿ ರಚಿಸಿ, ಪಂಡಿತಕವಿ ಎಂಬುವ ಬಿರುದಿಗೂ ಪಾತ್ರರಾದರು,

ತೀರ್ಥಯಾತ್ರೆ ಮುಗಿಸಿಕೊಂಡು ವೈಕುಂಟದಾಸರು ಕನಕದಾಸರನ್ನು ಪ್ರಶ್ನಿಸಿದ್ದಕ್ಕೆ ಕನಕ ಕೊಟ್ಟ ಉತ್ತರ ಇಂತಿದೆ.

'ಹಲವುದಾಸರ ಮನೆಯ ಹೊಲೆದಾಸ ನಾನಯ್ಯ

ಕುಲವಿಲ್ಲದ ದಾಸ ಕುನ್ನಿದಾಸ'[೨೧]

ಎನ್ನುವ ಮಾತುಗಳಿಂದ ಅವರಿಗೆ ಹೊಡೆತವನ್ನು ಹಾಕಿದರು. ಆಗ ಇದನ್ನು ಅರಿತ ವೈಕುಂಟದಾಸರು ಹೆಮ್ಮೆಯ ಮಾತುಗಳನ್ನಾಡಿದರು. ಅವರ ಕೆಲವು ಪ್ರಸಂಗಗಳು ಕೀರ್ತನೆಯ ಸಾಲುಗಳನ್ನು ತಂದು ಸಾಮ್ಯತೆಯಿಂದ ಲೇಖಕರು ನೋಡಿರುವ ಅವರ ಹರಿಭಕ್ತಿ ಅಂತರಂಗದಿಂದ ಬಂದುದು ಹರಿಲಾಲ್ ಪವಾರ ಅವರು ಕನಕಪುರಂದರ ಹರಿಭಕ್ತಿಯನ್ನು ನೋಡುವಾ, ಜೀವನದ ಸಂಸ್ಕೃತಿಯ ಕಳಜಿ ಇಲ್ಲಿನ ಕೀರ್ತನೆಯಲ್ಲಿ ಕಾಣುತ್ತೇವೆ. ಅಧ್ಯಾತ್ಮದಿಂದ ಹರಿಯನ್ನು ಕಾಣುವ ಉತ್ಕನತೆ, ಸಮುದಾಯದ ಮೇಲೆ ಪರಿಣಾಮವನ್ನು ಬೀರದೆ ಇರದು. ಹೀಗಾಗಿ ಪುರಂದರರಿಗಿಂತ ಕನಕರ ಭಕ್ತಿ ಭಿನ್ನವಾಗಿ ನಿಲ್ಲುತ್ತದೆ.

ಗುರುಪಾದ ಘಿವಾರಿ ಅವರು ಏಕನಾಥ ಮತ್ತು ಕನಕದಾಸರ – ಭಕ್ತಿಯ ವಿಭಿನ್ನ ನೆಲೆಗಳು ಎನ್ನುವ ಲೇಖನದಲ್ಲಿ ಶ್ರೀ ರಂಗಪಟ್ಟಣದ ರಂಗನಾಥಸ್ವಾಮಿಯನ್ನು ಕುರಿತು ಕನಕದಾಸರು ಬರೆದ 'ಯಾಕೆ ನೀ ನಿಲ್ಲಿ ಪವಡಿಸಿದೆ ಹರಿಯೇ ಜಗದೇಕ ವಿಖ್ಯಾತಿ ಪಶ್ಚಿಮ ರಂಗನಾಥ' ಎನ್ನುವ ಭಾವಕ್ಕೂ ಏಕನಾಥರು ಈ ರಂಗನಾಥನ ಮೇಲೆ ರಚನೆ ಆಗಿರುವ 'ಜಾಗಲ್ಯಾ'ಕ್ಕೂ ಹಾಗೂ ಅಭಂಗಕ್ಕೂ ತುಂಬಾ ಸಾಮ್ಯವಿರುವುದು ಗಮನಾರ್ಹವಾಗಿದೆ. ಉದಾಹರಣೆ ಈ ಸಾಲುಗಳನ್ನು ನೋಡಬಹುದು.

'ಉಠಾಕೀ ಜೀ ಮಾಯಬಾಪ ಲಾಗಲೀ ಝೋಪ

ಹುಜೂರ ಜಾವುನಿಯಾ ತೇವಢಿ ಚುಕವಾಖೇಪ'[೨೨]

ಏಕನಾಥರು ಮತ್ತು ಕನಕದಾಸರು ಸಂತಕವಿಗಳು, ಸಮಾಜ ಸುಧಾರಕರು, ಮಾನವತಾವಾದಿಗಳು. ಒಬ್ಬರು ವೈದಿಕ ಮನೆತನದವರು. ಮತ್ತೊಬ್ಬರು ಅವೈದಿಕ ಮನೆತನದವರು. ವೈದಿಕ ಮೂಲದಿಂದ ಬಂದ ಏಕನಾಥರು ಸಂಪ್ರದಾಯ, ಮಡಿವಂತಿಕೆ, ಸಂಸ್ಕೃತನಿಷ್ಠರಾಗಿ ಉಳಿಯದೆ ಕೆಳವರ್ಗದ ಜನತೆಯೊಂದಿಗೆ ಬೆರೆತು ಅವರ ಉದ್ಧಾರಕ್ಕಾಗಿಯೇ ಶ್ರಮಿಸಿದವರು.

ಕನಕದಾಸರು ಪ್ರತಿಕೂಲ ಪರಿಸರ ವಿರೋಧಗಳನ್ನು ತಮ್ಮ ಹೋರಾಟದ ಮೂಲಕ ಎದುರಿಸಿ ಮುನ್ನಡೆದವರು. ಅವೈದಿಕ ನೆಲೆನೇರಿ ನಿಂತವರು. ತಮ್ಮ ಬದುಕು–ಬರಹ, ಸಾಧನೆ–ಸಿದ್ಧಿಗಳಿಂದ ಸಂತಶ್ರೇಷ್ಠರಾಗಿ ಮನುಷ್ಯನ ವ್ಯಕ್ತಿತ್ವ ವಿಕಾಸಕ್ಕೆ ಜಾತಿ–ಮತ–ಪಂಥಗಳ ಹಂಗಿಲ್ಲ ಎನ್ನುವುದನ್ನು ಸಾಬೀತುಪಡಿಸಿದ ಕನಕದಾಸರು ಇವತ್ತಿಗೂ ಪ್ರಸ್ತುತ.

ತಮಿಳು ಸೆಲ್ವಿ ಅವರು 'ಕನಕದಾಸರು ಮತ್ತು ತಿರುವಳ್ಳುವರ್ ಅವರ ಭಕ್ತಿಯ ವಿಭಿನ್ನ ಆಯಾಮಗಳು ಎಂಬ ಲೇಖನದಲ್ಲಿ ಭಕ್ತಿಯ ವಿವಿಧ ಆಯಾಮಗಳ ಒಳನೋಟಗಳಿವೆ. ತಿರುವಳ್ಳುವರ್ ತಮಿಳಿನ ಪ್ರಸಿದ್ಧ ನೀತಿಕವಿ. ಇವರು ರಚಿಸಿ ಕೃತಿ 'ತಿರುಕ್ಕುರಳ್' ಇಲ್ಲಿ 'ತಿರು' ಎಂದರೆ 'ಶ್ರೀ' ಹಾಗೂ

ಪವಿತ್ರವಾದುದು ಎಂದರ್ಥ. 'ಕುರಳ್' ಎಂದರೆ ಕಿರಿದಾದುದು ಎಂದರ್ಥ. ಇದರಲ್ಲಿ ಧರ್ಮ, ಅರ್ಥ, ಕಾಮ (ಅರಂ, ಪೊರುಳ್, ಇನ್ಬಂ) ಎಂದು ಮೂರುಭಾಗಗಳಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ಬಗೆಯ ಹುಡುಕಾಟ ಮಾಡಿ ೧೩೩೦ ಪ್ರಶ್ನೆಗಳ ಬಳಕೆಯಾಗಿರುವುದು ವಿಶೇಷ, ಇಹಲೋಕದ ಬದುಕಿಗೆ ಇವರು ಹೆಚ್ಚು ಪ್ರಾಧಾನ್ಯ ನೀಡಿದ್ದಾರೆ. ಆಂತರಿಕ ಬೆಳವಣಿಗೆ ಮನುಷ್ಯನನ್ನು ಸುಖ-ದುಃಖಗಳು, ಜನನ-ಮರಣಗಳಿಂದ ವಿಮುಕ್ತಗೊಳಿಸುವ ಸಾಧನವೆಂದು ಹೇಳುತ್ತಾರೆ. ಮಾನವ ಜೀವನ ಮತ್ತು ಈ ಜಗತ್ತನ್ನು ಸತ್ಯವೆಂದು ನಂಬುವವರು. ಲೌಕಿಕ ಬದುಕನ್ನು ಅಲಕ್ಷಿಸುತ್ತಾರೆ. ಈ ಜಗತ್ತು ಅಶಾಶ್ವತವಾದುದೆಂದು ಭಾವಿಸುವವರು ತಮ್ಮ ಆತ್ಮೋದ್ಧಾರವನ್ನು ಮಾತ್ರ ಬಯಸಿ ಪಾರಮಾರ್ಥಿಕ ವಿಷಯಗಳನ್ನು ಕಡೆಗಣಿಸುತ್ತಾರೆ. ತಿರುಕ್ಕುರಳ್ ಈ ಎರಡು ಬಗೆಯ ಜನರಿಗೂ ಹೊಂದಿಕೆಯಾಗುವಂತೆ ಅದ್ಭುತ ಹಾಗೂ ಆಕರ್ಷಕ ತತ್ವಗಳನ್ನು ಬೋಧಿಸುತ್ತದೆ. ಇವರು ಆಂತರಿಕ ಚಿಂತನೆಗೆ ನೀಡಿದಷ್ಟೇ ಮಹತ್ವವನ್ನು ಬಾಹ್ಯಕ್ರಿಯೆಗೂ ನೀಡಿರುವುದು ವಿಶೇಷ.

'ಮರೆಯುದಕ್ಕಿಂತ ಮಿಗಿಲಾದ ಕೇಡು ಬೇರಿಲ್ಲ' ಎನ್ನುತ್ತಾರೆ. ತಿರುಕ್ಕುರಳ್‌ನಲ್ಲಿ ಯಾವುದೇ ಮತ-ಧರ್ಮಗಳ ದೇವರ ಸ್ತುತಿಯಲ್ಲಿ ಅಥವಾ ಅವರು ತಮ್ಮ ಪದ್ಯಗಳಲ್ಲಿ ಅಭಿವ್ಯಕ್ತಿಸಲು ಹೊರಟಿರುವುದು ತಮ್ಮ ಭಕ್ತಿ ಭಾವವನ್ನೂ ಅಲ್ಲ, ಬದಲಿಗೆ ಮನುಷ್ಯನ ಇಹಲೋಕದ ಬದುಕು ಸಹ್ಯವಾಗಲು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಮಾತ್ರ ಪ್ರಧಾನವಾಗಿ ಕಾಣಿಸುತ್ತದೆ. ಆದರೆ ಕನಕರನ್ನು ತಿರುವಳ್ಳುವರ್‌ಗೆ ಹೋಲಿಸಿದಾಗ ಕೊಂಚ ಭಿನ್ನವಾಗಿ ನಿಲ್ಲುತ್ತಾರೆ.

"ಕನಕದಾಸರು ಪ್ರಸಿದ್ಧ ಭಕ್ತ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಇವರ ಹರಿಭಕ್ತಸಾರ, ಕೀರ್ತನೆ, ಮುಂಡಿಗೆಗಳು ಶ್ರೇಷ್ಠವಾಗಿವೆ. ಭಗವಂತನೊಂದಿಗೆ ನಾನಾ ರೀತಿಯ ಸಂಬಂಧಗಳನ್ನು ಕಲ್ಪಿಸಿಕೊಂಡು ಸುಖಿಸುವುದು, ಭಕ್ತಿಯ ಸ್ನೇಹಿತನಾಗಿ, ಮಗುವಾಗಿ 'ಒಡೆಯನಾಗಿ', ಕಲ್ಪಿಸಿಕೊಂಡು ತಮ್ಮ ಭಕ್ತಿಯನ್ನು ಪ್ರದರ್ಶಿಸಿದ್ದಾರೆ. ಮಾನವ ಸಂಬಂಧಗಳ ಹಿನ್ನೆಲೆಯಲ್ಲಿ ಭಕ್ತಿಯ ಈ ಆಯಾಮಗಳನ್ನು ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತ ಭಾವಗಳೆಂದು ಐದು ರೀತಿಯಲ್ಲಿ ಗುರುತಿಸಬಹುದು. ಹೀಗೆ ಹಲವು ನೆಲೆಗಳಲ್ಲಿ ತಮ್ಮ ಭಕ್ತಿಯನ್ನು ತೋರಿಸಿ ಇಷ್ಟೆಲ್ಲ ವಿಧದಲ್ಲಿ ಸ್ತುತಿಸಿದರೂ ಇವರಿಗೆ ಸಮಾಧಾನವಿಲ್ಲ. ಇದನ್ನು ಈ ಕೆಳಗಿನ ಪದ್ಯದಲ್ಲಿ ಕಾಣಬಹುದು.

'ಆವ ಪರಿಯಲ್ಲಿ ನಿಮ್ಮನೊಲಿಸಿ ಮೆಚ್ಚಿಪ ವಿಧವು
ಅಣುಮಾತ್ರವೂ ತೋರದಲ್ಲ' ಎಂದು ಕೊರಗುತ್ತಾರೆ.[೨೩]

ಹೊಗಳುವ ಮೆಚ್ಚಿಸುವ ಷೋಡಷೋಪಚಾರಗೈವ ನವವಿಧ ಭಕ್ತಿ ಮಾಡುವ ಬಗೆಯನ್ನು ನಾನರಿಯೆ. ನನ್ನ ಅಖಿಲ ಸೇವೆಯನ್ನೊಪ್ಪಿಕೊಂಡು ನನ್ನನ್ನು ಸಲಹೋ ನೆಲೆಯಾದಿಕೇಶವನೆ ಸ್ವಾಮಿ ಎಂದು ಶ್ರೀ ಹರಿಗೆ ಸಂಪೂರ್ಣ ಶರಣಾಗುತ್ತಾರೆ.

'ಫಣಿರಾಜನಾಸನದಿ ಕುಳಿತಿಹಗೆ ಅರಿವೆಯೊಸನವತಾನೆಂತಾಸಲಿ
ಘನವಾದ ಗಂಗೆಯನ್ನು ಪಡೆದವಗೆ ಕಲಸ ನೀರನದೆಂತು ಮೈಗೆರೆಯಲಿ'[೨೪]

ಎಂದು ಚಿಂತಿಸಿರುವುದು ಅವರ ಸಾಮಾಜಿಕ ಬದ್ಧತೆಯನ್ನು ತಿಳಿಸುತ್ತದೆ.

ಜಿ. ಎಂ. ಹೆಗಡೆಯವರು 'ಕನಕದಾಸರ ಕೀರ್ತನೆಗಳ ತೌಲನಿಕ ಸಮೀಕ್ಷೆ' ಎಂಬ ಲೇಖನದಲ್ಲಿ ಕರ್ನಾಟಕ ಕೀರ್ತನ ಪ್ರಪಂಚದ ಅಶ್ವಿನಿದೇವತೆಗಳೆಂದು ಕೀರ್ತಿಪಡೆದ ಕನಕದಾಸರು ಮತ್ತು ಪುರಂದರದಾಸರು ಸಮಕಾಲೀನರು. ವಿಜಯನಗರ ಕಾಲದಲ್ಲಿ ಬಾಳಿ ಬೆಳಗಿದ ಇವರಿಬ್ಬರೂ ಭಕ್ತ ಕವಿಗಳಾಗಿ ದಾಸಸಾಹಿತ್ಯದ ಉತ್ಕೃಷ್ಟಕ್ಕೆ ಕಾರಣರಾಗಿದ್ದಾರೆ. ಇವರಿಬ್ಬರ ಅಭಿವ್ಯಕ್ತಿ ವಿದಾನದಲ್ಲಿ ಕೆಲವು ಸಾಮ್ಯತೆಗಳಿವೆ.

ಕನಕದಾಸರು ವಿಜಯನಗರ ಕಾಲದಲ್ಲಿ ಡಣ್ಣಾಯಕರಾಗಿದ್ದು ತಮಗೆ ಬಂದ ಅಧಿಕಾರ ಸಂಪತ್ತನ್ನು ತ್ಯಾಗಮಾಡಿ ವಿಜಯನಗರಕ್ಕೆ ಬಂದು ಹರಿದಾಸ ದೀಕ್ಷೆಯನ್ನು ಪಡೆದರು. ಪುರಂದರದಾಸರು ಆಗರ್ಭ ಶ್ರೀಮಂತಿಕೆಯನ್ನು ತ್ಯಾಗಮಾಡಿ ವಿಜಯನಗರಕ್ಕೆ ಬಂದು ವ್ಯಾಸರಾಯರಿಂದ ಹರಿದಾಸದೀಕ್ಷೆ ಪಡೆದುಕೊಂಡರು. ಅಂದರೆ ಕನಕ ಪುರಂದರರಿಬ್ಬರೂ ಲೌಕಿಕವಾದ ಶ್ರೀಮಂತಿಕೆ ಭೋಗ ಜೀವನವನ್ನು ತೊರೆದು ತಮ್ಮ ಜೀವನವನ್ನು ಶ್ರೀಹರಿಯ ಸೇವೆಗಾಗಿ ಅರ್ಪಿಸಿಕೊಂಡವರಾಗಿದ್ದಾರೆ. ಪುರಂದರದಾಸರ ಕೀರ್ತನೆಗಳಿಗಿಂತ ಕನಕದಾಸರು ರಚಿಸಿದ ಕೀರ್ತನೆಗಳು ಸಂಖ್ಯೆಯಲ್ಲಿ ಕಡಿಮೆ. ಆದರೂ ಸತ್ವದಲ್ಲಿ ಹಿರಿದಾಗಿವೆ.

"ಕನಕ ಪುರಂದರು ನವವಿಧ ಭಕ್ತಿಯಾದ ಶ್ರವಣ, ಕೀರ್ತನ, ಸ್ಮರಣ, ಪಾದಸೇವಾ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನೆಗಳಿಂದ ಕೃಷ್ಣದರ್ಶನ ಭಾವಸ್ಪಂದನವನ್ನು ತಮ್ಮ ಕೀರ್ತನೆಗಳಲ್ಲಿ ಅಭಿವ್ಯಕ್ತಿಪಡಿಸುತ್ತಾರೆ. ಒಟ್ಟಿನಲ್ಲಿ ಕನಕ ಪುರಂದರರು ಕೀರ್ತನ ಸಾಹಿತ್ಯದ ಶ್ರೇಷ್ಠ ಹರಿದಾಸರಾಗಿದ್ದಾರೆ."[೨೫]

ಭಕ್ತಿಪಂಥ ಭಾರತದಲ್ಲಿ ಎಬ್ಬಿಸಿದ ಅಲೆ ತತ್ವಶಾಸ್ತ್ರವನ್ನು ಸಾಮಾನ್ಯರ ಬದುಕನ್ನೂ ಎರಡು ತೆಕ್ಕೆಗಳಲ್ಲಿ ತಬ್ಬಿಕೊಂಡಿದ ಭಕ್ತಿ, ಸಾಮಾನ್ಯ ಮನುಷ್ಯನಿಂದ ಭಗವಂತನ ಕಡೆಗೆ ಹರಿಯುವ ತಾದಾತ್ಮ್ಯದ ಪ್ರವಾಹ ತತ್ವ ಮತ್ತು ಬದುಕಿನ ಎರಡು ದಡಗಳ ಮದ್ಯೆ ಯಾವುದನ್ನು ಅಲ್ಲಗಳೆಯದೆ ಸಾಗುವ ಆತ್ಮದ ಅಸ್ಖಲಿತ ತಲ್ಲೀನತೆಯೊಂದೆ ಭಕ್ತಿಯ ಬೆನ್ನೆಲುಬು, ತತ್ವವನ್ನು, ಬದುಕನ್ನು, ಒಂದು ಕೇಂದ್ರದಲ್ಲಿ ಬಂದಿಸಿ ಬದುಕಿನ ಶ್ರೀಮಂತಿಕೆಗೆ ರಾಜಮಾರ್ಗ ತೆರೆಯುವ ಭಕ್ತಿಪಂಥ ಆತ್ಮದಲ್ಲೇ ಪರಮಾತ್ಮನನ್ನು ಕಾಣುತ್ತದೆ ಆದರೆ ಕೆಲವನ್ನು ಭಿನ್ನವಾಗಿ ವ್ಯಾಖ್ಯಾನಿಸುತ್ತದೆ.

ಹರಿಲಾಲ್ ಪವಾರ್ ಹೇಳಿದ್ದಾರೆ. ಕನಕದಾಸರು ಅಧ್ಯಾತ್ಮಿಕ ನೆಲೆಯಲ್ಲಿ ನಿಂತು ಮಾತನಾಡುವಾಗ ತನ್ನನ್ನು ತಾನೆ ಮರೆತು ಭಗವಂತನನ್ನು ಸ್ಮರಿಸುತ್ತಾರೆ

'ಅರಿಗಾರಿಲ್ಲ ಅಪತ್ಕಾಲದೊಳಗೆ
ವಾರಿಜಾಕ್ಷನ ನಾಮನೆನ ಕಂಡ್ಯಮೆನವೆ'[೨೬]
ಹಸಿದು ಬಳಲುವಾಗ ಹಾಗೆ ಕೈಗೆ ಸಿಲುಕಿದಾಗ
ದೆಸೆಗೆಟ್ಟು ಅಧಿಕ ವ್ಯಾಧಿಯಲಿ ಇರುವಾಗ
ಅಸಮಾನನಾದಾಗ ಅತಿ ಭೀತಿಗೊಂಡಾಗ
ಬಿಸಜನಾಭವ ನಾಮ ನೆನೆಕಂಡ್ಯ ಮನವೆ

ಭಗವಂತನನ್ನೂ ಭಿನ್ನವಿಸುತ್ತಾ ತಿರುವಳ್ಳುವರ್ ಈ ರೀತಿ ಹೇಳುತ್ತಾರೆ; ಆಪತ್ಕಾಲದಲ್ಲಿ ಯಾರಿಗೆ ಯಾರು ಆಗುವುದಿಲ್ಲ. ಭಗವಂತನನ್ನು ನೆನೆದರೆ ಅವನು ಎಲ್ಲರನ್ನು ಕಾಪಾಡುತ್ತಾರೆ ಎಂದು ಕನಕರು ಹೇಳುತ್ತಾರೆ ಎಂದಿದ್ದಾರೆ.

'ಮನದ ಕತ್ತಲೆಯಿಮದೂದಗುವ ಒಳಿತು ಕೆಡಕುಗಳಂಬೆರಡು
ಭಗವಂತನ ಮಹಿಮೆಯನು ಹೊಗಳುವುದರ ಬಳಿಸಾರದು
ಉಪಮಾತೀತನಾದವನ ಶ್ರೀ ಪದಗಳು ನಂಬಿದವರಿಗಲ್ಲದೆ
ಉಳಿದವರಿಗೆ ಮನದ ಚಿಂತೆ ದೂರಾಗದು'[೨೭] **ಎಂದಿದ್ದಾರೆ**

ಇದು ಅಲ್ಲದೆ ಹರಿಯ ಮೇಲೆ ಅಪಾರವಾದ ಭಕ್ತಿ ಇತ್ತು ಎಂದು ಹೇಳಬಹುದು. ಶ್ರೀನಿವಾಸ ಉಡುಪ ಅವರು ಹರಿಭಕ್ತಿ ಕುರಿತು ವ್ಯಾಸರಾಯರು, ಪುರಂದರರು ಮತ್ತು ಕನಕದಾಸರು ಹರಿಯ ಬಗೆಯ ನಿಷ್ಠೆಯನ್ನು ಈ ಪದ್ಯಗಳ ಮೂಲಕ ಪ್ರಸ್ತುತಪಡಿಸಿರುವರು.

ಆಳುನಾ ನಿನ್ನಾಳು ನಾನು
ನೀನು ತಂದೆ ನಿನ್ನ ಕಂದ
ಶರಣ್ಯನಾ ನಿನ್ನ ಶ್ರರಣಾಗತನು. . . ?[೨೮]

ಎಂದು ಅಹಂಕಾರ ಮಮಕಾರಗಳನ್ನು ಭಕ್ತಿಯಜ್ಞದಲಿ ಆಹುತು ನೀಡಿ 'ಕೃಷ್ಣಾರ್ಪಣ' ಎಂದರು ಪುರಂದರ ಕನಕದಾಸರ ಕೃತಿಗಳಲ್ಲಿ ಭಾವ ಕಡೆ ಸ್ಥಾಯಿಯಾಗಿ ಕಾಣಿಸಿಕೊಳ್ಳುತ್ತದೆ.

'ನಿನ್ನ ಪಾದಾಂಬುರುಹ ಭಜಿಸುವುದೇ ಸೌಭಾಗ್ಯ
ನಿನ್ನ ನಿರ್ಮಾಲ್ಯಗಳೆ ಭೋಗದ್ರವ್ಯ
ನಿನ್ನ ಕಥೆ ಕೇಳುವುದೇ ಮಂಗಳ ಸುವಾದ್ಯಗಳು
ನಿನ್ನಂಥ ಅರಸೆನೆಗೆ ಪುರಂದರವಿಠಲ'[೨೯]

ಭಗವಂತನ ಸರ್ವಜ್ಞತ್ವ, ಸರ್ವಶಕ್ತಿತ್ವ, ಕಾರುಣ ಮೊದಲಾದ ಗುಣಗಳನ್ನು ಸ್ಮರಿಸುತ್ತಾನೆ ಹಾಗೆಯೇ ಕನಕದಾಸರು–

'ಏನೆಂದು ಕೊಂಡಾಡಿ ತುಟಿಸಲೋದೇವ
ನಾನೇನು ಬಲ್ಲೆ ನಿನ್ನಯ ಮಹಿಮೆ ಘನವ'[೩೦]

ಹೀಗೆ ಭಗವಂತನ ಹಿರಿಮೆ–ಗರಿಮೆಗಳನ್ನು ಗುರುತಿಸುತ್ತಾರೆ. ಒಟ್ಟಾರೆ ಹರಿಯನ್ನು ತನು ಮನದಿಂದ ಸ್ಮರಿಸಿ ಹರಿಯ ಹತ್ತಿರಕ್ಕೆ ಹೋಗಬಹುದು. ಅದಕ್ಕೆ ಕನಕದಾಸರನ್ನು ಅವರ ಹರಿಭಕ್ತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಲೌಕಿಕ ಪರಂಪರೆ ಬಿಟ್ಟು ಹರಿಯ ನೆನೆದು ಹರಿದಾಸರಾಗಿ ಸಾಮಾಜವನ್ನು ತಿದ್ದಿದ ಶ್ರೇಷ್ಠತೆ ಅವರಿಗಿದೆ ಹೀಗೆ ಹರಿಭಕ್ತಿಯನ್ನು ಕಾಣುತ್ತೇವೆ.

೬.೫ ದಾನ, ಧರ್ಮ, ಪರೋಪಕಾರ ಪರಿಕಲ್ಪನೆಗಳು.

ಡಾ. ಹರಿಲಾಲ್ ಪವಾರ ಇವರು 'ಕನಕದಾಸರು ಮತ್ತು ತಿರುವಳ್ಳುವರ್ (ಲೇಖನದಲ್ಲಿ) ಮನುಷ್ಯ ಸುಖಿಯಾಗಲು ಇನ್ನೊಬ್ಬರಿಗೆ ಸಹಾಯ, ಸಹಕಾರ ನೀಡಬೇಕು. ಅಂದಾಗ ಮಾತ್ರ ಜೀವನ ಸಾರ್ಥಕವಾಗುವುದು, ಎನ್ನುತ್ತಾರೆ ಈ ನಿಟ್ಟಿನಲ್ಲಿ ಕನಕದಾಸರು ಮತ್ತು ತಿರುವಳ್ಳುವರ್ ಹೇಳಿಕೆಗಳು ಬಹಳ ಮಹತ್ವದ್ದಾಗಿವೆ.

'ದಾನ ಧರ್ಮವ ಮಾಡಿ ಸುಖಿಯಾಗು ಮನವೆ
ಹೀನ ವೃತ್ತಿಯಲಿ ನೀ ಕೆಡಬೇಡಾ ಮನವ'[೩೧]

ಎನ್ನುವುದರ ಮುಖಾಂತರ ಪರೋಪಕಾರವನ್ನು ಮಾಡು, ಭೋಗವನ್ನು ನಂಬಿ ನೀನು ಭಗವಂತನ ಸ್ಮರಣೆಯನ್ನು ಮರೆಯಬೇಡವೆಂದು ಎಚ್ಚರಿಸಿದ್ದಾರೆ. ಈ ಎಚ್ಚರಿಕೆ ಕನಕರಲ್ಲಿದ್ದ ಸಾಮಾಜಿಕ ಅಭಿವೃದ್ಧಿಯನ್ನು ಅಧ್ಯಯನಕಾರರು ಕಂಡುಕೊಂಡಿದ್ದಾರೆ.

ತಿರುವಳ್ಳುವರ್

'ಹಸಿವ ತಾಳುವ ತಪನೆಗಳ ಬಲಕ್ಕಿಂತ
ಹಸಿವ ತೀರಿಸುವ ದಾನಿಗಳ ಬಲವದು[೩೨]

ಹಸಿವ ತಾಳುವ ತಪಸ್ವಿಗಳ ಬಲಕ್ಕಿಂತ ಬಡವರ ಹಸಿವನ್ನು ನೀಗಿಸುವ ದಾನಿಗಳ ಬಲ ದೊಡ್ಡದು. ಹಂಚಿಕೊಂಡು ಉಂಡರೆ ಹಸಿವೆಂಬ ಕೆಟ್ಟರೋಗ ತಗುಲದು. ಸಿರಿಯನ್ನು ನೆಚ್ಚಿಕೊಂಡು ಸುಮ್ಮನೆ ಕಾಲ ಕಳೆಯಬೇಡ ಎಂದು ಹಿತವಚನ ನುಡಿಯುತ್ತಾರೆ. ಹೀಗೆ ಪ್ರತಿಯೊಂದು ಹಲವು ಪದ್ಯಗಳಲ್ಲೂ ಇಬ್ಬರೂ ಕವಿಗಳ ಸಮನ್ವಯತೆ ಎದ್ದು ಕಾಣುತ್ತದೆ. ಪರೋಪಕಾರದ ಸ್ಮರಣೆ ಮಾಡುತ್ತಾ ಬಂದು ಸಣ್ಣ ಸಹಾಯ ಮಾಡಿದರು. ತಿಳಿದವರು ಅದನ್ನು ಬಹುದೊಡ್ಡದೆಂದು ಭಾವಿಸಿ ಜೀವನಸಾಗಿಸುತ್ತಾರೆ ಎನ್ನುವ ಮಾತಿಗೆ, ನವಣಿ ಕಾಳಿನಷ್ಟು ನೆರವನಿತ್ತರೂ ತಾಳೆಯ ಮರದನಿತು ಭಾವಿಸರು ಎನ್ನುವ ಹೋಲಿಕೆ ತಿರುವಳ್ಳುವರ್ ಇವರ ಅಭಿವ್ಯಕ್ತಿ ಜನಪದ ಆಡು ಭಾಷೆಯ ಜೀವಂತಿಕೆ ಸಾಕ್ಷಿಯಾಗಿದೆ.

ಸರಸ್ವತಿದೇವಿ ಭಗವತಿಯವರು ಕನಕದಾಸರು ಮತ್ತು ತಿರುವಳ್ಳುವರ್ ಎನ್ನುವ ಲೇಖನದಲ್ಲಿ ದಾನ, ಧರ್ಮ, ಪರೋಪಕಾರಗಳ ಚಿತ್ರಣಗಳನ್ನು ಹೀಗೆ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕನಕದಾಸರು ಸಂಸಾರವನ್ನು ನೆಚ್ಚಿ ಕೆಡಬೇಡ, ದಾನ ಧರ್ಮವ ಮಾಡಿ ಸುಖಿಯಾಗಿರು ಮನುಜ ಎಂದು ಹೇಳಿ

'ಏನು ಇಲ್ಲದ ಎರಡು ದಿನದ ಸಂಸಾರ
ಜ್ಞಾನದಲಿ ದಾನಧರ್ಮವ ಮಾಡಿರಯ್ಯಾ'[೩೩]

ಎನ್ನುವುದರ ಮುಖಾಂತರ ಸಂಸಾರವನ್ನು ನಂಬಿ ಕೆಡಬೇಡ ಜ್ಞಾನವಿರುದರ ಜೊತೆಗೆ ದಾನ, ಧರ್ಮವ ಮಾಡು. ಅನ್ನದಾನ ಮಾಡದಿದ್ದರೆ ದ್ರೋಹವಾಗುತ್ತದೆ. ದಾನ, ಧರ್ಮ, ಪರೋಪಕಾರ ಮಾಡುತ್ತಾ

ಸುಖಿಯಾಗಿರಬೇಕೆಂದು ಕನಕದಾಸರು ಸೂಚ್ಯವಾಗಿ ಹೇಳಿದ್ದಾರೆ. ಇದೇ ವಿಷಯವನ್ನು ತಿರುವಳ್ಳುವರ್ ಅವರು ಸಹ.

'ಹಸಿವ ತಾಳುವ ತಪಸಿಗಳ ಬಲಕ್ಕಿಂತ
ಬಡವರ ಹಸಿವ ತೀರಿಸುವ ದಾನಿಗಳ ಬಲವದು ಹಿರಿದು'[೩೪]

ಎನ್ನುವುದರ ಮಖಾಂತರ ಹಂಚಿಕೊಂಡು ಉಣ್ಣುವವರಿಗೆ ಹಸಿವೆಂಬ ಕೆಟ್ಟರೋಗ ಎಂದಿಗೂ ಅಂಟಿಕೊಳ್ಳುವುದಿಲ್ಲಾ ಎಂದು ಹೇಳುವುದರ ಮೂಲಕ ಆಹಾರ ಜ್ಞಾನವನ್ನು ತಿಳಿಸಿದ್ದಾರೆ.

ಕನಕದಾಸರು ದಾನ, ಧರ್ಮ, ಪರೋಪಕಾರವನು ಮರೆಯದೇ ಮಾಡಬೇಕೆಂದು ಎಚ್ಚರಿಸಿದರೆ ತಿರುವಳ್ಳುವರ್ ಸರಿಯಾದ ಸಮಯದಲ್ಲಿ ಮಾಡಿದಂತಹ ಉಪಕಾರ ಅದು ಅಲ್ಪವಾದರೂ ಭೂಲೋಕಕ್ಕಿಂತ ಅತಿ ಹಿರಿದಾದುದು. ನವಣೆ ಕಾಳಿನಷ್ಟು ಸಹಾಯ ಮಾಡಿದರೂ ಅದರ ಮಹತ್ವವಾದದ್ದು. ಅಂತವರು ಅದು ತಾಳೆಯ ಮರದಷ್ಟು ದೊಡ್ಡದೆಂದು ತಿಳಿಯುವರು ಎಂದು ಹೇಳುತ್ತಾರೆ.

ವಿಶ್ಲೇಷಣೆ

ದಾನ, ಧರ್ಮ, ಪರೋಪಕಾರ ಇವು ಸಾಮಾಜಿಕ ಸಂರಚನೆಯ ಮೌಲ್ಯಗಳು ಎಂದು ಆದ್ಯಯನಕಾರರು ಹೇಳಿರುವುದು ಮೌಲ್ಯಯುತವಾಗಿದೆ. ಪ್ರಾಚೀನ ಕಾಲದಲ್ಲಿ ದಾನ ಮಾಡುವುದು ಮನುಷ್ಯ ಜೀವನದ ಒಂದು ಭಾಗವಾಗಿತ್ತು. ಹಾಗೆಯೇ ಧರ್ಮ ಯಾವುದು ಎಂದು ಪ್ರಶ್ನೆ ಮಾಡಿದಾಗ ಹಿಂದೂ, ಕ್ರೈಸ್ತ, ಮುಸ್ಲಿಂ, ಜೈನ, ಬೌದ್ಧ ಧರ್ಮ ಎಂದು ಪ್ರತಿಕ್ರಿಯಿಸುತ್ತಾರೆ. ಆದರೆ, ಇಲ್ಲಿ ಕನಕರು ಹೇಳಿದ ಧರ್ಮ ಮಾನವೀಯತೆಯ ಧರ್ಮ, ಮನುಷ್ಯತ್ವದ ಧರ್ಮವಾಗಿದೆ. ಇಂತಹ ಮಾನವೀಯತೆಯನ್ನು ರೂಢಿಸಿಕೊಂಡು ಪರೋಪಕಾರಗುಣಗಳನ್ನು ಹೊಂದಬೇಕಾಗಿದೆ. ಅದಕ್ಕೆ ಕನಕರು ಹೇಳಿದ ಮಾತು ಸ್ತುತ್ಯಾರ್ಹ. ದಾನ ಧರ್ಮವ ಮಾಡಿ ಸುಖಿಯಾಗಿರು ಮನವೇ ಹೀನ ವೃತಿಯಲಿ ನೀ ಕೆಡಬೇಡ ಎಂದಿರುವುದು ಇದಕ್ಕೆ ಪೂರಕವಾಗಿದೆ. ಕಳ್ಳತನ, ಭ್ರಷ್ಟಾಚಾರ, ಕೊಲೆ, ಸುಲಿಗೆ ಮಾಡುವುದೆ ಹೀನ ವೃತ್ತಿಯಾಗಿದೆ. ಇಂತಹ ವೃತ್ತಿಗಳಿಂದ ದೂರವಿರಲು ಹೇಳಿರುವರು. ಒಬ್ಬರಿಗೊಬ್ಬರೂ ಅನ್ಯೋನ್ಯವಾಗಿರಲು, ಪರೋಪಕಾರಿ ಬುದ್ದಿಯನ್ನು ಅನುಸರಿಸಲು ಹೇಳಿರುವುದು ಮೌಲ್ಯಯುತವಾಗಿದೆ. ಹಾಗೂ ಎಲ್ಲ ಕಾಲಕ್ಕೂ ಅನ್ವಯವಾಗುವಂತಹ ಮಾತು ಹೌದು.

೬.೪ ಸ್ತ್ರೀ ಸಂವೇದನೆ

ಕನಕದಾಸರ ಅಧ್ಯಯನಗಳಲ್ಲಲಇ ತುಂಬಾ ಮಹತ್ವದ ಅಧ್ಯಯನಗಳಲ್ಲಿ ಸ್ತ್ರೀಸಂವೇದನೆಯಾಗಿದೆ. ಅಧ್ಯಯನಕಾರರು, ಕಾವ್ಯಶೋಧ ಪ್ರವೃತ್ತಿಯ ಭಾಗವಾಗಿ ಕಾವ್ಯಗಳಲ್ಲಿ ಕನಕರು ಪೌರಾಣಿಕ ಹಿನ್ನೆಲೆಯಲ್ಲಿ ಸ್ತ್ರೀಪಾತ್ರಗಳ ರಚನೆ, ಅವುಗಳ ಸೃಜಿಸಿದ ಕುರಿತು ಅದರ ಹಿಂದಿರುವ

ಧೋರಣೆಗಳ ಹಿನ್ನೆಲೆಯ ಅಧ್ಯಯನಗಳಾಗಿವೆ. ಅಧ್ಯಯನಕಾರರ ಅಧ್ಯಯನಗಳು ಯಾವ ದೃಷ್ಟಿಕೋನಗಳಲ್ಲಿವೆ ಎನ್ನುವುದು ಇಲ್ಲಿ ಮುಖ್ಯವಾಗಿದೆ.

ಮಲ್ಲಿಕಾ ಎಸ್. ಘಂಟಿಯವರು ತಮ್ಮ 'ಕನಕದಾಸರ ಮತ್ತು ಸ್ತ್ರೀ ಸಂವೇದನೆ' ಲೇಖನದಲ್ಲಿ ಹೀಗೆ ಹೇಳುತ್ತಾರೆ; "ಸ್ತ್ರೀಸಂಸ್ಕೃತಿಯ ಸಂಕೇತವಾಗಿ ಕನಕದಾಸರ ದಮಯಂತಿ ದಯಾಳುವಾಗುತ್ತಾಳೆ. ತಂದೆಯನ್ನು ಕರೆದು ಗಂಡಸಿನ ಮನಸ್ಸಿನಲ್ಲಿ ಹುಟ್ಟಿಕೊಂಡಿದ್ದ ಭೋಗ ಲಾಲಸೆಯನ್ನು ತಯಾಗದ ಕಡೆ ತಿರುಗಿಸುತ್ತ, ದಯಾಮಯಿಯಾಗಿ ಕಾಣಿಸಿಕೊಳ್ಳುವಳು. ಕನಕದಾಸರಂಥವರಿಗೆ ಇಂತಹ ಪ್ರಸಂಗವನ್ನು ಸೃಷ್ಟಿಸಲು ಸಾಧ್ಯ, ಪ್ರತಿಭೆ, ಪ್ರಾಮಾಣಿಕತೆ ಮತ್ತು ಪಾವಿತ್ರ್ಯತೆಯೆಂಬ ಮೌಲ್ಯಗಳು ಬಲಿಷ್ಠರನ್ನು ಕಾಯುವ ಸಲುವಾಗಿ ನಿರಂತರವಾಗಿ ಲೋಕ ಸಂಚಾರ ಮಾಡುತ್ತಿರುತ್ತವೆ.[೩೫]

ಹರಿಲಾಲ್ ಪವಾರ ಅವರು 'ಶಿಶುನಾಳ ಶರೀಫ ಮತ್ತು ಕನಕದಾಸರು'ಎನ್ನುವ ಲೇಖನದಲ್ಲಿ ಸ್ತ್ರೀ ಸಂವೇದನೆ ಕುರಿತು ಅವರ ಮನೋಧೋರಣೆಯನ್ನು ಕಾಣುತ್ತೇವೆ. ಅದಕ್ಕೆ ಶರೀಫರು

"ಮೋಹದ ಹೆಂಡತಿ ತೀರಿದ ಬಳಿಕ"
ಸಂಸಾರದ ಗೊಡವೆ ಇನ್ಯಾಕೆ
"ಜಾಣ ಹೆಂಗಸರಾಟ ನೋಡು ಜಲದ ಖಾವ್ಯಾಗ"
'ದಾರಿಕಾರರು ನಿನ್ನಮಾರಿ ನೋಡಲು ಮಾರಿಯೆತ್ತಿ ನೊಡಬೇಡಮ್ಮೆ'
'ಅಳಬೇಡ ತಂಗಿ ಅಳಬೇಡ ನಿನ್ನ ಕಳುಹ ಬಂದವರಿಲ್ಲಿ ಉಳಿಸಿಕೊಂಬುವರಿಲ್ಲಾ'[೩೬]

ಎನ್ನುವುದರ ಮೂಲಕ ದೈನಂದಿನ ಬದುಕಿನಲ್ಲಿ ಸ್ತ್ರೀಪರವಾದ ಅಪಾರ ಕಾಳಜಿಯನ್ನೂ ಕಾಣುತ್ತೇವೆ. ಅವಳಿಗೆ ಬುದ್ಧಿವಾದ ಹೇಳುವುದರ ಜೊತೆಗೆ ಸಮಾಜದಲ್ಲಿ ಸ್ತ್ರೀಯನ್ನು ಹೇಗೆ ಕಾಣಬೇಕೆಂದು ಹೇಳಿಕೊಟ್ಟು, ಸ್ತ್ರೀಪರವಾದ ಕಳಕಳಿಯ ಉಪದೇಶ ನೀಡಿದ್ದಾರೆ.

ಇದು ಅವರಿಗೆ ಇರುವ ಸ್ತ್ರೀ ಬದ್ದತೆ ಅಥವಾ ಸಾಮಾಜಿಕ ಬದ್ದತೆಯಂತೆ ಕಾಣಿಸುತ್ತದೆ. ಅಲ್ಲದೆ 'ಬೀಳಬಾರದು ಹೆಂಗಸಿನ ಬಲೆಯೊಳಗೆ' ಎಂಬ ಎಚ್ಚರಿಕೆಯನ್ನು ಕೂಡಾ ಪುರುಷರಿಗೆ ನೀಡುತ್ತಾರೆ. ಹೆಣ್ಣು ಸಾಧಕನಿಗೆ ಆಕರ್ಷಣೆಯ ಅಪಾಯದ ಮೂಲವೆಂದರಿತ ಶರೀಫರು ಯೋಚಿಸಿ ಮುನ್ನೆಡೆಯಲು ವಿನಂತಿಸುತ್ತಾರೆ. ಅದರಂತೆ ಕನಕದಾಸರು ಹೊರತಾಗಿಲ್ಲಾ.

ಹೆಣ್ಣಿನ ಆಕರ್ಷಣೆಯನ್ನು ಮೀರಬೇಕು ಎಂದು ಹೇಳುತ್ತಾ 'ಹೇಮವಿಲ್ಲದ ಹೆಣ್ಣು ಗಜುಗ ಬೆಳದ ಕಣ್ಣು' ಮತ್ತು 'ಗಂಡಗಂಜದ ನಾರಿ ಅವಳೆ ಹೆಮ್ಮಾರಿ' ಎಂದು ಹೆಣ್ಣಿನ ಕೆಟ್ಟ ಸ್ವಬಾವವನ್ನು ಚಿತ್ರಿಸಿದರೆ

'ಸೋತು ಹೆಣ್ಣಿಗೆ ಹೆದರಿ ನಡೆವ ಪುರುಷನ್ಯಾತಕೆ
ಸನ್ನೆಯರಿತು ನಡೆಯದಿರುವ ಸತಿಯುಯಾತಕೆ'[೩೭]

ಎನ್ನುವಲ್ಲಿ ಪುರುಷನ ಅಸಹಾಯಕತೆಯನ್ನು, ಹೆಣ್ಣಿನ ಇತಿಮಿತಿಯನ್ನೂ ತಿಳಿಸಿದ್ದಾರೆ. ಪರ ಹೆಣ್ಣುಮಕ್ಕಳು ಎದುರಿಗೆ ಬಂದರೆ ನಜರಿಡಬೇಡಣ್ಣಾ ನಿನ್ನ ಭಗಿನಿಯರೆಂದು ಅರಿಯಬೇಕಣ್ಣ ಎಂದು

ತಿಳುವಳಿಕೆಯ ಮಾತನನ್ನು ಹೇಳುತ್ತಾ ಸ್ತ್ರೀಪರ ಕಾಳಜಿ ವ್ಯಕ್ತಪಡಿಸಿದ್ದಾರೆ. ಎಂದು ಹರಿಲಾಲ್ ಪವಾರವರು ಹೇಳಿರುವದು ಅರ್ಥಪೂರ್ಣವಾದ ವಿಶ್ಲೇಷಣೆಯಾಗಿದೆ.

ಆದರೆ ಸಮಾನತೆ ಬದುಕಿಗೆ ಬಾಳಿನ ಬಂಡಿಯಾಗಿ, ಪುರುಷನ ಅಭಿವೃದ್ಧಿ ವ್ಯಕ್ತಿತ್ವ ವೃದ್ಧಿಗೆ, ಆಸರೆಯಾಗಿ, ಸಮುದಾಯದಲ್ಲಿ ಸ್ತ್ರೀಯು ಹೆಂಡತಿ, ಮಗಳು, ತಾಯಿಯಾಗಿ ಸ್ವಸ್ತ ಸಮಾಜಕ್ಕೆ ಬೇಕಾದವಳು ಎಂದು ಪ್ರೇರಣಾತ್ಮಕತೆಗೆ ಹೆಣ್ಣು ಸಮಾಜಕ್ಕೆ ಕಣ್ಣಾಗಿದ್ದಾಳೆ ಅನ್ನುವುದನ್ನು ಕುರಿತು ಚರ್ಚಿಸಬೇಕಾಗಿದೆ. ಡಾ. ಹರಿಲಾಲ್ ಪವಾರ ಅವರು, ಕನಕದಾಸರು ಮತ್ತು ಕಬೀರರು(ಲೇಖನ)ದಲ್ಲಿ ಸ್ತ್ರೀಪರಕುರಿತು ತೌಲನಿಕವಾಗಿ ಹೇಳುತ್ತಾ, ಸ್ತ್ರೀ ಬಗ್ಗೆ ಅಪಾರ ಗೌರವವಿರಬೇಕು ಎಂದು ಕೆಳಗಿನಂತೆ ಹೇಳಿದ್ದಾರೆ.

"ನೋಡಿ ಮರುಳಾಗದಿರು ಪರಸತಿಯರ" ಎಂದು ಕನಕದಾಸರು ಹೇಳಿದರೆ ಕಬೀರರರು 'ಪರನಾರಿ ಪರಸುಂದರ ನಿಧಾನ ವಿಷವಿದ್ದಹಾಗೆ'[೩೮] ಎಂದು ಹೇಳಿರುವರು. ಇಲ್ಲಿ ಪರಸ್ತ್ರೀಯರನ್ನು ಮೋಹಿಸಬಾರದು, ಮರುಳಾಗಬಾರದು ಎಂದು ಹೇಳಿ ನೈತಿಕವಾಗಿ ಇರುವ ಮೌಲ್ಯವನ್ನು ಕನಕ, ಕಬೀರರು ಪ್ರತಿಪಾದಿಸಿದ್ದಾರೆ. ಹರಿಲಾಲ್ ಪವಾರ ಅವರು ಹೇಳಿ ತೌಲನಿಕರಿಸಿರುವ ಈ ವಿಷಯ. ಸ್ತ್ರೀಸಂವೇದನೆ, ಸ್ತ್ರೀಪರಕಾಳಜಿ ಆಗಿನ ಕಾಲಕ್ಕೆ ಇದ್ದ ಗೌರವವು ಮಹತ್ವ ಪೂರ್ಣವಾದುದು, ಸ್ತ್ರೀಯ ಸಮಾಜದ ಸ್ಥಿತಿಗತಿಗಳ ಕುರಿತು ಇನ್ನೂ ಚರ್ಚೆಗೆ ಒಳಪಡಿಸಬಹುದಾಗಿದೆ. ಆ ಮೂಲಕ ಮಹಿಳೆಯ ಅಸ್ಮಿತೆಗಳನ್ನು ಚಾರಿತ್ರೀಕ ಹಿನ್ನೇಲೆಯಲ್ಲಿ ಕಟ್ಟಿಕೊಳ್ಳಬೇಕಾಗಿದೆ.

ಸ್ತ್ರೀ ಸಂವೇದನೆ ತಾತ್ವಿಕ ವಿಶ್ಲೇಷಣೆ

ಭಾರತೀಯ ಪರಂಪರೆಯಲ್ಲಿ ಯೋಗಿಗಳು. ತ್ಯಾಗಿಗಳು, ದಾರ್ಶನಿಕರು ಸಂತರು. ಚಿಂತಕರು ಸ್ತ್ರೀಯರಿಗೆ ಮಾನವೀಯತೆಗೆ ಪ್ರಥಮಸ್ಥಾನ ನೀಡಿದ್ದಾರೆ. ಕುಟುಂಬ ವ್ಯವಸ್ಥೆಯನ್ನು ಕನಕರು, ಸ್ತ್ರೀಯನ್ನು ಸಾಂಪ್ರಾದಾಯಿಕ ದೃಷ್ಟಿಯಲ್ಲಿ ಕಂಡದ್ದೂ ಸಹ ಸ್ತ್ರೀಗೆ ಸ್ವಾತಂತ್ರ್ಯತ ಸಮಾನತೆ ನೀಡಬಾರದೆಂದು ಹೇಳಿಲ್ಲ. ಪುರುಷಪ್ರಧಾನ ಸಮಾಜದಲ್ಲಿ ಉದಾತ್ತಳಾಗಿ ಶುದ್ಧಳೆನಿಸಿ ಪವಿತ್ರ ಸಂಸಾರಕ್ಕೆ ಕಣ್ಣಾಗಬೇಕೆಂದು ಆಶಯ ಪಟ್ಟಂತಿದೆ. ಮನುಷ್ಯ ನಿರ್ಮಿತವಾದ ಪರಿಸರದಲ್ಲಿ ಸಾಮಾಜಿಕ ಸಮಸ್ಯೆಗಳು ಎಲ್ಲ ಕಾಲದಲ್ಲಿಯೂ ಪ್ರಜ್ಞಾವಂತರನ್ನು ಕಾಡಿವೆ. ಇಲ್ಲಿ ಅಗತ್ಯವಾಗಿ ಕಂಡುಬರುವ ಚಿಂತನೆಗಳಲ್ಲಿ ಸ್ತ್ರೀ ಸಂವೇದನೆ ಒಂದು ಇಂದಿನ ಆಧುನಿಕರಣ, ಜಾಗತಿಕರಣದ ದಿನದಲ್ಲಿ ಮಹಿಳೆ ಎಷ್ಟೆ ಬೆಳವಣಿಗೆಯಾದರು, ಅಸಮಾನತೆಯಿಂದೊಡಗೂಡಿರುವ ಸಮಾಜದಲ್ಲಿ ಬಡತನದಿಂದ ಬೆಂದ ಸ್ತ್ರೀಯು ತನ್ನತನವನ್ನು ಕಳೆದುಕೊಂಡು ಹೋಗಿದ್ದಾಳೆಂದು ಹೇಳಲಾಗಿದೆ. ಇಂದು ಎಲ್ಲೆಡೆ ಚರ್ಚೆಯಾಗಿ ಕೇಳಿ ಬರುತ್ತಿರುವ ವಿಷಯಗಳಲ್ಲಿ ಇದು ಮಹತ್ವಪೂರ್ಣವಾಗಿದೆ. ಇಲ್ಲಿ ಸ್ತ್ರೀವಾದಿ ಸಿದ್ದಾಂತದ ಬೆಳಕಿನೊಂದಿಗೆ ಭೂತವನ್ನು ಕೆದಕುತ್ತ ಹೋಗುವದೊಂದು ಚರಿತ್ರೆಯಲ್ಲಾಗಿರುವ ಕೆಲವೊಂದು ಅವಗಡಗಳನ್ನು ಗುರುತಿಸಿ ಹೊಸ ಚರಿತ್ರೆ, ಬರೆಯುವವರಿಗೆ ವಿವೇಕವನ್ನು ನೀಡುವುದಾಗಿದೆ. ಲೋಕಾಧಾರಿತ ಸಾಮಾಜಿಕ ನೋವು

ಅವರನ್ನು ದುಃಖಕ್ಕೆ ಒಳಪಡಿಸಿವೆ. ಹೆಣ್ಣಾದ ಕಾರಣಕ್ಕಾಗಿಯೇ ನೋವಿಗೆ ಒಳಗಾದ ಮಹಿಳಾ ಸಮುದಾಯವೇ ವರ್ಗ, ಜಾತಿಯಾದಾರಿತ ನೋವು ನೀಡುವವರ ವಿರುದ್ಧವಾದ ಧ್ವನಿ ಎತ್ತುವುದು ಇತ್ತೀಚಿನ ಪ್ರವೃತ್ತಿಯಾಗಿದೆ.

ಸುಬದ್ರ ಕುಟುಂಬ, ಸುಂದರ ಸಂಸಾರ ಹೇಗಿರಬೇಕೆಂಬ ಚಿಂತನೆಯನ್ನು ಅಧ್ಯಯನಕಾರರು ಹರಿಬಿಟ್ಟಿದ್ದಾರೆ. ಹಲವಾರು ಚಿಂತನೆಗಳಲ್ಲಿ ಸ್ತ್ರೀವಾದಿ ಚಿಂತನಾಕ್ರಮವು ಅಗತ್ಯವಾಗಿದೆ. ಅಸಮಾನತೆಯಿಂದೊಡಗೂಡಿರುವ ಸಮಾಜದಲ್ಲಿ ಸ್ತ್ರೀ ಕುರಿತಾದ ಅನೇಕ ಸಮಸ್ಯೆಗಳು ಬೆಳೆದಿವೆ ಎಂದಿದ್ದಾರೆ. ಧಾರ್ಮಿಕವಾಗಿ ಮಹಿಳೆಯನ್ನು ಪೂಜ್ಯನೀಯಳು ಎಂದು ಹೇಳಿ ಸಾಮಾಜಿಕವಾಗಿ ನಿಷ್ಕೃಷ್ಟವಾಗಿ ಪುರುಷ ಸಮಾಜ ನಡೆಸಿಕೊಂಡಿದೆ. ಅಂತಹುದರಲ್ಲಿ ಕನಕದಾಸರ ವಿಚಾರಗಳ ಹೇಳಿಕೆಯನ್ನು ಅವಲೋಕಿಸಲಾಗಿದೆ. ಅಧ್ಯಯನಕಾರರು ಸಮುದಾಯದ ಅಭಿವೃದ್ಧಿಗೆ ಮಹಿಳೆ ಅಗತ್ಯ ಎಂದು ವಾದಿಸಿದ್ದಾರೆ.

ಸ್ತ್ರೀಕುರಿತು ಮೋಹನತರಂಗಿಣಿಯಲ್ಲಿ ಸುಂದರ ಚಿತ್ರಣ ಮೂಡಿಸಿದ್ದರೆ, ನಳಚರಿತೆಯಲ್ಲಿ ಹೆಣ್ಣು ಶಕ್ತಿವಂತೆ, ಆದರ್ಶನಾರಿ, ಪತಿವ್ರತಾಜೀವಿ ಎಂದು ಹೇಳಲಾಗಿದೆ. ಭಾರತೀಯ ಕುಟುಂಬ ವ್ಯವಸ್ಥೆಯನ್ನು ಕನಕರು, ಸ್ತ್ರೀಯನ್ನು ಸಾಂಪ್ರಾದಾಯಿಕ ದೃಷ್ಟಿಯಲ್ಲಿ ಕಂಡದ್ದು, ಸ್ತ್ರೀಗೇ ಸ್ವಾತಂತ್ರ ಸಮಾನತೆ ಕಲ್ಪಿಸುವುದಕ್ಕೆ ಹಂಬಲಿಸಿದ್ದಾರೆ. ಈ ಹಂಬಲ ಲಿಂಗರಾಜಕಾರಣವನ್ನು ಒಡೆದು ಹಾಕುವುದಕ್ಕೆ ಪ್ರಯತ್ನಿಸುವ ಆಶಯಪಟ್ಟಿಂತಿದೆ.

ಸ್ತ್ರೀಸಂವೇದನೆ ಕುರಿತು ಹರಿಲಾಲ್ ಪವಾರ ಅವರು ಈ ರೀತಿ ಹೇಳುತ್ತಾರೆ. ಶಿಶುನಾಳ ಶರೀಫರ ಹಾಡು ಉಲ್ಲೇಖಿಸುತ್ತಾ 'ಅಳಬೇಡ ತಂಗಿ ಅಳಬೇಡ. ನಿನ್ನ ಕಳುಹ ಬಂದವರಲ್ಲಿ ಉಳುವ ಕೊಂಬುವರಿಲ್ಲಾ.' ಎನ್ನುವ ಸಾಲುಗಳನ್ನು ಬಳಸಿಕೊಂಡು ವಿಶ್ಲೇಷಣೆಗೆ ಮುಂದಾಗಿದ್ದಾರೆ. ಅಂದರೆ ದೈನಂದಿನ ಬದುಕಿನಲ್ಲಿ ಸ್ತ್ರೀಪರವಾದ ಅಪಾರ ಕಾಳಜಿಯನ್ನು ಕಾಣುತ್ತೇವೆ. ಅವಳಿಗೆ ಬುದ್ದಿವಾದ ಹೇಳುವುದರ ಜೊತೆಗೆ ಸಮಾಜದಲ್ಲಿ ಹೇಗೆ ಕಾಣಬೇಕೆಂದು ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

ಇದಕ್ಕೆ ಸಂವಾದಿಯಾಗಿ ಕನಕದಾಸರು, ಹೆಣ್ಣಿನ ಆಕರ್ಷಣೆ ಮೀರಬೇಕು ಎಂದು ಹೇಳುತ್ತಾ ಸಾಮಾಜಿಕವಾಗಿ ಹೆಣ್ಣು ಸಮಾಜದ ಕಣ್ಣು ಎಂದು ಅನುಭವಿಗಳು ಹೇಳುತ್ತಾ, ಸೋತ ಹೆಣ್ಣು ಹೆದರಿ ನಡೆದುಕೊಳ್ಳುತ್ತಾಳೆ ಎನ್ನುವುದನ್ನು ಕುರಿತು ಹೀಗೆ ಹೇಳಿದ್ದಾರೆ.

'ಸೋತುಹೆಣ್ಣಿಗೆ ಹೆದರಿ ನಡೆವ ಪುರುಷನಾತಕೆ
ಸನ್ನೆಯರಿತು ನಡೆಯದಿರುವ ಸತಿಯಾತಕೆ'[೩೮]

ಎನ್ನುವಲ್ಲಿ ಅಸಹಾಕತೆಯನ್ನು ಹೆಣ್ಣಿನ ಇತಿಮಿತಿ ತಿಳಿಸಿದ್ದಾರೆ ಎಂದು ಅಧ್ಯಯನಕಾರರ ಅಭಿಪ್ರಾಯವಾಗಿದೆ.

"ಮೋಹನ ತರಂಗಿಣಿ ಹಲವಾರು ಪ್ರೇಮ ಕಾವ್ಯಗಳ ಧಾರೆಯಾಗಿದ್ದರೂ ಅದರಲ್ಲಿ ಗಂಡು ಶಕ್ತಿಯಷ್ಟೆ ಹೆಣ್ಣಿನ ಕ್ರಿಯಾಶಕ್ತಿಯೂ ಬಿಂಬಿತವಾಗಿದೆ. ಕಾವ್ಯದಲ್ಲಿ ನೇರವಾಗಿ ಪಾತಿವ್ರತ್ಯದ ನೇರವಾಗಿ

ಒತ್ತುಕೊಟ್ಟು ಹೇಳುತ್ತಿದೆಯಾದರೂ, ಅದರ ವ್ಯಂಗ್ಯಾರ್ಥಗಳು ಪ್ರಕೃತಿ ತತ್ವದ ಆಯಾಮಗಳನ್ನು ಹೊರಗೆಡಹುತ್ತಿವೆ. ಹೀಗಾಗಿ ಸ್ತ್ರೀತ್ವದ ಮೌಲ್ಯಗಳು ಇಲ್ಲಿ ಮೇಲುಗೈಯಾಗುತ್ತವೆ.[೩೯]

ಒಟ್ಟಾರೆ ಕನಕದಾಸರು ಇತರೆ ಸಂತರನ್ನು ಅವಲೋಕಿಸುವ ಸಂದರ್ಭದಲ್ಲಿ ಮೂಢನಂಬಿಕೆ, ಡಾಂಬಿಕಪೂಜೆ, ಸಮಾಜದ ಅಂಕುಡೊಂಕು. ಬದುಕಿನ ಮೌಲ್ಯಗಳ, ದಾನಧರ್ಮ. ಹರಿಭಕ್ತಿ ಭಗವಂತ ಸ್ಮರಣೆ. ಜಾತಿ ಮತ್ತು ಸಾಮಾಜಿಕ ಅಮಾನತು, ಸಾಮಾಜಿಕ ಕಾಲಜಿ ಕುಲ, ಸ್ತ್ರೀಸಂವೇದನೆ ಮುಂತಾದ ವಿಚಾರಗಳಲ್ಲಿ ತೌಲನಿಕವಾಗಿ ವಿವಿಧ ವಿದ್ವಾಂಸರು ಹೇಳಿರುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇಲ್ಲಿ ಕನಕದಾಸರ ವಿಚಾರ ವ್ಯಕ್ತಿತ್ವಕ್ಕೆ ವಿಶ್ವವ್ಯಾಪಕತ್ವದ ನಿಲುವು ಒಂದು ಸ್ವರೂಪದರ್ಶನದಲ್ಲಿಯ ಮುಕ್ತಿ ಸುಖಾನುಭವಕ್ಕೆ ಮುಕ್ತತೆಯನ್ನು ತೆರೆದಿಡಲು ಸಾಧ್ಯವಾಗುತ್ತದೆ.

೬.೬ ಕಾಯಕದ ಮಹತ್ವ

ಕಾಯಕ ಪ್ರತಿಯೊಬ್ಬ ಮಾನವನ ಜೀವನದಲ್ಲಿ ಅನುಸರಿಸಬೇಕಾದ ಜೀವನವಿಧಾನ, ಉಡಲು, ತೊಡಲು, ಉಣ್ಣಲು ಎಲ್ಲದಕು ಕಾಯಕವೇ ಮುಖ್ಯವಾಗಿದೆ. ಆದರೆ ಉತ್ತಮ, ಶುದ್ಧ ಚಾರಿತ್ರಿಕವಾದ ಕಾಯಕ ಮಾಡಬೇಕೆಂದು ಅನುಭವಿಗಳು ಹೇಳಿರುವರು. ಈ ಹಿನ್ನೆಲೆಯಲ್ಲಿ ಕಾಯಕದ ಕುರಿತಾಗಿ ವಿವಿಧ ಅಧ್ಯಯನಕಾರರ ಅಭಿಪ್ರಾಯಗಳು ಹೀಗಿವೆ.

ಬಿ. ವ್ಹಿ. ಶಿರೂರ ಕನಕದಾಸರು ಬಸವೇಶ್ವರರು ಲೇಖನದಲ್ಲಿ ಕನಕ ಮತ್ತು ಬಸವೇಶ್ವರರು ಕಾಯಕದ ಬಗೆಗಿರುವ ತಮ್ಮ ನಿಲುವನ್ನು ಕೀರ್ತನೆ, ವಚನಗಳಮೂಲಕ ಹೇಳಿದ್ದಾರೆ ಅವುಗಳ ಚಿತ್ರಣಗಳನ್ನು ಈ ಕೆಳಗಿನಂತೆ ವಿಶ್ಲೇಷಣೆಗೆ ಒಳಪಡಿಸಬಹುದು.

ಕನಕರು– "ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ,"[೪೦] ಮಾಡುವ ವೃತ್ತಿ ಕೀಳಲ್ಲ ಎಂದಿದ್ದಾರೆ. ಇತರ ಸಂತರು ಈ ಪರಿಕಲ್ಪನೆಯನ್ನು ಭಿನ್ನನೆಲೆಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

ಬಸವಣ್ಣನವರು ಕಾಯಕವೇ ಕೈಲಾಸ ಎಂದಿರುವರು ಇಬ್ಬರೂ ದುಡಿದು ಬಂದ ಹಣದಿಂದ ಸದುಪಯೋಗ ಮಾಡಿಕೊಳ್ಳಬೇಕೆಂದಿದ್ದಾರೆ ಎಂದು ಹೇಳಿರುವ ಬಿ.ವ್ಹಿ. ಶಿರೂರ ಅವರು ಕಾಯಕದ ಮಹತ್ವ ವೃತ್ತಿ ಆಧಾರಿತ ಕಾಯಕಕ್ಕೆ ಪ್ರಾಚೀನ ಮತ್ತು ಇಂದಿನ ಪರಿಕಲ್ಪನೆ ನೀಡಬೇಕಾಗಿತ್ತು.

ಇಲ್ಲಿ ಕಾಯಕವನ್ನು ಅದರ ಮಹತ್ವವನ್ನು ಅರಿಯಬೇಕಾಗಿದೆ. ಪ್ರಾಚೀನ ಕಾಲದ ಪರಂಪರೆಯಿಂದ ಇಂದಿಗೂ ಕಾಯಕ, ಜೀವನದ ಅವಿಭಾಜ್ಯವಾಗಿದೆ. ದುಡಿಯದೆ ಉಣ್ಣದವನನ್ನು ಜನರು ಬಹಳ ತುಚ್ಚವಾಗಿ ಕಾಣುತ್ತಾರೆ. ಇಂದಿನ ಯುಗದಲ್ಲಿ 'ಕಾಯಕ' ಪದಕ್ಕೆ ಪರ್ಯಾಯವಾಗಿ 'ಉದ್ಯೋಗ' ಜ್ಯಾಬ್ ಆಗಿ ಪರಿವರ್ತನೆ ಆಗಿದೆ. ಅವು ಸಹ ಹುದ್ದೆ, ವಿದ್ಯಾರ್ಹತೆಗೆ ಅನುಗುಣವಾದ ಕೆಲಸ, ಕಾರ್ಯ ಮಾಡುವುದನ್ನು ನೋಡುತ್ತೇವೆ. ಆದರೆ ಹಿಂದಿನ ಕಾಲದಲ್ಲಿ ಉದೋಗಕ್ಕೆ ಅನುಗುಣವಾಗಿ ಅಂದರೆ ಜಾತಿ, ಅಥವಾ ಕುಲದ ಹಿನ್ನಲೆ, ಪರಂಪರೆಗೆ ಅನುಗುಣವಾದ ಕಾಯಕವಾಗಿತ್ತು. ಅದನ್ನೆ ಪಾರಂಪರಿಕವಾಗಿ ಮುಂದುವರೆಸಿಕೊಂಡು ಬಂದಿದ್ದರು. ಉದಾ: ಬಡಿಗತನ,

ಕಂಬಾರಿಕೆ, ಕುಂಬಾರಿಕೆ ಮುಂತಾದ ವೃತ್ತಿಗಳು ಜನರಲ್ಲಿ ಇದ್ದವು. ಆದರೆ ಇಲ್ಲಿ ದಕ್ಷ, ಪ್ರಾಮಾಣಿಕವಾದ ತಳಹದಿಯ ಮೇಲೆ ಕಾಯಕ ಮಾಡುತ್ತಿದ್ದರು. ಹೀಗಾಗಿ, ಪ್ರಾಚೀನ ಕಾಲದ ಕಾಯಕಕ್ಕೆ ತುಂಬಾ ಮಹತ್ವ ವಿದ್ದುದರಿಂದ 'ಕಾಯಕವೇ ಕೈಲಾಸ' ಎಂಬ ಬಸವೇಶ್ವರರ ಮಾತು ಸ್ತುತ್ಯಾರ್ಹವಾಗಿದೆ. ಆದರೆ ಇಂದು ಪ್ರಾಮಾಣಿಕವಾದ ಉದ್ಯೋಗ ಇಲ್ಲದಾಗಿದೆ. ದುಡ್ಡು, ಬಂಗಾರ, ಆಸ್ತಿ, ಅಂತಸ್ತನ್ನು ಗಳಿಸುವ ಉದ್ಯೋಗವನ್ನು ಹುಡುಕುತ್ತಿದ್ದಾರೆ. ಅಡ್ಡ ಮಾರ್ಗದಿಂದ ಸಂಪಾದನೆ ಮಾಡುವುದನ್ನು ಪ್ರಸ್ತುತ ದಿನಗಳಲ್ಲಿ ಕಾಣುತ್ತೇವೆ. ಅಗತ್ಯತೆಗೆ ಅನುಗುಣವಾಗಿ ಕಾಯಕ, ದುಡಿಮೆ ಆಗಬೇಕು. ಇದರಿಂದ ಆರ್ಥಿಕ ಅಸಮಾನತೆ ತೊಲಗಿದಾಗ ಕಾಯಕವೆಂಬ ಪರಿಕಲ್ಪನೆಗೆ ಮಹತ್ವ ಬರುತ್ತದೆ.

೬.೭ ಹೆಣ್ಣು, ಹೊನ್ನು, ಮಣ್ಣಿನ ಮೋಹ

ಪ್ರಸ್ತುತ ಸಮುದಾಯ ಭಿನ್ನ ಹಾದಿ ತುಳಿಯುತ್ತಿದೆ. ಸ್ವಾರ್ಥಪರವಾದ ನಿಲುವುಗಳು ಹೆಚ್ಚಾಗುತ್ತಿವೆ. ಇಂದು ಬದುಕು ಇರುವುದೇ ಹೆಣ್ಣು, ಹೊನ್ನು, ಮಣ್ಣಿಗಾಗಿಯೇ ಎಂಬ ಮಾತು ಕೇಳಿಬರುತ್ತಿವೆ. ಅದರ ಆಚೆ ಆಲೋಚನೆ ಮಾಡಲಾಗುವುದಿಲ್ಲ. ಕಾರಣ ಹೆಣ್ಣು, ಹೊನ್ನು, ಮಣ್ಣುಗಳ ಕುರಿತು ಕನಕರ ನಿಲುವುಗಳನಿಟ್ಟುಕೊಂಡು ಯಾವ ಯಾವ ನೆಲೆಗಳಲ್ಲಿ ಅಧ್ಯಯನ ಮಾಡಿರುವರು ಆ ಎಲ್ಲ ಅಧ್ಯಯನಕಾರರ ಅಭಿಪ್ರಾಯಗಳ ಹಿನ್ನೆಲೆಯ ವಿಶ್ಲೇಷಣೆ ಇಲ್ಲಿದೆ.

ಕನಕದಾಸ, ಪುರಂದರದಾಸರಿಬ್ಬರು ಮೋಹವನ್ನು ಬಿಡಬೇಕೆಂದು ಹೇಳಿದ್ದಾರೆ ಎನ್ನುವುದು ಶ್ರೀನಿವಾಸ ಉಡುಪ ಅವರ ನಿಲುವು ಈ ಚಿತ್ರಣಗಳನ್ನು ಮಂಡಿಸುವುದಕ್ಕೆ ಈ ಸಾಲುಗಳನ್ನು ಬಳಸಿಕೊಂಡಿದ್ದಾರೆ.

'ಕಟ್ಟಲಿಲ್ಲ ಬಿಚ್ಚಲಿಲ್ಲ ಕಷ್ಟಪಟ್ಟು ಬಾಳಲಿಲ್ಲ
ಸುಟ್ಟು ಸುಟ್ಟು ಸುಣ್ಣದರಳು ಅಯಿತೀ ಕಾಯ
ಬಿಟ್ಟು ಹೋಗುವಾಗ ಜೊಟ್ಟ ಬಟ್ಟೆ ನಿನಗೆ ಹೊಂದಲಿಲ್ಲ
ದೃಷ್ಟಿನೋಟ ಕಟ್ಟಕಡೆಗೆ ಬಟ್ಟೆ ಬಯಲಾಗುತಿದೆ'[೪೧]

ಎನ್ನುವ ಕನಕದಾಸರ ಮಾತುಗಳಲ್ಲಿ ಮನುಷ್ಯನ ಅನ್ನಮದ, ಅರ್ಥಮದ, ವೈಭವದಮದ, ರೂಪಮದ, ಪ್ರಾಯಮದ – ಇತ್ಯಾದಿ ಮದಗಳನ್ನು ಗೆಲ್ಲಬೇಕು. ಸತಿಮೋಹ, ಸುತಮೋಹ ಮುಂತಾದ ಸಂಸಾರಿಕ ಮೋಹಗಳನ್ನು ಕಡಿದುಕೊಳ್ಳಬೇಕು. ಆಗ ಮಾತ್ರ ಉತ್ತಮ ವ್ಯಕ್ತಿಯಾಗಬಲ್ಲ. ಬದುಕಿನಲ್ಲಿ ಅನುಭವಗಳನ್ನು ಪಡೆದುಕೊಂಡಾಗ ಮಾತ್ರ ಅನುಭವಿಯಾಗಲು ಸಾಧ್ಯ ಎಂದು ಕನಕದಾಸರ ಅಭಿಪ್ರಾಯವಾಗಿದೆ. ಇದೇ ಪರಿಕಲ್ಪನೆಯನ್ನೇ ಪುರಂದರದಾಸರು ಹೀಗೆ ಅನಾವರಣ ಮಾಡಿದ್ದಾರೆ.

ಆರು ಹಿತವರು ನಿನಗೆ–ಮೂರು ಮಂದಿಯೊಳಗೆ
ನಾರಿಯೋ, ಧಾರುಣಿಯೋ, ಬಲುಧನ ಸಿರಿಯೋ?[೪೨]

ದಾಸರ ಈ ಪ್ರಶ್ನೆಯ ಹಿಂದೆ ಸಂಸಾರಿಕ ಜೀವನ ಎನ್ನುವುದು ಹೇಯ ಇದ್ದಂತೆ ನೇತ್ಯಾತ್ಮಕ ದೃಷ್ಟಿಯಿದೆಯೆಂದು ಭಾವಿಸಿದ್ದರೆ ಸ್ವತಃ ಪುರಂದರ ಮತ್ತು ಕನಕದಾಸರಿಬ್ಬರು ಸಂಸಾರಿಗಳೇ. ವ್ಯಾಸಕುಲಕ್ಕೆ ಸೇರಿದ ಯತಿಗಳಲ್ಲಿ ಅವರ ಬದುಕಿನಲ್ಲಿ ಯಾವುದಕ್ಕೆ ಹೆಚ್ಚು ಮನ್ನಣೆಕೊಡಬೇಕೆಂದು ಮಾರ್ಗದರ್ಶನವನ್ನು ಪಡೆದರು. ಹಾಗಾಗಿಯೇ ಇವರ ಅಭಿವ್ಯಕ್ತಿಯಲ್ಲಿ ಮೌಲ್ಯಪ್ರಜ್ಞೆ, ಶಾಶ್ವತ, ಅಶಾಶ್ವತ ಕುರಿತಾದ ಚಿಂತನೆಗಳಿವೆ ಎಂದು ಹೇಳಿರುವುದು ಸ್ವಾಗತಾರ್ಹವಾಗಿದೆ. ಆದರೂ ಇದರಲ್ಲಿರುವ ಸಂಸಾರ, ಬುದುಕಿನ ಜಂಜಟ, ಸಂಸಾರದಲ್ಲಿದ್ದು ಸಾಧಿಸಬೇಕಾದ ಸಾಧನೆಗಳ ಕುರಿತಾಗಿರುವ ಅಭಿವ್ಯಕ್ತಿಗಳ ಬಗ್ಗೆ ಇನ್ನೂ ಅಧ್ಯಯನಗಳಾಗಬೇಕಾಗಿದೆ.

ಭಾರತೀಯ ಸಮಾಜವನ್ನು ಅವಲೋಕಿಸಿದಾಗ, ಇಲ್ಲಿನ ಕುಟುಂಬ, ರಾಜಮನೆತನಗಳು ಪಾರಂಪರಿಕವಾಗಿ ಬಂದ ಬಗೆಯನ್ನು ನೋಡಿದಾಗ ಹೆಣ್ಣು, ಹೊನ್ನು, ಮಣ್ಣಿನ ಮೋಹದ ವಾಸನೆ ಎಲ್ಲೆಲ್ಲೂ ಕಂಡುಬರುತ್ತದೆ. ಮಾನವನ ದುಃಖಕ್ಕೆ ಮೂಲಕಾರಣವು ಇದಾಗಿದೆ. ಹೆಣ್ಣು, ಹೊನ್ನು, ಮಣ್ಣಲ್ಲೆ ಅವುಗಳನ್ನು ಪಡೆಯುವ ತವಕದಲ್ಲೇ, ಪಡೆದ ಸಂತೋಷದಲ್ಲಿ ಕಷ್ಟಸುಖವನ್ನು ಸೃಷ್ಟಿಸಿಕೊಂಡು ಬದುಕಿದ ಬಗೆಗಳು ಅಪಾರವಾಗಿವೆ. ಇವುಗಳು ಶಾಶ್ವತವಾಗಿ ತನ್ನ ತೆಕ್ಕೆಯಲ್ಲಿ ಇರಬೇಕೆಂದು ಅಯುಷ್ಯಪೂರ್ತಿ ಹೆಣಗುತ್ತಾನೆ. ಇವು ದುಃಖಕ್ಕೆ ಕಾರಣವಾಗುವ ಅಂಶಗಳೆಂದು ದಾಸರು, ದಾರ್ಶನಿಕರು, ಅಭಿಪ್ರಾಯ ಪಟ್ಟಿದ್ದಾರೆ ಆಸ್ತಿ, ಅಹಂಕಾರ, ವ್ಯಾಮೋಹ, ಭೋಗಗಳಲ್ಲೇ ಸದಾ ತಲ್ಲೀನನಾಗುವನನ್ನು ಕೀರ್ತನೆಗಳಲ್ಲಿ ದಾಸರು ಪರಿಪರಿಯಾಗಿ ದಾಖಲಿಸಿದ್ದಾರೆ. ಶುದ್ಧ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಪಣತೊಟ್ಟ ಕನಕದಾಸರು ಸಮಾಜೋದ್ಧಾರ ಮಾಡಲು ಯುದ್ಧ, ನಷ್ಟ, ಸಾವು, ನೋವು, ಕಣ್ಣಾರೆ ಕಂಡ ಕನಕನಾಯಕ, ಕನಕದಾಸನಾಗಿ ಊರನ್ನು ಸುತ್ತಿ ಸಮಾಜದ ಕಲ್ಮಶಗಳನ್ನು ಹತ್ತಿದರೆ ಜೀವನ ಗಾಡಾಂಧಕಾರದಲ್ಲಿ ಮುಳುಗುತ್ತದೆ ಎಂದು ಪರಿಭಾವಿಸಿದ್ದರು. ಸಮಾಜದ ಅಂಕು ಡೊಂಕುಗಳನ್ನು ತಿದ್ದಿ ದಾರಿ ತೋರಿಸುವಲ್ಲಿ ಮಾಡಿರುವ ದಾಸರ ಪ್ರಯತ್ನವು ಅತ್ಯಂತ ಶ್ಲಾಘನೀಯವಾದದು.

ಶ್ರೀನಿವಾಸ ಉಡುಪ ಅವರು ಹೆಣ್ಣು, ಹೊನ್ನು, ಮಣ್ಣಿನ ಮೋಹದ ಕುರಿತು ತಮ್ಮ ಲೇಖನದಲ್ಲಿ ಮನುಷ್ಯ ಅನ್ನಮದ, ಅರ್ಥಮದ, ರೂಪಮದ, ಪ್ರಾಯಮದ – ಈ ಎಲ್ಲ ಮದಗಳನ್ನು ಗೆಲ್ಲಬೇಕು. ಸತಿಮೋಹ, ಸುತಮೋಹ ಮುಂತಾದ ಸಂಸಾರಿಕ ಮೋಹಗಳನ್ನು ಕಡಿದುಕೊಳ್ಳಬೇಕು. ಆಗ ಮಾತ್ರ ಬದುಕು ಸಾರ್ಥಕವಾಗುತ್ತದೆ ಎಂದು ಕನಕ–ಪುರಂದರರು ಹೇಳಿದ್ದಾರೆ ಎಂದಿರುವರು. ಇವರು ಪುರಂದರದಾಸರ ಒಂದು ಕೀರ್ತನೆಯನ್ನು ಉಲ್ಲೇಖಿಸುತ್ತಾ

'ಆರು ಹಿತವರು ನಿನಗೆ ಮೂರುಮಂದಿಯೊಳಗೆ

ನಾರಿಯೋ ಧಾರುಣಿಯೋ ಬಲುಧನ ಸಿರಿಯೊ?[೮೩]

ಎಂದು ಪ್ರಶ್ನಿಸಿರುವರು ಎಂದಿದ್ದಾರೆ.

ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖವಿರುವ ಸಂಸಾರವನ್ನು ನೆಚ್ಚಿ ನಡೆಯುವದು ಎಷ್ಟು ಉಚಿತವೆಂಬ ಪ್ರಶ್ನೆಗೆ ದಾಸರು ಸಮರ್ಪಕವಾಗಿ ಉತ್ತರಿಸುತ್ತಾರೆ. ಬದುಕಿನ ನಿರಾಕರಣೆಯನ್ನಾಗಲಿ

ಅಥವಾ ಅದರ ಉಪೇಕ್ಷೆಯ ಮಾತುಗಳನ್ನಾಗಲಿ ಆಡದ ದಾಸರು ಅದರಲ್ಲಿದ್ದುಕೊಂಡೆ ಸಾಧಿಸಬೇಕೆಂದು ತಿಳುವಳಿಕೆ ಕೊಟ್ಟು, ಅದಕ್ಕೆ ತಾವೇ ಮಾದರಿಗಳಾಗಿದ್ದಾರೆ.

ಕನಕದಾಸರು ಸಹ ಹರಿಭಕ್ತರಾದ ಮೇಲೆ ಭಕ್ತಿ ಪ್ರತಿಪಾದನೆಯಷ್ಟೇ ಅವರ ಗುರಿಯಾಗಿರದೆ, ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದು ತನ್ನ ಸುತ್ತಮುತ್ತ ಬದುಕುವ ಜನರ ಜೀವನಮಟ್ಟವನ್ನು ಉದಾತ್ತಗೊಳಿಸುದಾಗಿತ್ತು. ಸಂಸಾರದಲ್ಲಿ ತೊಳಲಿ, ಬಳಲಿ ಬೆಂಡಾಗಿ ಸಂಕಟಪಡುವವರನ್ನು ಕಣ್ಣಾರೆ ಕಂಡು ಪಶ್ಚಾತ್ತಾಪ ಪಟ್ಟು ಹಿತ ನುಡಿ, ಕೃತಿಗಳು, ಕೀರ್ತನೆ, ಮುಂಡಿಗೆಗಳ ಮೂಲಕ ಬಡಿದೆಬ್ಬಿಸಿದವರು. ಅವಿದ್ಯೆ, ಅಜ್ಞಾನ, ಮೋಹ, ಡಾಂಬಿಕತೆ, ಡಾಂಭಿಕ ಭಕ್ತಿ, ಕಳ್ಳತನ, ಸುಳ್ಳು ಹೇಳುವುದನ್ನು ನೋಡಿ ಕಳವಳ ಪಟ್ಟವರು ಹೆಣ್ಣು, ಹೊನ್ನು, ಮಣ್ಣುಗಳ ಕಾಳಜಿ ಈ ಮೂರರ ಆಸೆಗೆ ಸಿಲುಕಿ ಪುಣ್ಯ–ಪಾಪವನ್ನು ಅರಿಯದ ಜೀವಿಗಳೆಂದು ಯಾತನೆಪಡುವವರನ್ನು ಹೇಗಾದರೂ ಮಾಡಿ ಉದಾತ್ತ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕೆಂದು ಊಹಿಸಿ ಹೀಗೆ ಹೇಳಿರುವುದನ್ನು ಕಾಣಬಹುದು

ಸಂಸಾರಕ್ಕೆ ಜೋತುಬಿದ್ದ ಜನರನ್ನು ಕಂಡ ಅಲ್ಲಮನ ಮಾತುಗಳನ್ನು ಮಾರ್ಮಿಕವಾಗಿ ನೋಡಿದಾಗ 'ಸಂಸಾರಬೆಂಬ ಹೆಣ ಬಿದ್ದರೆ, ತಿನಬಂದ ನಾಯಿ ಜಗಳವ ನೋಡಿರೇ !, ನಾಯಿ ಜಗಳವ ನೋಡಿ, ಹೆಣನೆದ್ದು ನಗುತ್ತಿದೆ, ಗುಹೇಶ್ವರನೆಂಬ ಲಿಂಗವಲ್ಲಿ ಕಾಣಿರೇ !

ಸಂಸಾರವನ್ನು ಹೆಣಕ್ಕೆ ಹೋಲಿಸಿ ಅದನ್ನು ತಮ್ಮದಾಗಿಸಿಕೊಳ್ಳಲು ಕಚ್ಚಾಡುವ ಜನರನ್ನು ನಾಯಿಗಳಿಗೆ ಹೋಲಿಸಿದ್ದರೆ. ಅರ್ಥವಿಲ್ಲದ ಸಂಸಾರಕ್ಕೆ ವ್ಯರ್ಥ ಪ್ರಯತ್ನ ಪಟ್ಟು ಕೊರಗಿ ಸೊರಗುವದು ನಿರರ್ಥಕ ಎಂಬುದನ್ನು ಬಹಳ ಅರ್ಥಪೂರ್ಣವಾಗಿ ಮನಗಾಣಿಸಿದ್ದಾರೆ. ಈ ತಿಳುವಳಿಕೆಯನ್ನು ಬಸವಣ್ಣನವರ ಮಾತುಗಳಲ್ಲಿ ಸಹ ಕಾಣಬಹುದು. 'ನಂಬಿದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ, ನಂಬಬಲ್ಲ ಭಕ್ತಂಗೆ ದೇವನೊಬ್ಬನೆ ಕಾಣಿರೋ' ಎಂದು ಹೇಳಿ ಒಬ್ಬರಿಗೊಬ್ಬರಿಗೂ ಸಂಬಂಧವಿದೆ ಅವು ಪೂರಕವಾಗಿರುವದರ ಮೂಲಕ ಗಂಡ ಹೆಂಡತಿ ಇಬ್ಬರಲ್ಲಿ ಅತಿ ಆಸೆ ಮಾಡಬಾರದು. ಅದರಲ್ಲಿ ಪ್ರೀತಿಯನ್ನು ಕಾಣಬೇಕು ಎಂದಿರುವುದು ದಾಂಪತ್ಯ ಜ್ಞಾನವೇ ಸರಿ.

ಇಲ್ಲಿ ಪುರಂದರದಾಸರ ಕೀರ್ತನೆ ಪ್ರಮುಖವಾಗಿದೆ. ಹುಟ್ಟುವಾಗ ಬರಿಗೈಯಲ್ಲಿ ಬಂದು ಹೋಗುವಾಗಲೂ ಬರಿಗೈಲಿ ಹೋಗುವ ಮನುಷ್ಯ ಹುಟ್ಟು–ಸಾವುಗಳ ನಡುವಣ ಜೀವಿತದ ಅವಧಿಯಲ್ಲಿ ಮಾತ್ರ ಈ ಸಂಸಾರ 'ಖೊಟ್ಟಿ' ಎಂದು ತಿಳಿದಿದ್ದರೂ ಕಾಲುಕಟ್ಟಿಕೊಂಡು ಅದರೊಳಗೆ ಬೀಳುತ್ತಾನೆ ಇದು ಅವನ ಹುಂಬತನ ಒಂದು ಬಗೆಯ ಮಿಥ್ಯ ಈ ಮಿಥ್ಯವನ್ನೇ ಸತ್ಯವೆಂದು ಭಾವಿಸಿ ಹುಂಬುತನದಿಂದ ಮೆರೆಯುವವರನ್ನು ಒಮ್ಮೆ ಕಣ್ತೆರೆದು ಅವಲೋಕಿಸಿವಂತೆ ಕೇಳಿಕೊಳ್ಳುತ್ತಾನೆ. 'ಆರು ಹಿತವರು ನಿನಗೆ ಈ ಮೂವರೊಳಗೆ ನಾರಿಯೋ (ಹೆಣ್ಣು) ಧಾರುಣಿಯೋ (ಮಣ್ಣು) ಬಲುಧನ ಸಿರಿಯೋ (ಹೊನ್ನು) ಎಂದು ಪ್ರಶ್ನಿಸುವ ಪರಿ ಎಂಥವರನ್ನು ಬೆರಗುಗೊಳಿಸತ್ತದೆ. ಕನಕದಾಸರು ಸಹ ಈ ನೆಲೆಯಲ್ಲಿ ತಮ್ಮ ಕೀರ್ತನೆಯ ಮೂಲಕ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ನೆಚ್ಚದಿರು ಸಂಸಾರ ನೆಲೆಯಲ್ಲಿವೀ ಕಾಯ

ಅಚ್ಯುತನ ನಾಮವನು ನೆನೆದು ಸುಖಿಯಾಗೋ'[೪೪]

ಎಂದು ಸಂಸಾರವನ್ನು ನೆಚ್ಚದೆ ಹರಿನಾಮ ಸ್ಮರಣೆ ಮಾಡುತ್ತಾ ದೈವತ್ವದ ಕಡೆ ಸಾಗಬೇಕೆಂದಿದ್ದಾರೆ. ಈ ಬಗೆಯ ಸಂಸಾರಿಕ ಮುಕ್ತಿಯಲ್ಲಿ ಎರಡು ದೋರಣೆಗಳಿವೆ. ಒಂದು ಸಂಸಾರಕ್ಕೆ ಹೆಚ್ಚು ಹಚ್ಚಿಕೊಂಡಿರಬಾರದು ಎನ್ನುವುದು, ಮತ್ತೊಂದು ದೈವತ್ವಕ್ಕೆ ತರುವುದು ಇವರೆಡರಲ್ಲಿ ನಮಗೆ ಮೊದಲನೆಯದು ಮುಖ್ಯವಾಗುತ್ತದೆ. ಹಾಗಾಗಿ ಕನಕದಾಸರು ಸಂಸಾರಕ್ಕೆ ಅಂಟಿಕೊಂಡಿರುವ ಹೆಣ್ಣು, ಹೊನ್ನು, ಮಣ್ಣುಗಳಿಂದ ಪ್ರತ್ಯೇಕಗೊಳ್ಳಲು ನಿರಂತರ ಪ್ರಯತ್ನ ಹಾಗೂ ಸಾಧನೆ ಅತ್ಯವಶ್ಯಕ ಸಾಧಕನ ಸಾಧನೆಯಲ್ಲಿ ಅಡ್ಡಗೋಲಾಗಿ ನಿಂತಿರುವ ಅರಿಷಡ್ವರ್ಗಗಳನ್ನು ಗೆದ್ದು ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು ಎಂದಿರುವರು ಆದರೆ ಇದು ಜನಸಾಮಾನ್ಯರಿಗೆ ಕಷ್ಟದ ಮಾತು, ಅದು ಸಂತ, ಯೋಗಿಗಳಿಗೆ ಮಾತ್ರ ಸಾಧಿಸುವ ಅನುಭವಿಸುವ ಹರಿ ಒಲಿಸಿ ಸುಖಿಸುವ ಸಾಧ್ಯತೆ ಇದೆ. ಎನ್ನುವ ಅಭಿಪ್ರಾಯ ಹಲವಾರು ಅಧ್ಯಯನಕಾರರಲ್ಲಿ ಕಂಡುಬರುತ್ತದೆ.

ಸಂಸಾರದ ಜಂಜಾಟಕ್ಕೆ ಸಿಕ್ಕ ಕನಕದಾಸರು

'ನೊಂದೆ ನಾ ಹರಿಯೆನ್ನದೆ

ನೊಂದೆ ನಾ ಸತ್ತು-ಹುಟ್ಟುವ ಕೋಟಲೆಗಳಿಂದ

ನೊಂದೆ ನಾ ಪಂಚೆಂದ್ರಿಯಗಳ ಬಾಧೆಗಳಿಂದ

ನೊಂದೆ ನಾ ಅರಿಷಡ್ವರ್ಗಗಳಿಂದ

ನೊಂದೆ ನಾ ಹರಿಯನ್ನದೆ'[೪೫]

ಇಂತಹ ಪಂಚೆಂದ್ರಿಯಗಳ ಬಲವತ್ತಾದ ಸೆಳೆತವನ್ನರಿತ ಕನಕದಾಸರು ಹರಿಯಲ್ಲಿ ಹರುಹಿದ್ದಾರೆ. ಆದರೆ ನಾವು ಇಂದಿನ ಸ್ಥಿತಿಗತಿಯನ್ನು ಅವಲೋಕಿಸಿದಾಗ ಸಂಸಾರದಲ್ಲಿ ನಂಬಿಕೆ ಇಟ್ಟುಕೊಂಡು ಅಧ್ಯಾತ್ಮ ಚಿಂತನೆ ಮಾಡುವುದು ಸೂಕ್ತ ಇಲ್ಲಿನ ಅದ್ಯಾತ್ಮ ವಿಶೇಷವಾದುದು ಅದು ದೈವತ್ವದ ಅಧ್ಯಾತ್ಮವಲ್ಲ ಸಂಸಾರಿಕ ಅಧ್ಯಾತ್ಮ ಇದನ್ನು ಕರಗತ ಮಾಡಿಕೊಂಡವರು ಮಾತ್ರ ಸಂಸಾರಿಕ ಜೀವನದಲ್ಲಿ ಯಶಸ್ವಿಯಾಗುತ್ತಾರೆ ಎನ್ನುವ ಚಿಂತನೆ ಸರಿಯಾಗಿದೆ. ಅದು ದೈವತ್ವದ ಬಲವು ಬೇಕು ಎಂಬುದು ಒಪ್ಪುವ ಮಾತಾಗಿದೆ. ಆದರೆ ಅದರ ಒಳಗಡೆ ಮುಳುಗಬೇಡ ಎಂಬ ಮಾತು ಸತ್ಯವಾದುದಾಗಿದೆ.

ಇದಕ್ಕೆ ಪೂರಕವೆಂಬಂತೆ ಅಲ್ಲಮನ ವಚನ ಗಮನಿಸಬಹುದು.

'ಹೊನ್ನು ಮಾಯೆಯೆಂಬುರು

ಹೊನ್ನು ಮಾಯೆಯಲ್ಲ

ಹೆಣ್ಣು ಮಾಯೆಯೆಂಬರು

ಹೆಣ್ಣು ಮಾಯೆಯಲ್ಲ

ಮಣ್ಣು ಮಾಯೆಯೆಂಬರು

ಮಣ್ಣು ಮಾಯೆಯಲ್ಲ

ಮನದ ಮುಂದಣ ಆಶೆಯೇ ಮಾಯೆ ಕಾಯೋ ಗುಹೇಶ್ವರ'

ಎನ್ನುವಲ್ಲಿ ಹೆಣ್ಣು-ಹೊನ್ನು-ಮಣ್ಣುಗಳೇ ಮಾಯೆಯಲ್ಲ ಯಾವುದು ಅದನ್ನು ಸಮರ್ಥವಾಗಿ ಸದ್ಬಳಕೆ ಮಾಡಿಕೊಳ್ಳದೆ ಧಾರಾಳವಾಗಿ ಅಪ್ಪಿಕೊಳ್ಳುವನೋ ಆಗ ಅದು ಮಾಯೆಯಾಗಿ ಪರಿವರ್ತಿತವಾಗುತ್ತದೆ. ಕನಕರು ಈ ಕಾರಣಕ್ಕಾಗಿಯೇ ಶರೀರವನ್ನು ಒಂದು ಬಳಸಿಕೊಂಡು ಸಂಸಾರದಲ್ಲಿದ್ದುಕೊಂಡೆ ಜಯ ಸಾಧಿಸಿ ತೋರಿಸಿರೆಂದು ಕೀರ್ತನಗಳಲ್ಲಿ ಹಿತನುಡಿದಿದ್ದಾರೆ.

ಆದರೆ ಇಂದಿನ ದಿನಗಳಲ್ಲಿ ಆಡಂಬರ ಜೀವನ ಸಾಗಿಸಲು ಸುಳ್ಳುಮೋಸ, ಕಪಟ, ವಂಚನೆ, ಭ್ರಷ್ಟಾಚಾರದಂತಹ ಅನಿಷ್ಟ ಕೆಲಸಗಳನ್ನು ಮಾಡುತ್ತಾರೆ. ಆಧುನಿಕರಣದ ಪ್ರಭಾವವೇ ಇದಕ್ಕೆ ಕಾರಣವೆನ್ನಬಹುದು. ಹೆಣ್ಣು, ಹೊನ್ನು, ಮಣ್ಣಿಗಾಗಿ ಜೀವನವನ್ನೆ ಬಲಿಯಾಗಿಸಿಕೊಂಡ ಕೊಟ್ಟ ಉದಾಹರಣೆಗಳು ಸಾಕಷ್ಟಿವೆ. ಕಾರಣ ಮಾನವರು ಮನುಷ್ಯತ್ವದ ಮಾನವೀಯ ಸಂಬಂಧಗಳನ್ನು ಕೂಡಿಸಿಕೊಂಡು ಉದಾತ್ತವಾಗಿ ಬಾಳಿದಾಗ ಮಾತ್ರ ದಾಸರವಾಣಿಯಂತೆ ಬದುಕಿ ಈ ಜನ್ಮವನ್ನು ಸಾರ್ಥಕಗೊಳಿಸಿಗೊಳ್ಳಬಹುದಾಗಿದೆ. ಎನ್ನುವ ಇವರ ತಾತ್ವಿಕತೆಯಾಗಿದೆ.

೬.೮ ಸೂಫಿ ಮತ್ತು ಕನಕತತ್ವ

ಸೂಫಿ ಸಂತರು ಹಾಗೂ ಕನಕದಾಸರ ವಿಚಾರಗಳನ್ನು ತೌಲನಿಕರಿಸಿದ ಸಂದರ್ಭವು ಕನಕನನ್ನು ಓರ್ವ ಚಾರಿತ್ರಿಕ ನಾಯಕನನ್ನಾಗಿ ಚಿತ್ರಿಸಿರುವರು. ಒಂದು ವಿಷಯ ತಿಳಿದುಕೊಳ್ಳಬೇಕಾದರೆ. ಸಮಾಜ ವಿಜ್ಞಾನದ, ಸಾಹಿತ್ಯದ, ಆಧ್ಯಾತ್ಮದ ವಿಷಯಗಳ ಜಿಜ್ಞಾಸೆ ಭಿನ್ನ ನೆಲೆಗಳಿಂದ ಪ್ರವೇಶಿಸುವುದಕ್ಕೆ ಸಾಧ್ಯ. ಕನಕನನ್ನು ಒಬ್ಬ ಯೋಧನಾಗಿ, ಸಾಮಾಜಿಕ ಚಿಂತಕನಾಗಿ ಕವಿಯಾಗಿ, ಸಂತನಾಗಿ ಹೀಗೆ ಅನೇಕ ಅಂಚುಗಳಿಂದ ಮುಟ್ಟಲು ಸಾಧ್ಯ. ನಮ್ಮಲ್ಲಿ ಸಾಕಷ್ಟು ಪ್ರಗತಿಪರರಿಗೆ ಅವನೊಬ್ಬ ಬಂಡಾಯಗಾರ ಸಾಮರಸ್ಯ ಬಯಸುವವರಿಗೆ ಅವನೊಬ್ಬ ಸೌಹಾರ್ದಕಾರ ಇನ್ನು ಕೆಲವರಿಗೆ ಬೇರೆ ಬೇರೆ ರೀತಿಯಲ್ಲಿ ಕಾಣಬಹುದು.

ಕನಕದಾಸರನ್ನು ಮತ್ತು ಸೂಫಿ ಸಂತರನ್ನು ಒಂದೇ ಚೌಕಟ್ಟಿನ ವ್ಯಾಪ್ತಿಯಲ್ಲಿ ನೋಡಬಯಸುತ್ತಾರೆ. ಅಲ್ಲದೆ ಧಾರ್ಮಿಕ, ಆದರ್ಶವಾಗಿಯೂ ಹಾಗೆಯೇ ಸಾಮಾಜಿಕ ಸಾಮರಸ್ಯವಾಗಿ ನೋಡಬಯಸುತ್ತೇವೆ. ಕನಕನನ್ನು ವೈದಿಕಕತೆ ಪರ್ಯಾಯವೆಂದು ಸೂಫಿಯನ್ನು ಕರ್ಮಠ ಇಸ್ಲಾಮ್‌ಗೆ ಪರ್ಯಾಯ ಎಂದೋ ನಾವು ನೋಡಬಯಸುತ್ತೇವೆ. ಕನಕನನ್ನು ಜಾತಿಮತಗಳ ಕುರುಹು ನಂಬಿಕೆಗಳ ವಿರೋಧದ ಧ್ವನಿಯಾದವನು. ಬರಹಬಾರದವರಿಗೆ ಹೊಸ ಎಚ್ಚರವನ್ನು ಸಾಮಾಜಿಕ ಮನ್ನಣೆಯನ್ನು ತಂದುಕೊಟ್ಟವನು. ಅಕ್ಷರದಿಂದ ಗರ್ವಿತರಾದವರಿಗೆ ಆತ್ಮವಿಮರ್ಶೆಯ ಹೊಸ ದಾರಿ ತೋರಿದವನು. ಕೇಳಬೇಕಾದ ಪ್ರಶ್ನೆಗಳನ್ನು ಹೊಸ ವಿಧಾನದ ಮೂಲಕ ಕೇಳುವ ದಾರಿಯನ್ನು ಕಲಿಸಿಕೊಟ್ಟವನು.

ರಹಮತ್ ತರಿಕೆರೆ ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಹೇಳುತ್ತಾರೆ; ಇಲ್ಲಿ ಕನಕ ತತ್ವ ಸೂಫಿ ತತ್ವವನ್ನು ಒಂದೇ ದೃಷ್ಟಿಕೋನದಲ್ಲಿ ನೋಡಲು ಪ್ರಯತ್ನಿಸಿದ್ದಾರೆ. ಸೂಫಿಗಳಿಗೆ ಮಸೀದಿಯ ಕಟ್ಟಡ ನಮಾಜಿನ ಆಚರಣೆ ಅಷ್ಟು ಮುಖ್ಯವಾಗಿರಲಿಲ್ಲ. ಅವರು ಯಾಂತ್ರಿಕವಾಗಿ ಭಕ್ತಿಯನ್ನು ಮಾಡುವುದಕ್ಕೆ ವಿರೋಧ ಮಾಡುತ್ತಿದ್ದರು. ಅವರಿಗೆ ಸಂಗೀತದ ಅನುಭಾವದ ಸಾಧನೆಯಲ್ಲಿ ಬಹಳ ಮುಖ್ಯವಾಗಿತ್ತು. ಅವರು ಯೋಗಿಗಳಾಗಿದ್ದರು. ಸರಳತೆ ಅವರಿಗೆ ಬಹಳ ಮುಖ್ಯವಾಗಿತ್ತು. ಅದರಂತೆ ದಾಸರಿಗೂ ಗುಡಿ ವಿಗ್ರಹದ ಪೂಜೆ ಯಾಂತ್ರಿಕವಾದ ಆಚರಣೆಗಳು ಅಷ್ಟು ಮುಖ್ಯವಾಗಿರಲಿಲ್ಲ. ಬದಲಿಗೆ ಭಕ್ತಿಯ ಸಮರ್ಪಣೆ ಮುಖ್ಯವಾಗಿತ್ತು. ಕನಕದಾಸರು ಹೋಮ, ತೀರ್ಥಯಾತ್ರೆ, ಗುಡಿಸಂಸ್ಕೃತಿ, ನದಿಯಲ್ಲಿ ಸ್ನಾನ ಮಾಡುವ ಆಚರಣೆಯು ಪಿಂಡ ನೀಡುವ ಮಡಿಯನ್ನು ವಿರೋಧಿಸುವುದನ್ನು ಇಲ್ಲಿ ನೆನೆಯಬೇಕು.

ಕರ್ನಾಟಕದ ಕುರುಬರು ಮೂಲತಃ ಶೈವರು. ದಕ್ಷಿಣ ಕರ್ನಾಟಕದಲ್ಲಿ ಕೊಂಚ ವೈಷ್ಣವ ಪಂಥೀಯ ಕುರಬರು ಹೆಚ್ಚು ಇದ್ದಾರೆ. ಕನಕದಾಸ ರಾಮಾನುಜ ಪಂಥವನ್ನು ಒಪ್ಪಿದವನಾದ ಕಾರಣ ವೈಷ್ಣವನಾಗಿದ್ದನು. ಅವನಲ್ಲಿ ಮಾಧ್ವಪಂಥಕ್ಕೆ ಕೊಟ್ಟ ಒಪ್ಪಿಗೆಯೂ ಇದೆ. ಹೀಗಾಗಿ ಅವನಲ್ಲಿ ದಾರ್ಶನಿಕವಾಗಿ ಬಹುಮುಖತೆಯಿದೆ. ಇದು ಅವರ ಸಾಹಿತ್ಯ ರಚನೆಯಲ್ಲೂ ಪ್ರತಿಬಿಂಬಿತವಾಗಿದೆ.[೧೫]

ಅಜಕ್ಕಳ ಗಿರೀಶ್ ಭಟ್ಟ

ಸೂಫಿಗಳ ತತ್ವದ ಮುಖ್ಯ ಉದ್ದೇಶ ಪವಿತ್ರವಾದ ಸಂಬಂಧಗಳ ಪಾಲನೆ ಪರಮಾತ್ಮನೊಡನೆ ಅಷ್ಟೇ ಅಲ್ಲ ಸರ್ವ ಪ್ರಾಣಿಗಳ ಒಡನೆಯೂ ಪವಿತ್ರವಾದ ವ್ಯವಹಾರವುಳ್ಳವನೇ ಸೂಫಿ. ಅಲ್ಲದೆ ಪರಮಾತ್ಮನೊಡನೆ ಋಣಾತ್ಮಕ ಸಂಬಂಧ ಸ್ಥಾಪಿಸಿ ಉಪಾಸನೆ ಮಾಡುವವರ ಸೂಫಿಗಳು, ಸೂಫಿಗಳಿಗೆ ನಾನು ಮತ್ತು ಭಗವಂತ ಬೇರೆ ಬೇರೆ ಅಲ್ಲ.[೪೬]

ಈ ಮೇಲಿನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸುವುದಾದರೆ ಸೂಫಿ ಸಮಾನ ವರ್ಗಕ್ಕಾಗಿ, ಪವಿತ್ರ ಸಂಬಂದಕ್ಕಾಗಿ ಎಲ್ಲರೊಂದಿಗೆ ಉತ್ತಮವಾದ ಬಾಂಧವ್ಯವಿಟ್ಟುಕೊಂಡವರು ಸೂಫಿಗಳು. ಕನಕರದು ಇದೆ ನಡೆ ಎಲ್ಲರೊಂದಿಗೂ ಸಮಾನವಾಗಿ ಬದುಕಲು ಹೇಳಿದ ಕನಕ ತತ್ವಕ್ಕೂ ಸೂಫಿ ತತ್ವಕ್ಕೂ ಅವಿನಾಭಾವ ಸಂಬಂದವಿದೆ. ವಿದ್ವಾಂಸರು ಹೇಳಿದ ಹಾಗೆ ಸೂಫಿ ತತ್ವದ ಸಾಧಕನ ಕೊನೆಯ ಹಂತ ಐಕ್ಯನಾಗುವುದು ಅದು ಪರಮಸತ್ಯದ ಸಾಕ್ಷಾತ್ಕಾರವಾದಾಗ ಸಾಧಕನು ಪರಮ ಸತ್ಯಕ್ಕೆ ಸಮಾನಾಗುವುದು ಹೀಗೆ ಕನಕ ತತ್ವ ಹಾಗೂ ಸೂಫಿ ತತ್ವವು ಒಂದೆ ಆಯಾಮಗಳಂತೆ ಕನಕದಾಸರ ಕೀರ್ತನೆ ಅದ್ವೈತ ತತ್ವವನ್ನು ಮುಂದಿಟ್ಟರೆ ಪರ್ಯಾಯವಾಗಿ ಸೂಫಿಗಳು ಇದಕ್ಕೆ ಹತ್ತಿರವಾಗಿರುತ್ತಾರೆ.

ಈ ಮೇಲಿನ ಪರಿಕಲ್ಪನೆಗಳು ಎಲ್ಲ ಕಾಲಕ್ಕೂ ಸಲ್ಲುವ ಜ್ಞಾನವೇ ಸರಿ ಈ ಜ್ಞಾನವನ್ನು ಜೀವಂತಗೊಳಿಸಬೇಕಾದ ಅನಿವಾರ್ಯತೆ ಇದೆ ಹೀಗಾಗಿಯೇ ಈ ನೆಲೆಯಲ್ಲಿ ಅಧ್ಯಯನ ಬಹುಮುಖ್ಯವೆನಿಸಿದೆ 'ದಾಸ ಜ್ಞಾನ' ವನ್ನು ವಿಶೇಷವಾಗಿ ಕನಕದಾಸರ ಜ್ಞಾನವನ್ನು ಜೀವಂತಗೊಳಿಸಿ ಜನರಿಗೆ ಮುಟ್ಟಿಸುವ ಮತ್ತು ಅನ್ವಯಿಕ ನೆಲೆಯನ್ನು ಅದನ್ನು ಮತ್ತೆ ಮತ್ತೆ ಸೃಜನಶೀಲವಾಗುವಂತೆ ಮಾಡಬೇಕಾದ ಅನಿವಾರ್ಯತೆ ಈ ಜಗತ್ತಿಗಿದೆ.

ಅಡಿಟಿಪ್ಪಣೆಗಳು

೧. ಹರಿಲಾಲ್ ಪವಾರ ಕನಕದಾಸರ ಸಾಹಿತ್ಯ ಅಧ್ಯಯನ ಪುಟ ೧೭೭

೨. ಅದೇ ಪುಟ.

೩. ಸರಸ್ವತಿದೇವಿ ಭಗವತಿ 'ಕನಕದಾಸರು ಮತ್ತು ತಿರುವಳ್ಳುವರ್'(ಲೇ) ಕನಕದಾಸ ಸಾಹಿತ್ಯ ಅಧ್ಯಯನ ಪು ೨೫೮.

೪. ಅದೇ, ಪುಟ ೩೫೨

೫. ತೇಜಸ್ವಿ ಕಟ್ಟಿಮನಿ 'ಕನಕದಾಸರು ಮತ್ತು ಕಬೀರದಾಸರು' (ಲೇ), ಕನಕದಾಸರ: ಒಂದು ಅಧ್ಯಯನ ಪು ೩೫೭

೬. ಹರಿಲಾಲ್ ಪವಾರ್ 'ಕನಕದಾಸರು ಮತ್ತು ಕಬೀರದಾಸರು'(ಲೇ), ಕನಕದಾಸ ಸಾಹಿತ್ಯ ಅಧ್ಯಯನ, ಪು ಸಂ ೧೭೫

೭. ಅದೇ ಪುಟ

೮. ಶಿಪ್ರಸಾದ್ ವೈ.ಎಸ್. 'ಕನಕ ಪುರಂದರ: ಇಹಪರಗಳ ಮುಖಾಮುಖಿ', ಪುಟ ೩೦೧.

೯. ಹರಿಲಾಲ್ ಪವಾರ ಕನಕದಾಸರ ಸಾಹಿತ್ಯ ಅಧ್ಯಯನ ಪುಟ ೧೭೬

೧೦. ಶಿರೂರ ಬಿ. ವಿ., 'ಕನಕದಾಸರು ಮತ್ತು ಬಸವೇಶ್ವರರು'(ಲೇ), ಕನಕದಾಸ: ಒಂದು ಅಧ್ಯಯನ ಸಂ ಎಸ್. ಎಸ್. ಭಗವತಿ ಪು ೩೫೦

೧೧. ಸುಧಾಕರ, 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು' ಪುಟ ೩೯೧

೧೨. ಬೇಟಗೇರಿ ಕೃಷ್ಣಶರ್ಮ ಕನಕದಾಸರ ಹಾಡುಗಳು ಪುಟ ೧೭೯

೧೩. ಮಂಜುನಾಥ ಜಿ.ಜಿ., 'ಕನಕ ಮತ್ತು ಪುರಂದರ ಕೀರ್ತನೆಗಳು' (ಲೇ), ಕನಕದರ್ಶನ ಸಂ-೦೧, ಸಂ ದೇ. ಜ. ಗೌ ಪು ೮೩೪

೧೪. ಅದೇ, ಪುಟ ೮೩೫

೧೫. ಅದೇ ಪುಟ

೧೬. ಶ್ರೀನಿವಾಸ ಉಡುಪ (ಲೇ), 'ವ್ಯಾಸರಾಯರು, ಪುರಂದರದಾಸ ಮತ್ತು ಕನಕದಾಸ. ದೇ.ಜ.ಗೌ. ಕನಕ ಸಾಹಿತ್ಯ ದರ್ಶನ ಪುಟ ೮೨೩

೧೭. ಅದೇ, ಪುಟ ೮೨೪

೧೮. ಶಿರೂರ ಬಿ. ವಿ., 'ಕನಕದಾಸರು ಮತ್ತು ಬಸವೇಶ್ವರರು'(ಲೇ), ಕನಕದಾಸ: ಒಂದು ಅಧ್ಯಯನ ಸಂ ಎಸ್. ಎಸ್. ಭಗವತಿ ಪು ೩೪೪

೧೯. ಹರಿಲಾಲ್ ಪವಾರ ಕನಕದಾಸರ ಸಾಹಿತ್ಯ ಅಧ್ಯಯನ ಪುಟ ೧೫೩

೨೦. ಅದೇ ಪುಟ

೨೧. ಅದೇ, ಪುಟ ೧೫೪

೨೨. ಗುರುಪಾದ ಫಿವಾರಿ 'ಏಕನಾಥ ಮತ್ತು ಕನಕದಾಸರು'– ಭಕ್ತಿಯ ವಿಭಿನ್ನ ನೆಲೆಗಳು, ಭಕ್ತಿ ಪರಂಪರೆ ಮತ್ತು ಕನಕದಾಸರು ಸಂ ಬಿ. ವಿ ಯಕ್ಕುಂಡಿಮಠ ಪು ೧೬೬

೨೩. ತಮಿಳ್ ಸೆಲ್ವಿ 'ಕನಕದಾಸರು ಮತ್ತು ತರುವಳ್ಳುವರ್ ಅವರ ಭಕ್ತಿಯ ವಿಭಿನ್ನ ಆಯಾಮಗಳು' (ಲೇ) ಭಕ್ತಿ ಪರಂಪರೆ ಮತ್ತು ಕನಕದಾಸರು (ಸಂ) ಬಿ. ವಿ ಯಕ್ಕುಂಡಿಮಠ ಪು ೩೪೯

೨೪. ಅದೇ ಪುಟ

೨೫. ಹೆಗಡೆ ಜಿ. ಎಂ., 'ಕನಕ ಪುರಂದರರ ಕೀರ್ತನೆಗಳ ತೌಲನಿಕ ಸಮೀಕ್ಷೆ' (ಲೇ) ಭಕ್ತಿ ಪರಂಪರೆ ಮತ್ತು ಕನಕದಾಸರು ಸಂ ಬಿ. ವಿ ಯಕ್ಕುಂಡಿಮಠ ಪು ೧೪೪

೨೬. ಹರಿಲಾಲ್ ಪವಾರ ಕನಕದಾಸರ ಸಾಹಿತ್ಯ ಅಧ್ಯಯನ ಪುಟ ೧೮೪

೨೭. ಅದೇ ಪುಟ

೨೮. ಶ್ರೀನಿವಾಸ ಉಡುಪ (ಲೇ), 'ವ್ಯಾಸರಾಯರು, ಪುರಂದರದಾಸ ಮತ್ತು ಕನಕದಾಸ. ದೇ.ಜ.ಗೌ. ಕನಕ ಸಾಹಿತ್ಯ ದರ್ಶನ ಪುಟ ೮೨೩

೨೯. ಅದೇ, ಪುಟ ೮೨೪

೩೦. ಅದೇ ಪುಟ

೩೧. ಹರಿಲಾಲ್ ಪವಾರ ಕನಕದಾಸರ ಸಾಹಿತ್ಯ ಅಧ್ಯಯನ ಪುಟ ೧೮೨

೩೨. ಅದೇ ಪುಟ

೩೩. ಸರಸ್ವತಿದೇವಿ ಭಗವತಿ 'ಕನಕದಾಸರು ಮತ್ತು ತಿರುವಳ್ಳುವರ್'(ಲೇ) ಕನಕದಾಸ ಸಾಹಿತ್ಯ ಅಧ್ಯಯನ ಪು ೩೫೪

೩೪. ಅದೇ ಪುಟ

೩೫. ಮಲಿಕಾ ಘಂಟಿ (ಲೇ) ಕನಕದಾಸರು ಮತ್ತು ಸ್ತ್ರೀ ಸಂವೇದನೆ, ಆತ್ಮ ಆವ ಕುಲ, ಪುಟ ೨೪

೩೬. ಹರಿಲಾಲ್ ಪವಾರ ಕನಕದಾಸರ ಸಾಹಿತ್ಯ ಅಧ್ಯಯನ ಪುಟ ೧೬೧

೩೭. ಅದೇ, ಪುಟ ೧೭೧.

೩೮. ಅದೇ ಪುಟ

೩೯. ತಾರಿಣಿ ಶುಭದಾಯಿನಿ. ಆರ್ (ಲೇ), ಕನಕದಾಸರ ಕಾವ್ಯದಲ್ಲಿ ಸ್ತ್ರೀಪರ ಮೌಲ್ಯಗಳು, ತಲ್ಲಣಿಸದಿರು, ಪುಟ ೪೬

೪೦. ಹರಿಲಾಲ್ ಪವಾರ ಕನಕದಾಸರ ಸಾಹಿತ್ಯ ಅಧ್ಯಯನ ಪುಟ ೧೭೭

೪೧. ಶ್ರೀನಿವಾಸ ಉಡುಪ (ಲೇ), 'ವ್ಯಾಸರಾಯರು, ಪುರಂದರದಾಸ ಮತ್ತು ಕನಕದಾಸ. ದೇ.ಜ.ಗೌ. ಕನಕ ಸಾಹಿತ್ಯ ದರ್ಶನ ಪುಟ ೮೨೦

೪೨. ಅದೇ ಪುಟ

೪೩. ಅದೇ ಪುಟ

೪೪. ಸುಧಾಕರ, 'ಕನಕದಾಸರ ಕೀರ್ತನೆ ಮುತ್ತು ಮುಂಡಿಗೆಗಳು' ಪುಟ ೩೧೧

೪೫. ಅದೇ ಪುಟ

೪೬. ರಹಮತ್ ತರೀಕೆರೆ, ಕನಕದಾಸರ ಒಂದು ಟಿಪ್ಪಣಿ (ಲೇ) ಕನಕ ಚಿಂತನ ಪು–೫೩

೪೭. ಅಜಕ್ಕಳ ಗೀರಿಶ ಭಟ್, ಸೂಫಿ ತತ್ವ ಮತ್ತು ಕನಕ ಚಿಂತನ, ಕನಕ ಚಿಂತನ ಪು–೭೬

ಅಧ್ಯಾಯ ಏಳು

ಅಧ್ಯಯನದ ಫಲಿತಗಳು

ಅಧ್ಯಾಯ ಏಳು

ಅಧ್ಯಯನದ ಫಲಿತಗಳು

ಮದ್ಯಕಾಲೀನ ಕನ್ನಡಸಾಹಿತ್ಯಕ್ಕೆ ಬಂದು ಹೊಸತಿರುವು ಮತ್ತು ಮೆರಗನ್ನು ತಂದುಕೊಟ್ಟವರು ಕನಕದಾಸರು ಎಂಬುದು ಅಧ್ಯಯನಕಾರರ ಸ್ಪಷ್ಟ ನಿಲುವು. ಇವರ ಜೀವನ ಸಾಹಿತ್ಯವನ್ನು ಅನೇಕ ವಿದ್ವಾಂಸರು ಹೊಸ ದೃಷ್ಟಿಕೋನದಿಂದ ನೋಡಿರುವುದು ಸ್ತುತ್ಯಾರ್ಹವಾಗಿದೆ. ಇಂತಹ ದೃಷ್ಟಿಕೋನಗಳಲ್ಲಿ. ಕುಲ, ಕಾಲ, ಸಾಹಿತ್ಯ, ಭಾಷಿಕ, ಭಕ್ತಿ, ವೈಚಾರಿಕತೆ, ದೇಶಿಯತೆ ಮುಂತಾದ ಅಂಶಗಳನ್ನು ಗಮನಿಸಿ ತಾತ್ವಿಕ ಆಲೋಚನೆ ಮಾಡಲಾಗಿದೆ. ಕನಕದಾಸರು ಜಾತಿಯ ತಾರತಮ್ಯತೆಗಳಿಂದ ನಿಂದನೆಗೊಳಗಾಗಿ ಅನುಭವಿಸಿದ ಯಾತನೆ ಅವರ ಸಾಹಿತ್ಯದಲ್ಲಿ ಮಡುಗಟ್ಟಿ ನಿಂತಿರುವಾಗ ಅವರನ್ನೆ ಜಾತಿಗೆ ಸೀಮಿತಗೊಳಿಸುವ ಹುನ್ನಾರ ಕೆಲವು ವ್ಯಕ್ತಿಗಳು ಪ್ರಯತ್ನಿಸುತ್ತಲೆ ಬಂದಿರುವರು. ಇಲ್ಲಿ ಕನಕದಾಸರು ಜಾತೀಯತೆ, ಮತಾಚರಣೆ, ಅಸ್ಪೃಶ್ಯತೆಗಳ ವಿರುದ್ಧ ಹೋರಾಡಿದವರು. ಇಂತಹ ಸಂತರನ್ನು ಕಾಲ, ಜಾತಿಯ ಗೊಂದಲಗಳನ್ನು ಇಲ್ಲಿ ಚರ್ಚಿಸಿ ತಾತ್ವಿಕರಿಸಲಾಗಿದೆ.

ಸಾಮಾಜಿಕ ಸೌಹಾರ್ದತೆ ಹದಗೆಡುತ್ತಿರುವ ಈ ದಿನಗಳಲ್ಲಿ ಕನಕದಾಸರ ಸಮಾಜಮುಖಿ ಧೋರಣೆಗಳನ್ನು ಪ್ರಸ್ತುತಪಡಿಸುವ ಅಗತ್ಯತೆಗಳು ಹಿಂದಿನ ದಿನಗಳಿಗಿಂತಲೂ ಇಂದು ಅವಶ್ಯಕವಾಗಿದೆ. ಇನ್ನು ಅವರ ವಿಚಾರಗಳು ಸಮುದಾಯಕ್ಕೆ ಬೇಕಾಗಿವೆ. ಆ ನಿಟ್ಟಿನಲ್ಲಿ ಆಗಿರುವ ಅಧ್ಯಯನಗಳಲ್ಲಿ ಕಾ.ತ. ಚಿಕ್ಕಣ್ಣ ಅವರು ಬೆಂಗಳೂರಿನ ಸಂತ ಕನಕದಾಸರ ರಾಷ್ಟ್ರೀಯ ಸಂಶೋಧನ ಕೇಂದ್ರದ ಮೂಲಕ ಮಾಡುತ್ತಿರುವ ಕಾರ್ಯ ಶ್ಲಾಘನೀಯ. ಕೆಲವು ಅಧ್ಯಯನಗಳಲ್ಲಿ ಕನಕದಾಸರು ಜಾತಿಯ ತಾರತಮ್ಯ ಧೋರಣೆಯಿಂದ ನಿಂದನೆಗೊಳಗಾಗಿ ಅನುಭವಿಸಿದ, ನೋವು, ಯಾತನೆ, ಮಡುಗಟ್ಟಿ ನಿಂತಿದೆ ಎನ್ನುವುದು ಅಧ್ಯಯನಕಾರರ ಬಲವಾದ ವಾಗ್ವಾದ.

ಇದಲ್ಲದೆ ಪ್ರಸ್ತುತ ಕಾಲದ ಸಮುದಾಯಕ್ಕೆ ಅಂಟಿದ ಕಳಂಕ ಎಂಬಂತೆ ಜಾತಿಯತೆ, ಮತಾಚರಣೆ, ಅಸ್ಪೃಶ್ಯತೆಗಳ ವಿರುದ್ಧ ಅವರು ಸಾಹಿತ್ಯ ಮೂಲಕ ಧ್ವನಿಎತ್ತಿದ್ದಾರೆ. ಲಿಂಗಪಂಕ್ತಿಯ ಚಿಂತನಶೀಲ ಬರಹಗಳು ಇಲ್ಲಿ ಮುಖ್ಯವಾಗಿವೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣದಿಂದಾಗಿ ಬದುಕು ತಲ್ಲಣಿಸುತ್ತಿದೆ. ಬದುಕು ಮೌಲ್ಯಯುತವಾಗಲು ಸಮಾನತೆ, ಮಾನವೀಯತೆ, ಸಮಾಜವಾದ. ಪ್ರಜಾಪ್ರಭುತ್ವದಂತ ಮೌಲ್ಯಗಳು ಅಗತ್ಯವಾಗಿವೆ. ಜನಸಾಮಾನ್ಯರು ನಿಟ್ಟುಸಿರು ಬಿಟ್ಟು ಬದುಕುವಂತಾಗಬೇಕು ಅನ್ನುವುದು ಇಲ್ಲಿನ ಆಶಯ. ಹೀಗಾಗಬೇಕಾದರೆ ಕನಕದಾಸರ ಕ್ರೀಯಾಶೀಲ ಜಾತ್ಯಾತೀತ ಧೋರಣೆಯನ್ನು ಅಧ್ಯಯನಕಾರರು ಚನ್ನಾಗಿ ಪ್ರಸ್ತುತಪಡಿಸಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಬಂಡಾಯದ ನೆಲೆಯ ಚಿಂತನೆಗಳು ಹೆಚ್ಚಿಗೆ ಮಾನ್ಯತೆ ಪಡೆಯುತ್ತಿವೆ. ಕವಿಗಳ, ಲೇಖಕರ, ವಿಮರ್ಶಕರ ಸಾಹಿತ್ಯದಲ್ಲಿ ಪ್ರಗತಿಪರ ನಿಲುವುಗಳು ಗುಪ್ತಗಾಮಿನಿಯಾಗಿ ಜೀವಂತಿಕೆ ಪಡೆಯುತ್ತಿವೆ. ಆ ಕಾರಣಕ್ಕಾಗಿಯೇ ಕನಕ ವಿವಿಧ ಆಯಾಮಗಳಲ್ಲಿ ಜೀವಂತಗೊಳ್ಳುತ್ತಿದಾನೆ. ವಿಶೇಷವಾಗಿ ಪ್ರಗತಿಪರ ಸಾಂಸ್ಕೃತಿಕ ನಾಯಕನಾಗಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಿದ್ದಾನೆ. ಇಂತಹ

ಧೋರಣೆಗಳನ್ನು ಅಧ್ಯಯನಗಳಲ್ಲಿ ಗುರುತಿಸಲಾಗಿದೆ. ಇವರ ಕೃತಿಗಳಲ್ಲಿ ಕೆಲವೊಂದು ವೈಶಿಷ್ಟ್ಯಗಳ ಅಧ್ಯಯನಗಳಾಗಿದ್ದು ಶೃಂಗಾರ, ಶೌರ್ಯ, ವರ್ಗ, ವರ್ಣ, ಸಂಘರ್ಷದ ನೆಲೆಗಳು ಭಕ್ತಿ ಮುಂತಾದ ಅಂಶಗಳತ್ತ ದೃಢತೆ ಹೊಂದಿವೆ. ಸಮಾಜದಲ್ಲಿ ಮುಕ್ತವಾಗಿರುವ ಮೌಢ್ಯ ಕಂದಾಚಾರಗಳನ್ನು ಖಂಡಿಸಿದ ಕನಕರ ಸಾಮಾಜಿಕ ಕಾಳಜಿ ಇಲ್ಲಿ ಅಧ್ಯಯನದ ಮುಖ್ಯ ವಸ್ತುವಾಗಿದೆ.

ಮದ್ಯಕಾಲೀನ ಯುಗದಲ್ಲಿ ಸಮುದಾಯಿಕವಾಗಿ ಬೆರೆತ ಕನಕದಾಸರು ಮತ್ತು ಅವರ ಸಾಹಿತ್ಯ ಕೀರ್ತನೆಗಳು, ಮುಂಡಿಗೆಗಳು ಹೊಂದಿರುವ ಧೋರಣೆಗಳನ್ನು ಅಧ್ಯಯನಗಳಲ್ಲಿ ಸಂಗ್ರಹಿಸಿ, ಚರ್ಚಿಸಿರುವುದು ಮಹತ್ವವಾಗಿದೆ. ಎಲ್ಲಾ ಅಂಶಗಳನ್ನು ಇಲ್ಲಿ ತಾತ್ವಿಕವಾಗಿ ವಿಶ್ಲೇಷಿಸಿದೆ. ಸಾಂಸ್ಕೃತಿಕವಾಗಿ ಭಕ್ತಿ, ಧರ್ಮಗಳು ಹೇಗೆ ಪ್ರೇರಣೆ ಬೀರಬಲ್ಲವು. ವ್ಯಕ್ತಿ ತನ್ನತನದೊಂದಿಗೆ ಹಾಗೂ ಸಮುದಾಯಿಕವಾಗಿ ಜನರ ಮನದಲ್ಲಿ ಹೇಗೆ ಸ್ಥಿರಸ್ಥಾಯಿಯಾಗಿ ಉಳಿಯಬಲ್ಲ ಎಂಬುವುದಕ್ಕೆ ಭಜನೆ ಡೊಳ್ಳು ಮುಂತಾದ ಮೌಖಿಕ ಪರಂಪರೆಯಲ್ಲಿ ಇಂದಿಗೂ ಜನಮನದ ಸಾಂಸ್ಕೃತಿಯ ನಾಯಕನಾಗಿ ಅಧ್ಯಯನಗಳು ಬಿಂಬಿಸಿವೆ. ಆ ಎಲ್ಲಾ ಬಗೆಯ ವಿಶ್ಲೇಷಣೆಗಳನ್ನು ಮಾಡಲಾಗಿದೆ.

ಕನಕದಾಸರು ಮೇಲ್ವರ್ಗದವರಿಂದ ಎಲ್ಲ ರೀತಿ ಸಂಗತಿಗಳನ್ನು ದೌರ್ಜನ್ಯದ ತಾರತಮ್ಯದ ಬದುಕನ್ನು ಅನುಭವಿಸಿದವರು. ಅದಕ್ಕಾಗಿಯೇ ಇವರು ವ್ಯಷ್ಟಿ ಪ್ರಜ್ಞೆಯ ಹರಿದಾಸರಿಗಿಂತ ಸಮಷ್ಟಿ ಪ್ರಜ್ಞೆಯತ್ತ ಮುಖ ಮಾಡಿದ ವ್ಯಕ್ತಿಯಾಗಿ ಕಾಣಿಸುತ್ತಾರೆ. ಹಾಗಾಗಿ ಅಧ್ಯಯನಗಳ ಮೂಲಕ ಅವರ ಸಾಹಿತ್ಯ ಬಿಚ್ಚಿಕೊಳ್ಳುತ್ತದೆ. ಇವರು ಧಾರ್ಮಿಕ ಆದ್ಯಾತ್ಮ ಚಿಂತನೆಯನ್ನು ಮಾಡುವ ಸಂಧರ್ಭದಲ್ಲಿ ಅವರ ಅಭಿವ್ಯಕ್ತಿ ಸಾಮಾಜಿಕ ಚಿಂತನೆಯ ಸ್ವರೂಪವನ್ನು ತಾಳಿರುವುದು. ಇವು ಅವರ ಕೃತಿಗಳಾಗ ರಾಮಧ್ಯಾನಚರಿತೆ, ಹರಿಭಕ್ತಸಾರದಲ್ಲಿ ಕಾಣುತ್ತೇವೆ. ಅವರ ಕೃತಿಗಳಲ್ಲಿರುವ ಮೌಲ್ಯಗಳನ್ನು ಅಧ್ಯಯನಗಳಲ್ಲಿ ಇರುವುದರಿಂದ ಆ ಎಲ್ಲ ಬಗೆಯ ಧೋರಣೆಗಳನ್ನು ವಿವರಿಸಲಾಗಿದೆ.

ಮಹಾಪ್ರಬಂಧದಲ್ಲಿ ಕನಕದಾಸರನ್ನು ಭಾರತದ ಭಕ್ತಿಪಂಥ ಭಾರತೀಯ ಸಮಾಜ ಸುಧಾರಕರೊಂದಿಗೆ ಹೋಲಿಕೆ ಮಾಡಿ, ಭಿನ್ನ, ವಿಭಿನ್ನ ನೆಲೆಗಳ ಮೇಲೆ ಅವರ ಜೀವನ ಸಾಹಿತ್ಯ ಧೋರಣೆಗಳನ್ನು ಹುಡುಕಾಟ ಮಾಡಲಾಗಿದೆ ಕನಕದಾಸರ ಅಸ್ಮಿತೆಯನ್ನು ಕಟ್ಟುವ ಪ್ರಜ್ಞಾಪೂರ್ವಕ ಧೋರಣೆಗಳಿಂದ ಅಸ್ತಿತ್ವಕ್ಕೆ ಬಂದಿರುವ ವಿಧಾನವಿದು. ಈ ವಿಧಾನದಲ್ಲಿ ತಳ ಸಮುದಾಯದ ಅಧ್ಯಯನಕಾರರು ಹೆಚ್ಚಾಗಿದ್ದಾರೆ, ಇದನ್ನು ನೋಡುವುದಾದರೆ ತಳ ಸಮುದಾಯದ ಶಿಕ್ಷಣವಂತರು ಕನಕದಾಸರನ್ನು ಅಪ್ಪಿಕೊಂಡಿದ್ದಾರೆ ಎಂದು ಅನಿಸುತ್ತದೆ. ಈ ಅಪ್ಪಿಕೊಳ್ಳುವ ವಿಧಾನದಲ್ಲೂ ಸಹ ಅಸ್ಮಿತೆಯ ಪ್ರತಿಪಾದನೆ ಇದೆ. ಮುಖ್ಯವಾಗಿರುವ ನೆಲೆಗಳನ್ನು ಇಲ್ಲಿ ಗ್ರಹಿಸಲಾಗಿದೆ. ಅವುಗಳಲ್ಲಿ ಇವರು ಸಮಾಜದಲ್ಲಿರುವ ಬಹುಮುಖ್ಯ ನೆಲೆಗಳನ್ನು ಹಾಗೂ ಸೃಜನಶೀಲ ಚಿಂತನೆಗಳನ್ನು ಸಮಾಜಕ್ಕೆ ತಲುಪಿಸುವ ಪ್ರಯತ್ನ ಮಾಡಲಾಗಿದೆ. ಆದರೆ ಇಲ್ಲಿ ಕೆಲವೊಂದು ನಿರ್ದಿಷ್ಟ ಅಂಶಗಳ ಕುರಿತು ವ್ಯಾಖ್ಯಾನ ಮಾಡಿದ್ದಾರೆ. ಅವರು ಇತರೆ ಸಂತರು ಕನಕದಾಸರಲ್ಲಿರುವ ಸಾಮ್ಯ ಮತ್ತು ವಿರುದ್ಧವಾದ ಅಂಶಗಳಾವುವು ಎಂಬುವುದನ್ನೂ ಸಹ ಸೈದ್ಧಾಂತಿಕವಾಗಿ ಚರ್ಚಿಸಲಾಗಿದೆ. ಅದರಲ್ಲಿ ಡಾಂಭಿಕತೆ, ಕುಲ,

ಹರಿಭಕ್ತಿ, ಸ್ತ್ರೀ ಸಂವೇದನೆ, ದಾನ, ಧರ್ಮ, ಪರೋಪಕಾರ, ಕಾಯಕ, ಹೆಣ್ಣು, ಹೊನ್ನು, ಮಣ್ಣಿನ ಮೋಹ, ಭಕ್ತಿ ಈ ಎಲ್ಲ ಅಂಶಗಳ ಮೇಲೆ ತೌಲನಿಕವಾಗಿ ಅಧ್ಯಯನ ಮಾಡಿ ಅಲ್ಲಿರುವ ಎಲ್ಲ ಪರಿಕಲ್ಪನೆಗಳಲ್ಲಿ ಅವರ ಕಾಳಜಿಯು ಕಂಡುಬರುತ್ತದೆ. ಉದಾ: ಡಾಂಭಿಕತೆಯನ್ನು ಕುಲ, ಜಾತಿ, ವ್ಯವಸ್ಥೆ ಹೋಗಲಾಡಿಸಲು ಅವರು ಅನುಸರಿಸಿದ ಕಾರ್ಯವನ್ನು ಅಧ್ಯಯನಗಳಲ್ಲಿ ಹೇಳಿರುವುದು ಸ್ತುತ್ಯಾರ್ಹ. ಎಲ್ಲ ಅಂಶಗಳನ್ನು, ಅದರ ಒಳತಿರುಳನ್ನು, ವಿವಿಧ ಸಿದ್ಧಾಂತಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಕನಕದಾಸರು ಕೃತಿಗಳು, ಕೀರ್ತನೆಗಳು, ಮುಂಡಿಗೆಗಳ ಮೇಲೆ ನಡೆದ ಎಲ್ಲ ಅಧ್ಯಯನಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಆದರೆ ಕನ್ನಡಕ್ಕೆ 'ಮುಂಡಿಗೆ'ಯಂತಹ ಹೊಸಪ್ರಕಾರವೊಂದನ್ನು ಕೊಟ್ಟ ಕೀರ್ತಿ ಕನಕದಾಸರಿಗೆ ಸಲ್ಲಬೇಕು. ಇವು ಒಡೆದು ಹೇಳುವಂತೆ ಒಗಟಿನ ರೂಪದಲ್ಲಿವೆ. ವಿಶಿಷ್ಟ ಬಗೆಯ ಜ್ಞಾನದ ಖನಿಜಗಳಾಗಿವೆ. ಬುದ್ಧಿ ಚಾತುರ್ಯ ಅನುಭವಗಳಿಂದ ಕೂಡಿವೆ. ಈವರೆಗೆ ಕೆಲವೊಂದು ಮುಂಡಿಗೆಯ ವಿಶ್ಲೇಷಣೆ, ಅವುಗಳ ಆಶಯಗಳನ್ನು ಅರ್ಥೈಸಲು ಅಧ್ಯಯನಗಳು ಎಡವಿವೆ.

ಮಧ್ಯಯುಗದ ಕಾಲದಲ್ಲಿ ಬಾಳಿದ ಕನಕರು ಸಮಾಜ ಕಂಡ ಆದರ್ಶ ಪುರುಷರು ಅವರ ಸಾಮಾಜಿಕ, ಧಾರ್ಮಿಕ, ಚಿಂತನೆ, ತತ್ವಗಳು, ಆಶಯಗಳು ಮನುಕುಲಕ್ಕೆ ದಾರಿದೀಪಗಳಾಗಿವೆ. ಪ್ರಾಮಾಣಿಕ, ದಕ್ಷತೆ, ಶುದ್ಧ, ಪವಿತ್ರ, ಪ್ರಗತಿಯ ಸಮಾಜ ನಿರ್ಮಾಣಕ್ಕೆ ಅವರ ಸಿದ್ಧಾಂತಗಳು ಪ್ರತಿಯೊಬ್ಬರಿಗೂ ಅಮೂಲ್ಯವಾಗಿವೆ. ಸಮಾನತೆ, ಸ್ವಾತಂತ್ರ್ಯ, ಪ್ರಜಾಪ್ರಭುತ್ವದಂತಹ ಸಾಮಾಜಿಕ ನ್ಯಾಯದ ಪರಿಪಾಲನೆಯು ಇಂದು ಹದಗೆಟ್ಟು ಹೋಗಿರುವ ಅವ್ಯವಸ್ಥೆಯ ಆಗರವಾಗಿರುವ, ಕಿಲುಬುಗಟ್ಟಿದ ಸಮಾಜವನ್ನು ತೊಳೆಯಲು ಸಹಾಯಕವಾಗಿವೆ. ಇವುಗಳಿಂದ ಆದರ್ಶಸಮಾಜ ಕಟ್ಟಲು ಸಾಧ್ಯ. ಭಕ್ತಿ, ಜ್ಞಾನ, ವೈರಾಗ್ಯಗಳು ವ್ಯಕ್ತಿ ಚಾರಿತ್ರ್ಯ ಸಮಾಜದ ಮುಕ್ತಿ ಸೋಪಾನಗಳು ಇವುಗಳನ್ನು ಅನುಸರಿಸುವಂತ ಅಧ್ಯಯನಗಳನ್ನು ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ. ಇವು ಎಲ್ಲ ಕಾಲಕ್ಕೂ ಅನ್ವಯಿಸುವಂತಹ, ನವೋಲ್ಲಾಸದ ಜೀವನ ಕಟ್ಟಿಕೊಡುವಲ್ಲಿ, ಹೊಸ-ಹೊಸ ಸಾಧ್ಯತೆಯನ್ನು ಕಟ್ಟಿಕೊಡುತ್ತವೆ. ಹಾಗಾಗಿಯೇ ಅಧ್ಯಯನದ ಪ್ರಮುಖ ವಸ್ತುವನ್ನಾಗಿ ಮಾಡಿಕೊಂಡು ಹುಡುಕಾಟ ಮಾಡಲಾಗಿದೆ.

ಪ್ರಸ್ತುತ ಸಂಶೋಧನೆಯಲ್ಲಿ ಅಧ್ಯಯನಗಳನ್ನು ವರ್ಗೀಕರಿಸಿಕೊಂಡು, ಅವುಗಳನ್ನು ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಅಧ್ಯಯನದ ವಸ್ತು, ಮನೋಧೋರಣೆಗೆ ಅನುಗುಣವಾಗಿ, ಕನಕದಾಸರ ಆಶಯಗಳಿಗೆ ಅನುಗುಣವಾಗಿ, ಸಾಂಸ್ಕೃತಿಕ ಆಯಾಮಗಳನ್ನು ಸೇರಿಸಿ ತಾತ್ವಿಕವಾಗಿರುವ ವಿಧಾನಗಳಿಂದ ಚಿಂತಿಸಲಾಗಿದೆ.

ಈ ಅಧ್ಯಯನಗಳಲ್ಲಿ ಅಧ್ಯಯನಕಾರರು ಹೊಸ ದೃಷ್ಟಿಕೋನಗಳನ್ನು ಸೃಜಿಸಿದ್ದು, ಹೊಸ ತಲೆಮಾರಿಗೆ ಮಾರ್ಗದರ್ಶಿಯಾಗಿವೆ. ಏಕೆಂದರೆ ಇಲ್ಲಿರುವ ಆಲೋಚನೆಗಳು ಭಿನ್ನ ನೆಲೆಗಳಲ್ಲಿ ಅಧ್ಯಯನಗಳಾಗಿವೆ. ಆ ಎಲ್ಲಾ ನೆಲೆಗಳಲ್ಲಿಯೂ ಕನಕದಾಸರ ಕಾಳಜಿ ಏನು? ನಾವು ಸಮುದಾಯಕ್ಕೆ ಸಮುದಾಯಿಕ ಕಾರ್ಯವನ್ನು ಮಾಡಬೇಕಾದ ಅಧ್ಯಯನಕಾರರು ಅರ್ಥೈಸಿದ್ದಾರೆ. ಬದುಕು ಇಂದು

ಕಠಿಣವಾಗುತ್ತಿದೆ. ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಮೇಲು-ಕೀಳು ಎಂಬ ಭಾವನೆ ಹೆಚ್ಚಾಗುತ್ತಿದೆ. ಹಾಗಾಗಿ ಎಲ್ಲರೂ ಸೇರಿ, ಅನ್ಯೋನ್ಯವಾಗಿ ಬದುಕುವುದು ದುಸ್ತರವಾಗಿದೆ. ಇಂತಹ ಸಂದರ್ಭದಲ್ಲಿ ಅಧ್ಯಯನಕಾರರ ಹೊಸ ಆಲೋಚನೆ, ಹೊಸ ಬದುಕನ್ನು ಕಟ್ಟಿಕೊಳ್ಳಲು ಸಹಾಯಕವಾಗಿದೆ. ಅಂದರೆ ಶೈಕ್ಷಣಿಕವಾಗಿ ನೈತಿಕತೆಯನ್ನು ಕರಗತ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಒಂದು ವಿಚಾರವನ್ನು ಹೇಳುವುದಾದರೆ, ಕನಕಜಯಂತಿ ಆಚರಣೆಯನ್ನು ಕೇವಲ ಕುರುಬರಿಗಾಗಿ ಸೀಮಿತಗೊಳಿಸದೆ, ಅದು ಎಲ್ಲ ಧರ್ಮದವರ, ಹಬ್ಬವಾದಾಗ ಮಾತ್ರ ಅವರ ಚಿಂತನೆಗಳು ಎಲ್ಲ ಸಮುದಾಯಗಳಿಗೆ ಸಿಗುತ್ತವೆ.

ಕನಕದಾಸರ ಕುರಿತು ಬಂದಿರುವ ಅಧ್ಯಯನಗಳನ್ನು ಗಮನಿಸಿ ಅವರ ದೃಷ್ಟಿಕೋನಗಳ ನೆಲೆಯಲ್ಲಿ ತಾತ್ವಿಕವಾಗಿ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಯನಕಾರರು ಇನ್ನು ಕನಕದಾಸರ ಕೃತಿಯ ಒಳನೋಟಗಳನ್ನು ಅವರ ಸಾಹಿತ್ಯ ಸಂರಚನೆಯ ಮೌಲ್ಯಗಳನ್ನು ನೋಡಬೇಕಾಗಿದೆ. ಅದರಲ್ಲಿ ಪೌರಾಣಿಕ ಹಿನ್ನೆಲೆ ಸಂಗೀತ, ತಾಳ, ಲಯ, ರಾಗ, ಪರೋಪಕಾರ, ಸ್ತ್ರೀಸಂವೇದನೆಯ ಆಳವಾದ ಅಧ್ಯಯನದ ಅಗತ್ಯವಿದೆ. ಆ ಕುರಿತು ಬಂದಿರುವ ಕೆಲವು ಮುಖ್ಯವಾದ ಅಧ್ಯಯನಗಳನ್ನಿಟ್ಟುಕೊಂಡು ಅಲೋಚನೆಗೆ ಅನುಗುಣವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕನಕದಾಸರು ಕೀರ್ತನೆ, ಮುಂಡಿಗೆಗಳು ಹಾಗೂ ಸಾಹಿತ್ಯ ಕೃತಿಗಳ ಮೂಲಕ ಜನಮುಖಿಯಾಗಿ ಚಿಂತಿಸಿದ ಚಿಂತಕರಾಗಿದ್ದಾರೆ. ಅವರ ಸಾಹಿತ್ಯವನ್ನು ಅಧ್ಯಯನಕಾರರು ಅಧ್ಯಯನ ಮಾಡಿದ್ದಾರೆ. ಅದು ಹೆಮ್ಮೆಯ ವಿಚಾರವಾಗಿದೆ. ಆದರೆ ಕನಕದಾಸರು ವೈಚಾರಿಕ ಜಗತ್ತಿಗೆ ಲಗ್ಗೆಯಿಟ್ಟು ಶೋಧಿಸಿ ಸಮುದಾಯಿಕ ಚಲನೆಗಳಿಗೆ ಪ್ರೇರಕರಾಗಿ, ಜನಸಾಮಾನ್ಯರಲ್ಲಿ ಬೆರೆತ ಆ ಕ್ಷಣಗಳು ಮಹತ್ವಪೂರ್ಣವಾಗಿವೆ. ಅವು ಹೊಸ ಸಮಾಜ ನಿರ್ಮಾಣಕ್ಕೆ ಸರ್ವಕಾಲಿಕವಾದ ಸತ್ಯಗಳನ್ನು ಬಿಚ್ಚಿಡುತ್ತವೆ. ೧೫ನೇ ಶತಮಾನದಲ್ಲಿ ಬಾಳಿಹೋದ ಜನರ ಮನದಲ್ಲಿ ನಲಿದಾಡುತ್ತಿವೆ. ಎಂದರೆ ಅವರ ಚಿಂತನಾಶೀಲ ಬರವಣಿಗೆ. ಕನಕದಾಸರ ಕುರಿತಾಗಿ ಬರವಣಿಗೆ ವಿಚಾರಗಳಿಗೆ ಅನುಗುಣವಾಗಿ ಬಂದ ಬರಹ ವಿಮರ್ಶೆಗಳಾಗಿವೆ. ಕನಕದಾಸರ ಉದಾತ್ತವಾಗಿ ಹೇಳದಿದ್ದರೂ ಕೆಲವು ಅಧ್ಯಯನಗಳು ತುಂಬಾ ಗಂಭೀರವಾಗಿ ಚರ್ಚಿಸಿ ತಾತ್ವಿಕವಾಗಿರುವ ಎಲ್ಲ ಅಂಶಗಳನ್ನು ದಾಖಲಿಸಿರುವುದು ಗಮನಾರ್ಹವೆನಿಸಿದೆ. ಆ ಎಲ್ಲಾ ಬಗೆಯ ಆಲೋಚನೆಗಳನ್ನು ಪ್ರಸ್ತುತ ಅಧ್ಯಯನಗಳ ಪ್ರಮುಖ ಪ್ರವೃತ್ತಿಗಳನ್ನು ತಾತ್ವಿಕವಾಗಿ ವಿಶ್ಲೇಷಿಸಲಾಗಿದೆ. ಅಂದರೆ ಅಧ್ಯಯನದ ದೃಷ್ಟಿ, ಧೋರಣೆಗಳನ್ನು ಒಂದೆಡೆ ತಂದು ವಿಶ್ಲೇಷಿಸುವುದರ ಮುಖಾಂತರ ಕನಕದಾಸರ ಕುರಿತಾದ ವಿವಿಧ ಆಯಾಮಗಳ ಅಧ್ಯಯನಗಳನ್ನು ವಿಶ್ಲೇಷಿಸಿ ಅವರ ಮುಖ್ಯವಾದ ಧೋರಣೆಗಳನ್ನು ಕಂಡುಕೊಳ್ಳಲಾಗಿದೆ, ಅಂದರೆ ಸಮಾಜಮುಖಿ ಪ್ರತಿಪಾದನೆ, ಸುಸ್ಥಿರ ಅಭಿವೃದ್ಧಿ ಆಶಯವೇ ಅವರ ಧೋರಣೆಯಾಗಿದೆ ಅನ್ನುವುದು ಈ ಎಲ್ಲ ಅಧ್ಯಯನದಿಂದ ತಿಳಿದು ಬರುತ್ತದೆ.

ಅಧ್ಯಯನದ ಫಲಿತಗಳು

ಇಲ್ಲಿ ಅಧ್ಯಯನಕಾರರ ಅಧ್ಯಯನಗಳಿಂದ ಕಂಡುಕೊಂಡಿರುವ ಬಹುಮುಖ್ಯವೆನಿಸುವ ಫಲಿತಗಳನ್ನು ನೀಡಲಾಗಿದೆ.

೧. ಇಲ್ಲಿಯವರೆಗೆ ವಿಮರ್ಶಾಕ್ಷೇತ್ರದ ಸಮಗ್ರ ಅಧ್ಯಯನಗಳಾಗಿಲ್ಲ.

ಕನ್ನಡ ಸಾಹಿತ್ಯ ಚರಿತ್ರೆ ಪ್ರಾಚೀನ ಪರಂಪರೆಯನ್ನು ಹೊಂದಿದೆ. ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಹಲವಾರು ಸಮಾಜ ಸುಧಾರಕರು, ಸಂತರು, ಸಾಹಿತಿಗಳು ಬಾಳಿ ಬದುಕಿದ್ದಾರೆ. ಅವರು ಸಾಹಿತ್ಯರಚನೆ ಮಾಡುವ ಮೂಲಕ ಸಮಾಜಕ್ಕೆ ಬೆಳಕಾದವರು. ಅಂತವರ ಸಾಲಿನಲ್ಲಿ ಕನಕದಾಸರ ಕೊಡುಗೆ ಅತ್ಯಮೂಲ್ಯವಾಗಿದೆ. ಕನಕದಾಸರು ಮಧ್ಯಯುಗೀನ ಕಾಲದಲ್ಲಿ ಸಂತರಾಗಿ, ಸಮಾಜದ ಓರೆ–ಕೋರೆ ತಿದ್ದಿದವರು. ಅವರು ಮೋಹನ ತರಂಗಿಣಿ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ, ನಳಚರಿತೆ, ಕೀರ್ತನೆ, ಮುಂಡಿಕೆಗಳನ್ನು ರಚಿಸಿ ಸಮಾಜದ ಉದ್ಧಾರ ಬಯಸಿದವರು. ಇವರ ಜೀವನ, ಜಾತಿ, ಮತ, ಕೃತಿಗಳು, ಕೀರ್ತನೆ, ಮುಂಡಿಗೆಗಳ ಮೇಲೆ ಹತ್ತೊಂಬತ್ತನೆ ಶತಮಾನದಿಂದ ಪ್ರಸ್ತುತದವರೆಗೆ ವಿಮರ್ಶಕರು, ವಿಮರ್ಶಾ ಕೃತಿಗಳು ಸಂಪಾದನೆ, ಸಂಗ್ರಹ, ಲೇಖನಗಳನ್ನು ಬರೆದು ವಿಮರ್ಶೆಗೆ ಒಳಪಡಿಸಿದ್ದಾರೆ. ಆ ಎಲ್ಲಾ ವಿಮರ್ಶೆಗಳ ಮೇಲೆ ಇದುವರೆಗೆ ಸಮಗ್ರ ಅಧ್ಯಯನಗಳಾಗಿಲ್ಲ. ಆ ಅಧ್ಯಯನದ ಕೊರತೆಯನ್ನು ನೀಗಿಸಿ, ಅದನ್ನು ಎಲ್ಲಾ ದೃಷ್ಟಿಕೋನಗಳಲ್ಲಿ ವಿಮರ್ಶೆಯ ಪ್ರಕಾರವನ್ನು ಭಿನ್ನತೆಯೊಂದಿಗೆ ವಿವಿಧ ದೃಷ್ಟಿಕೋನಗಳ ಆಶಯಗಳ ಮೂಲಕ ಪ್ರವೇಶಿಸಿ ಕನಕದಾಸರ ಕುರಿತಾಗಿ ಬಂದ ಸಮಗ್ರ ಅಧ್ಯಯನಗಳ ಅಧ್ಯಯನ ಮಾಡಲಾಗಿದೆ.

೨. ಹಾಡುಗಬ್ಬ ಶೈಲಿಯಲ್ಲಿ ಸಮಕಾಲಿನ ಸಮಸ್ಯೆಗಳ ಅಭಿವ್ಯಕ್ತಿ.

ಕನಕದಾಸರು ಹಾಡುಗಬ್ಬ ಶೈಲಿಯಲ್ಲಿ ಸಮಕಾಲಿನ ಸಾಮಾಜಿಕ ಸಮಸ್ಯೆಗಳನ್ನು ಪೌರಾಣಿಕ ವಸ್ತುಗಳಿಗೆ ರೂಪಕಗಳನ್ನಾಗಿ ಬಳಸಿಕೊಂಡು ಅನಾವರಣ ಮಾಡಿದ್ದಾರೆ. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಪ್ರಭುತ್ವ ವ್ಯವಸ್ಥೆಯ ರಾಜಕಾರಣಗಳನ್ನು ಬೀತ್ತರಗೊಳಿಸಿದ್ದಾರೆ. ಪ್ರಸ್ತುತ ಈ ವಿಧಾನ ಅಧ್ಯಯನಕಾರರಿಗೆ ಒಂದು ಮಾದರಿಯಾಗಿ ಬಳಕೆಯಾಗಿದೆ. ಅಂದರೆ ಅಧ್ಯಯನಕಾರರು ತಮ್ಮ ತಮ್ಮ ಕಾಲದ ಸಾಮಾಜಿಕ ಸಮಸ್ಯೆಗಳನ್ನು ಅನಾವರಣ ಮಡುವುದಕ್ಕಾಗಿ ಮಾದರಿಯಾಗಿ ಅನುಸರಿಸಿಕೊಂಡಿದ್ದಾರೆ. ಹಾಗಾಗಿಯೇ ದಲಿತ, ಬಂಡಾಯ, ಪ್ರಗತಿಶೀಲ ಮತ್ತು ಜಾಗತೀಕರಣದ ಸಂದರ್ಭಗಳಲ್ಲಿ ಕನಕ ಬೇರೆ ಬೇರೆ ಶಕ್ತಿಯಾಗಿ, ಮಾದರಿಯಾಗಿ ಅಧ್ಯಯನಕಾರರಲ್ಲಿ ಬಳಕೆ ಆಗಿದ್ದಾನೆ. ಆಮೂಲಕ ಸಮಕಾಲೀನ ಸಮಸ್ಯೆಗಳಾದ ಜಾತಿ, ಮತ, ವರ್ಗ, ವರ್ಣ, ಸ್ತ್ರೀಪುರುಷ, ಡಾಂಬಿಕತೆ, ಭಕ್ತಿ, ದಾನ, ಧರ್ಮ, ಪರೋಪಕಾರವನ್ನು ವಿವಿಧ ನೆಲೆಗಳಲ್ಲಿ ಅಧ್ಯಯನಕಾರರು ಅಧ್ಯಯನ ಮಾಡಿರುವರು.

೩. ಪ್ರಮುಖ ಪ್ರವೃತ್ತಿಗಳಾದ ಚರಿತ್ರೆ, ಜಾತಿ, ಮತ, ಕಾಲ, ಸಾಂಸ್ಕೃತಿಕನಾಯಕ, ಮೂಢನಂಬಿಕೆ, ಅಸ್ಪೃಶ್ಯತೆ, ಸ್ತ್ರೀಸಂವೇದನೆ ಮುಂತಾದ ಪ್ರವೃತ್ತಿಗಳ ವಾಗ್ವಾದ ತೀವ್ರವಾಗಿದೆ.

ಕನಕ ಸಾಹಿತ್ಯದ ಅಧ್ಯಯನಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಹಲವು ಪ್ರವೃತ್ತಿಗಳು ಕಂಡುಬಂದಿವೆ. ಅದರಲ್ಲಿ ಮುಖ್ಯವಾಗಿ ಚರಿತ್ರೆಯನ್ನು ಹೇಳುವ ಪ್ರವೃತ್ತಿ, ಜಾತಿ, ಸಮುದಾಯದ ನಾಯಕನನ್ನಾಗಿಸುವ ಪ್ರವೃತ್ತಿ, ಜಾತಿ ಹಾಗೂ ಕಾಲಗಳ ಕುರಿತು ಗೊಂದಲಗಳನ್ನು ಸೃಷ್ಟಿಸುವ ಪ್ರವೃತ್ತಿ, ಭಕ್ತಿ, ಧರ್ಮ ಹಾಗೂ ಸಾಂಸ್ಕೃತಿಕ ನೆಲೆಯ ಅನುಸಂಧಾನದ ಅಧ್ಯಯನಗಳ ವಿಭಿನ್ನ ದೃಷ್ಟಿಕೋನಗಳನ್ನು ಗುರುತಿಸಿದ ಪ್ರವೃತ್ತಿ, ಕೀರ್ತನೆ, ಮುಂಡಿಗೆಗಳ ಒಳನೋಟಗಳನ್ನು ಗುರುತಿಸಿದ, ಕಾವ್ಯಶೋಧ ಪ್ರವೃತ್ತಿ, ಸಾಂಸ್ಕೃತಿಕ ರಾಜಕಾರಣದ ಐಕಾನ್‌ಗಳಾಗಿ ಸೃಷ್ಟಿಸುವ ಪ್ರವೃತ್ತಿ ಕನಕದಾಸರನ್ನು ಇತರೆ ಸಂತರು ಸಮಾಜ ಸುಧಾರಕರೊಂದಿಗೆ ತೌಲನಿಕವಾಗಿ ನೋಡಿದ ಪ್ರವೃತ್ತಿಗಳು ಹೆಚ್ಚಾಗಿ, ಇತ್ತೀಚಿನ ಕನಕದಾಸರ ಅಧ್ಯಯನಗಳನ್ನು ನೋಡಿ ಅಧ್ಯಯನಕಾರರಲ್ಲಿ ಕಂಡುಬಂದಿದೆ. ಆ ಪ್ರವೃತ್ತಿಗಳಿಗೆ ಕಾರಣಗಳು ಆ ಎಲ್ಲಾ ದೃಷ್ಟಿಕೋನಗಳನ್ನು ವಿಶ್ಲೇಷಿಸಲಾಗಿದೆ.

೪. ಪುರೋಹಿತಶಾಹಿ ವ್ಯವಸ್ಥೆಯಲ್ಲಿ ನಲುಗಿದ ಹಿಂದುಳಿದ ವರ್ಗದ ಅಸ್ಮಿತೆಗಳು

ಪ್ರಾಚೀನ ಪರಂಪರೆಯಲ್ಲಿ ವರ್ಗ, ವರ್ಣವ್ಯವಸ್ಥೆ ಇತ್ತು. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಹಾಗೂ ಶೂದ್ರ ವರ್ಗಗಳಿದ್ದವು. ಅದರಲ್ಲಿ ಪುರೋಹಿತಶಾಹಿ ಬ್ರಾಹ್ಮಣರು ತುಂಬ ಬಲಿಷ್ಠರಾಗಿದ್ದರು. ಸಮಾಜದ ಕೆಲವೊಂದು ಆಚರಣೆ, ಸಂಪ್ರದಾಯಗಳನ್ನು ಸೃಷ್ಟಿಸಿ, ಅವರ ಉಸ್ತುವಾರಿಯಲ್ಲಿಯೇ ಅವುಗಳು ಜರುಗುವಂತೆ ನೋಡಿಕೊಳ್ಳುತ್ತಿದ್ದರು. ಇದರಿಂದಾಗಿ ಸಮಾಜದ ಎಲ್ಲ ಹಿಂದುಳಿದ ವರ್ಗಗಳು ಅವರ ಇಚ್ಛೆಯಂತೆಯೇ ಇರುತ್ತಿದ್ದವು. ಶಿಕ್ಷಣವು ಹಿಂದುಳಿದವರಲ್ಲಿ ಕಡಿಮೆ ಇದ್ದುದು ಇದಕ್ಕೆ ಪ್ರಮುಖ ಕಾರಣದಂತೆ ಕಾಣಿಸುತ್ತಿದೆ. ಆದರೆ ಈ ಪುರೋಹಿತಶಾಹಿ ವರ್ಗ ಅದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು, ಪ್ರಭುತ್ವವನ್ನು ಹೇರಿವೆ. ಹೆಚ್ಚು ದಬ್ಬಾಳಿಕೆ ಮಾಡಿದ್ದವು. ಇದಕ್ಕೆ ನಿದರ್ಶನವಾಗಿ ಹೇಳುವುದಾದರೆ, ಕನಕದಾಸರು ಕೃಷ್ಣ ದರುಶನಕ್ಕೆ ಉಡುಪಿಗೆ ಹೋದಾಗ ಹಿಂದುಳಿದವರು ಎಂಬ ಒಂದೇ ಕಾರಣಕ್ಕೆ ಅವರನ್ನು ಮಠದ ಒಳಗೆ ಹೋಗಲು ಬಿಡಲಿಲ್ಲ. ಕನಕರ ಪ್ರಾಬಲ್ಯ, ವರ್ಚಸ್ಸು ಹೆಚ್ಚಿದ್ದರಿಂದ ಇಡೀ ಹಿಂದುಳಿದವರ್ಗ ಅವರ ಪರವಾಗಿತ್ತು. ಹೀಗಿದ್ದರಿಂದ ಕಿಂಡಿಯ ಮೂಲಕ ಕನಕನನ್ನು ತೋರಿಸುವ ಮೂಲಕ ಕನಕನಕಿಂಡಿಯ ಕಥೆ ಹೆಣೆದು, ಅದರ ಲಾಭವನ್ನು ಮಠದ ಪುರೋಹಿತಶಾಹಿ ವರ್ಗ ಪಡೆದದ್ದು ಹೇಳತೀರದು. ಇಂದಿಗೂ ಎಲ್ಲರಿಗೂ ಗೊತ್ತಿರುವ ವಿಷಯ. ಕನಕದಾಸರಿಗೆ ಹೀಗೆ ಮಾಡಿರುವ ಇವರು ಸಾಮಾನ್ಯ ಜನರ ಪಾಡು ಅವರ ಸ್ಥಿತಿ ತುಂಬಾ ಶೋಚನೀಯವಾಗಿತ್ತು. ಹೀಗೆ ಹಿಂದುಳಿದ ವರ್ಗದವರು ಪುರೋಹಿತಶಾಹಿಗಳ ಕೈಯಲ್ಲಿ ನಲುಗಿದ ವಿಚಾರವನ್ನು ಅಧ್ಯಯನಕಾರರು ಮುಖ್ಯವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಇದಕ್ಕೆ ಹಲವಾರು ಕಾರಣಗಳಿವೆ ಅಂತಹ ಕಾರಣಗಳಲ್ಲಿ 'ಪ್ರತಿರೋಧದ ನೆಲೆ' ಮುಖ್ಯವಾಗಿ ಕಾಣಿಸುತ್ತದೆ.

೫. ಜಾತೀಯ ಗೊಂದಲ ಸೃಷ್ಟಿ ಮತ್ತು ಕನಕರನ್ನು ಅಪ್ಪಿಕೊಳ್ಳುವಿಕೆ

ಪ್ರಸ್ತುತ ದಿನಗಳಲ್ಲಿ ಜಾತಿ ಪ್ರಭಾವ ಹೆಚ್ಚಾಗಿದೆ. ಒಬ್ಬ ವ್ಯಕ್ತಿಯನ್ನು ವ್ಯಕ್ತಿತ್ವಕ್ಕಿಂತ ಜಾತಿಯಿಂದಲೇ ಅಳೆಯುವ ಜಾಯಮಾನ ಬಂದಿದೆ. ನಾವು ಕನಕದಾಸರನ್ನು ಒಬ್ಬ ಮಹಾನುಭಾವ, ಮಹಾತ್ಮ, ಸಂತ, ಹೀಗೆಲ್ಲಾ ಕರೆಯುತ್ತೇವೆ. ಮುಖ್ಯವಾಗಿ ಗಮನಿಸಬೇಕಾದದ್ದು ಮಹಾತ್ಮರು ಮನುಷ್ಯ ಜನಾಂಗಕ್ಕೆ ಕೊಟ್ಟ ಬೆಳಕು ಮುಖ್ಯ. ಆದರೆ ವಿದ್ವಾಂಸರು ವಿವಿಧ ಆಕರಗಳನ್ನು ಬಳಸಿ, ಜಾತಿಯ ಗೊಂದಲ ಸೃಷ್ಟಿಸಿರುವರು. ಅವರನ್ನು ಬೇಡ ಜಾತಿಯವರು, ಮ್ಯಾಸಬೇಡರು, ಹಂಡೆ ಕುರುಬ, ಆದಿ ಬಣಜಿಗ ಸೇರಿದವರು, ದಾಸ ಪಂಗಡಕ್ಕೆ ಸೇರಿದವರು, ಕಬ್ಬಲಿಗರು, ಹೊಲೆಯರು, ಕುರುಬಜಾತಿಯವರು ಹೀಗೆ ತಮಗೆ ತಿಳಿದಂತೆ ವಿಶ್ಲೇಷಿಸಿದ್ದಾರೆ. ಹೀಗೆ ನಾನಾ ಅಭಿಪ್ರಾಯಗಳು ಹೇಳಿಕೆಗಳು, ಊಹೆಗಳು ಹೊಮ್ಮಿವೆ. ಇದರ ಹಿಂದಿನ ರಾಜಕಾರಣವೇನೆಂದರೆ ಕನಕರನ್ನು ತಮ್ಮ ಕುಲದ ಅಸ್ಮಿತೆಯನ್ನಾಗಿ ಮಾಡಿಕೊಳ್ಳುವುದರ ಮೂಲಕ ನಮ್ಮ ಕುಲದ ಕಾಣಿಕೆ ಇಷ್ಟೊಂದು ದೊಡ್ಡದು ಎನ್ನುವುದನ್ನು ತೋರಿಸುವುದೇ ಹೊರತು, ಕನಕತತ್ವವನ್ನು ಬೆಳೆಸುವುದಲ್ಲ. ಅಲ್ಲದೆ ಕನಕದಾಸರನ್ನು ನಮ್ಮ ಜಾತಿಯವರು ಎಂದು ಅಪ್ಪಿಕೊಳ್ಳುವ ಪ್ರವೃತ್ತಿ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಕನಕದಾಸರ ಜಾತಿ, ಮತ, ಕುಲದ ಕುರಿತಾಗಿ ವಿಮರ್ಶಕರ ಅಭಿಪ್ರಾಯಗಳನ್ನು ವಿದ್ವಾಂಸರ ಹೇಳಿಕೆಯೊಂದಿಗೆ ಬಳಕೆಯಲ್ಲಿರುವ ಆಕರಗಳನ್ನು ಉಲ್ಲೇಖಿಸಿ, ಜಾತಿಯ ಗೊಂದಲವನ್ನು ಇಲ್ಲಿ ತಿಳಿಗೊಳಿಸಲಾಗಿದೆ. ಮುಖ್ಯವಾಗಿ ಅವರು ಸಮುದಾಯಕ್ಕೆ ನೀಡಿರುವ ಕೊಡುಗೆ ಮುಖ್ಯವೇ ಹೊರತು, ಜಾತಿಯಲ್ಲ. ಸುಖಾಸುಮ್ಮನೆ ಇಲ್ಲಿ ಅಧ್ಯಯನಗಳಲ್ಲಿ ಅಧ್ಯಯನಕಾರರು ಜಾತಿಗೊಂದಲ ಸೃಷ್ಟಿಸಿದ್ದಾರೆ. ಇವೆಲ್ಲಾ ಅಂಶವನ್ನು ತಾತ್ವಿಕವಾಗಿ ವಿಶ್ಲೇಷಣೆ ಮಾಡಲಾಗಿದೆ.

೬. ವರ್ಗ, ವರ್ಣಗಳ ವಿರುದ್ಧ ಸೊಲ್ಲೆತ್ತಿರುವ ಆಯಾಮಗಳ ತಾತ್ವಿಕ ವಿಶ್ಲೇಷಣೆ

ಪ್ರಾಚೀನ ಪರಂಪರೆಯಲ್ಲಿ ವರ್ಗ, ವರ್ಣಗಳ ಆಡಳಿತವನ್ನು ಕಾಣುತ್ತೇವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ವರ್ಗಗಳಿದ್ದವು. ಮೇಲ್ವರ್ಗವಾದ ಬ್ರಾಹ್ಮಣರು ಎಲ್ಲಾ ಜಾತಿ ವರ್ಣಗಳ ಜನರ ಮೇಲೆ ಹಿಡಿತ ಸಾಧಿಸಿದ್ದರು. ಅವರ ದಬ್ಬಾಳಿಕೆ, ಶೋಷಣೆ, ಅಸ್ಪೃಶ್ಯತೆ ವಿರುದ್ಧ ಧ್ವನಿ ಎತ್ತಿದ್ದವರು ಕನಕದಾಸರು. ಅವರು ನೇರವಾಗಿ ತರಾಟೆಗೆ ತೆಗೆದುಕೊಳ್ಳದೆ ಅವರ ಸಾಹಿತ್ಯ ರಚನೆಯ ಮೂಲಕ ಸೂಕ್ಷ್ಮವಾಗಿ ಅಭಿಪ್ರಾಯ ವ್ಯಕ್ತಪಡಿಸಿದವರು. ಸ್ವತಃ ಕನಕದಾಸರು ಪಟ್ಟ ಯಾತನೆ ಅಧ್ಯಯನಗಳಲ್ಲಿ ಮಡುಗಟ್ಟಿನಿಂತಿದೆ. ಜಾತೀಯತೆ, ಅಸ್ಪೃಶ್ಯತೆ, ಮತಾಚರಣೆ ವಿರುದ್ಧ ಜಾತಿಮುಖೇನ ಎತ್ತಿದ ಧ್ವನಿ ಮುಖ್ಯವಾಗಿದೆ. ವರ್ಗ, ವರ್ಣಗಳ ಶೋಷಣೆಯ ವಿರುದ್ಧ ಸೊಲ್ಲೆತ್ತುವ ಪ್ರಗತಿಪರ ಧೋರಣೆಗಳು, ಚಿಂತನೆಗಳು ಕನಕದಾಸರ ಅಧ್ಯಯನಗಳಲ್ಲಿ ಹೇರಳವಾಗಿವೆ. ಇದು ಮೇಲ್ವರ್ಗದವರ ವಿರುದ್ಧ ಮಾತನಾಡುವ ಮಾತುಗಳಾಗಿ ಅಧ್ಯಯನಗಳಲ್ಲಿ ಬಳಕೆಯಾಗಿದೆ. ಈ ಗ್ರಹಿಕೆ ಸರಿಯಾಗಿದೆ ಎಕೆಂದರೆ ಕನಕ ಬಹಳ ಸೂಕ್ಷವಾಗಿ ಪ್ರತಿರೋಧ ಮಾಡಿದ ವ್ಯಕ್ತಿ ಅದನ್ನು ವಿದ್ವಾಂಸರು ಅಧ್ಯಯನಗಳಲ್ಲಿ ಹಿಡಿದಿಟ್ಟಿದ್ದಾರೆ. ಆದ್ದರಿಂದ ಅಧ್ಯಯನಗಳು ಮಹತ್ವ ಪಡೆದುಕೊಂಡಿವೆ.

೭. ಕನಕದಾಸರು ಕುರುಬ ಸಮುದಾಯಕ್ಕೆ ಸೇರಿದವರು ಅನ್ನುವ ತೀರ್ಮಾನ

ಜಾತಿ ಗೊಂದಲದಲ್ಲಿ ಕನಕದಾಸರನ್ನು ಸಿಲುಕಿಸಿದ ಚರ್ಚೆಗಳು ಇಂದಿಗೂ ಮುಂದುವರೆದಿವೆ. ಮಹಾಪುರುಷರಿಗೆ ಜಾತಿ ಮುಖ್ಯವಲ್ಲ. ನೀತಿ ಮುಖ್ಯ. ಅದಕ್ಕೆ ಕನಕರು 'ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ನೀವು ಬಲ್ಲಿರಾ" ಎಂದಿದ್ದಾರೆ. ಕುಲದ ಕುರಿತು ಮಾತನಾಡಿದವರಿಗೆ ಕುಲ, ಜಾತಿಯ ಜಿಡ್ಡು ಅಂಟಿಸಿದ್ದಾರೆ. ಬೇಡ, ದಾಸರು, ನಾಯಕ, ಕಬ್ಬಲಿಗ, ಆದಿಬಣಜಿಕ, ಕುರುಬ ಹೀಗೆ ನಾನಾ ಜಾತಿಯ ಅಭಿಪ್ರಾಯಗಳಿವೆ. ಆ ಎಲ್ಲಾ ಅಭಿಪ್ರಾಯ ಕ್ರೋಢೀಕರಿಸಿ, ತಾತ್ವಿಕವಾಗಿ ಚಿಂತನೆಗೊಳಪಡಿಸಿ, ಕೆಲವು ಆಧಾರಗಳನ್ನಿಟ್ಟು ನೋಡಲಾಗಿ ಅವರು ಕೆಲವು ಕೀರ್ತನೆಗಳು ಹಾಗೂ ದೈವಪರಂಪರೆ ಗಮನಿಸಲಾಗಿ ಅವು ಎಲ್ಲವುಗಳನ್ನು ವಿಶ್ಲೇಷಣೆಗೊಳಪಡಿಸಿದಾಗ ಅವರು 'ಕುರುಬ' ಸಮುದಾಯಕ್ಕೆ ಸೇರಿದವರೆಂದು ಸ್ಪಷ್ಟವಾಗುತ್ತದೆ. ಕೆಲವು ಅಧ್ಯಯನಕಾರರು, ವಿಮರ್ಶಕರು, ಕುರುಬರೆಂದು ಸ್ಪಷ್ಟಪಡಿಸಿದ್ದು, ವಿಶ್ಲೇಷಣೆಗೆ ಪೂರಕವಾಗಿದೆ. ಹೀಗೆ ಕನಕದಾಸರು 'ಕುರುಬ'ರೆಂದು ಅಧ್ಯಯನಗಳ ಮೂಲಕ ತಿಳಿದುಬರುತ್ತದೆ ಹಾಗೂ ಈ ನಿಲುವು ಗಟ್ಟಿಯಾಗಿ ನಿಲ್ಲುತ್ತದೆ.

೮. ಅಂತರಂಗದ ಅರಿವಿನ ಪ್ರತಿಪಾಧನೆಯ ಹಂಬಲ.

ಕನಕದಾಸರ ಮೇಲೆ ನಡೆದ ಅಧ್ಯಯನಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ, ಅಲ್ಲಿ ಕನಕದಾಸರು ಅಧ್ಯಾತ್ಮ ಹಾಗೂ ಆತ್ಮ ಶೋಧನೆಗೆ ಮಾರ್ಗ ತೋರಿಸುತ್ತಾರೆ. ಒಬ್ಬ ವ್ಯಕ್ತಿ ಶುದ್ಧರಾಗಿರುವಂತೆ ಮಾಡಲು ಆತ್ಮಶೋಧನೆ ಮುಖ್ಯ. ತನ್ಮೂಲಕ ಅಂತರಂಗವನ್ನು ಶುದ್ಧಿಕರಿಸಿಕೊಳ್ಳಬಹುದು. ಆಗ ಅಂತರಂಗದಲ್ಲಿ ತನ್ನರಿವೆ ತನಗೆ ಗುರುವಾಗಿ ಮಾರ್ಪಡುತ್ತದೆ. ಆತ್ಮಶೋಧನೆ ಎಂದರೆ ಆತ್ಮ ಪರೀಕ್ಷಣ ಎಂದರ್ಥ. ಇಂತಹ ನಿಯಮಗಳನ್ನು ಹೇಳಿ ಬದುಕನ್ನು ಹಸನಮಾಡಿಕೊಳ್ಳಲು ಹೇಳುತ್ತಾರೆ. ಹರಿಭಕ್ತಿಸಾರವು ಭಕ್ತಿ ಮತ್ತು ಆತ್ಮಶೋಧನೆಯ ಕುರಿತು ಸಮಗ್ರವಾಗಿ ವಿವರಿಸುತ್ತದೆ. ಹೀಗಾಗಿ ವೈಷ್ಣವ, ದ್ವೈತ, ಅದ್ವೈತ ಮತದ ಎಲ್ಲ ಅಂಶಗಳನ್ನು ಅಳವಡಿಸಿಕೊಂಡು ಕೊನೆಗೆ ಯಾವ ಮತಕ್ಕೂ ಒಳಪಡದ ಸಂತರಾಗಿದ್ದಾರೆ. ಅವರ ಜೀವನವು ಸಮಾಜಕ್ಕೆ ಮಾದರಿಯಾಗಿದೆ. ಅಧ್ಯಾತ್ಮ ಸಾಧಕನಿಗೆ ಆತ್ಮಶೋಧ ಸಾಧನ ಸೋಪಾನದ ಮೊದಲ ಮೆಟ್ಟಿಲು. ತನ್ನ ಅರಿವಿಲ್ಲದೆ ಬುದ್ಧಿಪೂರ್ವಕವಾಗಿಯಲ್ಲದೆ, ತಾನು ಎಸಗಿರಬಹುದಾದ ಪಾಪಕಾರ್ಯಗಳು ಜನ್ಮಾಂತರದ ಕರ್ಮಫಲ ಎಂದು ಸಾಧಕರು ನಂಬುತ್ತಾರೆ. "ಹಲವು ಜನ್ಮದ ಪಾಪವೆನಿಪ ಸೊಕ್ಕಾನೆ ಸೊಂಡಿಲು ಸುತ್ತಿ ಬಂದು ಸೀವರಿಸುತಿದೆಕೊ: ಮಲೆವ ದುಷ್ಕೃತವೆಂಬ ಜಗಕೆ ಕೇಸರಿಯೆಂಬ ಛಲ ಬಿರುದು ತಾಳ್ದ ದೇವರದೇವ ನೀನೆನ್ನ ಕಡಹಾಯಿಸೋ ತಡಿಯ ಸೇರಿಸೊ" ಎಂದು ಅರ್ತರಾಗಿ ಆದಿಕೇಶವನನ್ನು ಕನಕರು ಬೇಡಿಕೊಂಡಿದ್ದಾರೆ ಎಂಲು ಹೇಳಿರುವುದು ಅಂತರಂಗದ ಅಭಿವ್ಯಕ್ತಿಯಾಗಿದೆ. ಹೀಗಾಗಿ ಎಲ್ಲರೂ ಅಂತರಂಗ ಶುದ್ಧವಾಗಿಟ್ಟುಕೊಂಡು ಸಮಾಜದಲ್ಲಿ ಉತ್ತಮವಾಗಿ ಬದುಕಬೇಕೆಂಬುದು ಅವರ

ಆಶಯವಾಗಿದೆ. ಹಾಗಾಗಿ ಅಂತರಂಗದ ಅರಿವಿನ ಮೂಲಕ ವ್ಯಕ್ತಿ ಬದಲಾವಣೆ ಹಾಗೂ ಆ ಮೂಲಕ ಸಾಮಾಜಿಕ ಬದಲಾವಣೆಗೆ ಹಂಬಲಿಸಿದವರು ಎನ್ನುವುದನ್ನು ಅಧ್ಯಯನಗಳು ವಿಶ್ಲೇಷಣೆ ಮಾಡಿವೆ.

೯. ಬೇರೆ ಬೇರೆ ಪ್ರದೇಶಗಳ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಸರದ ಪರಿಚಯವಾಗಿದೆ.

ನಾವು ಬದುಕುತ್ತಿರುವ ನಾಡು, ದೇಶ ವಿಶಲವಾದ ಪರಿಧಿಯಿಂದ ಕೂಡಿದ ಪ್ರದೇಶವಾಗಿದೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಲಿಸಿ ನೋಡಿದಾಗ ಪ್ರತಿ ಅಂಶದಲ್ಲೂ ಭಿನ್ನತೆ ಕಂಡು ಬಂದಿದೆ ಸಾಹಿತ್ಯ, ಸಂಸ್ಕೃತಿ ಭಿನ್ನವಾಗಿದೆ. ಈ ಪ್ರದೇಶದ ಭಾಷೆ, ಕುಲ, ಧರ್ಮ, ಸಂಸ್ಕೃತಿಗಳಿಂದಾಗಿ ಒಡೆದುಹೋಗಿರುವ ಮಾನವ ಜಾತಿಯನ್ನು ಪ್ರತಿಪಾದಿಸುವುದಾದರೂ ಅಲ್ಲಿ ರೂಪುಗೊಂಡ ವಿಶಿಷ್ಟ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂದರ್ಭವು ಮಹತ್ವವಾಗುತ್ತದೆ. ಉದಾಹರಣೆ ಹೇಳುವುದಾದರೆ ಆಂಧ್ರದ ಅಣ್ಣಮಯ್ಯ, ತಮಿಳುನಾಡಿನ ತಿರುವಳ್ಳುವರ್ ಇವರನ್ನು ಹೋಲಿಕೆ ಮಾಡುವುದಾರೆ ಇವರು ಹೇಳಿದ ಮಾರ್ಗ ಒಂದೆಯಾದರೂ ಪ್ರದೇಶಗಳು ಸಾಹಿತ್ಯ, ಸಂಸ್ಕೃತಿ ಬೇರೆ ಬೇರೆಯಾಗಿವೆ. ಕನಕದಾಸರ ಕುರಿತಾದ ಅಧ್ಯಯನಗಳಲ್ಲೂ ಈ ಗ್ರಹಿಕೆ ಕೆಲಸ ಮಾಡಿದೆ ಹಾಗಾಗಿ ಕನಕದಾಸರನ್ನು ಪ್ರಾದೇಶಿಕ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿವೆ.

೧೦. ಕನಕದಾಸರ ಸಾಹಿತ್ಯದ ಅಧ್ಯಯನಗಳಲ್ಲಿ ದೇಶಿಯತೆ ಮೆಳೈಸಿದೆ.

ಹನ್ನೆರಡನೆ ಶತಮಾನದಲ್ಲಿ ವಚನಸಾಹಿತ್ಯದ ಮೂಲಕ ಸಮುದಾಯಿಕ ಸ್ವಾಸ್ಥ್ಯಕ್ಕಾಗಿ ಹೋರಾಡಿದ ಬಸವಣ್ಣನವರಿಗಿಂತ ಭಿನ್ನವಾಗಿ, ವ್ಯಕ್ತಿಗತವಾಗಿ ಪ್ರಯತ್ನಿಸಿದವರಲ್ಲಿ ಕನಕದಾಸರು ಅಗ್ರಗಣ್ಯರಾಗಿರುವರು. ಅಧ್ಯಯನಕಾರರ ಅಧ್ಯಯನಗಳನ್ನು ಅವಲೋಕಿಸಿದಾಗ ಮಧ್ಯಯುಗೀನ ಕಾಲದಲ್ಲಿ ಕೀರ್ತನೆ, ಮುಂಡಿಗೆಗಳನ್ನಲ್ಲದೆ ಹಲವು ಉತ್ತಮ ಕೃತಿಗಳನ್ನು ಸಾಹಿತ್ಯಲೋಕಕ್ಕೆ ನೀಡಿದ ಕೀರ್ತಿ ಅವರದು. ಮೋಹನ ತರಂಗಿಣಿ, ನಳಚರಿತೆ, ರಾಮಧಾನ್ಯಚರಿತೆ, ಕೀರ್ತನೆಗಳಲ್ಲಿ ದೇಶೀಯತೆ ಮೈದಳೆಸಿವೆ. ಇಲ್ಲಿ ಜನಸಾಮಾನ್ಯರ ನಾಡಿಯಾಗಿ ಪ್ರಾಥಮಿಕ ಪರಿಸರ ಇದೆ. ರಾಮಧಾನ್ಯಚರಿತೆಯಂತೂ ಜನಸಾಮಾನ್ಯರ ಪ್ರತೀಕವೆಂಬಂತೆ ರಚಿತವಾಗಿದೆ. ಇಲ್ಲಿ ಧಾನ್ಯಗಳ ವಿಶ್ಲೇಷಣೆಯಂತೂ ಅದ್ಭುತವಾಗಿದೆ. ಅಲ್ಲಿ ನಡೆದಿರುವ ವಾಗ್ವಾದವು ಸಮಾನತೆಯನ್ನು ಸಾರುತ್ತದೆ. ದೇಶೀಯ ಸೊಬಗನ್ನು ಹೊಂದಿವೆ ಎಂದು ಅಧ್ಯಯನಗಳ ಮೂಲಕ ತಿಳಿದುಕೊಳ್ಳಬಹುದು. ಕನ್ನಡ ಜನರ ಅಂತರಂಗವನ್ನು ಸಾಕ್ಷಾತ್‌ಕರಿಸಿ ಅವರ ಅಭಿವ್ಯಕ್ತಿ ಹೆಚ್ಚಿಸಲು ಕಾರಣವಾಗಿದೆ. ಇದು ಅತ್ಯಮೂಲ್ಯವೆಂದು ತಿಳಿದುಬರುತ್ತದೆ. ಎಕೆಂದರೆ ಆ ಬಗೆಯ ಸಾಂಕೇತಿಕ ಪ್ರತಿರೋಧ, ಮಾತಿಲ್ಲದವರ ಅಭಿವ್ಯಕ್ತಿಯ ಸಂಕೇತವಿದು. ಈ ಸಾಂಕೇತಿಕ ಭಾಷಾಭಿವ್ಯಕ್ತಿಯನ್ನು ಅಧ್ಯಯನಕಾರರು ವಿವಿಧ ಅಧ್ಯಯನದ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿರುವುದು ಕನಕದಾಸರನ್ನು ವಿಶಿಷ್ಟವಾಗಿ ನಿಲ್ಲಿಸಿದ್ದಾರೆ.

೧೧. ತವಕ ತಲ್ಲಣಗಳಿಗೆ ಪರಿಹಾರದ ಹುಡುಕಾಟಕ್ಕಾಗಿ ಕೀರ್ತನೆ, ಮುಂಡಿಗೆಗಳ ಬಳಕೆ

ಮನುಷ್ಯನು ಸಂಘಜೀವಿ. ಸಮಾಜದಲ್ಲಿ ಬದುಕುವ ಪ್ರತಿಯೊಂದು ಜೀವಿಗೂ ತವಕ, ತಲ್ಲಣಗಳಿವೆ. ಇಂದು ಉದಾರಿಕರಣ, ಜಾಗತೀಕರಣ, ಖಾಸಗೀಕರಣದಿಂದ ಜಗತ್ತು ತಲ್ಲಣಗೊಳಗಾಗಿದೆ. ಕೊಲೆ, ಸುಲಿಗೆ, ಮೋಸ, ಅತ್ಯಾಚಾರದಂತಹ ಪ್ರಕರಣಗಳು ಇಂದು ಕಂಡುಬರುತ್ತಿವೆ. ಇವೆಕ್ಕೆಲ್ಲಾ ಪರಿಹಾರ ಎಂಬಂತೆ ಕೀರ್ತನೆಗಳು, ಮಂಡಿಗೆಗಳು ಸಮಾಜಕ್ಕೆ ದೀವಿಗೆಯಾಗಿವೆ. 'ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಲ್ಲರನ್ನು ಸಲಹುವನು ಇದಕೆ ಸಂಶಯವಿಲ್ಲ' ಎಂದಿರುವ ಕನಕರು 'ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ' ಎಂದು ಸಾಹಿತ್ಯ ಸಂಗೀತದ ಮೂಲಕ ಅವು ನಮಗೆ ನೈತಿಕ ಮೌಲ್ಯಗಳನ್ನು ಹೇಳಿದವರು. ಜೀವನಕ್ಕೆ ಅನೇಕ ರೀತಿಯ ಪಾಠಗಳನ್ನು ಕಲಿಸುತ್ತವೆ. ಭ್ರಷ್ಟಾಚಾರ ಮಾಡುವವರು 'ಎಲ್ಲರು ಮಾಡುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ಕೀರ್ತನೆ ಅರ್ಥೈಸಿಕೊಂಡರೆ ಹೊಟ್ಟೆ ಮತ್ತು ಬಟ್ಟೆಗೆ ಮಾತ್ರ ಹೆಚ್ಚಿಗೆ ಅವಶ್ಯವಿರುವುದಿಲ್ಲಾ ಎಂದು ಪರಿವರ್ತನೆ ಹೊಂದಬಹುದಾಗಿದೆ. ಹೀಗೆ ಕೀರ್ತನೆಗಳ ಮೂಲಕ ಬೆಳಕು ತೋರಿಸಿದವರು. ಅಲ್ಲದೆ ಇವರ ಜೀವನ, ಕೃತಿಗಳ, ಕೀರ್ತನೆಗಳ ಅಧ್ಯಯನಗಳಿಂದ ಅನೇಕ ಸಂಕೀರ್ಣ ಸಮಸ್ಯೆಗಳಿಗೆ ತವಕ, ತಲ್ಲಣಗಳಿಗೆ ಆತಂಕ, ಅಪಾಯಗಳಿಗೆ ದಾರಿದೀಪವಾದವರು. ಸರಳ–ಸುಂದರ ಮನೋಬದುಕಿನ ಸಾರ್ಥಕತೆಯನ್ನು ಪಡೆದುಕೊಳ್ಳು ಸಾಧ್ಯವಾಗುವಂತಹ ಸುಸಂಸ್ಕೃತಿಯೊಂದನ್ನು ಅಧ್ಯಯನಗಳಿಂದ ಕಂಡುಕೊಳ್ಳಲಾಗಿದೆ. ಕನಕದಾಸರ ಅಭಿವ್ಯಕ್ತಿಯ ಮಹತ್ವವನ್ನು ಅಧ್ಯಯನಕಾರರು ತಮ್ಮ ಅಧ್ಯಯನಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

೧೨. ಇತರೆ ಸಮಾಜಸುಧಾರಕರು ಮತ್ತು ಸಂತರೊಂದಿಗೆ ತೌಲನಿಕತೆ.

ಕನಕದಾಸರು ಅವರು ಬದುಕಿದ ರೀತಿಗೂ ಇತರರು ಬದುಕಿದ ರೀತಿಗೂ ಭಿನ್ನತೆ ಕಂಡುಬರುವುದು ಕಾರಣ ಪರಿಸರ ಪ್ರಭಾವವು ಆಗಿರಬಹುದು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಕನಕ–ಕಬೀರ, ಬಸವೇಶ್ವರ, ತಿರುವುಳ್ಳವರ್, ಅಣ್ಣಮಾಚಾರ್ಯ, ಪುರಂದರರು ಹೀಗೆ ಅನೇಕರನ್ನು ಅವರ ಜೀವನ, ಸಾಧನೆ ಸಿದ್ಧಿಗಳನ್ನು ವಿಶ್ಲೇಷಣೆ ಮಾಡಿದಾಗಿ ಕನಕದಾಸರು ವಿಶೇಷವಾಗಿ ಭಿನ್ನರಾಗಿ ಗುರುತಿಸಿಕೊಳ್ಳುತ್ತಾರೆ. ಉಳಿದವರು ಒಂದು ಮತ, ಪಂಥಕ್ಕೆ ಒಂದು ನಿಯಮಕ್ಕೆ ಬದ್ಧರಾಗುತ್ತಾರೆ. ಆದರೆ ಕನಕರು ಯಾವ ಮತವನ್ನು ಬಿಡದೆ ಎಲ್ಲ ಮತದ ಪ್ರಭಾವಕ್ಕೆ ಒಳಗಾಗಿ ಅಧ್ಯಾತ್ಮಿಕ ಶಿಖರವೇರಿದ ಮಹಾನುಭಾವರಾಗಿದ್ದಾರೆ. ಬಸವಣ್ಣನವರು ಸಾಮೂಹಿಕವಾಗಿ ಸಮಾಜ ಸುಧಾರಣೆಯಲ್ಲಿ ತೊಡಗಿದರೆ, ಕನಕದಾಸರು ದೇಶ ಸುತ್ತಿ ಜನರ ಅಂತರಂಗ ಅರಿತು ಕೀರ್ತನೆ, ಮುಂಡಿಗೆಗಳ ಕೃತಿಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದವರು. ಹೀಗೆ ಎಲ್ಲರೊಳಗೊಬ್ಬರಾಗದೆ ಭಿನ್ನವಾಗಿರುವುದು ಅಧ್ಯಯನಕಾರರ ಅಧ್ಯಯನದಿಂದ ತಿಳಿದುಬರುತ್ತದೆ.

೧೩. ಜಾತ್ಯಾತೀತತೆ, ಸಮಾನತೆ, ಸಾಂಸ್ಕೃತಿಕ ಮೌಲ್ಯಗಳ ಹುಡುಕಾಟ.

ಕನಕದಾಸರ ಕೃತಿಗಳ ಕುರಿತಾಗಿ ಹಲವು ಭಿನ್ನ ದೃಷ್ಟಿಕೋನಗಳಲ್ಲಿ ಅಧ್ಯಯನಕಾರರು ಅಧ್ಯಯನ ಮಾಡಿದ್ದಾರೆ. ಅದರಲ್ಲಿ ರಾಮಧಾನ್ಯಚರಿತೆಯ ಮೂಲಕ ಜಾತ್ಯಾತೀತತೆ, ಸಮಾನತೆಯನ್ನು ತರಲು ಪ್ರಯತ್ನಿಸಿದ್ದು ಸೂಕ್ಷ್ಮ ಸಂವೇದನೆಯಾಗಿದೆ. ಇಲ್ಲಿರುವ ಭತ್ತ-ರಾಗಿಗಳ ನಡುವಿನ ಸಂಘರ್ಷ ಬರಿ ಧಾನ್ಯಗಳ ಸಂಘರ್ಷವಾಗಿರದೆ, ಅದು ಮೇಲ್ಜಾತಿ ಮತ್ತು ಕೆಳಜಾತಿಗಳ ನಡುವಿನ ಸಂಘರ್ಷದ ರೂಪಕದಂತೆ ಚಿತ್ರಿತವಾಗಿದೆ. ಜಾತಿಯತೆಯನ್ನು ಈ ಸಮಾಜದಲ್ಲಿ ಉಂಟುಮಾಡುತ್ತಿರುವ ಅನಾಹುತವನ್ನು ಪರಿಚಯಿಸುವ ಮೂಲಕವೆ ಜಾತ್ಯಾತೀತತೆ ಮನೋಭಾವವನ್ನು ಇಲ್ಲಿ ಪ್ರತಿಪಾದಿಸಿ ಸಮಾನತೆ ತರಲು ಪ್ರಯತ್ನಪಟ್ಟಿದ್ದಾರೆ. ಇಂದು ಜಾತಿ ಭೂತವಾಗಿ ಕಾಡುತ್ತಿದೆ. ಎಲ್ಲಾ ವ್ಯವಸ್ಥೆಯಲ್ಲಿಯೂ ಜಾತಿ ಕೆಲಸ ಮಾಡುತ್ತಿದೆ. ಅದು ರಾಜಕೀಯ, ಸಾಮಾಜಿಕ, ಧಾರ್ಮಿಕ ಆಡಳಿತ ಕ್ಷೇತ್ರದಲ್ಲೂ ಕಂಡುಬಂದಿದೆ. ಇಂದು ಎಲ್ಲರೂ ಒಂದೇ ಎನ್ನುವ ತತ್ವ, ಸಮಾನತೆ, ಜಾತ್ಯಾತೀತತೆ ತತ್ವವನ್ನು ಕನಕದಾಸರು ಬಹಳ ಮುತುವರ್ಜಿಯಿಂದ ಪ್ರತಿಪಾದಿಸಿರುಉದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಅಲ್ಲದೆ ಕನಕದಾಸರ ಅಧ್ಯಯನಗಳಲ್ಲಿ ಅಧ್ಯಯನಕಾರರು, ಕನಕದಾಸರನ್ನು ಅವರ ಕೀರ್ತನೆ, ಸಂಗೀತ, ಇತರೆ ಅಭಿವ್ಯಕ್ತಿಗಳನ್ನು ಗುರುತಿಸಿ ಅವರನ್ನು ಸಆಂಸ್ಕೃತಿಕ ವ್ಯಕ್ತಿಯಾಗಿ ಬಿಂಬಿಸಿದ್ದಾರೆ. ಕನಕರು ಹಾಗೂ ಅವರ ಸಾಹಿತ್ಯದ ಕುರಿತಾಗಿ ಅಧ್ಯಯನ ಮಾಡಿರುವರು. ಅಲ್ಲದೆ ಭಜನೆ, ಗೀತೆ, ಲಾವಣಿ, ಹಂತಿಯಹಾಡು ಮುಂತಾದವುಗಳಲ್ಲಿ ಅವರ ಸ್ಮರಣೆಯನ್ನು ಮಾಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರನ್ನು ಸಾಂಸ್ಕೃತಿಕ ನಾಯಕನನ್ನಾಗಿ ಗುರುತಿಸಿರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ.

೧೪. ಮನುಷ್ಯ ಧರ್ಮ ಸಮನ್ವಯತೆಯ ಧೋರಣೆ

ಕನಕದಾಸರು ಸಂತರಾಗಿ ಸಮುದಾಯಿಕ ಸಮಾಜಮುಖಿಯಾಗಿ ಬಾಳಿ ಜಗತ್ತನ್ನು ಬೆಳಗಿದವರು. ಹಾಗೆಯೆ ಇವರನ್ನು ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲೊಬ್ಬರು ಎಂದು ಕರೆದರು. ದಾಸ ಸಾಹಿತ್ಯದ ಸುವರ್ಣಯುಗದ ಪ್ರವರ್ತಕರಾಗಿ ಯಾವ ಮತಕ್ಕೂ ಅಂಟಿಕೊಳ್ಳದೆ ಸಕಲ ತತ್ವಗಳನ್ನು ಮೀರಿ, ನಿರ್ದಿಂಗತವಾಗಿ ಬೆಳೆದು ವಿಶ್ವಮಾನವರಾಗಿ ವಿಜ್ರಂಬಿಸಿದ ಯೋಗಪುರುಷರಾಗಿದ್ದಾರೆ ಎಂದು ದೇ.ಜ.ಗೌ. ಅವರು ಅಭಿಪ್ರಾಯಪಡುತ್ತಾರೆ. ಹೀಗೆ ಧರ್ಮ ಸಮನ್ವಯತೆಯಿಂದ ಬದುಕಿದ್ದು ಕಂಡುಬಂದಿದೆ. ಇದು ಮನುಷ್ಯ ಧರ್ಮವನ್ನು ಚಾಲ್ತಿಗೆ ತರುವ ಆಶಯವಾಗಿದೆ. ಅಲ್ಲದೆ ಅವರ ಮೋಹನತರಂಗಿಣಿ ಕೃತಿಯಲ್ಲಿ ಹರಿಮತದ ಅನಿರುದ್ಧ, ಹರಮತದ ಬಾಣಾಸುರನ ಮಗಳಾದ ಉಕ್ಷೆಯರಲ್ಲಿ ಗಾಂಧರ್ವ ವಿವಾಹ ಏರ್ಪಡಿಸಿದ್ದಾರೆ. ಈ ಕಾರಣಗಳಿಂದ ಈ ಎರಡು ಮತಗಳ ಮಧ್ಯೆ ನಡೆಯುತ್ತಿದ್ದ ಸಂಘರ್ಷ, ಕಲಹ ನಿಲ್ಲಿಸಿ, ಒಪ್ಪಂದದ ಮುಖೇನ ಶಾಂತಿ ಸೌಹಾರ್ಧತೆಯ ಸಂದೇಶ ಸಾರಿದ್ದಾರೆ. ಹೀಗೆ ಧರ್ಮ ಸಮನ್ವಯತೆ ಅಧ್ಯಯನಗಳಿಂದ ಕಂಡುಬಂದಿದೆ. ಈ ವಿಧಾನವನ್ನು ಅಧ್ಯಯನಕಾರರು ಪ್ರಧಾನಧಾರೆಗೆ ತರುವುದಕ್ಕೆ ಹಂಬಲಿಸಿರುವುದು ಅಧ್ಯಯನಗಳಿಂದ ತಿಳಿದುಬರುತ್ತದೆ.

೧೫. ಸ್ತ್ರೀಸಮಾನತೆ ಎತ್ತಿಹಿಡಿದ ಅಧ್ಯಯನಗಳು.

ಕನಕದಾಸರ ಕಾವ್ಯಗಳು, ಕೀರ್ತನೆಗಳು, ಮುಂಡಿಗೆಗಳನ್ನು ಅಧ್ಯಯನ ಮಾಡಿ, ಅಲ್ಲಿರುವ ಪಾತ್ರಚಿತ್ರಣ, ಅವುಗಳ ಧ್ವನಿ, ಸ್ವಭಾವ, ಪರಿಸರ, ಇನ್ನಿತರ ಅಂಶಗಳನ್ನು ಗುಮನಿಸಿ, ಸನ್ನಿವೇಶಗಳ ಚಿತ್ರಣವನ್ನು ಗಂಭೀರವಾಗಿ ಅಧ್ಯಯನ ಮಾಡಿ, ಪುರುಷಪಾತ್ರಗಳ ಜೊತೆ ಹೋಲಿಸಿ ಸ್ತ್ರೀ-ಪುರುಷರು ಸಮಾನರು ಎನ್ನುವ ಆಶಯದೊಂದಿಗೆ ಸ್ತ್ರೀಸಮಾನಳು ಎನ್ನುವ ಅಭಿಪ್ರಾಯವನ್ನು ಅಧ್ಯಯನಕಾರರು ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಸಮುದಾಯದಲ್ಲಿ ಹೆಣ್ಣು-ಗಂಡು ಯಾರೂ ದೊಡ್ಡವರಲ್ಲ, ಯಾರೂ ಸಣ್ಣವರಲ್ಲ ಎಂಬ ಧೋರಣೆ ತಾಳಿದ್ದು, ಸಮಾನತೆ ಮೌಲ್ಯದ ಪ್ರತಿಪಾದನೆ ಮಾಡಲಾಗಿದೆ.

೧೬. ತತ್ವಪದಕಾರನಾಗಿ ಕನಕದಾಸ ಹೊರಹೊಮ್ಮಿದ್ದಾನೆ.

ಅಧ್ಯಯನಕಾರರು ಕನಕದಾಸರ ಅಭಿವ್ಯಕ್ತಿ ಮಾಧ್ಯಮವಾಗಿ ಅವರ ಕೀರ್ತನೆ, ಮುಂಡಿಗೆಗಳನ್ನು ಅಧ್ಯಯನಮಾಡಿ, ಅದರ ಒಳಗೆ ಅಡಗಿರುವ ತತ್ವಗಳನ್ನು ಅಧ್ಯಯನಮಾಡಿ ಅವನೊಬ್ಬ ಒಳ್ಳೆಯ ತತ್ವಪದಕಾರನಾಗಿದ್ದಾನೆ ಎಂದು ಹೇಳಿರುವರು. ಅಧ್ಯಯನಕಾರರ ದೃಷ್ಟಿಯಲ್ಲಿ ಅವನೊಬ್ಬ ತತ್ವಪದಕಾರನಾಗಿದ್ದಾನೆ ಎಂದು ಅಧ್ಯಯನಗಳಿಂದ ತಿಳಿದುಬರುತ್ತದೆ.

೧೭. ಹೊಸ ಪರಿಕಲ್ಪನೆಯ ಜ್ಞಾನವು ಜನರಿಗೆ ತಲುಪುವ ಸಾಧ್ಯತೆ ಅಧ್ಯಯನಗಳ ಎಲ್ಲ ಪರಿಕಲ್ಪನೆಗಳು ಎಲ್ಲ ಕಾಲಕ್ಕೂ ಸಲ್ಲುವ ಜ್ಞಾನವೇ ಸರಿ ಈ ಜ್ಞಾನವನ್ನು ಜೀವಂತಗೊಳಿಸಬೇಕಾದ ಅನಿವಾರ್ಯತೆ ಇದೆ. ಹೀಗಾಗಿಯೇ ಈ ನೆಲೆಯಲ್ಲಿ ಅಧ್ಯಯನ ಕೈಗೊಂಡಿದ್ದಾರೆ. 'ದಾಸಜ್ಞಾನ' ವನ್ನು ವಿಶೇಷವಾಗಿ ಕನಕದಾಸರ ಜ್ಞಾನವನ್ನು ಜೀವಂತಗೊಳಿಸಿ ಜನರಿಗೆ ಮುಟ್ಟಿಸುವ ಮತ್ತು ಅನ್ವಯಿಕ ನೆಲೆಯನ್ನು ಅದನ್ನು ಮತ್ತೆ ಮತ್ತೆ ಸೃಜನಶೀಲವಾಗುವಂತೆ ಮಾಡಬೇಕಾದ ಅನಿವಾರ್ಯತೆ ಈ ಜಗತ್ತಿಗಿದೆ: ಈ ದೃಷ್ಟಿಕೋನದಲ್ಲಿ ಅಧ್ಯಯನಗಳು ಮುನ್ನಡೆಯಲಿ ಎನ್ನುವುದು ಈ ಅಧ್ಯಯನದ ಆಶಯ ಕಂಡುಬಂದಿದೆ. ವಿಶೇಷವಾಗಿ ಕೆಳಸಮುದಾಯದ ಅಧ್ಯಯನಕಾರರು ಈ ಆಶಯವನ್ನು ತೀವ್ರವಾಗಿ ಪ್ರತಿಪಾಧನೆ ಮಾಡಿದ್ದಾರೆ.

ಅನುಬಂಧಗಳು

ಅನುಬಂಧ ೧: ವಕ್ತೃಗಳ ವಿವರ

ಅನುಬಂಧ ೨: ಅಭ್ಯಾಸ ಸೂಚಿ

೧. ಮೂಲ ಆಕರಗಳು

ಅ. ವಿಮರ್ಶಾ ಕೃತಿಗಳು

ಆ. ನಾಟಕಗಳು

ಇ. ಕಿರು ಪ್ರಬಂಧ ಹಾಗೂ ಮಹಾ ಪ್ರಬಂಧಗಳು

೨. ಪರಾಮರ್ಶನ ಕೃತಿ ಮತ್ತು ಲೇಖನಗಳು

ಅ. ಪರಾಮರ್ಶನ ಕೃತಿ

ಆ. ಇಂಗ್ಲಿಷ್ ಗ್ರಂಥಗಳು

ಇ. ಲೇಖನಗಳು

೩. ಕೋಶಗಳು

ಅನುಬಂಧ–೧

ವಕ್ತೃಗಳ ವಿವರ

ಕ್ರಸಂ.	ಹೆಸರು	ವಯಸ್ಸು	ವಿದ್ಯಾರ್ಹತೆ	ವೃತ್ತಿ	ವಿಳಾಸ
೧	ಎಸ್.ಎಫ್. ಜಕಬಾಳ	೫೮	ಪಿಹೆಚ್.ಡಿ.	ಪ್ರಾಧ್ಯಾಪಕರು	ಕೆ.ಎಸ್.ಎಸ್. ಪದವಿ ಕಾಲೇಜು, ಗದಗ
೨	ಸಿದ್ದು ಮೋಟೆ	೪೨	ಪದವಿ	ಕಲಾವಿದ	ಅವರಾದಿ ತಾ. ರಾಮದುರ್ಗ
೩	ಯಮನಪ್ಪ ಮಾದರ	೫೫	೭ನೇ ತರಗತಿ	ಕಲಾವಿದ	ಬೆನಕಟ್ಟಿ ತಾ. ಬಾಗಲಕೋಟೆ
೪	ಹನಮಪ್ಪ ಐಹೊಳ್ಳಿ	೬೨	೪ನೇ ತರಗತಿ	ಕಲಾವಿದ	ಬೆನಕನವಾರಿ ತಾ. ಹುನಗುಂದ
೫	ಅಲ್ಲಾ ಗಿರಿರಾಜ್	೫೦	ಪದವಿ	ಸಾಹಿತಿ	ಕನಕಗಿರಿ ತಾ. ರಾಯಚೂರು
೬	ಸೋಮಪ್ಪ ಬ ಹಮಗಿ	೪೫	೭ನೇ ತರಗತಿ	ಕಲಾವಿದ	ಕೈನಕಟ್ಟಿ ತಾ. ಬಾದಾಮಿ
೭	ಕಾ.ತ. ಚಿಕ್ಕಣ್ಣ	೬೫	ಎಂ.ಎ.	ವಿದ್ವಾಂಸರು	ಬೆಂಗಳೂರು
೮	ಜಗನ್ನಾಥ ಗೇಣನ್ನವರ	೪೮	ಪಿಹೆಚ್.ಡಿ.	ವಿದ್ವಾಂಸರು	ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ
೯	ಬಿ. ಶಿವರಾಮ ಶೆಟ್ಟಿ	೫೫	ಎಂ.ಎ.	ವಿದ್ವಾಂಸರು	ಮಂಗಳೂರು ವಿ.ವಿ.
೧೦	ಸುಧಾಕರ	೬೮	ಪಿಹೆಚ್.ಡಿ.	ವಿದ್ವಾಂಸರು	ಮೈಸೂರು
೧೧	ಜ್ಯೋತಿ ಹೊಸೂರ	೭೦	ಪಿಹೆಚ್.ಡಿ.	ವಿದ್ವಾಂಸರು	ಆಂಜನೇಯ ನಗರ, ಬೆಳಗಾವಿ
೧೨	ಎ.ವಿ. ನಾವಡ	೬೪	ಪಿಹೆಚ್.ಡಿ.	ವಿದ್ವಾಂಸರು	ಬೆಂಗಳೂರು
೧೩	ಹರಿಲಾಲ್ ಪವಾರ	೫೫	ಪಿಹೆಚ್.ಡಿ.	ವಿದ್ವಾಂಸರು	ಕರ್ನಾಟಕ ವಿ.ವಿ., ಧಾರವಾಡ

ಅನುಬಂಧ–೨

ಅಭ್ಯಾಸ ಸೂಚಿ

ಮೂಲ ಆಕರಗಳು

ಅ. ವಿಮರ್ಶಾ ಕೃತಿಗಳು

೧. ಅಂಬಲಿಯವರ ಎನ್.ಎಂ. (ಅನು), ದಾಸ ಶ್ರೇಷ್ಠ ಕನಕದಾಸರ ನಳಚರಿತೆ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೫.

೨. ಅನಿಲಕುಮಾರ ಕುಲಕರ್ಣಿ, ಭಕ್ತ ಕನಕದಾಸ, ಮಾರುತಿ ಬುಕ್ ಸೆಂಟರ್, ಗದಗ, ೨೦೧೦.

೩. ಒಡೆಯರ್. ಡಿ. ಹೆಗ್ಗಡೆ (ಸಂ), ಕನಕ ಗೋಪುರ ವಿವಾದದ ನೆಲೆಗಳು, ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು, ೨೦೦೯.

೪. ಒಡೆಯರ್. ಡಿ. ಹೆಗ್ಗಡೆ, ಹಾಲುಮತದ ಅಧ್ಯಯನಗಳು, ಕಲಾಪ್ರಕಾಶನ, ಬೆಂಗಳೂರು, ೨೦೧೨.

೫. ಕಟ್ಟಿ ಶೇಷಾಚಾರ್ಯರು, ಕವಿಕನಕದಾಸರು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೩೮.

೬. ಕಾಡದೇವರಮಠ ಎಲ್.ಎಸ್. (ಸಂ), ಕನಕದಾಸರ ಬುದುಕು ಬರಹ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೧.

೭. ಕುಮಾರಯ್ಯ ಡಿ.ಕೆ., ಜೀವ ಯಾವ ಕುಲ, ಗೋಕುಲ್ ಪ್ರಕಾಶನ, ಹೊಳೆ ನರಸೀಪುರ, ೨೦೧೦.

೮. ಕೃಷ್ಣರಾವ್ ಕೆ.ಎಂ. (ಸಂ), ಕನಕದಾಸರ ಚತುಶ್ಯಶತಮಾನೋತ್ಸವ ಸಂಸ್ಮರಣ ಸಂಚಿಕೆ, ರಾಜ್ಯ ಸಮಿತಿ ಶ್ರೀ ಕನಕದಾಸ ನಾಲ್ಕನೇಯ ಶತಮಾನೋತ್ಸವ, ಬೆಂಗಳೂರು, ೧೯೬೫.

೯. ಕೃಷ್ಣಶರ್ಮ ಬೆಟಗೇರಿ, ಹುಚ್ಚೂರಾವ ಬೆಂಗೇರಿ (ಸಂ), ಕನಕದಾಸರ ಹಾಡುಗಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೫.

೧೦. ಕೊರಟಿ ಶ್ರೀನಿವಾಸರಾವ್, ಶ್ರೀ ಕನಕದಾಸರು, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೮೪.

೧೧. ಚಂದ್ರಕಾಂತ ಬಿಜ್ಜರಗಿ, ದಾರ್ಶನಿಕ ಕವಿ ಕನಕದಾರು, ಶೈಲಚಂದ್ರಪ್ರಕಾಶನ, ವಿಜಾಪುರ, ೨೦೧೦.

೧೨. ಚನ್ನಪ್ಪ ಯರೇಸೀಮೆ, ಎಂ., ಬಸವರಾಜು, ಕರ್ನಾಟಕದ ಮಹಾಸಂತ ಕನಕದಾಸ, ಸಮಾಚಾರ ಮತ್ತು ಪ್ರಸಾರ ಮಂತ್ರಿ ಶಾಖೆ, ಭಾರತ ಸರ್ಕಾರ, ೧೯೮೫.

೧೩. ಚಲಪತಿ ಆರ್., (ಸಂ) ಕನಕದಾಸರ ಕೃತಿಗಳ ಸಂಪಾದನೆಯ ಸಾಂಸ್ಕೃತಿಕ ರಾಜಕಾರಣ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ೨೦೧೫.

೧೪. ಚಿಕ್ಕಮಗಳೂರು ಗಣೇಶ, ಸಂತಕವಿ ಕನಕದಾಸರು, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ೨೦೧೪.

೧೫. ಚಿಕ್ಕಣ್ಣ ಕಾ.ತ. (ಸಂ), ಕನಕ ಕಿರಣ, ಕಾಳಿದಾಸ ಸಾಂಸ್ಕೃತಿಕ ಸಂಘ, ಬೆಂಗಳೂರು, ೧೯೮೨.

೧೬. ಚಿಕ್ಕಣ್ಣ ಕಾ.ತ., ಕನಕದಾಸರು, ಕನಕ ಪತ್ತಿನ ಸಹಕಾರಿ ಸಂಘ ನಿಯಮಿತ, ಬೀಳಗಿ, ೨೦೧೩.

೧೭. ಚಿಕ್ಕಣ್ಣ ಕಾ.ತ. (ಸಂ), ಕನಕ ಕಾವ್ಯ ವಿಶಿಷ್ಟಾರ್ಥಕೋಶ, ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ೨೦೧೪.

೧೮. ಜಗನ್ನಾಥ ಗೇನಣ್ಣವರ (ಸಂ), ಆತ್ಮ ಯಾವ ಕುಲ, ಕಾಗಿನೆಲೆ ಅಭಿವೃದ್ಧಿ ಪ್ರಧಿಕಾರ, ಕಾಗಿನೆಲೆ, ೨೦೦೯.

೧೯. ಜಗನ್ನಾಥ ಗೇನಣ್ಣವರ, ಸಂತಶ್ರೀ ಕನಕದಾಸರ ಜೀವನ ಸಂದೇಶ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ೨೦೦೮.

೨೦. ಜಗನ್ನಾಥ. ಆರ್. ಗೇನಣ್ಣವರ, (ಸಂ), ಕನಕದಾಸರ ಸಾಹಿತ್ಯ ದರ್ಶನ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ೨೦೦೮.

೨೧. ಜಯಲಕ್ಷ್ಮಿ ಟಿ. (ಸಂಗ್ರಹ), ಶ್ರೀ ಭಕ್ತ ಕನಕದಾಸ ರಚಿತ ಹರಿಭಕ್ತಿ ಸಾರವು, ವಿಜಯವಾಹಿನಿ ಪಬ್ಲಿಕೇಷನ್ಸ್, ಶಿವಮೊಗ್ಗ,ಆ ೨೦೦೬.

೨೨. ಜಯಲಕ್ಷ್ಮಿ ಶ್ಯಾಂಸುಂದರ ಬಿ. (ಸಂಗ್ರಹ), ಕನಕದಾಸರ ಕೀರ್ತನೆಗಳು, ನವಜ್ಯೋತಿ ಪ್ರಕಾಶನ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ, ೨೦೦೮.

೨೩. ತಳಗೇರಿ ಕೆ.ಬಿ. (ಸಂ), ದಾಸಶ್ರೇಷ್ಠ ಕನಕದಾಸರ ರಾಮಧಾನ್ಯ ಚರಿತ್ರೆ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೮೯.

೨೪. ದೇವಾರ್ಜನ ಎಂ., ಕನಕ ಪವಾಡ, ನವಜ್ಯೋತಿ ಪ್ರಕಾಶನ, ಹೊಸಕೋಟೆ.

೨೫. ದೆ.ಜ.ಗೌ, ಕನಕದರ್ಶನ ತನುಮನ ಪ್ರಕಾಶನ, ಮೈಸೂರು, ೨೦೦೩.

೨೬. ದೆ.ಜ.ಗೌ. (ಸಂ) ನಕ ಸಾಹಿತ್ಯ ದರ್ಶನ, ಸಂಪುಟ-೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦.

೨೭. ದೆ.ಜಗೌ (ಸಂ) ನಳಚರಿತೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೧೧.

೨೮. ದೆ.ಜ.ಗೌ. (ಸಂ), ಕನಕದಾಸರ ರಾಮಧಾನ್ಯ ಚರಿತೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೭೯.

೨೯. ನರಸಿಂಹ ಮೂರ್ತಿ ಹೂವಿನಹಳ್ಳಿ, ಕನಕದಾಸರ ಕೃತಿಗಳಲ್ಲಿ ಸಮಾನತಾ ಸಮಾಜ, ಪ್ರೇರಣ ಪ್ರಕಾಶನ, ಬೆಂಗಳೂರು, ೨೦೦೯.

೩೦. ನಾಗರತ್ನ ಟಿ.ಎನ್., ದಾಸ ಸಾಹಿತ್ಯ ದರ್ಪಣ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೨.

೩೧. ನಾವಡ ಎ.ವಿ. (ಸಂ), ಕನಕ ಕಾವ್ಯ ಸಂಪುಟ, ಕನಕದಾಸ ಅಧ್ಯಯನ ಸಂಶೋಧನ, ಉಡುಪಿ, ೨೦೧೧.

೩೨. ನಾರಾಯಣಸ್ವಾಮಿ ಜ.ಹೊ., ಕನಕದಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೫.

೩೩. ನಿಂಗಣ್ಣ ಸಣ್ಣಕ್ಕಿ, ವಿಶ್ವಮಾನ್ಯ ಶ್ರೀ ಕನಕದಾಸರು, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೪.

೩೪. ಪ್ರತಾಪ್ ಚಂದ್ರ ಶೆಟ್ಟಿ ಹಳ್ನಾಡ್. ಬಿ. ಶಿವರಾಮಶೆಟ್ಟಿ (ಸಂ), ಕನಕಚಿಂತನ, ಕನಕದಾಸ ಸಂಶೋಧನಾ ಕೇಂದ್ರ, ಮಂಗಳೂರು, ವಿ.ವಿ. ೨೦೧೦.

೩೫. ಪ್ರತಾಪಚಂದ್ರ ಶೆಟ್ಟಿ ಹಳ್ನಾಡು, ಸಂತ ಕನಕದಾಸರು, ಸಿರಿಗನ್ನಡ ಪುಸ್ತಕ ಮನೆ, ಶಿವಮೊಗ್ಗ, ೨೦೧೩.

೩೬. ಪಾವಂಜೆ ಗುರುರಾವ್ (ಸಂ), ಕನಕದಾಸರ ಕೀರ್ತನೆ, ಕನದಾಸ ಸಂಶೋಧನ ಕೇಂದ್ರ, ಮಂಗಳೂರು, ವಿ.ವಿ. ೨೦೧೧.

೩೭. ಭಗವತಿ ಎಚ್.ಎಸ್. (ಸಂ), ಕನಕದಾಸರ ಒಂದು ಅಧ್ಯಯನ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೭.

೩೮. ಬಂಜಗೆರೆ ಜಯಪ್ರಕಾಶ್ (ಸಂ), ಕನಕ–ಮರುದರ್ಶನ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ೨೦೧೫.

೩೯. ಬಂಜಗೆರೆ ಜಯಪ್ರಕಾಶ್ (ಸಂ) ಕನಕ– ಮರುದರ್ಶನ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ೨೦೧೫.

೪೦. ಬಡಗಸೀಮೆ ಮಹೇಶ್ (ಸಂ), ಜನಪ್ರಿಯ ಕನಕ ಸಂಪುಟ ಕೀರ್ತನೆಗಳು ಅಖಿಲಾ ಏಜೆನ್ಸೀಸ್, ಮೈಸೂರು, ೨೦೦೪.

೪೧. ಬನ್ನಂಜೆ ಗೋವಿಂದಾಚಾರ್ಯ, ಕನಕೋಪನಿಷತ್ತು, ಕನಕದಾಸ ಅಧ್ಯನ ಸಂಶೋಧನ ಪೀಠ, ಉಡುಪಿ, ೨೦೦೮.

೪೨. ಬಸವರಾಜ ನಾಯ್ಕರ (ಅನು), ಶ್ರೀ ಕನಕದಾಸರು, ನ್ಯಾಷನಬಲ್ ಬುಕ್ ಟ್ರಸ್ಟ್ ಇಂಡಿಯಾ, ೨೦೦೬.

೪೩. ಬಾಳಣ್ಣ ಶೀಗೀಹಳ್ಳಿ (ಸಂ) ಆತ್ಮ ಅವ ಕುಲ, ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರವಾಡ, ೨೦೧೨.

೪೪. ಬಿರಾದಾರ ಬಿ.ಬಿ., ನಳಚರಿತೆ ಒಂದು ಹೊಸ ನೋಟ, ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರವಾಡ, ೨೦೦೮.

೪೫. ಮಲ್ಲೇಪುರಂ ಜಿ. ವೆಂಕಟೇಶ (ಸಂ), ಶಂಬಾ ಕೃತಿ ಸಂಪುಟ–೩, ಕರ್ನಾಟಕ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

೪೬. ಮಂಜುನಾಥ ಜಿ.ಜಿ. (ಸಂ), ಕನಕ ಸಾಹಿತ್ಯ ದರ್ಶನ, ಸಂಪುಟ–೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೯.

೪೭. ಮರುಳಯ್ಯ ಸಾ.ಶಿ. (ಸಂ), ಕನಕ ಸಾಹಿತ್ಯ ದರ್ಶನ ಸಂಪುಟ–೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೧.

೪೮. ಮಾನಸ (ಸಂ) ಕನದಾಸರ ಪ್ರಸಿದ್ಧ ಕೀರ್ತನೆಗಳು, ತನು ಮನು ಪ್ರಕಾಶನ, ಮೈಸೂರು, ೨೦೧೦.

೪೯. ಮೂರ್ತಿ ಕೆ.ಆರ್.ಕೆ. (ಸಂ), ಹರಿಭಕ್ತ ಕನಕದಾಸರ ಪದಗಳು, ಜನಪದ ಪ್ರಕಾಶನ, ಬೆಂಗಳೂರು.

೫೦. ಯಕ್ಕುಂಡಿಮಠ ಬಿ.ವಿ. (ಸಂ), ಭಕ್ತಿ ಪರಂಪರೆ ಮತ್ತು ಕನಕದಾಸರು, ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ, ೨೦೧೦.

೫೧. ರಂಗನಾಥ ಕಂಟನಕುಂಟೆ (ಸಂ), ಅರಿವಿನ ಅಡಿಗೆ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ೨೦೧೪.

೫೨. ರಂಗರಾಜ ವನದುರ್ಗ, ಕನಕದಾಸರ ವೈಚಾರಿಕತೆ, ಪ್ರಸಾರಾಂಗ, ಕುವೆಂಪು, ವಿಶ್ವವಿದ್ಯಾನಿಲಯ, ಶಂಕರಘಟ್ಟ, ೨೦೦೧.

೫೩. ರವಿ ಬಿ.ಕೆ., (ಸಂ), ಕನಕದಾಸರ ಸಮಗ್ರ ಕಾವ್ಯಾಧ್ಯಾಯನ, ಭಾಗ–೧, ರಾಮಧಾನ್ಯ ಚರಿತ್ರೆ, ಪ್ರಸಾರಾಂಗ, ಕರ್ನಾಟಕ, ವಿ.ವಿ., ಧಾರವಾಡ, ೨೦೧೩.

೫೪. ರವಿ ಬಿ.ಕೆ.. ಎಚ್.ಎಚ್. ನದಾಫ್ (ಸಂ), ಕನಕದಾಸರ ಸಮಗ್ರ ಕಾವ್ಯಧ್ಯಾಯನ ಭಾಗ–೨, ನಳಚರಿತೆ, ಪ್ರಸಾರಾಂಗ ಕರ್ನಾಟಕ ವಿ.ವಿ., ಧಾರವಾಡ, ೨೦೧೪.

೫೫. ರವಿರಾಜ ಶೆಟ್ಟಿ, ಕನಕದಾಸರ ಮೋಹನ ತರಂಗಿಣಿ: ಸಾಂಸ್ಕೃತಿಕ ಸಂವಾದ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೧.

೫೬. ರಂಗನಾಥಶರ್ಮಾ ಎನ್, (ಅನು), ಹರಿಭಕ್ತಿಸಾರ, ಕನಕದಾಸ ಅಧ್ಯಯನ ಸಂಶೋಧನ ಪೀಠ, ಉಡುಪಿ, ೨೦೦೮.

೫೭. ರುದ್ರಮೂರ್ತಿ ಶಾಸ್ತ್ರೀ ಸು., ಕನಕದಾಸ, ಸಾಗರ ಪ್ರಕಾಶನ ಬೆಂಣಗಳೂರು, ೨೦೧೦.

೫೮. ರುದ್ರಮೂರ್ತಿ ಶಾಸ್ತ್ರಿ (ಸಂಗ್ರಹ), ಕನಕದಾಸರ ಪದಗಳು, ಭಾಗ್ಯಲಕ್ಷ್ಮೀ ಪ್ರಕಾಶನ, ಬೆಂಗಳೂರು, ೧೯೯೨.

೫೯. ರಾಮಶೇಷನ್ ಎನ್.ಕೆ., ಕನಕದಾಸ, ಸಪ್ನಬುಕ್ ಹೌಸ್, ಬೆಂಗಳೂರು, ೨೦೦೧.

೬೦. ಆರ್.ಜಿ.ಸಿ., ಕನಕ ದಾಸರ ಜೀವನ ಚರಿತ್ರೆ ಹಾಗು ಪದಗಳು, ಸಿದೇಶ್ವರ ಪ್ರಕಾಶನ, ಗದಗ, ೨೦೧೨.

೬೧. ಲಕ್ಕಪ್ಪಗೌಡ ಎಚ್.ಜೆ., ಕನಕ ಮುಖಗಳು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪.

೬೨. ವಾಲಿ ಎಂ.ಎನ್., ಕನಕದಾಸರ ಹರಿಭಕ್ತಿಸಾರ, ಭುವನೇಶ್ವರಿ ಪ್ರಕಾಶನ, ವಿಜಾಪುರ, ೨೦೧೩.

೬೩. ವಿದ್ಯಾವಾಚಸ್ಪತಿ ಕವಿತಾ ಕೃಷ್ಣ, ಭಕ್ತಿ ತರಂಗಿಣಿ ಕನಕದಾಸರ ಬದುಕು ಮತ್ತು ಕೀರ್ತನೆಗಳು, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು, ೨೦೦೬.

೬೪. ವೆಂಕಟಗಿರಿ ದಳವಾಯಿ (ಸಂ), ಡಾ, ಮಲ್ಲಿಕಾಘಂಟಿ, ಕನಕದಾಸ ಶ್ರೀ ಕಾಗಿನೆಲೆ ಮಹಾಸಂಸ್ಥಾನ, ಕನಕಗುರುಪೀಠ, ವೀರಗೋಟ, ೨೦೦೮.

೬೫. ವೆಂಕಟರಾಮಪ್ಪ ಕೆ., ಕನಕದಾಸರು, ಡಿ.ವಿ.ಕೆ. ಮೂರ್ತಿ, ಪ್ರಕಾಶನ, ಮೈಸೂರು, ೧೯೭೦.

೬೬. ಶಂಭುಲಿಂಗ, ಮೃತ್ಯುಂಜಯ್ಯನಿಗೊಂದು ಪತ್ರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦.

೬೭. ಶಿವರಾಮ ಶೆಟ್ಟಿ ಬಿ. (ಸಂ), ಕನಕನ ಸುತ್ತ ಮುತ್ತ: ಸಂಕಥನಗಳ ಜಿಜ್ಞಾಸೆ, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು, ವಿ.ವಿ., ೨೦೧೩.

೬೮. ಶಿವರಾಮ ಶೆಟ್ಟಿ ಬಿ. (ಸಂ), ಕನಕ ಚಿಂತನ, ಕನಕದಾಸ ಸಂಶೋಧನಾ ಕೇಂದ್ರ, ಮಂಗಳೂರು, ವಿ.ವಿ., ೨೦೧೩.

೬೯. ಶೇಷಗಿರಿರಾವ್ ಎಲ್.ಎಸ್. (ಸಂ) ಕನಕದಾಸರು, ರಾಷ್ಟ್ರೋತ್ಥಾನ ಸಾಹಿತ್ಯ, ಪ್ರಕಾಶನ ಬೆಂಗಳೂರು, ೧೯೭೪.

೭೦. ಶೇಷಾದ್ರಿ (ಸಂಗ್ರಹ), ಭಕ್ತ ಕನಕದಾಸರ ಕೀರ್ತನೆಗಳು, ಬಸವ ಪ್ರಕಾಶನ, ಗದಗ, ೨೦೦೯.

೭೧. ಶಿವರಾಮ ಶೆಟ್ಟಿ ಬಿ., ಅಕ್ಷಯ ಶೆಟ್ಟಿ (ಸಂ), ಕನಕಚಿಂತನ, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು, ವಿ.ವಿ. ೨೦೧೦.

೭೨. ಶಿವಾನಂದ ಕೆಳಗಿನಮನಿ, ಕನಕದಾಸರ ಕೀರ್ತನೆಗಳ ಸಾಂಸ್ಕೃತಿಕ ಅನನ್ಯತೆ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು, ೨೦೦೫.

೭೩. ಶಿವರಾಮ ಶೆಟ್ಟಿ ಬಿ. (ಸಂ), ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ" ಕನಕದಾಸ ಅಧ್ಯಯನ: ಸಮಗ್ರ ಸಂಪುಟ, ಭಾಗ-೧, ಕನಕದಾಸ ಸಂಶೋಧನಾ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯ, ೨೦೧೩.

೭೪. ಶ್ರೀನಿವಾಸ ಹಾವನೂರ, ಕನಕದಾಸರ ಕೀರ್ತನೆಗಳ ಶಬ್ದ, ಪ್ರಯೋಗ ಕೋಶ, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು, ವಿ.ವಿ., ೨೦೧೦.

೭೫. ಸರೋಜಿನಿ. ಸಿ. ಹಿರೇಮಠ (ಸಂ), ರಾಮಧಾನ್ಯ ಚರಿತೆ: ಸಂಘರ್ಷದ ನೆಲೆ, ಪ್ರಸಾರಾಂಗ, ಕರ್ನಾಟಕ, ವಿ.ವಿ. ಧಾರವಾಡ, ೨೦೧೧.

೭೬. ಸ್ವಾಮಿಗೌಡ ಎಚ್.ಎಂ. (ಸಂ), ಕನಕದಾಸ ಸಾಂಸ್ಕೃತಿಕ ಅನುಸಂಧಾನ, ರೂಪ ಪ್ರಕಾಶನ, ಮೈಸೂರು, ೨೦೦೪.

೭೭. ಸಿದ್ದಯ್ಯ ಪುರಾಣಿಕ (ಸಂ) ಮಹಾತ್ಮ ಕನಕದಾಸ ಪ್ರಶಸ್ತಿ, ರಾಜ್ಯ ಸಮಿತಿ ಶ್ರೀ ಕನಕದಾಸ ನಾಲ್ಕನೇಯ ಶತಮಾನೋತ್ಸವ, ಬೆಂಗಳೂರು, ೧೯೬೫.

೭೮. ಸಿದ್ದಣ್ಣ ಜಕಬಾಳ, (ಸಂ), ದಾಸಶ್ರೇಷ್ಠ ಕನಕದಾಸರ ಹರಿಭಕ್ತಿಸಾರ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೯.

೭೯. ಸಿ.ಪಿ.ಕೆ., ಕನಕ ಕೆಲವು ಮುಖ, ಅಖಿಲಾ ಏಜೆನ್ಸಿಜ್, ಮೈಸೂರು, ೨೦೦೬.

೮೦. ಸಿದ್ದಗಂಗಯ್ಯ ಹೊಲತಾಳ್, (ಸಂ), ಶ್ರೀ ಕನಕದಾಸರು, ಸ್ಟೂಡೆಂಟ್ ಬುಕ್ ಕಂಪನಿ, ಮಂಗಳೂರು, ೨೦೧೨.

೮೧. ಸಿದ್ದಪ್ಪ ಎನ್., ಭಕ್ತ ಕನಕದಾಸರ ಹರಿಭಕ್ತಸಾರ, ಶ್ರೀ ಬನಶಂಕರಿ ಎಂಟರ್‌ಪ್ರೈಸಸ್, ಮಾಲೂರು, ೨೦೦೪.

೮೨. ಸುಧಾಕರ, ಕಾಗಿನೆಲೆಯ ಕನಕದಾಸೋತ್ತಮ, ಪ್ರತಿಭಾ ಪ್ರಕಾಶನ, ಮೈಸೂರು, ೧೯೯೯.

೮೩. ಸುಧಾಕರ, ಕನಕದಾಸರ ರಾಗಿ ರಾಮಾಯಣ ದರ್ಶನ, ಪ್ರತಿಭಾ ಪ್ರಕಾಶನ, ಮೈಸೂರು, ೨೦೦೧.

೮೪. ಸುಧಾಕರ (ಸಂ), ಕಿನಕ ಸಾಹಿತ್ಯ ದರ್ಶನ, ಸಂಪುಟ-೪, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೯.

೮೫. ಸುಧಾಕರ (ಸಂ), ಸಮಗ್ರ ದಾಸಸಾಹಿತ್ಯ ಸಂಪುಟ-೫., ಕನಕದಾಸರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೮೬. ಸುಮತೀಂದ್ರ (ಸಂಗ್ರಹ), ಕನಕದಾಸರ ಕೀರ್ತನೆಗಳು, ಸಹನಾ ಪ್ರಕಾಶನ, ಬೆಂಗಳೂರು, ೨೦೦೨.

೮೭. ಸುಂದರ ಮೂರ್ತಿ ಎ. (ಸಂ), ಕನಕ ತರಂಗಿಣಿ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ೨೦೧೫.

೮೮. ಹರಿಲಾಲ್ ಪವಾರ, ಚಂದ್ರಶೇಖರ ರೊಟ್ಟಿಗವಾಡ (ಸಂ), ಕನಕದಾಸರ ಸಾಹಿತ್ಯ ಅಧ್ಯಯನ, ಪ್ರಸಾರಾಂಗ, ಕರ್ನಾಟಕ, ವಿ.ವಿ. ಧಾರವಾಡ, ೨೦೧೦.

೮೯. ಹೆರಂಜೆ ಕೃಷ್ಣಭಟ್ಟ, ದಾಸ-ಕನಕ ಪ್ರಭೆ, ಕನಕದಾಸ ಅಧ್ಯಯನ ಸಂಶೋಧನ ಪೀಠ, ಉಡುಪಿ, ೨೦೧೧.

೯೦. ಹಾತೂರು ಶಂಕರನಾರಾಯಣ ಭಟ್ಟ (ಗದ್ಯನುವಾದ), ಕನಕದಾಸರ ನಳ ಚರಿತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯.

೯೧. ಹೊರೆಯಾಲ ದೊರೆಸ್ವಾಮಿ, ಕಾಗಿನೆಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೯೨. ಹೆಗಡೆ ಜಿ.ಎಂ. (ಸಂ), ಕನಕ ಪುರಂದರ ಕೀರ್ತನ ಮಂಜರಿ, ಪ್ರಸಾರಾಂಗ, ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ, ೧೯೯೪

೯೩. ಜಕಬಾಳ ಎಸ್.ಎಫ್., ಕನಕದಾಸರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಆ. ನಾಟಕಗಳು

೧. ಅಂಬಾತನಯ ಮುದ್ರಾಡಿ, ರಾಮಧಾನ್ಯ ಚರಿತೆ, ಕನಕದಾಸ ಆಧ್ಯಯನ, ಸಂಶೋಧನ ಪೀಠ, ಉಡುಪಿ, ೨೦೧೧.

೨. ನಾಗರಾಜ ಕಿ.ರಂ., ಕಾಲಜ್ಞಾನಿ ಕನಕ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೩.

೩. ರಾಮಕೃಷ್ಣ ಮರಾಠೆ, ರಾಮಧಾನ್ಯ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ೨೦೧೦.

೪. ಶ್ರೀನಿವಾಸ, ಕನಕಣ್ಣ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ (ರಿ), ಬೆಂಗಳೂರು, ೨೦೦೯.

೫. ಶಶಿಧರ ನರೇಂದ್ರ, ಎಲ್ಲಿರುವನೋ ರಂಗ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೨.

೬. ಶ್ರೀಶೈಲ ಹುದ್ದಾರ, ಕನಕವಿಜಯ ದೊಡ್ಡಾಟ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು, ೨೦೧೫.

೭. ಸದಾಶಿವ ಭಟ್ಟ, ನಳಚರಿತೆ ಕಾವ್ಯ, ಯಕ್ಷಗಾನ, ಕನಕದಾಸ ಅಧ್ಯಯನ, ಸಂಶೋಧನ ಪೀಠ, ಉಡುಪಿ, ೨೦೧೧.

೮. ಸುಧಾಕರ, ಕನಕ ರೂಪಕ, ಕಾವ್ಯಶ್ರೀ ಪ್ರಕಾಶನ, ಮೈಸೂರು, ೨೦೧೦.

೩. ಕಿರುಪ್ರಬಂಧಗಳು ಹಾಗೂ ಮಹಾಪ್ರಬಂಧಗಳು

೧. ಕರುಣಾರಾವ್, ಮೋಹನ ತರಂಗಿಣಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨. ಮೇಧಾ. ಎಂ. ಕುಲಕರ್ಣಿ, ಕನಿಕದಾಸ ಹಾಗೂ ಏಕನಾಥ, ಒಂದು ತೌಲನಿಕ ಅಧ್ಯಯನ, ಮುಂಬೈ ವಿಶ್ವವಿದ್ಯಾಲಯ, ಮುಂಬೈ, ೨೦೦೬.
೩. ಮುಕ್ಕಣ್ಣವರ ಕೆ.ಎಚ್., ಮೋಹನ ತರಂಗಿಣಿ ಒಂದು ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೯.
೪. ವೀರೇಂದ್ರ ಜಿ.ಕೆ. ಕನಕದಾಸರ ರಾಮಧಾನ್ಯ ಚರಿತೆ, ಪುರಾಣ ಮತ್ತು ಪ್ರಸ್ತುತತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಿಎಚ್.ಡಿ. ಪ್ರಬಂಧಗಳು

೧. ಅನಸೂಯದೇವಿ, ವ್ಯಾಸಕೂಟ ಮತ್ತು ದಾಸಕೂಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.
೨. ಜಗನ್ನಾಥ ಗೇನಣ್ಣವರ, ಕನಕದಾಸರ ಕೃತಿಗಳ ಒಳನೋಟಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೮.
೩. ತಳವಾರ ಆರ್.ಎಚ್., ಕನಕದಾಸರ ಕೀರ್ತನೆಗಳು ಮತ್ತು ಲಘು ಕೃತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.
೪. ಪುರೋಹಿತ ಎ.ಎಸ್., ಕನಕದಾಸರು ಮತ್ತು ಅವರ ಲಘು ಕೃತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೯.
೫. ಮಾಧವಉಡುಪ, ದಾಸ ಸಾಹಿತ್ಯದಲ್ಲಿ ಆತ್ಮೋನ್ನತಿ ಸಮಾಜೋನ್ನತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೬. ಶ್ರೀರಾಮ ಅಚನೂರ, ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ, ೨೦೦೯.
೭. ಶ್ರಿವಪ್ರಸಾದ್ ವೈ.ಎಸ್., ಕನಕ ಪುರಂದರರ ತೌಲನಿಕ ಅಧ್ಯಯನ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ, ೨೦೦೬.
೮. ಶ್ರೀಧರ ಪಿಸ್ಸೆ, ಕನ್ನಡ ದಾಸ ಸಾಹಿತ್ಯ ಮತ್ತು ಸಾಂಸ್ಕೃತಿಕ ಪಲ್ಲಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.
೯. ಸುರೇಶ, ಕನಕದಾಸರು: ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೦. ಹಜರತ್‌ಸಾಬ್ ನದಾಫ್, ಕನಕದಾಸರ ಕೃತಿಗಳು: ಜಾನಪದೀಯ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೬.

ಅ. ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್.ಎಸ್., ದಾಸಸಾಹಿತ್ಯ ಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೨. ಕಾಶೀನಾಥ ಅಂಬಲಗೆ, ಶರಣರು ಹಾಗೂ ಸಂತರ ಸಾಮಾಜಿಕ ಕಾಳಜಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬.

೩. ಕೃಷ್ಣಮೂರ್ತಿ ಮ.ಸು., ಉತ್ತರದ ಸಂತ ಪರಂಪರೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೩.

೪. ಗೀತಾಚಾರ್ಯ ನಾ., ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೫. ಗೀತಾಚಾರ್ಯ ನಾ., ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೯.

೬. ಚನ್ನಪ್ಪ ಕಟ್ಟಿ (ಸಂ), ಕುರುಬ ಜನಪದ, ಕನಕ ಜಯಂತ್ಯೋತ್ಸವ ಸಮಿತಿ, ಸಿಂದಗಿ, ೧೯೯೭.

೭. ಚಂದ್ರಕಾಂತ ಬಿಜ್ಜರಗಿ, ಹಾಲುಮತದ ಅನರ್ಘ್ಯ ರತ್ನಗಳು, ಕಾಗಿನೆಲೆ ಮಹಾಸಂಸ್ಥಾನ, ಕನಕ ಗುರುಪೀಠ, ಕಾಗಿನೆಲೆ, ೨೦೧೧.

೮. ಜಯಸಿಂಹ, ಹರಿದಾಸ ಸಂಪದ, ವಸಂತ ಪ್ರಕಾಶನ, ಬೆಂಗಳೂರು, ೨೦೦೮.

೯. ನಾಗರತ್ನ ಟಿ.ಎನ್., ಕನ್ನಡ ಕೀರ್ತನೆ: ಸಾಹಿತ್ಯ ಸಂಗೀತ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ. ವಿ.ವಿ. ಮೈಸೂರು, ೨೦೧೦.

೧೦. ನಾಗರತ್ನ ಟಿ.ಎನ್. (ಸಂ), ಹರಿದಾಸರ ಜನಪ್ರಿಯ ಹಾಡುಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೬.

೧೧. ನಾಗರತ್ನ ಟಿ.ಎನ್. (ಸಂ), ದಾಸ ಸಾಹಿತ್ಯ ಸೌರಭ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೭.

೧೨. ನಾಗರತ್ನ ಟಿ.ಎನ್., ಕೀರ್ತನಕಾರರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬.

೧೩. ನಾರಾಯಣಾಚಾರ್ಯ ಕೆ.ಎಸ್., ಆಳ್ವಾರರು ಮತ್ತು ಹರಿದಾಸರು, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೧೯೯೦.

೧೪. ನಿರುಪಾಧೀಶ, ಕನಕ ವಿಜಯ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೪.

೧೫. ಮಧುಸೂಧನಾಚಾರ್ಯ ಜೋಶಿ, ದಾಸ ಸಾಹಿತ್ಯ ಸೌರಭ, ಸುಮುಖ ಪ್ರಕಾಶನ, ಬೆಂಗಳೂರು, ೨೦೧೦.

೧೬. ಮಲ್ಲೇಪುರಂ ಜಿ. ವೆಂಕಟೇಶ (ಸಂ), ತೌಲನಿಕ ಸಾಹಿತ್ಯಾಧ್ಯಯನ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೮.

೧೭. ಮುರುಳೀಧರ ಎಚ್.ಎನ್., ಮಣ್ಣಿಂದ ಕಾಯ, ಉದಯಭಾನು ಉನ್ನತ ಅಧ್ಯಯನ ಕೇಂದರ, ಬೆಂಗಳೂರು, ೨೦೧೧.

೧೮. ರಂಗನಾಥ್ ಬಿ.ಜೆ., ಭಾರತದ ಹರಿದಾಸರು, ನವಭಾರತಿ ಪ್ರಕಾಶನ, ಮೈಸೂರು, ೨೦೧೦.

೧೯. ರಾಮಚಂದ್ರರಾವ್ ಸಾ.ಕೃ, ದಾಸ ಸಾಹಿತ್ಯ ಮತ್ತು ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು., ೨೦೧೩.

೨೦. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೨೧. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೨೨. ವಸಂತ ಕುಷ್ಟಗಿ, ದಾಸ ಸಾಹಿತ್ಯದ ತವನಿದಿಯಲ್ಲಿ ಶ್ರೀ ಬತ್ತೇರೇಶ ಪ್ರಕಾಶನ, ಗುಲಬರ್ಗಾ, ೨೦೧೨.

೨೩. ವೀರೇಶ ಬಡಿಗೇರ, ಭಕ್ತಿ ಭಜನೆ ಮತ್ತು ಕೆಳವರ್ಗ, ಮಯ ಪ್ರಕಾಶನ, ಕಮಲಾಪುರ, ೨೦೦೧.

೨೪. ವೆಂಕಟೇಶ ಮೂರ್ತಿ ಎಚ್.ಎಸ್., ಕೀರ್ತನಕಾರರು, ಸಪ್ನ ಬುಕ್ ಹೌಸ್, ಬೆಂಗಳೂರು, ೧೯೭೫.

೨೫. ಸಿದ್ದಣ್ಣ ಜಕಬಾಳ (ನಾ), ಹಂತಿಯ ಪದಗಳು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦.

೨೬. ಷಣ್ಮುಖಯ್ಯ ಅಕ್ಕೂರಮಠ, ಭಾರತೀಯ ಭಕ್ತಿ ಚಳುವಳಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೦.

೨೭. ಹಳ್ಳಿಕೇರಿ ಎಫ್.ಟಿ. (ಸಂ), ಕನಕವಿಜಯ ಪುರಾಣ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೩.

೨೮. ಹಳ್ಳಿಕೇರಿ ಎಫ್.ಟಿ. (ಸಂ), ಹಾಲುಮತ ಅಧ್ಯಯನಗಳು, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೦.

ಆ. ಇಂಗ್ಲೀಷ್ ಕೃತಿಗಳು

1. Prakash H. (Trans), Kanakadasaru, Commissioner, Kaginele Development Authority Kaginele, 2010.
2. Raghavendra Rao K., Kanaka's Revolution, Prasaranga, Karnatak University, Dharwad, 2012.
3. Raghavendra Rao K., Kanakadasa and The Tradition of Religious Humanism in Karnataka, Prasaranga, Karnatak University, Dharwad, 2013.
4. Shankar D.A., Golden Flock, Prasaranga, Kannada University, Hampi, 2007.

ಇ. ಲೇಖನಗಳು

೧. ಕೃಷ್ಣಕುಮಾರ ಸಿ.ಪಿ., ಕನಕದಾಸರ ಅನನ್ಯತೆ, ಸಾಹಿತ್ಯ ಶೀಲನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ನಾರಾಯಣ ಕೆ.ವಿ. (ಸಂ), ತೊಂಡು ಮೇವು–ಕಂತೆ ಎರಡು, ಕನಕದಾಸರ ಕೀರ್ತನೆಗಳ ಶಬ್ದಶಿಲ್ಪ.

೧. ಲಕ್ಕಪ್ಪ ಗೌಡ ಎಚ್.ಜೆ., ಕನಕದಾಸರ ಕೀರ್ತನೆಗಳು ಕಾವ್ಯಮೌಲ್ಯ, ಸಾಹಿತ್ಯ ಶೋಧನ, ಪ್ರಸಾರಾಂಗ, ಕನ್ನಡ, ವಿಶ್ವವಿದ್ಯಾಲಯ, ಹಂಪಿ.

೨. ಚಿಕ್ಕಣ್ಣ ಕಾ.ತ., ಸಮಾನತೆಯ ಕನಸುಕಂಡ ಸಂತಕನಕದಾಸ, ವಿಜಯವಾಣಿ, ವಿಜಯವಿಹಾರ ಪುರವಣಿ, ೯ನೇ ನವೆಂಬರ್ ೨೦೧೪.

೩. ಜೋಗಿನ ಎಂ.ಎಂ., ದಾಸಸಾಹಿತ್ಯದ ಶಿಮಾ ಪುರುಷ, ಜನಪದ, ನವೆಂಬರ್, ೨೦೦೪.

೪. ಜಯಸಿಂಹ, ಕನಕದಾಸರು ದ್ವೈತ– ಅದ್ವೈತದ ದುರ್ಬಿನಿಗೂ ನಿಲುಕದ ಮಹಾನಕ್ಷತ್ರ, ಕನ್ನಡಪ್ರಭ, ೨೦ ನವೆಂಬರ್ ೨೦೧೩.

೫. ಧರಣಿದೇವಿ ಮಾಲಗತ್ತಿ, ರಾಮಧಾನ್ಯದ ನೆಪದಲ್ಲಿ ಜಾತೀಯತೆಯನ್ನು ಟೀಕಿಸಿದ ಚಿಂತಕ, ಉದಯವಾಣಿ, ೨೬.೧೧.೨೦೧೦.

೬. ಬಲ್ಲೇನಹಳ್ಳಿ ಮಂಜುನಾಥ, ಕನಕಬಿಟ್ಟು ಹರಿಯ ಹಿಡಿದದಾಸ, ವಿಜಯ ಕರ್ನಾಟಕ, ೩ನೇ ಅಕ್ಟೋಬರ್, ೨೦೦೩.

೭. ಯೋಗೀಶ್ವರಪ್ಪ ಡಿ.ಎಸ್. ಕನಕದಾಸರ ಬಗೆಗಿನ ಗೊಂದಲಗಳು, ಕನ್ನಡ ಪ್ರಭ, ೩೧.೧೦.೨೦೧೩.

೮. ಲಕ್ಷ್ಮಣರಾವ್ ಎಸ್., ಭಕ್ತಶಿರೋಮಣಿ ಕನಕದಾಸರು, ಜನಪದ ಪತ್ರಿಕೆ, ಡಿಸೆಂಬರ್ ೨೦೦೧.

೯. ಲೀಲಾವತಿ. ಎಚ್. ರಾವ್, ಹಾಡಿದರ ಕವಿ ಧ್ಯಾನಿಸಿದರೆ ಅನುಭಾವಿ, ಉದಯವಾಣಿ, ದಿನಪತ್ರಿಕೆ, ೨೦೦೫

೧೦. ಲೀಲಾ ಎಸ್.ಆರ್., ಕನಕದಾಸರ ಸಾಮಾಜಿಕ ಕಳಕಳಿ, ತರಂಗ, ೨೮ ನವೆಂಬರ್ ೨೦೦೨.

೧೧. ಲೀಲಾವತಿ. ಕೆ. ಕುಲಕರ್ಣಿ, ಸಂತ ಶಿರೋಮಣಿ ಭಕ್ತ ಕನಕದಾಸರು, ಕರ್ಮವೀರ, ೦೨.೧೨.೨೦೧೨.

೧೨. ಸೂರ್ಯಪ್ರಕಾಶ್ ಪಂಡಿತ್ ಎಸ್., ಕನಕದಾಸರ ಬದುಕಿನ ಬಯಲು, ವಿಜಯವಾಣಿ, ಸಂಸ್ಕೃತಿ ಪುರವಣಿ, ೨೬ ನವೆಂಬರ್, ೨೦೧೫.

೧೩. ಹಣಮಂತ ತಾಸಗಾಂವಕರ, ಕವಿ ಪ್ರತಿಭೆಯ ಕನಕದಾಸರು, ವಿಜಯ ಕರ್ನಾಟಕ, ಸಾಪ್ತಾಹಿಕ ಲವಲವಿಕೆ ೧೩ ನವೆಂಬರ್ ೨೦೧೧.

೧೪. ಹೊರೆಯಾಲ ದೊರೆ ಸ್ವಾಮಿ, ಕನಕದಾಸರ ರಾಮಧಾನ್ಯ ಚರಿತೆ, ವಿಜಯವಾಣಿ, ಸಂಸ್ಕೃತಿ ಪುರವಣಿ, ೧೪ನೇ ನವೆಂಬರ್, ೨೦೧೩.

೩. ಕೋಶಗಳು

೧. ಬಸವರಾಧ್ಯ. ಎನ್. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ